ನವೀನ ರೀತಿಯ ಧಾರಾವಾ ಹಿ ಪೌರಾಣಿಕ ಕತೆ

ನಗರ್ತಿಯ ಬಕಾಸುರ

ಬರೆದವರು— ಶ್ರೀ ಕೊಡವಟಿಗಂಟಿ ಕುಟುಂಬ ರಾವ್
ಅನುವಾದ— ಶ್ರೀ ನಾಡರಬೆಟ್ಟು ರಂಗ ರಾವ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ರಾಜಭಟರು ಬರುವ ಸಮಯಕ್ಕೆ ಉಳಿದ ಪಾಂಡವರು ಇನ್ನೂ ಬಂದಿರಲಿಲ್ಲ. ಭೀಮನ ಹೊಟ್ಟೆಯೊಳಗೆ ಮಹಾ ಹಸಿವೆಯಾಗುತಿತ್ತು. ಬಕಾಸುರನಿಗೆ ಕಳಿಸುವ ಭಾಂಡವು ಸರಮೋತ್ತವವಾಗಿರುತ್ತದೆಂದು ಚಯಪ್ಪನು ಹೇಳಿದ್ದಾನೆ. ಅದರಿಂದಂತೂ ಭೀಮನಿಗೆ ಹಸಿವೆ ಇನ್ನಷ್ಟು ಭುಗಿಲೆದ್ದಿತ್ತು.

ಅಧಿಕಾರಿಗಳು ಭೀಮನನ್ನು ಅಲಂಕಾರ ಮಾಡುವುದೂ, ಮಂತ್ರ ಹೇಳುವುದೂ, ಇಷ್ಟ ದೇವತೆಗೆ ನೈವೇದ್ಯ ಮಾಡುವುದೂ —ಈ ಹಾಳು ಕೃಮಗಳೆಲ್ಲಾ ಅತನಿಗೆ ಬಹಳ ಬೇಸರಿಕೆಯನ್ನು ತಂದಿವು. ಭಾಂಡದೊಳಗಿನ ಸುವಾಸನೆಯನ್ನು ಆಘ್ರಾಣಿಸುತ್ತಿರಲು ಭೀಮನಿಗೆ ಮುಗುಳು ನಗು ಕೂಡ ಬರುತ್ತಿತ್ತು. ಅವನು ತಮ್ಮನ್ನು ವಾರೆಗಣ್ಣಿನಿಂದ ನೋಡಿ ನಗುತ್ತಿದ್ದಾಗ "ಅಂಪ! ಪುಟ್ಟು ಹುಡುಗ! ಏನು ಗಿ ಬರುತ್ತದೆಂದು ತಿಳಿಯದೆ ಮದು ಮಗನಂತೆ ತಿಳಿದುಕೊಂಡ ಹಾಗೆ ಕಾಣುತ್ತೆ!" ಎಂದು ತಪ್ಪೊಳಗೆ ಗುಸುಗುಸುವಾಡಿಕೊಂಡರು.

ಭೀಮನು ಒಂದಿಯನ್ನೇರಿದ ಕೂಡಲೇ ಭಾಂಡದೊಳಗೆ ಕೈಯಾಕಿ ತೆಗೆದು ತಿನ್ನಲಾರಂಭ ಮಾಡಿದನು. ಆಹಾ! ರಾಜೋಚಿತವಾದ ಭೋಜನ ಸಂದೇಹವೇ ಇಲ್ಲ ಶ್ರತಿದಿನ ಮಾಡನೆಯ. ಕಡನ್ನ ತಿನ್ನುವುದು ಬಹಳ ಬಾಧೆಯಾಗುತ್ತು. ಈ ದಿನವೇನೋ ತನ್ನ ಪುಣ್ಯ! ದಿನಾ ಇಂಧಾ ಊಟ ಒಕ್ಕಿದ್ದರೆ ಎಷ್ಟು ಒಳ್ಳೆಯದಿತ್ತು! ಆದರೆ ದಿನಕ್ಕೊಬ್ಬ ಒಕಾಸುರ ಎಲ್ಲಿಂದ ಬಂದಾನು?

ಅಷ್ಟರಲ್ಲಿ ಅವನಿಗೆ ಇನ್ನೊಂದು ಆಲೋಚನೆ ಬಂತು. ತಾನು ಈ ರಾಕ್ಷಸನ ಪೀಡೆಯನ್ನು ತೊಲಗಿಸಿ ಬಿಟ್ಟರೆ ಮಹಾರಾಜನು ತನಗೂ ತನ್ನವರಿಗೂ ದಿನಾ ಮೃಷ್ಟಾನ್ನವಿತ್ತು ಧಂಡಿಯಾಗಿ ದಕ್ಷಿಣೆ ಕೊಡಾ ಕೊಟ್ಟಾನು. ಆದರೆ ಆಗ ಸೀಮಾರೆಂದು ಕೇಳದರೊ? ತಂಟೆಯೇ ಸರಿ ಆಣ್ಣನೂ ಅರ್ಜುನನೂ ಏನು ಹೇಳುತ್ತಾರೋ ನೋಡಬೇಕು, ಅವ್ಯಾ ಒಪ್ಪಿಕೊಳ್ಳಬೇಕು.....

ಬಂಡಿಯೆತ್ತುಗಳು ತಲೆಯಾಡಿಸುತ್ತಾ ಮೆಲ್ಲಮೆಲ್ಲನೆ ನಾಗ ತಿದ್ದುವ. ಇಂದಿನ ಹುಡುಗ ಬಂಡಿಗಾರನಿಗೆ ತುಂಬ ಹಿಡಿಸಿದನು. ಸಾಮಾನ್ಯವಾಗಿ ಅವನು ದಿನಾ ಕರೆದುಕೊಂಡು ಬರುವ ಬಲಿಯ ಮನುಷ್ಯ ಬೆದರಿಕೊಂಡೋ, ಸ್ತಂಭಿತನಾಗಿಯೋ ವಿಲವಿಲನೆ ಒದರಾಡುತ್ತಲೋ, ಅಳುತ್ತಲೋ ಇರುತ್ತಾನೆ. ಈ ಹುಡುಗ ಬಹಳ ಉತ್ಸಾಹದಿಂದಿರುವುದು ಮಾತ್ರವಲ್ಲ, ಭಾಂಡದೊಳಗೆ ಕೈ ಹಾಕಿ ಆರೋಗಣೆ ಮಾಡುತ್ತಾ ಇದ್ದಾನೆ. ಇವನನ್ನು ಮೆಟ್ಟಿ ಮಾತಾಡಲಿಕ್ಕೆ ಸಾವಿರ ನಾಲಗೆಗಳಿಲ್ಲದಿದ್ದರೂ ಇದ್ದ ಒಂದು ನಾಲಗೆಯನ್ನು ಕೂಡಾ ಕೊಯಿದು ಹಾಕಿದ್ದಾರೆ ಹಾಳಾದವರು!

ಆಹಾರವು ತನಗೆ ಹಚ್ಚಾಗಿ ಇನ್ನೂ ಸ್ವಲ್ಪ ಉಳಿಯುವಂತೆ ಭೀಮನಿಗೆ ತೋರಿತು. ಕೂಡಲೇ ಅವನು ಬಂಡಿಯವನನ್ನು ಸಹಾಯಕ್ಕೆ ಕರೆದನು. ಎತ್ತುಗಳಿಗೆ ದಾರಿ ಗೊತ್ತಿದೆ. ಬಂಡಿಯವನು ಎತ್ತುಗಳ ಮಾಲಗುದಾರವನ್ನು ಬಿಟ್ಟುಕೊಟ್ಟು, ನೀಲೇರಿಬಂದು ತಿನ್ನಲು ಪ್ರಾರಂಭಿಸಿದನು. ಆಗ ಅವನಿಗೆ ರಾಜಭಟರ ವಿಷಯ ನೆನಪಿಗೆ ಬಂದು, ನಗು ಬಂದಿತು. ಅವರ ಬಾಯಿಗೆ ಈ ದಿನ ಮಣ್ಣು!

"ನಿನ್ನ ಹೆಸರೇನಪ್ಪಾ?" ಎಂದು ಕೇಳಿದ ಭೀಮ.

"ಚೇ—ಚೇ—" ಎಂದ ಬಂಡಿಯವ ಬಾಯಿ.ಯನ್ನು ತೋರಿಸುತ್ತಾ.

ಇವನು ಕಿವುಡನಲ್ಲ, ಯಾರೋ ನಾಲಿಗೆ ಕುಯಿದು ಹಾಕಿದ್ದಾರೆ.

"ಯಾರು ನಿನ್ನ ನಾಲಿಗೆ ಕೊಯಿದದ್ದು?" ಕೇಳಿದ ಭೀಮ.

ಬಂಡಿಯವನು ಏಸನೆಗಳನ್ನು ಹುರಿಗೊಡಿ ಅಭಿನಯಿಸಿದ. ಯಾರೋ ದೊಡ್ಡ ಮನುಷ್ಯರೇ ಮಾಡಿದ ಕೆಲಸವೆಂದು ತಿಳಿಯಿತು. ಆ ವಿಷಯ ಆ ಮೇಲೆ ನೋಡೋಣ.

ಬಂಡಿ ಮರದ ಬುಡದಲ್ಲಿ ನಿಂತಿತ್ತು. ತನ್ನಂತಾನೇ ಇಬ್ಬರೂ ಇನ್ನೂ ತಿನ್ನುತ್ತಲೇ ಇದ್ದರು. ಆಸ್ಪರಲ್ಲಿ ಪಕ್ಕಾಸ್ಲಿಯೇ ವಿಕಾರ ಗರ್ಜನೆಯೊಂದು ಕೇಳಿಸಿತು. ಭೀಮನು ತಲೆಯೆತ್ತಿ ನೋಡಿ ಆಶ್ಚರ್ಯಪಟ್ಟನು.

ಕೆಲವು ದಿನಗಳ ಹಿಂದೆ ತಾವೆಲ್ಲ ಈ ನಗರಕ್ಕೆ ಬರುತ್ತಿರುವಾಗ ದಾರಿಗೆ ಅಡ್ಡವಾಗಿ ನಿಂತಿದ್ದವನೇ ಇವನು.

"ಇವನೇನಾ ರಾಕ್ಷಸ?" ಎಂದು ಭೀಮನು ಬಂಡಿಗಾರನನ್ನು ಕೇಳಿದ. ಹಾಗೆ ಕೇಳುವುದೇ ನಾಚಿಕೆ ಎನಿಸಿದಂತಿತ್ತು.

ಬಂಡಿಗಾರನು ತಲೆಯನ್ನು ಮೇಲ ಕ್ಕೂ ಕೆಳಕ್ಕೂ ಆಡಿಸಿದನು. ಭೀಮನು ಬಾಹುಗಳನ್ನಗಲಿಸಿ ಮುಷ್ಟಿ ಬಿಗಿದುಕೊಂಡಾ ತನ್ನ ಕಡೆಗೆ ಬರುತ್ತಿದ್ದ ಬಕನನ್ನು ನೋಡಿದನು. ಇವನಿಗೋಸ್ಕರವೇ ನೂರಾರು ಜನರು ಬಲಿಯಾಗುತ್ತಿರುವುದೆ? ಏನು ವಿಚಿತ್ರ! ವ್ಯಸಂಗದಲ್ಲಿ ಎಂತೆಂಥ ದೇಶ ರಕ್ಷಕರಿದ್ದಾರೆ!

ಬಕನು ಭೀಮನ ಗುರುತನ್ನು ಹಿಡಿಯಲಿಲ್ಲ. ಅವನದು ಮುಂದ ದೃಷ್ಟಿ. ಅಂತೆಯೇ ಆ ಕಣ್ಣುಗಳಲ್ಲಿ ಸದಾ ದೈನ್ಯತೆಯೇ ತುಂಬಿರುತಿತ್ತು. ಹಿಂದೆ ಅವನು ಕುಂತಿಯನ್ನೂ ಪಾಂಡವರನ್ನೂ, ಒಂದು ಬಗೆಯ ನಾಯಿಬುದ್ಧಿಯಿಂದಲೇ ಅಡ್ಡಗಟ್ಟಿದ್ದ. ಅವನು ಆ ಪ್ರಾಂತಕ್ಕೆ ಬಂದ ಮೇಲೆ ಹೊರಗಿನಿಂದ ಯಾರೂ ಆ ನಗರಕ್ಕೆ ಬರುತ್ತಿದ್ದಿಲ್ಲ. ಹೊಸ ಮನುಷ್ಯರನ್ನೂ ಹೊಸ ಪರಿಸ್ಥಿತಿಯನ್ನೂ ನೋಡಿ ಮನೆಯ ನಾಯಿ ಆಂದೋಳಿಸಿಕೊಳ್ಳುವಂತೆ, ಬಕನು ಆ ಆಗಂತುಕರನ್ನು ನೋಡಿ ಗಡಬಿಡಿಗೊಂಡು ಅಡ್ಡಗಟ್ಟಿ ನಿಂತ. ಇವರ ಒರಟುತನಕ್ಕಿಂತ ತನಗೇನೋ ನವ್ಯವಾದಂತಹ ಆಲೋಚನೆ ಅವನ ತಲೆಯೊಳಗೆ ಕದಲಿರಬೇಕು.

ಆಗ ಅವರಲ್ಲೊಬ್ಬನು ತನ್ನ ಎದೆಗೆ ಗುದ್ದಿದ ನೆನಪು ಕೂಡಾ ಅವನ ಮುಂದ ಬುದ್ಧಿಯೊಳಗೆ ಅಷ್ಟಷ್ಟಾಗಿಯೇ ಇತ್ತು. ಅಂಥವನಿಗಿಂದಿಂದಲೇ ಹೊರಬಂದುದನ್ನು ಅವನು ನೋಡಿದ್ದರೆ, ಕಾಲಿಗೆ ಬಲವಿದ್ದಷ್ಟು ವೇಗದಿಂದ ಓಡಿಹೋಗುತ್ತಿದ್ದ. ಅವೇ ಮನುಷ್ಯ ತನಗೆ ಬಂಡಿಯಲ್ಲಿ ಆಹಾರವಾಗಿ ಬಂದುತ್ತಾನೆಂದು ಅವನು ಕನಸಿನಲ್ಲಿಯೂ ನೆನೆದಿರಲಿಲ್ಲ ಇವನು ಎಂದಿನಂತಹನೇ. ಕೊರಳಲ್ಲಿ ಹೂ ದಂಡೆಯಿದೆ. ಅದೇ ತನ್ನ ಆಹಾರ. ಅವನು ತನ್ನ ಕೈಯಲ್ಲಿ ಸತ್ತು ತನ್ನ ಬಾಯಿಗೆ ಮುರಿ ಮುರಿದು ಬೀಳಲು ಸಿದ್ಧನಾಗಿರುವುದನ್ನು

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಆಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಆಸ್ಥಮಾ ನಿವಾರಕ ಔಷಧಿಯನ್ನು ತಾ 19—10—62ನೇ ಹುಣ್ಣಿಮೆ ರಾತ್ರಿ ಬೀರನೊಂದಿಗೆ ಸೇವಿಸುವದಿಂದ ಆಸ್ಥಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಪೂರ್ವದಲ್ಲೇ ಬರೆಯಿರಿ.

Manager, Shri Mahatma Naga Baba Ayurvedashram,
P O. Chitrakot U. P.

ಲೇಖಾಂಕ ೪

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ಮೂಸ್ಯ ರಾಜಾಜಿಯವರ ಕಥೆಗಳು ವಿಶೇಷತಃ ನಮ್ಮ ಸಮಾಜದ ಬಡ ಜನರ ಜೀವನದ ಹೋರಾಟದ ಕುರಿತಾಗಿರುತ್ತವೆ ಅವರ ಕಥೆಗಳಲ್ಲಿ ಕೂಲಿಯವನಿಂದ ಹಿಡಿದು ರೈತನ ವರೆಗಿನ, ಭಕ್ಷುಕನಿಂದ ಹಿಡಿದು ಭಾರೀ ಶ್ರೀಮಂತ ಕುಟುಂಬದ ವರೆಗಿನ ಹಾಗೂ, ಪೋಲೀಸಿನವನಿಂದ ಹಿಡಿದು ನ್ಯಾಯಾಧೀಶರ ವರೆಗಿನ ಯಾವ ಪಾತ್ರಗಳು ಚಿತ್ರಿತವಾಗಿದ್ದರೂ, ಅವು ವಾಸ್ತವಿಕತೆಯಿಂದ ತುಂಬಿಕೊಂಡಿರುತ್ತವೆ. ನೈಜತೆಯಿಂದ ಕೂಡಿದ ಇಂತಹ ಪಾತ್ರಗಳುಳ್ಳ ಅವರ ಕಥೆಗಳು ಜನಜೀವನದ ಮೇಲೆ ಪರಿಣಾಮ ಬೀರಬಲ್ಲವಾಗಿರುತ್ತವೆ. ಶ್ರೀಯುತರ ಕಥೆಗಳಲ್ಲಿ ವಾಸ್ತವಿಕವಾದ ಘಟನೆಯೊಂದನ್ನು ಸಮಾಜದ ಮುಂದಿಡಲು, ಟೀಕಾಗಬಹುದಾದ, ವಾಸ್ತವಿಕ ಕಲ್ಪನೆ ಮಾತ್ರ ಕಾಣಿಸುವುದೇ ಹೊರತು, ಕಲ್ಪನೆಯ ಘಟನೆಯೊಂದು, ಸಹಜತೆಯಿಂದ ಚಿತ್ರಿಸಲು ಪ್ರಯತ್ನಿಸಿರುವುದು ಅಪರೂಪವೇ ಸರಿ. ಶ್ರೀ ರಾಜಾಜಿಯವರ ಕಥೆಗಳು ಸತ್ಯದ ಪ್ರತೀಕವಾಗಿ ಸಮಾಜ ಕಲ್ಯಾಣದ ಆದರ್ಶಗಳಿಂದ ಕೂಡಿವೆ.

"ಋಣೇರ್ಜನ್ಮ"ವೆಂಬ, ಶ್ರೀ ರಾಜಾಜಿಯವರ ಒಂದು ನೀಳ್ಗತೆಯು, ಒಂದು ವಿಶೇಷವಾದ ಘಟನೆಯಿಂದ ಕೂಡಿದೆ. ಕಥೆಯ ಸಾರಾಂಶ ಹೀಗಿದೆ— ಈ ಕಥೆಯು ಹುಣಸೇಮರದ ತೋಟದಲ್ಲಿ ಮಂಗಗಳೂ ಮಕ್ಕಳೂ ಕೂಡಿ ಗುಲ್ಲೆಬ್ಬಿಸುವಲ್ಲಿಂದ ಪ್ರಾರಂಭವಾಗಿ ಕೊನೆಗೆ ಅಧ್ಯಾತ್ಮ ಚರ್ಚೆಯೊಡನೆ ಮುಕ್ತಾಯವಾಗುತ್ತದೆ.

ಮಕ್ಕಳೂ ಮಂಗಗಳೂ ಒಂದೆಡೆಯಲ್ಲಿ ಕೂಡಿದರೆ ಅಲ್ಲಿಯ ತಮಾಷೆಯನ್ನು ವರ್ಣಿಸುವುದೇ ಬೇಡ. ಅಂತೆಯೇ ಈ ತಮಾಷೆಯ ಕೊನೆಯಲ್ಲಿ ಒಂದು ಹೆಣ್ಣು ಮಂಗ, ತನ್ನ ಮರಿಯನ್ನು ಹಿಡಿದುಕೊಂಡ ಮುಕುಂದನೆಂಬ ಹುಡುಗನನ್ನು ಕಚ್ಚಿ ಪರಚಿ ಗಾಯಗೊಳಿಸುತ್ತಿರುವಾಗ, 'ಮಾರಿ' ಎಂಬ ಹೊಲೆಯರ ಹುಡುಗನೊಬ್ಬನು ಬಂದು, ಆ ಹೆಣ್ಣು ಮಂಗನಿಂದ ಮುಕುಂದನ ಪ್ರಾಣ ರಕ್ಷಣೆ ಮಾಡುತ್ತಾನೆ. ಮತ್ತೆ ಮೂರ್ಛಾವಸ್ಥೆಯಲ್ಲಿದ್ದ ಮುಕುಂದನನ್ನು ಮಾರಿಯೂ, ಅವನ ಗೆಳೆಯನೂ ಕೂಡಿ ಹೊತ್ತುಕೊಂಡು ಅವನ ಮನೆಗೆ ಸಾಗಿಸುತ್ತಾರೆ. ಮನೆಯಲ್ಲಿ ಮುಕುಂದನಿಗಿದ್ದವಳು ಅವನ ತಾಯಿ ಒಬ್ಬಳೆ. ಈ ಮುಕುಂದನ ತಾಯಿ, ಮಡಿ ಹೆಂಗಸು. ಈ ಹುಡುಗರು ಬರುವಾಗ ದೇವರ ಕೋಣೆಯಲ್ಲಿ ಮಡಿಯಲ್ಲಿದ್ದಳು. ರಕ್ತದಿಂದ ತೊಯ್ದ ಮುಕುಂದನನ್ನು ಆ ಹುಡುಗರು ಮನೆಯೊಳಗೇ ತಂದು ಮಲಗಿಸಿ, ನಡೆದ ಘಟನೆಯನ್ನು ಹೇಳಿದರು ಮಗನಿಗೆ ಒದಗಿದ ವಿಪತ್ತಿನಿಂದ ದುಃಖಿತಳಾದ ತಾಯಿ, ಮಗನಿಗೆ ಶುಶ್ರೂಷೆ ಗೈದ ಬಳಿಕ, ಈ ಹುಡುಗರನ್ನು ಯಾರೆಂದು ವಿಚಾರಿಸುತ್ತಾಳೆ. ಹುಡುಗರು ತಾವು 'ಹೊಲೆಯರೆಂದು' ಹೇಳಿದ ಕೂಡಲೇ ಆಕೆ, ತನ್ನ ಮಗನನ್ನು ಉಳಿಸಿದವರೆಂಬುದನ್ನೂ ಗಮನಿಸದೆ, 'ಚಂಡಾಲರೇ, ನಮ್ಮ ಮನೆ ಅಪವಿತ್ರವಾಯಿತು! ದೇವರು ಅಡುಗೆ ಎಲ್ಲ ಅಪವಿತ್ರವಾಯಿತು' ಎಂದು ಗರ್ಜಿಸುತ್ತ ಅವರನ್ನು ಶಪಿಸಿ ಸೌದೆಯ ಕೊಳ್ಳಿಯನ್ನೆ ತೆಗೆದೊಗೆಯುತ್ತಾಳೆ! ಉಪಕಾರ ಮಾಡಿದ ಮಾರಿಯ ಒಂದು ಬೆರಳು ಜಜ್ಜಿಯೇ ಹೋಗುತ್ತದೆ ಆಗ— ಮಾರಿಯು 'ಉಪಕಾರ ಮಾಡಿದುದಕ್ಕೆ ಈಗ ನೀವು ಪ್ರತ್ಯಪಕಾರ ತೋರಿಸಿದಿರಿ!' ಎಂದು ಹೇಳಿಯೇ ಬಿಡುತ್ತಾನೆ. 'ಬಡವರ ಮಕ್ಕಳು ಮೂತಿನಲ್ಲಿ ಚುರುಕಾಗಿರುತ್ತಾರೆ!' ಎಂಬ ಮಾತು, ಶ್ರೀ ರಾಜಾಜಿಯವರು ಇಲ್ಲಿ ಕೇಳಿರುವುದು, ಸಮಯೋಚಿತ ಮಾತ್ರವಲ್ಲ ಸ್ವಾಭಾವಿಕವೂ ಆಗಿದೆ.

ಇತ್ತ ಮಾರಿಯು ತಾಯಿ, 'ಮಾರಿ ಆ ಬ್ರಾಹ್ಮಣಿಯ ಮನೆಯೊಳಗೆ ಹೋದುದು ದನ್ನೂ ಆಕೆ ಅವನನ್ನು ಗಾಯಗೊಳಿಸಿ ಶಪಿಸಿದುದನ್ನೂ ನೆನೆನೆನೆದು—'ಅಯ್ಯೋ! ಅಬ್ರಾಹ್ಮಣ್ತಿಯ ಶಾಪ ನಮ್ಮನ್ನೆಂದಿಗೂ ಬಿಡದು. ಆದರಿಂದ ನಾವು ಉಳಿಯಲಾರೆವು!' ಎನ್ನುತ್ತ ಕಣ್ಣೀರು ಸುರಿಸುತ್ತಾಳೆ! ಆ ತರುವಾಯ ಈ ಹೊಲೆಯರ ಕುಟುಂಬ ದಿನೇದಿನೇ ಹೀನ ಸ್ಥಿತಿಗೆ ಬರುತ್ತದೆ. ಆ ಊರಿನಲ್ಲಿ ಕ್ಷಾಮವೂ ತಲೆದೋರಿ, ಈ ಹೊಲೆಯರಿಗೆ ಗಂಜಿಗೂ ಗತಿ ಇಲ್ಲದಂತಾಗಲು,—'ಇದೆಲ್ಲವೂ ಆ ಬ್ರಾಹ್ಮಣಿಯ ಶಾಪದ ಫಲ!' ಎಂದೇ ಮಾರಿಯ ತಾಯಿ ಶಪಿಸುತ್ತಾಳೆ! ಕೊನೆಗೆ ಈ ಕುಟುಂಬ ಲಂಕೆ (ಒಂಹಳ) ಯಿಂದ ಕೂಲಿ ಗರನ್ನು ಕರೆದೊಯ್ಯಲು ಬಂದಿದ್ದ ಓರ್ವ ಏಜಂಟನೊಡನೆ, ಚಾ ತೋಟಕ್ಕೆ ಕೆಲಸಕ್ಕಾಗಿ ಹೊರಟು ಹೋಗುತ್ತದೆ.

ವರ್ಷ ವರ್ಷಗಳುರುಳಲು, ಮುಕುಂದನು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾಗುತ್ತಾನೆ. ಆ ಬಳಿಕ ಕೆಲವೇ ದಿನಗಳಲ್ಲಿ ಮುಕುಂದನ ತಾಯಿ, ಅಂಟುರೋಗದ ಜಾಡ್ಯದಿಂದ ತೀರಿಹೋಗುತ್ತಾಳೆ. ಬಳಿಕ—

ಅನಾಥನಾದ ಮುಕುಂದನು ಗೊತ್ತು ಗುರಿಯಿಲ್ಲದೆ ದೇಶ ಸಂಚಾರ ಮಾಡುತ್ತಾನೆ. ದುಃಖಿಯೂದ ಮುಕುಂದನು ಅನೇಕ ದೇಶಗಳನ್ನು ಸುತ್ತಿ ಸುತ್ತಿ ಬಹು ಕಷ್ಟ ಪಡುತ್ತಾನೆ. ಇಲ್ಲಿ ಶ್ರೀ ರಾಜಾಜಿಯವರು—'ಹೀಗೆ ಕಷ್ಟಪಟ್ಟ ಮುಕುಂದನ ಜೀವನಾನುಭವವು ಬಹುಮುಖವಾಗಿ ಪರಿಪಕ್ವವಾಗಿತ್ತು!' ಎನ್ನುತ್ತಾರೆ ಹೀಗೆ ಕೆಲವು ಕಾಲ ಕಳೆಯಲು ಮುಕುಂದನು ಡಾಕ್ಟರಿಕೆಯನ್ನು ಪಾಸುಮಾಡಿ, ಸರಕಾರಿ ಆಸ್ಪತ್ರೆಯಲ್ಲಿ ಡಾಕ್ಟರನಾಗುತ್ತಾನೆ. ಕೊನೆಗೆ ತನ್ನೂರಿನ ಆಸ್ಪತ್ರೆಗೆ ವರ್ಗವಾಗಿ ಬರುತ್ತಾನೆ. ಈಗ ಮುಕುಂದನಿಗೆ ತಾಯಿಯ ನೆನಪು ಮತ್ತಷ್ಟು ಹೆಚ್ಚಾಗುತ್ತದೆ.

ಇತ್ತ ಮಾರಿಯು, ಲಂಕೆ (ಸಿಂಹಳ) ಯಲ್ಲಿರುವಾಗಲೇ ಪತ್ನಿಯು ಎಂಬ ಹುಡುಗಿಯನ್ನು ಮದುವೆಯಾಗುತ್ತಾನೆ. ಸಿಂಹಳಕ್ಕೆ ಹೋದ 15 ವರ್ಷಗಳ ಬಳಿಕ ಈ ಹೊಲೆಯರು, ಮರಳಿ ತಮ್ಮ ಹಳ್ಳಿಗೆ ಬರುತ್ತಾರೆ. ಈಗ ಹಳ್ಳಿಯ ಸ್ಥಿತಿ ಪರಿವರ್ತನೆಯಾಗಿರುತ್ತದೆ. ಆದರೆ, ಅವರು ಊರಿಗೆ ಬಂದ ವರ್ಷವೇ ಆ ಊರಿನಲ್ಲಿ ಕ್ಷಾಮ ತಲೆದೋರಿತು! ಊಟಕ್ಕೆ ಆಕ್ಕಿಯಿಲ್ಲ! ಕುಡಿಯಲು ಒಂದು ಗುಟುಕು ನೀರೂ ಇಲ್ಲ! ಅಂತಹ ಭೀಕರ ಕ್ಷಾಮ! ಉಚ್ಚ ವರ್ಣೀಯರ ಕೆಲವು ಬಾವಿಗಳಲ್ಲಿ ಸ್ವಲ್ಪ ನೀರು ಇರುತ್ತಿತ್ತು. ಆದರೆ, ಹೊಲೆಯರಿಗೆ ಇದು ಲಭಿಸುವಂತೆಯೇ ಇಲ್ಲ. ಈ ಪರಿಸ್ಥಿತಿಯಲ್ಲಿಯೂ ಸಹ ಓರ್ವ ದಯಾವಂತ ಗೌಡ, ತನ್ನ ಒಂದು ಕುಂಡು ಗದ್ದೆಯ ಬೆಳೆಗೆ ಬಾವಿಯಿಂದ ತೆಗೆದು ಹಾಕಿದ ನೀರನ್ನು ಸ್ವಲ್ಪ ಹೊತ್ತು ಹೊಲೆಯರಿಗಾಗಿ ಚರಂಡಿಯ ಮೂಲಕ ಹೊರಗೆ ಬಿಡುತ್ತಿದ್ದ, ಆ ಕಾಲದಲ್ಲಿ ಅವನೇ ಪುಣ್ಯಾತ್ಮ! ಹೊಲೆಯರು ಆ ಕೆಸರನ್ನೂ ನೀರನ್ನೂ ಒಟ್ಟಿಗೆ ತುಂಬಿಸಿ ತಿಳಿಯಾಗುವ ತನಕ ಕಾದು ಮತ್ತೆ ಸಿಕ್ಕುವ ಅಲ್ಪ ಅಂಶದ ನೀರಿನಿಂದಲೇ ಬದುಕ ಬೇಕಾಗಿತ್ತಂತೆ! ಈ ಕ್ಷಾಮದ ನಿಜ ಸ್ಥಿತಿಯನ್ನು ಶ್ರೀ ರಾಜಾಜಿಯವರು ಇದಕ್ಕಿದ್ದಂತೆ ವರ್ಣಿಸಿರುವುದನ್ನು ಓದುವಾಗ ಪ್ರತ್ಯಕ್ಷಾನ ಭನವಾದಂತೆ ಭಾಸವಾಗುವುದು.

ಒಂದು ದಿನ ಮಾರಿಯು ಹೆಂಡತಿ ಪೂವಯಿ, ಕುಡಿಯಲು ನೀರಿಲ್ಲದ ಕಾರಣ, ಮಧ್ಯಾಹ್ನ ರಾತ್ರೆಯಲ್ಲಿ ಆ ದಯಾವಂತ ಗೌಡನ ಗದ್ದೆ ಕಾಯುವ ಗುಡ್ಡಿನಿಂದ ಬಾವಿ ಹಗ್ಗವನ್ನು ಕದ್ದು ತಂದೆಲ್ಲರಿಗೆ ಆ ಬಾವಿಯಿಂದ ನೀರು ಸೇದುತ್ತಾಳೆ. ಆಸ್ಪತ್ರೆಯಲ್ಲಿ ಜನರಿಗೆ ಇದು ತಿಳಿದು ಹೋಗಿ, ಉತ್ತಮರ ಬಾವಿಯಿಂದ ನೀರು ಸೇದಿದ್ದಕ್ಕಾಗಿ ಪೂವಯಿಯನ್ನು ಜೈನ್ಹಾಗಿ ಮೂಳೆ ಮುರಿಯುವ ಹಾಗೆ ಥಳಿಸಿ, ಬೆಳಗಾಗುವುದರೊಳಗೆ ಹೊಲಗೇರಿಯ ಬಳಿ ನೂಕಿ ಬಿಡುತ್ತಾರೆ.

ಪ್ರಜ್ಞೆಯಿಲ್ಲದೆ ಬಿದ್ದಿದ್ದ ಪೂವಯ್ಯನ್ನು ಆವಳ ಗಂಡ ಮಾರಿಯು ಬೇರೆ ನಾಲ್ಕು ಜನರನ್ನು ಕೂಡಿಸಿ, ಹೊತ್ತುಕೊಂಡು, ಆ ಊರಿನ ಆಸ್ಪತ್ರೆಗೆ ತೆಗೆದು ಕೊಂಡು ಹೋಗುತ್ತಾನೆ. ಅಲ್ಲಿ ಡಾ! ಮುಕುಂದನು ಆವಳ ಆರೈಕೆ ಮಾಡಿ, ಆವಳನ್ನು ಎದ್ದು ನಡೆದಾಡುವಷ್ಟರ ಮಟ್ಟಿಗೆ ಗುಣಪಡಿಸುತ್ತಾನೆ. ಇಲ್ಲಿ ಒಂದು ವಿಚಿತ್ರ ನಡೆಯುತ್ತದೆ. ಡಾಕ್ಟರನಾದರೂ ಆತ್ಮಜ್ಞಾನಿಯೂಗಿದ್ದ ಮುಕುಂದನಿಗೆ, ಪೂವಯಿಯ ಹತ್ತಿರ ಹೋದಾಗಲೆಲ್ಲಿ ಮಲ್ಲಿಗೆ ಹೂವಿನ ಪರಿಮಳ ಬರುತ್ತದೆ. ಆದರೆ ಹೂ ಎಲ್ಲಿಯೂ ಇರುವುದಿಲ್ಲ! ಈ ವಿಚಿತ್ರಾನುಭವವನ್ನೆಯನ್ನು ಶ್ರೀ ರಾಜಾಜಿಯವರು—'ಮುಕುಂದನ ತಾಯಿಗೆ ನಿತ್ಯವೂ ಮಲ್ಲಿಗೆ ಹೂಗಳನ್ನು ಸಂಗ್ರಹಿಸುವ ಅಭ್ಯಾಸವಿತ್ತು. ಈ ಪೂವಯಿಯು ದೇಹವನ್ನ ತನ್ನ ತಾಯಿಯು ಆತ್ಮ ಏಕೆ ಪ್ರವೇಶಿಸಿರಬಾರದು? ಎಂಬ ಭಾವನೆಯಿಂದ ಮುಕುಂದನಿಗೆ ತನ್ನ ಬಾಲ್ಯದಲ್ಲಿ ತಾಯಿಯ ಬಳಿಯಿದ್ದಾಗ ಬರುತ್ತಿದ್ದಂತೆ, ಈಗಲೂ, ಈ ಪರಿಮಳ ಬರತೊಡಗಿದ್ದು! ನಾವು ಚಿಕ್ಕಂದಿನಲ್ಲಿ ಕಂಠಪಾಠ ಮಾಡಿದ ಅಥವಾ ಕೇಳಿದ ಒಂದು ಕವಿತೆ, ಅಥವಾ ವಾಕ್ಯ ಮತ್ತೆ ಎಷ್ಟೋ ವರ್ಷಗಳ ಮೇಲೆ ನೆನಪಾಗುವಂತೆ, ಮುಕುಂದನಿಗೆ ಈ ಪರಿಮಳ ದ ಅನುಭವವಾಯಿತು! ಎನ್ನುತ್ತಾರೆ. ಕೊನೆಗೆ, ಈ ಪೂವಯಿಯು ದೇಹದಲ್ಲಿ ತನ್ನ ತಾಯಿಯ ಆತ್ಮವೇ ನೆಲೆಸಿರಬಹುದು, ಎಂಬ ಭಾವಿಸಿದ ಮುಕುಂದನು ಮಾರಿಯನ್ನೂ ಪೂವಯಿಯನ್ನೂ ತನ್ನ ಮನೆಯಲ್ಲಿ ತನ್ನ ಸಂಗಡವೇ ಇರಬೇಕೆಂದು ಒತ್ತಾಯಿಸುತ್ತಾನೆ. ಬಳಿಕ ಅವರೂ ಇದಕ್ಕೆ ಒಪ್ಪುತ್ತಾರೆ. ಡಾ! ಮುಕುಂದನು ಈ ಹೊಲೆಯರನ್ನು ತನ್ನ ಮನೆಯಲ್ಲಿ ಇಟ್ಟುಕೊಂಡುದರಿಂದ, ಆ ಊರಿನ ಜನರು— ಡಾ! ಮುಕುಂದನು ಹರಿಜನರ ಜಾತಿಗೆ ಸೇರಿದ

(ಇನ್ನೇ ಪುಟ ನೋಡಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಪೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:			ರೂ. ನ.ಪೈಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ	ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,,	,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,,	,,	5 00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,,	,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,,	,,	5-50
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು	,,	,,	3-25

ನಿಮ್ಮ
ದಿನನಿತ್ಯದ ಉಳಿತಾಯವನ್ನು ಮಾಸಿಕ ಉಳಿತಾಯವನ್ನು
ಹಣ ಡಿಪೋಸಿಟುಗಳಲ್ಲಿ ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ
ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಶುದ್ಧ ಹವಿಟಿ

ಮಂಗೋತಿಯ ಪೂರ್ವ ಪಶ್ಚಿಮ

"ಕೌಸಲ್ಯಾ ಕಿಟಿಲಾ ಗತಿಃ" ಎಂಬುದು ಹಳೆಯ ಮಾತು. ಆದರೆ ಗತಿ ಮಾತ್ರ ಹಳೆಯದಾಗಲಿಲ್ಲ. ಅದು ದಿನದಿನಕ್ಕೆ ಹೊಸತಾಗುತ್ತ ಬರುತ್ತಿದೆ. "ನವ ನವೋನ್ಮೇಷ ಶಾಲಿನೀ ಗತಿಃ" ಎಂಬಯಕ್ಕು ರಂಜಕೀಯದ ಎರಡೆಮ್ಮೆ ಕರೆಯುವವರಲ್ಲಿ ಆಸಕ್ತರಾಗಿರುವವರಿಗೆಲ್ಲ ಮೆಜ್ಜುಗೆಯ ಸೂಳ್ನುಡಿ. ತಾನು ಕುಡಿಯುವ ಹಾಲು, ಪಡುವ ಕಳ್ಳತನ ಅನ್ಯರಿಗೆ ಕಾಣಬಾರದೆಂದು ಬೆಕ್ಕು ಕಣ್ಣು ಮುಚ್ಚಿಕೊಳ್ಳುವುದು. ಆದರೆ, ಪಾಪ, ತನ್ನ ಕಣ್ಣಿನಿಂದ ತಾನು ಮಾತ್ರ ನೋಡುವುದು; ತನ್ನ ಕಣ್ಣು ಪಟಲದಲ್ಲಿ ಬಿದ್ದ ಚಿತ್ರವು ತನ್ನ ಜ್ಞಾನವಾಹಿ ನರಗಳ ಮೂಲಕ ತನ್ನ ಮಿದುಳಿಗೆ ಮನವರಿಕೆಯಾಗುವುದು ಎಂಬ ಸಜ್ಞಾನದ ಸತ್ಯ ಅದಕ್ಕೆಲ್ಲಿ ಗೊತ್ತಾಗಬೇಕು? ಬೆಕ್ಕಿಗೆ ಗೊತ್ತು ಇಪ್ಪೇ ಕಣ್ಣಿನಿಂದ ನೋಡುತ್ತಾರೆ; ಕಣ್ಣು ಇರುವುದು ನೋಡುವುದಕ್ಕೆ ಎಂದು. ಯಾರ ಕಣ್ಣಿಂದಲೆ ಎಂಬ ಕುಟಿಲ ಪ್ರಶ್ನೆಗೆ ಇವಕ್ಕೆ ಉತ್ತರ ಕೊಡಬಲ್ಲುದುಂಟೆ? ತನ್ನ ಕೆಲಸಕ್ಕೆ ತಪ್ಪು ಸರಿ ಬಿಟ್ಟರೆ, ಆದನ್ನೇ ಪ್ರಾಂಗುಲಿನಿಂದ ತಿಕ್ಕಿ ತಿಕ್ಕಿ ತೊಳೆದಂತೆ ಮಾಡಿ ನೆಕ್ಕಿ ನೆಕ್ಕಿ ಕಣ್ಣು ಮುಚ್ಚಿ ಕೂತಿರುತ್ತಾವುದಕ್ಕೂ ಅಂಜುವುದಿಲ್ಲ. ಏನೆಂದರೆ, ಬೆಕ್ಕು ಮತ್ತು ಪುಷ್ಪಗಳ ಸಂಬಂಧ, ನೆಂಟು ಅಂತಹುದು.

ಂ ಂ ಂ

ಬೇಕ್ಕು ಪ್ರಾಣಿಲ ಋಷಿ. ತನ್ನ ಕೈಲಾದಾಗ ಕಾರ್ಯಯತ್ನೆಯ ಸಪದಲ್ಲಿ ಇಲಿಗಳನ್ನೆಲ್ಲ ಕೂಡಿ ಹೊರಡಿಸಿ, ದಾರಿಯಲ್ಲಿ ಹಸಿವಾದಾಗ ಒಂದೊಂದನ್ನೇ ತಿಂದು ತೇಗಿದ ಬುದ್ಧಿವಂತ ಪ್ರಾಣಿ. ಆದರೆ, ಇಂತಹ ಪ್ರಾಪಾಣಿಕ ಬೆಕ್ಕಾವನೂ ಮಂಗನ ಕೈಯಿಂದ ಬೆಣ್ಣೆ ತೂಗಿಸಿಕೊಂಡು ಹಸಿವೆಯಿಂದ ನರಳಬೇಕಾಯಿತು. ತನ್ನ ಬೆಕ್ಕಮ್ಮನ ಜಾತಿಗೆ ಸೇರಿದ ಹುಲಿಗೆ ಪಿಠ್ಯಾಭ್ಯಾಸ ಕಲಿಸಿದ ಗುರು ಕೂಡ ಬೆಕ್ಕೇ. ಆದರೆ, ತನಗರಿತಿರುವ ಮರಿಪೇರುವ ವಿದ್ಯೆಯೊಂದನ್ನು ಅದಕ್ಕೆ ಕಲಿಸ್ಲಿಸೆಂದು ಹೇಳುತ್ತಿರಲಿಲ್ಲ. ಬೆಕ್ಕು ಎಂದರೆ ಅಂತಹ ಚಾಣಾಕ್ಷ ಪ್ರಾಣಿ. ಅಕ್ಕ ಳೆಯಂತೆ ಮಾಸಿ ಕೊಗ್ಗುವರೆ ಸಾಕು ಒಳಗನ್ನುಗಿಕೊಳ್ಳುವ ಅತಿ ಜಾತ್ರ. ಬಿಲದ ಬಳಿಯಲ್ಲೇ ದೊಂಬು ಹಾಕುತ್ತಿದ್ದು ಇಲಿ ಮುಸುಡಿ ಹೊರಗೆ ಹಾಕುವುದೇ ತಡ ಗಂಟಲನ್ನೇ ಒತ್ತಿ ಹಿಡಿಯುವ ಒಂದು ವಿಚಿತ್ರ ಪ್ರಾಣಿ ಕೆಲವು ಬೆಕ್ಕುಗಳು ತಮ್ಮ ಜಾತಿಯನ್ನೇ ತಾವು ತಿಂದು ತೇಗುವುದೂ ಇವೆ. ಸಾಮಾನ್ಯವಾಗಿ ಸ್ವಭಾವತಃ ಕ್ರೂರವಾಗಿದ್ದು ಮಿದ್ಧರಾಧಾರಿ ಕಾಂಗ್ರೆಸ್ಸಿಗನಂತೆ ತೋರುವ ಬೆಕ್ಕು ಹೆಡ್ಡರಲ್ಲಿ ಹೆಡ್ಡನೂ ಹಾದು; ಜಾಣರಲ್ಲಿ ಜಾಣನೂ ಆದು ಮನುಷ್ಯರೊಡನೆ ಅದು ಕಾಪಾಟಲ್ಲೆ ಸಿಲ್ಲಲೂ ಸಿದ್ಧ; ನೋಡಿದೊಡನೆಯೇ ತಲೆತಪ್ಪಿಸಿಕೊಳ್ಳಲೂ ಶಯಾರು.

ಂ ರ ಂ

ನಮ್ಮ ಮನೆಯಲ್ಲೊಬ್ಬ ನೌಕರನಿದ್ದ. ಅವನು ಹೆಡ್ಡನೂ ಹೌದು, ದಿಟ್ಟನೂ ಹೌದು. ಪ್ರಾಚೀನ ಐಗುಪ್ತದ ನರವ್ಯಪ್ತಿನೆಂಬ ಹೆಸರು ಆತನಿಗೆ ಸರಿಯಾಗಿ ಅನ್ವಯಿಸುತ್ತದೆ. ಏಕೆಂದರೆ, ಆತನು ನೋಟಕ್ಕೆ ವ್ಯಪಭಿನಂತಿದ್ದರೂ ಆತನ ನರಮಂಡಲ ಮಾತ್ರ ಸೂನವರದಂತೆ ಇತ್ತು ಎಂಬುದು ನೂರಕ್ಕೆ ನೂರರಷ್ಟು ಸತ್ಯ. ಅದುದರಿಂದಲೇ ಆತ ವ್ಯಪಭಿದಂತೆ ಹೋರಾಡಿ ಬಳಿಕ ಕೈಲಾಗದೆಂಬಾಗ ಮಾನವರಂತೆ ಶರಣು ಬರುತ್ತಾನೆ. ಮನುಕುಲ ಸಂಜಾತರೆಲ್ಲ ಮಾನವರು ಎಂಬ ಸಿದ್ಧಾಂತದಂತೆ ಮನುಷ್ಯ ಮಾತ್ರರಲ್ಲಿ ರಾಕ್ಷಸರೂ ಮಾನವರೇ ಎಂಬುದಿಂದು ನಿರ್ವಿವಾದ. ಹಾಗಿರುವಾಗ, ರಾಕ್ಷಸ ಸ್ವಭಾವದ ವ್ಯಪಭವಿರಲಿ, ಮಾರ್ಜಾಲವೇ ಇರಲಿ ಮಾನವರೇ ಎಂಬುದನ್ನು ಅಂಶಿಕವಾಗಿ ಒಪ್ಪಿಕೊಳ್ಳಬಹುದು; ಆಥವಾ ಮಾನವರೇ ಕೆಲವೊಮ್ಮೆ ವ್ಯಪಭಗಳಾಗುವುದೂ ಇದೆ; ಬೆಕ್ಕಾಗುವುದು ಸರ್ವಸಾಮಾನ್ಯವೆಂಬಂತಾಗಿದೆ.

ನಿಮ್ಮ ಮನೆಯಾಳುವಿಗೆ ಗುಟ್ಟಿನಲ್ಲಿ ಬೀಡಿ ಸೇದಲು ಹಣ ಬೇಕಾಯಿತು ಎನ್ನಿ. ಅಧಿಕಾರವಾಣಿಯಿಂದ ನಿರ್ಮೊದ್ದಸಿ ವೇತನ ಕೇಳುವ ಎದೆಗಾರಿಕೆಯಿದ್ದವ ಗುಟ್ಟಿನಲ್ಲಿ ಬೀಡಿ ಸೇದುವುದಕ್ಕೆ ಹೋಗುವುದಿಲ್ಲ. ಇಂದಿನ ಹೈಸ್ಕೂಲು-ಕಾಲೇಜು ಹುಡುಗರಂತೆ ನಿರ್ಮೊದುರೇ ಸೇದುತ್ತಾನೆ. ಆದರೆ, ಪ್ರೈಮರಿ ಶಾಲೆಯ ಹುಡುಗರು ಗಾಂಧೀಜಿ ಕಿದ್ದು ಸೇದಿ ರುಚಿ ನೋಡುವಂತೆ ಆಪ್ಪೇ ಪ್ರಾಯದ ನಿಮ್ಮ ನೌಕರ ಕಾಸು ಕೇಳಿ ಬಂದಾಗ, ನೀವು ನಾಲ್ಕು ಬಿಸುಪೊಡುಗಳನ್ನಿತ್ತು ಕಳಿಸಿ ಕೊಡುತ್ತೀರಿ. ಆಗ ಅವನು ಮೂಡಬೇಕೇನು? ಒತ್ತಿ ಬರುವ ಸೇದುವ ಆಸೆಯನ್ನು ಹತ್ತಿಕ್ಕಲಾರದ ಆತ ಚಡಪಡಿಸುತ್ತಾನೆ; ಕೊನೆಗೆ ನೀವು ಹಣವಿಡುವತ್ತ ಬೆಕ್ಕಿನಂತೆ ನಡೆದು ಆದರಂತೆಯೇ ಆತನಿಗೆ ಕೈ (ಬಾಯಿಯಲ್ಲ) ಕೊಟ್ಟೇ ತೀರುತ್ತಾನೆ. ನಿಮ್ಮ ಕೈಯಲ್ಲಿ ಸಿಕ್ಕಿಬಿದ್ದನೆಂದರೂ ಬೆಕ್ಕಿನಂತೆ ನುಣುಚಿಕೊಳ್ಳುವುದಕ್ಕೂ ಅವನಿಗೆ ಗೊತ್ತಿದೆ. ಆವನ್ನೇ ಚಾಣಾಕ್ಷತನವೆನ್ನುವುದು; ಸಮಯದ ಏರುಪೇರು ಎಂದರೆ ಇದೇ ತಾನೆ? ಕ್ಷಣಕ್ಷಣಕ್ಕೆ ತನ್ನ ಬಣ್ಣವನ್ನು ಬದಲಾಯಿಸುವ ಓತಿಕಾಟೆ ಬಹು ಸುಂದರವಲ್ಲವೆ? ಬಣ್ಣ ಬದಲಾಯಿಸುವುದರಲ್ಲಿಯೇ ಮುಗ್ಧವಾಗುತ್ತಿರುವ ಓತಿ ಅದರಿಂದಲೇ ಜಗನ್ಮಾನ್ಯವಾಗಿದೆಯೆಂದರೆ ಆಶ್ಚರ್ಯವಿಲ್ಲ. ತನ್ನ ಶತ್ರುಗಳಿಂದ ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕಾದರೆ, ಓತಿಗೆ ಕನ್ನಲ್ಲಿರುವ ಈ ವಿಶಿಷ್ಟ ಗುಣ ಮತ್ತು ಶಕ್ತಿಗಳೇ ತಾರಣೋಪಾಯಗಳಾಗಿವೆ.

ಂ ಂ ಂ

ರಾಜಕಾರಣಿಗಳನ್ನು ಮಂಗಗಳಿಗಾಗಲಿ ಓತಿಕಾಟಗಳಿಗಾಗಲಿ ಹೋಲಿಸುವುದು ಹೀನೋಪಮೆಯೆನಿಸೀತು; ಪ್ರಜಾಸ್ವಭುತ್ವದಲ್ಲಂತೂ ಈ ತೆರದ ಅಪಂಥ ನಿಜಕ್ಕೂ ಅಕ್ಷಮ್ಯ. ಜನರು ಎಂತಹ ಸರಕಾರವನ್ನು ಬಯಸುತ್ತಾರೋ ಅಂತಹ ಸರಕಾರವನ್ನು ನಿರ್ಮಿಸುವ ಸ್ವಾತಂತ್ರ್ಯ ಆವರಿಗಿದೆ, ಇದೇ ಪ್ರಜಾಪತ್ತೆಯ ಮೂಲ. ಆದುದರಿಂದ ಭಾರತೀಯರು ಯಾವ ಯಾವ ಪ್ರತಿನಿಧಿಗಳನ್ನು ಎಲ್ಲಿಗೆಲ್ಲಿಗೆ ಆರಿಸಿಕೊಂಡಿರುವರೋ ಅವರು ಅಲ್ಲಿಗಲ್ಲಿ ಅಡಳಿತೆ ನಿರ್ವಹಿಸುತ್ತಾರೆ, ಇದೊಂದು ಮಹಾ ಸಿದ್ಧಾಂತ. ಈ ಸಿದ್ಧಾಂತದ ಆಧಾರದಿಂದ ಅನುಮಿತ ಪೊಂದನ್ನು ನಿರ್ಮಿಸಬಹುದು: ತಾವು ಚುನಾಯಿಸಿದ ಪ್ರತಿನಿಧಿಯ ಮೇಲೆ ಜನರು ದೂರಾಡಿಕೊಳ್ಳಬಾರದು; ಏಕೆಂದರೆ ಆತನೇ ತಮ್ಮೆಲ್ಲ ಅಭಿಪ್ರಾಯಗಳ ಪ್ರತೀಕವೆಂಬುದನ್ನು ಅವರೆಲ್ಲ ಆರಿಸಿಕೊಂಡಿದ್ದಾರೆ; ಇಲ್ಲವೇ ಒಪ್ಪಿಕೊಂಡಿದ್ದಾರೆ. ಆದುದರಿಂದ, ಒಮ್ಮೆ ಆರಿಸಿದ ಪ್ರತಿನಿಧಿಯ ಮೇಲೆ ಬುರಿ ಕಾರುವ ಅವಕಾಶ ಬರಬೇಕಾದರೆ ಮತ್ತೊಂದು ಚುನಾವಣೆಯ ವರೆಗೆ ಮತದಾರರು ಕಾದಿರಬೇಕಾಗುತ್ತದೆ.

ಂ ಂ ಂ

ರಾಜಕಾರಣಿಗಳು ಮಂಗನಂತಲ್ಲ; ಅವರ ಬುದ್ಧಿ ಮಾತ್ರ ಮಂಗನಂತೆ; ಮಂಗ ಬುದ್ಧಿಯೆಂದರೇನು? ಮಂಗನ ಶರೀರಕ್ಕಿರುವಂತೆ ಬುದ್ಧಿಗೂ ಒಂದು ಬಾಲವಿರುತ್ತದೆ. ಈ ಬಾಲ ಗೋಡೆ ಗಡಿಯೂರಿದ ಪೆಂಡುಲಂದಂತೆ ಆತ್ತಿತ್ತ ಜೋಲಿಡುತ್ತ ಇರುತ್ತದೆ. ಸೃಷ್ಟಿಕರ್ತ ಬ್ರಹ್ಮ ಮಾನವನ ಪೂರ್ವ ಜಾತಿ ಕಪಿಗಳನ್ನು ಸೃಷ್ಟಿಮಾಡುವಾಗಲೇ ಅವುಗಳ ಬುದ್ಧಿಯೆಂಬ ಗಡಿಯೂರಿಕ್ಕೆ ಕೀ ಕೊಟ್ಟುಬಿಟ್ಟಿರುತ್ತಾನೆ: ಆ ಕೀ ಮಂಗನ ಜೀವಿತಾವಧಿಯ ವರೆಗೂ ಸಾಕಾಗುವುದು. ಈ ಪೆಂಡುಲಂನ ಉದ್ದ ದಪ್ಪಗಳಿಗನುಗುಣವಾಗಿ ಅವುಗಳ ಬುದ್ಧಿಯ ಚಪಲತೆ ಹೆಚ್ಚು ಕಡಿಮೆಯಾಗುವುದು. ನಾರಸ್ವತಮೆನಿಪ ಕವಿತೆಯೊಳ್ ವಾಗ್ದೇವಿಯು ಭಂಡಾರದ ಮುದ್ರೆಯನ್ನೊಡೆದ ಕವಿರನ್ನನು ಹೇಳುವಂತೆ "ಕಪಿಗೆ ಚಪಲತೆ ಸಹಜಂ" ಇದಕ್ಕೆ ಕಾರಣ ಮೇಲೆ ಹೇಳಿಯೇ ಇದೆ.

ನಾನು ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗ ಜರ್ಮನಿಯ ಒಬ್ಬ ಬಿಳಿಯರು (ಕೆಂಪು) ಬಂದು ವಿದ್ಯಾರ್ಥಿಗಳನ್ನು ಕುರಿತು ಭಾಷಣವಿತ್ತರು. ಅವರು ಪದೇ ಪದೇ ತಮ್ಮ ಹಿಮ್ಮಡಿಗಳನ್ನು ಎತ್ತಿ ದೇಹವನ್ನು ವಿರಿಯುತ್ತಿದ್ದರು. ಮಾನವರೆಲ್ಲರೂ ಮಂಗನ ಸಂತಾನವೆಂದು ಸಿದ್ಧಾಂತ ಮಾಡಿದ ಡಾರ್ವಿನ್ನನ ಹತ್ತಿರದವರಂತೆ ಇವರ ಬಗ್ಗೆ ನನ್ನ ಮಿತ್ರರೊಬ್ಬರು ಹೇಳಿದ ಮಾತುಗಳನ್ನು ಅಂದು ನಾನು ಖಂಡತಕ್ಕೂ ನಂಬಿದ್ದೆ; ಇಂದೂ ಸಂಪೂರ್ಣ ಅಲ್ಲುಗಳೆಯುವುದಿಲ್ಲ. ಯೂರೋಪಿನವರಿಗೆಲ್ಲ ಇಂದೂ ಬಾಲವಿದೆ. ಅದು ಮಂಗಗಳಿಗಿರುವಂತೆಯೇ ಗುದದ್ವಾರದ ವೇಲ್ಬಾಗದಲ್ಲಿದೆ. ಅದರ ಉದ್ದ ೧॥ ಅಂಗುಲದಿಂದ ೩॥ ಅಡಿಗಳ ವರೆಗಿರುತ್ತದೆ. ನಿಂತು ಮಾತಾಡುವಾಗ ಇದು ಕಂಪಿಸುತ್ತಿರುವುದರಿಂದ ಇವರು ಹಿಮ್ಮಡಿ ಮೇಲೆತ್ತುತ್ತಿರುತ್ತಾರೆ. ಬಾಲವನ್ನು ಮುಚ್ಚಿಕೊಳ್ಳುವುದಕ್ಕಾಗಿಯೇ ಇವರು ಶರ್ಟನ್ನು ಪೇಂಟಿನೊಳಗೆ ತುರುಕಿಕೊಳ್ಳುತ್ತಾರೆ. ಇವರ ಮುಖವೂ ಮಂಗನದರಂತೆಯೇ ಇದೆ. ನಿಜಕ್ಕೂ ಇದನ್ನು ನಂಬಿದವರಲ್ಲಿ ನಾನೂ ಒಬ್ಬನಾಗಿ ಬಾಲ ಕಾಣದಂತೆ ತಿದ್ದುದರಿಂದ ಮುಖವನ್ನು ಸೂಕ್ಷ್ಮವಾಗಿ ನೋಡಿದೆ. ಕೆಂಪು ಮೋರೆಯ, ಉದ್ದ ಮೂಗಿನ, ದೀರ್ಘ ಶರೀರದ ಇಂಗ್ಲಿಷ್ ಆಡುವ ಆ ಬಿಳಿಯ ನಿಜಕ್ಕೂ ನನಗೆ ಮಂಗನಂತೆ ಕಾಣಿಸಿದರೆ ಆಶ್ಚರ್ಯವಿಲ್ಲ.

ಂ ಂ ಂ

ಮಂಗನ ಸಂತಾನದವರಲ್ಲಿ ರಾಜಕಾರಣಿಗಳೂ ಸೇರಿರುವುದರಿಂದ, ಅವರು ಚಪಲ ಬುದ್ಧಿಯವರಾದರೆ ವಿಸ್ಮಯವೆಲ್ಲಿ? ಆದರೆ, ಇವರ ಬುದ್ಧಿಯ ಚಾಪಲ್ಯಕ್ಕೆಂತಲೂ ಬಣ್ಣ ಬದಲಿಸುವ ಗುಣವೇ ಹೆಚ್ಚು ಎಂಬುದು ಇತ್ತೀಚೆಗೆ ಸಿದ್ಧವಾಗಿದೆ. ಆದುದರಿಂದ ಅವರಲ್ಲಿ ಮಂಗತನಕ್ಕೆಂತಲೂ ಓತಿಕಾಟವೇ ಅಧಿಕವೆಂದು ಧೈರ್ಯದಿಂದ ಹೇಳಬಹುದು. ನಮ್ಮ ರಾಜಕಾರಣಿಗಳು ಪಕ್ಷಗಳನ್ನು ಬದಲಿಸುವುದು ಅವರ ಚಾಪಲ್ಯವನ್ನೂ ವರ್ಣಸಂವರ್ತನೆಯ ಗುಣವನ್ನೂ ಎತ್ತಿ ತೋರಿಸುತ್ತವೆ. ಒಂದೊಮ್ಮೆ ಕಾಂಗ್ರೆಸಿಗನಾಗಿದ್ದವನು ಮುಂದೆ, ಪ್ರಸವಾ, ಕಮ್ಯುನಿಸ್ಟ್, ಸ್ವತಂತ್ರ, ಜನಸಂಘವೆಂದು ತಮ್ಮ ಪಕ್ಷ ಬದಲಿಸುತ್ತಿರುವುದಕ್ಕೆ ಈ ಗುಣಗಳೇ ಕಾರಣವೆಂದು ಊಹಿಸಬಹುದು. ಅಧಿಕಾರವೆಂಬ ಗರ ಹೊಡೆದರೆ ಮಾತ್ರ 'ಮಂಗ ಮತ್ತು ಓತಿಕಾಟ' ಆಥವಾ ಮಂಗೋತಿಯೆಂಬ ಹೊಸ ಪ್ರಾಣಿಯ ಕಾರ್ಯಭಾರ ನಡೆಯುತ್ತದೆ. ಪಟ್ಟಂಥಾನು ಪಿಳ್ಳೆಯವರಂತಹ ೭೭ ವರ್ಷದ ಮುದುಕರೂ "ಮಂಗೋತಿ"ಯೆನಿಸಿ ಸಂಜಾತದ ರಾಜ್ಯವಾಲ ಪದವಿಯನ್ನು ಸ್ವೀಕರಿಸಿದರು ಎಂಬಾಗ, ಇನ್ನು ಯಾವ ರಾಜಕಾರಣಿಯನ್ನು ತಾನೇ ನಂಬಬಹುದು? ಮಂಗನೂ ರಾಜಕಾರಣಿಗೆ ಸರಿಯಾದ ಉಪಮೆಯಲ್ಲ; ಓತಿಯಂತೂ ಅಲ್ಲವೇ ಅಲ್ಲ. ನಿಜ ಹೇಳುವ

(ಇನೇ ಸುಟ ನೋಡಿರಿ)

ಅತ್ಯುತ್ತಮ ಟಾನಿಕ್

ನಿಮ್ಮ ದೇಹ — ಮನಸ್ಸುಗಳಿಗೆ
ಆರೋಗ್ಯವನ್ನೂ ಬಲವನ್ನೂ, ಸಪಚೈತನ್ಯವನ್ನೂ
ತಂದು ಕೊಡಬಲ್ಲ ವಿಕಮಾತ್ರ ಟಾನಿಕ್

ಉಳಿತಾಯ

ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಚೀನಾದ ಆಕ್ರಮಣ ಬಲವಾಗುತ್ತಿದೆ

ಆಕ್ರಮಣ ತೆಗೆಯದೆ ಸಂಧಾನ ಕಾರ್ಯವಿಲ್ಲ
ಭಾರತವು ತಳೆದ ದೃಢ ನಿಲುಮೆ

ಚೀನಾ ಮತ್ತು ಭಾರತದ ಗಡಿಯಲ್ಲಿ ಗುಂಡಿನ ಚಕಮಕಿಯನ್ನು ಎಬ್ಬಿಸುತ್ತಿರುವ ಚೀನಾ ತನ್ನ ಆಕ್ರಮಣ ವಾದವನ್ನು ಬಿಟ್ಟುಕೊಡಲು ಸಿದ್ಧವಿಲ್ಲವೆಂದು ಕಾರ್ಯರೂಪದಲ್ಲಿ ತೋರಿಸುತ್ತ ಬರುತ್ತಿರುವುದಾದರೂ ಸೈದ್ಧಾಂತಿಕವಾಗಿ ಭಾರತದೊಡನೆ ಒಡಂಬಡಿಕೆಯನ್ನು ಸಾಧಿಸುವ ಹುಚ್ಚು ಪ್ರಯತ್ನವನ್ನು ಮಾಡುತ್ತಿದೆ ಈಗಾಗಲೇ ಭಾರತದ ಎಲ್ಲೆಯನ್ನು ವಿಾರಿ ನೂರಾರು ಮೈಲು ಒಳ ಬಂದಿರುವ ಚೀನವು ಎರಡೂ ದೇಶಗಳ ಸೈನ್ಯಗಳು ತಮ್ಮ ತಮ್ಮ ಇಂದಿರುವ ಸ್ಥಾನದಿಂದ ೨೦ ಕಿಲೋ ವಿಾಟರುಗಳಷ್ಟು ಹಿಂದೆ ಸರಿಯಬೇಕೆಂದೂ ಆ ಬಳಿಕ ಉಭಯ ದೇಶಗಳ ಗಡಿಯನ್ನು ನಿರ್ಧರಿಸಲು ಎರಡೂ ಕಡೆಯ ಪ್ರತಿನಿಧಿಗಳೂ ಸಭೆ ಸೇರಬೇಕೆಂದೂ ಒಂದು ಪತ್ರವನ್ನು ಕಳಿಸಿದೆ ಎರಡು ಸರಕಾರಗಳ ಪ್ರತಿನಿಧಿಗಳು ಅಕ್ಟೋಬರ್ ೧೫ ರಿಂದ ಪೇಕಿಂಗಿನಲ್ಲಿ,ಆ ಬಳಿಕ ಡಿಲ್ಲಿಯಲ್ಲಿ ಸಂಧಾನದ ಮಾತುಕತೆ ನಡೆಸ ಬೇಕು ಎಂದೂ ಅದರಲ್ಲಿ ಉಲ್ಲೇಖವಿದೆ.

ಆದರೆ, ಇಲ್ಲಿ ತೋರುವ ಸಂದೇಹ ಪೊಂದೇ. ಚೀನವು ಈ ಸಂಧಾನ ಬಯಸುವ ಪತ್ರವನ್ನು ಕಳಿಸುವುದರೊಡನೆಯೇ ಗಡಿಯಲ್ಲಿ ಗುಂಡಿನ ಮಳೆ ಗರೆಯುವುದಕ್ಕೂ ತೊಡಗಿದುದರ ಅರ್ಥವೇನು? ಬಾಯಲ್ಲಿ ಶರಣಾರ್ಥಿಯೆನ್ನುತ್ತಾ ಕೈಯಲ್ಲಿ ಆಟಂಬಾಂಬು ಹಿಡಿದಿರುವ ವಂಚಕ ಪ್ರವೃತ್ತಿಯೇಕೆ? ಎಂದರೆ, ಮೊದ್ದು ಭಾರತವನ್ನು ಮೋಸಗೊಳಿಸುವುದಕ್ಕೆ ಎಂಬುದು ಕಳ್ಳನೂ ತಿಳಿದಿರ ಬಹುದಾದ ಸತ್ಯ. ಲಡಾಖ ಪ್ರದೇಶದಲ್ಲಿ ತಾನು ಆಕ್ರಮಿಸಿದಷ್ಟು ನೆಲವನ್ನು ತಪ್ಪುಗೆ ಬಿಟ್ಟು ಕೊಟ್ಟರೆ, ನೇಫಾದ ತಮ್ಮ ಬೇಡಿಕೆಯನ್ನು ನಿಲ್ಲಿಸುವನೆಂದ ಚೀನಾ ಅಲ್ಲಿಯೇ ಗುಂಡುಹಾರಿಸಿರುವುದು ತೀರ ಕುತಂತ್ರ. ಆದುದರಿಂದಲೇ ಭಾರತವು ನಿಶ್ಚರ್ತವಾಗಿ ಸೇನೆಯು ಹಿಂದರಿಯಬೇಕು; ಆ ಬಳಿಕ ಮಾತ್ರವೇ ೧೦ ಧಾನಕ್ಕೆ ಸಿದ್ಧತೆಯೆಂದು ತಿಳಿಸಿದೆ.

ಗುಂಡಿನಿಂದ ಚೀನೀಯರು ಕೇಳಿದ ಪ್ರಶ್ನೆಗೆ ಭಾರತೀಯ ಯೋಧರಾದರೂ ಗುಂಡಿನಿಂದಲೇ ಉತ್ತರ ಕೊಟ್ಟರು ನಿಜ. ಇದಕ್ಕಿಂತ ಬೇರೆಯೇನನ್ನೂ ಅವರು ಮಾಡುವಂತಿಲ್ಲ- ಚೀನಾವೀಗ ೪೦ ಕಿಲೋ ವಿಾಟರುಗಳಿಗಿಂತಲೂ ಹೆಚ್ಚು ಮುನ್ನುಗ್ಗಿರುವಾಗ್ಯೂ ತಾನು ಹೇಳುವ ಹಿಂಜರಿಕೆಯ ಮಿತಿಯಿಂದ ಅದಕ್ಕೇನೂ ನಷ್ಟವಿಲ್ಲ. ಬದಲು ತನ್ನ ಜೇಳೆ ಬೇಯಿಸಿಕೊಳ್ಳಲು ಅನುಕೂಲ ಪರಿಸ್ಥಿತಿಯನ್ನೇ ನಿರ್ಮಿಸಿಕೊಂಡಂತಾಗುತ್ತದೆ. ಭಾರತೀಯ ಸೇನೆಯನ್ನು ಅಡಷ್ಟು ದೂರ ಸಿಲ್ಲಿಸಿ ತಮ್ಮ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಹೊಡಿದ ಕುತಂತ್ರವೇ ಇದುಯೆಂದು ಯಾರೊಬ್ಬನಾದರೂ ಹೇಳಬಹುದು. ಆದರೆ, ಒಮ್ಮೆ ಕಲಿತ ಪಾಠವನ್ನು ಇಷ್ಟೊಂದು ತೀವ್ರವಾಗಿ ಮರೆತುಬಿಡುವುದು ಸಾಧ್ಯವಿಲ್ಲ.ಆದುದರಿಂದಲೇ ಭಾರತವು ಸಂಧಾನವನ್ನು ಬಯಸುತ್ತದೆ ನಿಜ. ಆದರೆ, ವಿಧಾಯಕವಾದ ಕಾರ್ಯಯೋಜನೆಯನ್ನು ಮುಂದಿಡಬೇಕು. ಆದು ಹೊರತು ಭಾರತವನ್ನು ಮತ್ತಷ್ಟು ಮಂಚಿಸುವ ಯಾವ ಪಣಿಕೆಯನ್ನೂ ಅದು ಮಾಡಬಾರದಾಗಿತ್ತು.

ಹಿಮಾಲಯ ಪರ್ವತ ತನ್ನ ಪೆಸರಿಗೆ ಯೋಗ್ಯವಾದುದು. ಇನ್ನೇನು, ತಿಂಗಳೊಂದು ಕಳೆಯುತ್ತಲೇ ದುರ್ಗಮ ಹಿಮ ಕಂದರದಲ್ಲಿ ಹಿಮಪಾತವಾಗುವುದು. ಆಗ ಬೇಕೆಂದರೂ ಚೀನಕ್ಕೆ ಮುಂದುವರಿಯುವುದು ಸಾಧ್ಯವಿಲ್ಲದು ಆದುದರಿಂದ ಅದಕ್ಕೆ ಮೊದಲೇ ತನ್ನ ಆಸೆಯನ್ನು ಸಾಧ್ಯವಾದಷ್ಟು ಪೂರೈಸುವ ಆಟಬಲಾಪೆ ಚೀನಾ ತಳೆದಿದ್ದಿರಬಹುದು. ಆದರೆ, ಭಾರತವು ಈಗಾಗಲೇ ಚೀನಾದ ಬಣ್ಣಬಣ್ಣದ ಮಾತುಗಳಿಂದ ಸಾಕಷ್ಟು ಬುದ್ಧಿ ಕಲಿದೆ. ಆದುದರಿಂದಲೇ ಇಂತಹ ಮಾತುಗಳಿಗೆ ಅದು ಸೊಪ್ಪು ಹಾಕುವುದಿಲ್ಲ. ಭಾರತ-ಚೀನಾಗಡಿಯೂದ ಪ್ಯೆಕಪೆಯೋನರೇಪೆಯು ಅಂತಾರಾಷ್ಟ್ರೀಯ ರೇಖೆಯೆನಿಸಿದೆ. ಅದನ್ನು ದಾಟಿ ಚೀನವು ಹಿಂದೆ ಹೋದರೆ ಮಾತ್ರ ಮುಂದಿನ ಹೆಜ್ಜೆ-ಸಂಧಾನದ ಮಾತುಕತೆ.ಯಿಡಲು ಆಯಿ ಸಿದ್ಧವಿದೆ. ಅಧಿಕಾರಿಗಳು ನಡೆಸುವ ಮಾತುಕತೆಯೊದರೂ ಫಲಪ್ರದವಾದೀತೆಂಬ ಆಸೆಯಿಲ್ಲ. ಏಕೆಂದರೆ, ಹಿಂದೊಮ್ಮೆ ಇಂತಹ ಸೀಮಾನಿರ್ಣಾಯಕ ಸಮಿತಿಯ ಸಭೆಗಳೆಲ್ಲವೂ ಭಿನ್ನಾಭಿಪ್ರಾಯದಲ್ಲಿಯೇ ಕೊನೆಗೊಂಡುದನ್ನು ನಾವು ಮರೆತಿಲ್ಲ.

ಆದುದರಿಂದ ಚೀನವು ವಾಸ್ತವಿಕವಾಗಿ ಸಂಧಾನ ಬಯಸುವುದಾದರೆ, ತನ್ನ ದ್ವಿಮುಖ ನೀತಿಯನ್ನು ಬಿಟ್ಟುಕೊಡಬೇಕಾಗುವುದು. ಶಾಂತಿಯ ಬಗ್ಗೆ ಕಳಕಳಿ ತೋರಿಸಬೇಕಾಗುವುದು. ಮುಂದಿನ ಚಳಿಗಾಲವು ಯುದ್ಧ ಆಕ್ರಮಣಗಳಿಗೆ ಅವಶ್ಯಕತಯೂರಿಯ ಅವಕಾಶವಾಗಿ ಉಳಿಯದೆ ನೈಜ ಸಂಧಾನದ ಆವಶ್ಯಕತೆಯನ್ನು ತಿಳಿದು ಕೊಳ್ಳುವ ಕಾಲವಾಗಲಿ. ಆದರೆ, ಇದು ಸಾಧ್ಯವೆ?

ಕ್ಷಯರೋಗಿಗಳ ಗೃಹ ಚಿಕಿತ್ಸೆ

ಕ್ಷಯರೋಗಿಗಳು ಕಡ್ಡಾಯವಾಗಿ ಈಗ ಆಸ್ಪತ್ರೆಯಲ್ಲಿ ಇರಬೇಕೆಂದೇನೂ ಇಲ್ಲ.

ಅವರು ಆವರ ಮನೆಗಳಲ್ಲಿಯೇ ಚಿಕಿತ್ಸೆ ಪಡೆಯಬಹುದು. ಮುಂದುವರಿದ ವಸತಿ ಮತ್ತು ಪ್ರತಿಬಂಧಕ ವಿಧಾನಗಳ ಕಾರಣಗಳಿಂದಾಗಿ ಆಸ್ಪತ್ರೆಗಳು ಮತ್ತು ಸೆನಟೋರಿಯಂಗಳಿಗಿಂತ ಕ್ಲಿನಿಕುಗಳೇ ಈಗ ಹೆಚ್ಚಿನ ಮಹತ್ವ ದವುಗಳಾಗಿವೆ.

ಈ ಸೇವಾಕಾರ್ಯಗಳ ಉಪಯುಕ್ತತೆಯನ್ನು ನಮ್ಮ ಜನರ ಮನೆಗಳಿಗೆ ತರಬೇಕಾಗಿದೆ. ಟಿ. ಬಿ. ಮೊಹರು ಮಾರಾಟದ ಚಳವಳವು ಇದಕ್ಕೆ ಸಹಾಯ ಮಾಡುತ್ತದೆ.

ಟಿ. ಬಿ. ಮೊಹರುಗಳನ್ನು
ಬಹು ಸಂಖ್ಯೆಯಲ್ಲಿ ಕೊಂಡುಕೊಳ್ಳಿರಿ.

ಒಂದು ಟಿ. ಬಿ. ಮೊಹರಿನ ಬೆಲೆ ಹತ್ತು ನಯೇಪೈಸೆ ಮಾತ್ರ.

ಆವು ದೊರಕುವ ಸ್ಥಳಗಳು:
ನಿಮ್ಮ ರಾಜ್ಯದ ಟಿ.ಬಿ. ಎಸೋಸಿಯೇಶನ್ ಮತ್ತು ಅದರ ಬೇರೆ ಬೇರೆ ವಿಜನ್ಸಿಗಳು.

ಭಾರತದಲ್ಲಿ ಹದಿಮೂರನೆ ಟಿ.ಬಿ. ಮುದ್ರೆ ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯವರಿಂದ ಪ್ರಚೋದಿತವಾದದ್ದು.)

ಈ ಸ್ಥಳದ ಉದಾರ ದಾತೃಗಳು:
Willcox Buckwell Co. Private Ltd., New Delhi.

ಚಂದಾಹಣ ಬಾಕಿ ಇರುವವರು ಅದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ವಿತಾಳ, ಎಂ.ಬಿ.ಬಿ.ಎಸ್)
ಇವರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪	ಉಡುಪಿ ೪—೧೦—೧೯೬೨	ವಾರ ೫೪

ಶಾಂತಿನಿಯೋಗ

ಹಿರಿಯ ರಾಜಕೀಯ ಮುತ್ಸದ್ದಿಗಳ ಸಾಲಿನಲ್ಲಿ ಗಣಿಸಲ್ಪಡುವ ಶ್ರೀ ರಾಜಗೋಪಾಲಾಚಾರಿಯವರು ಗಾಂಧೀ ಶಾಂತಿ ಪ್ರತಿಷ್ಠಾನದ ಪ್ರತಿನಿಧಿಯಾಗಿ ತನ್ನ ಸಹ ಚರರಾದ ಶ್ರೀ ರಂ. ರಾ ದಿವಾಕರ ಮತ್ತು ಶ್ರೀ ಬಿ. ಶಿವರಾಯರೊಂದಿಗೆ ಅಮೆರಿಕೆಯ ಯಾತ್ರೆಮಾಡಿದರು. ಅಲ್ಲಿ ಇವರು ಅಧ್ಯಕ್ಷ ಕೆನೆಡಿಯವರನ್ನು ಭೇಟ್ಟಿಮಾಡಿ ಅಣ್ವಸ್ತ್ರ ಪ್ರತಿಬಂಧದ ಆವಶ್ಯಕತೆಯನ್ನು ಪ್ರತಿಬಿಂಬಿಸಿ ಈ ಸಂಬಂಧದಲ್ಲಿ ಒಂದು ಒಡಂಬಡಿಕೆಯು ಅತಿ ತ್ವರೆಯಲ್ಲಿ ಆಗಬೇಕೆಂಬುದನ್ನೂ ಒಂದು ವೇಳೆ ಹೀಗೆ ಆಗುವುದು ಅಸಾಧ್ಯವೆನಿಸಿದಲ್ಲಿ ಏಕ ಪಕ್ಷೀಯವಾಗಿ ಅಮೆರಿಕೆಯು ಎಲ್ಲ ಅಣ್ವಸ್ತ್ರ ಪ್ರಯೋಗಗಳನ್ನು ನಿಲ್ಲಿಸಲು ಮುಂದೆ ಬರಬೇಕೆಂದೂ ವಿನಂತಿಸಿದರು. ಈ ಭಾರತೀಯ ಪ್ರತಿನಿಧಿಗಳೊಡನೆ ವ್ಯವಹರಿಸಲು ಅರ್ಧ ತಾಸು ಕಾಲಾವಧಿಯನ್ನು ಮೊದಲು ನಿಯಮಿಸಿಕೊಂಡಿದ್ದರೂ ಮಾತುಕತೆಯ ಪ್ರಭಾವದಿಂದಾಗಿ ಅದು ಒಂದೂಕಾಲು ತಾಸುಗಳಗೇರಿತು ಎಂಬುದರಿಂದ ಕೆನ್ನೆಡಿಯವರು ಪ್ರತಿನಿಧಿ ಮಂಡಳವನ್ನು ಹೇಗೆ ಕಂಡರು ಎಂಬುದು ಸುಸ್ಪಷ್ಟವಾಗುತ್ತದೆ. ಮಾಜಿ ಗವರ್ನರ ಜನರಲ್ ರಾಜಾಜಿಯವರು ತಮ್ಮ ಜೀವಮಾನದಲ್ಲಿಯೇ ಮೊತ್ತಮೊದಲ ಬಾರಿಗೆ ವಿದೇಶ ಸಂಚಾರವನ್ನು ಕೈಗೊಂಡದ್ದು ಶಾಂತಿ ಸ್ಥಾಪನೆಯ ಉದ್ದೇಶದಿಂದವೆಂಬುದೂ ಕೆನ್ನೆಡಿಯವರ ಮನಸ್ಸಿನ ಮೇಲೆ ಪರಿಣಾಮ ಬೀರಿರಬೇಕು.

ಜಗತ್ತಿನ ಅಗ್ರಗಣ್ಯ ರಾಷ್ಟ್ರವಾದ ಅಮೆರಿಕೆಯು ಅದಾವ ರಾಜಕಾರಣ ಉದ್ದೇಶದಿಂದಲೇ ಅಣ್ವಸ್ತ್ರ ಪ್ರಯೋಗವನ್ನು ಪ್ರಾರಂಭಿಸಿರಲಿ, ರಾಜಾಜಿಯವರು ಹಿಂದಿನಿಂದಲೂ ಇದನ್ನು ವಿರೋಧಿಸುತ್ತ ಬಂದವರಲ್ಲಿ ಒಬ್ಬರು. ಯಾವುದೋ ಕಾರಣದಿಂದ ವಾತಾವರಣವನ್ನು ವಿಷಮಯವನ್ನಾಗಿ ಮಾಡಿ ಜಗನ್ನಾಗರಿಕರಿಗೆ ವಿಷ ಸೇವನೆ ಮಾಡಿಸುವುದು ಅಕ್ಷಮ್ಯ ಅಪರಾಧವೆಂದವರು ಹೇಳುತ್ತಾರೆ; ಇದನ್ನು ಶಾಂತಿ ಸಾಧಕರೆಲ್ಲರೂ ಅನುಮೋದಿಸುತ್ತಾರೆ. ಅಮೆರಿಕೆಯಾದರೂ ರಶ್ಯದ ಮುಖನೋಡದೆ, ತಾನು ತನ್ನ ನೈತಿಕ ಬಲವನ್ನು ಜಗತ್ತಿಗೆ ತೋರಿಸಿಕೊಡುವುದಕ್ಕಾಗಿ ಏಕ ಪಕ್ಷೀಯವಾಗಿ ಯಾದರೂ ಇಂತಹ ದಿಟ್ಟತನದ ಹೆಜ್ಜೆಯನ್ನಿಡಬೇಕು ಎಂದವರು ಹಿಂದೆಯೂ ಕರೆಕೊಟ್ಟಿದ್ದರು; ಇಂದಿಗೂ ಕೊಡುತ್ತಿದ್ದಾರೆ. ಕೆನ್ನೆಡಿಯವರ ಮುಂದೆ ಅವರು ಬಾರಿಸಿದ್ದುದಾದರೂ ಈ ವಿಷಾ ನಾದವನ್ನೇ. ಅಮೆರಿಕೆಯು ಹೀಗೆಮಾಡಿತೆಂದರೆ, ಮುಂದೆ ರಶ್ಯದೊಡನೆ ಪ್ರಯೋಗ ಪ್ರತಿಬಂಧ ಒಡಂಬಡಿಕೆಯನ್ನು ಸಾಧಿಸಲು ಅನುಕೂಲವುಂಟಾಗುವುದು ಎಂದವರು ಹೇಳುತ್ತಾರೆ. ಜಗತ್ತಿನ ಕೇಳಿಕೆಯೆನಿಸಿದ ಅಣ್ವಸ್ತ್ರ ಪ್ರಯೋಗ ಪ್ರತಿಬಂಧವನ್ನು ಅಮೆರಿಕೆಯು ಮಾಡಿದರೆ, ಆದಕ್ಕೆ ರಾಜತಂತ್ರ ವ್ಯವಹಾರದಲ್ಲಿ ಬೆಂಬಲವು ದೊರೆಯುವುದು; ಆಗ ರಶ್ಯನೂ ಪ್ರತಿಬಂಧಕ್ಕೆ ಮುಂದೆ ಬರುವ ಸಂಭವವಿದೆ. ಹೀಗೆ, ಜಗತ್ತನ್ನು ಆವರಿಸಿರುವ ಕಳವಳವನ್ನು ದೂರ ಮಾಡುವಲ್ಲಿ ಅಮೆರಿಕೆಯು ಮೊದಲ ಹೆಜ್ಜೆಯಿಟ್ಟು ಉಳಿದವರಿಗೆ ಮಾರ್ಗದರ್ಶನ ಮಾಡಬೇಕು ಎಂದು ರಾಜಾಜಿ ಕೇಳಿಕೊಂಡಿದ್ದಾರೆ. ಇಷ್ಟು ಮಾತ್ರವಲ್ಲದೆ, ಎಲ್ಲ ರಾಷ್ಟ್ರಗಳೂ ವಾತಾವರಣದಲ್ಲಿ ಅಣ್ವಸ್ತ್ರ ಪ್ರಯೋಗಗಳನ್ನು ಪ್ರತಿಬಂಧಿಸಬೇಕೆಂದು ಕರಿಕೊಡುವ ಗೊತ್ತುವಳಿಯನ್ನು ಸಂಯುಕ್ತ ರಾಷ್ಟ್ರ ಸಂಘವು ಸ್ವೀಕರಿಸಬೇಕೆಂದೂ ಇಂತಹ ಗೊತ್ತುವಳಿಗೆ ತನ್ನ ಬೆಂಬಲವನ್ನು ಅಮೆರಿಕೆಯು ನೀಡಬೇಕೆಂದೂ ಅವರು ವಿನಂತಿಸಿಕೊಂಡಿದ್ದಾರೆ.

ಭಾರತೀಯ ನಿಯೋಗದವರು ಶಾಂತಿ ಸಾಧನೆಯ ಸದುದ್ದೇಶದಿಂದ ಪ್ರೇರಿತರಾಗಿ ಬಹುದೂರದ ಪ್ರವಾಸವನ್ನು ಕೈಗೊಂಡುದನ್ನು ಕಂಡು ಕೆನೆಡಿಯವರು ಮೆಚ್ಚುಗೆಯನ್ನು ಸೂಚಿಸಿದರೆಂದೂ ಶಾಂತಿ ಸ್ಥಾಪನೆಯ ಉದ್ದೇಶದಿಂದ ಅಮೆರಿಕೆ ಮತ್ತು ಭಾರತಗಳ ಜನತೆಯು ಒಂದಾಗಿ ನಡೆದಿದೆಯೆಂದರೆಂದೂ ವರದಿಯಾಗಿದೆ. ಏಕ ಪಕ್ಷೀಯವಾಗಿ ಅಮೆರಿಕೆಯು ಮುಂದುವರಿದರೆ, ಅದರಿಂದ ನೈತಿಕ ಬಲವು ಹೆಚ್ಚುವುದು ನಿಜವಾದರೂ ನಿರ್ದಿಷ್ಟ ಅವಧಿಯ ವರೆಗೆ ಅಣ್ವಸ್ತ್ರ ಪ್ರಯೋಗ ಪ್ರತಿಬಂಧದ ಕುರಿತಾದ ಈ ಮೊಲಿನ ಒಡಂಬಡಿಕೆಗಳನ್ನು ರಶ್ಯವು ಉಲ್ಲಂಘಿಸಿ ಅಮೆರಿಕೆಯನ್ನು ತೊಂದರೆಗೆ ಗುರಿಮಾಡಿದೆಯೆಂದೂ ಅವರು ಉತ್ತರಿಸಿದರು. ವಾತಾವರಣ ನುತ್ತು ಸಾಗರಗಳಲ್ಲಿ ಪ್ರಯೋಗ ಸ್ಪರ್ಧೆ ಮಾಡದಂತೆ ಒಡಂಬಡಿಕೆಯಾಗುವುದು ಅವಶ್ಯ; ಇದರಿಂದ ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಕಡೆಗಟ್ಟುವಲ್ಲಿ ಗಣನೀಯ ಪ್ರಗತಿ ಸಾಧಿಸಿದಂತಾಗುವುದು ಎಂಬುದನ್ನು ಅವರು ಒಪ್ಪಿದರು. ಅಂತೂ ಭಾರತೀಯ ಪ್ರತಿನಿಧಿಗಳೊಡನೆ ಈ ವಿಷಯದಲ್ಲಿ ತಾನು ಸಂಬಂಧವಿರಿಸಿಕೊಂಡಿರುವೆನೆಂಬ ಆತ್ಮತೃಪ್ತಿ ಕೆನ್ನೆಡಿಯವರಿಂದ ನಿಯೋಗವು ಯಾವ ಸ್ವರೂಪದ ಭರವಸೆಯನ್ನು ಪಡೆಯಲಿಲ್ಲವಾದರೂ, ಅಮೆರಿಕನ್ ಜಿಧ್ಯಕ್ಷರ ಮನಸ್ಸಿನಲ್ಲಿ ಈ ವಿಷಯದಲ್ಲಿ ತುಂಬ ಕಳಕಳಿ ಹುಟ್ಟಿದೆಯೆಂಬುದು ಸ್ಪಷ್ಟವಾಗಿದೆ.

ಇದೇ ಮೂದಲಯಲ್ಲಿ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ಯು. ಎನ್. ಧೇಬರ ಮತ್ತು ಶ್ರೀ ರಾಮಚಂದ್ರನ್‌ರವರ ನಿಯೋಗವು ರಶ್ಯನ್ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರನ್ನೂ ಕಾಣುತ್ತಲಿದೆ. ಅಣ್ವಸ್ತ್ರ ಪ್ರಯೋಗಗಳಿಂದ ಜಗತ್ತಿಗಾದ ಗಾಬರಿಯನ್ನು ಕ್ರುಶ್ಚೇವರಿಗೆ ವಿಶದಪಡಿಸಿ, ಅದರಿಂದ ಪ್ರಯೋಗ ಪ್ರತಿಬಂಧವು ಸಾಧ್ಯವಾಗುವಂತೆ ಮಾಡುವ ಉದ್ದೇಶವು ಈ ನಿಯೋಗದ್ದಿರುತ್ತದೆ. ಶ್ರೀ ರಾಜಾಜಿ ನಿಯೋಗವು ಅಮೆರಿಕೆಯಿಂದ ಮರಳುವಾಗ, ಲಂಡನ್ ಮತ್ತು ಪೇರಿಸ್ ಗಳನ್ನೂ ಸಂದರ್ಶಿಸಿ, ಅಲ್ಲಿಯೂ ಈ ವಿಷಯವನ್ನು ಪ್ರಸ್ತಾಪಿಸುವುದು. ಹೀಗೆ ಚತುರ್ಮಹಾರಾಷ್ಟ್ರಗಳ ಅಗ್ರನಾಯಕರಿಗೆ ಅಣ್ವಸ್ತ್ರಗಳ ಉಪಟಳವನ್ನು ತಿಳಿಸಿ ಹೇಳಿ ಅವರು ಜಗಶ್ಯಾಂತಿಯ ಸ್ಥಾಪನೆಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸುವಂತೆ ಪ್ರೇರೇಪಣೆ ನೀಡುವ ಕೆಲಸವನ್ನು ಮಾಡುವುದು ಭಾರತೀಯ ಸಂಸ್ಕೃತಿಗೆ ಯುಕ್ತವಾಗಿದೆ; ಅದರ ಫಲ ನೇನೆಂಬುದನ್ನು ಮತ್ತೆ ಮುಂದೆ ನೋಡಬೇಕಾಗಿದೆ.

ಕಾರಂತರ ಷಷ್ಟ್ಯಬ್ದಿ



ಕನ್ನಡದ ಉದ್ಯಾನ ಸಾಹಿತಿಗಳೆಂದು ಹೆಸರು ಪಡೆದ ಕೋಟ ಶಿವರಾಮ ಕಾರಂತರ ಷಷ್ಟ್ಯಬ್ದಿ ಪೂರ್ತಿಯು ಸವಿೂಪಗತ್ತಿರುತ್ತಿದೆ. ದಕ್ಷಿಣ ಕನ್ನಡದ ಸುವಿಖ್ಯಾತ ಮನೆತನಕ್ಕೆ ಸೇರಿದ ಶ್ರೀ ಕಾರಂತರು ಸಾಹಿತ್ಯ ಕ್ಷೇತ್ರದಲ್ಲಿ ನೂತ್ರ ಸಂಚರಿಸಿದವರಲ್ಲ. ಆಡು ತಿನ್ನದ ಸೋಗೆಯಿಲ್ಲ; ಕಾರಂತರು ಸುಳಿಯದ ಕ್ಷೇತ್ರವಿಲ್ಲವೆಂದರೂ ತಪ್ಪಲ್ಲ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿಯೂ, ಮುಂದೆ ರಾಜಕಾರಣದಲ್ಲಿಯೂ ಅವರು ಭಾಗವಹಿಸಿದ್ದರು. ನಾಟಕ, ಚಲಚ್ಚಿತ್ರ, ನೃತ್ಯಗಳಲ್ಲಿಯೂ ಇವರು ಕೈ ಹರಡಿಸಿದರು. ಸಾಹಿತ್ಯ ಸಾಗರದ ಹೆಂಸನೆಂಬ ಯಶಸ್ಸು ಗಳಿಸಿದರು; ಇತ್ತೀಚೆಗೆ ಸಂಶೋಧನಾ ಕಾರ್ಯದಲ್ಲಿಯೂ ತೊಡಗಿದ್ದಾರೆ. ದಕ್ಷಿಣ ಕನ್ನಡದ ಜಾನಪದ ನೃತ್ಯಗಳ ಸಾಲಿನಲ್ಲಿ ಸೇರುವ ಯಕ್ಷಗಾನದಲ್ಲಿ ಹೊಸ ಹೊಸ ಪ್ರಯೋಗಗಳಿಗೆ ಎಡೆಮಾಡಿ ಕೊಟ್ಟು ಅದನ್ನು ಸರ್ವ ಜನಾದರಣೀಯವಾಗುವಂತೆ ಮಾಡಿದ್ದೇ ಕೆಂದಿವರು ಪ್ರಯತ್ನಿಸುತಿದ್ದಾರೆ. ಹೊಸ ಹೊಸ ಪ್ರಯೋಗಗಳೆಂದರೆ ಕಾರಂತರಿಗೆ ಮೆಚ್ಚು. ಅವರ ಕಾದಂಬರಿ, ನಾಟಕ—ಪ್ರತಿಕೃತಿಯೂ ಒಂದಲ್ಲ ಒಂದು ಹೊಸ ಪ್ರಯೋಗದ ದಾರಿಯಲ್ಲಿ ತುಳಿದಿದೆ. ತನ್ನ ಕೃತಿಗಳಿಂದ ಕಾರಂತರು ಪಡೆಯ ಬೇಕಾದಷ್ಟು ಸಂಪತ್ತು ಗಳಿಸದೆ ಹೋದರೂ ಇಂದು ಅವರ ಕೀರ್ತಿ ದಿಲ್ಲಿಯಂ ವರೆಗೂ ಹರಡಿದೆ. ಕನ್ನಡದ ಸತ್ ಪುತ್ರರಲ್ಲಿ ಒಬ್ಬರಾದ ಇವರು ಸಾಹಿತ್ಯ ನಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಇವರ ಗೀತ ನಾಟಕಗಳು ತುಳಿದ ದಾರಿಯೇ ಬೇರೆ. ಪ್ರಕೃತಿಯನ್ನು ವಿಕೃತಿಗೊಳಿಸದೆ ಚಿತ್ರಿಸುವ ಅವೋಘಕಲೆ ಕಾರಂತರಿಗೆ ಕರಗತವಾಗಿದೆ. ನಿಷ್ಕುರವಾದಿಗಳೂ ಸ್ಪಷ್ಟವಾದಿಗಳೂ ಆದ ಕಾರಂತರೆಂದರೆ, ಕನ್ನಡಕ್ಕೊಂದು ಭೂಷಣ; ಕನ್ನಡದ ಅಪ್ರತಿಮ ವಿಶ್ವಕೋಶವೆಂದರೂ ತಪ್ಪಲ್ಲ. ಅವರ "ಬಾಲಪ್ರಪಂಚ, ಈ ಜಗತ್ತು" ಮೊದಲಾದ ಕೃತಿಗಳೇ ಇದಕ್ಕೆ ಸಾಕ್ಷಿ. ವಿಶ್ವವಿದ್ಯಾಲಯಗಳು ಮಾಡಬೇಕಾದ ಇಂತಹ ಬೃಹತ್ಕಾರ್ಯವನ್ನು ಮಾಡಲು ಮುಂದೆ ಬರುವ ವ್ಯಕ್ತಿಯೊಬ್ಬ ಕನ್ನಡದಲ್ಲಿದ್ದಾನೆಂಬುದು ಕನ್ನಡಿಗರಿಗೆ ಅಭಿಮಾನ.

ಶ್ರೀ ಕಾರಂತರ ಷಷ್ಟ್ಯಬ್ದಿ ಪೂರ್ತಿಯ ಆಚರಣೆಯು ಅಲ್ಲಲ್ಲಿ ನೆರವೇರುತ್ತಿದೆ. ಉಡುಪಿ ನಗರದಲ್ಲಿಯೂ ಇದೇ ತಾ. ೧೦ರಂದು ಅದನ್ನು ಆಚರಿಸಲಾಗುವುದು. ಆಂದು ಶ್ರೀ ಕಾರಂತರಿಗೆ ನಿಧಿಯೊಂದನ್ನು ಅರ್ಪಿಸಲಾಗುವುದೆಂದೂ ಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಲಾಗುವುದೆಂದೂ ಕಾರಂತರ ನಾಟಕಗಳ ಪ್ರದರ್ಶನ—ನಡೆಯುವುದೆಂದೂ ತಿಳಿಯುತ್ತದೆ. ಈ ಕಾರ್ಯಕ್ರಮಗಳು ಉಳಿದ ಕನ್ನಡಿಗರಿಗೆ ಪ್ರೇರಕವಾಗಬೇಕು. ಕನ್ನಡಿಗರು ಕಾರಂತರಿಂದ ಪಡೆಯ ಬಹುದಾದದ್ದು ಇನ್ನೂ ಅನೇಕ ವಿವೆ; ಅವೆಲ್ಲವನ್ನೂ ಪಡೆಯಲು ಕಾರಂತರ ಸಹಾಯಕ್ಕೆ ನಿಲ್ಲುವುದು ಆತ್ಯವಶ್ಯವೆನಿಸುತ್ತದೆ.

— —

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ]

ಮೈಸೂರು ಭೂಸುಧಾರಣೆಗಳ ಶಾಸನ 1961

ಬರೆದು ಪ್ರಕಟಿಸಿದವರು: ಶ್ರೀ ಕೆ ಎಸ್. ಅಶ್ವತ್ಥ ಬಿ.ಎ ಬಿ.ಎಲ್. ಎಡ್ವೊಕೇಟ್ ಮಂಗಳೂರು-3. ಬೆಲೆ ರೂ. 4 —0)

ಸಮಗ್ರ ಮೈಸೂರು ರಾಜ್ಯಕ್ಕೂ ಏಕರೀತಿಯಾಗಿ ಅನ್ವಯಿಸುವಂತೆ ಅಧಿನಿಯಮಿತ ಗೊಳಿಸಲಾದ ಮೈಸೂರು ಭೂಸುಧಾರಣೆಗಳ ಶಾಸನವು ಮೈಸೂರು ವಿಧಾನ ಮಂಡಳದ ಉಭಯ ಸದನಗಳಿಂದಲೂ ಅಂಗೀಕೃತವಾಗಿ ರಾಷ್ಟ್ರಾಧ್ಯಕ್ಷರಿಂದಲೂ ಮನ್ನಣೆ ಪಡೆದು 15—3—62 ರಂದು ಮೈಸೂರು ಗಜೆಟೆನಲ್ಲಿ ಪ್ರಕಟವಾಗಿರುತ್ತದೆ.

ಶಾಸನವು ಗಜೆಟೆನಲ್ಲಿ ಪ್ರಕಟವಾದ ಸ್ವಲ್ಪ ಸಮಯದೊಳಗಾಗಿಯೇ ಸಲುವಳಿಯಲ್ಲಿ ಬರುವುದೆಂದು ನಿರೀಕ್ಷಿಸಲಾಗಿದ್ದರೂ ಕೇರಳ ಭೂಸ್ವತ್ತಿನ ಸಂಬಂಧಗಳ 1960ನೇ ಇಸವಿಯ ಅಧಿನಿಯಮದ ಮೇರೆಗಿನ ರೈತವಾರಿ ಜಮೀನುಗಳಿಗೆ ಸಂಬಂಧಿಸಿದ ಉಪಬಂಧಗಳ ವಿರುದ್ಧವಾಗಿ ಸುಪ್ರೀಂಕೋರ್ಟಿನಪರಿತ್ತ ತೀರ್ಮಾನದಿಂದಾಗಿ ಈ ನಾನಿನದ ಕಾರ್ಯಕ್ಷೇತ್ರಕ್ಕೊಳಪಟ್ಟಿರುವ ಮೈಸೂರು ರಾಜ್ಯದ ರೈತವಾರಿ ಜಮೀನುಗಳ ಮೇಲುಂಟಾಗ ಬಹುದಾದ ಘಟನಾತ್ಮಕ ವಿಧಿಪ್ರಸ್ತೆಯ ತೊಡಕುಗಳ ನಿವಾರಣೆಯ ಸಲುವಾಗಿ ಭಾರತದ ಸಂವಿಧಾನದಲ್ಲಿ ಯುಕ್ತ ತಿದ್ದುಪಡಿಗಳನ್ನು ಮಾಡಲು ಉದ್ದೇಶಪಟ್ಟು ದರಿಂದ ಶಾಸನವು ಜಾರಿಗೆ ಬರುವುದನ್ನು ಮುಂದುವರಿಸ

ವಾರ್ತಾ ವೇದಿಕೆ

ಮುರಾರ್ಜಿ ದೇಸಾಯಿ

'ನಿನ್ನ ಶತ್ರುವನ್ನಾದರೂ ಪ್ರೀತಿಸು' ಎಂಬುದೊಂದು ವಾಕ್ಯ ಬೈಬಲ್ಲಿನಲ್ಲಿದೆಯೆಂದರೂ ವೇದಗಳಲ್ಲಿಯೂ ಇಂತಹ ಸದಭಿಪ್ರಾಯ ದೊರೆಯುತ್ತದೆ- ಭಾರತೀಯ ಪಂಸ್ಕೃತಿಯ ಮಖ್ಯ ವೈಲಕ್ಷಣ್ಯಗಳಲ್ಲಿ ಇದೂ ಒಂದು ಎಂದರೆ ತಪ್ಪಲ್ಲ. ಪ್ರಧಾನಿ ನೆಹರುರವರ ಪಂಚ ಶೀಲಗಳ ತಳಹದಿಯಲ್ಲಿರುವ ವಿದೇಶ ನೀತಿಯೂದರೂ ಇಂತಹ ಆದರ್ಶವನ್ನು ಬಿಟ್ಟುಕೊಟ್ಟಲ್ಲ. ಹಿಂದೊಮ್ಮೆ ಭಾಯಿ ಭಾನಿಯೆನಿಸಿದ್ದಾಗ, ಸಂ ರಾ. ಸಂಘದಲ್ಲಿ ಜನತಾಚೀನಕ್ಕೆ ಸ್ಥಾತಿನಿಧ್ಯ ನೀಡಬೇಕೆಂದು ಭಾರತವು ನಿಲುಮೆ ತಳೆದಿತ್ತು. ಇಂದು ಚೀನವು ಭಾರತದ ಮೇಲೆ ಆಕ್ರಮಣ ಮಾಡಿರುವುದಾದರೂ ಭಾರತೀಯರ ಮೇಲೆ ಪದೇ ಪದೇ ಗುಂಡು ಹಾರಿಸುತ್ತಿರುವುದಾದರೂ ಭಾರತವು ಮಾತ್ರ ತನ್ನ ನಿಲುಮೆಯನ್ನು ಬದಲಾಯಿಸಲಿಲ್ಲ. ಉಪ್ರಧಾಮಂತ್ರಿ ಮುರಾರ್ಜಿ ದೇಸಾಯಿಯವರು ಹೇಳುವಂತೆ ಈ ನಿಲುಮೆಯನ್ನು ಬದಲಿಸುವ ಅಗತ್ಯವೂ ಇಂದು ತಲೆದೋರಿಲ್ಲ

ಪಟ್ಟಂಧಾನು ಪಿಳ್ಳೈ

ಕೇರಳದ ಮುಖ್ಯ ಮಂತ್ರಿಯಾಗಿದ್ದ ಪಟ್ಟಂಧಾನು ಪಿಳ್ಳೈಯವರು ಗುಪ್ತವೆಂಬಂತೆ ಪಂಜಾಬದ ರಾಜ್ಯಪಾಲ ಪದವಿಯನ್ನು ಸ್ವೀಕರಿಸಿರುವುದರಿಂದ ಕೇರಳದಲ್ಲಿ ಮಾತ್ರವಲ್ಲ ಇಡಿಯ ಭಾರತದಲ್ಲಿಯೇ ಪ್ರಸವಾ ಪಕ್ಷದ ಬಂಘಾಬಲವು ಉಡುಗಿದಂತಾಗಿದೆ. ೭೭ ವರ್ಷದ ಧಾನು ಪಿಳ್ಳೈ ಮೂಲತಃ ಕಾಂಗ್ರೆಸಿಗರಾಗಿದ್ದರೂ ಮುಂದೆ ಪ್ರಸವಾ ಎನಿಸಿದರು. ಕೇರಳದಲ್ಲಿನ ರಾಜಕೀಯ ಸಂದಿಗ್ಧತೆಯ ಕಾಲಾವಧಿಯಲ್ಲಿಯೂ ಧೈರ್ಯದಿಂದ ಸರಕಾರವನ್ನು ನಡೆಸಿದ ಪಿಳ್ಳೈಯವರಿದ್ದು ದರಿಂದಲೇ ಪ್ರಸವಾ ಪಕ್ಷ ಆಲ್ಲಿ ಇತ್ತು. ಇಂದು ಅವರನ್ನು ಕಳೆದುಕೊಂಡ ಕೇರಳದ ಪ್ರಸವಾ ತಾಯಿ ಸತ್ತ ಕರುವಿನಂತಾಗಿದೆ ಹಾಗಾಗಿ ಕಾಂಗ್ರೆಸ್ ಕಾರ್ಯದರ್ಶಿ ಕೆ. ಕೆ. ಶಹರ ಮಾತಿನಲ್ಲಿ, ಕೇರಳ ಪ್ರಸವಾ ಪಕ್ಷವು ಕಾಂಗ್ರೆಸ್ಸಿನಲ್ಲಿ ವಿಲೀನಗೊಳ್ಳುವ ಸಾಧ್ಯತೆಯೂ ಇದೆ. ಹೀಗಾದಲ್ಲಿ ಧಾನು ಪಿಳ್ಳೈ ತಾನಾಗಿಯೇ ಪ್ರಸವಾವನ್ನು ಕೇರಳದಿಂದ ಕೊರದೂಡಿದಂತೆಂದು ಹೇಳಬಹುದು.

ಗನೂಲ ನಸ್ಸೇರ

ಆಫ್ರಿಕೆಯಲ್ಲಿರುವ ಭಾರತದ ಪರಮ ಮಿತ್ರರೆಂದರೆ, ಸಂಯುಕ್ತ ಆರಬ ಪ್ರಜಾರಾಜ್ಯದ ಅಧ್ಯಕ್ಷ ಶ್ರೀ ಅಬ್ದುಲ್ ಗನೂಲ್ ನಸ್ಸೇರರು ವಿಶ್ವದ ರಾಜಕೀಯದಲ್ಲಿ ಭಾರತದ ನೀತಿಯನ್ನು ಸರ್ವತ್ರ ಸಮರ್ಥಿಸುತ್ತ ಬಂದವರಿವರು. ಗೋವೆಯ ವಿಮೋಚನಾ ವೇಳೆಯಲ್ಲಿ, ಕಾಶ್ಮೀರದ ತಂಟೆಯಲ್ಲಿ ಮತ್ತೀಗ ಚೀನಾದ ಆಕ್ರಮಣ ವಲ್ಲಿ ಭಾರತ ಬಗ್ಗೆ ಸಹಾನುಭೂತಿ ವ್ಯಕ್ತ ಪಡಿಸಿದ್ದ ಪಡಿಸುತ್ತಿರುವ ನಸ್ಸೇರ ಮತ್ತು ನೆಹರುರವರ ಮೈತ್ರಿಗಾಢತರವಾದ ದು. ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತು ಮುಗಿದ ಬಳಿಕ, ಆಫ್ರಿಕೆಯ ರಾಜ್ಯಗಳಲ್ಲಿ ತಿರುಗಾಡುತ್ತ ಬಂದ ನೆಹರು ನಸ್ಸೇರರನ್ನು ಕಾಣದೆ ಸುರಳಲ್ಲಿ. ದ್ವಿತೀಯ ಬಾಡುಂಗ ಪರಿಷತ್ತನ್ನು ಕರೆಯಬೇಕೆಂಬ ಇಂಡೊನೇಶ್ಯದ ಸುಕರ್ಣರ ಕೇಳಿಕೆಯಿಂದ ಹೆಚ್ಚಿನ ಪ್ರಯೋಜನ ದೊರೆಯದು ಎಂದು ಇಬ್ಬರೂ ನಾಯಕರು ಅಭಿಪ್ರಾಯಕ್ಕೆ ಬಂದಿದ್ದಾರ

ಆಂದೋಲನ ತ್ರಯ

ಇದುವರೆಗಿನ ಗಾಂಧಿ ಜಯಂತಿಯ ಆಚರಣೆಯೊಂದು ರೀತಿಯಾದರೆ, ಈ ವರ್ಷದ ಆಚರಣೆಯು ದಾರಿ ಬೇರೆ ಈ ವರ್ಷ ಒಂದೇ ದಿನದಲ್ಲಿ ಮೂರು ರೀತಿಯ ಹೊಸ ಚಳವಳಗಳು ಪ್ರಾರಂಭವಾದುವು. ಇವುಗಳಲ್ಲಿ ಮೊದಲನೆಯದು ಮತ್ತು ಮುಖ್ಯವಾದುದು ಪ್ರತಿಯೊಬ್ಬ ಪ್ರಾಢ ಭಾರತೀಯನಿಂದಲೂ ರಾಷ್ಟ್ರೀಯ ಐಕ್ಯ ಪ್ರತಿಜ್ಞೆಗೆ ಸಹಿ ಹಾಕಿಸುವುದು. ಎರಡನೆಯದು ರಾಷ್ಟ್ರೀಯ ಸ್ವಚ್ಛತೆ ಮತ್ತು ಕೊನೆಯದಾಗಿ ಪಾದಯಾತ್ರೆ ರಾಜ್ಯ ಸರಕಾರ ಮತ್ತು ಸ್ಥಾನೀಯ ಸಂಸ್ಥೆಗಳ ಮೂಲಕ ಆಚರಿಸಲಾಗುತ್ತಿರುವ ಈ ಆಂದೋಲನತ್ರಯಗಳು ಮುಖ್ಯವಾದು ವೇನೋ ನಿಜ; ಆದರೆ, ಎಷ್ಟರ ಮಟ್ಟಿಗೆ ಸಫಲವಾದಾವೆಂಬುದರ ಬಗ್ಗೆ ಸಂದೇಹ ವ್ಯಕ್ತಪಡಿಸುವವರು ಇದ್ದಾರೆ. ಪ್ರಯತ್ನ ಮಾಡುವುದು ಮಾನವನ ಧರ್ಮವೆಂಬುದರಿಂದ ಇಂತಹ ಸಂದೇಹ ತೀಲತೆಯು ನಿಸ್ಸಾರವೆಂದು ಹೇಳಬೇಕು.

ಅಯೂಬ ಖಾನ

ಪಾಕಿಸ್ತಾನದ ಆಧ್ಯಕ್ಷ ಅಯೂಬ ಖಾನರು ತನ್ನ ಮನೀಪೆಯನ್ನು ಸಾಧಿಸುವ ಮತ್ತು ತನ್ನ ಕಾತಂತ್ರವನ್ನು ಬಹಿರಂಗಪಡಿಸುವ ಸಾಹಸಕ್ಕೆ ಕೈ ಹಾಕಿದರು ಎನ್ನಬೇಕು. ಅಮೆರಿಕೆಯಿಂದ ಇನ್ನೂ ಹೆಚ್ಚಿನ ಸೈನ್ಯ ಸಹಾಯವನ್ನು ಬಯಸುವ ಅಯೂಬ ಖಾನರ ಇಚ್ಛೆ ಫಲಿಸುವುದೋ ಇಲ್ಲವೋ ಎಂಬುದನ್ನು ಮುಂದೆ ನೋಡಬೇಕಷ್ಟೆ, ಆದರೆ, ಸಂ. ರಾ. ಸಂಘದಲ್ಲಿ ಅವರು ಭಾಷಣ ಮಾಡಿದುದು ಮಾತ್ರ ಎಲ್ಲರಿಗೂ ಅಪ್ರಿಯವಾಗಿದೆಯೆಂಬುದು ಸ್ಪಷ್ಟವಿದೆ ಒಂದು ರಾಷ್ಟ್ರದ ಪ್ರಮುಖನು ಗೌರವಸಹಿತವಾಗಿ ಮಾತನಾಡಿಯೂ ಆಕ್ಷೇಪಕ್ಕೂ ಎಡೆಕೊಡಬಾರದು ಎಂಬ ಸಂಪ್ರದಾಯವನ್ನು ಮುರಿದ, ಆಯೂಬ ಖಾನರು ಭಾರತದ ಕಾಶ್ಮೀರ ನೀತಿಯನ್ನು ಎತ್ತಿ ಕೀಕಿಸಿರುವುದರಿಂದಲೇ ಅವರೂ ಟೀಕೆಗೆ ಒಳಗಾದರು ಆಧ್ಯಕ್ಷಸ್ಥಾನದಲ್ಲಿ ಅವರ ವಕ್ತಾರಿಜಸ್ಥರುಲ್ಲಾ ಖಾನರೇ ಇದ್ದುದು ಅವರಿಗೆ ಅನುಕೂಲವಾಯಿತು.

ಬೇಕಾಗಿ ಬಂತೆಂದು ತಿಳಿಯುತ್ತದೆ. ಚಿಚ್ಚೆಂದರೆ ಬರುವ ವರ್ಷದ ಸರ್ವಾರ್ಥದೊಳಗಾಗಿಯೇ ಇದು ಜ್ಯಾರಿಗೆ ಬರಬಹುದಾಗಿದೆ.

ಈ ಪ್ರಗತಿಪರ ಶಾಸನವ ಕನ್ನಡ ಭಾಷಾಂತರವು ಭೂಳ್ವತ್ತಿನಲ್ಲಿ ಹಿತಸಂಬಂಧವುಳ್ಳ ಇಂಗ್ಲಿಷ್ ಭಾಷಾ ಪರಿಜ್ಞಾನವಿಲ್ಲದ ರಾಜ್ಯದ ಬಹುಸಂಖ್ಯಾತ ಜನರು ಈ ಶಾಸನದಿಂದಾಗುವ ತನ್ಮ ಹಕ್ಕು ಭಾದ್ಯತೆಗಳ ವೇಲುಂಟುಗಬಹುದಾದ ಪರಿಣಾಮವನ್ನು ತಾವಾಗಿಯೇ ಓದಿ ತಿಳಿದುಕೊಳ್ಳಲು ಅತ್ಯನುಕೂಲವಾಗಿದೆ. ಈ ಪುಸ್ತಕದಲ್ಲಿ ಶಾಸನವ ಪರಿಚಯ, ಶಾಸನದ ವಿಷಯ, ಶಬ್ದ ಗಳ ನಿಘಂಟು ಎಂಬ ಮೂರು ವಿಭಾಗಗಳಿವೆ, ಪುಸ್ತಕದ ಮುಖ್ಯ ಅಂಗವಾದ ಶಾಸನದ ಕನ್ನಡ ಅನುವಾದವು ಸುಲಭ ಬ್ರಾಹ್ಯವಾಗಿವೆ ಶಾಸನದ ಪರಿಚಯವುಳ್ಳ ಶಾಸನದ ಸವಿವರ ಸಾರಾಂಶವನ್ನೊಳಗೊಂಡಿದ್ದು ಅತ್ಯುಪಯುಕ್ತ ಮಾರ್ಗದರ್ಶಕವಾಗಿದೆ; ಈ ಮೊದಲು ಪಂಚಾಯಿತ ಕಾನೂನನ್ನು ಅನುವಾದಿಸಿರುವ ಶ್ರೀ ಆಳ್ವರ ಸಾಹಸ ಮತ್ತು ಪ್ರಯತ್ನ ಶ್ಲಾಘನೀಯವಿದೆ.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿ ಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟಿರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦
ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒದ್ದೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ

ಭಾರತದ ಗುರುಕುಲ ೦—೬—೦
ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ

ಲತ್ತೆಪಗಡೆ ೦—೬—೦
ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ವೈಶ್ಯಗಳು ಆರಣ್ಯ ಪರ್ವೋಕ್ತವಾದ ಕಿವಿಯಾರ ವದೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦
ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವ ದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿವೃದ್ಧಿಗಾಗಿ ವಿನರವಾದ ಸೂಕ್ತ ಅನುಭವ ಸೂಚಿಯಿದೆ

ವಾಲಿ ಸುಗ್ರೀವ (ಬಹುಮಾನಿತ) ೦—೮—೦
ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ವ ಸಪೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಉಡುಪಿಯಲ್ಲಿ ವಾಮಂಜೆ ಗುರುರಾವ್ & ಸನ್ಸ್ ಇವರಲ್ಲಿ ಸಿಗುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಲ್ಲಲ್ಲಿಯ ಸುದ್ದಿಸಾರ

ಜೀವ ವಿಮಾ ವಿಜಂಟರ ಹರಿಷತ್ತು— ಕಳದ ತಾ. 23ರಂದು ಜೀವ ವಿಮಾ ಕೋರ್ಪರೇಶನ ಕಾರ್ಯಕ್ಷಳ ಯುನಿಟಿನ ವಿಜಂಟರ ಸಭೆ ಹಾಗೂ ತರಬೇತಿ ಶಿಬಿರದ ಉದ್ಘಾಟನೆಯು ಉಡುಪಿ ಶಾಖೆಯ ಬ್ರಾಂಚ್ ಮೆನೇಜರ್ ಶ್ರೀ ಟಿ ಪಿ. ಯಸ್. ನಂಬಿಯೂರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಳ ಅಭಿವೃದ್ಧಿ ಅಧಿಕಾರಿ ಶ್ರೀ ಎ. ಯಸ್. ಕಿದಿಯೂರ್‌ರವರು ಸ್ವಾಗತಭಾಷಣ ಮಾಡಿದರು ಬ್ರಾಂಚ್ ಮೆನೇಜರವರು ವಿಮಾ ವಿಜಂಟರ ತರಬೇತಿ ಶಿಬಿರವನ್ನು ಉದ್ಘಾಟಿಸಿದ ಬಳಿಕ ಡಿವಲಪ್‌ಮೆಂಟ್ ಆಫೀಸರ್ ಶ್ರೀ ಎ. ಎಸ್. ಕಿದಿಯೂರ್‌ರವರು ಕಾರ್ಯಕ್ರಮದಂತೆ ಪ್ರಥಮ ದಿನದ ವಿಚಾರವನ್ನು ವಿವರಿಸಿದರು ಬಳಿಕ ಹೊಸ ವಿಜಂಟ್ ಡಾ| ಕೆ. ಜಿನರಾಜ್ ಮುದ್ಕಣರು ತಾನು ಜೀವವಿಮಾ ವಿಜಂಟನಾಗಿ ಸಲ್ಲಿಸುತ್ತಿರುವ ಸೇವೆಯನ್ನು ವಿವರಿಸಿದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಫೆಲಿಕ್ಸ್ ಮಿನೇಜಸ್‌ರವರು ಧನ್ಯವಾದ ಸಮರ್ಪಣೆಗೈದರು ಪ್ರಾರಂಭದಲ್ಲಿ ಕಳದ 20 ವರ್ಷಗಳಿಂದ ವಿಮಾ ವಿಜಂಟರಾಗಿ ಅಪಾರ ಸೇವೆ ಸಲ್ಲಿಸಿದ ಜನಪ್ರೀತ ಮೂಡಬಿದ್ರೆ ಕೆಶ್ಚಗದ್ದೆ ಶ್ರೀ ಎನ್ ಗೋಪಾಲ ಕಿಡ್ಡರ ಆಕಸ್ಮಿಕ ನಿಧನಕ್ಕಾಗಿ ಸಂತಾಪಸೂಚಕ ಗೌತ್ತಾವಳಿ ಮಾಡಲಾಯಿತು.

ಸರ್ಕಾರದ ಇತ್ತೀಚಿನ ರಿಯೊಯಿತಿಯಿಂದ— ವಾರ್ಷಿಕ ಆದಾಯ 2,400/- ರೂ ಒಳಪಟ್ಟು ಇರುವವರ ಮಕ್ಕಳಿಗೆ ಉಚಿತ ಪ್ರಾಥಮಿಕ ವಿದ್ಯಾಭ್ಯಾಸ ನೀಡಬೇಕೆಂಬ ಸರಕಾರದ ಇತ್ತೀಚಿನ ಆಜ್ಞೆಯಂತೆ ಮೈಸೂರು ನಗರದಲ್ಲಿ 6012 (ಸುಮಾರು ಶೇ. 68ರಷ್ಟು) ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಉಚಿತ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ

ಮೈಸೂರು ನಗರದಲ್ಲಿ ಒಟ್ಟು 30 ಪ್ರಾಥಮಿಕ ಶಾಲೆಗಳಿವೆ. 8899 ವಿದ್ಯಾರ್ಥಿಗಳಿದ್ದಾರೆ. ಈ ಪೈಕಿ 10 ವಿದ್ಯಾರ್ಥಿನಿಯರ ಶಾಲೆಗಳಾಗಿದ್ದು ಅವರ ಸಂಖ್ಯೆ 3,151ರಷ್ಟಿದೆ. ಎರಡು ಶಾಲೆಗಳಲ್ಲಿ ಸಹ ವಿದ್ಯಾಭ್ಯಾಸ ನೀಡಲಾಗುತ್ತಿದೆ.

ಸಂಗೀತ ಕಚೇರಿ— ಕಳದ ತಾ. 28ರಂದು ಉಡುಪಿಯ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಪ್ರಖ್ಯಾತ ಸಂಗೀತಗಾರ ಶ್ರೀ ಭೀಮಸೇನ ಜೋಶಿಯವರ ಸಂಗೀತ ಕಚೇರಿಯೊಂದು ಉಡುಪಿ ಸಂಗೀತ ಸಭೆಯ ನೇತೃತ್ವದಲ್ಲಿ ಡಾ। ಟಿ ಎಮ್ ಎ ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಗೀತ ಸಭೆಯ ಆಧ್ಯಕ್ಷ ಶ್ರೀ ಕೆ. ಕೆ ಪೈಯವರು ಆರಂಭದಲ್ಲಿ ಸ್ವಾಗತ ಭಾಷಣಮಾಡಿ ಸಂಗೀತಗಾರರ ಪರಿಚಯ ಮಾಡಿದರು.

ನವಯುಗ
ಪ್ರಕಟಣೆ

ದಸರಾ ಸಂಬಂಧ ಬರುವ ವಾರದ ಅಂದರೆ ತಾ. 11—10—62ರ ಸಂಚಿಕೆಯನ್ನು ನಿಲ್ಲಿಸಲಾಗಿದೆ. ವಾಚಕರು ಗಮನಿಸಬೇಕಾಗಿ ವಿನಂತಿ.

—ಮೆನೇಜರ್

ಕನ್ನಡ ಪುಸ್ತಕಗಳಿಗೆ—
ವಿಚಾರಿಸಿರಿ
ಕಥೆ ಕಾದಂಬರಿ ಇತ್ಯಾದಿ
ನವಭಾರತ ಪುಸ್ತಕ ಭಂಡಾರ, ಉಡುಪಿ.

ತಿರುವನಂತಪುರದಲ್ಲಿ

ಕಾಂಗ್ರೆಸಿಗರ ಆತ್ಮಶೋಧನೆ

ಕೇರಳದ ತಿರುವನಂತಪುರದಲ್ಲಿ ಸಮಾವೇಶಗೊಂಡ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಪದಾಧಿಕಾರಿಗಳ ಸಮ್ಮೇಳನವು ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ. ಸಂಜೀವಯ್ಯನವರು ಗಸ್ತುಗೆ ಗೇರಿದ ನಂತರ ಆ ಮೊದಲನೆಯದು. ಮೊದಲನೆಯದು. ಸರ್ವ ಸಾಮಾನ್ಯವಾಗಿ ಕ್ರಮಾನುಗತಗಳು ವಿದೇಶದಲ್ಲಿರುವಾಗ, ಅವರ ಅನುಪಸ್ಥಿತಿಯಲ್ಲಿ ಇಂತಹ ಸಮ್ಮೇಳನವು ನಡೆಯುವುದಿಲ್ಲ. ಆದರೆ, ಬಾನೋದರಂ ಸಂಜೀವಯ್ಯನವರು ಈ ಹೆಜ್ಜೆಯನ್ನಿಟ್ಟದ್ದಾರೆ.

ಕಾಂಗ್ರೆಸ್ ಸಂಸ್ಥೆಯು ಉಜ್ವಲ ಪರಂಪರೆಯಿಂದ ಕೂಡಿದೆಯೆಂಬುದು ಪ್ರಶ್ನಾತೀತ. ಆದರೆ, ಅದರ ಕೈಗೆ ಅಧಿಕಾರ ಸೂತ್ರಗಳು ದೊರೆತ ಮೇಲೆ ತನ್ನ ಭವ್ಯವೂ ದಿವ್ಯವೂ ಆದ ಪರಂಪರೆಯನ್ನೆದು ಕಳೆದುಕೊಳ್ಳತ್ತ ಬರುತಿದ್ದು, ನಿಷ್ಕಾಮಂತ ಕಾಂಗ್ರೆಸಿಗರನ್ನು ವಿನಂಚನೆಗೆ ತಳ್ಳಿದೆಯೆಂದರೂ ಅತಿಶಯೋಕ್ತಿಯಲ್ಲ. ಅಧಿಕಾರ ಲಾಲಸೆಯೊಂದು ಜವಿ-ಶಿದಂತಿದ್ದು, ಅದು ಕಾಂಗ್ರೆಸ್ ಸಂಘಟನೆಯಲ್ಲಿ ಕೊಳಕೆ ಹರಿಯುವಂತೆಸಗುತಿದೆಯೆಂದರೂ ತಪ್ಪಲ್ಲ. ಮುಖ್ಯವಾಗಿ, ಒಂದೊಮ್ಮೆ ಭಾರತೀಯರೆಲ್ಲರ ಹೃದಯಗಳಲ್ಲಿ ಯೂ ತನ್ನ ಪ್ರಭಾವವನ್ನು ಬೀರಲು ಶಕ್ತವಾದ ಕಾಂಗ್ರೆಸ್ ಇಂದು ಗಳಿಸಿದ್ದ ವಿಶ್ವಾಸವನ್ನು ದಿನದಿಂದ ದಿನಕ್ಕೆ ಕಳೆದುಕೊಳ್ಳುತ್ತಿದೆಯೆಂಬುದನ್ನೆ ಪಾರ್ವತ್ರಿಕ ಚುನಾವಣೆಗಳು ಮತ್ತು ಮರು ಚುನಾವಣೆಗಳ ಫಲಿತಾಂಶವೇ ಜ್ವಲಂತ ಸಾಕ್ಷಿ. ಆದುದರಿಂದ, ಭಾರತದಂತೆಯೇ ಕಾಂಗ್ರೆಸ್ ಪಕ್ಷದ ಭವಿತವ್ಯವೂ ಇಂದು ಸಂಕ್ರಮಣಾವಸ್ಥೆಯಲ್ಲಿದೆಯೆನ್ನುವುದು ನಿಸ್ಸಂದೇಹ.

ಕಾಂಗ್ರೆಸ್ ಸಂಸ್ಥೆಯು ಮೇಲೆ ಯುವ ಜನರ ಅಸಕ್ತಿಯು ಹೆಚ್ಚುತ್ತಿರುವಂತೆ ಮಾಡದೆ ಹೋದರೆ, ಅದರ ಭವಿಷ್ಯ ಖಂಡಿತಕ್ಕೂ ನಿರಾಶಾಮಯವಾಗುವುದು. ಇದಕ್ಕಾಗಿ ಪಲವಾರು ಯೋಜನೆಗಳು ರೂಪಿತಗೊಂಡಿದೆಯೆದರೂ ಅವು ಸಫಲವಾಗಿವೆಯೆಂದು ಹೇಳುವಂತಿಲ್ಲ. ಏಕೆಂದರೆ, ಇಂದಿನ ಕಾಂಗ್ರೆಸಿಗರುಸಂಘಟನಾಕ್ಷೇತ್ರದಲ್ಲಿ ದುಡಿಯುವುದಕ್ಕಿಂತ ಆಡಳಿತೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನೇ ಸಾಮಾನ್ಯವಾಗಿ ಮೆಚ್ಚುತ್ತಿರುವುದು ಕಂಡುಬರುತ್ತದೆ. ಇದರಿಂದಾಗಿಯೇ ಕಾಂಗ್ರೆಸ್ ಪಕ್ಷದೊಳಗೆ ಅನವೇಕ್ಷಿತ ಭಿದ್ರಗಳು ಮೂಡಿ ಸ್ವಯಂ ಕಾಂಗ್ರೆಸ್ಸಿನಲ್ಲಿಯೇ ಗುಂಪಿನ ಮನೋವೃತ್ತಿಯು ಬೆಳೆಯುವುದಕ್ಕೆ ಕಾರಣವಾಗಿದೆ. ಮತ್ತು ಮಂತ್ರಿ ಮಂಡಳದ ವಿಸ್ತರಣೆ, ಆಡಳಿತೆಯಲ್ಲಿ ರಿಧಿಲತೆಗಳಿಗೆ ಪ್ರೇರಕವಾಗಿದೆ. ಈ ಬಗೆಯ ಭಿನ್ನಾಭಿಪ್ರಾಯವು ಪಕ್ಷದಲ್ಲಿ ದಿನನಿದಿನಕ್ಕೆ ಬೆಳೆಯುತ್ತ ಹೋಗುವುದು ಮತ್ತು ದನ್ನು ದೂರ ಮಾಡಲು ಕೆಲವೊಂದು ತಾತ್ಕಾಲಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದೆಂದರೆ ಹರಿದ ಬಟ್ಟೆಗೆ ತೇಪೆ ಹಾಕಿ ಉಡುವುದೆಂದೇ ಅರ್ಥ. ಆದುದರಿಂದ ಕಾಂಗ್ರೆಸ್ ಸದಸ್ಯರು ಅಧಿಕಾರದತ್ತ ಒಲಿಯದೆ, ಪಕ್ಷದ ಸಂಘಟನೆಯತ್ತ ಹೆಚ್ಚಿನ ಗಮನ ಹರಿಸುವಂತೆ ನೋಡಿಕೊಳ್ಳುವುದು ಅಗತ್ಯ.

ಕಾಂಗ್ರೆಸ್ಸಿನಲ್ಲಿ ಎದ್ದು ಕಾಣುವ ಹುಳುಕುಗಳಲ್ಲಿ ಬೊಟ್ಟು ಸದಸ್ಯರನ್ನು ಸೇರಿಸಿಕೊಳ್ಳುವುದೂ ಒಂದಾಗಿದೆ. ಇದರ ಸದಸ್ಯತ್ವ ನಾಲ್ಕಾಣೆಯಿಂದ ತೊಡಗುವುದು. ಹಣದ ಬೆಲೆಯು ಇಳಿಮುಖವಾಗುತ್ತಿರುವ ಈ ದಿನಗಳಲ್ಲಿ ನಾಲ್ಕಾಣೆಯ ಬೆಲೆಯೆಷ್ಟು ಎಂಬುದನ್ನು ಎಲ್ಲರೂ ಬಲ್ಲರು. ಹಾಗಾಗಿ, ಕಾಂಗ್ರೆಸ್ ಪದಾಧಿಕಾರಿಗಳು ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಲು ಬೊಟ್ಟಿ ಸದಸ್ಯರನ್ನು ಮಾಡಿಕೊಂಡ ಉದಾಹರಣೆಗಳು ಹಲವಿವೆ. ಹಿಂದೊಮ್ಮೆ ಇದೇ ಆರೋಪವನ್ನು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಚುನಾವಣೆಗಳಾ ಮುಂದೆ ಹೋದುವೆಂಬುದನ್ನು ನಾವು ಗಮನಿಸಬೇಕು ಈ ಕೊರತೆಯನ್ನು ಹೋಗಲಾಡಿಸುವ ಉಪಕ್ರಮವು ಅತ್ಯವಶ್ಯವಿದೆ; ಇಲ್ಲದೆ ಹೋದರೆ, ನವ್ಯ ಯೋಜನೆಯ ಸಾಧನಾರೂಪದ ಆಂಕೆಸಂಖ್ಯೆಗಳಿಗಿಂತಲೂ ಬೊಟ್ಟಿ ಸದಸ್ಯರ ಸಂಖ್ಯೆಯು ಭಯಾನಕ ಪರಿಣಾಮ ವೆಸಗುವುದು. ತಪ್ಪದು ನಾಲ್ಕಾಣೆಯ ಸದಸ್ಯತನವನ್ನು ರದ್ದುಗೊಳಿಸಿ ಸಕ್ರಿಯ ಸದಸ್ಯರನ್ನು ಮಾತ್ರ ಉಳಿಸಬೇಕು ಎಂಬ ಅಭಿಪ್ರಾಯವೂ ಮುಂದೆ ಬಂದಿದೆ. ಇದು ಸಮಾಲೋಚನಾರ್ಹ ಸೂಚನೆಯೆಂದು ಮಾತ್ರ ಹೇಳಬಹುದೇ ಹೊರತು ಅದುವೇ ತಾರಕೋಪಾಯವೆಂದು ಎಂದಿಗೂ ಅನ್ನಲಾಗದು. ಪ್ರಾದೇಶಿಕ ಕಾಂಗ್ರೆಸ್ ಪದಾಧಿಕಾರಿಗಳಲ್ಲಿಯೇ ಈ ವಿಷಯದಲ್ಲಿ ಭಿನ್ನಾಭಿಪ್ರಾಯ ವಿದೆಯೆಂಬುದನ್ನೂ ನಾವು ಆವಶ್ಯಗನು ನಿಸಬೇಕು.

ಇನ್ನು ಕಾಂಗ್ರೆಸ್ ಧ್ಯೇಯಗಳಲ್ಲಿ ವಿಶ್ವಾಸವಿಡದವರೂ ಪಕ್ಷದ ಸದಸ್ಯರಾಗುವ ಒಂದು ಪ್ರಮೇಯ ಹೀಗೆ ಏಕೆ ಆಗುತ್ತಿದೆಯೆಂಬುದಕ್ಕೆ ಕಾರಣ ಸುಸ್ಪಷ್ಟವಿದೆ. ಅಧಿಕ ಸಂಖ್ಯೆಯಲ್ಲಿ ಸದಸ್ಯರನ್ನು ಸೇರಿಸಿಕೊಳ್ಳಬೇಕೆನಿಸಿದಾಗ, ಇಂತಹ ಧ್ಯೇಯ ಹೀನ ಕಾಂಗ್ರೆಸಿಗರ ಸಂಖ್ಯೆ ಹೆಚ್ಚುವುದು. ಈ ನಿಷ್ಕಾಮಭಾವದ ಅಬಾವ ಸಾಮಾನ್ಯ ಸದಸ್ಯರಲ್ಲಿ ಮಾತ್ರವಲ್ಲ ವಿಧಾನಸಭೆ, ಸಂಸತ್ತುಗಳ ಸದಸ್ಯರಿನಿಸಿದವರಲ್ಲೂ ಇದೆ. ವ್ಯಕ್ತಿಗತ ಅಭಿಪ್ರಾಯಭೇದ ಇರಲಿ, ಒಂದು ಪಕ್ಷದ ಧ್ಯೇಯಗಳು ತನ್ನ ಧ್ಯೇಯ ಗುರಿಗಳಿಗೆ ಹೊಂದಿಕೆಯಾಗುತ್ತವೆಯೆಂದು ಒಮ್ಮೆ ಸದಸ್ಯನಾದ ನಂತರ ಯಾವಾಗಲೇ ಆಗಲಿ ಅವನ ವಿರೋಧಿ ಸಬಾರದು. ಭೂಕುದಾರನೆ, ಪಾನ ಪ್ರತಿಬಂಧ, ಖಾದಿ ಇತ್ಯಾದಿ ಕೆಲವೊಂದು ಕಾಂಗ್ರೆಸ್ಸಿನ ಧ್ಯೇಯಗಳನ್ನು ಪಕ್ಷದ ಸಭೆಯಲ್ಲಿ ಒಪ್ಪಿದ ಮಹತ್ವನೀಯರೇ ಜೊರ ಬಂದ ನಂತರ ವಿರೋಧಿಸುವುದು ಹೆಚ್ಚಿನದಲ್ಲ. ಇಂತಹ ಧ್ಯೇಯ ವಿರೋಧಿಗಳಂದಲೇ ಪಕ್ಷದ ಮೇಲೆ ಜನಸಾಮಾನ್ಯರು ನೀರಸಿಭಾವನೆ ತಾಳುವಂತಾಗುವರು. ಅದರೆ, ರಾಜಕೀಯ ಒತ್ತಡಗಳಿಂದ ಕೆಲವೊಮ್ಮೆ ಪಕ್ಷದ ಧ್ಯೇಯ ಪೊರ್ಪುದವನ್ನೂ ಪಸ್ಪಷ್ಟಕ್ಕೆ ಎಳೆದು ತರಬೇಕಾಗುತ್ತದೆ. ಇದು ರಾಜತಂತ್ರದಲ್ಲಿ ಲಾಭದಾಯಕವೆಸಬಹುದು; ಆದರೆ, ಪಕ್ಷದ ದೃಷ್ಟಿಯಿಂದ ಹಿತಕಾರಕವೇ ಎಂಬುದನ್ನು ಪರ್ಯಾಲೋಚಿಸಬೇಕು.

ಯುವಜನರಲ್ಲಿ ಕಾಂಗ್ರೆಸ್ ನೀತಿಯನ್ನು ಪ್ರಚಾರ ಮಾಡಿ, ಅವರ ಹೃದಯವನ್ನು ನೆಲೆಯಲು ಯುತ್ ಕಾಂಗ್ರೆಸ್ ಮೊದಲಾದುವುಗಳು ಸಂಘಟಿತವಾಗಿವೆ. ಆದರೆ, ಅವು ಅಪೇಕ್ಷಿತ ವಿಧಾನದಲ್ಲಿ ಕಾರ್ಯ ಮಾಡುತ್ತಿಲ್ಲವೆಂಬುದು ಶೋಚನೀಯ. ಇದರಿಂದಾಗಿಯೇ ಕಾಂಗ್ರೆಸ್‌ನ ಶಕ್ತಿ ಹ್ರಾಸವಾಗುತ್ತ ಬರುತ್ತಿದೆ. ಒಂದೊಮ್ಮೆ ಅಧಿಕಾರ ಗದ್ದುಗೆಗೇರಿದ ಮಹನೀಯರು ಮತ್ತೆ ಅದಂದ ಕೆಳಗಿಳಿಯಲು ಬಯಸುವುದೇ ಇಲ್ಲ. ಮಂತ್ರಿ ಪಟ್ಟವೇ ಮೇಲೆಂದು ಭಾವಿಸುವವರು ಹೆಚ್ಚಿರುವುದರಿಂದ ರಾಜ್ಯಪಾಲ ಪದನಿಗೇ ನೇಮಕ ಮಾಡುವಲ್ಲಿ ಕೇಂದ್ರ ಸರಕಾರ ಯಾವ ಯಾವ ರೀತಿಯಲ್ಲಿ ನಿಷ್ಪಕ್ಷ ಮೋಷಬೇಕಾಯಿತೆಂಬುದನ್ನು ನಾವು ಗಮನಿಸಬೇಕು. ತಾಯಿಯಾದವನು ತನ್ನ ಮಗುವನ್ನು ತುಂಡರಿಸಲು ಎಂದೂ ಒಪ್ಪಿಗೆ ನೀಡಲಾರಳು, ಪೆತ್ತ ಬೈಯೇ ಆರ್ಥಕನಿಗೆ ವಿಷಪೂಡಿಸಲು ಮುಂದೆ ಬಂದಿ, ಮಗುವನ್ನು ರಕ್ಷಿಸಲು ಬರುವವರು ಯಾರು? ಆಂತೆಯೇ ಪಕ್ಷದ ಸದಸ್ಯರಲ್ಲಿಯೇ ಪಕ್ಷದ ಧ್ಯೇಯ ಸಾಧನೆಗಳ ಬಗ್ಗೆ ಭಿನ್ನಾಭಿಪ್ರಾಯ ಮತ್ತು ಅಧಿಕಾರ ದಾಹಗಳು ತಾಂಡವನಾಡುತ್ತ ಉಳಿದರೆ, ಪಕ್ಷದ ಬೆಳವಣಿಗೆಯು ಆಗಬೇಕಾದುದಾದರೂ ಹೇಗೆ?

ಇದೇ ರೀತಿಯ ಹಲವು ವಿಘ್ನಗಳನ್ನೂ ಪ್ರಶ್ನೆಗಳನ್ನೂ ಇಂದು ಕಾಂಗ್ರೆಸ್ ಎದುರಿಸಬೇಕಾಗುತ್ತದೆ. ಈ ಬಗ್ಗೆ ತಿರುವನಂತಪುರ ಸಮ್ಮೇಳನದಲ್ಲಿ ಚರ್ಚೆ ನಡೆಯಿತು. ಚರ್ಚೆಗಳು ಈ ಹಂತದಲ್ಲೂ ನಡೆದಿವೆ. ಮುಂದಕ್ಕೂ ನಡೆಯುವಂತಾಗಿ ಬಾರದು. ಭಾರತದ ಭವಿಷ್ಯವು ಕಾಂಗ್ರೆಸ್ಸಿನ ಭವಿಷ್ಯವನ್ನೇ ಹೊಂದಿಕೊಂಡಿರುವುದು ಎಂಬುದು ಸತ್ಯವಾಗಿರುವುದರಿಂದ ಈ ಕಡೆಗೆ ಎಲ್ಲರೂ ತೀವ್ರ ಗಮನ ಹರಿಸಬೇಕು. ಕಾಂಗ್ರೆಸ್ಸಿಗರು ಶಿಷ್ಟಾಚಾರ ಸಂಪನ್ನರಾಗಿ, ಧ್ಯೇಯೋದ್ದೇಶಗಳಲ್ಲಿ ನಿಷ್ಠೆಯುಳ್ಳವರಿಗೆ ಮಾರ್ಗದರ್ಶಕರಾಗಬೇಕು.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಚಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50

ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಪ್ರತಿ ಬಿಡಿಪ್ರತಿ ರೂ. 0-13

ಚಂದಾದಾರರನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಂಬಂಧಪಟ್ಟ ಬೇರೆಯಾವುದೇ ಕಾರ್ಯವನ್ನಾಗಲೀ ಯಾವ ವಿಳಾಸದಲ್ಲಿ ಇದ್ದರೂ 'ನವಯುಗ'ದ ಹೆಸರಿಗೆ ಜಮೆ ಮಾಡಿದರೆ ಸಾಕಾರ್ಯವಿರುವುದು.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇಷನಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಆತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಬೈಟ್ ಹೌಸ್ ಹಿಲ್ ರೋಡ್,
Estd. 1931.
Phone No. 240. — ಮಂಗಳೂರು — 3



ಆಮೇರಿಕನ್ ಪಿಸ್ತೂಲ್ ಆಟೋ ಮೇಟಿಕ್ 6 ಗುಂಡು ಮತ್ತು 50 ಗುಂಡು ನಿಮಗೆ ಕೈಸ್ಕಿರವಾಗದಿದ್ದಲ್ಲಿ ಪೂರ್ಣ ವಾಪಾಸು ಕೊಡಲಾಗುವುದು.

ತುಂಬಾಗವಂಶಿಕ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ:6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೆಲೆ 100 ಗುಂಡಿನ ಬೆಲೆ: ರೂ. 5. ಧರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಬಾರ್ಜು ರೂ. 2

REY ROGAS & CO., 23-A, Anand Nagar, **BOMBAY-26**

ಕಾಮರಾಜರ ಮೇಲೆ

ಪ್ರತ್ಯೇಕತಾವಾದದ ಬರಸಿಡಿಲು

ಮದ್ರಾಸರಾಜ್ಯದ ದ್ರಾವಿಡ ಕಳಗಂ ವಿಘಟನಾತ್ಮಕ ಚಟುವಟಿಕೆಗಳಿಗೆ ಹೆಸರಾಗಿದೆ. ಪ್ರತ್ಯೇಕ ದ್ರವಿಡನಾಡನ್ನು ಕಟ್ಟುವ ಅದರ ಕಲ್ಪನೆಯು ಕನಸಿನ ಗೋಪುರವೆಂಬಂತಿರುವುದಾದರೂ ಅದನ್ನು ನನಸಾಗಿಸಿಯೇ ತೀರುವ ಪ್ರತಿಜ್ಞೆಯನ್ನು ಮದ್ರಾಸದಲ್ಲಿ ಇತ್ತೀಚೆಗೆ ಮಾಡಿತು. ಸುಮಾರು ಐದು ನೂರಕ್ಕೂ ಮಿಕ್ಕಿದ ಸ್ವಯಂ ಸೇವಕರು ನಗರದ ಸುತ್ತ ಮೆರವಣಿಗೆಯನ್ನು ಮಾಡಿ ಆ ಬಳಿಕ ಬಹಿರಂಗ ಸಭೆಯನ್ನು ನಡೆಸಿ ಅದರಲ್ಲಿ ದ್ರವಿಡ ಸ್ವಾತಂತ್ರ್ಯವನ್ನು ಕಟ್ಟಿ ನೃದಕ್ಕಾಗಿ ಆ ಜೀವ ಹೋರಾಡುವ ಪಣವನ್ನು ತೊಟ್ಟರು.

ಇದಕ್ಕೆ ಕೆಲವು ದಿನಗಳಿಗೆ ಮೊದಲು ಪ್ರತ್ಯೇಕತಾವಾದವನ್ನು ರಕ್ತ ತರ್ಪಣ ವಿತ್ತಾದರೂ ಪ್ರತಿ ಭಟಿಸುವ ಪ್ರತಿಜ್ಞೆಯನ್ನು ಇನ್ನೊಂದು ಸ್ವಯಂ ಸೇವಕ ತಂಡದವರು ಕೈಗೊಂಡರು. ಸುಮಾರು ೧೫೦ ಪ್ರೌಢಶಿಕ್ಷಕರು 'ದಕ್ಷಿಣದಲ್ಲಿ ಪ್ರತ್ಯೇಕತೆಯ ಚಳುವಳಿಯನ್ನು ಕೊನೆಗೊಳಿಸುವ ಪತಪ್ರಸ್ಯತ್ನವನ್ನು ಮಾಡುತ್ತೇನೆ'ಯೆಂದು ತಮಿಳ್ನಲ್ಲಿ ಪ್ರತಿಜ್ಞಾ ಪತ್ರಕ್ಕವರು ಸಹಿ ಹಾಕಿದ್ದರು. ಆ ನಂತರ ತಮ್ಮ ಎಡ ಪಬ್ಬೆಟ್ಟಿನಲ್ಲಿ ಹೂರಿಯಿಂದ ಇರಿತಗೆಯ್ದು ನೋರಿದ ರಕ್ತದಿಂದ ಪೆಪ್ಪಟ್ಟನ್ನು ಅದ್ದಿ, ಅದರ ಅಂಕಿತವನ್ನು ಹಾಕಿದ್ದರು.

ದ್ರವಿಡ ಕಳಗಂನವರ ಬ್ರಹಡ್ ಮೆರವಣಿಗೆಯು ಅಶಾಂತಿಗೆ ಕಾರಣವಾಗಬಹುದೆಂಬುದರಿಂದ ಪೋಲೀಸು ವಿಭಾಗವು ಶಾಂತಿ ಮತ್ತು ಸವ್ಯವಸ್ಥೆಯ ರಕ್ಷಣೆಯನ್ನು ಕೈಗೊಂಡಿತ್ತು, ಕಳಗಂ ಪ್ರದರ್ಶಕರಲ್ಲಿ ಕೆಲವರನ್ನು ಅವರು ಬಂಧಿಸಿದ್ದಾರೆಂದೂ ಬಿಟ್ಟವ್ಹಾರೆ. ಸರ್ವೋದಯ ಶಾಂತಿ ಸೇನೆಯ ಹಂಗಡವೊಂದೂ ಆ ಶಾಂತಿ ತೋರಿದರೆ, ಅದನ್ನು ಶಾಂತಗೊಳಿಸುವುದಕ್ಕಾಗಿ ಮೆರವಣಿಗೆಯಲ್ಲಿ ಕೂಡಿತ್ತು. ಆದರೆ, ಯಾವ ಗಂಭೀರ ಪರಿಸ್ಥಿತಿಯೂ ಅಲ್ಲಿ ತಲೆದೋರದಿದ್ದುದು ಒಂದು ವೈಶಿಷ್ಟ್ಯವೆನಿಸಿದೆ.

ಸ್ವತಂತ್ರ ದ್ರವಿಡ ಸ್ಥಾನವನ್ನು ಬೇಡುವ ಘೋಷಣೆಗಳು ದಿಗ್ವಿಗಂತವನ್ನು ಪ್ರತಿಧ್ವನಿಸಿದ್ದರೂ ಅವರ ಕೂಗು ಯಾವ ಹಿಚ್ಚಿನ ಪರಿಣಾಮವನ್ನೂ ಮಾಡಲಾರದು. ದ್ರವಿಡ ಕಳಗಂ ಸಂಘಟಿಸಿದ ಮೆರವಣಿಗೆಗಳಲ್ಲಿ ಇದು ಬಹು ದೊಡ್ಡದೆಂದೂ ಮಹತ್ವಪೂರ್ಣವಾದುದೆಂದೂ ಹೇಳಲಾಗುತ್ತಿದೆ. ಆದೇನೇ ಇದ್ದರೂ ಕಳಗಂನ ವ್ಯಾಪ್ತಿಯು ತೀರ ಸಂಕುಚಿತವಿರುವುದು. ಮದ್ರಾಸಿನಲ್ಲಿ ಮಾತ್ರವಲ್ಲದೆ ಕೊಯಂಬತ್ತೂರು ಮತ್ತು ಕಾಂಚೆಗಳಲ್ಲಿಯೂ ಅದು ಇಂತಹ ಪ್ರದರ್ಶನವನ್ನು ಏರ್ಪಡಿಸಿತ್ತು ನಿಜ ಆದರೂ ಕಳಗಂನ ಜನಪ್ರಿಯತೆಯು ಏಕ ವಾಕ್ಯೆಕವಾಗಿಯೆಯೆಂದು ಖಂಡಿತಕ್ಕೂ ಹೇಳಬಹುದು.

ಪ್ರತ್ಯೇಕತೆ-ವಿಭಿನ್ನತೆ ಮತ್ತು ದ್ರೋಹಕಾರಕ ಚಳುವಳಿಗಳನ್ನು ತೊಡಗುವುದರಲ್ಲಿ ಮೊದಮೊದಲು ತೊಡಗಿದ ಕಳಗಂ ನೆ ವಿವಿಧ ಚಟುವಟಿಕೆಗಳನ್ನು ಹತ್ತಿಕ್ಕುವಲ್ಲಿ ಮದ್ರಾಸ ಸರಕಾರ ಅಂದು ಪಟ್ಟಿನ ಆಸಕ್ತಿಯನ್ನಾಗಲೀ ಕಳಕಳಿಯನ್ನಾಗಲೀ ತೋರಿಲ್ಲ ಮೊತ್ತ ಮೊದಲು ಬ್ರಾಹ್ಮಣ ವಿರೋಧಿ ಪ್ರದರ್ಶನವನ್ನು ರಾಮ ಸ್ವಾಮಿ ನಾಯ್ಕರು ಮಾಡಿದರು; ರಾಮನ, ಗಣೇಶನ ವಿಗ್ರಹ-ಚಿತ್ರ ಭಂಜಕವೆನಿಸಿದರು. ಸಂವಿಧಾನದ ಪ್ರತಿಗಳನ್ನೇ ಭಸ್ಮ ಮಾಡತೊಡಗಿದರು. ಆಗಲಾದರೂ ಸರಕಾರ ಇನ್ನಿಲ್ಲವನ್ನೂ ಸಹಿಸಿ ಸುಮ್ಮನುಳಿಯಿತೇ ಹೊರತು ಇವನ್ನು ಪ್ರತಿಬಂಧಿಸವ ಸೂಕ್ತನಾರ್ಗಗಳನ್ನು ಹಿಡಿಯಲಿಲ್ಲ. ಇಂತಹ ಮೌನ ವ್ಯಕ್ತಾಣಕ್ಕೆ ಮುಖ್ಯಮಂತ್ರಿ ಕಾಮರಾಜರ ವೈಯಕ್ತಿಕ ಪ್ರತಿಭೆ ಮತ್ತು ದೃಢತೆಗಳೇ ಕಾರಣವೆಂದು ಹೇಳಲಾಗುತ್ತಿದೆ. ಅಂದು ಕೆಡಿಯೂರಿದ್ದ ಕಳಗಂ ಚಟುವಟಿಕೆಗಳು ತನ್ನ ರಾಜಕೀಯ ಬೇಳೆಯನ್ನು ಬೇಯಿಸಲು ಅನುಕೂಲವೆಂಬಂತೆ ಕಾಮರಾಜರಿಗೆಕಂಡಿರಬೇಕು; ಅವರು ನೋಡಿದ ನಿಲುವೆಯೂದರೂ ಕಪ್ಪಲಿಲ್ಲ.

ರಾಜ್ಯ ಸರಕಾರವೇನೋ ಸುಮ್ಮನುಳಿಯಿತು. ಆತ್ತ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳು ನಡೆದುವು. 'ಕಳಗಂ ವ್ಯಾಪ್ತಿ ಚಿಂತೆಗೆ ಕಾರಣವಿಲ್ಲ; ಅದು ಕೇವಲ ಹುಡುಗಾಟಿಕೆ. ಅದನ್ನು ಕೂನೆಗೊಳಿಸಲು ರಾಜ್ಯ ಸರಕಾರವೇ ಶಕ್ತವಿದೆ' ಎಂದು ಕೇಂದ್ರ ಗೃಹಮಂತ್ರಿ ದಿ| ಪಂತರು ಉಚ್ಚರಿಸ ತೊಡಗಿದರು. ಈ ಉತ್ತರ ರಾಜ್ಯ ಸರಕಾರದಿಂದ ಬಂದುದು ಎಂದು ಬೇರೆ ಹೇಳ ಬೇಕಿಲ್ಲ. ಆದರೂ, ರಾಜ್ಯ ಸರಕಾರವು ಕಳಗಂ ಪ್ರತ್ಯೇಕತಾವಾದವನ್ನು ಮುರಿಯಲು ಸಂವಿಧಾನದ ಪ್ರತಿಗಳನ್ನು ಸುಡಲು, ದೇವ ದೇವತೆಗಳ ವಿಗ್ರಹಗಳನ್ನುಒಡೆದು ಅವರ ಆಳರಾಧಕರ ವನ ನೋಯಿಸಲು, ಬ್ರಾಹ್ಮಣ ದ್ವೇಷವನ್ನು ತೋರಿಸಿ ಜಾತೀಯ ತೆಯನ್ನು ಉದ್ರೇಕಿಸಲು ಇಂತಹ ಹತ್ತು ಹಲವು ಕೃತ್ಯಗಳಲ್ಲಿ ತೊಡಗಿದಾಗ ಯಾವ ಕ್ರಮಗಳನ್ನು ಕೈಗೊಂಡಿತ್ತು? ತೀರ ವಿಧ್ವಂಸಕ ಕೃತ್ಯಗಳು ಸಂಭವಿಸಿದಾಗ ಎಲ್ಲೋ ಕೆಲವರನ್ನು ಬಂಧಿಸಿರ ಬಹುದು. ಇನ್ನುರಿಂದ ಕಳಗಂ ಸಪ್ಪಳಭವನಾಗುವುದಿಂಟೆ?

ಭಾವೈಕ್ಯದ ಪ್ರಶ್ನೆಯನ್ನು ನಾವು ಎತ್ತಿ ಕೊಳ್ಳುತ್ತೇವೆ. ಜಾತೀಯತೆ, ವ್ಯಾಂತೀಯತೆ, ಪ್ರತ್ಯೇಕತೆಗಳನ್ನು ನಾವು ವಿರೋಧಿಸುತ್ತ ಬಂದಿದ್ದೇವೆ ರಾಷ್ಟ್ರ ವಿಭಜನೆಯನ್ನ ಬಯಸುವುದು ಸಂವಿಧಾನ ವಿರೋಧಿ, ರಾಷ್ಟ್ರ ದ್ರೋಹವೆಂದು ನಾರು ವಷ್ಟೂ ನಾವಾ ಮುಂದುವರಿದಿದ್ದೇವೆ. ಆದರೆ, ಕಳಗಂನ ರಾಷ್ಟ್ರ ದ್ರೋಹದ ಕೃತ್ಯಗಳಿಗೆ ಯಾವ ಸೂಕ್ತ ಕ್ರಮವನ್ನೂ ಸರಕಾರ ಕೈಗೊಂಡಿಲ್ಲ — ಆದುದರಿಂದಲೇ ಅದರ ಚಟುವಟಿಕೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ.

ಮದ್ರಾಸದಲ್ಲಿ ಕೇಂದ್ರ ಗೃಹಮಂತ್ರಿ ಲಾಲಬಹದೂರ ಶಾಸ್ತ್ರಿಯವರು ಇಳಿದಾಗ, ಕಾಮರಾಜರೊಡನೆ ಈ ಸಂಬಂಧದಲ್ಲಿಯೂ ಕೃಸ್ತಾಪಿಸಿದ್ದರು. ಈ ಮಾತುಕತೆಯ ನೇಳೆ, ಕಾಮರಾಜರು, 'ರಾಜ್ಯ ಸರಕಾರವು ಕಳಗಂನ್ನು ಬಗ್ಗು ಬಡಿಯಲು ಸಮರ್ಥವಿದೆ' ಎಂಬ ಭರವಸೆಯಿತ್ತರು; ಇದರ ಬಲದಿಂದ ಶಾಸ್ತ್ರಿಗಳು ಗುಡುಗಿದರು:— 'ರಾಜ್ಯ ಸರಕಾರ ಸಶಕ್ತವಿದೆ; ಕೇಂದ್ರ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲ.'

ಭಾವೈಕ್ಯ-ಸಮಗ್ರತೆಯ ಪ್ರಶ್ನೆ ರಾಜ್ಯಕ್ಕಿಂತ ಏನಿಲಾಗಿ ದೇಶಕ್ಕೆ ಸಂಬಂಧಪಟ್ಟಿದ್ದು. ಆದುದರಿಂದ ಕೇಂದ್ರ ಸರಕಾರವು ರಾಜ್ಯದ ಮೇಲೆ ಸಂಪೂರ್ಣ ಭರವಸೆಯಿಟ್ಟು ಸುಮ್ಮನುಳಿದರೆ, ಈಗಾಗಲೇ ಹೆಮ್ಮಾರವಾದ ಕಳಗಂ ತನ್ನ ಬೇರು ಬಿಳಿಗಳನ್ನು ಮತ್ತಷ್ಟು ಭದ್ರವಾಗಿ ನಾಟುವುದು. ಸ್ವಯಂ ಕಾಮರಾಜರೇ ಕಳಗಂ ಜೀವಣಿಗೆಗೆ ಕಾರಣೀಭೂತರಾಗಿರುವುದು ನಿಜವೆಂದಾದರೆ, ನೆಟ್ಟ ಮರವು ವಿಷಯುಕ್ತವಾದರೂ ಅದನ್ನು ಕಡಿಯುವುದು ಅವರಿಗೆ ಬಹು ಪ್ರಯಾಸಕರವೆನಿಸುವುದು. ಆದುದರಿಂದ ಕೇಂದ್ರ ಸರಕಾರವು ಈ ದಿಸೆಯಲ್ಲಿ ಉದಾಸೀನ ಧೋರಣೆ ತೀಪು ಮುಂದುವರಿಯುವುದು ಅತ್ಯವಶ್ಯವಾಗಿದೆ!

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

The Karnataka Bank Limited, Udipi. S. K.
Registered Office: Mangalore-3

ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಉಡುಪಿ, ದ. ಕ.
(ರಿಜಿಸ್ಟರ್ಡ್ ಆಫೀಸು: ಮಂಗಳೂರು-3

—: ವಿಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ನಗದಿ ಉಳಿತಾಯ ಖಾತೆ ಸಾಲ ಪದಕೊಂಡು ಕೃಪ್ತ ವಾಪಸಿಗೆ ಆಸಲ್ಲು ಬಡ್ಡಿ ವಗೈರೆ ಪಾವತಿಮಾಡದೇ ಒಕ್ಕಿ ಮಾಡಿಕೊಂಡಿರುವುದರಿಂದ ನಮ್ಮ ಸಾಲಗಳನ್ನು ವಸೂಲು ಮಾಡುವದೇ ಆವಾಗ ರಿಜಿಸ್ಟ್ರೆ ನೋಟೀಸುಗಳನ್ನು ಬಿಟ್ಟಿದ್ದರೂ (ಜಂಟ್ರಾ ತರ ಜಾಬ್ತು ಕುರಿತ ವಿಶಾಸ ಗೊತ್ತಿಲ್ಲದೆ ನೋಟೀಸು ವಾಪಾಸು ಬಂದಿದ್ದು) ಕೂಡಾ ಕಡ್ತಿ ಹುಡಿದ್ದ ನಗರಗಳನ್ನು ಬಿಡಿಸದೇ ಇರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಇದೇ 1962ನೆಯ ಇಸವಿ ಆಕ್ಟೋಬರ್ ತಿಂಗಳ 19ನೆಯ ತಾರೀಖಿನ ಅವರಾಹ್ನ 2ಗಂಟೆಯ ಒಳಗೆ ಬೇಂಕಿಗೆ ಸಲ್ಲತಕ್ಕ ಆಸಲು ಬಡ್ಡಿ, ನೋಟೀಸು ಬಿಡುವ ವರ್ಗೈರೆ ಜಾಕಿಗಳನ್ನು ಸಲಾಯಿಸಿ ನಗದಾಯಿಸಿ ವಾಪಾಸು ಪಡಕೊಳ್ಳದೇ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗದಿಗಳನ್ನು ಇದೇ 1962ನೆಯ ಇಸವಿ ಅಕ್ಟೋಬರ 20ನೆಯ ತಾರೀಖು ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆ ಯಾ ಅನಂತರ ನಮಗೆ ಯಾಕ್ತಕಂದ ತಾರೀಖಿನಲ್ಲಿ ನೊ ಟೀಸು ಶಿವಾ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುತ್ತದೆ.

ಜಂಜ್ರ ನಂಬ್ರ	ಸಾಲದ ನಂಬ್ರ	ಸಾಲ ಪದೆದವರ ಹೆಸರು	ಸಾಲದ ಮೊಬಲಗು
1	208/60	ರಾಜು ಶೆಟ್ಟಿಗಾರ್, ಚಿನ್ನಯ್ಯ ಶೆಟ್ಟಿಗಾರರ ಮಗ ಉಡುಪಿ ತಾಲೂಕು ಶಿವಳ್ಳಿಗ್ರಾಮ, ಕುಂಜಿಬೆಟ್ಟು ಪೋಸ್ಟ್,	175=00
2	159/61	ಗುರುವಪ್ಪ, ಸೋಮಪ್ಪ ಪೂಜಾರಿಯ ಮಗ ಬೋಳ ಮನೆ, ಕಿನ್ನಿಮೂಲ್ಕಿ, ಉಡುಪಿ.	500=00
3	168/61	ಗುರುವಪ್ಪ, ಸೋಮಪ್ಪ ಪೂಜಾರಿಯ ಮಗ ಬೋಳ ಪಾಡಿ, ಕಿನ್ನಿಮಲ್ಕಿ, ಉಡುಪಿ.	60=00
4	347/62	ಸದಾನಂದ ರಾವ್ ಕುಂಜೂರ್ ರಾಮಚಂದ್ರ ರಾವ್, ಕುಂಜೂರರ ಮಗ ಗುಂಡಿಬೈಲು, ಉಡುಪಿ	1200=00
5	319/61	ಸದಾನಂದ ರಾವ್ ಕುಂಜೂರ್, ರಾಮಚಂದ್ರ ರಾವ್ ಕುಂಜೂರರ ಮಗ, ಗುಂಡಿಬೈಲು ಉಡುಪಿ.	2245=00

ಉಡುಪಿ,
ತಾ 27—9—'62

K. B. Rama Rao,
ಮೆನೆಜರ್.



ದಿನದ ೨೪ ತಾಸುಗಳನ್ನು ಉಪಯೋಗಿಸುವದು ಹೇಗೆ?

ನಿಜವಾದ ಉತ್ಸಾಹ ಮತ್ತು ಸಂತೋಷಗಳಿಂದ ಬದಕುವವರು ತೀರ ಕಡಿಮೆ ಯೆನ್ನಬಹುದು. ನಿನ್ನೆ ಮಾಡಿದ ತಪ್ಪುಗಳಿಗಾಗಿ ಪಶ್ಚಾತ್ತಾಪಪಟ್ಟು ಕೊಳ್ಳುತ್ತ, ನಾಳೆಯ ಸಮಸ್ಯೆಗಳನ್ನು ಕುರಿತು ಚಿಂತಿಸುತ್ತ ಹೆಚ್ಚಿನವರು ದಿನಗಳನ್ನು ಸಾಗಹಾಕುವರು. ಅದಿಲ್ಲದಿದ್ದರೆ ಸದ್ಯದ ನಿಮಿಷದಲ್ಲಿ ಜೀವನದ ಸುಖವನ್ನು ಹೊಂದಲಾರದಷ್ಟು ಆವರು ಬಳಲಿ ಹೋಗಿರುತ್ತಾರೆ. ಆದರೆ ಜೀವನದಲ್ಲಿ ನಿಜವಾದ ಸುಖವನ್ನು ಅನುಭವಿಸುವ ಕಾಲವೆಂದರೆ ವರ್ತಮಾನ ಕಾಲವೇ ಆಗಿದೆ.

ಪ್ರತಿಯೊಬ್ಬನ ಪಾಲಿಗೂ ಆಪ್ಪೇ ದಿನದಲ್ಲಿ ೨೪ ತಾಸುಗಳೇ ಇರುವವು ತುಸು ಮುಂದಾಲೋಚನೆ, ತುಸು ನಿರ್ದಿಷ್ಟ ಯೋಜನೆಗಳಿಂದ ನಾವು, ಈ ೨೪ ತಾಸುಗಳಲ್ಲಿ ಆದಷ್ಟು ಹೆಚ್ಚಿನ ಪ್ರಯೋಜನವನ್ನು ಪಡೆದುಕೊಳ್ಳಲು ಕಲಿತುಕೊಳ್ಳಬಹುದು. ತೀರ ಸ್ವಲ್ಪ ಅವಧಿಯಲ್ಲಿ ತೀರ ಹೆಚ್ಚಿನದನ್ನು ಮಾಡಹೋಗಿ ತಂದುಕೊಳ್ಳುವ ಗೊಂದಲ, ಬಳಲಿಕೆಗಳಿಂದ ಎಳೆದುಕೊಳ್ಳಬಹುದು. ಸಮಯದ ಸರಿಯಾದ ಉಪಯೋಗವೆಂದರೆ ಹೆಚ್ಚು ಸಮಯವನ್ನು ದೊರಕಿಸಿಕೊಂಡಂತೆ.

ಉದಯಿಸಿದ ದಿನದಲ್ಲಿ ಆದಷ್ಟು ಹೆಚ್ಚಿನ ಸಂತೋಷ ಪಡೆಯಬೇಕೆಂದರೆ ಗಡಿಯಾರವನ್ನು ೧೦ ನಿಮಿಷ ಮುಂದಿಟ್ಟು ಕೊಳ್ಳಿ! ಹೆಚ್ಚಿನ ನಿನ್ನೆಗಿಂತ ಇದು ಹೆಚ್ಚು ಲಾಭದಾಯಕವಾಗುವದು. ಈ ೧೦ ನಿಮಿಷಗಳಲ್ಲಿ ತೈಕಾಲು ಹಸರಿಸಿ ಬಿದ್ದುಕೊಳ್ಳಿ. ಆಂಗಾಜ ಮಲಗಿಕೊಂಡು ಕೈಗಳನ್ನು ಮೇಲಕ್ಕೆತ್ತುವಾಗ ಆಳವಾಗಿ ಉಸಿರನ್ನೆಳೆದುಕೊಳ್ಳಿ, ಕೈಗಳನ್ನು ಕೆಳಗೆ ಬಿಡುವಾಗ ಶ್ವಾಸವನ್ನು ಬಿಡಿ.

ಕೆಲವು ಸಲ ಹೀಗೆ ಮಾಡಿದ ಬಳಿಕ ಬಲಮಗ್ಗುಲಾಗಿ ಮಲಗಿ ನಿಮ್ಮ ಬಲಗೈಯನ್ನು ಬಲ ಭುಜದ ಮೇಲೆ ಇಡಿರಿ. ಉಸಿರನ್ನೆಳೆದುಕೊಳ್ಳುವಾಗ ಬಾಗಿದ ಭುಜವನ್ನು ತಲೆಯ ಕಡೆ ಎತ್ತಿರಿ. ಆಗ ನಿಮಗೆ ನಿಮ್ಮ ಪಕ್ಕದಿಂದ ಟೊಂಕದವರೆಗೂ ಸಡಿಲಾದಂತೆ ಅನಿಸುವದು. ನಿಮ್ಮ ಪುಪ್ಪುಸದಲ್ಲಿ ಆಲಸಿಯಾಗಿದ್ದ ಭಾಗವು ಉಸಿರಾಡಿಸುವ ಕಾರ್ಯದಲ್ಲಿ ಹೆಚ್ಚು—ಭಾಗವಹಿಸಿ ಕೊಡುತ್ತದೆ. ಈ ಪ್ರಯೋಗ ಹಲವು ಸಲ ಮಾಡಿದ ನಂತರ ಎಡಪಕ್ಕಕ್ಕೆ ಹೊರಳಿ ಅದೇ ರೀತಿ ಮಾಡಿರಿ. ಇದರಿಂದ ಹೃದಯಕ್ಕೆ ತುಂಬ ಹಿತವಾಗುವದು.

ಬಳಿಕ ಉಸಿರನ್ನೆಳೆದುಕೊಂಡು ಕಾಲನ್ನು ಅವುಗಳ ಬೆರಳುಗಳು ಮೇಲಕ್ಕೆ ಸರಿಯುವಂತೆ ಚಾಚಿರಿ. ದಿನವೂ ಈ ರೀತಿ ಮಾಡುವದರಿಂದ ಪ್ರತಿನಿತ್ಯ ತಾಸುಗಟ್ಟಲೆ ಒಂದೇ ಕಡೆ ಕೂಡುವದರಿಂದ ಉಂಟಾಗುವ ಮ್ಯೂನವು ತುಂಬಿ ಬರುತ್ತದೆ.

ಗಡಿಬಿಡಿಯಿಂದ ಹಾಸಿಗೆಯನ್ನು ಬಿಟ್ಟು ಏಳಬೇಡಿರಿ ಇದರಿಂದ ಹೃದಯದ ಮೇಲೆ ತುಂಬ ಪೆಟ್ಟು ಬೀಳುವದು. ಇಂದಿನ ದಿನವನ್ನು ನೀವು ಶಾಂತವಾಗಿ ಸುಖದಲ್ಲಿ ಕಳೆಯಬೇಕಲ್ಲವೇ? ಪ್ರಾರಂಭದಲ್ಲಿ ಆತುರ ಯಾಕೆ?

— ——

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

(೩ನೇ ಪುಟದಿಂದ)

ದನು!" ಎಂದೇ ಭಾವಿಸುತ್ತಾರೆ. ಆದರೆ, ಆತ್ಮಜ್ಞಾನಿ—ಡಾ| ಮುಕುಂದನಿಗೆ ಮಾತ್ರ ಇದರಿಂದಲೇ ಆತ್ಮ ಶಾಂತಿ ಲಭಿಸುತ್ತದೆ ಈ ರೀತಿಯಿಂದ ಈ ಕಥೆ ಪೂರ್ಣಗೊಂಡಿದೆ.

ಇಲ್ಲಿ ಉಚ್ಚ ಪರ್ಣೇಯನಾದ ಡಾ| ಮುಕುಂದನು ಹೊಲತಿಯನ್ನು ತನ್ನ ತಾಯಿಯಂತೆಯೇ ಭಾವಿಸಿ, ಆವರೀರ್ವರನ್ನೂ ತನ್ನ ಜೊತೆ, ಮನೆಯಲ್ಲೇ ಇಟ್ಟುಕೊಂಡ ರೀತಿ, ಅಸ್ವಾಭಾವಿಕವೆಂದು ತೋರಬಹುದು. ಆದರೆ, ಸಮಾಜದಲ್ಲಿ ಇಂತಹ ಘಟನೆ, ಅಪರೂಪವಾದರೂ-ಘಟಿಸಿರಬಹುದು; ಘಟಿಸಬಹುದು. ಆದರೂ-ಮಾನ್ಯ ರಾಜಾಜಿಯವರು, ಅಧ್ಯಾತ್ಮಿಕ ವಿಚಾರದೃಷ್ಟಿಯಿಂದ, ಈ ಘಟನೆಯನ್ನು ವಿಚಾರ ಮಾಡಿ, ಸ್ವಾಭಾವಿಕವಾಗಿ ತೋರುವಂತೆ, ಈ ಕಥೆಯಲ್ಲಿ ಚಿತ್ರಿಸಿರುವದು ಕಲಾತ್ಮಕವಾಗಿ, ಚಿಕಿತ್ಸಾತ್ಮಕ ದೃಷ್ಟಿಯಿಂದ ಕೂಡಿದುದು ಸ್ವಾರಸ್ಯವಾಗಿದೆ. ಶ್ರೀ ರಾಜಾಜಿಯವರು, ಡಾ| ಮುಕುಂದನ ವಿಚಾರಧಾರೆಯ ಮೂಲಕ, ಈ ಘಟನೆಯನ್ನು ಇಂತು ನಿರೂಪಿಸಿರುವರು.

'ಡಾ| ಮುಕುಂದನಿಗೆ ಭಗವದ್ಗೀತೆಯ ೨ನೇ ಅಧ್ಯಾಯ: ೩೫ನೇ ಶ್ಲೋಕ ನೆನಪಾಗಿ-ಆತನು, ಜೀವಾತ್ಮವು ಒಂದು ದೇಹದಿಂದ ಹೊರಟ ಬಳಿಕ ಮತ್ತೊಂದು ದೇಹದಲ್ಲಿ ಹೇಗೆ ಸೇರಿಕೊಳ್ಳುವುದು? ಎಂದು ಯೋಚಿಸುತ್ತಾನೆ. ಮತ್ತು ಹಿಂದಿನ ಜನ್ಮದಲ್ಲಿ ಮಾಡಿದ ಪಾಪ, ಪುಣ್ಯಗಳಿಗನುಸಾರವಾಗಿ ಜೀವಾತ್ಮವು, ದೇಹಧಾರಿಯಾಗುತ್ತದೆ. ಎಂಬ ನಿರ್ಧಾರಕ್ಕೆ ಬರುತ್ತಾನೆ." ಹಾಗಾದರೆ, 'ತನ್ನನ್ನು ರಕ್ಷಿಸಿದ ಮೂರಿಯನ್ನು ಹೊಡೆದು, ಗಾಯಗೊಳಿಸಿ ಪಂಕಟಕ್ಕೊಳಪಡಿಸಿದ, ತನ್ನ ತಾಯಿಯ ಆತ್ಮವು ಈಗ ಈ ಪೂರಯಿಯುಡೇಹದಲ್ಲಿ ಸೇರಿ, ಈ ಯಾತನೆಯನ್ನು ಏಕೆ, ಅನುಭವಿಸುತ್ತಿರಬಾರದು? ಇದನ್ನು ಸುಳ್ಳು ಎನ್ನುವುದು ಹೇಗೆ? ಹಿಂದೆ, ತನ್ನ ತಾಯಿ, ಪೂರಿಗೆ ಕಷ್ಟಕೊಟ್ಟಿದ್ದಳು. ಬಳಿಕ ತೀರಿ ಹೋದಳು. ಈಗ ಈ ಪೂರಯಿಯ ದೇಹದಲ್ಲಿ ಆಕೆಯ ಆತ್ಮನೇ ಬಂದು ಸೇರಿ-ಈ ನೋವಿನ ಯಾತನೆಯನ್ನು ಅನುಭವಿಸಿಸು! ಈ ಕಾರಣದಿಂದಾಗಿ ನಾನೀಗ, ಈ ಪೂರಯಿ, ಮತ್ತು ಮೂರಿಯನ್ನು ತನ್ನ ಮನೆಯಲ್ಲಿಟ್ಟುಕೊಳ್ಳದಿದ್ದರೆ, ನನ್ನ ಆತ್ಮಕ್ಕೆ ಶಾಂತಿಯಿಲ್ಲ!' ಎಂದು, ನಿರ್ಧರಿಸಿದ ಡಾ| ಮುಕುಂದನು, ಆವರನ್ನು ತನ್ನ ಮನೆಯಲ್ಲಿ ಯಾವ ಭೇದಭಾವವೂ ಇಲ್ಲದೆ ಇಟ್ಟುಕೊಂಡನು. ಆ ಬಳಿಕವೇ ಮುಕುಂದನ ಆತ್ಮಕ್ಕೆ ಶಾಂತಿ ಲಭಿಸಿತು.

ಮುಕುಂದನು, ತನ್ನ ಈ ವಿಚಾರವನ್ನು ಮತ್ತೂ ಹೇಳುತ್ತಾನೆ—'ನಾವು ಒಬ್ಬ ವ್ಯಕ್ತಿಯು, ಬಹು ಕಷ್ಟದಲ್ಲಿ ಸಿಲುಕಿರುವುದನ್ನು ನೋಡಿದಾಗ, ಅತನನ್ನು ಕಡೆಗಣಿಸಬಾರದು. ಏಕೆಂದರೆ, ನಮ್ಮ ತಂದೆ, ತಾಯಿ ಅಥವಾ ಬಂಧುಗಳ ಪೈಕಿ ಯಾವುದಾದರೊಂದು ಜೀವಾತ್ಮ ಆತನಲ್ಲಿ ಪ್ರವೇಶಿಸಿರಬಹುದು. ಪಶು ಪಕ್ಷಿಗಳನ್ನೂ ಕೂಡ, ನಾವು, ನಮ್ಮ ಪೂರ್ವಜರ ಆತ್ಮವೇ ಆವುಗಳ ದೇಹದಲ್ಲಿರಬಹುದೆಂದು ಭಾವಿಸಿ—ಹಿಂಸಿಸದೆ ನೋಯಿಸದೆ ಕರುಣೆಯಿಂದ ಕಾಣಬೇಕು. ಓರ್ವನು-ಶ್ರೀಮಂತನಾದನೆಂದು, ನಾವು ಅಸೂಯೆಪಡಬಾರದು. ಏಕೆಂದರೆ, ಬಡವನಾಗಿದ್ದ, ನಮ್ಮ ಕುಟುಂಬದ ಓರ್ವ ವ್ಯಕ್ತಿಯೇ ಈಗ ಶ್ರೀಮಂತನಾಗಿರಬಹುದು! ಎಂದು ಭಾವಿಸಬೇಕು!" ಮುಕುಂದನ ವಿಚಾರ ಸರಣಿ ಹೀಗೇ ಮುಂದುವರಿಯುತ್ತದೆ.

ಸಮಾಜದಲ್ಲಿ ಅಪರೂಪವಾಗಿ ಘಟಿಸಬಹುದಾದ ಅಸಹಜನೆಂದು, ತೋರಬಹುದಾದ, ಈ ಘಟನೆಯನ್ನು ಶ್ರೀ ರಾಜಾಜಿಯವರು, ನಿರೂಪಿಸಿರುವ ರೀತಿ ಚಮತ್ಕೃತಿ ಪೂರ್ಣವಾಗಿದ್ದು ಅವರ, ವಿಚಾರ, ದೃಷ್ಟಿ-ಹಾಗೂ ಕಥನಕೌಶಲ್ಯವನ್ನು ಎತ್ತಿ ತೋರಿಸುತ್ತಿರುವುದು.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿನ್ನಿಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ರವಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಿನ್ಲಿ ಶ್ರೀನಿವಾಸ್ ಬುಕ್ಸ್, ಸ್ಕೂಲ್ ಬುಕ್ ಕೊ, ಕೆನರಾ ಕೊಲೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ

ಗೆದ್ದು ನಮ್ಮ ಮರೆಯದಿರಿ

ಕಡಿದು ಬೆಟ್ಟ ಸಮಾಟು,
ಹಳೇ ಗುಡಿಗೆ ಗಿಲೀಟು,
ನೌಕರಿಯೆದೊಂದು ನೋಟು,
ಮೇಲಿನ್ನೊಂದು 'ಪ್ಲಾಟು'
ಊರಿಗೊಂದು 'ಸೀಟು'.

ಬಾವಿಯೊಂದ ನಗೆಸಿ,
ನಾಲ್ಕು ಮರವ ನೆಡಿಸಿ,
ಹರಿಜನರನು ಕೂಡಿಸಿ,
ಕೇರಿಯೊಂದ ಕಟ್ಟಿಸಿ:

ಹರನ ಜನರ ಚಿಂತೆ,
ನಿಮಗೆ ಬೇಡವಂತೆ,
ನಮ್ಮ 'ವೋಟ್' ಕಂತೆ,
ನಿಮಗೆ ಇಹುದು ಎಂತೆ.

ಜನವು ನಿಮ್ಮ ಜೋಡಿ,
ನಿಂದಿಪವು ತಲೆಬಾಗಿ,
ಇದೇ ಸಮಯ ಹೋಗಿ,
ಕೇಳಿರಿ 'ವೋಟ್' ನೀಡಿ.

ತಿರುಗಿ ದೇಶ ಪೂರ್ತಿ,
ಪಡೆಯೆ ಜನದಿ ಕೀರ್ತಿ,
ಕಾದಿಹುದು ನಿಮ್ಮ ಸತಿ,
ಮುಂದಿನ ರೀವಿಗೆ ಭರ್ತಿ.

ಬೇಡ ನಿಮಗೆ ತಂತಾಮರಿ,
ನೀಡಿ ಭಾಷಣ ಬರಾಬರಿ
ಕಾರ ಭೇಟ್ ಧರಾಂದುರಿ
ಎಣಿಸಿ ವೋಟ ಸರಾಸರಿ.

—'ಸಿರಿಪತಿ'

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ನರಭಕ್ಷಕ ಬಕಾಸುರ

(೨ನೇ ಪುಟದಿಂದ)

ಹನ್ನೆರಡು ವರ್ಷ ಸುಖವಾಗಿ ಕಳೆದು ಬಿಡುತಿತ್ತು. ಪುಣ್ಯಕರಿಯಿಂದ ಹೊಟ್ಟೆ ತುಂಬಿಸುತ್ತಿದ್ದಾರೆ. ಹುಚ್ಚರು! ಹುಚ್ಚರು!" ಎಂದ ಮತ್ತೊಬ್ಬ.

"ಹಾಗನ್ನಬಾರದಯ್ಯಾ. ಆಪತ್ಕಾಲದಲ್ಲಿ ಒಬ್ಬರನ್ನು ಕಾಪಾಡಲು ತಮ್ಮನೇ ಹುಟ್ಟಬೇಕೇ—ಅಹಾ!— ಸವ ರ್ಷಣೆ ಮಾಡುವವರಿಗೆ... ಆಹಾ! ಉತ್ತಮೋತ್ತಮ ಲೋಕಗಳಂಟೂ ಅಂತೆ... ಆಹಾ!— ದೊಡ್ಡವರು ಹೇಳುತ್ತಾರೆ! ಬಿಹಾ! ಬಿಬಿ ಚಕ್ರವರ್ತಿ—ಆಹ!'

ವೇದಾಂತಿಯು ವೈಜ್ಞಾನಿಕ ಭಾಷಣ ವಾಗುವ ಮೊದಲೇ, ತಾಳ ತಂಬಟೆ, ಮೇಳ ವಾದ್ಯಗಳ ಕಲರವವು ಕೇಳತೊಡಗಿತು ಎಲ್ಲರೂ ಕಿವಿಗೊಟ್ಟು ಕೇಳುತಿದ್ದಾಗ, ಭಟನೊಬ್ಬ ಓಡೋಡುತ್ತಾ ಬಂದು "ಮುಗಿದೇ ಹೋಯ್ತು! ಮುಗಿದೇ ಹೋಯ್ತು!" ಎಂದ ತೇಕುತ್ತಾ.

ಏನಾಗಿ ಹೋಯಿತೆಂದು ತಿಳಿಯುಕೊಳ್ಳಲು ರಾಜನಿಗೆ ಬಹಳ ವೇಳೆ ಹಿಡಿಯುತ್ತಿರಲಿಲ್ಲ. ಭಟನು ಸರಿಯಾಗಿ ಮಾತಾಡುವ ಸ್ಥಿತಿಯಲ್ಲಿರಲಿಲ್ಲ ಅವನ ಬುದ್ಧಿ ತಲೆಯೊಳಗೇ ಇತ್ತೋ ಎಲ್ಲಾದರೂ ಜಾರಿ ಹೋಗಿತ್ತೋ! ಅಂತೂ ಕೊನೆಗೆ ತಿಳಿಯಿತು. ಬಕಾಸುರನು ಸತ್ತನೆಂದೂ, ಅವನಿಗೆ ಆಹಾರವಾಗಿ ಅದಿನ ಹೋದ ಹುಡುಗನೇ ಒಂಟೆಯಾಗಿ ಒಕಾಸುರನನ್ನು ಕೊಂದನೆಂದೂ ಕೇಳಿದಾಗ, ರಾಜನ ಬುದ್ಧಿಯೂ ತಲೆಯಿಂದ ನುಸುಳಿಕೊಂಡು ಹಾರಿಹೋದ ಹಾಗಾಯಿತು.

"ಒಬ್ಬ ಹುಡುಗನ ಕೈಯುಸ್ಸಿ ಸಾಯಿಸಿ ವಂಥ ರಾಕ್ಷಸನ ಬಾಯಿಗೆ ಎಷ್ಟು ಮಂದಿಯ ಪ್ರಾಣವನ್ನು ಬಲಿಕೊಟ್ಟೆವಲ್ಲಾ!" ಎಂದ ಅಜ್ಞಾನಿ ತನಗೆ ತಾನೇ ಹೇಳಿಕೊಂಡನಂತೆ.

"ರಾಕ್ಷಸನ ಕೈಯಲ್ಲೇನಿದೆ ಸ್ವಾಮಿ! ಅವನೊಬ್ಬ ನಿಮಿತ್ತ ಮಾತ್ರ! ನಾನು ಯಾವಾಗಲೂ ತಲೆತಲೆ ಚಚ್ಚಿಕೊಂಡು ಇದೇ ಮಾತನ್ನು ಹೇಳುತಿದ್ದೇನೆ. ನಮ್ಮ ಗ್ರಹಚಾರಗಳಿಗೆ ನಾವು ಬರೆದಿಟ್ಟಿತ್ತು ಹೀಗೆ! ಈಗ ಅವನೇ ಸತ್ತನೆ! ಅವನಾಯುಷ್ಯ ಮುಗಿಯಿತೂ, ಸತ್ತ!" ಎಂದ ವೇದಾಂತಿ, ವಿಧಿವಿಲಾಸವನ್ನು ಬಾಳೇಹಣ್ಣು ಸಿಪ್ಪೆ ಸುಲಿದ ಹಾಗೆ ತೋರಿಸುವವನಂತೆ.

"ಸಫೆ ನುಗಿಯಿತು!" ಅಂದ ರಾಜ. ತಟಕ್ಕನೆದ್ದು ಎಲ್ಲರೂ ಹೊರಟು ಹೋದರು. ಎಲ್ಲರಿಗೂ ಒಲ್ಲಿಂದ ಓಡಬೇಕೆಂಬ ಸ್ಪಷ್ಟ ಚತುರವಿತ್ತು.

ಬೀದಿಯಲ್ಲಿ ಸರನೂನಂದನೇ ತಿಳಿಸುತ್ತಿತ್ತು. ನಗರದ ಪ್ರಜೆಗಳೆಲ್ಲರೂ ಬೀದಿಯಲ್ಲೇ ಇದ್ದರು. ಬಕಾಸುರನನ್ನು ಕೊಂದ ಹುಡುಗನನ್ನು ಜನರೆಲ್ಲಾ ಕೂಡಿ ಮೆರವಣಿಗೆ ಮಾಡಿಸುತ್ತಿದ್ದರು. ಸ್ತ್ರೀಯರು ಆರತಿ ಎತ್ತುತ್ತಿದ್ದರು. ಹೂಗಳನ್ನು ಚೆಲ್ಲುತ್ತಿದ್ದರು. ಮುದುಕರೆಲ್ಲ ಆನಂದಬಷ್ಪ ಸುರಿಸುತಿದ್ದರು. ಮಕ್ಕಳು ಹಾಡುತ್ತಿದ್ದರು.

"ಕೇಳಿದೆಯೇನೋ! ಆಪತ್ತಿನ ರಾಕ್ಷಸನನ್ನು ತುಳಿದೇ ಕೊಂದನಂತೆ! ಕಾಲಿಗೆ ಮಾತ್ರ ಸ್ವಲ್ಪ ರಕ್ತವಾಗಿದೆ, ಕೈಗೆ ಮಣ್ಣು ಕೂಡಾ ನೋಕಿಲ್ಲ!"

"ಇವನು ಮನುಷ್ಯನಲ್ಲಪ್ಪಾ, ಸುಳ್ಳು! ಯಾರೋ ಗಂಧರ್ವ! ಸಾವಿರಾನ್ನ ಮನುಷ್ಯರಿಂದ ಆಪ್ಪ ದಷ್ಟದ ರಾಕ್ಷಸನನ್ನು ಕೊಲ್ಲಲಾಯಿತೇ ಕೈಯಲ್ಲಿಂದು ಕೋಲು ಕಡ್ಡಿನೆರಾ ಇಲ್ಲಿದೆ!"

"ಆಸಲು ಈ ಹುಡುಗ ಯಾರೋ? ಯಾವ ಊರೋ ಯಾರಿಗೂ ತಿಳಿಯದು. ಆದೇ ವಿಚಿತ್ರ!'

"ತಕ್ಕದ್ದುತ! ಈ ಪಾಪದ ರಾಕ್ಷಸನನ್ನು ಕೊಲ್ಲುತ್ತಾನೇ ಅಂತ ಇವನ ತಾಯಿಗೆ ಮೊದಲೇ ಗೊತ್ತಿತ್ತಂತೆ.'

"ನಿನಗೊಂದು ಹುಚ್ಚ! ಆ ವಿಷಯ ರೂಢಿ ಮಾಡಿಕೊಳ್ಳನೆ, ಎಂಥ ಧೈರ್ಯದ ತಾಯಿಯಾದರೂ ಸ ವಿನ ಬಾಯಿಗೆ ಮಗನನ್ನು ಕಳ ಹಿಸಿಯಳಳಿ? ಏನೋಪ್ಪ!"

"ಆಯಿತು ಹೋಯಿತ ! ಯಾಕೆನ್ನು ಮಾತು! ನನ್ನ ನಗರಕ್ಕೆ ಹಿಡಿದ ಸೀಡೆ ಬಿಟ್ಟು ಹೋಯಿತು. ಇನ್ನು ನಾವು ಸುಖವಾಗಿ ನಿದ್ರೆ ಮಾಡಬಹುದಲ್ಲ!"

ಂ ಂ ಂ

ಚಮನನ ಮನೆಯಂದರ ಮನಸ್ಥಿತಿ ವರ್ಣನಾತೀತವಾಗಿತ್ತು. ತನ್ನ ಮನೆಯ ಕ್ಷರುವ ಬ್ಯಾಹ್ಮಣಾಂತರನು ಬಕಾಸುರನನ್ನು ಕೊಂದನೆಂಬ ವಾರ್ತೆಯನ್ನು ಕೇಳುತ್ತಲೇ, ಆ ದಂಪತಿಗಳಬ್ಬರೂ ಕುಂತಿಯ ಕಾಲ್ಗಳ ಮೇಲೆ ಬಿದ್ದ. "ಅಮ್ಮಾ! ನಮ್ಮ ತಪ್ಪುಗಳನ್ನು ಕ್ಷಮಿಸು. ನೀನು ಯಾವ ದಿವ್ಯಾಲೌಕಿಕ ತಾಯಿಯೋ, ಪಾರ್ವತಿ ದೇವಿಯೋ ತಿಳಿಯದೆ ನಿನ್ನನ್ನು ಸಾಮಾನ್ಯ ಮನುಷ್ಯರಂತೆಯೇ ನೋಡಿದೆವು. ಮಹಾಪಚಾರವಾಯಿತು! ನೀವೆಲ್ಲಾ ದೇವತೆಗಳು! ಸಂದೇಹವೇ ಇಲ್ಲ" ಎಂದು ಬಹಳವಾಗಿ ಪರತಪಿಸಿದರು.

"ಇಲ್ಲ ಅಣ್ಣಯ್ಯಾ ನಾವೂ ನಿಮ್ಮ ಹಾಗೇ ಮನುಷ್ಯರೇ. ನೀವು ನಮ್ಮನ್ನು ನಿಮ್ಮ ಹಾಗೇ ಎಣಿಸಿಕೊಳ್ಳಿರಿ, ನನ್ನ ಮಕ್ಕಳು ಪ್ರಜ್ಞಾವಂತರು. ಶಕ್ತಿವಂತರು. ಹೊರತು ಮತ್ತೇನೂ ಇದರಲಿಲ್ಲ." ಎಂದಳು ಕುಂತಿ.

ಆ ರಾತ್ರಿ ಚಯನರ ಮನೆ ಸಂಕೀರ್ತನೆಯಿಂದ ತುಂಬಿ ಹೋಯಿತು ನಗರದಲ್ಲಿ ಯಾರಿಗೂ ನಿದ್ರೆ ಇಲ್ಲ. ಉತ್ಸವದ ಗುಂಪಿನಂತೆ ಜನರು ಒಂದು ಒಂದು ಭೀಮನನ್ನು ನೋಡಿ ನೋಡಿ ಹೋಗುತಿದ್ದರು

ಆ ರಾತ್ರಿ ರಾಜನಿಗೂ ಮಂತ್ರಿಗೂ ಕೂಡಾ ನಿದ್ರೆ ಇಲ್ಲ ಅವರಿಬ್ಬರೂ ಪ್ರಜಾರ ನಾಗರದಲ್ಲಿ ವೇಷಗಳಿಂದ ಓಡಿ ಕಾಣದೆ ಒಡೆದುಕೊಳ್ಳುತ್ತಿದ್ದರು.

"ಹೋಯ್ತು! ನಮಗಿದ್ದ ಸ್ವಲ್ಪ ಆಧಾರವೂ ಹೋಯಿತು!" ಎಂದ ರಾಜ.

"ಇನ್ನು ನನ್ನ ರಕ್ಕಸಗಣ ಪಿಜ್ಜೂಂಭಿಸುತ್ತಾರೆ" ಎಂದ ಮಂತ್ರಿ

"ನನ್ನ ಪ್ರಜೆಗಳೇನನ್ನನ್ನು ನಾಯಿಗೂ ಕೀಳಾಗಿ ಕಾಣುತ್ತಾರೆ!'

"ಅಷ್ಟೆ ದೊಡ್ಡ ರಾಕ್ಷಸನು ಈ ಪೋರನ ಕೈಯುಸ್ಸಿ ನಾಯಿಗಿಂತಲೂ ಹೀನಾಯವಾಗಿ ಸಾಯುತ್ತಾನಂದು ಯಾರಿಗೆ ಕಂಡಿತ್ತು!"

ಇನ್ನು ಚಯನನೇ ಪೆನೇ ಹಾಗೆ ಒಂದು ಸೇರಿದನಲ್ಲ! ರಾಕ್ಷಸನಿಗಾಗಿ ನಾವು ಇಷ್ಟೆಲ್ಲಾ ಮಾಡಿದ್ದು ಯಾಕೋ? ಎಲ್ಲರೂ ಅಕ್ಷರ್ಯ ಪಡುವ ಹಾಗಾಯಿತು!"

"ಅಚ್ಚರ್ಯಪಟ್ಟು ಸುಮ್ಮನಿದ್ದಾರೇ ನಮ್ಮ ಮುಖವಿಲ್ಲೇ ಕೇಳಿಯಾರಲ್ಲ?"

"ಹೀಗಾತೀತೆಂದು ಒಂದು ಮೊದಲೇ ತಿಳಿದಿದ್ದರೆ, ಒಂದು ಹತ್ತು ಮುಂದಿಯೊಂದಿಗೆ ಹೋಗಿ ನಾನೇ ಅವನನ್ನು ಕೊಂದು ಬಿಸುತಿದ್ದೆವು!"

"ರಾಕ್ಷಸನನ್ನು ಕೊಂದವಂಬ ಹೆಸರಾದರೂ ಉಳಿಯುತಿತ್ತು".

"ಇನ್ನೀ ನಗರದಲ್ಲಿ ನಾವು ಮುಖವೆತ್ತಲು ಸಾಧ್ಯವಿಲ್ಲ."

"ಈಗಾದರೂ ನಿಜವನ್ನೆ ಸುಳ್ಳಾಗಿ ಮಾಡಲು ಏನಾದರೂ ಉಪಾಯವುಂಟೆ?"

"ಈ ಕೊಂದವನು ಮನುಷ್ಯನೆಲ್ಲವೆಂದು ಪ್ರಚಾರ ಮಾಡಿದರೇ?"

"ಈ ಪ್ರಚಾರ ಪ್ರಜೆಗಳೇ ಮಾಡುತಿದ್ದಾರಲ್ಲ ಜನರ ವೇಲಿನ ಗೌರವದಿಂದ."

"ಅವನನ್ನೆ ರಾಜನನ್ನಾಗಿ ಮಾಡುತ್ತಾರೆ ಖಂಡಿತ!"

"ನಮ್ಮ ಅಜ್ಞಾನಿ ಹೇಳಿದ ಹಾಗೆ ಈ ಹುಡುಗನನ್ನು ಭೋಜನಕ್ಕೆ ಕರೆದು ವಿಷ ಹಾಕಿ ನಾವೇ ಕೊಂದು ಬಿಟ್ಟರೋ?"

"ಆಗ ಬಹುದಾದರೂ, ಅದು ಕೂಡಾ ನಮ್ಮ ಸೋಲೆಯೇ ತಿರುಗಿದರೆ?'

"ಒಂದು ಉಪಾಯ"

"ಏನದು"

"ಇವನು ಅವನನ್ನೂ ಮೀರಿದ ರಾಕ್ಷಸನೆಂದು ಪ್ರಚಾರ ಮಾಡಿಬಿಡಬೇಕು'

"ಆದು ಸಾಧ್ಯವೆ?"

"ನಗರದೊಳಗೆ ದಿನಾ ಒಬ್ಬೊಬ್ಬನನ್ನು ಕೊಂಗು ತಾಕಿ, ಆದು ಇವನ ಕೆಲಸವೇ ಅಂದರೆ ಸರಿ!"

"ಆಹ! ದಿವ್ಯವಾದ ಆಲೋಚನ!

ಂ ಂ ಂ

ಬೆಳಗಿಂಜಾವದಲ್ಲಿ ನಗರದ ಪದ್ದಡಗಿನ್ತಾ ಚಯನನ ಸುನಿಯವರಗೆಲ್ಲಾ ಆಗ ತಾನೇ ನಿದ್ರೆ ಆವರಿಸಿತ್ತು.

ಕುಂತಿ ತನ್ನ ಮಕ್ಕಳನ್ನು ಕರೆತು "ಮಕ್ಕಳೆ! ನಾವು ಇಲ್ಲಿಂದ ಹೊರಡುವ ಹೊತ್ತು ಬಂತು. ಈ ಒಕಾಸುರನ ಸಾವಿನಿಂದ ನಾವು ಬಚ್ಚಿತ್ತೇವೆಂದು ಹುಸ್ಸಾಸಾರವರಾಗಿನೆ ಹಿಡಿದು ಬಿಡುತ್ತಾರೆ ನಾವೇ ಊರಿಗೆ ಬಂದುದ್ದನ್ನು ಏನೋ ಒಂದಿಷ್ಟು ಉಪಕಾರ ಉಪಕಾರವೇ ಮಾಡಿದ ಹಾಗಾಯಿತು. ಆದರೆ ಇನ್ನು ನನಗೆ ಈ ಊರು ಹಿಡಿದು ಬರದು. ವಿಳಿ" ಎಂದಳು.

ಧರ್ಮರಾಜ, ಭೀಮ, ಅರ್ಜುನ, ನಕುಲ ಸಹದೇವರು ತುದಿಗಾಲಿನಲ್ಲಿ ನಿಂತಿಯುತ್ತ ಹೊರಕ್ಕೆ ಹೊರಟರು. ಕುಂತಿ ಅವರ ಹಿಂದೇ ಇದ್ದಳು

ನಗರದಲ್ಲೆಲ್ಲಿಯೂ ಸದ್ದಿಲ್ಲ. ಬೀದಿಗಳಲ್ಲಾ ನಿರ್ಜನವಾಗಿವೆ ಕಾವಲಿನವರು ಕೂಡಾ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದರು.

ಕತ್ತಲೆಯಲ್ಲಿಯೇ ಪಾಂಡವ ಮಧ್ಯಮ ರಾಜನ ಕುಟುಂಬವು ಸಾಗಿಹೋಯಿತು.

(ಸಮಾಪ್ತ)



ಜೊಸೆ ಪುಸ್ತಕ—

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸೆ

ಇದೀಗ ಪ್ರಕಟವಾಗಿದೆ

ಬೆಲೆ: ರೂ. ಎರಡು

ವಿಜಯಶಿವ,

ನವಯುಗ ಪ್ರೆಸ್, ಉಡುಪಿ.

REGD. No. B. G. 176
LICENCE No. 31
Licensed to Post without Prepayment

ಬಡತನವೇ ಮುಖ್ಯ ಕಾರಣ

(೧ನೇ ಪುಟದಿಂದ)

ಆಹ್ವಾನಿಸಿದ್ದರು. ಆದು ಅಕ್ರಮ ಮತ್ತು ಸಂವಿಧಾನದ ೧೫(೪)ನೆ ಕಲಂಗೆ ವಿರೋಧಿಯೆಂದೀಗ ತೀರ್ಪು ಹೊರಟಿದ್ದು ನಿಜ ಲಿಂಗಪ್ಪ ಸರಕಾರಕ್ಕಾದ ಪ್ರಥಮ ಮುಖ ಭಂಗವೆನ್ನಲೇಬೇಕು.

ಪರಿಶಿಷ್ಟರು ಬೇರೆಯೆಲ್ಲವೆ?

ಹಿಂದುಳಿದ ವರ್ಗಗಳ ಆಯೋಗ ಮತ್ತು ಪರಿಶಿಷ್ಟ ಜಾತಿ ಹಾಗೂ ಜನಾಂಗಗಳ ಸಾಮಾಜಿಕ ಸ್ಥಿತಿಗತಿ ಪರಿಶೀಲನಾ ಆಯೋಗಗಳನ್ನು ರಾಷ್ಟ್ರಪತಿಗಳು ನೇಮಿಸಿದ್ದರು. ಕರ್ನಾಟಕದ ರಾಜ್ಯ ಸರಕಾರವೂ ನಾಗನ ಗೌಡ ಸಮಿತಿಯನ್ನು ರಚಿಸಿ ಹಿಂದುಳಿದ ವರ್ಗವಿಭಜನೆಯಲ್ಲಿ ಸಲಹೆ ನೀಡುವಂತೆ ಕೇಳಿಕೊಂಡಿತ್ತು. ಶತಶತಮಾನಗಳಿಂದ ಜಾತೀಯ ಆಧಾರದ ಮೇಲೆಯೇ ಸಾಮಾನ್ಯವಾಗಿ ಸಾಮಾಜಿಕ ಸ್ಥಾನಮಾನಗಳನ್ನು ಕೊಡಲಾಗುತಿದ್ದುದನ್ನೆ ಆವು ನೆನೆದು, ಜಾತಿಯೇ ಹಿಂದುಳಿಯುವಿಕೆಯ ಮಾನದಂಡವೆಂದು ತಿಳಿದುವು. ಆದುದರಿಂದ, ಸಮಿತಿಯು ಮಾಡಿದ ವರ್ಗೀಕರಣ ಹಾಗೂ ಆದು ಸ್ವೀಕರಿಸಿದ ಹಿಂದುಳಿದ ಸಮಾಜಗಳ ಗಣನೆಗಳು ವರ್ಗಗಳನ್ನು ಜಾತಿಗಳೊಂದಿಗೆ ಸಮೀಕರಿಸಿವೆ. ಆದರೆ ಸಂವಿಧಾನದ ೧೫ (೧) ಮತ್ತು ೨೯ (೨) ನೆ ಕಲಂಗಳಿಂದ್ದರಿಸಿ ಸಲಾಗುವ ಮೂಲ ಭೂತ ಹಕ್ಕುಗಳು ೧೫ (೪) ನೆ ಕಲಮಿನ ವೇರೆಗೆ ಅನುಮತಿಸಲಾದ ವಿಶೇಷ ಅವಕಾಶದ ಕ್ರಮ ಬದ್ಧತೆಗೆ ಬಾಧಕವಾಗಲಾರದು.

ಕಲಮಿನ ಸದುದ್ದೇಶ

ಸಂವಿಧಾನದ ೧೫ (೪) ನೆ ಕಲಮಿನ ನ್ವಯ ಹಿಂದುಳಿದವರು ಎಂದರೆ ಯಾರು? ಪರಿಶಿಷ್ಟ ವರ್ಗ ಹಾಗೂ ಜನಾಂಗಗಳಿಗೆ ಸಮಾನವಾದವರು ಮಾತ್ರ. ಕೆಲವು ಹಿಂದುಳಿದವರನ್ನು ಅವರ ಸಾಲಿನಲ್ಲಿ ಸೇರಿಸುವ ಅವಕಾಶ ಮಾತ್ರ ರಾಜ್ಯ ಸರಕಾರಕ್ಕೆಯಿರೆಯೆಂದೂ ಅವರ ಹಿಂದುಳಿಯುವಿಕೆಯನ್ನು ಪರಿಶಿಷ್ಟ ವರ್ಗ ಜಾತಿಯವರೊಡನೆ ಹೋಲಿಸ ಬೇಕೆಂದೂ ಈ ಕಲಂನ ಆಶಯವಿರುತ್ತದೆ. ಸಮಾಜದಲ್ಲಿನ ಹೆಚ್ಚು ಮುಂದುವರಿದವರಿಗಿಂತ ಹಿಂದಿರುವ ಹೂವುದೇ ವರ್ಗಕ್ಕೆ ವಿಶೇಷ ರಕ್ಷಣೆ ನೀಡಬೇಕೆಂದು ಇದರ ಅರ್ಥವಲ್ಲ. ಒಂದು ವೇಳೆ ಇದೇ ಆದರ ಅರ್ಥವಾದರೆ, ಹಿಂದುಳಿದವರ ಸಂಖ್ಯೆಯೇ ಹೆಚ್ಚಿ ಹೋದೀತು. ಹಿಂದುಳಿಯುವಿಕೆಯು ಶೈಕ್ಷಣಿಕ ಮತ್ತು ಸಾಮಾಜಿಕವಾಗಿರಬೇಕು; ಕೇವಲ ಒಂದರಲ್ಲಿ ಮಾತ್ರವಾದರೆ ಸಾಲದು. ಹಿಂದುಳಿದ ನಾಗರಿಕರ ವರ್ಗೀಕರಣಕ್ಕೆ ಜಾತೀಯ ಆಧಾರವಾಗಿದ್ದರೆ, ಅದು ಅಸಮಂಜಸವೆನಿಸುವುದು. ಮತ್ತು ಜಾತೀಯ ಪದ್ಧತಿಯನ್ನು ನಿರಂತರವಾಗಿ ಮುಂದುವರಿಸುವ ಗಂಡಾಂತರ ಒದಗುವುದು. ಸಂವಿಧಾನದ ಆಶಯ ಹೀಗೆ ಎಂದಿಗೂ ಇರಲಾರದು. ಹಿಂದುಳಿದ ಹಿಂದುಗಳ ವಿಷಯದಲ್ಲಿ ನಾಗರಿಕರ ವರ್ಗವೊಂದರ ಸಾಮಾಜಿಕ ಹಿಂದುಳಿಯುವಿಕೆಯನ್ನು ಗೊತ್ತುಮಾಡುವಾಗ ಜಾತಿಗಳನ್ನು ಸುಸಂಗತ ಅಂಶವೆಂದು ಗಣನೆಗೆ ತಂದುಕೊಳ್ಳಬಹುದಾದರೂ ಅದನ್ನೇ ಒರೆಗೆಲ್ಲಿಂದು ತಿಳಿಯಬಾರದು. ಬಡತನವೇ ಇದಕ್ಕೆ ಕಾರಣವೆಂದು ವಿಶ್ಲೇಷಣೆಯಿಂದ ತಿಳಿಯುತ್ತದೆ. ಅತ್ಯಂತ ಬಡತನವಿರುವ ನಾಗರಿಕರ ವರ್ಗಗಳು ಸಾಮಾಜಿಕವಾಗಿ ಹಿಂದುಳಿಯುತ್ತವೆ. ಅವುಗಳಿಗೆ ಸಮಾಜದಲ್ಲಿ ಸ್ಥಾನಮಾನ ದೊರೆಯದಿರುವುದರಿಂದ ಹಿಂದಿನ ಸ್ಥಾನವನ್ನೇ ಪಡೆಯಬೇಕಾಗುತ್ತದೆ. ಬಡತನದ ಮೂಲಕ ಉಂಟಾಗುವ ಸಾಮಾಜಿಕ ಹಿಂದುಳಿಯುವಿಕೆಯು ಬಡ ನಾಗರಿಕರ ಜಾತಿಗಳ ಮೂಲಕ ಮತ್ತಷ್ಟು ಉಗ್ರವಾಗಬಹುದು. ಆದರೆ ಬಡತನ ಹಾಗೂ ಜಾತಿ ಇನೆರಡೂ ಹಿಂದುಳಿಯುವಿಕೆಯನ್ನು ಆಳಿಯುವ ಅಂಶಗಳೆಂದು ಅದು ತೋರಿಸುತ್ತದೆ.

ಶಿಕ್ಷಣವೇ ಒರೆಗಲ್ಲಲ್ಲ

ಇನ್ನು ಶಿಕ್ಷಣವನ್ನು ಒರೆಗಲ್ಲಾಗಿ ಮಾಡುವಾಗ, ರಾಜ್ಯದ ಸರಾಸರಿಯಷ್ಟು, ಅಥವಾ ಅದಕ್ಕಿಂತ ಸ್ವಲ್ಪ ಕಡಿಮೆ ಶಿಕ್ಷಣ ಪಡೆದಿರುವ ಯಾವ ಜಾತಿಯನ್ನೂ ಹಿಂದುಳಿದದ್ದೆಂದು ಪರಿಗಣಿಸಲು ಸಾಧ್ಯವಿಲ್ಲ. ರಾಜ್ಯದ ಸರಾಸರಿಗಿಂತ ಕಡಿಮೆಯಿರುವವರು ಶೈಕ್ಷಣಿಕವಾಗಿ ಹಿಂದುಳಿದವರೆಂದು ಹೇಳಬಹುದು. ಯಾವ ಜಾತಿಗಳಲ್ಲಿ ರಾಜ್ಯದ ಸರಾಸರಿಗಿಂತ ಅರ್ಧದಷ್ಟು ವಿದ್ಯಾರ್ಥಿಗಳು ಇರುವರೋ ಅವುಗಳನ್ನಷ್ಟೇ ಶೈಕ್ಷಣಿಕವಾಗಿ ಹಿಂದುಳಿದವುಗಳೆಂದು ಖಚಿತವಾಗಿ ಹೇಳಬಹುದಾದುದರಿಂದ ಆ ಸಂಖ್ಯೆ ರಾಜ್ಯದ ಸರಾಸರಿಯಷ್ಟು, ತುಸು ಹೆಚ್ಚು ಮತ್ತು ಕಡಿಮೆಯಿರುವ ಜಾತಿಗಳು ಹಿಂದುಳಿದವಾಗುವುದಿಲ್ಲ. ಹಾಗಾಗಿ ಲಿಂಗಾಯತ ಮತ್ತು ಗಾಣಿಗರು ಹಾಗೂ ಮುಸ್ಲಿಮರು ಹಿಂದುಳಿದವರ ಸಾಲಿಗೆ ಸೇರುವುದು ಸರಿಯಲ್ಲ.

ಇನ್ನಾದರೂ ಸರಿಯೊಗಲಿ

ಉಚ್ಚನ್ಯಾಯಾಲಯದ ಪರಿವಾಗಿ ನ್ಯಾಯಮೂರ್ತಿ ಗಜೇಂದ್ರಗಡ ಅವರು ಮೈಸೂರಿನ ಜಾತೀಯ ಆಜ್ಞೆಯನ್ನು ಕೆತ್ತು ಹಾಕುತ್ತ ಮೇಲಿನಂತೆ ಅಭಿಪ್ರಾಯ ಪಟ್ಟರು. ೧೫(೪)ನೆ ಕಲಮಿನನ್ವಯ ಪರಿಶಿಷ್ಟ ಜಾತಿ ಮತ್ತು ಜನಾಂಗಗಳಿಗೆ ಸರಿಸಮಾನರಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮಾತ್ರ ವಿಶೇಷ ಅವಕಾಶವೀಯ ಬಹುದೇ ಹೊರತು ಈಗಿನಂತೆ ರಾಜ್ಯದ ಸೇ ೯೦ರಷ್ಟು ಜನತೆಯನ್ನು ಹಿಂದುಳಿದವರೆಂದು ಸಾರುವುದು ಸಾಧ್ಯವಿಲ್ಲ ಆದುದರಿಂದ ಈ ಆಜ್ಞೆಯು ಮೇಲಿನ ಕಲಮಿಗೆ ಅನ ಗುಣವಾಗಿಲ್ಲ.

ಜಾತೀಯ ಆಧಾರವನ್ನು ಹಿಡಿದು ಹಿಂದುಳಿದವರ ಯಾದಿ ತಯಾರಿಸುವುದನ್ನು ಹಿಂದಿನಿಂದಲೂ ಬುದ್ಧಿ ಜೀವಿಗಳು ವಿರೋಧಿಸುತ್ತ ಬಂದಿದ್ದಾರೆ. ಆರ್ಥಿಕವಾಗಿ ಹಿಂದುಳಿದವರು ಸಾಮಾಜಿಕವಾಗಿ ಮುಂದೆ ಶೈಕ್ಷಣಿಕವಾಗಿ ಹಿಂದುಳಿಯುವ ಸಂದರ್ಭ ಹೆಚ್ಚು ಎಂಬುದರಿಂದ ಆರ್ಥಿಕ ಮಾನದಂಡವನ್ನೇ ಇದಕ್ಕೆ ಬಳಸಬೇಕು ಎಂಬುದಾಗಿ ಅವರು ಹೇಳುತ್ತ ಬಂದಿದ್ದಾರೆ. ಈಗ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಹೆಚ್ಚು ಮಟ್ಟಿಗೆ ಈ ಅಭಿಪ್ರಾಯವನ್ನೇ ಸಮರ್ಥಿಸುವಂತೆ ತೋರುತ್ತದೆ. ಆದುದರಿಂದ ಇನ್ನಾದರೂ ನಮ್ಮ ಸರಕಾರ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡು, ನಿಜವಾದ ಹಿಂದುಳಿದವರನ್ನು ಮುಂದೆ ತರುವಲ್ಲಿ ಮತ್ತು ಉಳಿದವರ ನಾಗರಿಕ ಅಧಿಕಾರವನ್ನುರಕ್ಷಿಸುವಲ್ಲಿ ಸಹಕಾರಿಯಾಗಿಸಲಿ

ಮಂಗೋತಿಯ ಪೂರ್ವ ಪಶ್ಚಿಮ

(೪ನೇ ಪುಟದಿಂದ)

ದಾದರೆ, ''ಮಂಗೋತಿ''ಯೆಂಬುದೇ ನಮ್ಮ ದೇಶದ ರಾಜಕಾರಣಿಗಳಿಗೆ ಸರಿಹೊಂದುವ ಹೋಲಿಕೆಯೂಗಬಹುದು.

೦ ೦ ೦

'ಮಂಗೋತಿ'ಯೆಂದರೆ ಎಂತಹ ಸ್ತ್ರೀಣಿ? ಆದು ಚತುಷ್ಪಾದವೆ? ಪಕ್ಷಿಯಂತೆ ದ್ವಿಜವೆ? ಆದರ ರೂಪ ಲಾವಣ್ಯಗಳು ಹೇಗೆ? ಎಂದು ಮುಂತಾದುವುಗಳ ಬಗ್ಗೆ ಜಿಜ್ಞಾಸೆ ಯೇಳುವುದು ಸ್ವಾಭಾವಿಕ. ಸುರಾಣಗಳ ಕೆನ್ನರ, ಕಿಂಪುರುಷ, ನರ ಹರಿಯರಂತೆ, ಐಗುಪ್ತರ ನರವೃಷಭಂತೆ, ಕ್ರೀಟನ ಸಂಜ್ಞಾನಾರಿಯಂತೆ ಆಧುನಿಕ ಭಾರತದ ಈ 'ಮಂಗೋತಿ'ಗಳು ರಾಜಕಾರಣದ ಮೂಗುತಿಗಳೆನಿಸಿವೆ. ತಲೆಸಿಂಹ, ದೇಹ ನರನಂತಿರುವವನು ನರಹರಿಯೆಂದು ಕರೆಯಲ್ಪಟ್ಟಂತೆ ನಮ್ಮ 'ಮಂಗೋತಿ'ಯ ತಲೆ ಮಂಗನಂತೆ, ದೇಹ ಓತಿಯಂತೆ. ತಲೆ-ದೇಹಯೆಂದರೆ ವಾಚ್ಯಾರ್ಥವಲ್ಲ, ವ್ಯಂಜನಾರ್ಥವೂ ಅಲ್ಲ ಅದು ಕಾವ್ಯ ಜೀವವಾದ ಧ್ವನಿ. ತಲೆಯೆಂದರೆ ಬುದ್ಧಿ. ಮಂಗ ತಲೆಯೆಂದರೆ ಚಪಲಚಿತ್ತ; (ಚಪಲ ಚಿತ್ತೆಯವರಿಗೆ ಮಂಗಲಾಂಗಿ ಎಂದು ಹಿಂದೆಯೂ ಕರೆಯುತಿದ್ದರು. ಮಂಗನಂತೆ ಲಾಗ ಹಾಕುವ ಅಂಗಾಂಗವು ಯಾರಿಗೋ ಅವಳು ಮಂಗಲಾಂಗಿ. ಬಹು ವ್ರೀಹಿಸವೋಸ ಎಂದೊಬ್ಬ ಆಗಾಧ ಪಂಡಿತರು ವ್ಯಾಖ್ಯಾನ ಮಾಡಿದ್ದಾರೆ) ಓತಿ ದೇಹವೆಂದರೆ ವರ್ಣಪರಿವರ್ತನಾಶೀಲ ಶರೀರ. ಇದು ರಾಜಕಾರಣಿಗೆ ಅಕ್ಷರಶಃ ಒಪ್ಪುತ್ತದೆ, ಮಂಗೋತಿಗಳ ಸೃಷ್ಟಿ ಭಾರತದಲ್ಲಿ ಹಿಂದಿನಿಂದಲೂ ಇದ್ದುದರಿಂದ ಇದಕ್ಕೆ ಭವ್ಯವಾದ ಪರಂಪರೆಯಿದೆ. ದ್ವಾಪರಾಯುಗದ ಭಗವಾನ್ ಶ್ರೀಕೃಷ್ಣನೇ ಮಂಗೋತಿಯ ಮೊತ್ತ ಮೊದಲ ರೂಪ. ಆತನ ಪೀಳಿಗೆಯವರೆ ಮುಂದೆ ಭಾರತದಲ್ಲಿ ರಾಜ್ಯ ಕಟ್ಟಿದರು, ಮುರಿದರು, ದೇಶವನ್ನು ಪರಕೀಯರಿಗೆ ಕೊಟ್ಟರು; ಮರಳಿ ಕಿತ್ತುಕೊಂಡರು ಮಂಗೋತಿಯೆನಿಸುವುದು ಎಲ್ಲರಿಂದ ಸಾಧ್ಯವಿಲ್ಲ. ಅದಕ್ಕೂ ಪೂರ್ವಾರ್ಜಿತ ಸಾಧನೆ ಬೇಕಾಗಬೇಕು. ಕೇಂದ್ರ ಗೃಹಮಂತ್ರಿ ಲಾಲಬಹದೂರ ಶಾಸ್ತ್ರಿ ಮತ್ತು ಮೊಜು ಮುಖ್ಯ ಮಂತ್ರಿ ಪಟ್ಟಂಥಾನು ಪಿಳ್ಳೈ ಅವರು ಅಗಾಧ ತಪಶ್ಚರ್ಯೆಗೆಯ್ದು ಪರಮಾತ್ಮನನ್ನು ಒಲಿಸಿಕೊಂಡಿದ್ದುದಂತೆಯೇ ಈಗ ಉಚ್ಚಮಟ್ಟದ ಮಂಗೋತಿಯೆನಿಸುವಂತಾದರು. —ಗೋರಾ

ಅತಿ ಶೀಘ್ರ ಸೇವೆಗಾಗಿ

ಮಹಿಳೆಯರಿಂದಲೇ ನಡೆಸಲ್ಪಡುವ ಉಳಿತಾಯ ವಿಭಾಗ

ಅತಿ ಶೀಘ್ರ ಮತ್ತು ದಕ್ಷ ಸೇವೆಯನ್ನು ನೀಡಲು, ನಮ್ಮ ಮಂಗಳೂರು ಹಂಪನಕಟ್ಟಾ ಶಾಖೆಯಲ್ಲಿ ದಿನಾಂಕ ಆಕ್ಟೋಬರ ೧, ೧೯೬೨ರಿಂದ ಮಹಿಳೆಯರಿಂದಲೇ ನಡೆಸಲ್ಪಡುವ ಪ್ರತ್ಯೇಕ ಸೇವಿಂಗ್ಸ್ ಬ್ಯಾಂಕ್ ವಿಭಾಗವೊಂದನ್ನು ತೆರೆಯಲಾಗುವುದು. ಮಹಿಳೆಯರು ಹಾಗೂ ಮಹಿಳೆಯರು ಈ ವಿಶೇಷ ವ್ಯವಸ್ಥೆಯ ಸದುಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ.

ಡಾ. ಟಿ. ಎಂ. ಎ. ಪೈ
ಚೇರ್‌ಮ್ಯಾನ್

ಟಿ. ಎ. ಪೈ
ಮೆನೇಜಿಂಗ್ ಡೈರೆಕ್ಟರ್

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಹಿ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited Printed & Published by K. H. Shetty, at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರತಿನಿಧಿಕ ಕಥಾಸಂಕಲನ
ಮಧುವನ
ಕಿರಿಯ ಪ್ರಪಂಚದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1931 ಸ್ಥಾಪನೆ
Regd. No. B.G. 176
Vol. 42 No. 6

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 18—10—1962 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೬

ಮಿತ ದರದಲ್ಲಿ
ಕ್ಷಿಪ್ರ ಸಮಯದಲ್ಲಿ
ಉತ್ತಮ ತರಬಲ್ಲಿ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯೂ ವಿಚಾರಿಸಿರಿ
ನವಯುಗ ಪ್ರೆಸ್,
ಉಡುಪಿ

ಗಾಂಧಿ ಸೇವಾ ಪ್ರತಿಷ್ಠಾನದ

ಶಾಂತಿ ನಿಯೋಗಗಳು ಯಶಸ್ವಿಯಾದುವೆ?

ಶಾಂತಿ ಪ್ರತಿಷ್ಠಾನದ ಶಾಂತಿ ನಿಯೋಗಗಳು ಏಕ ಕಾಲದಲ್ಲಿ ಪೂರ್ವದ ರಶ್ಯ ಮತ್ತು ಪಶ್ಚಿಮದ ಅಮೆರಿಕೆಯ ರಾಷ್ಟ್ರ ಪರಿಷ್ಕರನ್ನು ಕಂಡವು. ರಶ್ಯಕ್ಕೆ ತೆರಳಿದ ಯು. ಎನ್. ದೇಬರ ಮತ್ತು ಜೆ ರಾಮಚಂದ್ರನರು ಪ್ರಧಾನಿ ನಿಕೇಟಾ ಕ್ರುಶ್ಚೇವರನ್ನು ಕಂಡು ಅಣ್ವಸ್ತ್ರ ಪ್ರಯೋಗದ ಹಾನಿಗಳನ್ನೂ ದುಷ್ಪರಿಣಾಮಗಳನ್ನೂ ಅವರ ಚಿತ್ತಭಿತ್ತಿಯಲ್ಲಿ ಪ್ರತಿಬಿಂಬಿಸಿ ಈ ನಾಗಲೇ ಮರಳಿ ಬಂದಿದ್ದಾರೆ. ಜಗನ್ನಾಯಕ ಸ್ಥಾನದಲ್ಲಿರುವ ಅಮೆರಿಕೆಯ ಅಧ್ಯಕ್ಷ ಜಾನ್ ಕೆನ್ನೆಡಿಯವರನ್ನು ಭೆಟ್ಟಿ ಮಾಡಿದ ಮಾಜಿ ಗವರ್ನರ ಜನರಲ್ ಸಿ. ರಾಜಗೋಪಾಲಾಚಾರಿ, ಬೆನಗಲ್ ಶಿವರಾವ್ ಮತ್ತು ರಂ ರಾ. ದಿವಾಕರರಿರುವ ನಿಯೋಗವು ಅವರಿಗೂ ಇವೇ ಪರಿಣಾಮವನ್ನು ತಿಳಿಯಪಡಿಸಿ, ಅಣ್ವಸ್ತ್ರ ಪ್ರತಿಬಂಧಕ್ಕೆ ಮುಂದಾಗಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿತು; ಮತ್ತೆ, ಮೆಸ್ಸಿಕೋ, ಬ್ರಿಟನ್, ಫ್ರಾನ್ ಮೊದಲಾದ ಪಾಶ್ಚಾತ್ಯ ದೇಶಗಳನ್ನೂ ಸಂದರ್ಶಿಸಿ, ಅಲ್ಲಿಯೂ ತನ್ನ ಕರ್ತವ್ಯ ಸಾಧನೆಯ ದೆಸೆಯಲ್ಲಿ ಇದು ಮುಂದುವರಿಯುತ್ತಿದೆ. ಈ ನಿಯೋಗವು ಅಮೆರಿಕನ್ ಅಧ್ಯಕ್ಷ ಕೆನ್ನೆಡಿಯವರೊಡನೆ ಉಪಯುಕ್ತ ಸಂವಾದ ಬೆಳೆಸಿತೆಂಬುದು ಸಂಶಯಾತೀತ. ಆದರೆ, ಒಂದು ಮಾತು ಮಾತ್ರ ಖಚಿತ: ಉಭಯ ನಿಯೋಗಗಳು ತಮ್ಮ ಕರ್ತವ್ಯವನ್ನು ನಿರ್ವಹಿಸಿದವಾದರೂ, ಅವು ಸಫಲವಾದವೆ? ಅಥವಾ ಸಫಲವಾಗುವ ದಿಸೆಯಲ್ಲಿರುವವೇ ಎಂಬುದು. ಮಾನವ ಹಿತಸಾಧನೆಯ ಉದ್ದೇಶದಿಂದ ಅಣ್ವಸ್ತ್ರ ಪ್ರಯೋಗವನ್ನು ತಡೆಗಟ್ಟುವುದು ಎಷ್ಟರ ಮಟ್ಟಿಗೆ ಅತ್ಯಂತಾವಶ್ಯಕವೋ, ಅದಕ್ಕೆಂತಲೂ ಹೆಚ್ಚಾಗಿ, ಈ ಗುರಿಯ ಸಾಧನೆಯು ಸಂಶಯಾಸ್ಪದವಾಗುತ್ತಿದೆ. ಜಾಯಕ ಫ್ಲೆಯರ ಮನೋಭಿಪ್ರಾಯದ ಸೂತ್ರದಿಂದಲೇ ಇದು ಸುವ್ಯಕ್ತವಾಗುತ್ತದೆ. ಅಂಗೈ ನೋಡಲು ಕನ್ನಡಿಯಾದ ಯಾಕೆ ಬೇಕು?

ಮೂಲಕ್ಕೆ ಕೊಡಲಿ

ತಾವು ಅಣುಬಾಂಬುಗಳನ್ನು ಈಗ ಪ್ರಯೋಗಿಸುತ್ತ ಇರುತ್ತಿರುವುದು ಜಗಜ್ಜನಿತವಾಗಿದ್ದರೂ, ಕೆಲವೊಂದು ಕರ್ತಗಳೆಗೊಳಪಟ್ಟು ಇಂತಹ ಸ್ತಬಂಧಕ್ಕೆ ಸಿದ್ಧರಿದ್ದೇವೆಂದು ಇಕ್ಕಡೆಯವರೂ ಸಾರುತ್ತಾರೆ. ಆದರೆ, ಈ ಕರ್ತಗಳು ಮಾತ್ರ ಏಕ ಪಕ್ಷೀಯತೆಯ. ದೋಷದಿಂದ ಆಡಕವಾಗಿವೆ. ಪ್ರಯೋಗಗಳನ್ನು ನಿಲ್ಲಿಸಿದ ನಂತರವಾದರೂ ಈ ಸಂಬಂಧದಲ್ಲಿ ಆತಾಂತರಾಷ್ಟ್ರೀಯ ಪರೀಕ್ಷಣೆ ಬೇಕೆಂದು ಅಮೆರಿಕೆ ಬಯಸಿದರೆ, ಇದು ಅನಗತ್ಯವೆಂದು ರಶ್ಯದಭಿಗ್ರಹ. ಇತ್ತೀಚೆಗೆ ನೆರವೇರಿದ್ದ ಜನೇವಾ ಸಮ್ಮೇಳನದಿಂದ ಭೂಮಿಯೊಳಗಡೆ ಮಾಡುವ ಅಣ್ವಸ್ತ್ರ ಸ್ಫೋಟದ ಪರೀಕ್ಷೆಯು ಕಡಿಮೆಯಾಗುವ ಸಂಭವವಿದೆ. ತಟಸ್ಥರಾಷ್ಟ್ರಗಳ ಸಾಲಿನಲ್ಲಿರುವ ಭಾರತ, ಮೆಕ್ಸಿಕೋ ಮತ್ತು ಸ್ವೀಡನ್‌ಗಳುಹೇಳುವಂತೆ ಹೂವುದಾದರೊಂದು ರಾಷ್ಟ್ರದಲ್ಲಿ ಭೂಗತ ಅಣ್ವಸ್ತ್ರ ಪ್ರಯೋಗದ ಪ್ರಸಂಗವು ನಡೆಯಿತೆಂದು ಸಂದೇಹ ಹುಟ್ಟುವುದಾದರೆ, ಆ ರಾಷ್ಟ್ರವು ಪರಿಶೀಲನೆ ನಡೆಸಲು ಅಸ್ಪದ ಕಲ್ಪಿಸಿಕೊಡಬೇಕು. ಆದರೆ ರಶ್ಯವು ಮಾತ್ರ ಇದಕ್ಕೆ ಸಮ್ಮತಿಸುವುದಿಲ್ಲ. ಇಂದು ಎಂಡೂ ಕಡೆಯವರು ಕೇವಲ ಒಂದು ವಿಚಾರದಲ್ಲಿ ಮಾತ್ರ ಸಹಮತವುಳ್ಳವರಾಗಿದ್ದಾರೆ. ಅಂತರಿಕ್ಷ ಮತ್ತು ಜಲರಾಶಿಯಲ್ಲಿ ನಡೆದ ಪ್ರಯೋಗಗಳ ಪರಿಶೀಲನೆ ಅನಗತ್ಯವೆಂದಿವರೆನ್ನುತ್ತಾರೆ.

ಭಾರತದ ಗೊತ್ತುವಳಿ

ಸಂಯುಕ್ತರಾಷ್ಟ್ರ ಸಂಘದ ಪ್ರಚಲಿತ ಅಧಿವೇಶನದಲ್ಲಿ ಭಾರತವೊಂದುಗೊತ್ತುವಳಿಯನ್ನು ಮಂಡಿಸಿಲಿದೆ ಮೇಲಿನೆರಡೂ ಬಗೆಯ ಸ್ಫೋಟ ಪ್ರಸಂಗಗಳನ್ನು ತಡೆಯುವಂತೆ ಕೇಳಿಕೊಳ್ಳುವುದೇ ಅದರ ಉದ್ದೇಶ. ರಾಜಾಜಿಯವರೂ ಈ ಗೊತ್ತುವಳಿಯ ಬಗ್ಗೆ ಉತ್ಸಾಹ ತಾಳಿದ್ದು, ಆದಕ್ಕೆ ಅನುಕೂಲ ಮತವು ದೊರೆಯುವಂತಹ ವಾತಾವರಣವನ್ನು ನಿರ್ಮಿಸಲು ಪ್ರಯತ್ನಿಸಿದರು. ಹಿರಿಯ ರಾಷ್ಟ್ರಗಳೂ ಇದನ್ನು ಒಪ್ಪಿಕೊಂಡವೆಂದರೆ, ವಿಶ್ವ ಸಂಸ್ಥೆಯಲ್ಲಿ ಅದು ಸ್ವೀಕರಿಸಲ್ಪಡುವುದು ಖಂಡಿತ. ಹಾಗಾದಾಗ, ಇಂದು ಅಣ್ವಸ್ತ್ರಗಳನ್ನು ಹೊಂದಿದೆ ಇರುವ ರಾಷ್ಟ್ರಗಳಲ್ಲಿ ಅಣ್ವಸ್ತ್ರ ಸಂಗ್ರಹ ನಡೆಯದಂತಾಗುವುದು ಸೂತ್ರವಲ್ಲ, ಪ್ರಯೋಗವನ್ನಾರಂಭಿಸುವ ಇಚ್ಛೆಯಿಂದಿರುವ ಫ್ರಾನ್ಸ್, ಬ್ರಿಟನ್ ಮೊದಲಾದುವುಗಳೂ ಪ್ರಯೋಗಕ್ಕೆಳಿಯದಂತೆ ತಡೆಯಾಗುವುದು.

ಅಣುಯುದ್ಧದ ಬೆದರಿಕೆ

ಆದರೆ, ಒಂದು ವಿಷಯವನ್ನು ನಾವು ಮರೆಯಬಾರದು. ಪ್ರಯೋಗ ಪರೀಕ್ಷೆಗಳಿಗೆ ತಡೆಯೊಡ್ಡಿದ ಮಾತ್ರಕ್ಕೆ ಅಣ್ವಸ್ತ್ರಗಳ ಅಪಾಯವು ದೂರವಾದಂತಾಗುವುದಿಲ್ಲ. ಇಂದು ರಶ್ಯ ಮತ್ತು ಅಮೆರಿಕೆಗಳಲ್ಲಿ ಜಗತ್ತನ್ನು ಧ್ವಂಸ ಮಾಡಲು ಸಾಕಾಗುವಷ್ಟು ಅಣ್ವಸ್ತ್ರಗಳ ಸಂಗ್ರಹವಿದೆ. ಈ ದೇಶಗಳು ಈ ಅಸ್ತ್ರಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಪ್ರಶ್ನೆ ಎದ್ದು ತೋರುತ್ತದೆ. ಇವು ಉಪಯೋಗವಾಗುವ ಅವಕಾಶವಿರುವುದೆಂದರೆ ಬರ್ಲಿನ್‌ನಲ್ಲಿ ಮಾತ್ರ ಕ್ಯೂಬಾದಲ್ಲಿ ಹೆದರಿಕೆಯಿದ್ದರೂ ಅಲ್ಲಿ ಅವು ಪ್ರಯೋಗಕ್ಕೆ ಬರಲಾರವೆಂದೇ ಎನಿಸುತ್ತದೆ. ಅಮೆರಿಕೆಯ ಸಂರಕ್ಷಣಾ ಮಂತ್ರಿಗಳು ಕೆಲವು ದಿನಗಳಿಗೆ ಮೊದಲು ಜರ್ಮನಿಯನ್ನು ಸಂದರ್ಶಿಸಿದ್ದರು. ಪತ್ರಿಕಾ ಪ್ರತಿನಿಧಿಗಳೊಡನೆ ಮಾತಾಡುತ್ತ ಅವರು ಆ ರಂಕೆಯನ್ನೂ ಹೆಟ್ಟಿಸಿದ್ದರು. ಸ್ಪಷ್ಟಿಮ ಜರ್ಮನಿಯ ನೂರ್ಗವನ್ನು ರಶ್ಯನ ರಾಗಲೀ ಪೂರ್ವ ಜರ್ಮನಿಯವರಾಗಲಿ ಪ್ರತಿಬಂಧಿಸಿದರೆ, ತಾವು ಅಣ್ವಸ್ತ್ರಗಳನ್ನು ಬಳಸಿಕೊಳ್ಳುವುದಕ್ಕೂ ಹಿಂಜರಿಯಲಾರೆವು ಎಂದವರು ನುಡಿದಿದ್ದರು. ಪೂರ್ವ ಜರ್ಮನಿಯೊಡನೆ ಒಂದು ಒಡಂಬಡಿಕೆಯನ್ನು ಈ ಸಂಬಂಧದಲ್ಲಿ ಮಾಡಿಕೊಳ್ಳುವುದಾಗಿ ಪ್ರಧಾನಿ ಕ್ರುಶ್ಚೇವರು ಹೇಳಿದ್ದುದರಿಂದ ಅವರು ಈ ರೀತಿ ಹೇಳಿಕೆ ಕೊಟ್ಟರೆಂದು ಅಭಿಪ್ರಾಯ ಪಡಬಹುದು. ಆದರೆ, ಈ ವಿಷಯ ಒಡಂಬಡಿಕೆಯಾದ ಕಾರಣವೆಂತಲೇ ಪ್ರಸಂಗವಿಕೋಸಕ್ಕೆ ಹೋಗಲಾರದು. ಬರ್ಲಿನಿಗೆ ತೆರಳುವವೊಗಳಿಗೂ ರೈಲುದಾರಿಗಳೂ ಪೂರ್ವಜರ್ಮನಿಯುಕ್ಕೆಗಳಿಗೆ ಹೋದರೆ, ಅದುಆವನ್ನು ಸ್ತಬಂಧಿಸಲು ತೊಡಗುವುದು ಮಾತ್ರ ಪರಿಸ್ಥಿತಿ ಆಂಕತದಲ್ಲಿ ನಿಲ್ಲುವುದು ಕಷ್ಟ. ಪಶ್ಚಿಮ ಬರ್ಲಿನಿಗಿದ್ದ ಹಲವು ಸೌಕರ್ಯಗಳನ್ನು ರಶ್ಯ ಮತ್ತು ಅಮೆರಿಕನರು ಮುಂದಿಟ್ಟಿದ್ದರೂ ಸ. ಜರ್ಮನರನ್ನು ಒಪ್ಪಿಕೊಂಡಿಲ್ಲ.

ಕಳೆದ ವಾರ ಸ್ವರ್ಗಸ್ಥರಾದ
ಮಹಾರಾಷ್ಟ್ರದ ರಾಜ್ಯಪಾಲ
ಡಾ| ಪಿ. ಸುಬ್ಬರಾಯನ್

ಕಾರ್ಯೋಡದಲ್ಲೂ ಹಿಂಜರಿಕೆ

ರಶ್ಯ ಮತ್ತು ಅಮೆರಿಕೆಗಳು ತೋರ್ಪಡಿಕೆಯ ಮಟ್ಟಿಗೆ ಹತ್ತಿರ ಹತ್ತಿರ ಬರುತ್ತಿರುವಂತೆ ಗೋಚರವಾಗುತ್ತಿದೆ. ಆದರೆ, ವಾಸ್ತವಿಕವಾಗಿ ಅವು ದೂರ ಸರಿಯುತ್ತಲೇ ಇವೆಯೆನ್ನುವುದು ನಿಸ್ಸಂದೇಹ. ಕುಶ್ಚೇವರು ಅಧ್ಯಕ್ಷ ಕೆನ್ನೆಡಿಯವರನ್ನು ನೋಸ್ಕೊವಿಗೆ ಆಮಂತ್ರಿಸಿದ್ದರು ಕೆನ್ನೆಡಿಯವರು ಈ ವಿಷಯದಲ್ಲಿ ಯಾವ ನಿರ್ಧಾರಕ್ಕೂ ಇದವರೆಗೆ ತಲಲಿಲ್ಲ. ಕ್ರುಶ್ಚೇವರು ನ್ಯೂಯೋರ್ಕಿನಲ್ಲಿ ನೆರವೇರುತ್ತಿರುವ ಸಂಯುಕ್ತ ರಾಷ್ಟ್ರ ಸಂಘದ ಸಭೆಗೆ ತೆರಳುವರು ಎಂಬ ಕೆಂ ವದಂತಿಯಿದೆ. ಇದು ಕಾರ್ಯರೂಪಕ್ಕೆ ಬಂದರೆ, ಆಲ್ಲಿ ಅವರು ಕೆನ್ನೆಡಿಯವರನ್ನು ಭೆಟ್ಟಿಯಾಗುವುದು ಸ್ವಾಭಾವಿಕ. ಆಗ ಅಣ್ವಸ್ತ್ರ ಪ್ರತಿಬಂಧ ಮತ್ತು ಬರ್ಲಿನ್ ಪ್ರಶ್ನೆಗಳ ಕುರಿತ ನಾಯಕದ್ವಯರಲ್ಲಿ ವಿಚಾರ ವಿನಿಮಯವಾಗಬಹುದೆಯಿದೆ ಇರದು. ಇಬ್ಬರು ಆಧುನಿಕ ಜಗನ್ನಾಯಕರೂ ಇವನ್ನು ಸಮೂಹಾನಕರವಾಗಿ ಉತ್ತರಿಸಲು ಬಯಸುತ್ತಿರುವುದು ನಿಜವೆಂದಾದರೆ, ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಲು ಮುಂದಾಗುವುದು ಅಸಂಭಾವ್ಯವಾಗದು. ಹಾಗಾಯಿತೆಂದರೆ,

(ಮೂನೇ ಪುಟ ನೋಡಿರಿ)

ಖೀರಾ
ನೀವು ತಾಳಿಕೆ—ಬಾಳಿಕೆಯನ್ನು—ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಹವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಚ್ಚಿಗೆ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗವ ಮಂಚ+ಸೋಫಾಗಳು, ಸಂದರ್ಶೋಚಿತ
ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ—ಶಾಸ್ತ್ರಿ & ಕೊ, ಹಂಪನಕಟ್ಟೆ ಮಂಗಳೂರು 1
KHIRA

ಲೇಖಾಂಕ ೫

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ನಾವು ಕೆರೆ, ಬಾವಿ, ನದಿಯೇ ಮೊದಲಾದವುಗಳಿಂದ ನೀರನ್ನು ಎತ್ತಿ ಅಥವಾ ಹಾಯಿಸಿ, ನಮ್ಮ ಜೀವನದ ಅನೇಕ ಅಗತ್ಯಗಳಿಗಾಗಿ ಉಪಯೋಗಿಸುತ್ತೇವೆ. ಹೀಗೆ ನಾವು ಉಪಯೋಗಿಸಿದ ಬಳಿಕ, ಆ ನೀರು ಅನೇಕ ರೂಪಗಳಿಂದಲೇ ಮರಳಿ ಕೆರೆ, ತೊರೆಗಳಿಗೆ ಹೋಗಿ ಸೇರುತ್ತದೆ. ಆದರೆ ನಾವು ಉಪಯೋಗಿಸುವ ಈ ನೀರು ನಮಗೆ ಜೀವಿಸುವ ವರದಾನವನ್ನು ನೀಡಿ ಆ ಬಳಿಕವೇ ತನ್ನ ಸ್ವಸ್ಥಾನವನ್ನು ಸೇರುತ್ತದೆ ಅದನ್ನೇ ಕೇರ್ತಿಶೇಷ ಪುರಂದರ ದಾಸರು— 'ಹರಿಯ ಕರುಣೆಯಿಂದ ದೊರೆತ ಸಂಪತ್ತನ್ನು ಮರಳಿ ಶ್ರೀ ಹರಿಗೇ ಅರ್ಪಿಸುತ್ತ ಬದುಕಿ ಬಾಳಿರಿ!' ಎಂದು ಹೇಳಿದ ಅವರ ವಾಣಿಗೆ ಉದಾಹರಣೆಯೊಗಿ— 'ಕೆರೆಯ ನೀರನು ಕೆರೆಗೆ ಚೆಲ್ಲೀ ವರವ ಪಡೆದವರಂತೆ ಕಾಣಿರೊ!' ಎಂದು ಹೇಳಿರುವರು.

ಸಾಹಿತ್ಯಕ್ಕೂ ಕೂಡ, ಆದು, ಕಾವ್ಯ-ನಾಟಕ ಕಥೆ-ಯಾವುದೇ ಇರಲಿ ಈ ಉದಾಹರಣೆಯನ್ನೇ ಕೊಡಬಹುದು—ಯೇಗೆಂದರೆ, ಜನಜೀವನದಿಂದಲೇ ಸಾಹಿತ್ಯ ಸೃಷ್ಟಿ ಹೊಗುತ್ತದೆ. ಆ, ಸಾಹಿತ್ಯದಿಂದಲೇ ಜನಜೀವನದ ಕಲ್ಯಾಣವಾಗಬೇಕು; ಆಗುತ್ತದೆ. ನೀರಿನಿಂದಲೇ ಸಮಸ್ತ ಜೀವಿಗಳು ಜೀವಿಸುತ್ತಿವೆ. ಜೀವಿಸುವುದಕ್ಕಾಗಿಯೇ ಜೀವಿಗಳಿಗಾಗಿಯೇ ನೀರು ಸೃಷ್ಟಿಯಾಗಿರಬೇಕು. ಜನಜೀವನದ ಘಟನೆಗಳನ್ನು ಸ್ವಾನುಭವದಿಂದ ನೋಡಿ ಅರಿತು, ಅವುಗಳ—''ಹಿತ" 'ಅಹಿತ'ವನ್ನು ಲಕ್ಷಿಸಿ ಸಾಹಿತ್ಯದ ಮೂಲಕ ಜನಜೀವನದ ಕಲ್ಯಾಣಕ್ಕಾಗಿಯೇ ಅರ್ಪಿಸುತ್ತಿರುವ ಈ ಮಹಾ ಕಾರ್ಯವು ಕವಿ ಸಾಹಿತಿಗಳಿಗೆ ವರದಾನವಾಗಿಯೇ ಲಭಿಸುವುದು.

ಮೂಸ್ಯ ರಾಜಾಜಿಯವರು ಪಡೆದ ಈ ಬಗೆಯ ವರದಾನವನ್ನವರು, ಜನಜೀವನಕ್ಕೆ ಮರು ದಾನವಾಗಿ ನೀಡಿರುವರು. ಅವರ ಇಂತಹ ದಾನಗಳಲ್ಲಿ—ವ್ಯಾಪಾರಿಗಳಿಗೆ ಸಂಬಂಧಿಸಿದ ''ಸ್ಪರ್ಧೆ" ಎಂಬ ಕತೆಯೂ, ಒಂದು.

'ಅನ್ಯಾಯೋ ಪಾರ್ಜಿತಂ ದ್ರವ್ಯಂ
ದಶವರ್ಷಾಣಿ ತಿಷ್ಠತಿ |
ಪ್ರಾಪ್ತೇತ್ವೇಕಾದಶೇ ವರ್ಷೇ
ಸಮೂಲಂ ಸವಿನಶ್ಯತಿ ॥' ಎಂಬ ಪ್ರಾಜ್ಞೇನೋಕ್ತಿಯನ್ನು ಈ ಕಥೆ ಪುಷ್ಟೀಕರಿಸುತ್ತಿದೆ. ಕಥಾತಾತ್ಪರ್ಯ ಹೀಗಿದೆ—

ಸಬೇಶ ಎಂಬವರು ಸನ್ 1925ನೇ ಇಸವಿಯಲ್ಲಿ ಮದ್ರಾಸು ನಗರದಲ್ಲಿ ಒಂದು ಕಾಫೀಪುಡಿ ಕಂಪೆನಿಯನ್ನು ತೆರೆದರು. ಆದರೆ ಮತ್ತೆ ಎರಡು ವರ್ಷಗಳಕಾಲ ಅವರು ಸಟ್ಟಕಷ್ಟ ಮತ್ತು ಹೊಂದಿದ ನಷ್ಟ ಅವರ ಜೀವನದಲ್ಲಿ ಹಿಂದೆಂದೂ ಅನುಭವಿಸಿದ ದುಃಖದ ಕಥೆಯಾಗಿ ಹೋಗಿತ್ತು! ಬಳಿಕ ಸುಬ್ಬಕುಟ್ಟಿ ಎಂಬ ಕ್ಲಾರ್ಕನನ್ನು ಹೊಸದಾಗಿ ಈ ಕಂಪೆನಿಗೆ ಸೇರಿಸಿಕೊಂಡ ಮೇಲೆ, ಸಬೇಶರ ಭಾಗ್ಯದ ಬಾಗಿಲು ತೆರೆದಂತಾಯಿತು!

ಸುಬ್ಬಕುಟ್ಟಿಯು ಕೆಲಸಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಸಬೇಶರಿಗೆ ಸುಬ್ಬಕುಟ್ಟಿಯ ಮನೆಯಲ್ಲಿ ಒಂದು ಕಪ್ ಕಾಫೀ ಕುಡಿಯುವ ಸಂದರ್ಭ ಒದಗಿತು. ಆ ಕಾಫೀ ಕುಡಿದ ಸಬೇಶರಿಗೆ, ಅದರ ರುಚಿಯನ್ನರಿತು ಬಹು ಆಶ್ಚರ್ಯವಾಯಿತು. ಆಗ—ಅವರು-ಸುಬ್ಬುಕುಟ್ಟಿಯ ತಾಯಿಯೊಡನೆ—'ಈ ಪುಡಿಗೆ ಏನು ಹಾಕಿದ್ದೀರಿ? ಇಷ್ಟು ರುಚಿ ಬರುವುದಾದರೆ, ನಮ್ಮ ಕಂಪೆನಿಯಲ್ಲೂ ನೀವು ಹಾಕುವುದನ್ನೇ ಹಾಕಬಹುದು' ಎಂದರು. ಕುಟ್ಟಿಯ ತಾಯಿ — 'ಸುಬ್ಬನೆ ಗೊತ್ತಿದೆ! ಕೇಳಿ ನೋಡಿ' ಎಂದಳು.

ಸುಬ್ಬಕುಟ್ಟಿಯು ಆ ಕಾಫಿ ಕಂಪೆನಿಗೆ ಸೇರಿದಂದಿನಿಂದಲೇ ಕಾಫೀಪುಡಿ ಉತ್ತಮವಾಗಿತ್ತು. ಸಬೇಶನು ಕುಟ್ಟಿಯೊಡನೆ ಅದರ ರಹಸ್ಯವನ್ನು ಕೇಳಿದರೂ, ಆತ ಹೇಳಿಲಿಲ್ಲ. ಆದರೆ ಕುಟ್ಟಿಯು ತನ್ನ ಮನೆಯಿಂದ ಬರುವಾಗ—ಭಾಯಿ ಮುಚ್ಚಿದ ಟಿನ್ನಿನಲ್ಲಿ ಯಾವುದೋ ವಸ್ತು? ವನ್ನು ರಹಸ್ಯವಾಗಿ ತಂದು ಸಬೇಶ ಕಾಫೀಪುಡಿಗೆ ಟಿನ್ನಿಗೆ 1 ಚಮಚೆಯಂತೆ ಬೆರೆಸುತ್ತಿದ್ದನು. ಇದೆಲ್ಲವೂ ರಹಸ್ಯವಾಗಿಯೇ ನಡೆಯುತ್ತಿತ್ತು. ಮದರಾಸಿನಲ್ಲಿ ನಟರಾಜನ ಫೋಟೋ ಇರುವ ಸಬೇಶ ಕಾಫೀ ಹುಡಿಯೆಂದರೆ, ಎಲ್ಲರಿಗೂ ಹೆಚ್ಚು ಮೆಚ್ಚು. ಇಂಗ್ಲೀಷರೂ ಕೂಡ ಈ ಕಾಫಿಯನ್ನು ಹೊಗಳುತ್ತಿದ್ದರೆಂದ ಮೇಲೆ ಮಿಕ್ಕವರ ಮಾತೇನು?

ಮದ್ರಾಸಿನ ಶ್ರೀಮಂತ ಮನೆತನದ ಹೆಂಗಸರು, 'ಕಾಫೀ ಬೀಜತಂದು ಹೇಗೆ ಹುರಿದು ಪುಡಿ ಮಾಡಿದರೂ, ಸಬೇಶ ಕಾಫಿಗೆ ಸರಿಸಮವಾಗಿ ನಿಲ್ಲಲಾರದು.!' ಎನ್ನುತ್ತಿದ್ದರಂತೆ. ಈ ಜನಪ್ರಿಯತೆಯಿಂದಾಗಿ ಸಬೇಶರ ಕಾಫಿಯು ಕಾರ್‌ಬಾರು ನಾಲ್ಕು ಪಟ್ಟು ಹೆಚ್ಚಿ ಆ ವರ್ಷ ಸಬೇಶರಿಗೆ—ಇಪ್ಪತ್ತನಾಲ್ಕು ಸಾವಿರ ರೂಪ್ಯಾ ಇನ್ ಲಾಭ ಉಳಿಯಿತು. ಈ ಉಳಿತಾಯ—ದಿಂದಾಗಿ ಸುಬ್ಬಕುಟ್ಟಿಗೆ ಮೂಹೆಯೂನ ಕೊಡುವ 250 ರೂಪ್ಯಾ ಸಂಬಳದ ಹೊರತಾಗಿ—ಅವನು ಕೇಳದೆಯೇ ಸಬೇಶರು ವಿಶೇಷ ಸಹಾಯ ನೀಡ ತೊಡಗಿದರು. ನೋಡುವವರು ಈತನು ಕಂಪೆನಿಯಲ್ಲಿ ಪಾಲುದಾರನೋ! ಹೇಗೆ? ಎಂದು ಅಸೂಯೆಪಡತೊಡಗಿದರು. ಸುಬ್ಬು ಕುಟ್ಟಿಯು ಸಬೇಶರ ಸ್ವಂತ ಕಾರಿನಲ್ಲೇ ಮನೆಗೆ ಹೋಗುವುದೂ ಬರುವುದೂ ಕೂಡ ಪ್ರಾರಂಭವಾಯಿತು. ತನ್ನ ಭಾಗ್ಯೋದಯಕ್ಕೆ ಕಾರಣನಾದ ಕುಟ್ಟಿಯ ಮೇಲೆ ಸಬೇಶರಿಗೆ ಅತ್ಯಂತ ಪ್ರೀತಿಯುಂಟಾಯಿತು.

ಆದರೆ ಕಾಲ ಕಳೆದಂತೆ ಸುಬ್ಬು ಕುಟ್ಟಿಯು ಸ್ನೇಹಿತರನೇಕರಿಗೆ—ಅಸೂಯೆ ಹುಟ್ಟಿತು. ಆದರ ಪರಿಣಾಮವಾಗಿ—ಅವರು—ಅಲ್ಲಲ್ಲಿ —'ಸುಬ್ಬು ಕುಟ್ಟಿಯು ನ್ನು ಬೇರೆಯೇ ವ್ಯಾಪಾರ ಆರಂಭಿಸುತ್ತಾನಂತೆ' ಎಂದು ಹೇಳುತ್ತ ಹಾಲಿನಲ್ಲಿ ಹುಳಿ ಹಿಂಡಿನಂತೆ, ಮಾಡಿದರು. ಈ ಸುದ್ದಿಯನ್ನು ಸಬೇಶರ ಅನೇಕ ಮಿತ್ರರು, ಸಬೇಶರ ಕಿವಿಗೂ ಹಾಕಿದರು ಇದರಿಂದ ಸಬೇಶರಿಗೆ ದುಃಖವೂ ಆಶ್ಚರ್ಯವೂ ಏಕ ಕಾಲದಲ್ಲಿ ಉಂಟಾಯಿತು. ಏಕೆಂದರೆ ಸುಬ್ಬು ಕುಟ್ಟಿಯಿಂದಲೇ ಅವರ ವ್ಯಾಪಾರ ಹೆಚ್ಚಿತ್ತು. ಕಾಫೀ ಪುಡಿಗೆ ಬೆರೆಯುವ ರಹಸ್ಯದ ವಸ್ತುವೂ ಕುಟ್ಟಿಯ ವಶವೆ ಉಳಿದು ಹೋಗಿತ್ತು. ಈ ಸ್ಥಿತಿಯಲ್ಲಿ ಕುಟ್ಟಿ ಬೇರೆ ವ್ಯಾಪಾರ ಮಾಡಿದರೆ ತನ್ನ ವ್ಯಾಪಾರ ಅಡಿ ಮೇಲಾಗುವುದೇ ಸರಿ ಎಂದು ಮುಂತಾಗಿ ಯೋಚಿಸಿದ ಸಬೇಶರಿಗೆ—ಅಂದಿನಿಂದ ಮನಃಶಾಂತಿಯೇ ಇಲ್ಲದಂತಾಯಿತು. ಈ ಅಶಾಂತಿಯು ಹೆಚ್ಚಿ ಕುಟ್ಟಿಯ ಮೇಲೂ ಆಗಾಗ ಪ್ರಭಾವ ಬೀರತೊಡಗಿದಾಗ ಕುಟ್ಟಿಗೆ — 'ಅಜ್ಜಿ! ನನ್ನ ಮೇಲೆ ಇಷ್ಟು ಪ್ರೀತಿಯಿಂದಿದ್ದ ಯಜಮಾನರು ಈಗ ಪ್ರತಿಯೊಂದು ಕೆಲಸದಲ್ಲೂ ನನ್ನ ಮೇಲೆ ಏಕೆ ಹೀಗೆ ಆಕ್ಷೇಪ ಮಾಡುತ್ತಾರೆ?' ಎಂಬ ಯೋಚನೆಯೊಡನೆ ಮನಸ್ಸಿಗೆ ಬಹಳ ಬೇಸರವಾಗ ತೊಡಗಿತು. ಇದರ ಪರಿಣಾಮವಾಗಿ ಸುಬ್ಬು ಕುಟ್ಟಿ ಆಸ್ವಸ್ಥನಾದನು ಆಗ ಆತನು ರಜೆ ಕೇಳಿದಾಗ ಸಬೇಶರು—'ಆ ಕಾಫೀಗೆ ಬೆರೆಸುವ ವಸ್ತು? ಅದರ ಗುಟ್ಟು ಹೇಳಿದರೆ ಮಾತ್ರ ನಿನಗೆ ರಜೆ ಸಿಕ್ಕೀತು! ಇಲ್ಲದಿದ್ದರೆ ಇಲ್ಲ!' ಎಂದು ಖಂಡಿತವಾಗಿ ಹೇಳಿಬಿಟ್ಟರು.

ಕುಟ್ಟಿಯು ತಾಯಿ—'ಸುಬ್ಬು! ನಿನ್ನ ಕೆಲಸ ಹೋದರೆ ಹೋಗಲಿ ನಿನಗೆ ಆರೋಗ್ಯವಾಗ ಬೇಕಾದುದು ಮುಖ್ಯ' ಎಂದಳು. ಕೊನೆಗೆ ಸುಬ್ಬಕುಟ್ಟಿಯು ಕೆಲಸದಿಂದ ಕೈತೊಳೆದೇ ಮನೆಗೆ ಹೋದನು.

ಇದಾದ ಬಳಿಕ ಕೆಲವು ಕಾಲ ಮೊತ್ರ ಕಾಫೀ ಪುಡಿಯ ಜನಪ್ರಿ

(೧೦ನೇ ಪುಟ ನೋಡಿ)

ಮತ್ತೊಂದು ಆಕರ್ಷಣೀಯ
ಉಳಿತಾಯ ಯೋಜನೆ

ರೆಕರಿಂಗ್
ಡಿಪಾಸಿಟ್ ಸ್ಕೀಮ್

ವಿಶೇಷ ಸೌಲಭ್ಯಗಳು:

- ಮಾಹೆಯೂನ ರೂ. 5/- ರಿಂದ ರೂ. 500/- ವರೆಗಿನ ಕಂತು ಕಟ್ಟುವ ರೆಕರಿಂಗ್ ಡಿಪಾಸಿಟ್ ಖಾತೆಯನ್ನು ನೀವು ತೆರೆಯಬಹುದು.
- ರೆಕರಿಂಗ್ ಡಿಪಾಸಿಟ್ ಸ್ಕೀಮಿನ ಅವಧಿಗಳು— 12, 24, 36, 46 ಮತ್ತು 60 ತಿಂಗಳುಗಳು.
- ಸಾವಕಾಶವಾಗಿ ಕಟ್ಟಿದ ಕಂತುಗಳಿಗೆ ದಂಡನೇನೂ ಕೊಡಬೇಕಾಗಿಲ್ಲ.
- ಚಕ್ರಬಡ್ಡಿ — ಸಾಲಿಯಾನಾ 4%

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸ್: ಮಂಗಳೂರು. ಆಡಳಿತ ಕಛೇರಿ: ಬೆಂಗಳೂರು.



ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಮಂಗ್ಳೂರು ಸಬ ಕೋರ್ಟ್

O. S. 176/1948
R. E. P. 46/1962

ಸುಬ್ಬಣ್ಣ ಸೋಮಯಾಜಿ — ಅರ್ಜಿದಾರ

ಮತ್ತು

ಗಣಪಯ್ಯ ಉಪಾಧ್ಯ — ನಾಗ್ಪ ಉಪಾಧ್ಯರ ಮಗ-ಉಡ್ಪಿ ತಾಲ್ಲ್ಯ, ಕಾರ್ಕಳದ ಗ್ರಾಮ-ಎದ್ರಿ.

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ—

ಮೇಲ್ಕಾಂಡ ಡಿಕ್ರಿಯಲ್ಲಿ ಯೂಕೆ ಅಮಲ್ ಜ್ಯಾರಿ ನಡಿಸಕೂಡದು ಎಂಬ ಸಬಬು ತೋರಿ ಸುವರೆ ಅರ್ಜಿದಾರನು ದಾಕ್ಲು ಮಾಡಿದ ಮೇಲ್ಕಾಂಡ ಅನುಜ್ಞಾರಿಯು ತಾ 24—10—1962ಕ್ಕೆ ಇಡೋಣಾಗಿಯದೆ. ಸದ್ರಿ ಎದ್ರಿಗೆ ಆಕ್ಷೇಪ ಹೇಳತಕ್ಕದ್ದಾಯಿದ್ರೆ ಸದ್ರಿ ಕೋರ್ಟ ಮುಂದೆ ಆ ದಿವ್ಸ 10 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಎದ್ರಿಗೆ ಈ ಮೂಲಕ ತಿಳಿಸಲಾಗಿಯದೆ.

H. Parameshwara Aithal
Advocate for Petitioner.

ಉಡ್ಪಿ, 10—10—1962.

ಜಗತ್ತನ್ನು ಗೆದ್ದರೂ

ದುರ್ಬಲತೆಯಿಂದ ಪರಾಜಿತರು

ಈ ಆಧುನಿಕ ಯುಗದಲ್ಲಿ ಬಡವ ಬಲ್ಲಿದರೆನ್ನದೆ ದೇಶಾಭಿಮಾನ ಪಟ್ಟಣಿಗರೆನ್ನದೆ ಪ್ರತಿಯೊಬ್ಬರೂ ಒಂದಲ್ಲ ಒಂದು ಚಟಕ್ಕೆ ಬಲಿ ಬಿದ್ದಿರುತ್ತಾರೆ-ಎಂದರೆ ಅತಿಶಯೋಕ್ತಿಯ ಮಾತಾಗಲಾರದು.ಒಮ್ಮೆ ಒಂದು ಅಭ್ಯಾಸವಾಗಿದ್ದುದು ಬಹಳ ಕಾಲದ ಅಭ್ಯಾಸದಿಂದ ಚಟವಾಗಿ ಪರಿಣಮಿಸುತ್ತದೆ 'ಚಟ್ಟೆ' ಮಂಡೆಲಿಯೂದಂತೆ!"

ಹೊಗೆ ಬತ್ತಿ ಸೇದುವುದು ನಾಗರಿಕ ಜನಾಂಗದ ಪ್ರಮುಖ ಚಟಗಳಲ್ಲಿ ಒಂದು. ಕಲಿತ ತರುಣರು ಅಥವಾ ನಾವು ಒಂದು 'ಜನ'-ಎಂಬ ಅಭಿವ್ಯಾಯವಿರುವವರು ಎಳೆಯುವುದು ಸಿಗರೇಟನ್ನಾದರೆ ಸ್ವಲ್ಪ ವಾಸಿಪದವರು ಸೇದುವುದು. ಬೀಡಿಗಳನ್ನು. ಹೀಗೆ ಅವರವರ 'ಡಿಗ್ನಿಟಿ'ಗೆ ಸರಿಯಾದ ತಂಬಾಕಮ್ಮವಿದೆಯೂದರೂ ಈಗ ನಾವೂನ್ಯರೂ ಸಿಗರೇಟ್ಗಳನ್ನೇ ಎಳೆಯುವುದಕ್ಕೆ ಪ್ರಾರಂಭಿಸಿದ್ದಾರೆ. ಅಂಗಡಿಯಲ್ಲೊ ಬಸ್ಸಿನಲ್ಲೋ ಕುಳಿತು ಸೈಲಿನಲ್ಲಿ ಒಂದು ಸಿಗರೇಟನ್ನೆಳೆದು ಒಮ್ಮೆ ಅತ್ತ ತ್ತ ನೋಡಿದರೆ ಅಂಥವರ ಸೀಟು ಸ್ವಲ್ಪ ಮೇಲೆ ಎಂದು ಲೆಖ್ಖ.

ಮಲ್ಲಿಗೆ ಹೂವಿನಿಂದಾಗಿ ಬಳ್ಳಿಗೂ ಕೃಯ ಎಂದ ಹೇಳುತ್ತಾರಲ್ಲ-ಹಾಗೆ-ಈ ಹೊಗೆ ಬತ್ತಿ ಸೇದುವವರ ದೆಸೆಯಿಂದ ಬೆಂಕಿ ಪೆಟ್ಟಿಗೆಗಳಿಗೆ ಒಳ್ಳೆ 'ಬಾಯಸ್ಸು' ಈಗ ಒಂದು ಬೆಂಕಿಪೆಟ್ಟಿಗೆ ಮತ್ತು ಒಂದು ಕಟ್ಟು ಬೀಡಿ ಅಥವಾ ಒಂದು ಪೇಕ್ ಸಿಗರೇಟ್ ಹೊಗೆಬತ್ತಿ ಸೇದುವವರ ಕೈಸೆಯಲ್ಲಿ ಇದ್ದೇ ಇರುತ್ತದೆ. ಬೆಂಕಿಪೆಟ್ಟಿಗೆಯಿಲ್ಲದೆಯೂ ನಿವೃತ್ತಿಮಾಡುವವರು ಇದ್ದಾರನ್ನಿ. ಅವರು ತಮಿಪ ಕುಳಿತವರ ಬಳಿ ಬಗ್ಗಿ ಅವರ ಸಿಗರೇಟ್ನಿಂದ ಬೆಂಕಿ ಹೊತ್ತಿಸಿ ಕೊಳ್ಳುತ್ತಾರೆ. ಸಿಗರೇಟು ಸಿಗರೇಟುಗಳು ಮುತ್ತು ಕೊಡುವ ಈ ದೃಶ್ಯ ನೋಡುವುದಕ್ಕೆ ಬಹಳ ಸೊಗಸಾಗಿರುತ್ತದೆ

ಹೊಗೆ ಬತ್ತಿ ಸೇದುವವರಿಗೆ ಊರಿನಲ್ಲಿರುವ ಎಲ್ಲಾ ಬೀಡಿ ಸಿಗರೇಟು ಕಂಪೆನಿಗಳ ಹೆಸರು ಮಕ್ಕಳ ಮಗ್ಗಿಯಂತೆ (ಎಂದರೆ ಕೇಳವಲ್ಲಿ ಹೇಳುತ್ತಾರೆ) ಬಾಯಿಪಾಠ. ಒಟ್ಟು ತಯಾರಾಗುವ ಬೀಡಿಯೂ ಸಿಗರೇಟುಗಳ ಸಂಖ್ಯೆಯೆಷ್ಟು, ನೆಹರೂ ದಿನಕ್ಕೆ ಎಷ್ಟು ಸಿಗರೇಟು ಸೇದುತ್ತಾರೆ ಎಂಬ ಎಲ್ಲಾ ಖಾನೇಸುಮಾರಿ ಅವರಿಗೆ ಗೊತ್ತಿರುತ್ತದೆ ಕೆಲವರಿಗೆ 'ಪ್ರಕಾಶ' ಬೀಡಿಗಳೇ ಬೇಕೆಂದಾದರ ಇನ್ನು ಕೆಲವರಿಗೆ 'ಕಟ್ಲೆರಿ' ಬೀಡಿಗಳೇ ಆಗಬೇಕು 'ಓ ಬರ್ಕ್ಲೀಯೊ? ಈಗೀಗ ಪಂಡವಯ್ಯಾ ಇದು" ಎಂದು ಹೇಳುವವರು ಕೆಲವರಾದರೆ 'ಬರ್ಕ್ಲೀಗೆ ಕೃಯ ಕಡಿಮೆಯೂದರೂ ಸಿಗ್ರೇಟು ಫರ್ಸ್ಟ್' ಎಂದು ಹೇಳುವವರು ಮತ್ತೆ ಕೆಲವರು 'ವಿಲ್ಸ್' ಆದರೆ ಮಾತ್ರ ನಾನು ಎಳೆಯುವುದು ಎಂದು ಕೆಲವರಿಗೆ ನಿಯಮವೂ ಇದೆ.

ಸಿಗರೇಟಿಗೆ ಸ್ನೇಹಕ್ಕೆ ಆಜ್ಞಾಪ್ತುವ ಅದ್ಭುತ ಶಕ್ತಿಯಿದೆ. ಯಾರಾದರೂ ಕಂಡಕ್ಟ್ರಿಗೆ ಒಂದು ಸಿಗರೇಟು ಕೊಟ್ಟು ಜೆತ್ತಾಗಿ ನಗಾಡಿ ಮಾತನಾಡಿ ಬಿಡಿ—ಮತ್ತೆ ನಿಮಗೆ ಸೀಟು ರಿಸರ್ವೇ ಕಾರ್ ಡ್ರೈವರಿಗೆ ಒಂದು ಸಿಗರೇಟು (ಬೀಡಿಯಾದರೆ ನೋಲಿಂದ ಮೇಲೆ ಎರಡು) ಕೊಟ್ಟರೆ ಮೈಲೇಜು ಎರಡಾಣೆ ಕಡಿಮೆಯಾಗುತ್ತದೆ. ಮದುವೆ ಮುಂಜಿಗಳಲ್ಲಿ ಸಿಗರೇಟು ಪೇಕುಗಳ ಖಾಲಾಟೆ ನಡೆಯುವುದನ್ನು ನೀವು ನೋಡಿರಬಹುದು ಕೆಲವರು ನೀವೊಂದು ಸಿಗರೇಟು ಕೊಟ್ಟಾಗ ಃನೋಡಿ, ನನಗೆ ಯಾವಾಗಲೂ ಎಳೆಯುವ ಅಭ್ಯಾಸವಿಲ್ಲ. ಆದರೂ ನಿಮ್ಮಂಧವರು (ಅವರು ಎಲ್ಲಿರಲ್ಲಿಯೂ ಹೇಳುವುದು ಹೀಗೆಯೇ) ಕೊಡುವಾಗ ಬೇಡವೆಂದು ಹೇಳಲಿಕ್ಕಾಗುತ್ತದೊ?—ಎಂದು ಹೇಳಿ ಅದನ್ನು ಎಳೆದು ಬಿಡುತ್ತಾರೆ. ಅವರಿಗೆ ಒಂದು ಸಿಗರೇಟು ಲಾಭವೇ ಆಸ್ತಿ. ಆದರೂ ಇದು ಸಿಗರೇಟಿನ ವಶೀಕರಣ ಶಕ್ತಿಗೂಂದು ನಿದರ್ಶನವೇ ಅಲ್ಲವೆ?

ಹೊಗೆಬತ್ತಿ ಸೇದುವವರಲ್ಲಿ ಅದ್ಭುತ ಚಮತ್ಕಾರಗಳನ್ನು ಮಾಡಿ ತೋರಿಸುವವರುಂಟು ಎಳೆದ ಹೊಗೆಯನ್ನು ಒಳಗೇ ಇಟ್ಟು ಕೆಲಸಮಯದ ನಂತರ ಹೊರಗೆ ಬಿಡುವವರು ಕೆಲವಂದರೆ ಬಾಯಿಯಲ್ಲಿ ಎಳೆದ ಹೊಗೆಯನ್ನು ಮೂಗಿನಲ್ಲಿ ಬಿಡುವವರು ಮತ್ತು ಕೆಲವರು ಮೂಗಿನಲ್ಲೇ ಸಿಗರೇಟು ಎಳೆಯುವವರೂಕೆಲವರಿದ್ದಾರೆ. ಕೆಲವರಿಗೆ ಮುಖ ಮೇಲೆ ಮಾಡಿ ಎಳೆಯುವ ಅಭ್ಯಾಸವಾದರೆ ಇನ್ನು ಕೆಲವರಿಗೆ ಮುಖ ಕೆಳಗೆ ಮಾಡಿ ಎಳೆಯುವ ಅಭ್ಯಾಸ ಒಂದು ಸೈಡಿಗೆ ನೋಡಿ ಎಳೆಯುವವರು ಬೇರೆ ಕೆಲವರು ಅಂತೂ ಈ ಸ್ಟೈಲಿನಿಂದಾಗಿ ಕೆಲವು ವೇಳೆ ಉಂಯುವ ತದಿಯನ್ನು ಬಾಯಿಯಲ್ಲಿರಿಸಿ ತುಟಿಯನ್ನೊ ಮೂಸಿಯನ್ನೊ ಕರಟಿಸಿಕೊಳ್ಳುವುದೂ ಇದೆ.

ಬಸ್ಸಿನಲ್ಲಿ ಹೊಗೆಬತ್ತಿ ಸೇದಬಾರದೆಂಬ ನಿಯಮವಿದೆಯೂದರೂ ಅದು ಬಸ್ಸಿಗೇ ಹೊರತು ಬಸ್ಸಿನಲ್ಲಿ ಕುಳಿತವರಿಗಲ್ಲ ಎಂದು ಹೊಗೆಬತ್ತಿ ಎಳೆಯುವವರ ವಾದ. ಎರಡು ಬದಿಯಲ್ಲಿ ಇಬ್ಬರು ಸಿಗರೇಟು ಹೋಮಕ್ಕೆ ತೊಡಗಿದರೆ ಮಧ್ಯೆ ಕುಳಿತ ಬಡಪಾಯಿಯ ಗತಿ ಆ ಯಮಧರ್ಮರಾಯನಿಗೆ ಪ್ರೀತಿ. ಎದುರು ಯಾರಾದರೂ ಯುವತಿಯರು ಕುಳಿತಿದ್ದರಂತೂ ಕೆಲವರು ಹೊಗೆ ಬಿಡುವುದು ಜೋರು. ಒಮ್ಮೆ ಒಬ್ಬ ಯುವಕ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ಎದುರಿನಸೀಟಿನಲ್ಲಿ ತರುಣಿಯೋರ್ವಳು ಕುಳಿತು ತನ್ನ ಜೆಡಗು ಬಿನ್ನಾಣ ಪ್ರದರ್ಶಿಸುವುದನ್ನು ನೋಡಿಆನಂದಿಸಲಾಗಲಿಲ್ಲ.ಮೆಲ್ಲಗೆ ಹೊರಗೆ ನೋಡುವನೆವ ಮಾಡಿ ಉರಿಯುತ್ತಿದ್ದ ತನ್ನ ಸಿಗರೇಟಿನ ತುದಿಯನ್ನು ಆಕೆಯ ಮೊಣಕಾಲಿಗೇ ನುರಿದುಬಿಟ್ಟ. ಆಕೆ ಇನ್ನೇನೋ ಹೇಳಬೇಕೆಂದಿರುವಾಗಲೇ ಯುವಕ ವೆರಿ ಸೋರಿ, ವೈರಿ ಸೋರಿ" ಎಂದು ಹೇಳುತ್ತಾ ಕ್ಷಮೆ ಕೋರಿದ.

ನಶ್ಯ ಜೆಳೆಯುವ ಚಟ ಈಗೀಗ ಜನಪ್ರಿಯವಾಗುತ್ತಿದೆ. ಇವರ ಜ್ಯೋತಕ ಒಂದು ಕರಜ್ಞಿಕ. ಒಂದು ಚಿಟಿಕೆ ನಶ್ಯ ಪನ್ನ ಸುಶ್ರಿಕಾಂದು ನಾಸಿಕ ರಂಧ್ರಕ್ಕೆ ಸೇರಿಸಿ ಕರಜ್ಞಿಕಾದಿಂದಮ್ಮೆ ಮೂಗನ್ನು ಒರಸಿ ಅದನ್ನು ಹೆಗಲೆಡೆಯಲ್ಲಿ ಸಿಕ್ಕಿಸಿಕೊಳ್ಳುವುದು ಇವರ ಅಭ್ಯಾಸ. ಈ ಕರಜ್ಞಿಕ ಹೆಚ್ಚಾಗಿ ಕಂದುಬಣ್ಣದ್ದಾಗಿರುತ್ತದೆ. ಕಾರಣ ಯಾವುದೇ ಬಣ್ಣದ್ದಿದ್ದರೂ ಕೆಲವೇ ಸಮಯದಲ್ಲಿ ನಶ್ಯದ ಪ್ರಭಾವದಿಂದ ಅದು ಕಂದು ಬಣ್ಣಕ್ಕೆ ತಿರುಗಿಬಿಡುತ್ತದೆ. ಹೇಗಿದ್ದರೂ ನಶ್ಯ ಜೆಳೆಯುವವರ ಮೂಗಿನ ಬಳಿ ಅವರ ಕುರುಹು ಸ್ವಲ್ಪ ಇದ್ದೇ ಇರುತ್ತದೆ. ಕೆಲವು ಸಲ ಇದರಿಂದಾಗಿ ವಿಸೆ ಇಲ್ಲದವರಿಗೆ (ಹೆಚ್ಚಾಗಿ ಹೆಂಗಸರಿಗೆ) ವಿಸೆ ಬರುವ ಕ್ರಮವೂ ಇದೆ.

ನಶ್ಯ ಎಳೆಯುವವರಿಗೆ ಯಾವ ಲೋಚನೆ ಹೊಳೆಯಬೇಕಾದರೂ ಒಂದು ಚಿಟಿಕೆ ನಶ್ಯ ಸೇರಿಸಲೇ ಬೇಕು. ಪುಡಿ ಬುರುಡೆಯಲ್ಲಿರುವ ನಶ್ಯ ಒಳ್ಳೆಯದಿದ್ದರೆ ಅವರ ತಲೆ ಬುರುಡೆಯಲ್ಲಿ ಅದ್ಭುತ ಯೋಚನೆಗಳ ಉದ್ಭವವಾಗುತ್ತದೆ. ತರಕಾರಿ ವೂರುವ ಆಜ್ಜಿಗೆ ತರಕಾರಿಯ ಕ್ರಯ ಹೇಳಬೇಕಿದ್ದರೆ ಜೋಯಿಸರಿಗೆ ಪಂಚಾಂಗ ಬಿಡಿಸಬೇಕೆದ್ದರೆ ಉಂದು ಚಿಟಿಕೆ ನಶ್ಯ ಸೇರಿಸದೆ ಸಾಧ್ಯವಿಲ್ಲ. ಭಾಗವತರ ಮೂಗಿಗೆ ನಶ್ಯ ಸೇರಿದಷ್ಟೂ ಅವರ ಸ್ವರ ಏರುತ್ತದೆ. ಎಂಬುದು ಆನುಭವವಿರುವಲ್ಲಿ ಅವ್ಯಕತ್ತವಿದೆ ಎಂಬ ವೀರ್ಸಿಕೆಯಂಡಿಯಲ್ಲಿ ಬರೆಯಬೇಕಾದ ವಿಚಾರ ನಶ್ಯ ಸೇರಿಸಿದರೆ ಸ್ಫೂರ್ತಿ ಬರುತ್ತದೆ—ಎಂದು ಕೆಲ ಆನುಭವಿಗಳು ಅಭಿಪ್ರಾಯ ಪಡುತ್ತಾರೆ. (ಒಮ್ಮೆ ನಾನೂ ಈ ಆನುಭವಕ್ಕೆ ಪಾತ್ರನಾಗಿ ಹದಿನೈದು ನಿಮಿಷಗಳ ತನಕ ಒಂದೇ ಸವನೆ ಸ್ಫೂರ್ತಿಯನ್ನು ಪಡೆಯುವ ಮೂಲಕ ಕಾರಬೇಕಾಯಿತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ)

ಇಬ್ಬರು ನಶ್ಯ ಎಳೆಯುವವರು ಬಸ್ಸು ನಲ್ಲೋ ವಾರ್ಗದ ಮುಖ್ಯದಲ್ಲೋ ಜೇಟಿಯಾದರೆ ಅವರೊಳಗೆ ನೊದಲು ನಡೆಯುವುದು ಪರಸ್ಪರ ಹುಡಿಗಳ ವಿನಿಮಯ. "ಇದು ನೋಡಿ ಕಾರದಾ ನಶ್ಯ" ಎಂದೊಬ್ಬರು ಹೇಳಿದರೆ "ನನ್ನದೂ ಅದೇ ನಶ್ಯ ವೊನ್ನೆ ನೋಡಿ ಇದು ಎಲ್ಲಿಯೂ ಸಿಕ್ಕದ ಕಡೆಗೆ ಬೇರೆ ಯಾವುದೋ ಒಂದು ನಶ್ಯ ತಕ್ಕೊಂದೆ. ಮೂಗಿಗೆ ಹಾಕುತ್ತೀನೆ ನಾ ಹಾರಾಯ್ತು ತಾಜಾ ಮೆಣಸಿನ ಹುಡಿ ಎಂದು ಮತೊಬ್ಬರು ಮೂತಿಗೆ ಪ್ರಾರಂಭಿಸುತ್ತಾರೆ ಸರಿ-ಮತ್ತದು ಬ್ರೇಕ್ಫೆಲ್ಲದ ಬಂಡಿಯಂತೆ!

ಎಲ್ಲೀ ಆಗಲಿ, ನಶ್ಯ ಎಳೆಯುವವರ ಹತ್ತಿರ ಕುಳಿತುಕೊಳ್ಳಬೇಕಾದರೆ ಬಹಳ ಜಾಗ್ರತರಾಗಿರಬೇಕು. ಏಕೆಂದರೆ ನಶ್ಯ ಎಳೆವಾಗ ಒಂದೆರಡು 'ಸೀನು' ಬರುವುದು ಸ್ವಾಭಾವಿಕವಷ್ಟೆ? ಈ ಪುಣ್ಯಾತ್ಮರು ತಾವು ಸೀನುವ ರಭಸದಲ್ಲಿ ಹತ್ತಿರ ಕುಳಿತವರ ಮೈಗೂ ಒಂದಿಷ್ಟು ಸಿಣ್ಣಿನ ಪ್ರೋಕ್ಷಣೆ ಮಾಡದೆ ಬಿಡಲಾರರು

ನಶ್ಯದ ಬುರುಡೆಗಳ ಆಕಾರ ವೈವಿಧ್ಯ ವರ್ಣವಾದರೆ ಕೆಲವರಿಗೆ ಉದ್ದ ಬುರುಡೆಯೇ 'ಮಿತಿ' ಆದರೆ ಇನ್ನು ಕೆಲವರಿಗೆ ಉರುಟು ಬುರುಡೆಯ ಮೇಲೆ ವಾಲಿಸು. ಒಮ್ಮೆ ಭಟ್ಟರೊಬ್ಬರು ತದೇಕಚಿತ್ತದಿಂದ ಪೂಜೆ ನೂಡುತ್ತಿದ್ದರಂತೆ. ಮಧ್ಯದಲ್ಲಿ ಎಷ್ಟು ಹುಡುಕಿದರೂ ಅವರಿಗೆ ತವರ ನಶ್ಯದ ಬುರುಡೆ ಸಿಕ್ಕಲಿಲ್ಲ. ತಂದೂ ಯಾರಿಂದಲೋ ನಶ್ಯ ತೆಗೆದುಕೊಂಡು ಪೂಜೆ ಮುಗಿಸಿದರು. ವಿಜಯಂಗತಿ ಅವರಿಗೆ ತಿಳಿದದ್ದು ಆ ಮೇಲೆಯೇ. ಏನಾಶ್ಚರ್ಯವೆಂದರೆ ಭಟ್ಟರು ಶಿವಲಿಂಗನೆದು ಭಾವಿಸಿ ಪೂಜೆ ಮಾಡಿದುದು. ಹುದಿ ಬುರುಡೆಗಾಗಿ ಹೋಗಿತ್ತು. ಇವಕ್ಕೆಲ್ಲ ಕಾರಣ ಅವರ ಹೃದಿಬುರುಡೆಯ ಆಕಾರ ಶಿವಲಿಂಗದಂತೆಯೇ ಇದ್ದುದು!

ಎಲೆಯ ಡಿಕೆ (ತಾಂಬೂಲ) ತಿನ್ನುವುದು ಇನ್ನೊಂದು ಚಟ. ಪೇಟೆಯವರು ಇದಕ್ಕಾಗಿ ಸಿದ್ಧವಾದ ಬೀಡಗಳನ್ನುಪಯೋಗಿಸಿದರೆ ಹಳ್ಳಿಯವರು ಎಲೆಯಂದಿಕೆಯದೊಂದು ಕಂಚಿಯನ್ನೆ ಓಡಕೊಳ್ಳುವ

(ಉಳಿದ ಪುಟನೋಡಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು			ರೂ. ನ.ಪೈಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ	ಸೇಕಡಾ	1-50
ಆರರಿಂದ ಹನ್ನೆರಡು ತಿಂಗಳು ವರೆಗೆ	,,	,,	4-75
ಹದಿನೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,,	,,	5 00
ಇಪ್ಪತ್ತ ಐದರಿಂದ ಮೂವತ್ತಾರು ತಿಂಗಳು ವರೆಗೆ	,,	,,	5-25
ನಾಲ್ವತ್ತೆಂಟು ತಿಂಗಳು ಮತ್ತು ಜೆಚ್ಚಿಗೆ	,,	,,	5-50
ಸೇವಿಂಗ್ಸ್ ಬೇಂಕ್ ಠೇವಣಾತಿಗಳು	,,	,,	3-25

ನಿಮ್ಮ

ದಿನನಿತ್ಯದ ಉಳಿತಾಯವನ್ನು ಮಾಸಿಕ ಉಳಿತಾಯವನ್ನು ಹಣ ಡಿಪೋಸಿಟುಗಳಲ್ಲಿ ಕ್ಯೂಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ದೇಶರತ್ನ

ರಾಜೇಂದ್ರರಿಲ್ಲದ ಈಶೂನ್ಯ ದೆಹಲಿ

ಭಾರತದ ಪ್ರಪ್ರಥಮ ರಾಷ್ಟ್ರಾಧ್ಯಕ್ಷರಾಗಿ ಖ್ಯಾತಿವೆತ್ತ ದೇಶರತ್ನ ಡಾ| ರಾಜೇಂದ್ರ ಪ್ರಸಾದರು ರಾಜಕೀಯದಿಂದ ನಿವೃತ್ತರಾಗಿ, ಪಕ್ಷರಹಿತವಾಗಿದ್ದು ರಚನಾತ್ಮಕ ಕಾರ್ಯಗಳಲ್ಲಿ ತೊಡಗುವ ಸಂಕಲ್ಪ ಮಾಡಿದ್ದು ಅವರ ಅಧಿಕಾರದಲ್ಲಿರದೆ ಕೆಲಸ ಮಾಡುವ ಪ್ರವೃತ್ತಿಗೆ ಒಂದು ಪ್ರತ್ಯಕ್ಷದ್ಯೋತಕವಾಗಿದೆ. ರಾಜೇಂದ್ರಬಾಬುರವರ ಸರಳತೆ, ಘನತೆಯೇ ಮೊದಲಾದ ಗುಣಗಳಿಂದ ಅವರು ಐತಿಹಾಸಿಕ ವ್ಯಕ್ತಿಯೆನ್ನಲು ಸಂಶಯವಿಲ್ಲ. ಕಳೆದ ಮಾರ್ಚ್ ತಿಂಗಳಲ್ಲಿ ಪಂಡಿತ ನೆಹರೂರವರು ಲೋಕ ಸಭೆಯಲ್ಲಿ ಮಾತಾಡುತ್ತಾ—"ರಾಜೇಂದ್ರಬಾಬುರವರು ಸಂಘರ್ಷ ಸಮಯದ ಭಾರತವನ್ನು ಸ್ವತಂತ್ರ ಭಾರತದ ಒಟ್ಟಿಗೆ ಸೇರಿಸಿದ ಸೇತುವೆಯಾಗಿದ್ದಾರೆ." ಎಂದು ಪ್ರಶಂಸಿಸಿದ್ದಾರೆ. ಇಂತಹ ಸೇತು ಸ್ವತಃ ನೆಹರುಗಳು ಕೂಡಾ ಆಗಿದ್ದಾರೆ. ಅವರ ಸರಕಾರ ಅಧವಾ ಮಂತ್ರಿ ಮಂಡಲದ ಮಂತ್ರಿಗಳು ಇಂತಹ ಸೇತುವೆಯ ಸ್ತಂಭಗಳಾಗಿದ್ದಾರೆ. ರಾಜೇಂದ್ರಬಾಬುರವರು ದಿಲ್ಲಿಯ ರಾಷ್ಟ್ರಪತಿಯ ಗದ್ದುಗೆ ಏರಿದೊಡನೆಯೇ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು. ಇಂತಹ ಸಂಘರ್ಷಕಾಲದ ಭಾರತವನ್ನು ಸ್ವಾಧೀನ ಭಾರತದೊಂದಿಗೆ ಸೇರಿಸುವ ಘನತೆಗಾಂಭೀರ್ಯಗಳ ವ್ಯಕ್ತಿ ಇನ್ನೊಂದು ಸಿಗಲಾರದು. ದಿಲ್ಲಿಯಿಂದ ರಾಜೇಂದ್ರರ ನಿರ್ಗಮನವೆಂದರೆ, ಅದೊಂದು ಸಾಮಾನ್ಯ ವಿಷಯವಲ್ಲ. ಈ ಹೃದಯ ಸ್ಪರ್ಶೀ ವಿದಾಯದ ಅಂತರಾಳದಿಂದ ಗಾಂಧೀ ಯುಗದ—"ಇನ್ನು ನನ್ನ ಕಾಲ ಮುಗಿಯಿತು; ನಾನೀಗ ಗದ್ದುಗೆಯಿಂದ ಇಳಿಯುವ ಸಿದ್ಧತೆಯಲ್ಲಿದ್ದೇನೆ" ಎಂಬ ಧ್ವನಿ ಕೇಳುತ್ತಿದೆ.

ಭಾರತದ ಇತಿಹಾಸದಲ್ಲಿ ಹಾಸುಹೊಕ್ಕು ರಾಜೇಂದ್ರರು ೧೯೪೬ರಲ್ಲಿ ದಿಲ್ಲಿಯ ರಾಜನೀತಿಯಲ್ಲಿ ಶಕ್ತಿಯುವಾಗಿ ಭಾಗವಹಿಸಲಾರಂಭಿಸಿದರು. ಆಂದಿನಿಂದ ಕೇಂದ್ರದ ಮಂತ್ರಿ, ಸಂವಿಧಾನ ಸಭೆಯ ಅಧ್ಯಕ್ಷ ಮತ್ತು ರಾಷ್ಟ್ರಾಧ್ಯಕ್ಷರಾಗಿ ದೇಶದ ಅನರ್ಘ್ಯ ಸೇವೆ ಮಾಡಿದ್ದಾರೆ. ಈಗಿರುವ ಸಂವಿಧಾನವೇ ಇನ್ನು ಮುಂದೆಯೂ ಜಾರಿಯಲ್ಲಿದ್ದರೆ ರಾಜೇಂದ್ರರ ಹೆಸರು ಅದರೊಂದಿಗೇ ಶಾಶ್ವತವಾಗುವುದರಲ್ಲಿ ಸಂಶಯವಿಲ್ಲ. ಈ ಸಂವಿಧಾನವು ಅವರ ಮಾರ್ಗದರ್ಶನದಲ್ಲಿ ತಯಾರಾದುದು.

ವಕಾಲತ್ತನ್ನು ಬಿಟ್ಟು ದೇಶಸೇವೆಯ ವ್ರತವನ್ನು ಕೈಕೊಂಡು, ಜೈಲುಗಳನ್ನೇ ಸದಾ ತನ್ನ ಅರಮನೆಯನ್ನಾಗಿ ಮಾಡಿಕೊಂಡು, ಮೋಲಿಸರ ಲಾಠಿಯ ಪೆಟ್ಟುಗಳನ್ನು ಸಹಿಸಿದ ರಾಜೇಂದ್ರರು ಪ್ರತಿ ಸಲವೂ ವಿಷಪಾನ ಮಾಡಿದ ನಂತರವೇ ಬದುಕಿ ಉಳಿದವರು. ಇಷ್ಟು ಕಷ್ಟ ಪಟ್ಟರೂ ತಾನು ಅಧಿಕಾರಕ್ಕೆ ಅಭಿಮಾನ ಪಡದೆ, ಜಂಭ ಕೊಚ್ಚಿಕೊಳ್ಳದೆ, ಸ್ವಚ್ಛವಾದ ಹಾಗೂ ಪರಿಶುದ್ಧ ಹೃದಯದವರಾದ ಇವರನ್ನು ನಿಜವಾಗಿ ಕೊಂಡಾಡಲೇ ಬೇಕು. ತಪಸ್ಸು ಮಾಡಿದ ಋಷಿಗಳು ಕೂಡಾ ಅಹಂಕಾರ ತೊರಿಸುತ್ತಿದ್ದರು. ಇದಕ್ಕೋಸ್ಕರವೇ ವಿನಮ್ರ, ತ್ಯಾಗದ ಮಹಿಮೆಯು ಬಹು ದೊಡ್ಡದಾಗಿದೆ ಎನ್ನುವುದು. ಇಂದು ಸಮಗ್ರ ಭಾರತದ ಜನತೆ ರಾಜೇಂದ್ರರ ಮೇಲೆ ಅತಿಶಯವಾದ ಪ್ರೇಮ-ವಿಶ್ವಾಸ-ಶ್ರದ್ಧೆಗಳನ್ನಿಟ್ಟಿದ್ದಾರೆ. ಅದವರ ವಿನಮ್ರ ತ್ಯಾಗಕ್ಕೋಸ್ಕರ ಎಂದು ಖಂಡಿತವಾಗಿ ಹೇಳಬಹುದು.

ಸ್ವತಃ ಮಹಾತ್ಮಾ ಗಾಂಧೀಜಿಯವರೇ ಇವರಿಗೆ ದೇಶರತ್ನ ಎಂಬ ಬಿರುದನ್ನು ದಯಪಾಲಿಸಿದ್ದರು. ಇಷ್ಟು ಮಾತ್ರವಲ್ಲದೆ ತನ್ನ ಸರ್ವ ಶ್ರೇಷ್ಠ ಸಹಕಾರಿ ಎಂದು ಯಾವಾಗಲೂ ಹೇಳುತ್ತಿದ್ದರು. ರಾಜೇಂದ್ರರ ಸರಳತೆ ವಿನಮ್ರತೆ ಮತ್ತು ದೃಢತೆಗಳ ಆದರವು ದೇಶದ ಎಲ್ಲಾ ಧುರೀಣರುಗಳಿಂದ ಪ್ರಾರಂಭದಿಂದಲೂ ಮಾಡಲ್ಪಡುತಿತ್ತು. ಪಂಡಿತನೆಹರೂಜಿಯವರು ೧೯೩೪ರಲ್ಲಿ "ರಾಜೇಂದ್ರರ ಕಣ್ಣುಗಳಿಂದ ಸದಾ ಸತ್ಯದಿವ್ಯ ಪ್ರಭೆ ಹೊರಹೊಮ್ಮುತ್ತಿದೆ" ಎಂದು ಉದ್ಗಾರವೆತ್ತಿದ್ದರು. ೧೯೩೯ರಲ್ಲಿ ಪ್ರಸಾದರು ಎರಡನೇ ಬಾರಿ ಕಾಂಗ್ರೆಸ್ ಅಧ್ಯಕ್ಷರಾದಾಗ ಸರೋಜಿನಿ ಮಹಿಷಿಯವರು—"ರಾಜೇಂದ್ರ ಪ್ರಸಾದರ ವ್ಯಕ್ತಿತ್ವದ ನಿಜವಾದ ವರ್ಣನೆಯನ್ನು ಮಾಡಬೇಕಾದರೆ, ಅದಕ್ಕೆ ಜೇನಿನಲ್ಲಿ ಮುಳುಗಿಸಿದ ಬಂಗಾರದ ಲೇಖನಿಯೇ ಬೇಕು" ಎಂದು ಘೋಷಿಸಿದ್ದಾರೆ. ಅವರಲ್ಲಿರುವ ಮೇಧಾಶಕ್ತಿಯೂ, ಮಧುರ ವ್ಯಕ್ತಿತ್ವವೂ ಇತರರಿಗೆ ಸಿಗುವುದು ದುರ್ಲಭವೂ, ಅಲಭ್ಯವೂ ಆಗಿದೆ. ಅವರ ಚರಿತ್ರವು ಉದಾತ್ತವಾಗಿದೆ. ಸ್ವತಃ ತನ್ನನ್ನೇ ಅರ್ಪಿಸಿಕೊಳ್ಳುವ ಅವರ ಅಸಾಧಾರಣ ನಿಃಸ್ವಾರ್ಥತೆಯನ್ನು ಕಾಣುವುದು ಆಸ್ಚರ್ಯ ವಿರಳವೇ ಸರಿ. ಇದರಿಂದಲೇ ರಾಜೇಂದ್ರರು ಸರ್ವರಿಗೂ ಸರ್ವದಾ ಪ್ರಿಯಂಕರಾಗಿಯೇ ಉಳಿದಿದ್ದಾರೆ.

ರಾಜೇಂದ್ರರು ರಾಷ್ಟ್ರಪತಿ ಗದ್ದುಗೆಯನ್ನಲಂಕರಿಸಿದಾಗ ಡಾ| ಸಚ್ಚಿದಾನಂದ ಸಿನ್ಹಾರು ಒಂದು ಲೇಖನ ಬರೆದಿದ್ದರು ಅದರಲ್ಲಿ "ರಾಜನೀತಿಯು ಯಾವಾಗಲೂ ಭೀಕರ ಸಂಘರ್ಷಗಳಿಂದ ಕೂಡಿರುತ್ತದೆ. ಆದರಲ್ಲಿ ಯೂವಾಗಲೂ ಬಿಸಿ ಬಿಸಿ ಚರ್ಚೆಗಳಾಗುತ್ತಾ ಇರುತ್ತವೆ ಅದರಲ್ಲಿರುವ ವ್ಯಕ್ತಿಗಳು ಹೆಚ್ಚಾಗಿ ಯೂವಾಗಲು ಘಾತಕರಾಗಿರುತ್ತಾರೆ. ಆದರೆ ರಾಜೇಂದ್ರರು ಈ ಎಲ್ಲಾ ಜಗಳಗಳಲ್ಲಿ ಸಿಲುಕಿದರೂ ಯಾರ ಗುಂಡಿಗೂ ಆಹುತಿಯಾಗದೆ, ಯಾರಿಗೂ ಗುಂಡು ಹೊಡೆಯದೆ ಧ್ರುವ ತಾರೆಯಂತೆ ಮಿನುಗುತ್ತಿದ್ದಾರೆ" ಎಂದಿದ್ದಾರೆ. ಅವರ ಬಳಿ ಕರೋರತೆ ಎಂಬುದು, ಸುಳಿಯಲೇ ಇಲ್ಲ. ರಾಜೇಂದ್ರರ ಸರಳತೆ, ದೃಢತೆಗಳ ಕುರಿತು ಜಿನೇವದ ವಿದೇಶ ಮಂತ್ರಿ 'ಆಂಡ್ರೇ ವೊನ್'ರು ರಾಜೇಂದ್ರ ಪ್ರಸಾದರೊಡನೆ ಹಸ್ತಲಾಘವನ್ನು ಮಾಡುತ್ತಿದ್ದಾಗ "ಅವರ ಕಣ್ಣು ನೋಳಗಿನಿಂದ ಬಂದ ಯಾವುದೋ ಒಂದು ಅಪೂರ್ವ ಕಾಂತಿ ನನ್ನನ್ನು ದಿಙ್ಮೂಢನನ್ನಾಗಿ ಮಾಡಿತು." ಎಂದಿದ್ದಾರೆ.

ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಸ್ವಾತಂತ್ರ್ಯಕ್ಕೋಸ್ಕರ ಸರ್ವಸ್ವವನ್ನು ಅರ್ಪಿಸಿ ಹೆಣಗಾಡಿದ ನಾಯಕ ಮಣಿಗಳಲ್ಲಿ ಪ್ರಸಾದರ ಹೆಸರು ಸರ್ವಧಾ ಪ್ರಥಮವಾಗಿದೆ. ಭಾರತದ ರಾಷ್ಟ್ರಪತಿಗಳಿಗೆ ೧೦ ಸಾವಿರ ಮಾಸಿಕ ವೇತನವಿದೆ. ಇದರ ಮೇಲೆ ೩೨ ಸಾವಿರದ ಮಾಸಿಕ ಭತ್ತೆಯೂ ಇದೆ. ಪ್ರಸಾದರು ಮೊದಲು ಭತ್ತೆಯನ್ನು ಬಂದು ಮಾಡಿ, ಸ್ವೇಚ್ಛೆಯಿಂದ ೬ ಸಾವಿರ ರೂಪ್ಯಾ ಸಂಬಳವನ್ನು ತೆಗೆದುಕೊಂಡರು. ಆ ಮೇಲೆ ೫ ಸಾವಿರ ತೆಗೆದುಕೊಳ್ಳುತ್ತಿದ್ದರು. ಆನಂತರ ಕೊನೆಗೆ ೩॥ ಸಾವಿರವನ್ನೇ ತಮ್ಮ ಮಾಸಿಕ ವೇತನವನ್ನಾಗಿ ಸ್ವೀಕರಿಸಿ ತಮ್ಮ ತ್ಯಾಗ ಮಯ ಜೀವನಕ್ಕೆ ಮತ್ತೊಂದು ಕಲಶವಿಟ್ಟರು. ಇವರ ಈ ತ್ಯಾಗಕ್ಕೆ "ತಾನು ಒಂದು ನಿರ್ಧನ ದೇಶದ ರಾಷ್ಟ್ರಪತಿಯಾಗಿದ್ದೇನೆ" ಎಂಬ ಉದಾತ್ತ ಭಾವನೆಯೇ ಕಾರಣವಾಗಿದೆ. ತಾನು ಈ ರೀತಿ ಕಡಿಮೆ ವೇತನ ಸ್ವೀಕರಿಸಿದರೆ ರಾಷ್ಟ್ರಪತಿ ಹುದ್ದೆಯ ಗೌರವಕ್ಕೆ ಕುಂದು ಬಂದೀತೇ ಎಂಬ ಸಂಶಯ ಅವರನ್ನು ಪೀಡಿಸಿದುದರಿಂದ ಅವರು ನಿಧಾನವಾಗಿ ತಮ್ಮ ವೇತನವನ್ನು ಇಳಿಸಿದರು.

"ರಾಜೇಂದ್ರರಂತಹ ಆದರ್ಶ ರಾಷ್ಟ್ರಪತಿಗಳು ಇನ್ನು ನಮಗೆ ದೊರೆಯುವುದು ದುರ್ಲಭವೇ ಸರಿ. ಇಂಥ ರಾಷ್ಟ್ರಪತಿಗಳನ್ನು ಬೀಳ್ಕೊಡುವುದೆಂದರೆ ನನಗೆ ಅತ್ಯಂತ ವೇದನೆಯೂಗುತ್ತಿದೆ" ಎಂದು ಇಂದಿನ ರಾಷ್ಟ್ರಪತಿ ಡಾ| ರಾಧಾಕೃಷ್ಣನರು ಹೇಳಿದ್ದಾರೆ. ಸರಕಾರದೊಡನೆ ರಾಜೇಂದ್ರರ ಸಂಬಂಧ ಪ್ರಾರಂಭದಿಂದಲೂ ಉತ್ತಮವಾಗಿಯೇ ಇತ್ತು. ಆದರೆ ಒಂದೆರಡು ವರ್ಷಗಳಿಂದೀಚೆಗೆ ರಾಷ್ಟ್ರಪತಿ ಮತ್ತು ಸ್ವಧಾನ ಮಂತ್ರಿಗಳಲ್ಲಿ ಮತಭೇದಗಳು ಉಂಟಾಗಿವೆ ಎಂಬ ಸಿಸು ಮಾತುಗಳು ಕೇಳಿ ಬಂದಿವೆ. ಆದರೆ ಇದಕ್ಕೆ ಪ್ರತ್ಯಕ್ಷ ಉದಾಹರಣೆ ಈ ವರೆಗೂ ನಮಗೆ ಕಂಡು ಬಂದಿಲ್ಲ. ರಾಜೇಂದ್ರರು ನೆಹರೂ ಸರಕಾರವನ್ನು ಟೀಕಿಸಿ ಮಾತಾಡಿದುದಾಗಲೀ ನೆಹರೂರವರು ರಾಜೇಂದ್ರರನ್ನು ಅಗೌರವದಿಂದ ಕಂಡ ಸಂದರ್ಭವಾಗಲೀ ಜನತೆಯು ಗಮನಕ್ಕೆ ಬಂದುದಿಲ್ಲ. ರಾಷ್ಟ್ರಪತಿ ಭವನದ ದ್ವಾರವು ಸದಾ ಸರ್ವರಿಗೂ ಸ್ವಾಗತವನ್ನೇ ಬಯಸುತ್ತಿತ್ತು. ಇದಕ್ಕಿಂತಲೂ ಹೆಚ್ಚು ಅವರ ಹೃದಯದ ಬಾಗಿಲು ಸದಾ ತೆರೆದುಕೊಂಡೇ ಇತ್ತು. ಇದರಿಂದಲೇ ಅವರು ರಾಷ್ಟ್ರಪತಿ ಆದ ಬಳಿಕವೂ ಮೊದಲಿಗಿಂತ ಹೆಚ್ಚು ಜನರ ಸಂಪರ್ಕಕ್ಕೆ ಬಂದರು.



ಡಾ| ರಾಜೇಂದ್ರ ಪ್ರಸಾದ್

೧೯೫೦ರಲ್ಲಿ ರಾಜೇಂದ್ರರು ರಾಷ್ಟ್ರಾಧ್ಯಕ್ಷರಾದಾಗ ರಾಷ್ಟ್ರಪತಿ ಭವನವನ್ನು ಇನ್ನು ಕವಿ ಸಮ್ಮೇಲನಗಳಾಗುತ್ತವೆ; ಹರಿಕೀರ್ತನೆಗಳಾಗುತ್ತವೆ; ಕವಿ, ಪಂಡಿತ, ಕಲಾಗಾರರುಗಳ ಸಮ್ಮಾನವಾಗುತ್ತದೆ; ಮತ್ತು ವಿದ್ಯಾರ್ಥಿಗಳನ್ನು, ರೈತರನ್ನು ಕೂಲಿಗಾರರನ್ನು ಸ್ವಾಗತಿಸಲು ಸ್ವತಃ ರಾಜೇಂದ್ರ ಬಾಬೂರವರೇ ಬರುತ್ತಾರೆ ಎಂದೂ ಯಾರೂ ಯೋಚಿಸಿರಲಿಲ್ಲ. ತನ್ನ ಹೆನ್ನೆರಡು ವರ್ಷಗಳ ರಾಷ್ಟ್ರಾಧ್ಯಕ್ಷ-ಕಾಲದಲ್ಲಿ ರಾಜೇಂದ್ರರು ಈ ಎಲ್ಲಾ ಶುಭ ಸಂಪ್ರದಾಯಗಳಿಗೆ ಶಾಶ್ವತ ಅಸ್ತಿವಾರವನ್ನು ಹಾಕಿದರು.

(೧೯ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇ.ಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಠೇವಣಾತಿಗಳ ಮೇಲೆ ಸೇ.ಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇ.ಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಜಿಲ್ಲೆಯ ನಾಗರಿಕರಿಂದ

ಕಾರಂತರಿಗೆ ಗೌರವಾರ್ಪಣೆ



ಅಧ್ಯಯನದ ಕೊರಡಿಯಲ್ಲಿ ಕನ್ನಡದ ಸನ್ಯಸಾಚಿ ಕಾರಂತ.

ಕನ್ನಡದ ಏಕೈಕೇವ ಕಾರಂತರಿಗೆ ಮೊನ್ನೆ ೧೦ನೇ ತಾರೀಕಿಗೆ ೬೦ ತುಂಬಿತು. ಆ ಸುದಿನವನ್ನು ಅವರ ಹುಟ್ಟು ತಾಲೂಕು ಕೇಂದ್ರ ಉಡುಪಿಯಲ್ಲಿ ಅವರ ಗೌರವಕ್ಕೆ, ಘನ ಸ್ಥಿತಿಗೆ ಮತ್ತು ಹಿರಿಮೆಗೆ ಒಪ್ಪುವಂತೆ ಆಚರಿಸಲಾಯಿತು. ಬೋರ್ಡು ಹೈಸ್ಕೂಲಿನ ಜನತಾ ಭವನದಲ್ಲಿ ನಿರೀಕ್ಷೆಗೂ ಮೀರಿದ ಈ ಅಪೂರ್ವ ಸಮಾರಂಭದಲ್ಲಿ ದಕ್ಷಿಣ ಕನ್ನಡದ ಎಲ್ಲೆಡೆಯ ಕಾರಂತ ಪ್ರೇಮಿಗಳು ಸಮಾಗಮಿಸಿದ್ದರು. ಕಾರಂತ ಸನ್ಮಾನ ನ ಸಮಿತಿಯು ತನ್ನ ಸಿಯೋಜಿತ ಕಾರ್ಯಕ್ರಮಗಳನ್ನು ಆದರ್ಶ ವಿಧಾನದಲ್ಲಿ ಉಳಿದವರಿಗೆ ಮಾದರಿಯೆನಿಸುವಂತೆ ಸಾಂಗೋಪಾಂಗವಾಗಿ ನೆರವೇರಿಸಿತು.

ನಿಯೋಜಿತ ಸಮಯಕ್ಕೆ ಸರಿಯಾಗಿ, ಸನ್ಮಾನ ಪಾತ್ರರಾದ ಶ್ರೀ ಶಿವರಾಮ ಕಾರಂತರು, ಸಮಾರಂಭದಅಧ್ಯಕ್ಷರಾದ ಶ್ರೀ ಎ.ಎನ್. ಮೂರ್ತಿ ರಾವ್, ನಿಧಿ ಸಮರ್ಪಣೆ ಗೆಯ್ಯಲಿದ್ದ ಡಾ ಟಿ. ಮಾಧವ ಪೈ, ಸ್ಮಾರಕ ಸಂಚಿಕೆಯ ಉದ್ಘಾಟಕ ಶ್ರೀ ಕೆ. ಎಸ್ ನಂಜಿಂಕ ಸ್ವಾಮಿ, ಸನ್ಮಾನ ಪತ್ರ ಸಮರ್ಪಿಸಲಿದ್ದ ಶ್ರೀ ಎಂ. ಮಧ್ವರಾಜ, ಶ್ರೀಯ ಪ್ರಾರ್ಥನ ಸಲ್ಲಿಸಲಿದ್ದ ಸರ್ವ ಶ್ರೀ ಟಿ ಎ. ಪೈ, ವಿ ಎಂ ಇನಾಂದಾರ, ಕಯ್ಯಾರ ಕಿಞ್ಞಣ್ಣ ರೈ, ಸೇಡಿಯಾಪು ಕೃಷ್ಣ ಭಟ್ಟರು ವೇದಿಕೆಯನ್ನು ಅಲಂಕರಿಸಿದ್ದರು

ವ್ಯಾರ್ಥನೆಯೂದ ತರುವಾಯ ಸ್ವಾಗತ ಸಮಿತಿಯ ಪರವಾಗಿ ಡಾ| ಕೆ. ಎಲ್. ಅತಾಳರು 'ಶಕ್ತಿ ಪೂಜೆಯ ಸಕ್ಷದಲ್ಲಯೇ

ಡಾ| ಅತಾಳ

ನಾವಿಂದು ರಕ್ತಿಯೊಂದನು ಸೂಜಿಸುತ್ತಿ ದ್ದೇವೆ, ವ್ಯಕ್ತಿಯನ್ನಲ್ಲ' ಎಂದು ಈ ಪೂಜೆಯಲ್ಲಿ ಪಾಲುಗೊಳ್ಳ ಬಂದವರೆಲ್ಲರನ್ನು ಸ್ವಾಗತಿಸಿದರು. ಸನ್ಮಾನ ಸಮಿತಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಪರವಾಗಿ ಹಾರಾರ್ಪಣೆಯು ನಡೆದ ನಂತರ, ಶ್ರೀ ಸಿ. ರಂಗನಾಥ ಶೆಣೈ ಅವರು ಸಮಾರಂಭಕ್ಕೆ ಶುಭಕೋರಿ ಬಂದ ಹಲವಾರು ಸಂದೇಶಗಳನ್ನು ಓದಿದರು. ಪ್ರೊ. ಕು. ಶಿ. ಹರಿದಾಸ ಭಟ್ಟರು ಸನ್ಮಾನ ಸಮಿತಿಯ ವರದಿಯನ್ನು ಓದಿದ ಬಳಿಕ, ಶ್ರೀ ಎಂ. ಮಧ್ವರಾಜರು ಸನ್ಮಾನ ಪತ್ರವನ್ನು ಸಮರ್ಪಿಸಿದರು.

ಡಾ| ಟಿ ಮಾಧವ ಪೈ ಅವರು ಆತ್ಮೀಯ ಕಾರಣ ಅನುಭವವಿರುವ, ಅಧ್ಯಯನ



ಡಾ| ಮಾಧವ ಪೈ

ಶೀಲರೂ ಕ್ರಿಯಾಶೀಲರೂ ಆದ ಕಾರಂತರು ಇತರರನ್ನೂ ಕ್ರಿಯಾಶೀಲರನ್ನಾಗಿಸುವ ಶಕ್ತಿವಂತರೆಂದು ಉಲ್ಲೇಖಿಸಿ, ಅವರನ್ನು ಸನ್ಮಾನಿಸುವುದೆಂದರೆ ನಮ್ಮನ್ನು ನಾವೇ ಗೌರವಿಸಿದಂತೆ ಎಂದು ಹೇಳಿ ರೂ. ೪೦೦೦ ನಿಧಿಯನ್ನೂ ಕನ್ನಡದ ಕಲಾವಿದ ಪದ್ಮಶ್ರೀ ಕೆ ಕೆ ಹೆಬ್ಬಾರರು ಬರೆದು ಕೊಟ್ಟ ಕಾರಂತರ ಭಾವ ಚಿತ್ರವನ್ನೂ ಅರ್ಪಿಸಿದರು. ಸ್ಮಾರಕ ಸಂಚಿಕೆಯನ್ನು ಉದ್ಘಾಟಿಸಲಿದ್ದ ಶ್ರೀ ಪಾಟೀಲ ಪುಟ್ಟಪ್ಪನವರು ಬಾರದಿದ್ದರಿಂದ ಶ್ರೀನರಸಿಂಹ ಸ್ವಾಮಿಯವರು ಆ ಕರ್ತವ್ಯವನ್ನು ನಿರ್ವಹಿಸಿದರು ಕಾರಂತರ ಹಿರಿಯ ವ್ಯಕ್ತಿತ್ವದ [illegible] ಅಪರೂಪವೆಂದು ಆವರು ತನ್ನ ಅವರ ಸ್ನೇಹವನ್ನು ನೆನೆದರು.

ಕಾರಂತರ ಯೋಗ್ಯತೆಯನ್ನು ವಿಶ್ವವಿದ್ಯಾಲಯ ಅಥವಾ ಸರಕಾರಗಳು ಗುರುತಿಸುವುದಕ್ಕೆ ಮೊದಲೇ ಜನತೆಯು ಅದನ್ನು ಕಂಡು ಗೌರವಿಸುವುದು ಸಂತೆ ಚಿಷ್ಟೆಯೆಂದು ಶ್ರೀ ಟಿ. ಎ. ಪೈಗಳು ಹೊಡಿದು ಕಾರಂತರಿಗೆ ಯಶಸ್ಸು ಕೋರಿದರು ಪ್ರಿನ್ಸಿಪಲ್ ಇನಾಂದಾರರು ಮಾತಾಡುತ್ತ, ಜೀವನಕ್ಕಾಗಿ ಕಲೆಯೆಂಬುದನ್ನು



ಟಿ ಎ ಪೈ

ತೋರಿಸಿಕೊಟ್ಟ ಕಾರಂತರಿಗೆ ಶ್ರೇಯಸ್ಸನ್ನು ಬಯಸಿದರು. ಕಾರಂತರಿಗೆ ನೋಬೆಲ್ ಪಾರಿತೋಷಕ ಲಭಿಸುವ ದಿನ ದೂರವಿಲ್ಲವೆಂದರು ಗಡಿನಾಡಿನ ಕಯ್ಯಾರರು. ತೋರಿಕೆಯ ಲ್ಲಿ ಸಮುದ್ರಗಂಭೀರರಿದ್ದರೂ



ಕಯ್ಯಾರ

ಮನಸು ಮನಸ್ಸಿರು ಕಾರಂತರು ಎಂದು ಶುಭಾಕಾಂಕ್ಷೆಯನ್ನು ಸಡಿಸಿದರು ಮಾಡಿದರು.

ಮುಖ್ಯ ಅತಿಥಿ ಕಾರಂತರು ಮೂತನಾದುತ್ತ ತನ್ನ ಜೀವನದ ಏರುಪೇರು ಎದ್ದೇಶ-ಸಾಧನೆಗಳ ಕಡೆಗೆ ದೃಷ್ಟಿ ಹಾಯಿಸಿದರು ತಾನು ಬದುಕಿಗ ಇಟ್ಟುಕೊಂಡ ಅರ್ಥವನ್ನು ವಿವರಿಸುತ್ತ, ತನಗೆ ಗುರುವಾದರೂ ಯಾರೂ ಇಲ್ಲ, ಶಿಷ್ಯರೂ ಇಲ್ಲ ಒದುಕೇ ತನ್ನ ಗುರು ಎಂದು ಹೇಳಿದರು.

ಅಧ್ಯಕ್ಷೆ ಸ್ಥಾನದಿಂದ ಮಾತನಾಡಿದ ಮೂರ್ತಿರಾಯರು, ಕಾರಂತರಿಗೆ ಶಿಷ್ಯರನ್ನು ಕೂಡಿಹಾಕುವ ಅಭ್ಯಾಸವಿಲ್ಲ, ಗುರುವನ್ನಿಟ್ಟುಕೊಳ್ಳುವುದೂ ಇಲ್ಲ ಒದುಕಿನಲ್ಲಿ ದೊರೆತ ಪ್ರತ್ಯಕ್ಷ ಅನುಭವನೇ ಅವರ ಮಟ್ಟಿಗೆ ಗುರು ಎಂದು ನುಡಿದು, ಕಾರಂತರಿಂದ ನಾವೆನುಜಿ, ಕಲೆಯು ಪ್ರಗತಿಯು ಇನ್ನೂ ನಡೆಯುವಂತಾಗಲೆಂದು ಹಾರೈಸಿದರು. ಕೊನೆಯಲ್ಲಿ ಶ್ರೀ ಎ ಜಿ. ಅಲ್ಸೆಯವರು ಬಹಾರ ಮನ್ನಿಸಿದರು

ಆ ದಿನ, ಕಾರಂತರು ರಚಿಸಿದ ಕೃತಿಗಳ ಪ್ರದರ್ಶನವನ್ನೂ ಸಮಾರಂಭದ ಅಂಗವಾಗಿ ವಿಸರ್ಜಿಸಲಾಗಿತ್ತು. ರಾತ್ರೆ ಕಾರಂತ ನಾಟಕೋತ್ಸವವು ಜರಗಿತು. ಉಡುಪಿಯ ಕಲಾವೃಂದದವರು 'ಪಿಯಂಕ್ಕನ ಚಾಳಿ' ಮತ್ತು 'ಪರಮೆ ಚರಿತೆ' ಎಂಬ ಕಾರಂತರ ಏಕಾಂಕಿಗಳನ್ನೂ ಪೆಡ್ರೂರಿನ ಕಲಾ ಸೇವಾ ಮಂಡಳಿಯವರು 'ಸೋಮಿಯ ಸೌಭಾಗ್ಯ' ಎಂಬ ಗೀತ ನಾಟಿಕವನ್ನೂ ಅಭಿನಯಿಸಿದರು ಕೊನೆಯ ನಾಟಕವು ಉಳಿಯವದಕ್ಕಿಂತ ಪರಿಣಾಮಕಾರಿಯೆನಿಸಿತ್ತು. ಬೈಕಾಡಿ ವೆಂಕಟ ಕೃಷ್ಣರಾಯರು ಧನ್ಯವಾದವಿತ್ತರು.

ತಾ. ೧೧ರಂದು ಸಮಾರಂಭದ ಅಂಗವಾಗಿ ಕವಿ ಸಮ್ಮೇಳನವು ನಡೆಯಿತು. ಕನ್ನಡದ ಕವಿಸಾರ್ವಭೌಮ ಎಸ್. ನರಸಿಂಹ ಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ಉದ್ಘಾಟನಾ ಭಾಷಣ ಮಾಡುತ್ತ ನವ್ಯ ಕವಿತೆಗಳ ನವೀನತೆಯ ಎಸ್ಟರ ಮಟ್ಟಿಗೆ ಕನ್ನಡಕ್ಕೆ ಒಪ್ಪುತ್ತದೆಂಬುದನ್ನು ವಿವರಿಸುವ ಅಗತ್ಯವನ್ನು ಪ್ರತಿಪಾದಿಸಿದರು. ಇದಂತರ ಕವಿ ಎಸ್. ವೆಂಕಟರಾಜ, ಕಯ್ಯಾರ ಬಸ್ತಿಂಜೆ ಗೋವಿಂದ ಭಾರ್ಗವ [illegible]

(ಉಳಿದ ಸುದ್ದಿ ನೋಡಿರಿ)

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪೨	ಉಡುಪಿ ೧೪-೧೦-೧೯೬೨	ವಾರ ೬

ಶಿಕ್ಷಕರ ಹಿತಚಿಂತನೆ

ಅಖಿಲ ಭಾರತ ಮಧ್ಯಮಿಕ ಶಿಕ್ಷಕರ ಪರಿಷತ್ತನ್ನು ಉದ್ಘಾಟಿಸುತ್ತ ಸಂಸತ್ ಸದಸ್ಯ ಶ್ರೀ ಯು. ಎನ್. ಢೇಬಾರರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ಜೀವನ ಮಟ್ಟವನ್ನು ಎತ್ತರಿಸುವತ್ತ ಅವಶ್ಯ ಗಮನವೀಯಬೇಕೆಂದು ಅಭಿಪ್ರಾಯಪಟ್ಟರು. ನಾಗರಿಕನ ಜೀವನದಲ್ಲಿ ಆತನು ಗಳಿಸಿದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳು ಸಾಕಷ್ಟು ಪರಿಣಾಮ ಬೀರುವುದರಿಂದ, ಆ ಮಟ್ಟದಲ್ಲಿ ಉನ್ನತವಾದ ಶಿಕ್ಷಣವು ದೊರೆಯುವಂತೆ ಮಾಡಬೇಕು. ಹೆಚ್ಚಿನ ನಾಗರಿಕರಿಗೆ ತಮ್ಮ ಮುಂದಿನ ಶಿಕ್ಷಣ ಗಳಿಸುವುದೂ ಸಾಧ್ಯವಿಲ್ಲವೆಂಬುದರಿಂದ ಜೀವನದಲ್ಲಿ ಸಂಕಷ್ಟವನ್ನೇ ಉಣ್ಣುವ, ನಿಸ್ತೇಜ ಮುಖಜಯೆ.ಯ ನಿರುತ್ಸಾಹಿ ಅಧ್ಯಾಪಕರಿಂದ ಉನ್ನತ ಶಿಕ್ಷಣವನ್ನು ನೀಕ್ಷಿಸುವುದೂ ಅಪಾರಾಧನೇ. ಇದಕ್ಕಾಗಿ ಭವಿಷ್ಯ ನಾಗರಿಕರನ್ನು ಸುಸಂಸ್ಕೃತಗೊಳಿಸುವ ಈ ಅಧ್ಯಾಪಕರ ಹಿತಚಿಂತನೆಗೆ ಪ್ರಥಮ ಪ್ರಾಶಸ್ತ್ಯ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ದೊರೆಯಬೇಕಾದುದು ಆತ್ಯವಶ್ಯ.

ದೇಶದ ಬೇರೆ ಬೇರೆ ರಾಜ್ಯಗಳಲ್ಲಿರುವ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಕರ ವೇತನ ಮಟ್ಟಗಳು ಬೇರೆ ಬೇರೆಯಾಗಿವೆ. ೧೯೬೦-೬೧ರಲ್ಲಿ ಮಾಧ್ಯಮಿಕ ಶಿಕ್ಷಕರ ಸರಾಸರಿ ವೇತನವು ಅಸ್ಸಾಂನಲ್ಲಾಗಲಿ ಯಿಗಳಿದ್ದರೆ, ಅದು ೬೦-೬೧ರಲ್ಲಿ ೧೯೬೨ಕ್ಕೆ ಏರಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಕೆಲವು ರಾಜ್ಯಗಳಲ್ಲಿ, ಉದಾಹರಣೆಗಾಗಿ, ಮದ್ರಾಸು, ಕರ್ನಾಟಕ, ವೇತನವು ಸರಾಸರಿಗಿಂತ ಏರಿಕೆಯುಲ್ಲಿದೆಯೆಂಬುದು ಸಂತೋಷದ ಸಂಗತಿಯಾದರೂ ಕಡಿಮೆಯಿರುವ ಉತ್ತರ ಭಾರತದ ರಾಜ್ಯಗಳು ಇತ್ತ ಗಮನ ಹರಿಸುವುದು ಅತ್ಯವಶ್ಯ. ಶಿಕ್ಷಕ ವರ್ಗವು ತಮ್ಮ ಸ್ಥಾನ ಮಾನಗಳ ಗೌರವವನ್ನು ಉಳಿಸಿಕೊಳ್ಳುವುದು ವಿದ್ಯಾರ್ಥಿಗಳ ನಡವಳಕೆ-ಶಿಸ್ತುಗಳಿಗೆ, ತನ್ಮೂಲಕ ದೇಶದ ಉನ್ನತಿಗೆ ಪ್ರೇರಕವೂ ಸಾಧಕವೂ ಆಗ ಬಲ್ಲುದೆಂಬುದರಿಂದ, ಮರ್ಯಾದೆಯಿಂದ ಬದುಕುವುದಕ್ಕೆ ಸಾಕಷ್ಟು ವೇತನವನ್ನು ಶಿಕ್ಷಕ ವರ್ಗಕ್ಕೆ ಕೊಡಬೇಕು. ಸದಾಚಾರ ಸಂಪನ್ನರಾಗಿರಿ, ಶಿಸ್ತು ಪಾಲಿಸಿರಿ, ದುರ್ವ್ಯಸನಗಳಿಗೆ ಬಲಿ ಬೀಳದಿರಿ ಎಂದು ಮುಂತಾದ ಉಪದೇಶ ನೀಡುವುದು ಸುಲಭ. ಹೊಟ್ಟೆಯು ಸಂಕಟದಿಂದ ಯಾವ ಬಂಡೆಯೂ ಇಡ್ಡಾಗಿಲ್ಲ ದು. ಆದರೆ, ನಮ್ಮ ದೇಶದ ರಾಜ್ಯ ಸರಕಾರಗಳು ಉಳಿದೆಲ್ಲ ವಿಭಾಗಗಳ ಲೆಕ್ಕಾಚಾರ ಮುಗಿಸಿ, ಕೊನೆಗೆ ಶಿಕ್ಷಣ ಕ್ಷೇತ್ರಕ್ಕೆ ದತ್ತ ಹೊರಳುವುದರಿಂದ ಹೆಣವಿಲ್ಲನೆಂಬ ಸಮಸ್ಯೆಯನ್ನು ಉತ್ತರಿಸಲಾರದೆ ಸುಮ್ಮನುಳಿಯುತ್ತವೆ ಇದು ನ್ಯಾಯವಲ್ಲ. ನಾವು ನಮ್ಮ ಒಟ್ಟು ವೆಚ್ಚದಲ್ಲಿ ನೂರಕ್ಕೆ ಒಂದರಷ್ಟನ್ನು ಮಾತ್ರ ಶಿಕ್ಷಣಕ್ಕಾಗಿ ವಿನಿಯೋಗಿಸುತ್ತೇವೆ. ಆದರೆ, ನಮ್ಮ ನೆರೆಯ ಸಿಂಹಳವು ತನ್ನ ಖರ್ಚಿನಲ್ಲಿ ಸೇ. ೪ರಷ್ಟು ಈ ಬಗ್ಗೆ ಒದಗಿಸುತ್ತದೆ ವಾಙ್ಮಯ ದೇಶಗಳ ಶಿಕ್ಷಕರಂತೆಲ್ಲವಾದರೂ ಅಭಿವೃದ್ಧಿ ಹೊಂದುತ್ತಿರುವ ನಮ್ಮ ದೇಶದಲ್ಲಿ ಶಿಕ್ಷಕರ ಸ್ಥಿತಿಗತಿಗಳು ಅವಶ್ಯ ಸುಧಾರಿಸಲೇ ಬೇಕು.

ಈ ಪ್ರಶ್ನೆಗೆ ಉತ್ತರ ವರಸೆವಾಗ ಕೆಲವೊಂದು ಸಮಸ್ಯೆಗಳು ಬಂದೇ ಬರುತ್ತವೆ. ಶಿಕ್ಷಣ ಸಂಸ್ಥೆಗಳ ಒಡೆತನದ ಪ್ರಶ್ನೆಯೂ ಇವುಗಳಲ್ಲಿ ಒಂದು. ಹಾಗಿದ್ದರೂ ಶಿಕ್ಷಕರು ಪಡೆಯುವ ವೇತನವೂ ಇನ್ನಿತರ ಸೌಲಭ್ಯಗಳೂ ಅವರವರ ವಿದ್ಯಾ ಅರ್ಹತೆಗೆ ಸರಿಯಾಗಿಯೇ ಇರಬೇಕಲ್ಲದೆ, ಒಡೆತನದ ಪ್ರಶ್ನೆ ಮುಂದೆ ಬರಬಾರದು. ಪ್ರಾಥಮಿಕ ಶಿಕ್ಷಕನಿಗೂ ರೂ. ೧೦೦ ಮಾಧ್ಯಮಿಕ ಶಿಕ್ಷಕನಿಗೆ ರೂ. ೩೦೦ರ ಕನಿಷ್ಠ ವೇತನ ದೊರೆಯಬೇಕು ಎಂದು ಹಲವರ ಅಭಿಪ್ರಾಯ. ಇದನ್ನು ಒಪ್ಪಿಕೊಂಡರೆ ತಪ್ಪಲ್ಲ. ಆದರೆ, ಉಳಿದ ವಿಷಯಗಳಲ್ಲಿಯೂ ಶಿಕ್ಷಕರ ಕಡೆಗೆ ಗಮನ ಹರಿಸಬೇಕೆಂದು ತೋರುತ್ತದೆ. ಏಕೆಂದರೆ, ಇವರಿಗೆ ಉದ್ಯೋಗದಲ್ಲಿ ಭಡ್ತಿ ಹೊಂದುವ ಸೌಲಭ್ಯಗಳು ಇಲ್ಲ; ಇದ್ದರೂ ಎಲ್ಲೋ ಅಲ್ಪಸ್ವಲ್ಪ; ಅದು ಅಗಣ್ಯ. ದಿನದಿಂದ ದಿನಕ್ಕೆ ಬೆಲೆಯೇರಿತ್ತ ಬರುತ್ತಿರುವ ಇಂದಿನ ಕಾಲದಲ್ಲಿ ಹೆಚ್ಚಿನ ನಾಕರ ವರ್ಗದವರಿಗೆ ಬೆಲೆಯೇರಿಕೆಯ ಸೂಚಿಗನುಸಾರ ತುಟ್ಟಿ ಭತ್ತೆಯಲ್ಲಿ ಹೆಚ್ಚಳವಾಗುತ್ತಿದೆ, ಅದನ್ನು ಶಿಕ್ಷಕ ವರ್ಗಕ್ಕೂ ಅನ್ವಯಿಸುವುದು ಅವಶ್ಯವೆನಿಸುತ್ತದೆ. ನಿವೃತ್ತಿ ವೇತನ, ಪ್ರೊವಿಡೆಂಟ್ ಫಂಡು, ಜೀವನಿಮೆ ಮೊದಲಾದ ಸೌಲಭ್ಯಗಳು ಮುದಿತನದಲ್ಲಿ ಅವರ ರಕ್ಷಣೆಗೆ ಸಹಾಯಕವಾಗುವುವು. ಆವರ ಮಕ್ಕಳಿಗೆ ಎಲ್ಲ ಪಟ್ಟಗಳಲ್ಲಿಯೂ ಉಚಿತ ಶಿಕ್ಷಣವನ್ನು ಕೊಡುವುದರಿಂದ ಉಪಕಾರವಾಗುವುದು. ನೇಮಕ ನಿಯಮಗಳಲ್ಲಿ ಉದಾರತೆ, ಉದ್ಯೋಗದಲ್ಲಿ ಭದ್ರತೆ—ರಕ್ಷಣೆಗಳು ಅವರಿಗೂ ಇರಬೇಕು. ಗೊತ್ತುಮಾಡಿದವೇತನವು ಕ್ರಮವತ್ತಾಗಿ ಪ್ರತಿ ತಿಂಗಳೂ ಅವರ ಕೈ ಸೇರುವಂತೆ ಮಾಡುವುದರಿಂದ ಅಧ್ಯಾಪಕರ ಮೂಗು ಉಳಿಯುವುದು. ಶಿಕ್ಷಣದ ಕ್ಷೇತ್ರದಲ್ಲಿ ರಾಜಕಾರಣಿಗಳು ಆಟುತ್ತಿರುವ ಡೊಂಬರಾಟವನ್ನು ನಿಲ್ಲಿಸಿ, ತಜ್ಞ ಶಿಕ್ಷಣಕ್ಷೇತ್ರಿಗೆ ರಾಜ್ಯಸರಕಾರಗಳು ಹೆಚ್ಚಿನ್ನ ಸ್ವಾತಂತ್ರ್ಯ ನೀಡುವುದರಿಂದ ಪಾಠಪಟ್ಟಿಯು ಅವಾಂತರ ತುಸುವಾದರೂ ಕಡಿಮೆಯಾಗುವುದು. ಶಿಕ್ಷಕ ವರ್ಗಕ್ಕೆ ವಸತಿ ಸೌಕರ್ಯ ಕಲ್ಪಿಸುವುದು ಉತ್ತಮ ಹಾಗೂ ಆದರ್ಶ ಶಿಕ್ಷಕರನ್ನು ಗೌರವಿಸುವುದು, ತಮ್ಮ ಶೈಕ್ಷಣಿಕಯೋಗ್ಯತೆಯನ್ನು ಹೆಚ್ಚಿಕೊಂಡವರಿಗೆ ಭಡ್ತಿ ಯನ್ನೀಯುವುದು ಇನ್ನೇ ಮೊದಲಾದ ಸರ್ ಸಂಪ್ರದಾಯಗಳನ್ನು ವ್ಯವಹಾರಕ್ಕೆ ತಂದರೆ, ಶಿಕ್ಷಕರ ಸ್ಥಿತಿಗತಿಗಳು ತುಂಬ ಉತ್ತಮ ವಾಗುವುವು. ಮೇಲೆ ಸೂಚಿಸಿದವುಗಳು ದಿಗ್ದರ್ಶನಕ್ಕೆ ಮಾತ್ರ. ಇವನ್ನೆಲ್ಲ ಕಾರ್ಯರೂಪಕ್ಕೆ ತಂದರೆ ನಮ್ಮ ಶಿಕ್ಷಣ ಕ್ಷೇತ್ರದ ರೂಪವೇ ಬದಲಾಗುತ್ತದು. ಆದರೆ, ಜ್ಞಾನದಾನಕ್ಕೆ ಹಣ ಪೋಣಿಸುವ ಬುದ್ಧಿ ಮಾತ್ರ ನಮ್ಮ ರಾಜಕೀಯ ಸೂತ್ರಧಾರಿಗಳಿಗೆ ಪರಮೋತ್ಕೃಷ್ಟ ಅನುಗ್ರಹಿಸಬೇಕು ಹಾಗಾಗುವ ಕಾಲ ಎಂದು ಬಂದೀತೆಂದು ಎಲ್ಲರೂ ನಿರೀಕ್ಷಿಸುತಿದ್ದಾರೆ.

ವಾರ್ತಾ ವಿಶೇಷ

ಆರ್. ಶಂಕರ್

ಕೇರಳದ ಮುಖ್ಯಮಂತ್ರಿ ಆರ್. ಶಂಕರ್ ಅಧಿಕಾರ ಪಡೆದೊಡನೆಯೇ ಆಪಶ್ವಾಸ ಗೊತ್ತುವಳಯನ್ನೂ ಎದುರಿಸಬೇಕಾಯ್ತು. ಪ್ರಸವಾ ಪಕ್ಷದ ಮಂತ್ರಿಮಂಡಳದಿಂದ ಪ್ರತ್ಯೇಕ ಹೋದ ನಂತರ ವಾದರೂ ಕಾಂಗ್ರೆಸ್ಸು ವಿಧಾನಸಭೆಯು ವಿಶ್ವಾಸವನ್ನು ಉಳಿಸಿಕೊಂಡಿತು. ಇದಕ್ಕೆ ಸರಕಾರವನ್ನು ಉರುಳಿಸುವುದು ಪ್ರಸವಾ ಪಕ್ಷದ ಉದ್ದೇಶವಲ್ಲದಿರುವುದೇ ಕಾರಣ ವೆನ್ನುತ್ತಾರೆ. ಕಾಂಗ್ರೆಸ್ ಮಂತ್ರಿಮಂಡಳವನ್ನು ಸ್ಥಾಪಿಸಿದ ಆರ್. ಶಂಕರರು ಇನ್ನೆಳೆದ ಎರಡೂವರೆ ವರ್ಷಗಳಲ್ಲಿ ಬಹಳ ಶ್ರಮ ವಹಿಸಬೇಕು; ಗಣ್ಯರಲ್ಲಿ ಚುನಾವಣೆಗಳು ನಡೆಯಲಿರುವುದರಿಂದ, ಅವುಗಳಲ್ಲಿ ಕಮ್ಯುನಿಸ್ಟರು ತಮ್ಮ ಪ್ರಭಾವವನ್ನು ಕಳೆದುಕೊಳ್ಳುವಂತೆ ಮಾಡಬೇಕೆಂಬ ಅಭಿಲಾಷೆ ಅವರಲ್ಲಿರುವುದರಿಂದ, ಜನಸೇವೆಯ ಪರಿಮಾಣವನ್ನೂ ಗುಣವನ್ನೂ ಹೆಚ್ಚಿಸಿಕೊಳ್ಳುವುದು ಆಗತ್ಯವಿದೆ.

ಸಿರಿಮಾವೊ

ಸಿಂಹಳ—ಭಾರತಗಳ ಸಂಬಂಧ ರಾಮಾಯಣದಷ್ಟು ಹಳೆಯದಾದುದು. ಆ ಸಂಬಂಧವಿನ್ನೂ ಉಳಿದು ಬಂದಿದೆ. ಪ್ರಧಾನಿ ನೆಹರು ಇದೀಗ ಒಂದೆರ್ಲ ಕೆಲವು ವಾರಿ ಅಲ್ಲಿ ಹೋಗಿದ್ದಾರೆ; ಅಲ್ಲಿನ ಪ್ರಧಾನಿಗಳೂ ಭಾರತಕ್ಕೆ ಬಂದಿದ್ದಾರೆ. ಸಂಪರ್ಕ ಮಾತ್ರದಿಂದಲೇ ಸ್ನೇಹವರ್ಧನೆ ಹೊಗುವುದಿಲ್ಲ; ವ್ಯವಹಾರದಲ್ಲಿಯೂ ಸಹಕೈದಯತೆಬೇಕು. ಸಿಂಹಳದಲ್ಲಿರುವ ಭಾರತೀಯರ ಸಂಖ್ಯೆ ಕಡಿಗಣಿಸುವಂತಿಲ್ಲ. ಅವರ ಭವಿಷ್ಯವಿಂದು ನಿರಾಶಾಮಯವಾಗಿಲ್ಲವಾದರೂ ಆಶಾಮಯವಾಗಿಯೂ ಇರುವುದಿಲ್ಲ. ಇವರೆಲ್ಲರಿಗೆ ಸಿಂಹಳದ ಪೌರತನವನ್ನು ನೀಡುವ ಮಾತುಕತೆಗಳು ಹಿಂದಿನಿಂದಲೂ ನಡೆದು ಬಂದು, ಮೂಲೆ ಸೇರುತ್ತಿವೆ. ಇಂದು ಪ್ರಧಾನಿ ಸಿರಿಮಾವೊ ಭಂಡಾರ ನಾಯಕೆಯವರು ಹಲವು ಪ್ರಸ್ಥಿಗಳಿಂದ ಕ್ರಾಂತಿಯ ಕಿಡಿ ಎಬ್ಬಿಸಿದ್ದಾರೆ; ಈ ದೆಸೆಯಲ್ಲಾ ಅವರು ಹಿಂದುಳಿಯದಂತೆ ನಂಬಬಹುದು.

ಎಸ್. ಆರ್. ಕಂಠಿ

ಶಿಕ್ಷಣ ವಿಧಾನದ ಸುಧಾರಣೆ, ಜಾಗರೂಕತೆಯಿಂದ ಪ್ರವೇಶ ನೀಡುವುದು, ತರಬೇತಿಯು ಉತ್ತಮ ಸಾಕಾರ್ಯಗಳು ಹಾಗೂ ಪರ್ಯಾಪ್ತ ಸ್ಪಮಾಣದಲ್ಲಿ ಸವಲತ್ತು ಶಿಕ್ಷಕರ ನೇಮಕ-ಈ ಮುಂತಾದ ಕ್ರಮಗಳಿಂದ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿ ಅನುತ್ತೀರ್ಣರಾಗುವುದನ್ನು ತಪ್ಪಿಸಬಹುದು ಎಂದು ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತೆರಿಗೆ ಹೊಂದದಿರುವವರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದರಿಂದ ರಾಜ್ಯದ ಸಂಪತ್ತು ನ್ಯಕ್ಷೀಣವಾಗುತ್ತಿದೆಯೆಂದು ಕಳವಳಪಡುತ್ತಿರುವ ನಮ್ಮ ರಾಜ್ಯದ ಶಿಕ್ಷಣ ಸಚಿವ ಕಂಠಿಯವರು ಸೇರಿನ ಸಲಹೆಯನ್ನು ಗಮನಿಸಬೇಕು. ಹಣವಿಲ್ಲದೆ ಶಿಕ್ಷಕರ ನೇಮಕವಿಲ್ಲ, ತರಬೇತಿಯಿಲ್ಲ, ಎಂದು ಕುಳಿತರೆ ಖಡ್ಡಾಯ ಶಿಕ್ಷಣದ ಈ ಯುಗದಲ್ಲಿ ಏನು ಶತ್ರಪರಿಣಾಮ ಲಭಿಸೀತು?

24—10—1962ನೇ ಬುಧವಾರ ನಡೆಯುವ ಉಡುಪಿ ನಗರ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರಿಗೇನೇ ಬೆಂಬಲ ಕೊಡಿರಿ.

ಚುನಾವಣಾ ಚಿನ್ನೆ—
ಜೋಡೆತ್ತು

ಅಲ್ಲಲ್ಲಿಯ ಸುದ್ದಿಸಾರ

ನರ್ಸಿಂಗ್ ಸ್ಕೂಲಿನ ಉದ್ಘಾಟನೆ— ಕೇಂದ್ರ ಸರಕಾರದ ನೆರವಿನಿಂದ ಕಸೂ ಬಾಜಿನಲ್ಲಿ ಆಸ್ಪತ್ರೆಯ ಆಶ್ರಯದಲ್ಲಿ ನಡೆಯುವ ೪ ವರ್ಷಗಳ ನ್ಯರ್ಸಿಂಗದ ಮನೆಪಾಲ ನರ್ಸಿಂಗ್ ಸ್ಕೂಲಿನ ಉದ್ಘಾಟನೆಯನ್ನು ಇದೇ ತಾ. ೧೭ರಂದು ರಾಜ್ಯದ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ನೆರವೇರಿಸುತ್ತಾ ಮೆಡಿಕಲ್ ವಿದ್ಯಾರ್ಥಿಗಳು ಪದವಿಪಡೆಯುವ ಮೊದಲು ೫ ವರ್ಷಗಳಾದರೂ ಗ್ರಾಮಾಂತರಗಳಲ್ಲಿ ಸೇವೆ ಸಲ್ಲಿಸಬೇಕೆಂದು ಹೇಳಿದರಲ್ಲದೆ ಡಾ। ಟಿ. ಎಮ್. ಎ ಪೈಯವರ ಶಾರ್ಯಚಾತುರ್ಯ, ದೂರದರ್ಶಿತ್ವ, ಯೋಜನೆ, ಸಾಧನೆಗಳನ್ನು ಶ್ಲಾಘಿಸಿದರು. ಕೆ. ಎಂ ಪಿ. ಕಳಾಭವನ ಜರಗಿದ ಈ ಸಮಾರಂಭದ ಅರಂಭದಲ್ಲಿ ಡಾ। ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿ ಮೆಡಿಕಲ್ ಕಾಲೇಜಿನ ಸ್ಥಾಪನೆಯಲ್ಲಿ ಶ್ರೀ ನಿಜಲಿಂಗಪ್ಪನವರು ಕೊಟ್ಟ ಬೆಂಬಲ ಪ್ರೋತ್ಸಾಹಗಳನ್ನು ಸ್ಮರಣೆಗೆ ತೆಗೆದರು, ಶ್ರೀ ಟಿ. ಎ. ಪೈಯವರು ಧನ್ಯವಾದಗಳನ್ನರ್ಪಿಸುತ್ತಾ, ಕಸ್ತೂರ್ಬಾ ಮೆಡಿಕಲ್ ಕಾಲೇಜು ಅಖಿಲ ಭಾರತ ಮಟ್ಟದ ಕಾಲೇಜಾಗಿರುವುದರಿಂದಲೂ ಸರಕಾರದ ಸಮಾಯಿಷಿಯ ರಕ್ಷಕರ ಸಹಕಾರದಿಂದಲೇ ನಡೆಯುವುದರಿಂದಲೂ ಗ್ರಾಮಾಂತರ ಪ್ರದೇಶದಲ್ಲಿಯೇ ವ್ಯಾಸಂಗ ನಡೆಯುತ್ತಿರುವುದರಿಂದಲೂ ವಿದ್ಯಾರ್ಥಿಗಳು ಪದವೀಧರರಾಗುವ ಮೊದಲು ಗ್ರಾಮಾಂತರ ಸೇವೆ ಮಾಡುವ ನಿರ್ಬಂಧ ಹಾಕಲು ಸಾಧ್ಯವಾಗಿಲ್ಲವೆಂದು ಹೇಳಿದರು.

ಮುಂಬಯಿಯಲ್ಲಿ ಕಾರಂತರ ಯಕ್ಷಗಾನ ಪ್ರಯೋಗ— ಯಕ್ಷಗಾನ ಕಲೆಯ ಪುನರುದ್ಧಾರಕ್ಕಾಗಿ ಹಲವು ವರ್ಷಗಳಿಂದ ಶ್ರಮಿಸುತ್ತಿರುವ ಶ್ರೀ ಶಿವರಾಮ ಕಾರಂತರ ನಿರ್ದೇಶನದಲ್ಲಿ "ಭೀಷ್ಮವಿಜಯ" ಮತ್ತು "ಅಭಿಮನ್ಯು" ಸೈಂಧವ ವಧೆ ಈ ಯಕ್ಷಗಾನ ಪ್ರಸಂಗಗಳ ವಾತಾವರಣಕ್ಕೆ ಸಂಗೀತ, ನೃತ್ಯ, ಪ್ರಧಾನವಾದ ಪ್ರಯೋಗಗಳು ಇದೇ ತಿಂಗಳ ತಾ. 16, 18 ಮತ್ತು 19ನೇ ದಿನಾಂಕದಂದು ಮುಂಬಯಿಯ ಸುಪ್ರಸಿದ್ಧ ಬಿರ್ಲಾ ಸಭಾಗೃಹ, ರಂಗಭವನ ಮತ್ತು ಕೆಂಗ್ ಜಾರ್ಜ್ ಹೈಸ್ಕೂಲು ಸಭಾ ಗೃಹಗಳಲ್ಲಿ ನಡೆಯಲಿವೆ. ಉಡುಪಿಯ ತರಬೇತಿ ಶಾಲೆಯಲ್ಲಿ ಕಾರಂತರ ನಿರ್ದೇಶನದಲ್ಲಿ ತರಬೇತಿ ಪಡೆದ ಸುಪ್ರಸಿದ್ಧ ಯಕ್ಷಗಾನ ಕಲಾವಿದರು ಈ ಪ್ರಯೋಗಗಳಲ್ಲಿ ಭಾಗವಹಿಸಲಿದ್ದಾರೆ ಮುಂಬಯಿಯ ಸುಪ್ರಸಿದ್ಧ ಚಿತ್ರಕಾರರಾದ ಶ್ರೀ ಕೆ. ಕೆ. ಹೆಬ್ಬಾರರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿರುವ ಯಕ್ಷಗಾನ ಪುನರುಜ್ಜೀವನ ಮಂಡಳಿ ಈ ಕಾರ್ಯಕ್ರಮಗಳನ್ನು ನಡೆಸುವ ಭಾರ ಹೊತ್ತಿದೆ. ಕಾರಂತರ ಸಾಹಸದ ಈ ಪ್ರಯೋಗದ ಸೃಷ್ಟಿಯು ಪ್ರವರ್ತನ ಮುಂಬಯಿಯಲ್ಲಿ ಜರಗಲಿರುವಂತಾದುದು ಮುಂಬಯಿಯ ಕನ್ನಡಿಗರಿಗೆಲ್ಲಾ ಆಭಿಮಾನದ ಮಾತಾಗಿದೆ.

ಮೊಗವೀರ ವ್ಯವಸ್ಥಾಪಕ ಮಂಡಳಿಯ ವಾರ್ಷಿಕೋತ್ಸವ—ಮತ್ತು ಮೊಗವೀರ ರಾತ್ರಿ ಶಾಲೆಗಳ ಸಾರಿತೋಷ ನಿತರ ತಾ ಸಮಾರಂಭವು "ಟ್ಯಾಬ್ಲಿಸ್"ನ ಸಂಗಾಡಕ ಶ್ರೀ ಆರ್. ಕೆ. ಕರಂಜ ಇವರ ಅಧ್ಯಕ್ಷತೆಯಲ್ಲಿ ತಾ. 7—10—62ರಂದು ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ವಿಜೃಂಭಣೆಯಿಂದ ಜರಗಿತು.

ಶ್ರೀಮತಿ ಸುನಂದಾ ಕೆ. ಬೋಳೂರರಿಂದ ದೇವತಾ ಪ್ರಾರ್ಥನೆಯೊಡನೆ ಬಳಿಕ ಶ್ರೀ ಎನ್. ಪಿ. ಬಂಗೇರರು ಸ್ವಾಗತಿಸಿದರು. ಶ್ರೀ ಉಮಾನಂದ ಜಿ. ಮುಲ್ಕಿಯವರು ಸಂದೇಶವನ್ನು ಓದಿದ ಬಳಿಕ ಶ್ರೀಮತಿ ಐರೀನ್ ಕಾರಂಜರು ಸಾರಿತೋಷ ಪತ್ರಗಳನ್ನು ಓದಿದರು.

ಸಭಿಕರೆದ್ದು ಶ್ರೀಗಳಾದ ಜಿ. ಎನ್ ವೈದ್ಯ ಕೆ. ಯಸ್. ಧಾರಿಯಾ ಸ್ಕೂಲ್ ಬಿ. ಎಸ್. ಕೋಟಿಯಾನ್, ಎ. ಎಸ್. ಕೆ. ರಾವ್, ಕಮಲ್ ಕುಮಾರ್ ಮತ್ತು ಶ್ರೀಮತಿ ಲೀಲಾವತಿ ಪ್ರಭಾಕರರುಮಂಡಳಿಯ ಕಾರ್ಯಚಟುವಟಿಕೆಗಳನ್ನು ಪ್ರಶಂಸಿಸಿ ಭಾಷಣಗೈದರು.

ಶ್ರೀ ಕರಂಜರು ತನ್ನ ಅಧ್ಯಕ್ಷೆ ಭಾಷಣದಲ್ಲಿ ಮಂಡಳಿಯು ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳು ಭಾರತದ ಇತರ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದರು.

ಶ್ರೀ ಆರ್. ಎಲ್. ಕೋಟ್ಯರು ವಂದನಾರ್ಪಣೆಯನ್ನು ಗೈದ ಬಳಿಕ ಮನರಂಜನಾ ಕಾರ್ಯಕ್ರಮಗಳಾದುವು

ಮುಂಬಯಿ ರಾಜಾಪುರ ಸಾರಸ್ವತ ಸಂಘದ— ವತಿಯಿಂದ ತಾ 7.10.62 ರಂದು ಸಂಘದ ಕಾರ್ಯಾಲಯದಲ್ಲಿ ಶ್ರೀ ಪಿ. ಶಂಕರ ಪ್ರಭು ಇವರು ಅಮೇರಿಕದಲ್ಲಿ ಉಚ್ಚ ಶಿಕ್ಷಣ ಪಡೆದು ಬಂದುದರ ಸಲುವಾಗಿ ಶ್ರೀ ಬಿ. ಎ. ನಾಯಕರವರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟ ನಡೆಯಿತು ಶ್ರೀ ಕೆ ಎ. ನಾಯಕರು ಸ್ವಾಗತಿಸಿದ ಬಳಿಕ ಅತಿಥಿಯವರು ಯು. ಎಸ್. ಎ.ದಲ್ಲಿಯ ತನ್ನ ವಿದ್ಯಾಭ್ಯಾಸದ ಹಾಗೂ ಅಲ್ಲಿಯ ಜನಜೀವನದ ಕುರಿತು ಭಾಷಣವಿತ್ತರು. ಸಭಿಕರ ಭಾಷಣವಾದ ಬಳಿಕ ಶ್ರೀ ಡಿ. ಡಿ. ಪ್ರಭುಗಳವರು ಧನ್ಯವಾದಗಳನ್ನು ಆರ್ಪಿಸಿದರು

ವಿದ್ಯಾಮಂತ್ರಿಯವರಿಗೆ ಮನವಿ— ದ. ಕ ಜಿಲ್ಲಾ ಪಾಸಿಗಿ ಪ್ರಾಥಮಿಕ ಶಾಲೆಗಳ ಮೇಸೇಜರರ ಸಂಘದ ಕಡೆಯಿಂದ ಹಲವು ಸಲ ನಿವೇದಿಸಿಕೊಂಡಿದ್ದು ಈ ವರೆಗೂ ನಿವೃತ್ತಿ ಹೊಂದದಿರುವ ಕೆಳಿಕೆಗಳ ಕುರಿತು, ಸಂಘದ ಅಧ್ಯಕ್ಷರಾದ ಶ್ರೀ ಟಿ ಎ. ಪೈಯವರ ನೇತೃತ್ವದಲ್ಲಿ ಶ್ರೀ ಕುರ್ಕಾಲು ಗಣಪಯ್ಯ ಶೆಟ್ಟಿ, ರೆ ಸಾ. ಬಿ ಎಸ್. ಡಿಸೋಜ ಕೂಡಾ ಶಿಕ್ಷಣ ಸಚಿವರಿಗೆ ತಾರೀಕು 2—10—62ರಲ್ಲಿ ಮನವಿ ಪತ್ರವನ್ನು ಮಂಗಳೂರಲ್ಲಿ ಭೇಟಿಯಾಗಿ ತಾ. 20-9-62ರಂದು ಮಂಡಳಿಯ ನಿರ್ಣಯಗಳ ಮನವಿಯನ್ನು ಅರ್ಪಿಸಲಾಯಿತು. ಮನವಿಯಲ್ಲಿದ್ದ ಕೇಳಿಕೆಗಳ ಅವಶ್ಯಕತೆಗಳನ್ನು ಸ್ವೀಕರಿಸಿ ಮಂತ್ರಿಗಳೊಂದಿಗೆ ಚರ್ಚಿಸುವ ಸಮಯದಲ್ಲಿ ಹಾಜರಿದ್ದ ಮೂಸ್ಯ ಡಿ ಇ. ಓ.ರವರು ತುಂಬಾ ಸಹಕರಿಸಿದರು. ಮನವಿಯ ಕುರಿತು ಸಮಾಧಾನಗೊಂಡ ಸಚಿವರು—ಬಾಲ್ಯ ವರ್ಷದಲ್ಲಿ ನಿಯಂತ್ರಿತನ್ನ ಗ್ಯಾಂಟು ಕೊಡಿಸುವ, ವೃತ್ತಿ ಶಿಕ್ಷಕರ ಬಾಲ್ಯು ತಡೆಹಿಯಲ್ಪಟ್ಟ ಹೊಸ ಸ್ಕೇಲನ್ನೀಯುವ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಿಗೆ ಪೆಟ್ಟಿನ ನೇತನ ನಿರ್ಧರಿಸುವ, ಅಧ್ಯಾಪಕ ವಿದ್ಯಾರ್ಥಿ ನಿಸ್ಪತ್ತಿ 1:10 ಇದ್ದುದನ್ನು 1:30 ಕ್ಕೆ ಇಳಿಸುವ,—ಅಶ್ವಾಸನೆಯನ್ನು ತರಬೇತಿ ಶಾಲೆಯಲ್ಲಿ ಕಾರಂತರ ನಿರ್ದೇಶನದಲ್ಲಿ ತರಬೇತಿ ಪಡೆದ ಸುಪ್ರಸಿದ್ಧ ಯಕ್ಷಗಾನ ಕಲಾವಿದರು ಈ ಪ್ರಯೋಗಗಳಲ್ಲಿ ಭಾಗವಹಿಸಲಿದ್ದಾರೆ ಮುಂಬಯಿಯ ಸುಪ್ರಸಿದ್ಧ ಚಿತ್ರಕಾರರಾದ ಶ್ರೀ ಕೆ. ಕೆ. ಹೆಬ್ಬಾರರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿರುವ ಯಕ್ಷಗಾನ ಪುನರುಜ್ಜೀವನ ಮಂಡಳಿ ಈ ಕಾರ್ಯಕ್ರಮಗಳನ್ನು ನಡೆಸುವ ಭಾರ ಹೊತ್ತಿದೆ. ಕಾರಂತರ ಸಾಹಸದ ಈ ಪ್ರಯೋಗದ ಸೃಷ್ಟಿಯು ಪ್ರವರ್ತನ ಮುಂಬಯಿಯಲ್ಲಿ ಜರಗಲಿರುವಂತಾದುದು ಮುಂಬಯಿಯ ಕನ್ನಡಿಗರಿಗೆಲ್ಲಾ ಆಭಿಮಾನದ ಮಾತಾಗಿದೆ.

ಮೊಗವೀರ ವ್ಯವಸ್ಥಾಪಕ ಮಂಡಳಿಯ ವಾರ್ಷಿಕೋತ್ಸವ—ಮತ್ತು ಮೊಗವೀರ ರಾತ್ರಿ ಶಾಲೆಗಳ ಸಾರಿತೋಷ ನಿತರ ತಾ ಸಮಾರಂಭವು "ಟ್ಯಾಬ್ಲಿಸ್"ನ ಸಂಗಾಡಕ ಶ್ರೀ ಆರ್. ಕೆ. ಕರಂಜ ಇವರ ಅಧ್ಯಕ್ಷತೆಯಲ್ಲಿ ತಾ. 7—10—62ರಂದು ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ವಿಜೃಂಭಣೆಯಿಂದ ಜರಗಿತು.

ಶ್ರೀಮತಿ ಸುನಂದಾ ಕೆ. ಬೋಳೂರರಿಂದ ದೇವತಾ ಪ್ರಾರ್ಥನೆಯೊಡನೆ ಬಳಿಕ ಶ್ರೀ ಎನ್. ಪಿ. ಬಂಗೇರರು ಸ್ವಾಗತಿಸಿದರು. ಶ್ರೀ ಉಮಾನಂದ ಜಿ. ಮುಲ್ಕಿಯವರು ಸಂದೇಶವನ್ನು ಓದಿದ ಬಳಿಕ ಶ್ರೀಮತಿ ಐರೀನ್ ಕಾರಂಜರು ಸಾರಿತೋಷ ಪತ್ರಗಳನ್ನು ಓದಿದರು.

ಸಭಿಕರೆದ್ದು ಶ್ರೀಗಳಾದ ಜಿ. ಎನ್ ವೈದ್ಯ ಕೆ. ಯಸ್. ಧಾರಿಯಾ ಸ್ಕೂಲ್ ಬಿ. ಎಸ್. ಕೋಟಿಯಾನ್, ಎ. ಎಸ್. ಕೆ. ರಾವ್, ಕಮಲ್ ಕುಮಾರ್ ಮತ್ತು ಶ್ರೀಮತಿ ಲೀಲಾವತಿ ಪ್ರಭಾಕರರುಮಂಡಳಿಯ ಕಾರ್ಯಚಟುವಟಿಕೆಗಳನ್ನು ಪ್ರಶಂಸಿಸಿ ಭಾಷಣಗೈದರು.

ಶ್ರೀ ಕರಂಜರು ತನ್ನ ಅಧ್ಯಕ್ಷೆ ಭಾಷಣದಲ್ಲಿ ಮಂಡಳಿಯು ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳು ಭಾರತದ ಇತರ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದರು.

ಶ್ರೀ ಆರ್. ಎಲ್. ಕೋಟ್ಯರು ವಂದನಾರ್ಪಣೆಯನ್ನು ಗೈದ ಬಳಿಕ ಮನರಂಜನಾ ಕಾರ್ಯಕ್ರಮಗಳಾದುವು

ಮುಂಬಯಿ ರಾಜಾಪುರ ಸಾರಸ್ವತ ಸಂಘದ— ವತಿಯಿಂದ ತಾ 7.10.62 ರಂದು ಸಂಘದ ಕಾರ್ಯಾಲಯದಲ್ಲಿ ಶ್ರೀ ಪಿ. ಶಂಕರ ಪ್ರಭು ಇವರು ಅಮೇರಿಕದಲ್ಲಿ ಉಚ್ಚ ಶಿಕ್ಷಣ ಪಡೆದು ಬಂದುದರ ಸಲುವಾಗಿ ಶ್ರೀ ಬಿ. ಎ. ನಾಯಕರವರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟ ನಡೆಯಿತು ಶ್ರೀ ಕೆ ಎ. ನಾಯಕರು ಸ್ವಾಗತಿಸಿದ ಬಳಿಕ ಅತಿಥಿಯವರು ಯು. ಎಸ್. ಎ.ದಲ್ಲಿಯ ತನ್ನ ವಿದ್ಯಾಭ್ಯಾಸದ ಹಾಗೂ ಅಲ್ಲಿಯ ಜನಜೀವನದ ಕುರಿತು ಭಾಷಣವಿತ್ತರು. ಸಭಿಕರ ಭಾಷಣವಾದ ಬಳಿಕ ಶ್ರೀ ಡಿ. ಡಿ. ಪ್ರಭುಗಳವರು ಧನ್ಯವಾದಗಳನ್ನು ಆರ್ಪಿಸಿದರು

ವಿದ್ಯಾಮಂತ್ರಿಯವರಿಗೆ ಮನವಿ— ದ. ಕ ಜಿಲ್ಲಾ ಪಾಸಿಗಿ ಪ್ರಾಥಮಿಕ ಶಾಲೆಗಳ ಮೇಸೇಜರರ ಸಂಘದ ಕಡೆಯಿಂದ ಹಲವು ಸಲ ನಿವೇದಿಸಿಕೊಂಡಿದ್ದು ಈ ವರೆಗೂ ನಿವೃತ್ತಿ ಹೊಂದದಿರುವ ಕೆಳಿಕೆಗಳ ಕುರಿತು, ಸಂಘದ ಅಧ್ಯಕ್ಷರಾದ ಶ್ರೀ ಟಿ ಎ. ಪೈಯವರ ನೇತೃತ್ವದಲ್ಲಿ ಶ್ರೀ ಕುರ್ಕಾಲು ಗಣಪಯ್ಯ ಶೆಟ್ಟಿ, ರೆ ಸಾ. ಬಿ ಎಸ್. ಡಿಸೋಜ ಕೂಡಾ ಶಿಕ್ಷಣ ಸಚಿವರಿಗೆ ತಾರೀಕು 2—10—62ರಲ್ಲಿ ಮನವಿ ಪತ್ರವನ್ನು ಮಂಗಳೂರಲ್ಲಿ ಭೇಟಿಯಾಗಿ ತಾ. 20-9-62ರಂದು ಮಂಡಳಿಯ ನಿರ್ಣಯಗಳ ಮನವಿಯನ್ನು ಅರ್ಪಿಸಲಾಯಿತು. ಮನವಿಯಲ್ಲಿದ್ದ ಕೇಳಿಕೆಗಳ ಅವಶ್ಯಕತೆಗಳನ್ನು ಸ್ವೀಕರಿಸಿ ಮಂತ್ರಿಗಳೊಂದಿಗೆ ಚರ್ಚಿಸುವ ಸಮಯದಲ್ಲಿ ಹಾಜರಿದ್ದ ಮೂಸ್ಯ ಡಿ ಇ. ಓ.ರವರು ತುಂಬಾ ಸಹಕರಿಸಿದರು. ಮನವಿಯ ಕುರಿತು ಸಮಾಧಾನಗೊಂಡ ಸಚಿವರು—ಬಾಲ್ಯ ವರ್ಷದಲ್ಲಿ ನಿಯಂತ್ರಿತನ್ನ ಗ್ಯಾಂಟು ಕೊಡಿಸುವ, ವೃತ್ತಿ ಶಿಕ್ಷಕರ ಬಾಲ್ಯು ತಡೆಹಿಯಲ್ಪಟ್ಟ ಹೊಸ ಸ್ಕೇಲನ್ನೀಯುವ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಿಗೆ ಪೆಟ್ಟಿನ ನೇತನ ನಿರ್ಧರಿಸುವ, ಅಧ್ಯಾಪಕ ವಿದ್ಯಾರ್ಥಿ ನಿಸ್ಪತ್ತಿ 1:10 ಇದ್ದುದನ್ನು 1:30 ಕ್ಕೆ ಇಳಿಸುವ,—ಅಶ್ವಾಸನೆಯನ್ನು ತರಬೇತಿ ಪಡೆದ ಸುಪ್ರಸಿದ್ಧ ಯಕ್ಷಗಾನ ಕಲಾವಿದರು ಈ ಪ್ರಯೋಗಗಳಲ್ಲಿ ಭಾಗವಹಿಸಲಿದ್ದಾರೆ ಮುಂಬಯಿಯ ಸುಪ್ರಸಿದ್ಧ ಚಿತ್ರಕಾರರಾದ ಶ್ರೀ ಕೆ. ಕೆ. ಹೆಬ್ಬಾರರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿರುವ ಯಕ್ಷಗಾನ ಪುನರುಜ್ಜೀವನ ಮಂಡಳಿ ಈ ಕಾರ್ಯಕ್ರಮಗಳನ್ನು ನಡೆಸುವ ಭಾರ ಹೊತ್ತಿದೆ. ಕಾರಂತರ ಸಾಹಸದ ಈ ಪ್ರಯೋಗದ ಸೃಷ್ಟಿಯು ಪ್ರವರ್ತನ ಮುಂಬಯಿಯಲ್ಲಿ ಜರಗಲಿರುವಂತಾದುದು ಮುಂಬಯಿಯ ಕನ್ನಡಿಗರಿಗೆಲ್ಲಾ ಆಭಿಮಾನದ ಮಾತಾಗಿದೆ.

ಮೊಗವೀರ ವ್ಯವಸ್ಥಾಪಕ ಮಂಡಳಿಯ ವಾರ್ಷಿಕೋತ್ಸವ—ಮತ್ತು ಮೊಗವೀರ ರಾತ್ರಿ ಶಾಲೆಗಳ ಸಾರಿತೋಷ ನಿತರ ತಾ ಸಮಾರಂಭವು "ಟ್ಯಾಬ್ಲಿಸ್"ನ ಸಂಗಾಡಕ ಶ್ರೀ ಆರ್. ಕೆ. ಕರಂಜ ಇವರ ಅಧ್ಯಕ್ಷತೆಯಲ್ಲಿ ತಾ. 7—10—62ರಂದು ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ವಿಜೃಂಭಣೆಯಿಂದ ಜರಗಿತು.

ಶ್ರೀಮತಿ ಸುನಂದಾ ಕೆ. ಬೋಳೂರರಿಂದ ದೇವತಾ ಪ್ರಾರ್ಥನೆಯೊಡನೆ ಬಳಿಕ ಶ್ರೀ ಎನ್. ಪಿ. ಬಂಗೇರರು ಸ್ವಾಗತಿಸಿದರು. ಶ್ರೀ ಉಮಾನಂದ ಜಿ. ಮುಲ್ಕಿಯವರು ಸಂದೇಶವನ್ನು ಓದಿದ ಬಳಿಕ ಶ್ರೀಮತಿ ಐರೀನ್ ಕಾರಂಜರು ಸಾರಿತೋಷ ಪತ್ರಗಳನ್ನು ಓದಿದರು.

ಸಭಿಕರೆದ್ದು ಶ್ರೀಗಳಾದ ಜಿ. ಎನ್ ವೈದ್ಯ ಕೆ. ಯಸ್. ಧಾರಿಯಾ ಸ್ಕೂಲ್ ಬಿ. ಎಸ್. ಕೋಟಿಯಾನ್, ಎ. ಎಸ್. ಕೆ. ರಾವ್, ಕಮಲ್ ಕುಮಾರ್ ಮತ್ತು ಶ್ರೀಮತಿ ಲೀಲಾವತಿ ಪ್ರಭಾಕರರುಮಂಡಳಿಯ ಕಾರ್ಯಚಟುವಟಿಕೆಗಳನ್ನು ಪ್ರಶಂಸಿಸಿ ಭಾಷಣಗೈದರು.

ಶ್ರೀ ಕರಂಜರು ತನ್ನ ಅಧ್ಯಕ್ಷೆ ಭಾಷಣದಲ್ಲಿ ಮಂಡಳಿಯು ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳು ಭಾರತದ ಇತರ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದರು.

ಶ್ರೀ ಆರ್. ಎಲ್. ಕೋಟ್ಯರು ವಂದನಾರ್ಪಣೆಯನ್ನು ಗೈದ ಬಳಿಕ ಮನರಂಜನಾ ಕಾರ್ಯಕ್ರಮಗಳಾದುವು

ಮುಂಬಯಿ ರಾಜಾಪುರ ಸಾರಸ್ವತ ಸಂಘದ— ವತಿಯಿಂದ ತಾ 7.10.62 ರಂದು ಸಂಘದ ಕಾರ್ಯಾಲಯದಲ್ಲಿ ಶ್ರೀ ಪಿ. ಶಂಕರ ಪ್ರಭು ಇವರು ಅಮೇರಿಕದಲ್ಲಿ ಉಚ್ಚ ಶಿಕ್ಷಣ ಪಡೆದು ಬಂದುದರ ಸಲುವಾಗಿ ಶ್ರೀ ಬಿ. ಎ. ನಾಯಕರವರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟ ನಡೆಯಿತು ಶ್ರೀ ಕೆ ಎ. ನಾಯಕರು ಸ್ವಾಗತಿಸಿದ ಬಳಿಕ ಅತಿಥಿಯವರು ಯು. ಎಸ್. ಎ.ದಲ್ಲಿಯ ತನ್ನ ವಿದ್ಯಾಭ್ಯಾಸದ ಹಾಗೂ ಅಲ್ಲಿಯ ಜನಜೀವನದ ಕುರಿತು ಭಾಷಣವಿತ್ತರು. ಸಭಿಕರ ಭಾಷಣವಾದ ಬಳಿಕ ಶ್ರೀ ಡಿ. ಡಿ. ಪ್ರಭುಗಳವರು ಧನ್ಯವಾದಗಳನ್ನು ಆರ್ಪಿಸಿದರು

ರಂಗಂ ಪೇಟೆ— ಕನ್ನಡ ಸಾಹಿತ್ಯ ಸಂಘದ ವತಿಯಿಂದ ನಾಡಹಬ್ಬವು ಇದೇ ತಾ. 10ರಿಂದ 5ರ ವರೆಗೆ ವಿಜೃಂಭಣೆಯಿಂದ ಜರಗಿತು. ಶ್ರೀಗಳಾದ ಡಿ. ಗೋವಿಂದಪ್ಪ, ಯಜ್ಞ. ಮರಿಗೌಡ ಕುವೂರು ಪ್ರಮೀಳಾ ಜೋಶಿ, ಆರ್. ಯಜ್. ದೇಶಪಾಂಡೆ, ಎಲ್. ಎಂ. ಗುಡ್ಡೀನ, ತೀ. ನಂ. ಶ್ರೀ ಕಂರಯ್ಯ, ಬೋಡಾ ರಾಮಣ್ಣ, ಮೊದಲಾದವರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ದಿನಂಪ್ರತಿ ರಾತ್ರಿ ಮನರಂಜನೆಯ ಕಾರ್ಯಕ್ರಮಗಳು ಜರಗಿದವು ಕಾರ್ಯದರ್ಶಿ ಎಸ್. ಆರ್. ಬುದ್ಧಿವಂತ ಶೆಟ್ಟರು ವಂದನೆ ಸಲ್ಲಿಸಿದರು.

ಉಡುಪಿ ವೆಂಕಟರಮಣ ದೇವಸ್ಥಾನದಲ್ಲಿ—ನವರಾತ್ರಿ ಉತ್ಸವವು ವಿವಿಧ ಕಾರ್ಯಕ್ರಮಗಳಿಂದ ಜ್ಯುವೆಲರ್ ರಾಘವೇಂದ್ರ ಕೃಷ್ಣ ಭಟ್ಟ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಅಂಬಲ್ಪಾಡಿ—ಶ್ರೀ ಕೆ. ಮುಕ್ಕುಸ್ವಾಣ ಉಪಾಧ್ಯಾಯರಿಂದ ಬರೆಯಲ್ಪಟ್ಟ "ಬಾಲರಕ್ಷೆ" ಎಂಬ ಶಿಕ್ಷಣ ಗಾನ ಪಡಿತಿಯ ಮುದ್ರಕದ ಪ್ರತಿಗಳನ್ನು ನ. ಶ್ರೀಶ ಬಲ್ಲಾಳರೂ, ಸಿ ರಾಮಮಾಸ ಬಲ್ಲಾಳರೂ ಮಹಾನವಮಿಯ ಶಾಣೆಕೆಯೊಳಗಿ ಮಿತ್ರರಿಗೂ, ಮಕ್ಕಳಿಗೂ, ಹಂಚಿ ಪ್ರೋತ್ಸಾಹಿಸಿರುತ್ತಾರೆ.

ಸುಬ್ರಹ್ಮಣ್ಯ—ತಾ. 8ರಂದು ಶ್ರೀ ಪಾಗೀರ್ರೇ ಸಾಂಗೀತ ಸಭೆಯವರು ಶಾರದಾ ಪೂಜೋತ್ಸವನ್ನು ಸುಬ್ರಹ್ಮಣ್ಯ ಮಠದ ಶ್ರೀ ಸತ್ಯಜ್ಞತೀರ್ಥ ಶ್ರೀಪಾದಂಗಳವರ ಆಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿಸಿದರು.

ಕಮಲಾ ಬಾಯಿ ಪಾರ್ಕಿನ ಉದ್ಘಾಟನೆ—ಕಡಿಯಾಳಿ ಹಾ. ಎ. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಾಡಹಬ್ಬವು ತಾ 7ರಂದು ಶ್ರೀ ಜಿ ಎಸ್. ಸಿದ್ದೇಶ್ವರರ ಅಧ್ಯಕ್ಷತೆಯಲ್ಲಿ ನಡೆಯಿತು ಮದ್ರಾಸಿನ ಪಾ. ಯು. ಎಲ್. ನಾರಾಯಣ ರಾಯರು ತಮ್ಮ ನಿತ್ಯ ದಿನಂಗತೆ ಯು. ಕಮಲಾ ಬಾಯಿಯವರ ಸ್ಮಾರಕವಾಗಿ ಪಾನ ವಾಗಿ ರೂ 3 ಸಾವಿರಕ್ಕೂ ಮಿಕ್ಕಿದ ವೆಚ್ಚದಿಂದ ಕಟ್ಟಿಸಿಕೊಟ್ಟ ಕಮಲಾ ಬಾಯಿ ಪಾರ್ಕ್‌ನ ಉದ್ಘಾಟನೆಯನ್ನೂ ಕಮಲಾ ಬಾಯಿಯವರ ಭಾವಚಿತ್ರ ಅನಾವರಣವನ್ನೂ ಶ್ರೀ ಎಂ. ನಾಭ್ಯರಾಜ, ಎಂ. ಎಲ್. ಎ ಅವರು ಮಾಡುತ್ತ ಶಾಲೆಯ ಹಿರಿಮೆಯನ್ನೂ ಸಂಘದ ಸಾಧನೆಗಳನ್ನೂ ಡಾ। ರಾಯರ ಉದಾರತೆಯನ್ನೂ ಪ್ರಶಂಸಿಸಿದರು. ಸಂಘವು ನಡೆಸಿಕೊಂಡು ಬರುತ್ತಿರುವ ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಪರೀಕ್ಷಾ ತರಗತಿಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ ಪತ್ರಗಳನ್ನೂ ಪ್ರಥಮ—ದ್ವಿತೀಯ ಸ್ಥಾನಗಳಿಸಿದವರಿಗೆ ಬಹುಮಾನಗಳನ್ನೂ ಅಧ್ಯಕ್ಷರು ವಿತರಣೆ ಮಾಡಿ ಶಾಲೆಯು ಅವಶ್ಯಕತೆಗಳನ್ನು ಪೂ

ಎಲ್ಲರ ಮುಂದಿರುವ ಯಕ್ಷ ಪ್ರಶ್ನೆ

ಶಿಕ್ಷಣದ ಗುರಿ ಯಾವುದು?

ಶಿಕ್ಷಣತಜ್ಞರು, ಶಿಕ್ಷಕರು ಮತ್ತು ಶಿಕ್ಷಣದನ್ನೇಲೆ ವಿಚಾರವಂತರು ಬೇರೆಬೇರೆ ಜನರು. ನಮ್ಮ ಬಾಲಕರ ಶಿಕ್ಷಣದಲ್ಲಿ ಅವಶ್ಯವಿದ್ದ ಅತ್ಯಂತಿಕ ಸುಧಾರಣೆಗಳನ್ನು ಕುರಿತು ಎಷ್ಟೊ ಬಾರಿ ಲೇಖನಗಳನ್ನು ಪ್ರಕಟಿಸಿದ್ದರು. ಸದ್ಯದ ಶಿಕ್ಷಣ ಕ್ರಮವು ಜೆನ್ನಾಗಿಲ್ಲವೆಂಬುದು ನಮ್ಮ ಮಕ್ಕಳು ಹತ್ತಾರು ವರ್ಷ ಶಾಲೆಗೆ ಹೋಗಿ ಕಲಿಯುವುದೇನು? ಶಬ್ದಗಳ ಬರಿಯ ಶಬ್ದಗಳೆ ಅವರ ತಲೆ ತುಂಬಾ ಬರಿಯ ಶಬ್ದಗಳು ಸಮಾಜದ ಉನ್ನತಿಗೂ, ವ್ಯಕ್ತಿಯ ಬೆಳವಣಿಗೆಗೂ ಅನುಪಯುಕ್ತವಾದ ಬರಿಯ ಶಬ್ದಗಳು ಆದುದರಿಂದಲೇ ನಾವು ಮೂತಿನ ಮುಸ್ಸೆರೆಸಿಸಿದ್ದೇವೆ.

ಶಿಕ್ಷಣವೆಂದರೆ ಸಂಸ್ಕಾರ ಯಾವುದರಿಂದ ನಮ್ಮ ದೇಹ ಮನ, ನೀತಿ, ಆತ್ಮ ಇವುಗಳಲ್ಲಿ ಮೂರ್ಪಾಡುಗಳಾಗುವುವೋ ಅದು ಸಂಸ್ಕಾರ. ಒಳ್ಳೆಯ ಶಿಕ್ಷಣ. ಶಿಕ್ಷಣಕ್ಕೆ ಒಂದು ಗುರಿ ಬೇಕು. ಮೂರ್ತಿಯನ್ನು ಮಾಡುವವನು ಮೆತ್ತನ್ನ ಮಣ್ಣನ್ನು ಹಡಮಾಡಿ, ತೀಡಿ ತೀಡಿ ಅದಕ್ಕೆ ಸಂಸ್ಕಾರಕೊಟ್ಟು ಅಬರಲ್ಲಿ ಜೀವಕಳೆ ತುಂಬುವನು ಇಂತಹ ಮೂರ್ತಿಯನ್ನು ಮಾಡಬೇಕೆಂದು ಅವನು ಮೊದಲೇ ಕಲ್ಪಿಸಿ ಕೆಲಸಕ್ಕೆ ಕೈ ಹಾಕುವನು. ಇಂತಹ ಗುರಿ ಇಲ್ಲದಿದ್ದರೆ ಅವನು ಒಂದು ಮೂರ್ತಿಯನ್ನು ಮಾಡಲಾರನು

ಶಿಕ್ಷಕರೂ ಕಲಾವಂತನಿಗಿಂತಲೂ ಎಷ್ಟೊ ವಾಲು ಜಾಣರಬೇಕಾಗುವುದು. ಬಾಲ ಬಾಲಕಿಯರೆಂದರೆ ಬೆಳೆಯುವ ಜೀವಗಳು. ಅವುಗಳಿಗೆ ತಕ್ಕ ಸಂಸ್ಕಾರವನ್ನು ಕೊಡುವುದೇ ಶಿಕ್ಷಕರ ಪವಿತ್ರವಾದ ಕೆಲಸವು.

ಪ್ರಾಚೀನ ಭಾರತದಲ್ಲಿ ಶಿಕ್ಷಣವು ಮುನಿಗಳ ಆಶ್ರಮದಲ್ಲಿ ನಡೆಯುತ್ತಿದ್ದಿತು. ಆಗಿನ ವಿದ್ಯೆಯು ಪೂರ್ಣ ನೊನವನ್ನು ತಯಾರು ಮಾಡುತ್ತಿದ್ದವಂತೆ ವಿದ್ಯಾರ್ಥಿಗಳು ಶಾಲೆ ಬಿಟ್ಟು ಮನೆಗೆ ಹೋಗುವಾಗ ಆಚಾರ್ಯರು ಅವರಿಗೆ ಯಾವಾಗಲೂ ಸತ್ಯವನ್ನು ಹೇಳಿರಿ ಯಾವಾಗಲೂ ಧರ್ಮವನ್ನು ಆಚರಿಸಿರಿ ಪ್ರಮಾದವಶರಾಗಿ ಅಧ್ಯಾಯನ ಮತ್ತು ಅಭ್ಯಾಸನವನ್ನು ಬಿಡಬೇಡಿರಿ. ವಿದ್ವಾಂಸರ ಮತ್ತು ತಂದೆ ತಾಯಿಗಳ ಸೇವೆಯಲ್ಲಿ ಜಾಗರೂಕರಾಗಿರಿ. ತಾಯಿ, ತಂದೆ, ಆಚಾರ್ಯ ಮತ್ತು ಅತಿಥಿಗಳನ್ನು ಸದಾ ಆದರಿಸಿರಿ. ಶ್ರದ್ಧೆಯಿಂದ ದಾನ ನೂಡಿರಿ. ಮಹಾ ಪುರುಷರ ಮಾರ್ಗವನ್ನು ಆಶ್ರಯಿಸಿರಿ. ಇದೇ ಉಪದೇಶ, ಇದೇ ಶಾಸನ, ಇದೇ ವಿದ್ಯೆ ಎಂದು ಹೇಳುತ್ತಿದ್ದರು. ಇದರಿಂದ ಆಗಿನ ವಿದ್ಯೆಯ ಧ್ಯೇಯವು ನಮಗೆ ತಿಳಿಯುತ್ತದೆ. "ವಿದ್ಯಾ ದದಾತಿ ವಿನಯಂ" ಎಂದೂ ಕಾಳಿದಾಸನು ವಿದ್ಯೆಯ ಗುರಿಯನ್ನು ಹೇಳಿರುವನು. ಒಂದು ದೇಶದ ಸಂಪತ್ತು ಧನಧಾನ್ಯವಲ್ಲ ಆ ದೇಶದ ಮಕ್ಕಳೆ. ಅವರ ಮನಸ್ಸು ಮತ್ತು ಹೃದಯ ಎಂದ ಮೇಲೆ ಮಕ್ಕಳ ಶಿಕ್ಷಣದ ಕಾರ್ಯಕ್ಕೆ ಗಮನವನ್ನು ಕೊಡುವುದು ರಾಷ್ಟ್ರದ ಪ್ರಧಾನ ಕರ್ತವ್ಯ. ಆ ಶಿಕ್ಷಣದಿಂದ ಅವರು ಕರ್ತವ್ಯ ಪರಾಯಣರೂ, ಗೌರವಯುತರೂ, ದೈಹಿಕ ಸಂಪತ್ತುಳ್ಳ ಪ್ರತಿಭಾವಂತರೂ, ಉದ್ಯೋಗ ಕುಶಲರೂ ಆದ ಸತ್ಪ್ರಜೆಗಳಾಗಬೇಕು.

ಜನಾಂಗದ ಸರ್ವತೋಮುಖವಾದ ಅಭಿವೃದ್ಧಿಯೇ ಶಿಕ್ಷಣದ ಗುರಿ. ಸಮಾಜವು ಶಿಕ್ಷಣದಿಂದ ಕ್ರಮ, ಕ್ರಮವಾಗಿ ಉತ್ತಮಗೊಳ್ಳುತ್ತಾ ಸಾಗಬೇಕು. ಉತ್ತಮ ಸಮಾಜವೆಂದರೆ ಒಬ್ಬೊಬ್ಬ ವ್ಯಕ್ತಿಯ ಸ್ವಭಾವಾದಿಗುಣಗಳು ಉತ್ತಮಗೊಂಡು ಅವನ ಶಕ್ತಿ ವಿಶೇಷಗಳು ಪರಿಪೂರ್ಣವಾಗಿ ಬೆಳೆದು ಅವೆರಡರ ಸಹಾಯದಿಂದ ಜನತೆಯ ಕಲ್ಯಾಣ ಸಾಧಿಸುವಂತಾಗಬೇಕು. ಈ ಮೂಲಕ ಮಾನವಕುಲದ ಉತ್ತಮ ಪೀಳಿಗೆ ಉದಯವಾಗುತ್ತದೆ. ಗುರಿ ಎಂದರೆ ನಾವು ಪಡೆಯಲಾಶಿಸುವ ಫಲ. ಶಿಕ್ಷಣದ ಗುರಿಯ ಕುರಿತು ಹಲವರು ಈ ರೀತಿ ತಿಳಿಸಿರುವರು. J. Stuart Mill ಅವರು Education means Helps to Shape the human being ಎಂದಿದ್ದಾರೆ. Cardinal Newman ಎಂಬವರು ವಿದ್ಯೆಯ ವಿಷಯವಾಗಿ It is the Education which made the man it owes not make Physicians, Surgeons or Engneers but it makes men ಎಂದಿದ್ದಾರೆ.

ಮೇಲೆ ಹೇಳಿದ ದೃಷ್ಟಿಯಲ್ಲಿ ಅವಲೋಕಿಸುದಾದರೆ ನಿಜವಾದ ಶಿಕ್ಷಣದ ಗುರಿ ಬಹು ವಿಶಾಲವಾದುದು. ಸಮಾಜ ಜೀವನದಿಂದಲೂ ವಾತಾವರಣದ ಪ್ರಭಾವದಿಂದಲೂ ಮಕ್ಕಳಿಗೆ ಶಿಕ್ಷಣ ದೊರೆಯ ಬೇಕು. ಕೇವಲ ಪುಸ್ತಕಗಳನ್ನು ಹೈದ್ದಕತಮಾಡುವರಿಂದಲ್ಲ. ದೈಹಿಕ ನೈತಿಕ, ಸಾಮಾಜಿಕ ಸನ್ನಿವೇಶಗಳು ವ್ಯಕ್ತಿಯ ಮೇಲೆ ಪರಿಣಾಮ ಹುಟ್ಟಿಸುತ್ತಲೇ ಇವೆ. ಆ ಪರಿಣಾಮದಿಂದ ವ್ಯಕ್ತಿಯ ಭಾವನೆಯೋಚನೆ, ಕ್ರಿಯೆ ಮಂತಾದುವುಗಳು ಮೂರ್ಪಾಡಾಗುತ್ತವೆ. ಹಾಗೆಯೆ ವ್ಯಕ್ತಿಯು ಕೂಡಾ ತನ್ನ ಶಕ್ತಿ ಸಾಮರ್ಥ್ಯಗಳಿಂದ ಸನ್ನಿವೇಶವನ್ನು ಮೂರ್ಪಾಡು ಮಾಡುತ್ತಾನೆ. ಹೀಗೆ ವ್ಯಕ್ತಿ ಸನ್ನಿವೇಶಗಳಿಂದ ಮೂರ್ಪಟ್ಟುತಾನೂ ಆದನ್ನು ಮೂರ್ಪಡಿಸಿ ಪಡೆಯುವ ಅನುಭವವೇ ಶಿಕ್ಷಣವು

ಶಿಕ್ಷಣದಿಂದ ಆಗ ಬೇಕಾದ ಫಲಗಳು ಪ್ರಧಾನ ಫಲವೆಂದರೆ ದೃಢಕಾಯರೂ ಆರೋಗ್ಯವಂತರೂ ಆದ ಜನಾಂಗದ ನಿರ್ಮಾಣ. ಅದಿಲ್ಲದ ಶಿಕ್ಷಣ ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಸುಖ, ಶಾಂತಿಗಳನ್ನು ನೀಡಲಾರದು. ದೈಹಿಕ ಬೆಳವಣಿಗೆ ಇಲ್ಲದೆ ಮಾನಸಿಕ ಬೆಳವಣಿಗೆಯು ಆಗಲಾರದು. ನಿರ್ಬಲ ವಿದ್ಯಾರ್ಥಿಯು ಬೆಂಬ ಕಲ್ಪನೆಯ ಶಕ್ತಿ, ಆಲೋಚನಾ ಶಕ್ತಿ, ಉದ್ಯೋಗ ಶೀಲತೆ, ಕಷ್ಟ ಸಹಿಷ್ಣುತೆ ಮುಂತಾದ ಮನೋಭಾವವು ದುರ್ಬಲವಾಗುವುದು ಇನ್ನು ವಿದ್ಯಾರ್ಥಿಗಳು ಜೀವನದಲ್ಲಿ ಸ್ವತಂತ್ರವಾಗಿ ವಿಮರ್ಶಿಸಿ ಆಲೋಚಿಸಿ ನಿರ್ಧರಿಸುವ ಶಕ್ತಿಯನ್ನು ಪಡೆಯಬೇಕು. ಇನ್ನು ಕಲಾ ಜೀವನ, ವಿಚಾರ ಪ್ರೇಮ, ಧಾರ್ಮಿಕ-ನೈತಿಕ ಜೀವನ, ಸ್ವದೇಶಾಭಿಮಾನ, ಜೀವನದಲ್ಲಿ ಸ್ವಾವಲಂಬನ ಶಕ್ತಿ ಸಮಾಜದ ಪ್ರಗತಿ ನಮ್ಮ ಶಿಕ್ಷಣವು ಸಾಧಿಸಬೇಕಾಗಿದೆ. ಇ ವಿಷ್ಟೆ ಎಂದು ಯಾರೂ ಬಾವಿಸಬಾರದು. ವ್ಯಕ್ತಿಯ ಸರ್ವತೋಮುಖವಾದ ಬೆಳವಣಿಗೆಗೆ ಏನೇನು ಅವಶ್ಯಕವೊ ಅನೆಲ್ಲಾ ನಮ್ಮ ಶಿಕ್ಷಣದ ಫಲವಾಗಿ ಮೂಡಬೇಕು

ದೃಷ್ಟಿ ವೈಶಾಲ್ಯವನ್ನೂ ವಿಸ್ತೃತ ರಾಷ್ಟ್ರಾಭಿಮಾನವನ್ನೂ ಉನ್ನತ ವಿಚಾರಗಳನ್ನೂ ವಿದ್ಯಾರ್ಥಿಗಳಲ್ಲಿ ಬಿತ್ತಬೇಕು ಭಾರತದ ಭಾವಿ ಪ್ರಜೆಗಳು ಒಂದು ರಾಷ್ಟ್ರವಾಗಬೇಕಾದರೆ, ದರ್ಬಲ ರಾಷ್ಟ್ರಗಳಿಗೆ ಸಹಾಯ ನೀಡಲು ಸಮರ್ಥರಾಗಬೇಕಾದರೆ, ಜಗತ್ತಿನ ಪ್ರಗತಿಯಲ್ಲಿ ತಮ್ಮ ಕರ್ತವ್ಯವನ್ನು ಪಾಲಿಸಬೇಕಾದರೆ ಅವರಲ್ಲಿ ರಾಷ್ಟ್ರೈಕ್ಯಭಾವವೂ ರಾಷ್ಟ್ರ ಭಕ್ತಿಯೂ ಪ್ರಬಲವಾಗಿ ಬೆಳಗಬೇಕು.

ಜೈ ಹಿಂದ್!

— ಕೆ ಕೃಷ್ಣಯ್ಯ ಹೆಗ್ಡೆ

(ಕಡಿಯಾಳಿ ಪ್ರಾಥಮಿಕ ಶಾಲಾ ಅಧ್ಯಾಪಕ ಸಂಘದ ಪತ್ರಿಕೆಯಿಂದ)

ಬರ್ಲಿನ್‌ನ ಬೀಳಿ ಹಾರಿ ಸ್ವಾತಂತ್ರ್ಯ ರಕ್ಷಿಸಲು ಹೊರಟ ಪೀಟರ್ ಫೆಚರ್‌ರವರ ಮೃತ ಶರೀರವನ್ನು ಸೈನಿಕರು ಒಯ್ದರು.

ಕಾರಂತರಿಗೆ ಗೌರವಾರ್ಪಣೆ

(೨ನೇ ಪುಟದಿಂದ)

ಕೆನ್ನಿಗೋಳಿ ಮತ್ತು ಕುರಾಡಿ ಸೀತಾರಾಮ ಆಡಿಗರು ತಾವು ರಚಿಸಿದ್ದ ಕವಿತೆಗಳನ್ನು ಓದಿದರು. ಅಧ್ಯಕ್ಷರು ಕವಿತೆಯ ಮಾರ್ಗವನ್ನು ವಿಮರ್ಶಿಸುತ್ತ ಉದ್ಘಾಟಿಕರೆತ್ತಿದ ವಿಚಾರವನ್ನು ಗಮನಿಸುವ ಅವಶ್ಯಕತೆಯಿದೆಯೆಂದು ಹೇಳಿ, ತಾವೂ ಎರಡು ಕವಿತೆಗಳನ್ನು ವಾಚಿಸಿದರು. ಪ್ರಾರಂಭದಲ್ಲಿ ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರು ಸ್ವಾಗತಿಸಿ, ಕೊನೆಯಲ್ಲಿ ಕೃತಜ್ಞತೆ ಸಮರ್ಪಿಸಿದರು.

ಕಾರಂತ ಷಷ್ಟ್ಯಬ್ಧಿ ಪೂರ್ತಿಯ ಸಮಾರಂಭದ ಅಂಗವಾಗಿ ಸನ್ಮಾನ ಸಮಿತಿಯು ಲೇಖನಸ್ಪರ್ಧೆಯನ್ನೂ ಏರ್ಪಡಿಸಿತ್ತು. ಕಾಲೇಜು ವಿಭಾಗಕ್ಕೆ 'ಕಾರಂತರ ಬರಹಗಳಲ್ಲಿ ಪಾತ್ರ ಚಿತ್ರಣ' ಎಂಬ ವಿಷಯವಿದ್ದು ಇದರಲ್ಲಿ ಉಡುಪಿ ಬಾ ಕಾಲೇಜಿನ ಎ ಎಸ್. ಎನ್. ಹೆಬ್ಬಾರರೂ ಹೈಸ್ಕೂಲ್ ವಿಭಾಗಕ್ಕೆ ತಾನು ಮೆಟ್ರಿಕ್ ಕಾರಂತರ ಒಂದು ಕಾದಂಬರಿ ಎಂಬ ವಿಷಯದಲ್ಲಿ ಉಡುಪಿಯ ಸಂಸ್ಕೃತ ಕಾಲೇಜ್ ಹೈಸ್ಕೂಲಿನ ಶ್ರೀ ಕೆ. ಅನಂತ ಪದ್ಮನಾಭ ಭಟ್ಟರೂ ಬಹುಮಾನ ಪಡೆದಿರುವರೆಂದು ಘೋಷಿಸಲಾಯಿತು.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯವ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅಶ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. Phone No. 240. — ಮಂಗಳೂರು—೩

ಮನೆ ನುಗ್ಗಿದ
ಚೀನೀಯ ಮಾರಿಯ ಮೂಲೋಚ್ಚಾಟನೆ ಜ

ಸ್ವಾತಂತ್ರ್ಯೋತ್ತರದ ಭಾರತವಿಂದು ಎದುರಿಸುತ್ತಿರುವಂತಹ ಗಂಭೀರ ಪರಿಸ್ಥಿತಿಯನ್ನು ಪ್ರಾಯಃ ಈ ಮೊದಲು ಕಂಡಿರಲಾರದು. ಪಾರತಂತ್ರ್ಯ ಬಂಧನದಿಂದ ಮುಕ್ತವಾದ ಭಾರತವು ತನ್ನ ಮುಗ್ಧ ಸ್ವಭಾವದಿಂದಲೋ ಎಂಬಂತೆ ಬೆಳೆಗಿರುವುದನ್ನೆಲ್ಲ ಹಾಲೆಂದು ಭ್ರಮಿಸುವಂತಹ ನೀತಿಯನ್ನು ಸ್ವೀಕರಿಸಿತು. ಎಲ್ಲರೂ ತನ್ನವರು ಎಂಬ ಸಂಸ್ಕೃತಿಜನ್ಯ ಭಾವನೆಯಿಂದ ಎಲ್ಲ ಹಾವುಗಳೊಡನೆಯೂ ಸರಸವಾಡಿತು. ಆಡ ಬಂದ ಹಾವುಗಳಲ್ಲಿ ನಾಗರ ಹಾವೂ ಇರಬಹುದು; ಕನ್ನಡಿ ಹಾವೂ ಇರಬಹುದು ಎಂಬುದರ ಕಲ್ಪನೆಯೇ ಆದಕ್ಕೆ ಬರಲಿಲ್ಲ. ಮಿತಿಮೀರಿದ ಸ್ನೇಹಭಾವ ಪ್ರದರ್ಶನಕ್ಕೆ ಒಳಗಾದ ಚೀನೀಯ ಭಾಯಿಗಳು ಕನ್ನಡಿ ಹಾವಿನಂತೆ ಭಾರತವನ್ನು ಗರ್ಭಾವರಣದಲ್ಲಿಯೇ ಕಡಿದಿದ್ದರೂ ನಮಗೆ ಅದರ ಪರಿವೆಯೂ ಗಲಿಲ್ಲ

ಪಂಡಿತ್ ಕೃಷ್ಣಾ ಮಂತ್ರಿ ಮೆನನ್ ಹೇಳುವಂತೆ, ಚೀನಿಯರ ಆಕ್ರಮಣವು ಸ್ವಲ್ಪ ಕಾಲ ನಮಗೆ ಗೊತ್ತಾಗಲಿಲ್ಲ; ಆಥವಾ ಸ್ನೇಹದಿಂದಾಗಿ ಅದು ತಿಳಿಯಲಿಲ್ಲ. ಇತಿಹಾಸವನ್ನು ಅವಲೋಕಿಸಿದರೆ, ಚೀನಾ–ಭಾರತಗಳು ಎಂದೂ ಹೊಡೆದಾಡಿದ್ದಿಲ್ಲ ಆದರೆ, ಇಂದು ಮೊತ್ತ ಇತಿಹಾಸದಲ್ಲಿ ಮೊತ್ತಮೊದಲಾಗಿ ಶಸ್ತ್ರ ಹರಿಯುವ ಸನ್ನಿವೇಶ ಇನ್ನೇನು ಪ್ರಾರಂಭವಾಗಬೇಕು!

ಉಭಯ ಅಂತರಿಗೂ ಒಪ್ಪಿಗೆಯಾಗುವಂತೆ ಸೂಕ್ಷ್ಮತೆಗಳ ಮೂಲಕ ಸಮಸ್ಯೆ ಬಗೆಹರಿಯಬೇಕೆಂದು ರಕ್ಷ್ಯದ ಗ್ರೆಮಿಕೋರ ಅಭಿಪ್ರಾಯ. ಆದರೆ, ಇಂತಹ ಸುಧ್ಯವರ್ತಿ ಮಾರ್ಗವಿಂದು ಉಳಿದಂತೆ ತೋರುವುದಿಲ್ಲ. ರಾಷ್ಟ್ರಪತಿ ರಾಧಾಕೃಷ್ಣನ್ ಕೂಡ, ಚೀನೀಯರು ಆಕ್ರಮಣವನ್ನು ಹಿಂತೆಗೆದು ಪರಿಸ್ಥಿತಿಯನ್ನು ತಿಳಿಗೊಳಿಸಬೇಕೆಂದು ಹೇಳಿರುವಂತಾದರೂ ಪೇಕಿಂಗ್ ತಾನು ನಿರಪರಾಧಿಯೆಂಬುದನ್ನೇ ಸಾಧಿಸಹೊರಟಿದೆ; ದಿನದಿಂದ ದಿನಕ್ಕೆ ಆಕ್ರಮಣವನ್ನು ಮುಂದೊತ್ತುತ್ತಿದೆ; ಭಾರತದ ಮೇಲೆ ವೃಥಾ ಅಪರಾಧಗಳನ್ನು ಹೊರಿಸುತ್ತಿದೆ. ಭಾರತವು ವಿಶ್ವದ ಯಾವುದೇ ಭೂ, ಜಲ ಮತ್ತು ಆಕಾಶಗಳ ಪ್ರದೇಶವನ್ನು ಆಕ್ರಮಣ ಮಾಡಿದ್ದಿಲ್ಲ; ಹಾಗಿದ್ದರೂ ಲಾಸಾದ ಉಪನಗರದ ಮೇಲೆ ಭಾರತೀಯ ವಿಮಾನವು ಉಡ್ಡಾಣ ನಡೆಸಿದೆಯೆಂಬ ಪೇಕಿಂಗ್ ಹೇಳಿಕೆಯು ಅಂತರ್ಯವೇನು?

ಚೀನಾದ ಪೀಪಲ್ಸ್ ದೈನಿಕವು ಭಾರತದ ಮೇಲೆ ಆರಂಭದಿಂದಲೂ ಉದಿಕಾರುತ್ತಿರುವುದು ಹೊಸತಲ್ಲ. ನೇಫಾ ಗಡಿಯಲ್ಲಿ ಚೀನೀಯ ಆಕ್ರಮಣಕಾರರನ್ನು ಹೊರದಬ್ಬಲು ಪ್ರಧಾನಿ ನೆಹರು ಭಾರತೀಯ ಯೋಧರಿಗೆ ಆದೇಶವಿತ್ತನಂತರ, ಅದು ಉಗುಳುವ ಕಡಿಗಳ ಪರಿಮಾಣವಾದರೂ ಮಿತಿಮೀರಿದೆ ಭಾರತವೇ ಚೀನದ ಮೇಲೆ ಅತಿಕ್ರಮಣ ಮಾಡಿದೆಯೆಂದು ಪ್ರಲಾಪ ಮಾಡುತ್ತ ಬಂದ ಆ ದೈನಿಕವು ಪ್ರಧಾನಿ ನೆಹರೂ ಸಂಧಾನದ ಶಾಂತ ವಿಧಾನದ ಬಾಗಿಲನ್ನು ಮುಚ್ಚಿದರು ಎಂಬ ಉನ್ಮತ್ತತೆಯಿಂದ ಬರೆದಿದೆ. ಸದಸದ್ವಿವೇಚನೆಯುಳ್ಳವರೆಲ್ಲರೂ ಬಾಗಿಲು ಮುಚ್ಚಿಸ್ತಿರುವವರು ಹೂರು, ಅದನ್ನು ತೆರೆಯಲು ಪ್ರಯತ್ನಿಸುವವರು ಯಾರು ಎಂದು ಊಹಿಸಿಯೇ ತಿಳಿಯಬಹುದು ಆಕ್ರಮಣಕಾರ ಚೀನದ ಉಪಟಳವು ಮಿತಿಮೀರುತ್ತ ಬಂದುದರಿಂದ, ಇದನ್ನು ಕೊನೆಗಾಣಿಸುವ ದಾರಿಯನ್ನು ಭಾರತವು ಅನಿವಾರ್ಯ ಕಂಡು ಹಿಡಿಯಲೇ ಬೇಕಾಗಿದೆ. ಗುಂಡಿನಿಂದ ಸೃಷ್ಟಿಸುತ್ತಿರುವ ಚೀನೀಯರನ್ನು ಗುಂಡಿನಿಂದಲೇ ಉತ್ತರಿಸುವುದು ಭಾರತೀಯರಿಗೆ ಬೇಡವೆಂದರೂ ಆದ್ಯ ಕರ್ತವ್ಯವಾಗಿದೆ. ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ, ಭಾರತೀಯರು ತಮ್ಮೆಲ್ಲ ಶಕ್ತಿಯನ್ನೂ ಕೇಂದ್ರೀಕರಿಸಿ ಒಮ್ಮುಖವಿನಿಂದಯೋರಾಡಲುಸಿದ್ಧರೆಂಬುದನ್ನು ಚೀನಾವಿಂದು ಮನಗಾಣಬೇಕು. ವ್ಯರ್ಥ ರಕ್ತಪಾತವನ್ನು ಅದು ಮಾಡಿಸದೆಇರಬೇಕಾದರೆ ಆಕ್ರಮಣವನ್ನು ಕಡೆಹಿಡಿದು ಹಿಂದೆ ಸರಿಯಬೇಕು.

ಪ್ರಧಾನಿ ನೆಹರು ತಮ್ಮ ಸಿಂಹಳ ಯಾತ್ರೆಗೆ ತೆರಳುವುದಕ್ಕೆ ಮೊದಲೇ ಚೀನೀಯ ಆಕ್ರಮಣವನ್ನು ತಡೆಯಲು ಸೂಕ್ತ ಕ್ರಮವನ್ನು ಕೈಗೊಳ್ಳಿರೆಂದು ಸೇನಾಪಡೆಗೆ ಆದೇಶವಿತ್ತುದು ಚೀನಾದ ಕಳವಳಕ್ಕೆ ಕಾರಣವಾಗಿದೆ. ಶಾಂತಿ ಮೂಲದ ವಿದೇಶ ನೀತಿಯುಳ್ಳ ಭಾರತವಿಷ್ಟು ಮುಂದುವರಿಯಲಾರದೆಂದು ಅದು ತಿಳಿದುಕೊಂಡದ್ದಿರಬಹುದು. ಆದರೆ, ಆತ್ಮರಕ್ಷಣೆಯು ಪರಮ ಕರ್ತವ್ಯವೆಂಬುದನ್ನೂ ಭಾರತವು ವರಿಯುವಂತಿಲ್ಲ. ಅಕ್ಷಯ್ಯ ಶಕ್ತಿ ಸ್ವಯೋಗದಿಂದ ಗೋವೆಯನ್ನು ಪೋರ್ಚುಗೀಸರ ವಜ್ರಮುಷ್ಟಿಯಿಂದ ಬಿಡುಗಡೆಗೊಳಿಸಿದಂತೆಯೇ ಚೀನೀ ಆಕ್ರಮಿತ ಭೂಭಾಗವನ್ನೂ ಅದು ಬಿಡಿಸಿಕೊಳ್ಳಲು ಶಕ್ತವಾಗಿದೆ. ಈ ಸಂಬಂಧದಲ್ಲಿ ಅಪಾಂಥಿ ಸ್ಥಾನದಲ್ಲಿರುವ ಚೀನವು ಏನನ್ನು ಹೇಳಿದರೂ ಅದು ವ್ಯರ್ಥ ಬಡಬಡಿಕೆ ಮಾತ್ರ. ದೇಶ ಸ್ವಾತಂತ್ರ್ಯವನ್ನೂ ಭೂಮಿಯನ್ನೂ ಉಳಿಸಲು ಮುಂದುವರಿಯುವ ನಮ್ಮ ಸರಕಾರದ ನೀತಿಯು ಸಮರ್ಥನೀಯ. ಮನೆ ನುಗ್ಗಿದ ಮಾರಿಯ ಉಚ್ಚಾಟನೆಯಲ್ಲಿ ದೇಶ ಪೂರ್ಣಾಗಬೇಕು.

ರಾಜೇಂದ್ರರಿಲ್ಲದ ಈಶೂನ್ಯ ದೆಹಲಿ

(ಅನೀ ಪುಟದಿಂದ)

ಕಳೆದ ನೂರು ವರ್ಷಗಳಿಂದಲೂ ಪಶ್ಚಿಮದ ಸಭ್ಯತೆಯ ಸರ್ವಶ್ರೇಷ್ಠತೆಯ ಗುಣವನ್ನು ಭಾರತೀಯರು ಪರಂಪರೆಯಲ್ಲಿ ವಿಲೀನಗೊಳಿಸಬೇಕೆಂಬ ಸತ್ ಸಂಕಲ್ಪವು ರಾಜೇಂದ್ರರು ರಾಷ್ಟ್ರಪತಿಯಾದಾಗ ಮತ್ತು ನೆಹರೂರವರು ಪ್ರಧಾನಮಂತ್ರಿಯವರಾದಾಗ ಈಡೇರಿತು ಭಾರತದ ಪುರಾತನ ಪರಂಪರೆಗಳ ಶ್ರೇಷ್ಠ ರಕ್ಷಕ ರಾಜೇಂದ್ರರಾಗಿದ್ದರೆ, ಅದರ ಭವಿಷ್ಯದ ಕಪ್ಪಗಳ ಭದ್ರಪಹರಿ ನೆಹರೂರವರಾಗಿದ್ದಾರೆ. ಇಂದು ನಾವು ಧರ್ಮ ಮತ್ತು ವಿಜ್ಞಾನದಲ್ಲಿ ಸಮನ್ವಯವನ್ನು ಬಯಸುತ್ತೇವೆ. ಈ ಸಮನ್ವಯವನ್ನು ನೆಹರೂರವರು ಮೆಚ್ಚಿದಂತೆಯೇ ರಾಜೇಂದ್ರರೂ ಮೆಚ್ಚುತ್ತಾರೆ. ನಾವು ಕಳೆದ ೧೨ ವರ್ಷಗಳ ಸಿಂಹಾವಲೋಕನವನ್ನು ಮಾಡಿದಾಗ ಧರ್ಮಕ್ಕೆ ರಾಜೇಂದ್ರರ ರಾಷ್ಟ್ರಪತಿ ಭವನದಲ್ಲಿ, ವಿಜ್ಞಾನಕ್ಕೆ ನೆಹರೂರವರ ವಾಸಸ್ಥಳದಲ್ಲೂ ಆಶ್ರಯ ಸಿಕ್ಕಿದುದನ್ನು ನೋಡಬಹುದು. ಭಾರತದ ಭವಿಷ್ಯ ಹಾಗಿಲ್ಲ. ಎಲ್ಲಿ ನಮ್ಮ ಚರಿತ್ರೆ ನಮಗೆ ನೋಸವೂಡುತ್ತದೆ ಅಲ್ಲಿ ನವ್ಯ ಇತಿಹಾಸ ನಮ್ಮನ್ನು ರಕ್ಷಿಸುತ್ತದೆ ತನ್ನ ದಿಶೆಯನ್ನು ಸುವ್ಯವಸ್ಥಗೊಳಿಸಲು ಇತಿಹಾಸವು ರಾಜೇಂದ್ರ ಮತ್ತು ನೆಹರೂರವರ ಜೋಡಿಯನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿತ್ತು. ಆದರೆ ಅದೇ ಇತಿಹಾಸವು ರಾಜೇಂದ್ರರು ಖಾಲಿ ಮಾಡಿದ ರಾಷ್ಟ್ರಪತಿ ಸ್ಥಾನಕ್ಕೆ ಸುಪ್ರಸಿದ್ಧ ದಾರ್ಶನಿಕ ಡಾ। ರಾಧಾಕೃಷ್ಣನರನ್ನು ಕುಳ್ಳಿರಿಸಿತು.

ಇಂತಹ ಘನವೆತ್ತ ರಾಜೇಂದ್ರರು ಕಳೆದ ಮೇ ತಿಂಗಳಲ್ಲಿ ರಾಷ್ಟ್ರಪತಿ ಭವನದಿಂದ ತೆರಳುವಾಗ ಸಮಗ್ರ ದೇಶದ ಜನತೆಯ ಹೃದಯಕ್ಕೇ ಅಪಾರವೇದನೆಯೊಂದಿಗಿತ್ತು. ಈ ಸಂದರ್ಭದಲ್ಲಿ ಅವರಿಗೆ ದೊರೆತ ಅಪೂರ್ವ ಹಾಗೂ ಅನರ್ಘ್ಯ ಕಾಣಿಕೆಗಳು, ಹೃದಯ ಸ್ಪರ್ಶೀ ವಿದಾಯಗಳು ಬಹುಶಃ ಇನ್ಯಾರಿಗೂ ದೊರೆತಿಲ್ಲ ದೊರೆಯಲಾರದು ಎಂದರೆ ಅತಿಶಯೋಕ್ತಿಯಾಗಲಾರದು. ರಾಜೇಂದ್ರರು ದೆಹಲಿಬಿಟ್ಟು, ಪನ್ನಾಪಾಟ್ನಾದ ಸದಾಕರ್ತ್ ಆಶ್ರಮಕ್ಕೆ ಮರಳುವ ರೈಲುಗಾಡಿ ಹತ್ತಿದರು ಶ್ರೀ ನೆಹರೂರವರೇ ಮೊದಲಾದ ನಾಯಕವರ್ಗಗಳು ರೈಲಿನ ಕನಕ ಬಂದು ತಮಗೆ ಬರುತ್ತಿದ್ದ ದುಃಖವನ್ನು ನುಂಗಿಕೊಂಡು ರಾಜೇಂದ್ರರಿಗೆ ವಿದಾಯ ಬಯಸಿ ಅವರ ತೇಜಸೂರ್ಣ ಸಾತ್ವಿಕ ಮೂರ್ತಿಯನ್ನು ತಮ್ಮ ಚಿತ್ರಪಟಲದಲ್ಲಿರಿಸಿ ಅಲ್ಲಿಂದ ಹೊರಟರು. ಆದರೂ ಕಾಲು ಮುಂದೆ ಬರಲಿಲ್ಲ. ರೈಲು ಕೂಗಿತು; ಹೊರಟಿತು. ರಾಜೇಂದ್ರರನ್ನು ರೈಲುಗಾಡಿ ಒಯ್ದಿತೆ.. ಪಂಡಿತ ನೆಹರೂರವರೇ ಮೊದಲಾದ ನಾಯಕ ಮಣಿಗಳು ರೈಲು ಒಂದು ಫರ್ಲಾಂಗು ದೂರದವರೆಗೆ ಹೋಗುವತನಕ ನಿಂತು ನೋಡಿದರು. ಮುಂದೆ ಅದರ ಹೊಗೆಯು ಕಾಣದೆ ಇದ್ದಾಗ ರಾಜೇಂದ್ರರಿಲ್ಲದ ಈಶೂನ್ಯ ದಿಲ್ಲಿಗೆ ಹೋಗಬೇಕಲ್ಲಾ ಎಂದುಕೊಂಡು ತಮಗಾದ ಅಪೂರ್ವ ಹಾಗೂ ಅಪಾರ ವೇದನೆಯನ್ನು ಸಹಿಸಿಕೊಂಡು ಹಿಂತಿರುಗಿದರು.

ಭಾರತೆ ಮಾತೆಯು ಈ ಅನರ್ಘ್ಯ ಹಾಗೂ ಪ್ರಿಯ ಪುತ್ರನ ಮನದ ಆಕಾಂಕ್ಷೆಗಳು ಈಡೇರಲಿ.

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮುದುವೆ ಸೀರೆ

ಮದುವೆ ಕಾಲದಲ್ಲಿ ವರವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.
ರೂ. 1–25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ನಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಖ್ಯಾತ ಗ್ರಂಥ ಕರ್ತರಾದ
ಶ್ರೀ ಎ. ಎಸ್. ಪೆಂಚಾಪಕೇಶ ಅಯ್ಯರ್
ಎಂ ಎ., ಐ. ಸಿ. ಯಸ್, ಬಾರ್-ಎಟ್-ಲಾ., ಎಫ್. ಆರ್. ಎಸ್., ಎಲ್.

ಇವರು ಇಂಗ್ಲೀಷಿನಲ್ಲಿ ಬರೆದ—
TALES OF IND
ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕಥೆಗಳು

ಚಿಕ್ಕ ಜೊಕ್ಕ ೧೫೬– ಕಥೆಗಳು ಬೆಲೆ ರೂ. 1–12–0

ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅತ್ಯುತ್ತಮ ಟಾನಿಕ್

ನಿಮ್ಮ ದೇಹ — ಮನಸ್ಸುಗಳಿಗೆ
ಆರೋಗ್ಯವನ್ನೂ ಬಲವನ್ನೂ, ನವಚೈತನ್ಯವನ್ನೂ
ತಂದು ಕೊಡಬಲ್ಲ ಏಕಮಾತ್ರ ಟಾನಿಕ್

ಉಳಿತಾಯ

ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಇಂದಿನ ಪ್ರಥಮ ಪಾಠ

ಭಾರತದ ರಾಷ್ಟ್ರೀಯ ಐಕ್ಯ

—ಡಾ| ಕೈ. ನಾ. ಕಟ್ಟಿ

ಹಿಂದೂ ದೇಶದ ರಾಷ್ಟ್ರೀಯ ಐಕ್ಯದ ಕಾಪಾಡುವಿಕೆ ಹಾಗೂ ದೇಶದ ಅಭಿವೃದ್ಧಿಯು ಇಂದಿನ ಅತ್ಯಾವಶ್ಯಕ ಘಟನೆಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ನಮ್ಮ ನೆಚ್ಚಿನ ತಾಯ್ನಾಡಿನ ರಾಜಕೀಯ ಮತ್ತು ಆರ್ಥಿಕ ಜೀವ್ಯದ ಮೇಲೆ ನಮ್ಮೆಲ್ಲರ ಸುಖ, ಅಭ್ಯುದಯ ಅಲ್ಲದೆ ಅಂತರಾಷ್ಟ್ರೀಯ ವಲಯದಲ್ಲಿ ಗೌರವ ಹಾಗೂ ರಾಜಕೀಯ ಆವಶ್ಯಕತೆಯು ಅವಲಂಬಿಸಿಕೊಂಡಿದೆ. ಯಾವ ರೀತಿಯಿಂದಲಾದರೂ ಎಲ್ಲಿಯಾದರೂ ಬಿಕ್ಕಟ್ಟಿಗೆ ನಾವು ಆಶ್ರಯ ಕೊಟ್ಟಲ್ಲಿ ಅದು ಆ ಭಾಗದ ಅಥವಾ ಜಿಲ್ಲೆಯ, ಪ್ರಾಂತ್ಯದ, ವಲಯದ ಸರ್ವನಾಶಕ್ಕೆ ಮಾತ್ರ ಕಾರಣವಾಗದೆ ಇಡೀ ದೇಶದ ಅಧಃಪತನಕ್ಕೆ ರಾಜಮಾರ್ಗವಾಗುತ್ತದೆ.

ನಾವು ಅತಿ ಪುರಾತನ ಮರ್ಯಾದಾಯುಕ್ತ ಜನಾಂಗಕ್ಕೆ ಸೇರಿದವರಿದ್ದೇವೆ. ನಮ್ಮ ಸಂಪ್ರದಾಯ, ಕುಲಾಚಾರ, ಸಂಸ್ಕೃತಿಯು ನಿನ್ನೆ ಮೊನ್ನೆಯದಲ್ಲ. ಅದು ಧನುಸಿ-ಅಭಿಧಮನಿಗಳಲ್ಲಿ ಸಾವಿರ ಸಾವಿರ ಸಂವತ್ಸರಗಳಿಂದಲೂ ಹರಿದುಕೊಂಡು ಬರುತ್ತಿದೆ. ಈ ಅನೇಕ ಶತಮಾನಗಳಿಂದಲೂ, ದೈವಾನುಗ್ರಹದಿಂದ, ಬಹು ವಿಧದ ರಾಜಕೀಯ ಮೂರ್ಖಾಟಗೊಳಗಾಗಿರುವೆವಾದರೂ, ಸಂಪೂರ್ಣ ನೈತಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಐಕ್ಯವನ್ನು ನಾಡಿನ ಮೂಲೆ ಮೂಲೆಗಳಲ್ಲೂ ರಕ್ಷಿಸಿಕೊಂಡಿರುವದು ಪ್ರತ್ಯಕ್ಷವಾಗಿ ನಿಂತಿದೆ. ಗತ ಶತಮಾನಗಳ ಚರಿತ್ರೆಯ ಹಾಳೆಗಳನ್ನು ಮಗುಚಿ ಹಾಕಿದರೆ ಇಲ್ಲಿ ಆಗಾಗ ರಾಜಕೀಯ ಐಕ್ಯ ಚಳುವಳಿ ನಡೆದಿರುವದನ್ನೂ ಕಾಣಬಹುದು. ನಮ್ಮ ಸುಸಂಘಟಿತ ಚಳುವಳಿಯಿಂದಾಗಿ ನಾವು ಸ್ವಾತಂತ್ರ್ಯವನ್ನೂ ಸಂಪಾದಿಸಿರುವೆವು. ಆಗ ಈ ಪವಿತ್ರ ಭೂವಿಯ ಅಷ್ಟ ದಿಕ್ಕುಗಳಲ್ಲಿದ್ದ ಪ್ರತಿಯೋರ್ವ ಪ್ರಜೆಯೂ ತಾನು ಭಾರತ ಭೂಮಿಯ ಅವಿಭಾಜ್ಯ ಘಟಕವೆಂಬುದನ್ನು ನಂಬಿಕೊಂಡಿದ್ದನು. ಆಗ, ಇಂದಿನ, ಉತ್ತರ-ದಕ್ಷಿಣ, ಪೂರ್ವ-ಪಶ್ಚಿಮಗಳ ಪಿಸುಮಾತಿನ ಸುದ್ದಿಯೇ ಇದ್ದಿರಲಿಲ್ಲ. ಆಗ ಭಾರತೀಯರೆಲ್ಲರೂ ಭುಜಕ್ಕೆ ಭುಜಕೊಟ್ಟು ಆಕ್ರಮಣಗಾರರನ್ನು ಹಿಂದಕ್ಕಟ್ಟಲು ಐಕ್ಯದಿಂದಿದ್ದರು. ದೇವತಾನುಗ್ರಹದಿಂದ ಆಗ ಪ್ರತ್ಯೇಕತೆಯ ಅಥವಾ ವಿಭಜನೆಯ ಭಾವನೆಯೂ ಇದ್ದಿರಲಿಲ್ಲ. ಆಗ ಕೂಡಾ ಆಯಾಯ ಪ್ರದೇಶಗಳಲ್ಲಿ ಅಯಾಯ ಭಾಷೆಗಳೇ ಪ್ರಮುಖ ಪಾತ್ರವನ್ನು ವಹಿಸಿದ್ದುವಾದರೂ, ಇಂದಿನಂತೆ ಅಂದು ಭಾಷಾ ಸಮಸ್ಯೆಯು ಭೂತ ಭಯಂಕರ ಕಾಣಿತಕ್ಕೆ ಪ್ರಾರಂಭಿಸಿರಲಿಲ್ಲ. ಅದೆಂತಹ ವೈವಿಧ್ಯ ಇದ್ದರೂ ಏಕತಾ ಮಂದಿರದಲ್ಲಿ ಎಲ್ಲರೂ ಒಂದಾಗಿದ್ದೆವು. ನಮ್ಮೆದುರಿಗೆ ಏಕ ಮಾತ್ರ ಗುರಿ ಇತ್ತು— ಆಕ್ರಮಣಗಾರರನ್ನು ಹಿಂದಕ್ಕೋಡಿಸುವದು; ರಾಷ್ಟ್ರವನ್ನು ಸ್ವತಂತ್ರಗೊಳಿಸುವದು.

ದಕ್ಷಿಣದಲ್ಲೀಗ ದ್ರಾವಿಡ ಮುನ್ನೇತ್ರ ಕಳಗಮಿನವರು ಪ್ರತ್ಯೇಕತೆಯ ಪ್ರೇತ ಸ್ವರವನ್ನೆತ್ತಿರುವದು ಭಾರತೀಯರೆಲ್ಲರಿಗೂ ವಿಷಾದನೀಯ ವಿಷಯವಿದೆ. ಆ ಸ್ವರಕ್ಕೆ ಸ್ವರ ಕೂಡಿಸಲು ನಾರ್ವಜನಿಕರು ಸಿದ್ಧರಿಲ್ಲವೆಂಬುದು ಸ್ಪಷ್ಟ ವಿಷಯವಿದೆ. ಪ್ರಪಂಚದಲ್ಲಿ ಅನೇಕ ರಾಷ್ಟ್ರಗಳ ಸಂಯುಕ್ತ ರಾಷ್ಟ್ರಕ್ಕೆ ಪ್ರಯತ್ನ ನಡೆಯುತ್ತಿರುವಾಗ ನಾವು ಇಲ್ಲಿ ಅಪಸ್ವರವನ್ನೆತ್ತಿರುವದು ಕೇವಲ ಭ್ರಮೆಯಿಂದಾಗಿ ಇದೆ. ಯಾವ ರೀತಿಯ ವಿಭಜನೆಯೂ ದೇಶದ ಸಂಪೂರ್ಣ ಏಕತಾ ಕುಟುಂಬ ವೃಕ್ಷದ ಬುಡಕ್ಕೆ ಕೊಡಲಿ ಪೆಟ್ಟು ಕೊಟ್ಟಂತೆಯೇ ಸರಿ. ಗತ ಪದಿನೈದು ವರ್ಷಗಳಲ್ಲಿ ಕೆಲ ಆರ್ಥಿಕ ಸಮಸ್ಯೆಗಳನ್ನಾದರೂ ನಾವು ಬಗೆಹರಿಸಿರುವೆವಾದರೂ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಅಂಗಣದಲ್ಲಿ ಅದೂ ಇಲ್ಲ. ಇನ್ನೂ ಬಹಳಷ್ಟು ಸಮಸ್ಯೆ ಇದೆ. ಇನ್ನು ರಾಷ್ಟ್ರದ ಎಲ್ಲೆಗಳತ್ತ ಯೋಜನೆ ಹರಿಸಿದರೆ ಸಾಕು; ಹೃದಯದ ಬಡಿತ ವಿಪರೀತವಾಗದಿರಲಾರದು. ಕಷ್ಟ ಕೋಟಲೆಗಳ ಕಾರ್ಕೋಟಕ ಹೆಡೆ ಎತ್ತಿ ಕಡಿಯಲು ಸಿದ್ಧವಾಗಿದೆ. ನಾವು ಬಹಳ ಜಾಗ್ರತೆಯಿಂದಿರಬೇಕು. ಅದಕ್ಕಾಗಿ ನಾವು ರಾಷ್ಟ್ರೀಯರೆಲ್ಲರೂ ಒಂದೇ ದೇಹದಂತೆ ಎದ್ದು ನಿಲ್ಲಬೇಕು. ಆದರ ಅವಶ್ಯಕತೆ ಅನಿವಾರ್ಯವಿದೆ. ಐಕ್ಯದ ನಾಮಫಲಕ ತೂಗಾಡಿಸಿ ನಾಟಕವಾಡುವ ಕಾಲ ಇದಲ್ಲ.

ಕೆಲವೊಮ್ಮೆ ಕೆಲವರು ದಕ್ಷಿಣವನ್ನು ಉತ್ತರದವರು ನಿರ್ಲಕ್ಷಿಸಿದ್ದಾರೆಂದು ಹೇಳುವದುಂಟು. ಇಂತಹ ತಪ್ಪು ಅಭಿಪ್ರಾಯ ಬೇರೊಂದಿರುವದಿಲ್ಲ. ಕಳೆದ ಅನೇಕಾನೇಕ ಶತಮಾನಗಳಿಂದಲೂ ದಕ್ಷಿಣ ಭಾರತವು ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ, ಮತೀಯ ಹಾಗೂ ಪಾರಮಾರ್ಥಿಕ ಜೀವನದಲ್ಲಿ ಬಹು ಮುಖ್ಯ ಸ್ಥಾನವನ್ನು ಅಲಂಕರಿಸಿದೆ. ದಕ್ಷಿಣ ಭಾರತದಲ್ಲಿರುವ ತೀರ್ಥಕ್ಷೇತ್ರಗಳು ಅಖಂಡ ಭಾರತದ ಭೌಗೋಲಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ದೀಪ ಶಾಶ್ವತವಾಗಿರುವಂತೆ ಕಾಪಾಡಿಕೊಂಡು ಬಂದಿವೆ. ಅವು ಕೋಟಿ ಭಾರತೀಯರ ಸ್ಫೂರ್ತಿ ಚಿಲುಮೆ, ಶಾಂತಿಮಂದಿರಗಳಾಗಿವೆ. ಭಾರತದ ಯಾವ ಮೂಲೆಯಲ್ಲಾದರೂ ಹುಟ್ಟಿರುವ ಭಾರತೀಯನಿಗೆ ರಾಮೇಶ್ವರ, ಕನ್ಯಾಕುಮಾರಿ ಹಾಗೂ ಇತರ ಪವಿತ್ರ ಸ್ಥಳಗಳ ದರ್ಶನ ಪಡೆಯುವ ಉತ್ಸಾಹ ಇರುವದು ಸ್ವಾಭಾವಿಕವೇ ಇದೆ. ಇವುಗಳ ದರ್ಶನ ಲಾಭವಾದಾಗಲೇ ಅವನ ಮನಸ್ಸಿಗೆ ನೆಮ್ಮದಿ. ಅಲ್ಲಿಗೆ ಹೋದಾಗಲೇ ಅವನಿಗೆ ಭಾರತವೆಂದರೇನು ? ಹಾಗೂ ತನ್ನ ವಾತ್ಸಲ್ಯಮಯಿ ಮಾತೃ ಭೂಮಿಯು ಅದೆಂತು ಅತ್ಯಾಶ್ಚರ್ಯದಾಯಕ ನಾಡಾಗಿದೆಂಬುದರ ಜ್ಞಾನ ಬರುತ್ತದೆ. ವಿಶ್ವದ ಜ್ಞಾನದೇವತೆಯ ದೇಗುಲದ ಕವಾಡವೆರೆದರೆ ಚಿಲ್ಲಿ ದಕ್ಷಿಣ ಭಾರತದ ಭಾರತೀಯ ಮಂದಿರಸದೇಕರ ವಿಗ್ರಹಗಳನ್ನು ಕಾಣಬಹುದು. ತಮ್ಮ ಜೀವನಮಾನ ಗಂಧದ ಕೊರಡನ್ನವರು ರಾಷ್ಟ್ರೀಯ ಸಂಘಟನಾ ದೇವಿಗಾಗಿ ತೇದಿರುವರು. ಇಂದೂ ಸಂಘಟನೆಯ ಪಾರಿ ಸರಿಯಾಗಬೇಕಾದಲ್ಲಿ ಅವರ ನಾಮೋಚ್ಚಾರಣೆಯು ಬಲವೂ ಬಹಳ ಪರಿಣಾಮಕಾರಿಯಾಗಿದೀತು. ಕನ್ಯಾಕುಮಾರಿಯ ಪವಿತ್ರ ಮಡಿಲಲ್ಲಿ ಜನ್ಮ ತಾಳಿದ ಶಂಕರಾಚಾರ್ಯರು ಉತ್ತುಂಗ ಹಿಮಾಲಯ ಶಿಖರದಲ್ಲಿ—ಕಾಶ್ಮೀರದಲ್ಲಿ—ಮಠವನ್ನು ಸ್ಥಾಪಿಸಿರುವರು. ಆ ಶಿಖರವನ್ನಿಂದೂ ಶಂಕರ ಮಲೆಯೆಂದು ಕರೆಯುವರು. ಉತ್ತರದಲ್ಲಿ ಅವರು ಅಂದು ಸ್ಥಾಪಿಸಿರುವ ಮಠಗಳು ಇಂದೂ ಜ್ಞಾನ ದೀಪದಂತೆ ಜ್ವಲಿಸುತ್ತವೆ.

ಅನಂತರದ ಶತಮಾನಗಳಲ್ಲೂ ಅನೇಕಾನೇಕ ವೀರಪುರುಷರು, ಸಾಧುಸಂತರು, ಮಹಾಪುರುಷರು ದಕ್ಷಿಣದಿಂದಲೇ ಬಂದಿರುವರು. ಅವರ ಸಂಖ್ಯೆ ಅಗಣಿತವೇ ಇದೆ. ವೇದಾಚಾರ್ಯ, ರಾಮಾನುಜಾಚಾರ್ಯ, ವಲ್ಲಭಾಚಾರ್ಯ..... ಕೇವಲ ಉದಾಹರಣೆಗಳು. ಇನ್ನೂ ಇಂತಹ ಅನೇಕ ಜ್ಞಾನ ನಿಧಿಗಳು ಅಲ್ಲಿದ್ದುವು. ವಲ್ಲಭಾಚಾರ್ಯರು ಓರ್ವ ಪ್ರಮುಖ ಮಹಾಪುರುಷರಾಗಿದ್ದರು ಅವರು ದಕ್ಷಿಣದಿಂದ ಅಲಹಾಬಾದಿಗೆ ಬಿಜಯಂಗೈದು ಅಲ್ಲಿ ವಾಸಿಸಿಕೊಂಡಿದ್ದರು. ಇಂದೂ ಭಾರತೀಯರು ಆ ಕ್ಷೇತ್ರಕ್ಕೆ ಹೋಗಿ ಗೌರವವನ್ನು ಸಲ್ಲಿಸುತ್ತಾರೆ. ಅವರ ಸಾವಿರಾರು ಮತಾನುಸಾರಕರು ಉತ್ತರ ಭಾರತದಲ್ಲಿ ಅಲ್ಲಲ್ಲಿ ವಾಸಿಸಿಕೊಂಡಿದ್ದಾರೆ. ವಲ್ಲಭಾಚಾರ್ಯರ ಪ್ರತಿಭೆಯ ಮನವರಿಕೆಯಾಗಿ ಬೇಕಾದಲ್ಲಿ ಮಧುರಾ ವೃಂದಾವನಕ್ಕೆ ಹೋಗಬೇಕು. ಇತ್ತೀಚೆಗೂ ಅಲ್ಲಿಂದ ಅನೇಕಾನೇಕ ಭಾರತೀಯರು ಹಲವಾರು ರಂಗಗಳಲ್ಲಿ ಬೆಳಗಿರುವರು, ಅವರೆಲ್ಲರಿಗೂ ಭಾರತದ ಮೂಲೆಮೂಲೆಗಳಲ್ಲಿ ಯಃಕ್ಷ ಮರ್ಯಾದೆಯನ್ನು ಸಲ್ಲಿಸಲಾಗುತ್ತಿದೆ.

ಭಾಷಾ ಸಮಸ್ಯೆಯು ಕೆಲ ತರಹದ ತೊಡಕುಗಳನ್ನುಂಟು ಮಾಡಿದೆ. ಸ್ವಾತಂತ್ರ್ಯ ಪಡೆದ ನಂತರ ರಾಷ್ಟ್ರಕ್ಕೊಂದು ಸಾಮಾನ್ಯ ವ್ಯಾವಹಾರಿಕ ಭಾಷೆಯ ಅವಶ್ಯಕತೆಯು ಇದ್ದೇ ಇತ್ತು. ಆ ವಿಷಯವು ಕೆಲ ಸಂವತ್ಸರಗಳ ಹಿಂದೆ ತರ್ಕದ ವಿಷಯವಾಗಿತ್ತು. ಭಾರತದ ಸರ್ವರಂಗಗಳ ಕೋಣದಿಂದಲೂ ನೋಡಿದಲ್ಲಿ ಸಂಸ್ಕೃತವು ಅದಕ್ಕೆ ಅನುಕೂಲ ಭಾಷೆಯಾಗಿರುವದನ್ನು ಕಂಡುಕೊಳ್ಳಬಹುದು. ಅದಕ್ಕೆ ಸಹಸ್ರಾರು ಶತಮಾನಗಳ ಹಿಂದಿನ ಇತಿಹಾಸವೂ ಇದೆ ಸೂರ್ವಜರಿಂದ ಅದು ಸವಿಧಮನಿ-ದಮನಿಗಳಲ್ಲಿ ಪ್ರವಹಿಸುತ್ತಿದೆ. ಭಾರತೀಯರು ಅದನ್ನು ತಮ್ಮ ದೈನಂದಿನ ಜೀವನದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಗತಶತಮಾನಗಳಲ್ಲಿ ಅದು ರಾಷ್ಟ್ರೀಯ ಪ್ರತ್ಯೇಕತಾ ಪಿಶಾಚಿಯ ತಲೆಯ ಮೇಲೆ ಹೊಡೆದಿತ್ತು. ಹಾಗಿದ್ದರೂ ಭಾರತದ ಸಂವಿಧಾನ ಸಭೆಯಲ್ಲಿ (ಕಾನ್ಸ್ಟಿಟ್ಯೂಯಂಟ ಎಸೆಂಬ್ಲಿ) ಹಿಂದಿಯ ಎಲ್ಲಾ ರೀತಿಯಲ್ಲೂ ಉತ್ತಮ ಆಡಳಿತ ಭಾಷೆ ಎಂಬುದಾಗಿ ತೀರ್ಮಾನವಾಯಿತು. ಪ್ರಾದೇಶಿಕ ಭಾಷೆಗಳ ಸ್ವಾತಂತ್ರ್ಯದ ಕುರಿತು ಆಗ ಸ್ವರ ಎದ್ದಿರಲಿಲ್ಲ. ಪ್ರಾದೇಶಿಕ ಭಾಷೆಗಳೆಲ್ಲವೂ ಪ್ರಬಲವಾಗಿ ಬೆಳೆಯಲೇ ಬೇಕು. ಹಿಂದಿಯು ಜ್ಞಾನದ ಕ್ಷೇತ್ರವೂ ಬೆಳೆಯ ಬೇಕು. ಯಾರೂ ಹೇಳದಿದ್ದರೂ ಹಿಂದಿಯನ್ನು ಹೇರುವ ಪ್ರಶ್ನೆಯೇ ಇರುವದಿಲ್ಲ. ಹಿಂದಿಯನ್ನು ವ್ಯಾವಹಾರಿಕ ಭಾಷೆಯನ್ನಾಗಿ ಪರಿಗಣಿಸುವದರಿಂದ ಬೇರೆ ಪ್ರದೇಶವು ಇನ್ನೊಂದು ಪ್ರದೇಶದ ಮೇಲೆ ಅಧಿಕಾರ ನಡೆಸುತ್ತದೆ ಎನ್ನುವದಕ್ಕೆ ಸಂವಿಧಾನದ ಪ್ರಕಾರ ಎಡೆಯೇ ಇರುವದಿಲ್ಲ. ಏನಾದರೂ ಸಮಸ್ಯೆ ತಲೆ ಎತ್ತಿದಲ್ಲಿ ಅದನ್ನು ಬಗೆಹರಿಸಿಕೊಳ್ಳಬೇಕು. ಈ ಸಮಸ್ಯೆಗಳಾಗಲೀ, ಪ್ರಶ್ನೆಗಳಾಗಲೀ ವಾದಗಳಾಗಲೀ ಪರಿಹಾರಕ್ಕೆ ಬಯಸದಾದಲ್ಲೇನೂ ಇರುವದಿಲ್ಲ. ಪ್ರತ್ಯೇಕತೆ ಹಾಗೂ ವಿಭಜನೆಯವಾದ ಖಂಡನಾರ್ಹವಾದುದಾಗಿಯೂ ಇದೆ.

«ಹಿಂದೂ ವಿನಿಂದ ಆನು:

—ಶಿವಶಂಕರ, ಮಂದಾರ



ಅಮೇರಿಕನ್ ಪಿಸ್ತೂಲ್ ಆಟೋ ಮೇಟಿಕ್ 6 ಗುಂಡು ಮತ್ತು 50 ಗುಂಡು ನಿಮಗೆ ರೈಸ್ತಿಕರವಾಗದಿದ್ದಲ್ಲಿ ಹಣ ವಾಪಾಸು ಕೊಡಲಾಗುವುದು.

ಶುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜ್ ರೂ. 2

REY ROGAS & CO., 23-A, Anand Nagar, BOMBAY-26

ಹೊಸ ಪುಸ್ತಕ—

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ಪ್ರಚಾರಕರಿಗೆ,

ನವಯುಗ ಪ್ರೆಸ್, ಉಡುಪಿ.

ನವಯುಗ'ಕ್ಕೆ

ಚಂದಾದಾರರಾಗಿ

ಪ್ರೋತ್ಸಾಹಿಸಿ

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

(೨ನೇ ಪುಟದಿಂದ)

ಯತೆ, ಮೊದಲಿನ ಹಾಗೇ ಉಳಿದಿತ್ತು, ಆದರೆ ಆ ಬಳಿಕ ಜನರು 'ಏಕೋ ಈಗ ಮೊದಲಿನಷ್ಟು ಕಾಫೀ ಹುಡಿ ಜೆನ್ನಾಗಿಲ್ಲ ವಲ್ಲಾ' ಎಂದು ಹೇಳ ತೊಡಗಿದರು. ಇದು ಹೀಗೇ ಪ್ರಸಾರವಾಗುತ್ತ ಸಬೇಶರ ವ್ಯಾಪಾರ ಇಳಮುಖವಾಗತೊಡಗಿತು ಸಬೇಶರು ಚಿಂತೆಯಲ್ಲಿ ಮುಳುಗಿದರು.!

ಇತ್ತ ಸುಬ್ಬು ಕುಟ್ಟಯ್ಯು ಆರೋಗ್ಯ ಹೊಂದಿದ ಬಳಿಕ ಸಬೇಶರಿಂದ ಕರಬಾರ ದಿರುವುದನ್ನು ಕಂಡು, ವಿಶ್ವನಾಥನೆಂಬ ತನ್ನ ಮಿತ್ರನೊಡನೆ ಬೇರೆಯೇ ಕಾಫೀ ಹುಡಿಯಂಗ್ಡೆಯನ್ನು ಆರಂಭಿಸಿದನು. ತನ್ನ ಕಾಫಿಗೆ, ಸಬೇಶರ ಕಾಫೀ ಟಿನ್ನಿನ ಮೇಲಿದ್ದ ನಟರಾಜನ ಚಿತ್ರವನ್ನೇ ಸ್ವಲ್ಪ ವ್ಯತ್ಯಾಸ ಪಡಿಸಿ ಹಾಕಿ "ನಟೇಶ ಕಾಫೀ ಪೌಡರ್" ಎಂದು ನಾಮಕರಣ ಮಾಡಿದನು. ವಿಶ್ವನಾಥ–ಸುಬ್ಬು ಕುಟ್ಟಯ್ಯರ ಈ ಹೊಸ ಕಾಫೀ ಪೇಟೆಗೆ ಬರುತ್ತಲೇ ಅದಕ್ಕೆ ಗಿರಾಕಿ ಹೆಚ್ಚಿತು. ಎಲ್ಲೆಲ್ಲಿಯೂ ನಟೇರ ಕಾಫಿಯೇ ಪ್ರಚಾರವಾಗ ತೊಡಗಿತು. 'ಆಃ ಎಂತಹ ಪರಿಮಳ! ಈ ನಟೇಶ ಕಾಫಿಗೆ!' ಎಂದು ಜನರು ಪ್ರಶಂಸಿಸ ತೊಡಗಿದರು. ಇತ್ತ "ಸಬೇಶ ಕಾಫೀ"ಗೆ ಗಿರಾಕಿಯೇ ಇಲ್ಲದಂತಾಗಲು ಸಬೇಶರು ವ್ಯಾಪಾರಸಿಲ್ಲುವ ಸ್ಥಿತಿ ಮುಟ್ಟಿತು. ಈ ಪರಿಸ್ಥಿತಿಯಿಂದ – ಕುಪಿತರಾದ ಸಬೇಶರು, ಸುಬ್ಬು ಕುಟ್ಟಯ್ಯ ಮೇಲೆ 'ಈ ಹೊಸ ನಟೇಶ ಕಾಫೀ ಟಿನ್ನಿನ ಮೇಲೆ, ನಮ್ಮ ಕಾಫೀ ಟಿನ್ನಿನ ಚಿತ್ರವನ್ನೇ ಹಾಕಿರುವರು. ಇದರಿಂದ ಜನರು ಮೋಸ ಹೋಗಿ ನಮ್ಮ ವ್ಯಾಪಾರ ಕೆಟ್ಟು ಹೋಗುತ್ತಿದೆ. ಇದು ಅನ್ಯಾಯ' ಎಂದು ಹೈಕೋರ್ಟಿನಲ್ಲಿ ದಾವಾ ಹೂಡಿದರು. ಕೊನೆಗೆ ಸಬೇಶರ ಪ್ರಬಲ ಹಾಗೂ ಪ್ರಯತ್ನಗಳಿಂದಾಗಿ, ಕೈಕೋರ್ಟಿನ ತೀರ್ಪು ಸುಬ್ಬುಕಟ್ಟಿಗೆ ವಿರೋಧವಾಗಿ ಆಯಿತು. ಸಬೇಶರಿಗೆ ಇದರಿಂದ ಅತ್ಯಾನಂದವಾಯಿತು. ಸುಬ್ಬು ಕುಟ್ಟಯ್ಯ, "ನಟೇಶ ಕಾಫೀ" ಎನ್ನುವುದನ್ನೂ ಜಪ್ತು ಮಾಡಬೇಕಾಗಿಯೂ ಹೈಕೋರ್ಟು ವಿಧಿಸಿತ್ತು.

ಇತ್ತ ವಿಶ್ವನಾಥ–ಸುಬ್ಬು ಕುಟ್ಟಯ್ಯರ ಚಿಂತೆ ವಿಶೇಷವಾಯಿತು. ಅದರೂ ಉಪಾಯವಿರಲಿಲ್ಲ. ಆದರೆ, ಹೈಕೋರ್ಟಿನ ತೀರ್ಪು ಸಿಕ್ಕಿದ ಎಂಟೇ ದಿನಗಳೊಳಗೆ ಸಬೇಶರು ಅಕಸ್ಮಿಕವಾಗಿ ತೀರಿಕೊಂಡರು. ಇದರಿಂದಾಗಿ ಕೋರ್ಟಿನ ಡಿಕ್ರಿ ಹಾಗೇ ಉಳಿಯುವಂತಾಯಿತು. ಆಗ ವಕೀಲರು–ಸುಬ್ಬು ಕುಟ್ಟಿಗೆ—'ಆ ನಟರಾಜನ ಚಿತ್ರವನ್ನು ಬೇರೆ ರೀತಿಯಿಂದ ಚಿತ್ರಿಸಿ ನಿಮ್ಮ ವ್ಯಾಪಾರ ನಡೆಸಬಹುದು" ಎಂದು ಆದೇಶವಿತ್ತರು. ಸುಬ್ಬುಕುಟ್ಟಿಗೆ ಸಂತೋಷವಾಯಿತು. ಆದರೆ ಈ ಸಂತೋಷ ಹೆಚ್ಚು ಕಾಲ ಉಳಿಯಲಿಲ್ಲ.

ಕೆಲವು ಕಾಲ ಕಳೆಯಲು, ಕಾಫೀ ಹುಡಿಗೆ ಸೇರಿಸುತ್ತಿದ್ದ ಆ ವಸ್ತು ಎಂಥದು? ಎಂದು ಜನರಿಗೆ ಹೇಗೋ ಗೊತ್ತಾಗಿ ಹೋಯಿತು. ಸುಬ್ಬುಕುಟ್ಟಯ್ಯು, (ರಿಂಟೇ) ಅಂಟಾಳಕಾಯಿಯ ಹುಡಿಯನ್ನು ಅಲ್ಪ ಪ್ರಮಾಣದಲ್ಲಿ ತನ್ನ ಕಾಫೀ ಪುಡಿಗೆ ಸೇರಿಸುತ್ತಿದ್ದನೆಂದು, ಜನರಿಗೆ ತಿಳಿದು ಹೋಯಿತು! ಮೊದಲು ಈ ಕಾಫಿಯನ್ನೇ ತುಂಬಾ ಮೆಚ್ಚುತ್ತಿದ್ದ ಜನೇ ಜನರು ಈಗ, 'ಆ ಕಾಫಿಯನ್ನು ಕುಡಿದರೆ, ಹೊಟ್ಟೆ ನೋವು ಬರುತ್ತದೆ! ವಾಂತಿಯಾಗುತ್ತದೆ!' ಎಂದು ಹೇಳತೊಡಗಿದರು. ನಿಜಕ್ಕೂ ಜನರಿಗೆ ಹಾಗೇ ಆಗತೊಡಗಿತಂತೆ! ಈ ಕಾರಣದಿಂದಾಗಿ ಸುಬ್ಬುಕುಟ್ಟಯ್ಯ ವ್ಯಾಪಾರವೂ ನಿಂತೇ ಹೋಯಿತು! ಈ ಸ್ವಧೇಯ ವ್ಯಾಮೋಹದಿಂದ ಇಬ್ಬರೂ ಅಭಿವೃದ್ಧಿ ಹೊಂದಲಿಲ್ಲ!' ಇಂತು ಈ ಕಥೆ ಮುಂದುವರಿದಿದೆ

'ಸ್ಪರ್ಧೆಯಿಂದ ಅನ್ಯಾಯದಿಂದ ಯಾವಾಲೂ ಹೀಗಾಗಬಹುದು ಅಸತ್ಯ ಪ್ರಧಿಂದ ಮುನ್ನಡೆದು ಸಂಪಾದಿಸಿದ ಧನ ಕೀರ್ತಿ ಇವೆಲ್ಲ ಹೆಚ್ಚು ಕಾಲ ನಿಲ್ಲಲಾರದು; ಮೋಸ್ಕನಲ್ಲ; ಅತ್ತೆ ಇದರ ನಾಶವಾಗುವ ಕಾಲಕ್ಕೆ ಪರವ್ಯ ಬಡ ಸಹಿತವಾಗಿ ಕಿತ್ತು ಬೀಳುವಂತೆ ಎಲ್ಲವೂ ನಿರ್ನಾಮವಾಗುತ್ತದೆ! ವ್ಯಾಪಾರ, ವ್ಯವಹಾರ ಯಾವುದೇ ಇರಲಿ, ಸತ್ಯವೇ ಅದಕ್ಕೆ ಆಧಾರವಾಗಿರಬೇಕು' ಅನ್ಯಾಯ ಕಪಟಗಳಿಂದ ವ್ಯವಹಾರಗಳು ನಡೆದರೆ, ಆಗ ಸರ್ವನಾಶವಾಗುವುದು ನಿಶ್ಚಯ!" ಎಂಬ ಸಮಾಜಕ್ಕೆ ಉಪಯುಕ್ತವೂ ಚಿಕಿತ್ಸಕವೂ ಆದ ಈ ತತ್ವಗಳಿಂದ ಕೂಡಿದ ಶ್ರೀ ರಾಜಾಜಿಯವರ ಈ ಕಥೆ ನಿತ್ಯ ಸತ್ಯವಾಗಬಲ್ಲ ಘಟನೆಯಿಂದೊಡಗೂಡಿ, ಪರಿಣಾಮಕಾರಿಯಾಗಿರುವುದು.

ಎನ್ನ ಕನ್ನಾಡ ಸಾಹಿತ್ಯಮೇ

"ಎನ್ನ ಕನ್ನಾಡ ಸಾಹಿತ್ಯ ಮೆಱೆ"
ಉತ್ತುಂಗ ನೃಪತುಂಗ
ಪಂಪರನ್ನರ ತೊಡೆ
ತೊಟ್ಟಲೊಳೋಲಾಡಿ
ಬೆಳೆದ ನಲ್ಮೆಯ ಎನ್ನ ‖ ೧ ‖

ನಾರ್ಣಪ್ಪ ಮುದ್ದಣ್ಣ
ಜನ್ನ ಹೊನ್ನಮ್ಮರ
ಎದೆ ಸುಧೆ ಸವಿಯುಂಡು
ಮುದದಿ ಮೆರೆದ ಎನ್ನ ‖ ೨ ‖

ಕವಿ ಕುವೆಂಪು ಬೇಂದ್ರೆ
ಗುಂಡಪ್ಪರೆಲ್ಲರ
ಸವಿ ಸೇವೆಯಿಂ ನವ
ಬುವಿಯ ನೇರಿದ ಎನ್ನ ‖ ೩ ‖

ಕಾರಂತ ಅನಕೃ
ತಾರರು ದೇವುಡು
ಸಾರ ಸುಂದರ ತರ
ಕೃತಿರಸವೆರೆದೆನ್ನ ‖ ೪ ‖

ಸುರಿವ ನಿನ್ನಯ ಕೀರ್ತಿ
ಸರಿ ಪುರದೊಲು ಕಾವ್ಯ
ಝರಿ ಹರಿಯುತಲಿರೆ
ಮೆರೆದು ನಿಂತಿಪೆ ಎನ್ನ ‖ ೫ ‖

ಹೈದ್ಯನಾಗಿಹ ಬಹು
ಗದ್ಯ ಜನರ ಮನ
ಮಧ್ಯದಿಂದೆದ್ದ ದೊ
ಉದ್ಧರಿಸುಪುದೆನ್ನ ‖ ೬ ‖

ಅಕ್ಷರ ಕುಸುಮದಿ
ಅಕ್ಷಯ ಪೂಜೆಯು
ಲಕ್ಷ ಸಂಖ್ಯೆಯ ಜನ
ವೀಕ್ಷಿಸುತಿಪೆಯೆನ್ನ ‖ ೭ ‖

ಸಾಗರ ದಾಗರ
ಕಗೆ ನೀರ್ಪನಿಯೊಂದು
ಆಗ ಧನ್ಯತೆಯೆಂದು
ಸಾಗಿ ನುತಿಪೆನಿಂದು ಎನ್ನ ‖ ೮ ‖

ರಮಾನಂದ ಬನಾರಿ ದೇಲಂಪಾಡಿ
ಕಾಸರಗೋಡು ತಾಲೂಕು.

ಧರ್ಮ ದೌರ್ಜನ್ಯ

ಹೂವ ಧಾರ್ಮಿಕ ಸಬಲನಬಲೆಗೆ ಗರ್ಭ-
ದಾನವನಿತ್ತನು?
ಅವನ ವೌರುಷ ಪುಣ್ಯ ಕರ್ಮಕೃತ
ಬೀದಿಗೆ ಬಿದ್ದನು.
ನಿತ್ಯಜೀವನ ರುದ್ರನಾಟಕದಲ್ಲಿ
ಈ ದುಃಖಾರ್ತನು
ನೂರುಗೋಳಿನ ನೆರೆಯೊಳೂ ಸ್ವಾ-
ತಂತ್ರ್ಯದಾನೆಯ ತೊರೆಯನು.
ಬೆಂದಿಬಟ್ಟೆಯೊಳಡಗಿ ನಡುಗುವ ಎಲೆ-
ಯಗುಂಡಿಗೆಯವನದು;
ಯಮನ ಹಾಡಿನ ತಾಳಮೇಳಕೆ ಹೆಜ್ಜೆ
ಹಾಕುವ ತನುವದು.
ಜೀರ್ಣ ಶೀರ್ಣ ವಿವರ್ಣ ಪರ್ಣ ಶರೀರ
"ದೇಹೀ" ಎನುವನು;
ನೆತ್ತರೂರುವ ಕಾಲನೆಳೆಯುತ ಬಾಗಿ
ಮುಂದಕೆ ನಡೆವನು.
ಗುಡಿಯ ಬಾಗಿಲ ಕೆಲದೊಳುರುಳಿದ
ನೂರುಗೋಲಿನ ಭಿಕ್ಷುಕ.
ನಿಂಕುನೋಡಿದನತುಲ ವಿಭವಮೆಯ
ಮೂರು ಲೋಕದ ರಕ್ಷಕ.
ಹೂವ ದೇವನು ಹೃದಯವಿಲ್ಲದ ಕಲ್ಲ-
ಕೆತ್ತನೆಯೊದನೆಂ
ಅವನು ಮಾನವಗೇಕೆ ಪಗಿಯದ ಬಾಳ-
ಬಯಕೆಯನಿತ್ತನೊ!

—"ಸಾಗರ"

ಅಮೃತ ಬಿಂದು

ದೇವರು ಮನುಷ್ಯನ ಬಗ್ಗೆ ಜಿಗುಪ್ಸೆ ಗೊಂಡಿಲ್ಲವೆಂಬ ಕಾರಣವಾಗಿಯೇ ಪ್ರತಿ ಮಗು ಈ ಭೂಮಿಯಲ್ಲಿ ಕಣ್ತೆರೆಯುತ್ತದೆ.

೦ ೨ ೦

ಒಳ್ಳೆಯದನ್ನು ಮಾಡಬೇಕೆನ್ನುವವನು ಬಾಗಿಲು ಶಟ್ಟಬೇಕಾಗುತ್ತದೆ. ಆದರೆ ಪ್ರೀತಿಸುವವನಿಗೆ ಬಾಗಿಲು ಸದಾ ತೆರೆದಿರುತ್ತದೆ.

೦ ೦ ೦

ಜನನದಲ್ಲಿ ಒಂದು ಆನೇಕವಾದರೆ ಮೃತ್ಯುವಿನಲ್ಲಿ ಆನೇಕವು ಒಂದರಲ್ಲೈಕ್ಯವಾಗುತ್ತದೆ

೦ ೦ ೦

ಆಗೆದು ಹುಡಿಗೊಂಡರೂ, ಒಡೆದು ಕಸತುಂಬಿದರೂ ಮಣ್ಣು ಪ್ರತಿಫಲವಾಗಿ ಹೂವನ್ನೇ ಕೊಡುತ್ತದೆ.

೦ ೯ ೦

ತಾನೇ ನಿಜವಾದ ಧ್ವನಿಯೆಂದು ಪ್ರತಿ ಧ್ವನಿ ಧ್ವನಿಯನ್ನು ಅಣಕಿಸುವಂತೆ ಜನರೂ ಕೂಡ!

೦ ೦ ೦

ನಮ್ಮ ದೀಪವನ್ನು ನಮಗಾಗಿ ನಮ್ಮ ಹಿಂದೆ ಬಚ್ಚಿಟ್ಟು ಹಿಡಿದಾಗ ನಮ್ಮ ದಾರಿಗೆ ನಮ್ಮದೇ ನೆರಳು ಬೀಳುತ್ತದೆ!

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

NAVAYUGA 18—10—1962

REGD. No. B. G. 176
LICENCE No. 31
Licensed to Post without Prepayment

ರುಮೇನಿಯನ್ ಅಧ್ಯಕ್ಷ

ಜಾರ್ಜಿ ದೇಜರ ಭಾರತ ಸಂದರ್ಶನ

ಭಾರತದ ಸುಂದರ ಚಿಲ್ಲೆಯು ಸುಂದರ ದೇಶಗಳ ಸಕ್ಷಿಗಳನ್ನೂ ಪಕ್ಷೀಯ ನಾಯಕರನ್ನೂ ತನ್ನತ್ತ ಆಕರ್ಷಿಸುತ್ತದೆ. ಮೆಕ್ಸಿಕೊವಿನ ರಾಷ್ಟ್ರಪತಿ ಡಾ। ಮತಿ ವೋಸರು ಭಾರತ ಸಂಚಾರ ಗೆಯ್ದು ಈಗ ತಾನೇ ಮರಳಿದ್ದಾರೆ; ಅವರ ಹಿಂದೆಯೇ ರುಮೇನಿಯದ ಅಧ್ಯಕ್ಷ ಶ್ರೀ ಜಾರ್ಜಿ ದೇಜರ ಭಾರತ ಯಾತ್ರೆಗೆ ತೊಡಗಿದುದು ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.

ರುಮೇನಿಯಾ ಎಂಬ ಹೆಸರು ಇಂದಿಗೆ ಹತ್ತು ವರ್ಷಗಳಿಗೆ ಮೊದಲಿನ ಒಂದು ಪ್ರಸಂಗವನ್ನು ನೆನಪಿಗೆ ತಂದು ಕೊಡುತ್ತದೆ. ರುಮೇನಿಯದ ಏಕೈಕ ವಿದೇಶ ಮಂತ್ರಿ ಮತ್ತು ಸೋವಿಯತ್ ರಶ್ಯದ ಪಾಲಿತ ಯುರೋಪಿನ ಪ್ರಮುಖ ಸದಸ್ಯೆಯಾಗಿದ್ದ ಏನಾ ಪೋಕರಳ ಹೆಸರನ್ನು ಇತಿಹಾಸದ ಪುಟಗಳಿಂದ ಕಿತ್ತು ಹಾಕುವ ಪ್ರಥಮ ಪ್ರಯತ್ನ ನಡೆದುದು ಆ ವರ್ಷ. ಅಸಾಧಾರಣ ಮಹಶಕ್ತಿಕಾಂಕ್ಷೆಯಿಂದ ಕೂಡಿದ ಈ ಮಹಿಳೆಯು ಏನಾದಳೆಂದು ಯಾರಿಗೂ ತಿಳಿದಿಲ್ಲ.

ಶ್ರೀ ಜಾರ್ಜಿದೇಜರು ಏನಾಗೊಡನೆ ಜಿಗಲಿಗೆ ಹೆಗಲು ಕೊಟ್ಟು ದುಡಿದವರು. ರಶ್ಯನ್ ನಾಯಕರಾಗಿದ್ದ ಸ್ಟಾಲಿನ್ನರ ಆದೇಶಗಳನ್ನು ಅಕ್ಷರಕ್ಷರ ಪಾಲಿಸುವಲ್ಲಿ ಮುಂದಾದವರು. ಕಳೆದ ವರ್ಷ ಮೋಸ್ಕೊವಿನಲ್ಲಿ ಕಮ್ಯುನಿಸ್ಟ್ ಪಕ್ಷದ ಇತಿಹಾಸ ಪ್ರಸಿದ್ಧವೆನಿಸಿದ ಪಾಲಿನೆಯ ಅಧಿವೇಶನವು ನಡೆಯಿತು. ಆದಕ್ಕೆ ತೆರಳಿದ ದೇಜರು ವಿಶ್ವ ಕಮ್ಯುನಿಜಮ್ಮಿನ ಪ್ರವರ್ತಕರೆನಿಸಿದ ಲೆನಿನ್ ಮತ್ತು ಅವರ ಪಟ್ಟ ಶಿಷ್ಯ. ಸ್ಟಾಲಿನರ ಸಮಾಧಿಗಳ ಮೇಲೆ ಹಾರಾರ್ಪಣೆಗೆಯ್ದು ಶ್ರದ್ಧಾವನತ ಮಸ್ತಕರಾದರಾದರು. ಆದರೆ, ಅದರ ಮರುದಿನವೇ 'ಸ್ಟೇಲಿನ ಯುಗದ ಕಾಳ ರಾತ್ರಿ'ಯ ಪರದೆಯನ್ನು ಎತ್ತುವ ಸದುದ್ದೇಶದಿಂದ ಪ್ರಧಾನಿ, ಕ್ರುಶ್ಚೇವರು ವಾತಾವರಣವನ್ನೇ ಸಂಪೂರ್ಣ ಬದಲಾಯಿಸಿದರು. ಲೆನಿನ್ ಮತ್ತು ಸ್ಟಾಲಿನ್ನರ ಸಮಾಧಿಯನ್ನು ಕಿತ್ತು ಹಾಕುವುದಕ್ಕೂ ಅವರು ಹಿಂಜರಿಯಲಿಲ್ಲ.

ದೇಜರಿಗಿಂದು ೬೧ ವರ್ಷ ನಡೆಯುತ್ತದೆ ಇವರು ತನ್ನ ೧೮ನೆಯ ವಯಸ್ಸಿನಲ್ಲಿಯೇ ಶ್ರಮಜೀವಿಗಳ ಆಂದೋಲನದಲ್ಲಿ ಕೂಡಿಕೊಂಡಿದ್ದರು. ಈ ಆಂದೋಲನದಲ್ಲಿ ಪಾತ್ರವಹಿಸಿದ ಕಾರಣದಿಂದ ದೇಜರು ತಮ್ಮ ಅಮೃತ ನಯಸ್ಸಿನ ೧೨ ವರ್ಷಗಳನ್ನು ಜೈಲುಖಾನೆಯ ಸರಳುಗಳ ನಡುವೆ ಕಳೆಯಬೇಕಾಯಿತು. ಉಜ್ವಲ ದೇಶ ಪ್ರೇಮಿಗಳಾಗಿದ್ದ ಇವರಲ್ಲಿ ನೆರೆಮನೆಯವಲ್ಲರೂ ವಾಗ ಈ ಪ್ರೇಮವು ಮತ್ತಷ್ಟು ಉಕ್ಕಿ ಹರಿಯತೊಡಗಿತು. ದ್ವಿತೀಯ ಲೋಕಸಂಗ್ರಾಮವು ನಡೆಯುತಿದ್ದಾಗ ರಷ್ಯಾದಲ್ಲಿ ಇವರು ನೆರೆಯಿಂದ ತಪ್ಪಿಸಿಕೊಂಡರು ರುಮೇನಿಯಾ ಮುಕ್ತಿ ಆಂದೋಲನದಲ್ಲಿ ತಲ್ಲೀನರಾದರು. ೧೯೪೭ರ ದಶಂಬರದಲ್ಲಿ ರುಮೇನಿಯಾದಲ್ಲಿ ಬೇರು ಬಿಟ್ಟಿದ್ದ ರಾಜಪ್ರಭುತ್ವದ ಮೂಲವನ್ನೇ ಕಿತ್ತೆಸೆಯುವುದರಲ್ಲಿ ಅವರು ಯಶಸ್ಸು ಪಡೆದರು. ಜನತಾಪ್ರಭುತ್ವವನ್ನು ಅಲ್ಲಿ ಸ್ಥಾಪಿಸಿ ಸಫಲರೆನಿಸಿದರು. ೧೯೫೫ರಿಂದ ೧೯೬೨ರ ವರೆಗೆ ಉಪ ರಾಷ್ಟ್ರಪತಿಯಾಗಿದ್ದ ಜಾರ್ಜಿ ದೇಜರು ಕಳೆದ ಏಳು ವರ್ಷಗಳಿಂದ ರುಮೇನಿಯನ್ ರಾಷ್ಟ್ರಪತಿಗಳಾಗಿದ್ದಾರೆ.

ದುರ್ಬಲತೆಯಿಂದ ಪರಾಜಿತ

(೭ನೇ ಪುಟದಿಂದ)

ತ್ತಾರೆ. ಕೆಲವು ಸಲ ಈ ಮಹಾನುಭಾವರು ಅಂಗಡಿಗಳಲ್ಲೋ ಬಸ್ಸಿನಲ್ಲೋ ಕುಳಿತು ಎಲೆಯಡಿಕೆ ಜಗಿದು 'ಪಿಚಕ್ಕನೆ' ಉಗಿದು ಯಾರ್ಯಾರೊ ದಾರಿಹೋಗುವವರ ಅಂಗಿಗೆ ರಂಗೋಲಿ ಬರೆಯುವುದೂ ಇದೆ ಮತ್ತೆ ಅವರು ಇವರಿಗೆ ಸಹಸ್ರನಾಮ ಹೇಳಿ ಹೊಳೆಯಲ್ಲಿ ಮುಳುಗಿ ಪಾಪ ಪರಿಹಾರ ಮಾಡಿಕೊಳ್ಳಬೇಕಷ್ಟೆ.

ತಾಂಬೂಲ ಸವಿಯುವವರ ತುಟಿ ತೊಂಡೆಹಣ್ಣಿನಂತೆ ಎಂದು ಕವಿಗಳು ವರ್ಣಿಸುತ್ತಾರಲ್ಲ—ಹಾಗಿರುತ್ತದೆ. ಕೆಲವು ಸಲ ಈ ಕೆಂಪು ರಸ ಬದಿಯಲ್ಲಿ ಹರಿದು ಗಲ್ಲದ ತನಕವೂ ಇಳಿಯುವುದಿದೆ. ಇವರ ಹಲ್ಲುಗಳೂ ಒಸಡಿನ ಬಣ್ಣವನ್ನೇ ಹೊಲುತ್ತಾ ಸಮತಾವಾದವನ್ನು ಸಾರುತ್ತವೆ.

ಹಲವರು ಫೇಷನ್ನಿಗಾಗಿಯೇ ಚಟಗಳನ್ನು ಪ್ರಾರಂಭಿಸಿದರೆ ಕೆಲವರು ಕೆಲವೊಂದು ವಿಶಿಷ್ಟ ಕಾರಣಗಳಿಗಾಗಿ ಇವುಗಳಿಗೆ ಒಳಗಾಗುತ್ತಾರೆ. ಹಲ್ಲು ನೋವಿಗಾಗಿ ಹೊಗೆ ಬತ್ತಿ ಸೇದಲು ತೊಡಗಿದವರು ಕೆಲವರಾದರೆ ಹಳ್ಳಿನಿಂದ ರಕ್ತ ಬರುವುದಕ್ಕಾಗಿ ನಶ್ಯ ಎಳೆಯಲು ಪ್ರಾರಂಭಿಸಿದವರು ಮತ್ತೆ ಕೆಲವರು. ಕೆಲವರು ಬಾಯಿನಾತ ಹೋಗಲಿಕ್ಕೆಂದು ತಾಂಬೂಲ ಸೇವಿಸಿದರೆ ಇನ್ನು ಕೆಲವರು ಮುಖಕ್ಕೊಂದು ಕಳೆಬರಲೆಂದು ಆದನ್ನು ಉಪಯೋಗಿಸುವರು. ಆದರೆ ಇವೆಲ್ಲ ಕಂಟೆ ಕಾರಣಗಳೇ ಸರಿ.

ಸೊಗೆಸೊಪ್ಪು ನೇಹಕ್ಕೆ ಹಾನಿಕಾರಕವೆಂದು ವಿಜ್ಞಾನವೇ ಸಾರುತ್ತಿರುವಾಗ ಫೇಶನ್ನಿನ ಹೆಸರಿನಲ್ಲಿ ಇಂತಹ ಚಟಗಳಿಗೆ ಬಲಿಬೀಳುವ ಹುಚ್ಚು ಹವ್ಯಾಸವನ್ನು ನಮ್ಮವು ನಿಲ್ಲಿಸಲಾರವೆ? ಜಗತ್ತನ್ನೇ ಗೆದ್ದಿರುವೆವೆಂದು ಹೇಳಿಕೊಳ್ಳುವ ನಮಗೆ ಇನ್ನೂ ನಮ್ಮನಮ್ಮಲ್ಲೇ ಇರುವ ದೌರ್ಬಲ್ಯಗಳನ್ನು ಗೆದ್ದು ಕೊಳ್ಳಲಾಗಲಿಲ್ಲವೆಂದರೆ ಆಶ್ಚರ್ಯ!

—ರಮಾನಂದ ಬನಾರಿ,
ದೇಲಂಪಾಡಿ.

ಶಾಂತಿ ನಿಯೋಗಗಳು ಯಶಸ್ವಿಯಾದುವೆ?

(೭ನೇ ಪುಟದಿಂದ)

ಕಡೆಗೆ, ಈ ದಿಸೆಯಲ್ಲಿ ಒಂದು ಪೆಜ್ಜೆಯನ್ನಾದರೂ ಮುಂದಿಟ್ಟರೆಂದರೆ, ಭಾರತದ ಶಾಂತಿ ಸೇವಾ ಪ್ರತಿಷ್ಠಾನದ ಶಾಂತಿ ನಿಯೋಗವು ಯಶಸ್ಸುಗಳಿಸಿದಂತೆ.

ಶಾಂತಿ ನಿಯೋಗದ ಯಶಸ್ಸು

ಭವಿಷ್ಯ ಜಗತ್ತಿನ ಉಳಿವು—ಅಳಿವು ಗಳಂತಹ ಮಹತ್ವದ ಪ್ರಶ್ನೆಯನ್ನಿಂದು ಉತ್ತರಿಸಬೇಕಾದವರು ಕ್ರುಶ್ಚೇವ ಮತ್ತು ಕೆನ್ನೆಡಿಯವರು. ಇವರಿಬ್ಬರ ಸರಸವಿರಸಗಳೇ ಅಣ್ವಸ್ತ್ರ ಪ್ರತಿಬಂಧ ಮತ್ತು ಪ್ರಯೋಗಕ್ಕೆ ಪ್ರೇರಕವಾಗುವುವು. ಜಗತ್ತು ಸರ್ವನಾಶದಿಂದ ಬದುಕಬೇಕಾದರೆ, ವಿಷಕಾರಿ ಶಸ್ತ್ರಾಸ್ತ್ರಗಳು ಸಂಪೂರ್ಣ ತಡೆಟಿಡಿಯಲ್ಪಡಬೇಕು. 'ಜೈ ಜಗತ್' ಎಂಬ ಅಮರ ವಾಕ್ಯದ ಅರ್ಥವನ್ನು ಎಲ್ಲರೂ ಅರಿತುಕೊಳ್ಳಬೇಕು. ಈ ದಿಸೆಯಲ್ಲಿ ಪೂರ್ವ ಪಶ್ಚಿಮದ ಮಹಾ ರಾಷ್ಟ್ರಗಳು ಯಾವ ಮಾರ್ಗವನ್ನು ಹಿಡಿಯುತ್ತವೆಯೆಂಬುದು ನಿಶ್ಚಿತವಿಲ್ಲವಾದರೂ, ಆವು ನೇರ ದಾರಿಯನ್ನೇ ತುಳಿಯುವಂತೆ ಮಾಡುವಲ್ಲಿ ದಿಟ್ಟ ಹೆಜ್ಜೆಯಿಟ್ಟ ರಾಜಾಜಿ, ದೇಬಾರ ಹಾಗೂ ಅವರ ಸಹಯಾತ್ರಿಕರನ್ನು ಎಂದೆಂದಿಗೂ ಮರೆಯುವುದು ಸಾಧ್ಯವಿಲ್ಲ.

ಲೈಫ್ ಇನ್ಶೂರೆನ್ಸ್ ಕೊರ್ಪರೇಶನ್ ಆಫ್ ಇಂಡಿಯಾ

ವೆಸ್ಟರ್ನ್ ಜೋನ್

ಪೊಲಿಸಿ ನಂಬ್ರ 243305ರ ಕುರಿತು.

ಎಂಪಾಯರ್ ಆಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕೊ., 214-ಡಿ, ನವರೋಜಿ ರೋಡು, ಫೋರ್ಟ್ ಬೊಂಬಾಯಿ, ಈ ಯು ನಿಟೆನಿಂದ ಕೊಡಲ್ಪಟ್ಟ ಕಣಂಜಾರು ಸದಾಶಿವ ಹೆಗ್ಡೆಯ ಜೀವ ವಿಮಾ ಪೊಲಿಸಿ ನಂಬ್ರ 243305 ಕಳೆದು ಹೋಗಿದೆ ಎಂದು ಈ ಮೂಲಕ ಜಾಹೀರುಪಡಿಸಲಾಗಿದೆ. ಈ ತಾರೀಕಿನಿಂದ ಒಂದು ತಿಂಗಳೊಳಗೆ ನಮಗೆ ಆಕ್ಷೇಪಣೆಗಳೇನಾದರೂ ಬರದಿದ್ದಲ್ಲಿ ದ್ವಿಪ್ರತಿ ಪೊಲಿಸಿಯು ಕೊಡಲ್ಪಡುವುದು.

ಡಿ. ಕೆ. ವೋರಾ

ಅಸಿಸ್ಟಾಂಟ್ ಡಿವಿಜನಲ್ ಮೆನೇಜರ್.

ಬೊಂಬಾಯಿ, 18—10—62.

ಉತ್ತಮ ಭದ್ರತೆ

ಮತ್ತು

ಯೋಗ್ಯ ಬಡ್ಡಿ

ಸೇವಿಂಗ್ಸ್ ಬ್ಯಾಂಕ್ 3%

ಬಡ್ಡಿಯನ್ನು ಆರು ತಿಂಗಳಿಗೊಮ್ಮೆ ಜಮಾ ನೂಡಲಾಗುವುದು.

5 1/4% ಕಾಯಂ ಠೇವಣಾತಿ

೫ ವರುಷಗಳ ಅವಧಿಗೆ

ಹೆಚ್ಚಿನ ಮಾಹಿತಿಗೆ

ನಮ್ಮ 168 ಶಾಖೆಗಳಲ್ಲಿ ಒಂದರಿಂದನೆ ವ್ಯವಹರಿಸಿರಿ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕನ್ನಡ ಪುಸ್ತಕಗಳಿಗೆ—

ವಿಚಾರಿಸಿರಿ

ಕಥೆ ಕಾದಂಬರಿ ಇತ್ಯಾದಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ದೀಪಾವಳಿ ಸಂಚಿಕೆ ೧೯೬೨

ದೀಪಾವಳಿಯ ಶುಭಾಶಯಗಳು

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ;

ಬಡ್ಡಿ ಸೇಕಡ 5ರಂತೆ;

ರೂ. 87-00, 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು

ಕರೆ, ಚಿಕ್ಕ ವಾಯಿದೆ, ನಿರಖು ಠೇಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಶೇಕಡ 5½ರ ವರೆಗೆ
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಬಡ್ಡಿ ಶೇಕಡ 3ರಂತೆ.

ರೂ. 1 ಕೋಟಿಗೂ ಮಿಕ್ಕಿದ ಠೇವಣಾತಿಗಳು.

THE PANGAL NAYAK BANK LIMITED

Estd: 1920

REGD. OFFICE: UDIPI, S. KANARA.

ನಿಮ್ಮ ಪತ್ರಗಳನ್ನು ಅವುಗಳ ಮೇಲೆ ಟಿ. ಬಿ ಸೀಲು ಹಚ್ಚಿ ಕಳುಹಿಸಿರಿ. ನಿಮ್ಮ ಈ ಒಳ್ಳೆಯ ಕೆಲಸವು—ಕ್ಷಯ ರೋಗವನ್ನು ನಿಯಂತ್ರಿಸಲು, ಆ ಭಯಂಕರ ಕಾಯಿಲೆಯಿಂದ ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬಹುದೆಂದು ಜನತೆಗೆ ತಿಳಿಸಲು, ಕ್ಷಯ ಪೀಡಿತರಿದ್ದಲ್ಲಿ ಸಂಶಯಸಡದ ಕೇಸುಗಳನ್ನು ಕಂಡುಹಿಡಿಯಲು, ಕ್ಷಯರೋಗ ಪೀಡಿತರ ಕುಟುಂಬಗಳು ತಮ್ಮ ಬದಲಾದ ಜೀವನಕ್ಕೆ ಹೊಂದಿಕೊಳ್ಳುವಂತೆ ಸಹಾಯ ಮಾಡಲು,ರೋಗ ವಾಸಿಯಾದ ಒಬ್ಬ ರೋಗಿಯು ತನ್ನ ಸಾಮಾನ್ಯ ಜೀವನದ ಜವಾಬ್ದಾರಿಯನ್ನು ಆದಷ್ಟು ಬೇಗನೆ ವಹಿಸಿಕೊಳ್ಳುವಂತೆ ಮಾಡಲು ನಿಮ್ಮ ರಾಜ್ಯ ಕ್ಷಯರೋಗ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ.

ನಮ್ಮ ಮನೆಗಳು ನಮಗೆ ಅತ್ಯಮೂಲ್ಯವಾಗಿವೆ. ಕ್ಷಯ ರೋಗದ ಹಾವಳಿಗೆ ಒಳಗಾಗದಂತೆ ಅವನ್ನು ರಕ್ಷಿಸೋಣ. ಉತ್ತಮವಾದ ಸಹಾಯವೆಂದರೆ ಸೀಲು ಮಾರಾಟ ಚಳವಳಿಗೆ ನಿಮ್ಮ ವಾಲಿನ ವಂತಿಗೆ. ಬಹು ಸಂಖ್ಯೆಯಲ್ಲಿ ಟಿ ಬಿ. ಸೀಲುಗಳನ್ನು ಕೊಳ್ಳಿರಿ.

ಒಂದು ಟಿ. ಬಿ. ಸೀಲಿನ ಬೆಲೆ ಹತ್ತು ನಯೆ ಪೈಸೆ ಮಾತ್ರ.

ಸೀಲುಗಳು ದೊರೆಯುವ ಸ್ಥಳಗಳು: (1) ಮೈಸೂರು ರಾಜ್ಯ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್, ಗವರ್ನಮೆಂಟ್ ಟಿ. ಬಿ. ಸೆನಟೋರಿಯಮ್, ಓಲ್ಡ್ ಮದ್ರಾಸು ರಸ್ತೆ, ಬೆಂಗಳೂರು 8, (2) ದಕ್ಷಿಣ ಕನ್ನಡ ಜಿಲ್ಲಾ ಟಿ. ಬಿ. ಎಸೋಸಿಯೇಶನ್, ಸರಕಾರಿ ವೆನ್‌ಲೋಕ್ ಆಸ್ಪತ್ರೆ ಮಂಗಳೂರು-1 ಮತ್ತು ಇತರ ಹಲವು ಏಜನ್ಸಿಗಳಲ್ಲಿ.

ಹದಿಮೂರನೇ ಟಿ. ಬಿ. ಸೀಲ್ ಮಾರಾಟ ಚಳವಳ

(ಹೊಸ ದಿಲ್ಲಿಯಲ್ಲಿರುವ ಭಾರತ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂಥಾದ್ದು)

ಸ್ಥಳದ ಧಾತೃಗಳು:

Messrs. Forbes, Ewart & Figgis Private Ltd.,

Cochin.

ದೀಪಾವಳಿ ಸಂಚಿಕೆ ೧೯೬೨

ನವಯುಗ

DEEPAVALI SPECIAL 1962

Estd. 1921 ಸ್ಥಾಪನೆ
Regd. No. B.G. 176
Vol. 42 No. 7

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 25—10—1962 ಗುರುವಾರ

20ನೇ ಪೈಸೆ
ವಾ. ಚಂದಾ ರೂ. ೮-75
ಸಂಪುಟ ೪೨ ಸಂಚಿಕೆ ೭

ಜಾಡ್ಯಾಂಧಕಾರಕ್ಕೆ ದೀಪಾವಳಿ

ಮೈರಳಿ ಬಂದಿದೆ ದೀಪಾವಳಿ, ನಾಡಿನ ನಾಗರಿಕರೆಲ್ಲರೂ ಆನಂದಾತಿರೇಕದಿಂದ ಆಚರಿಸುವ ಪರ್ವ ದಿನ! ಶುಭಕೃತ್ ಸಂವತ್ಸರದ ದೀಪಾವಳಿ ಭಾರತೀಯರಿಗೆ ಶುಭವನ್ನೇ ಉಂಟುಮಾಡಬೇಕಾಗಿತ್ತು; ಆದರೆ, ಆದೇನು ದುರದೃಷ್ಟವೋ ಚೀನೀಯರೊಡನೆ ಅನಧಿಕೃತ ಯುದ್ಧದ ಅಂಧಕಾರದಲ್ಲಿ ದೀಪಾವಳಿಯನ್ನು ಆಚರಿಸುವ ಯೋಗವೀಗ ಬಂದಿದೆ. ದೇಶದ ಉತ್ತರದ ಸೀಮೆಯಲ್ಲಿ ಕಳೆದ ಏಳು ವರ್ಷಗಳಿಂದಲೂ ತೀಟಲೆಕೊಡುತ್ತ ಬಂದ ಚೀನೀಸೈನಿಕರಾಕ್ರಮಣವು ಪವಿತ್ರ ಭಾರತ ಭೂಮಿಯನ್ನು ನುಂಗಿಹಾಕುವ ಮಹತ್ವಾಕಾಂಕ್ಷೆಯಿಂದ ಧಾಳಿ ನಡೆಸಿದ್ದಾಗಿದೆ. ಅಂತಹ ಚೀನೀಯ ಆಕ್ರಮಣಕಾರೀ ರಾಕ್ಷಸನನ್ನು ನಮ್ಮ ಸೀಮೆಯಿಂದ ಬಹು ದೂರ ಓಡಿಸಿ, ಈ ಕಾರ್ಯದಲ್ಲಿ ಜಯಲಕ್ಷ್ಮಿಯನ್ನು ತಂದು ಅಕೆಯನ್ನು ದೀಪ ಧೂಪ ನೈವೇದ್ಯಗಳಿಂದ ಅರ್ಚಿಸಬೇಕಾಗಿದೆ, ಉಕ್ಕಿ ಹರಿಯುವ ಸಂತೋಷವನ್ನು ತೋಡಿಕೊಳ್ಳಲು ದೀಪ ಮಾಲೆಯನ್ನು ಉರಿಸಬೇಕಾಗಿದೆ. ಇದಕ್ಕಾಗಿಯೇ ಪ್ರಸಾ ಪಕ್ಷವು ದೀಪಾವಳಿಯನ್ನು ಭಾರತ ವಿಜಯ ಗಳಿಸಿದ ನಂತರವೇ ಆಚರಿಸಬೇಕೆಂದು ನಾಡಿಗೆ ಕರೆಯಿತ್ತುದು ಅರ್ಥವತ್ತಾಗಿದ.

ಅನಿರೀಕ್ಷಿತವಾಗಿ ಇಂದು ಭಾರತದ ಮೇಲೆ ಚೀನೀಯರು ಆಕ್ರಮಣಗೆಯ್ದಿರುವುದು ನಿಜವಾದರೂ ಇಂತಹ ಆಕ್ರಮಣ ನಡೆಸಬೇಕೆಂಬುದನ್ನು ಅವರು ಪೂರ್ವ ಭಾವಿಯೊಗಿಯೇ ಯೋಚಿಸಿರಬೇಕು. ಮುಖ್ಯವಾಗಿ, ಸದ್ಯದಲ್ಲೇ, ಒಂದೆರಡು ವಾರಗಳಲಿಯೇ, ಚಳಗಾಲವು ಹಿಮಾಲಯದಲ್ಲಿ ಪ್ರಾರಂಭವಾಗಿ ಹಿಮ ಪಾತವಾಗುವುದಕ್ಕೆಮೊದಲೇ ತಮ್ಮ ಚೀನೆಯನ್ನು ಟೀಯಿಸುವ ಹೆಂಚಿಕೆ ಅವರಿಗಿದ್ದಾಗಿರುವುದು ಅಸಂಭವವಲ್ಲ. ಈ ಕಾರಣದಿಂದಾಗಿಯೇ ನಮ್ಮ ಸೈನಿಕ ರಾಣ್ಯಗಳಲ್ಲಿ ಕೆಲವು ಆವರ ಕೈವಶವಾದುದೂ ನಮ್ಮ ಸೈನಿಕರು ಹಿಂದೆ ಸರಿದುದೂ ಆಶ್ಚರ್ಯವಲ್ಲ. ಆದರೆ, ಒಂದು ವಿಷಯವನ್ನು ನಾವು ಮರೆಯುವಂತಿಲ್ಲ. ಚಳಗಾಲವು ಪ್ರಾರಂಭವಾದ ನಂತರ, ಭಾರತದ ಪ್ರದೇಶದಲ್ಲಿ ನಿಂತ ಚೀನಿಯರನ್ನು ಸದೆ ಬಡಿಯುವುದು ನಮ್ಮ ಸೈನಿಕರಿಗೆ ಸುಲಭದ ಕಾರ್ಯ; ಏಕೆಂದರೆ, ಆಗ ನಿಸರ್ಗವೇ ಚೀನೀಯರಿಗೆ ಪ್ರತಿಕೂಲವಾಗಿರುತ್ತದೆ. ಈಗಾಗಲೇ ತಮ್ಮ ಪ್ರಾಣಪಣವಿಟ್ಟು ಪೂರ್ವ ಭೂಮಿಯ ರಕ್ಷಣೆಗಾಗಿ ಅಹರ್ನಿಶಿ ಹೋರಾಡುತ್ತಿರುವ ನಮ್ಮ ಕೆಚ್ಚೆದೆಯ ಕಡುಗಲಿಗಳು ಈ ಸಾಹಸದಲ್ಲಿ ಕೆಲವೇ ದಿನಗಳೊಳಗೆ ಜಯಶೀಲರಾಗುವರು ಎಂಬ ವಿಶ್ವಾಸ ನಮಗಿದೆ. 'ಸತ್ಯಮೇವ ಜಯತೇ ನಾನೃತಂ' ಎಂಬ ಸತ್ಯವಚನದಲ್ಲಿ ನಿಷ್ಠೆಯಿಟ್ಟಿರುವ ಭಾರತ, ಆ ನೀತಿಯ ಚೀನೀಯ ಆಕ್ರಮಣಕ್ಕೆ ಬಲಿಯಾದುದು ನಿಜ; ಆದರೆ, ಸತ್ಯಕ್ಕೆ ಜಯ ನಿಶ್ಚಯವೆಂಬುದು ಇಂದು ನಿನ್ನೆಯ ಅನುಭವವಲ್ಲ, ವೇದ, ಪುರಾಣ, ಇತಿಹಾಸಗಳಿಂದ ಸಿದ್ಧವಾದುದು ಆದು. 'ಸೋಲು ಗೆಲವಿನ ಮೂಲ' —ಇಂದು ನಮ್ಮ ಸೈನಿಕರು ಹಿಂದೆ ಸರಿದುದು ಸೋಲಿಗೆ ಹೆದರಿ ಅಲ್ಲ; ಯುದ್ಧ ನೀತಿಯನ್ನು ಅನುಲಕ್ಷಿಸಿ ಸಂಧರ್ಭ ಸಾಧನೆಗೆ ರಣ ನೀತಿಯಲ್ಲಿ ಮಹತ್ವದ ಪಾತ್ರವಿರುವುದರಿಂದ ಈ ಸೂತನ್ನು ಎತ್ತಿ ಬರೆಯಬಹುದಾಗಿದೆ. ಸಂರಕ್ಷಣಾ ಮಂತ್ರಿ ಮೆನನ್ನರು ಸೀಮಾ ಪರಿಸ್ಥಿತಿಯನ್ನು ಪರಿಶೀಲಿಸಲು ತೆರಳಿದ ಕೆಲವೇ ತಾಸುಗಳಲ್ಲಿ ಭಾರತವು ಹಿಂದೆ ಸರಿದ ಸುದ್ದಿಯೂ ಬಂದುದು ಈ ಸೂತಿಗೆ ಪುಷ್ಟಿಯೊಯುತ್ತದೆ. ಏನೇ ಇರಲಿ, ದೇಶದ ಸಮಗ್ರತೆಗೆ ನೀತಿಗೆಟ್ಟು ಸಂಧಾಶಾಸ್ತ್ರನದಂತಿಯವ ಚೀನೀಯ ಆಕ್ರಮಣ ಮರಾಕ್ರಮಣವೆಂಬುದರಲ್ಲಿ ದೇಶದ ಒಳಗೂ ಹೊರಗೂ ಭಿನ್ನಾಭಿಪ್ರಾಯವಿಲ್ಲ.

ಭಾರತೀಯ ರಾಜಕೀಯ ಮತ್ತು ರಾಜಕೀಯೇತರ ಪಕ್ಷ ಪಂಗಡಗಳೆಲ್ಲವೂ ಇಂದು ಚೀನೀಯ ತಾರಕಾಸುರನ ವಧೆಗೆ ಕಂಕಣಬದ್ಧವಾಗಿ ನಿಂತಿವೆ. ನಮ್ಮ ಯೋಧರಿಗೆ, ಸರಕಾರಕ್ಕೆ ಈ ನಿಟ್ಟಿನಲ್ಲಿ ಸಂಪೂರ್ಣ ಬೆಂಬಲ ನೀಡಲು ನಿರ್ಧರಿಸಿ, ಈಗಾಗಲೇ ಕಾರ್ಯ ಪ್ರವರ್ತನೆಗೆ ತೊಡಗಿವೆ. ಶತ್ರುತೆಯನ್ನು ದೂರೀಕರಿಸುವ ದೀಪಗಳ ಹಬ್ಬ ದೀಪಾವಳಿಯು ಪ್ರಭೆಯಿಂದ ನಮ್ಮೆಲ್ಲರಲ್ಲಡಗಿರುವ ಜಾಡ್ಯರೂಪದ ಘೋರಾಂಧಕಾರವು ದೂರವಾಗಿ ದೇಶಕ್ಕಾಗಿ, ಆದರ ಭದ್ರತೆ-ರಕ್ಷಣೆ-ಸ್ವತಂತ್ರತೆಗಳಿಗಾಗಿ ಹೋರಾಡುವ ನವ ಚೇತನವನ್ನು ತರುವಂತಾಗಲಿ. ಶುಭಕೃತ್ ಸಂವತ್ಸರದ ದೀಪಾವಳಿ ಇನ ಜನದ ಮನದಲ್ಲಿ ಭಾರತೀಯರನ್ನು ಆಕ್ರಮಣ ವಿಮುಕ್ತಿಗಾಗುವ ಸ್ಫೋರಕ ಶಕ್ತಿಯೊಗಲಿ ಭಾರತವನ್ನು, ಭಾರತೀಯರನ್ನು ಶುಭದತ್ತ ಸಾಗಿಸಲಿ. ಸರ್ವರಿಗೂ ನಮ್ಮ ದೀಪಾವಳಿಯ ಶುಭಾಶಯಗಳು.

ಸಮಾಜ ಸುಧಾರಕ
ಪಿ. ರಾಮಚಂದ್ರ ರಾಯರು

ಪಡುಮನ್ನೂರು ರಾಮಚಂದ್ರರಾಯರ ಭಾವಚಿತ್ರ ಅನಾವರಣ ಸಮಾರಂಭದ ಅಧ್ಯಕ್ಷತೆ ವಹಿಸಿದ ಶ್ರೀ. ಟಿ. ಎ ಪೈ

ನಮ್ಮ ಜಿಲ್ಲೆ ಪ್ರತಿಯೊಂದರಲ್ಲೂ ಮುಂದೆ. ಕೆಲವೊಮ್ಮೆ, ಇಡಿಯ ಭಾರತದಲ್ಲಿಯೇ ಇಲ್ಲಿನವರ ಕಾರ್ಯಭಾರ ಮುಂದುವರಿಯುವುದುಂಟು. ೧೯೨೧ರ ನಂತರ ಕಾಂಗ್ರೆಸ್ಸಿನಲ್ಲಿ ಮಹಾತ್ಮಾ ಗಾಂಧೀಜಿಯವರ ಪ್ರತ್ಯಕ್ಷ ಪ್ರನೇರಣೆಯಾಯಿತು. ಆ ಸೇಲೆಯೇ ಅರಿಜನೋದ್ಧಾರದ ಗುಡುಗು ಇಡಿಯ ಭಾರತದಲ್ಲಿ ಹರಡಿತು. ವಿಧವಾ ವಿವಾಹಾದಿ ಸಾಮಾಜಿಕ ಸುಧಾರಣೆಗಳಗಾಳಿ ನುತ್ತೊಮ್ಮೆ ಬೀಸತೊಡಗಿತು. ಆದರೆ, ಈ ಶತಮಾನದ ಪ್ರಥಮ ದಶಕದಲ್ಲಿಯೇ ಇವೇ ಆದರ್ಶಗಳನ್ನು ಮುಂದಿಟ್ಟು ಇವುಗಳಿಗಾಗಿ ತನ್ನ ಸರ್ವಸ್ವವನ್ನೂ ಮುಡುಪಿಟ್ಟ ವ್ಯಕ್ತಿಯೊಂದು ನಮ್ಮ ಜಿಲ್ಲೆಯಲ್ಲೇ ಇತ್ತು ಎಂದರೆ ಎಲ್ಲರೂ ಆಶ್ಚರ್ಯ ಪಡಬಹುದು. ಆ ಉದಾರಿ ಸುಧಾರಕ ವ್ಯಕ್ತಿಯೇ ಪಡುಮನ್ನೂರು ರಾಮಚಂದ್ರ ರಾಯರು. ರಾಮಚಂದ್ರ ರಾಯರು ಉಡುಪಿಯ ಕ್ರಿಶ್ಚಿಯನ್ ಪೈ ಸ್ಕೂಲಿನಲ್ಲಿ ಸ್ವಲ್ಪ ಸಮಯ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಆಗಲೇ ಇವರ ಸಮಾಜ ಸೇವಾ ಬುದ್ಧಿಯು ಜಾಗ್ರತವಾಗ ತೊಡಗಿತ್ತು. ಭೂಗೋಳ ಪಾಠವನ್ನು ಇವರು ನಾಡತೊಡಗಿದರೆಂದರೆ, ವಿದ್ಯಾರ್ಥಿಗಳೆಲ್ಲ ಅಂಗೈಯಲ್ಲೇ ಭೂಗೋಳವಿಡಿದಿಟ್ಟಿಲ್ಲಿರಾಯಿಯಂತೆ ನಿಲ್ಲುತಿತ್ತು! ಇವರು ಹರಿಜನೋದ್ಧಾರವಾಗಬೇಕೆಂದು ಬಯಸಿ ಆ ನಿಟ್ಟಿನಲ್ಲಿ ಕಾರ್ಯಶೀಲರಾದವರಲ್ಲಿ ಇಡಿಯ ಭಾರತಕ್ಕೇನೇ ಅಗ್ರಗಣ್ಯರೆನ್ನಬಹುದು. ಇವರ ಅನವರತ ಶ್ರಮ ಮತ್ತು ಅಪಾರ ತ್ಯಾಗದ ಪರಿಣಾಮವಾಗಿಯೇ ಉಡುಪಿಯ ಬನ್ನಂಜೆಯಲ್ಲಿ ೧೯೨೧ರಷ್ಟು ಪೂರ್ವದಲ್ಲಿಯೇ ಹರಿಜನ ಶಾಲೆಯೊಂದು ಸ್ಥಾಪನೆಗೊಂಡಿತ್ತು; ಇದು ಇಂದಿಗೂ ಸಂಸ್ಕಾರದಿಂದ ನಡದು ಬರುತ್ತಿದೆ. ಮಂಗಳೂರಿನಲ್ಲಿ 'ವಿಧವಾಶ್ರಮ'ವೊಂದನ್ನು ಸಂಸ್ಥಾಪಿಸಿ ಅದನ್ನೂ ನಡೆಸಿಕೊಂಡು ಬಂದಿದ್ದರು. ಆದರೆ, ಮುಂದೆ ಆರ್ಥಿಕ ಬಿಕ್ಕಟ್ಟಿನಿಂದ ಇದು ನಿಂತು ಹೋಯಿತು.

ದಿ॥ ರಾಯರು ಭೂಶಾಸ್ತ್ರವನ್ನೂ ಎಲ್ಲವರಿದ್ದರು. ಉಡುಪಿಯ ಬಂಟ್ಸ್ ಹಾಸ್ಟೆಲ್‌ನ ನಿರ್ಮಾಣದಲ್ಲಿ ಎರಡು ಮೂರು ಕ

(ಮುಂದೇ ಪುಟ ನೋಡಿರಿ)

ದೀಪಾವಳಿಯ ಶುಭಾಶಯಗಳು

ಇದೀಗ ಎಲ್ಲೆಲ್ಲಿಯೂ ದೀಪಾವಳಿಯ ಜ್ಯೋತಿ ಬೆಳಗುವಂತೆ
ಮನೆ ಮನೆಗಳಲ್ಲಿಯೂ ಭೀರಾ ಫರ್ನಿಚರುಗಳು ಬೆಳಗಲಿ!
ದೀಪಾವಳಿ ಉಡುಗೊರೆ ಸಾಮಗ್ರಿಗಳೂ ದೊರೆಯುತ್ತವೆ

ಶಾಸಿ & ಕೊ
ಹಂಪನಕಟ್ಟೆ
ಮಂಗಳೂರು

ದೀಪಾವಳಿಯ ಶುಭಾಶಯಗಳು

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ;

ಬಡ್ಡಿ ಸೇಕಡ 5ರಂತೆ;

ರೂ. 87-00, 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು

ಕರೆ, ಚಿಕ್ಕ ವಾಯಿದೆ, ನಿರಖು ಠೇಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಶೇಕಡ 5½ರ ವರೆಗೆ
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಬಡ್ಡಿ ಶೇಕಡ 3ರಂತೆ.

ರೂ. 1 ಕೋಟಿಗೂ ಮಿಕ್ಕಿದ ಠೇವಣಾತಿಗಳು.

THE PANGAL NAYAK BANK LIMITED

Estd. 1920

REGD. OFFICE: **UDIPI**, S KANARA.

ನಿಮ್ಮ ಪತ್ರಗಳನ್ನು ಅವುಗಳ ಮೇಲೆ ಟಿ ಬಿ ಸೀಲು ಹಚ್ಚಿ ಕಳುಹಿಸಿರಿ ನಿಮ್ಮ ಈ ಒಳ್ಳೆಯ ಕೆಲಸವು—ಕ್ಷಯ ರೋಗವನ್ನು ನಿಯಂತ್ರಿಸಲು, ಆ ಭಯಂಕರ ಕಾಯಿಲೆಯಿಂದ ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬಹುದೆಂದು ಜನತೆಗೆ ತಿಳಿಸಲು, ಕ್ಷಯ ಪೀಡಿತರಿದ್ದಲ್ಲಿ ಸಂಶಯಪಡದ ಕೇಸುಗಳನ್ನು ಕಂಡುಹಿಡಿಯಲು, ಕ್ಷಯರೋಗ ಪೀಡಿತರ ಕುಟುಂಬಗಳು ತಮ್ಮ ಬದಲಾದ ಜೀವನಕ್ಕೆ ಹೊಂದಿಕೊಳ್ಳುವಂತೆ ಸಹಾಯ ಮಾಡಲು,ರೋಗ ವಾಸಿಯಾದ ಒಬ್ಬ ರೋಗಿಯು ತನ್ನ ಸಾಮಾನ್ಯ ಜೀವನದ ಜವಾಬ್ದಾರಿಯನ್ನು ಆದಷ್ಟು ಬೇಗನೆ ವಹಿಸಿಕೊಳ್ಳುವಂತೆ ಮಾಡಲು ನಿಮ್ಮ ರಾಜ್ಯ ಕ್ಷಯರೋಗ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ.

ನಮ್ಮ ಮನೆಗಳು ನಮಗೆ ಅತ್ಯಮೂಲ್ಯವಾಗಿವೆ. ಕ್ಷಯ ರೋಗದ ಹಾವಳಿಗೆ ಬಲಿಯಾಗದಂತೆ ಅವನ್ನು ರಕ್ಷಿಸೋಣ. ಉತ್ತಮವಾದ ಸಹಾಯವೆಂದರೆ ಸೀಲು ಮಾರಾಟ ಚಳವಳಿಗೆ ನಿಮ್ಮ ಪಾಲಿನ ವಂತಿಗೆ. ಬಹು ಸಂಖ್ಯೆಯಲ್ಲಿ ಟಿ ಬಿ ಸೀಲುಗಳನ್ನು ಕೊಳ್ಳಿರಿ.

ಒಂದು ಟಿ. ಬಿ. ಸೀಲಿನ ಬೆಲೆ ಹತ್ತು ನಯೆ ಪೈಸೆ ಮಾತ್ರ.

ಸೀಲುಗಳು ದೊರೆಯುವ ಸ್ಥಳಗಳು; (1) ಮೈಸೂರು ರಾಜ್ಯ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್, ಗವರ್ನಮೆಂಟ್ ಟಿ ಬಿ. ಸೆನಟೋರಿಯಮ್, ಒಲ್ಡ್ ಮುದ್ರಾಸು ರಸ್ತೆ, ಬೆಂಗಳೂರು 8, (2) ದಕ್ಷಿಣ ಕನ್ನಡ ಜಿಲ್ಲಾ ಟಿ ಬಿ. ಎಸೋಸಿಯೇಶನ್, ಸರಕಾರಿ ವೆನ್‌ಲೋಕ್ ಆಸ್ಪತ್ರೆ ಮಂಗಳೂರು-1 ಮತ್ತು ಇತರ ಹಲವು ಏಜನ್ಸಿಗಳಲ್ಲಿ.

ಹದಿಮೂರನೇ ಟಿ. ಬಿ. ಸೀಲ್ ಮಾರಾಟ ಚಳವಳ

(ಹೊಸ ದಿಲ್ಲಿಯಲ್ಲಿರುವ ಭಾರತ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂಥಾದ್ದು)

ಈ ಸ್ಥಳದ ಧಾತೃಗಳು:

Messrs. Forbes, Ewart & Figgis Private Ltd.,

Cochin.

ದೀಪಾವಳಿ ಸಂಚಿಕೆ ೧೯೬೨

ನವಯುಗ

Estd. 1921 ಸ್ಥಾಪನೆ
Regd. No. B.G 176
Vol. 42 No. 7

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 25—10—1962 ಗುರುವಾರ

20ನೇ ಪೈಸೆ
ವಾ. ಚಂದಾ ರೂ ೬_75
ಸಂಪುಟ ೪೨ ಸಂಚಿಕೆ ೭

DEEPAVALI SPECIAL 1962

ಜಾಡ್ಯಾಂಧಕಾರಕ್ಕೆ ದೀಪಾವಳಿ

ಮೆರಳಿ ಬಂದಿದೆ ದೀಪಾವಳಿ, ನಾಡಿನ ನಾಗರಿಕರೆಲ್ಲರೂ ಅನಂದಾತಿರೇಕದಿಂದ ಆಚರಿಸುವ ಪರ್ವ ದಿನ! ಶುಭಕೃತ್ ಸಂವತ್ಸರದ ದೀಪಾವಳಿ ಭಾರತೀಯರಿಗೆ ಶುಭವನ್ನೇ ಉಂಟುಮಾಡಬೇಕಾಗಿತ್ತು;ಆದರೆ, ಇದೇನು ದುರದೃಷ್ಟವೋ ಚೀನೀಯರೊಡನೆ ಆನಧಿಕೃತ ಯುದ್ಧದ ಅಂಧಕಾರದಲ್ಲಿ ದೀಪಾವಳಿಯನ್ನು ಆಚರಿಸುವ ಯೋಗವೀಗ ಬಂದಿದೆ ದೇಶದ ಉತ್ತರದ ಸೀಮೆಯಲ್ಲಿ ಕಳೆದ ಏಳು ವರ್ಷಗಳಿಂದಲೂ ಕೀಟಲೆಕೊಡುತ್ತ ಬಂದ ಚೀನೀಯರಕಾಸು ರನಿಂದು ಪವಿತ್ರ ಭಾರತ ಭೂಮಿಯನ್ನು ನುಂಗಿಹಾಕುವ ಮಹತ್ವಾಕಾಂಕ್ಷೆಯಿಂದ ಧಾಳಿ ನಡೆಸಿದ್ದಾನೆ ಅಂತಹ ಚೀನೀಯ ಆಕ್ರಮಣಕಾರೀ ರಾಕ್ಷಸನನ್ನು ನಮ್ಮ ಸೀಮೆಯಿಂದ ಬಹು ದೂರ ಓಡಿಸಿ, ಈ ಕಾರ್ಯದಲ್ಲಿ ಜಯಲಕ್ಷ್ಮಿಯನ್ನು ತಂದು ಆಕೆಯನ್ನು ದೀಪ ಧೂಪ ನೈವೇದ್ಯಗಳಿಂದ ಅರ್ಚಿಸಬೇಕಾಗಿದೆ, ಉಕ್ಕಿ ಹರಿಯುವ ಸಂತೋಷವನ್ನು ತೋಡಿಕೊಳ್ಳಲು ದೀಪ ಮಾಲೆಯನ್ನು ಉರಿಸಬೇಕಾಗಿದೆ. ಇದಕ್ಕಾಗಿಯೇ ಪ್ರಸವಾ ಹರ್ಷವು ದೀಪಾವಳಿಯನ್ನು ಭಾರತ ವಿಜಯ ಗಳಿಸಿದ ನಂತರವೇ ಆಚರಿಸಬೇಕೆಂದು ನಾಡಿಗೆ ಕರೆಯೆತ್ತುದು ಅರ್ಥವತ್ತಾಗಿದೆ.

ಅನಿರೀಕ್ಷಿತವಾಗಿ ಇಂದು ಭಾರತದ ಮೇಲೆ ಚೀನೀಯರು ಆಕ್ರಮಣಗೆಯ್ದಿರುವುದು ನಿಜವಾದರೂ ಇಂತಹ ಆಕ್ರಮಣ ನಡೆಸಬೇಕೆಂಬುದನ್ನು ಅವರು ಸೂರ್ವ ಭಾವಿಯೂಗಿಯೇ ಯೋಚಿಸಿರಬೇಕು. ಮುಖ್ಯವಾಗಿ, ಸದ್ಯದಲ್ಲೇ, ಒಂದೆರಡು ವಾರಗಳಲಿಯೇ, ಚಳಿಗಾಲವು ಹಿಮಲೋಯದಲ್ಲಿ ಪ್ರಾರಂಭವಾಗಿ ಹಿಮಪಾತವಾಗುವುದಕ್ಕೆನೊದಲೇ ತಮ್ಮ ಚೀಳೆಯನ್ನು ಬೀಯಿಸುವ ಹೆಂಚಿಕೆ ಅವರ ದ್ದಾಗಿರುವುದು ಅಸಂಭವವಲ್ಲ. ಈ ಕಾರಣದಿಂದಾಗಿಯೇ ನಮ್ಮ ಸೈನಿಕ ರಾಣ್ಯಗಳಲ್ಲಿ ಕೆಲವು ಆವರ ಕೈವಶವಾದುದೂ ನಮ್ಮ ಸೈನಿಕರು ಹಿಂದೆ ಸರಿದುದೂ ಆಶ್ಚರ್ಯವಲ್ಲ. ಆದರೆ, ಒಂದು ವಿಷಯವನ್ನು ನಾವು ಮರೆಯುವಂತಿಲ್ಲ. ಚಳಿಗಾಲವು ಪ್ರಾರಂಭವಾದ ನಂತರ, ಭಾರತದ ಪ್ರದೇಶದಲ್ಲಿ ನಿಂತ ಚೀನಿಯರನ್ನು ಸದೆ ಬಡಿಯುವುದು ನಮ್ಮ ಸೈನಿಕರಿಗೆ ಸುಲಭದ ಕಾರ್ಯ, ಏಕೆಂದರೆ, ಆಗ ನಿಸರ್ಗವೇ ಚೀನೀಯರಿಗೆ ಪ್ರತಿಕೂಲವಾಗಿರುತ್ತದೆ ಈಗಾಗಲೇ ತಮ್ಮ ಪ್ರಾಣಪಣವಿಟ್ಟು ಮಾತೃ ಭೂಮಿಯ ರಕ್ಷಣೆಗಾಗಿ ಅಹರ್ನಿಶಿ ಹೋರಾಡುತ್ತಿರುವ ನಮ್ಮ ಕೆಚ್ಚೆದೆಯ ಕಡುಗಲಿಗಳು ಈ ಸಾಹಸದಲ್ಲಿ ಕಲವೇ ದಿನಗಳೊಳಗೆ ಜಯಶೀಲರಾಗುವರು ಎಂಬ ವಿಶ್ವಾಸವಿದೆ 'ಸತ್ಯಮೇವ ಜಯತೇ ನಾನೃತಂ' ಎಂಬ ಸತ್ಯ ವಚನದಲ್ಲಿ ನಿಷ್ಠೆಯಿಟ್ಟಿರುವ ಭಾರತ, ಅನೀತಿಯ ಚೀನೀಯ ಆಕ್ರಮಣಕ್ಕೆ ಒಲಿಯಾಡುವುದು ನಿಜ, ಆದರೆ, ಸತ್ಯಕ್ಕೆ ಜಯ ನಿಶ್ಚಯವೆಂಬುದು ಇಂದು ನಿನ್ನೆಯ ಅನುಭವವಲ್ಲ, ವೇದ, ಪುರಾಣ, ಇತಿಹಾಸಗಳಿಂದ ಸಿದ್ಧವಾದುದು ಆದು. 'ಸೋಲು ಗೆಲುವಿನ ಮೂಲ' —ಇಂದು ನಮ್ಮ ಸೈನಿಕರು ಹಿಂದೆ ಸರಿದದ್ದು ಸೋಲಿಗೆ ಹೆದರಿ ಅಲ್ಲ, ಯುದ್ಧ ನೀತಿಯನ್ನು ಅನುಲಕ್ಷಿಸಿ ಸಂಧರ್ಭಾನುಸಾರವೆಂದರಿಂದ ಈ ಮಾತನ್ನು ಎತ್ತಿ ಬರೆಯಬಹುದಾಗಿದೆ ಸಂರಕ್ಷಣಾ ಮಂತ್ರಿ ಮೆನನ್ನರು ಸೀಮಾ ಪರಿಸ್ಥಿತಿಯನ್ನು ಪರಿಶೀಲಿಸಲು ತೆರಳಿದ ಕೆಲವೇ ತಾಸುಗಳಲ್ಲಿ ಭಾರತವು ಹಿಂದೆ ಸರಿದ ಸುದ್ದಿಯೂ ಬಂದುದು ಈ ಮಾತಿಗೆ ಪುಷ್ಟಿಯಾಯುತ್ತದೆ ಏನೇ ಇರಲಿ, ದೇಶದ ಸಮಗ್ರತೆಗೆ ನೀತಿಗೆಟ್ಟು ಸಂಧಾನಾನದಂತಿಯವ ಚೀನೀಯ ಆಕ್ರಮಣ ದುರಾಕ್ರಮಣವೆಂಬುದರಲ್ಲಿ ದೇಶದ ಒಳಗೂ ಹೊರಗೂ ಭಿನ್ನಾಭಿಪ್ರಾಯವಿಲ್ಲ.

ಭಾರತೀಯ ರಾಜಕೀಯ ಮತ್ತು ರಾಜಕೇತರ ಪಕ್ಷ ಪಂಗಡಗಳೆಲ್ಲವೂ ಇಂದು ಚೀನೀಯ ತಾರಕಾಸುರ ವಧೆಗೆ ಕಂಕಣಬದ್ಧವಾಗಿ ನಿಂತಿವೆ. ನಮ್ಮ ಯೋಧರಿಗೆ, ಸರಕಾರಕ್ಕೆ ಈ ನಿಟ್ಟಿನಲ್ಲಿ ಸಂಪೂರ್ಣ ಬೆಂಬಲ ನೀಡಲು ನಿರ್ಧರಿಸಿ, ಈಗಾಗಲೇ ಕಾರ್ಯ ಪ್ರವರ್ತನೆಗೆ ತೊಡಗಿವೆ. ಕತ್ತಲೆಯನ್ನು ದೂರೀಕರಿಸುವ ದೀಪಗಳ ಹಬ್ಬ ದೀಪಾವಳಿಯು ಪ್ರಭೆಯಿಂದ ನಮ್ಮೆಲ್ಲರಲ್ಲಡಗಿರುವ ಜಾಡ್ಯರೂಪದ ಘೋರಾಂಧಕಾರವು ದೂರವಾಗಿ ದೇಶಕ್ಕಾಗಿ, ಆದರ ಬದ್ರತೆ-ರಕ್ಷಣೆ-ಸ್ವತಂತ್ರತೆಗಳಿಗಾಗಿ ಹೋರಾಡುವ ನವ ಚೇತನವನ್ನು ತರುವಂತಾಗಲಿ. ಶುಭಕೃತ್ ಸಂವತ್ಸರದ ದೀಪಾವಳಿ ಜನ ಜನದ ಮನದಲ್ಲಿ ಭಾರತೀಯರನ್ನ ಆಕ್ರಮಣ ವಿಮುಕ್ತರಾಗುವ ಸ್ಫೂರ್ತಿದಾಯಕ ಶಕ್ತಿಯೂಗಲಿ ಭಾರತವನ್ನು, ಭಾರತೀಯರನ್ನು ಶುಭದತ್ತ ಸಾಗಿಸಲಿ. ಸರ್ವರಿಗೂ ನಮ್ಮ ದೀಪಾವಳಿಯ ಶುಭಾಶಯಗಳು.

ಸಮಾಜ ಸುಧಾರಕ
ಪಿ. ರಾಮಚಂದ್ರ ರಾಯರು

ಪಡಮನ್ನೂರು ರಾಮಚಂದ್ರರಾಯರ ಭಾವಚಿತ್ರ ಅನಾವರಣ ಸಮಾರಂಭದ ಅಧ್ಯಕ್ಷತೆ ವಹಿಸಿದ
ಶ್ರೀ ಟಿ ಎ ಪೈ

ನಮ್ಮ ಜಿಲ್ಲೆ ಪ್ರತಿಯೊಂದರಲ್ಲೂ ಮುಂದೆ ಕೆಲವೊಮ್ಮೆ, ಇಡಿಯ ಭಾರತದಲ್ಲಿಯೇ ಇಲ್ಲಿನವರ ಕಾರ್ಯಭಾರ ಮುಂದುವರಿಯುವುದುಂಟು ಗಾಂಧಿಜಿ ನಂತರ ಕಾಂಗ್ರೆಸ್ಸಿನಲ್ಲಿ ಮಹಾತ್ಮಾ ಗಾಂಧೀಜಿಯವರ ಪ್ರತ್ಯಕ್ಷ ಪ್ರನೇಶನಾಯಕತ್ವ. ಆ ವೇಳೆಯೇ ಹರಿಜನೋದ್ಧಾರದ ಗುಡುಗು ಇಡಿಯ ಭಾರತದಲ್ಲಿ ಹರಿತು ವಿಧವಾ ವಿವಾಹಾದಿ ಸಾಮಾಜಿಕ ಸುಧಾರಣೆಗಳ ಗಾಳಿ ಮತ್ತೊಮ್ಮೆ ಬೀಸತೊಡಗಿತು ಆದರೆ ಈ ಶತಮಾನದ ಪ್ರಥಮ ದಶಕದಲ್ಲಿಯೇ ಇವೇ ಆದರ್ಶಗಳನ್ನು ಮುಂದಿಟ್ಟು ಇವುಗಳಿಗಾಗಿ ತನ್ನ ಸರ್ವಸ್ವವನ್ನೂ ಮುಡುಪಿಟ್ಟ ವ್ಯಕ್ತಿಯೊಂದು ನಮ್ಮ ಜಿಲ್ಲೆಯಲ್ಲೇ ಇತ್ತು ಎಂದರೆ ಎಲ್ಲರೂ ಆಶ್ಚರ್ಯ ಪಡಬಹುದು. ಆ ಉದಾರಿ ಸುಧಾರಕ ವ್ಯಕ್ತಿಯೇ ಪಡಮನ್ನೂರು ರಾಮಚಂದ್ರ ರಾಯರು. ರಾಮಚಂದ್ರ ರಾಯರು ಉಡುಪಿಯ ಕ್ರಿಶ್ಚಿಯನ್ ಮೈನ್ಸ್ಕೂಲಿನಲ್ಲಿ ಸ್ವಲ್ಪ ಸಮಯ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು, ಆಗಲೇ ಇವರ ಸಮಾಜ ಸೇವಾ ಬುದ್ಧಿಯು ಜಾಗ್ರತವಾಗತೊಡಗಿತ್ತು ಬೂಗೋಳ ಪರಿವೆಯನ್ನು ಇವರು ಮೂಡತೊಡಗಿದರೆಂದರೆ, ವಿದ್ಯಾರ್ಥಿಗಳ ಅಂಗೈಯಲ್ಲೇ ಭೂಗೋಳವಿಡಿ ನೆಲ್ಲಿಕಾಯಿಯಂತೆ ನಿಲ್ಲುತಿತ್ತು! ಇವರು ಹರಿಜನೋದ್ಧಾರವಾಗಬೇಕೆಂದು ಬಯಸಿ ಆ ನಿಟ್ಟಿನಲ್ಲಿ ಕಾರ್ಯಶೀಲರಾದವರಲ್ಲಿ ಇಡಿಯ ಭಾರತಕ್ಕೇನೇ ಅಗ್ರಗಣ್ಯರೆನ್ನಬಹುದು. ಇವರ ಅನವರತ ಶ್ರಮ ಮತ್ತು ಅಪಾರ ತ್ಯಾಗದ ಪರಿಣಾಮವಾಗಿಯೇ ಒಡಿಪಿಯ ಬನ್ನಂಜೆಯಲ್ಲಿ ರ್ಣಾರಂಭ್ಯ ಪೂರ್ವದಲ್ಲಿಯೇ ಹರಿಜನ ಶಾಲೆಯೊಂದು ಸ್ಥಾಪನೆಗೊಂಡಿತ್ತು; ಇದು ಇಂದಿಗೂ ಸಂಕಾರದಿಂದ ನಡೆದು ಒರುತ್ತಿದೆ ಮಂಗಳೂರಿನಲ್ಲಿ 'ವಿದೆಮಾರ್ಗ' ಪ್ರಾಂತವನ್ನು ಸಂಸ್ಥಾಪಿಸಿ ಅದನ್ನೂ ನಡೆಸಿಕೊಂಡು ಒಂದಿದ್ದರು ಆದರೆ, ಮುಂದೆ ಅರ್ಥಿಕ ಬಿಕ್ಕಟ್ಟಿನಿಂದ ಇದು ನಿಂತು ಹೋಯಿತು.

ಪಿ ರಾಮಚಂದ್ರ ರಾಯರು ಭೂಶಾಸ್ತ್ರವನ್ನೂ ಓದಿಲ್ಲವರಿದ್ದರು. ಉಡುಪಿಯ ಒಂಬ್ಸ್ ಹಾಸ್ಟೆಲ್‌ನ ವರಾಂಡದಲ್ಲಿ ಎರಡು ಮೂರು ಕ

(ತಾನೇ ಮಾಡಿ ನೋಡಿರಿ)

ದೀಪಾವಳಿಯ ಶುಭಾಶಯಗಳು

ಇದೀಗ ಎಲ್ಲೆಲ್ಲಿಯೂ ದೀಪಾವಳಿಯ ಜ್ಯೋತಿ ಬೆಳಗುವಂತೆ
ಮನೆ ಮನೆಗಳಲ್ಲಿಯೂ ಖೀರಾ ಫರ್ನಿಚರುಗಳು ಬೆಳಗಲಿ!
ದೀಪಾವಳಿ ಉಡುಗೊರೆ ಸಾಮಗ್ರಿಗಳೂ ಮೊರೆಯುತ್ತವೆ

ಶಾಸಿ & ಕೊ
ಪಂಪನಕಟ್ಟೆ
ಮಂಗಳೂರು

ವೃದ್ಧಿ ಸಮೃದ್ಧಿಗಳ ಸಂಕೇತ
ದೀಪಾವಳಿ

ಪರಿಶ್ರಮ—ಉಳಿತಾಯಗಳೇ
ಮುಂದಿನ ಶುಭಾವಳಿ

ದೀಪಾವಳಿಯ ಆಚರಣೆ— ಉಳಿತಾಯ ಯೋಜನೆ
ದೀಕ್ಷೆಯೊಂದಿಗೆ ಆಗಲೆಂದು ಕೋರುತ್ತೇವೆ—

ದೀಪಾವಳಿಯು ಶುಭಾಶಯ!

ಉಳಿತಾಯವನ್ನು ಶೇವಣಾತಿಯಾಗಿಡಲು
ಭದ್ರವಾದ ಮನೆ— ವಿಜಯ ಬೇಂಕು.
ವಿಜಯ ಬೇಂಕಿನಲ್ಲಿ ಶೇವಣಾತಿದಾರರಿಗೆ
ಭದ್ರತೆ — ಅಭಿವೃದ್ಧಿಗಳ ಸೌಕರ್ಯ
ಗಳಿವೆ. ಹೆಚ್ಚಿನ ವಿವರಗಳಿಗೆ ನಿಮ್ಮ
ಸಮೀಪದ ಶಾಖೆಯ ಸಂಪರ್ಕ ಬೆಳೆಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡು,
ಮಂಗಳೂರು – 3

Estd 1931 ಸ್ಥಾಪನೆ — Phone No. 240

For your requirements in:

School and College Books
Books on Current Day Politics and fiction etc.
Stationery and office requisites
Paper and Printer's Sundries

The Reputed Firm in South Kanara

School Book Co.

Book Sellers — Publishers — Stationers

PRINCIPAL PAPER DEALERS

Head Office:
CAR STREET
MANGALORE
Phone No. 229

Branch Office:
K. S. RAO ROAD
HAMPANKATTA
MANGALORE
Phone No. 229 A

Distributors for:
The Mysore Paper Mills, Ltd.
BHADRAVATHI
(For S. Kanara & N. Malabar)

Agents of:
Ganges Printing Ink Factory, Ltd.
HOWRAH



ದೀಪಾವಳಿಯ ಶುಭಾಶಯಗಳು!

ಕತ್ತಲೆಯಿಂದ ಬೆಳಕಿನೆಡೆಗೆ
ಉನ್ನತಿಯಿಂದ ಪ್ರಗತಿಯೆಡೆಗೆ
ಸಾಗಬೇಕೆಂಬುದರ ಸಂಕೇತವಾದ

30 REGD

ದೀಪಾವಳಿಯು

ನಮ್ಮ ಅಸಂಖ್ಯಾತ ಗ್ರಾಹಕರಿಗೆ
ಹಿತೈಷಿಗಳಿಗೆ ಸರ್ವತೋಮುಖ
ಅಭಿವೃದ್ಧಿ—ಸಮೃದ್ಧಿಯನ್ನು ತರಲಿ.

ಫೋನ್: 30 ಕಾರ್ಕಳ. — 391 ಮಂಗಳೂರು.

ಭಾರತ ಬೀಡಿ ವರ್ಕ್ಸ್ (ರಿಜಿಸ್ಟರ್ಡ್)

ಪೋಸ್ಟ್ ಬೋಕ್ಸ್ ನಂ. 30.

ಕಾರ್ಕಳ, ದ. ಕ.

ದೀಪಾವಳಿಯ ವೈಶಿಷ್ಟ್ಯಗಳು

ಲೇ— ಹೆಚ್. ಕೆ. ಮಂಜುನಾಥ ಭಟ್ಟರು, ಭೀಮನಕೋಣೆ.

ಅಮಾವಾಸ್ಯೆಯ ಕರಾಳ ಕಾರ್ಗತ್ತಲ ರಾತ್ರಿಯಲ್ಲಿ ಜಗ–ಜಗಿಸುವ ದೀಪಗಳ ಸಾಲುಗಳೂ, ಆಕಾಶವನ್ನು ಚುಂಬಿಸುವ ಬಣ್ಣ–ಬಣ್ಣದ ತೂಗುದೀಪದ ಮೂಲೆಗಳೂ, ಜನಗಳ ಮನದಲ್ಲಿ ಹುಟ್ಟಿಸುವ ಆನಂದ ಸಂಭ್ರಮವು ಬಣ್ಣಿಸಲಸದಳ ಪ್ರಕಾಶವನ್ನು ಪಸರಿಸುವ ಪುಣ್ಯ ದೀಪಾವಳಿಯು ಭಾರತದ ಮುಖ್ಯ ಹಬ್ಬಗಳಲ್ಲಿ ಒಂದಾಗಿದೆ. ಈ ದಿನ ಭಾರತದಾದ್ಯಂತ ಎಲ್ಲಾ ನಗರಗಳೂ, ಹಳ್ಳಿಗಳೂ, ಮನೆಗಳೂ, ನಿರ್ಮಲ ಪ್ರಕಾಶದಿಂದ ಉಜ್ವಲವಾಗಿ ಬೆಳಗುವವು.

ದೀಪಾವಳಿಗೆ ಪ್ರಕಾಶದ ಪರ್ವವೆಂದರೆ ತಪ್ಪಾಗದು. ಕರಾಳ ಕಾರ್ಗತ್ತಲ ಮೇಲೆ ಉಜ್ವಲ ಪ್ರಕಾಶದ ಈ ವಿಜಯವು ಪ್ರತಿ ವರ್ಷ ಅಶ್ವಿಜ ಕೃಷ್ಣ ಅಮಾವಾಸ್ಯೆಯಂದು ಅತ್ಯಂತ ಸಂಭ್ರಮದಿಂದ ಆಚರಿಸಲ್ಪಡುತ್ತದೆ. ಬಹುಶಃ ಇಷ್ಟು ಸಂಭ್ರಮ ಹೋಳಿ ಹಬ್ಬಕ್ಕೂ ಇರಲಾರದು.

ದೀಪಾವಳಿಯು ಭಾರತದ ಬಹು ಪ್ರಾಚೀನ ಹಬ್ಬ. ಏಕೆಂದರೆ, ಶ್ರೀ ರಾಮನು ವನವಾಸವನ್ನು ಮುಗಿಸಿ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದ ದಿನವಿದೆನ್ನುವರು. ಅದಲ್ಲದೆ ಅದಕ್ಕಿಂತ ಮೊದಲೂ ಈ ಹಬ್ಬವು ಭಾರತದಲ್ಲಿ ಆಚರಿಸಲ್ಪಟ್ಟಿರುವಂತೆ ತೋರುವುದು. ಇದನ್ನು ಆಚರಿಸಲು ಅನೇಕ ಕಾರಣಗಳಿವೆ.

ಈಗ ಮೊದಲನೇ ಕಾರಣವನ್ನು ಯೋಚಿಸುವ. ಭಾರತವು ಬಹು ಹಿಂದಿನಿಂದಲೂ ಕೃಷಿಪ್ರಧಾನ ದೇಶವಾಗಿದೆ. ಆದ್ದರಿಂದಲೇ ಇಲ್ಲಿಯ ಹೋಳಿ, ದೀಪಾವಳಿ ಎರಡೂ ಹಬ್ಬಗಳೂ, ಫಸಲು ಕೊಯ್ಯುವ ಮೊದಲೇ ಆಚರಿಸುತ್ತಾರೆ ಯಾವಾಗ ಫಸಲು ಬೆಳೆಯುವುದೋ ಆಗ ಹೋಳಿ ಹಬ್ಬವು ಆಚರಿಸಲ್ಪಡುವುದು. ಆ ಫಸಲು ಯಾವಾಗ ಕೊಯ್ಲಿಗೆ ಸಿದ್ಧವಾಗುವುದೊ ಆಗ ದೀಪಾವಳಿಯು ಆಚರಿಸಲ್ಪಡುತ್ತದೆ. "ದವಸ ಧಾನ್ಯಗಳು ಮನೆಗೆ ಬರುವವು" ಎಂಬ ಸಂತೋಷವು ರೈತರಿಗೆ ಮೇರೆ ಮೀರಿರುತ್ತದೆ. ಲೆಕ್ಕಿವಿಲ್ಲದಷ್ಟು ದೀಪಗಳನ್ನುರಿಸಿ ಅವರು ಆ ಆನಂದವನ್ನು ಪ್ರಕಟಿಸುವರು.

ದೀಪಾವಳಿಯನ್ನಾಚರಿಸುವ ಎರಡನೇ ಕಾರಣವೆಂದರೆ— ಆರೋಗ್ಯ ಸಿಯಮಗಳಿಗೆ ಸಂಬಂಧಪಟ್ಟಿದೆ. ಮಳೆಗಾಲದಲ್ಲಿ ತಿಪ್ಪೆಗಳೂ, ಕೊಳಚೆಗಳೂ ಹೆಚ್ಚಿರುತ್ತವೆ. ಮತ್ತು ಮನೆಗಳು ಅಂದ ವಿಹೀನವಾಗಿ ಮಲಿನವಾಗಿರುತ್ತವೆ. ಎಲ್ಲಿ ನೋಡಿದರಲ್ಲಿ ಕೆಸರು ತಿಪ್ಪೆಗಳೇ ಕಾಣುತ್ತವೆ. ಸೊಣಗಗಳೂ, ಸೊಳ್ಳೆಗಳೂ, ಇನ್ನೂ ವಿವಿಧ ರೀತಿಯ ಅನೇಕಾನೇಕ ಕ್ರಿಮಿಕೀಟಗಳು ಉತ್ಪತ್ತಿಯಾಗಿರುತ್ತವೆ ಈಗ ವರ್ಷಾಋತುಕಳೆಯಾಗ ವಸ್ತಿ ಮರಗಳನ್ನೂ, ಗುಡಿ, ಚರ್ಚಿಗಳನ್ನೂ, ಕರೆ, ಬಾವಿಗಳನ್ನೂ, ಜೋಪಡಿಪಟ್ಟಿಗಳನ್ನೂ ಸ್ವಚ್ಛಮಾಡುತ್ತಾರೆ. ಮನೆ, ಮರ, ಗುಡಿ, ಗುಂಡಾರಗಳಿಗೆ ಸುಣ್ಣಾ ಬಳಿಯುತ್ತಾರೆ, ಮತ್ತು ರಾತ್ರಿಯಲ್ಲಿ ದೀಪವನ್ನು ಉರಿಸಲಾಗುವುದು. ಇದು ಅತ್ಯಂತ ಆವಶ್ಯಕ. ಇಷ್ಟು ಆಸಂಖ್ಯ ದೀಪಗಳನ್ನು ರಾತ್ರಿಯಲ್ಲಿ ಉರಿಸುವ ಕಾರಣವು ಹೀಗೂ ಇರುತ್ತದೆ— ರಾತ್ರಿಯಲ್ಲಿ ಹಾರುವ ಕೀಟಗಳೂ, ನೊಣಗಳೂ, ಆಕರ್ಷಿತವಾಗಿ ಸುಟ್ಟು ಬೂದಿಯಾಗುವುವು. ಆದ್ದರಿಂದ ಅನೇಕಾಲ್ಕುರೋಗಗಳನ್ನು ತಡೆಗಟ್ಟಲು ಸಾಧ್ಯ.

ದೀಪಾವಳಿಯನ್ನಾಚರಿಸುವ ಮೂರನೆಯ ಕಾರಣವು ಹೀಗಿದೆ. ಶ್ರೀ ರಾಮಚಂದ್ರನು ಹದಿನಾಲ್ಕು ವರ್ಷ ವನವಾಸ ಮುಗಿಸಿ ಅಯೋಧ್ಯೆಗೆ ಹಿಂತಿರುಗಿದ ಆ ಇದೇ ದಿನ ಸಂಜೆ ಪಟ್ಟಾಭಿಷೇಕವು ನೆರವೇರಿತು. ಆ ದಿನದೀ ಇದು ಆಚರಣೆಗೆ ಬಂದಿದೆ ಎಂದು ಅನೇಕರು ಹೇಳುತ್ತಾರೆ ಶ್ರೀ ರಾಮನು ಮರ್ಯಾದಾ ಪುರುಷೋತ್ತಮ ನೆಂಬುದು ಸರ್ವವಿದಿತ. ತನ್ನ ತಂದೆಯು ಮಾತನ್ನುಳಿಸಲು, ಅನಾಜ್ಞೆಯನ್ನು ಪಾಲಿಸಲು ಎಲ್ಲಾ ರಾಜ ಭೋಗಗಳಿಗೂ ತಿಲಾಂಜಲಿಯಿತ್ತು ಹದಿನಾಲ್ಕು ವರ್ಷ ವನವಾಸಕ್ಕಾಗಿ ತೆರಳಿದನು. ವನವಾಸದಲ್ಲಿನ ನು ಅನೇಕ ಕಷ್ಟಗಳನ್ನು ಸಹಿಸಿದನು. ಕೊನೆಗೆ ಲಂಕೆಯ ದುಷ್ಟರಾಜ ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಸುಖಿಸೂರ್ವಕವಾಗಿ ಮರಳಿದಾಗ ಅಯೋಧ್ಯಾವಾಸಿಗಳು ಅನಂದದಿಂದ ಹುಚ್ಚರಂತಾಗುಪದು ಸ್ವಾಭಾವಿಕವೇ. ಇದೇ ಸಂತೋಷದಿಂದವರು ಆ ರಾತ್ರಿ ತುಪ್ಪದ ದೀಪಗಳನ್ನು ಅಸಂಖ್ಯವಾಗಿ ಉರಿಸಿಯು-ಪಾಸವ ಮೇಲೆ ಪುಣ್ಯವೂ, ಅನ್ಯಾಯದ ಮೇಲೆ ನ್ಯಾಯವೂ, ದುಷ್ಟತನದ ಮೇಲೆ ಶಿಷ್ಟತನವೂ, ವಿಜಯಗೊಂದಿದ ಆ ಸವಿನೆನಪನ್ನು ಮರು ಕಳಿಸಲು ಅಂದಿನಿಂದ ಇಂದಿನ ವರೆಗೂ ದೀಪಾವಳಿಯು ಆಚರಿಸಲ್ಪಡುತ್ತಿದೆ.

ದೀಪಾವಳಿಯನ್ನು ಲಕ್ಷ್ಮೀಪೂಜಾ ಪರ್ವವೆಂದೂ ಹೇಳುತ್ತಾರೆ. ವ್ಯಾಪಾರಿಗಳು ವಿಶೇಷವಾಗಿ ಈ ದಿನ ಲಕ್ಷ್ಮಿಪೂಜೆಯನ್ನು ಮಾಡುತ್ತಾರೆ. ಇಲ್ಲಿಂದ ತಮ್ಮ ಹೊಸ ವರ್ಷವನ್ನು ಆರಂಭಿಸಿ, ಹಿಂದಿನ ಲೆಕ್ಕಪತ್ರವನ್ನೆಲ್ಲಾ ತೆಗೆದು ಹೊಸ ಲೆಖ್ಖಗಳನ್ನೂ, ಪತ್ರಗಳನ್ನೂ, ಹೊಸ ಖಾತೆ, ಕೆರ್ದಿಗಳನ್ನೂ, ಹೊಸ ಜಮಾ ಖರ್ಚುಗಳನ್ನೂ, ಆರಂಭಿಸುತ್ತಾರೆ. ಇದಕ್ಕೊಂದು ಪ್ರಬಲ ಕಾರಣವು ಇದರ ಹಿಂದೆಯೇ ಅಡಗಿದೆ. ಆದೇನೆಂದು ಹುಡುಕೋಣ, ಬನ್ನಿ!— ಹಿಂದೆ ಗ್ರಾಮ್ಯ ಮತ್ತು ವರ್ತಕ ಯುಗವಿನ ನಾಲ್ಕು ತಿಂಗಳಲ್ಲಿ ವ್ಯಾಪಾರವು ಸಿಂತೇ ಹೋಗುತ್ತಿತ್ತು. ಈಗಲೂ ಇಂತಹ ರೈಲು, ವಿಮಾನ, ಮೋಟಾರುಗಳ ಯುಗದಲ್ಲೂ ಕೂಡಾ ವ್ಯಾಪಾರವು ಮಂದವಾಗಿರುತ್ತದಲ್ಲವೆ? ಇನ್ನು ಕುದುರೆ, ಕತ್ತೆ, ಎತ್ತಿನ ಗಾಡಿಗಳ ಯುಗದಲ್ಲಿ ವ್ಯಾಪಾರವು ಹೇಗೆ ನಡೆಯುತ್ತಿರ ಬಹುದು? ಈ ಕಲ್ಪನೆ ಸರಳವಾಗಿಯೇ ಏಳುತ್ತದೆ. ಆದ್ದರಿಂದ ಮಳೆಗಾಲವು ಕಳೆದೊಡನೆಯೇ ಹೊಸವಾಗಿ ವ್ಯಾಪಾರವು ಆರಂಭವಾಗುವುದೆಂಬ ಆನಂದವು ವ್ಯಾಪಾರಿಗಳಲ್ಲಿ ಉತ್ಪನ್ನವಾಗುತ್ತದೆ. ಮತ್ತು ತಮ್ಮ ಮನೆಗೆ ಲಕ್ಷ್ಮಿಯು ಆಗಮನವಾಗುವುದೆಂದು, ಬಹಳ ಗೌರವದಿಂದ, ಬಹಳ ವಿಶ್ವಾಸದಿಂದ, ಬಹಳ ಶ್ರದ್ಧೆಯಿಂದ ಲಕ್ಷ್ಮೀ ಪೂಜೆಯನ್ನು ಮಾಡುತ್ತಾರೆ.

ದೀಪಾವಳಿಯನ್ನಾಚರಿಸುವ ಇನ್ನೊಂದು ಕಾರಣವೆಂದರೆ—ಉತ್ತರ ಭಾರತದಲ್ಲಿನ ನಮ್ಮ ಪಿತೃಗಳು ವಾಸಮಾಡುವರು. ಆ ಲ್ಲಿ ಆರು ತಿಂಗಳು ರಾತ್ರಿಯೂ, ಆರು ತಿಂಗಳು ಹಗಲೂ ಇರುವುದು. ರಾತ್ರಿಯು ಆರಂಭದ ದಿನವನ್ನೇ ದೀಪಾವಳಿ ಎಂದು ಆಚರಿಸಬೇಕು. ಎಂದು ಕೆಲವರ ತಿಳುವಳಿಕೆ.

ಮೃತ ವ್ಯಕ್ತಿಗಳು ನರಕದಿಂದ ಪಿತೃಲೋಕಕ್ಕೆ ಹೋಗುತ್ತಾರೆ ನರಕವು ಅಂಧಕಾರಮಯವಾಗಿರುತ್ತದೆ. ಆದ್ದರಿಂದ ಪಿತೃಗಳಿಗೆ ದಾರಿ ತೋರುವಂತೆ ಪ್ರಯುಕ್ತವೂ,ಪಿತೃಲೋಕದ ರಾಜನಾದ ಯಮನ ಆರಾಧನೆಗೆಂದೂ ದೀಪಾವಳಿಯನ್ನು ಆಚರಿಸಬೇಕು ಎಂದು ಇನ್ನೂ ಹಲವರ ನಂಬಿಕೆ.

ಬಲಿ ಚಕ್ರವರ್ತಿಯು ಬಲಶಾಲಿಯಾಗಿ ಸ್ವರ್ಗದ ಆಧಿಪತ್ಯವನ್ನು ಸೆಳೆದುಕೊಂಡಾಗ ವಿಷ್ಣುವು ವಾಮನಸ ಅವತಾರವನ್ನು ಮಾಡಿ ಬಲಿಯೊಡನೆ ಮೂರು ಹೆಜ್ಜೆ ಸ್ಥಳವನ್ನು ಬೇಡಲಾಗಿ ಬಲಿಯು ತಥಾಸ್ತು ಎಂದನು ವಾಮನನು ಮೊದಲನೇ ಹೆಜ್ಜೆಯಿಂದ ಮರ್ತ್ಯವನ್ನೂ ಎರಡನೇ ಹೆಜ್ಜೆಯಿಂದ ಪಾತಾಳ ಸ್ವರ್ಗಗಳನ್ನೂ ಆಳೆದುಕೊಂಡನು. ಮೂರನೇ ಹೆಜ್ಜೆಯಿಂದ ಬಲಿಯನ್ನು ಪಾತಾಳಕ್ಕೆ ಹೆಟ್ಟಿದನು. ಪ್ರತಿಯೊಂದು ಬಲಿವಾಡ್ಯಮಿಯ ಪ್ರತಿಯೂ, ಬಲಿಚಕ್ರವರ್ತಿಯು ಭೂಮಿಗೆ ಬರುತ್ತಾನೆ. ಆದ್ದರಿಂದ ಇವರ ಮೊದಲನೇ ದಿವಸ ನಾವು ದೀಪಾವಳಿಯನ್ನು ಆಚರಿಸಬೇಕೆಂದು ಇನ್ನೂ ಹಲವರ ಮತ.

ನರಕಾಸುರನಿಂದ ಪ್ರಪಂಚಕ್ಕಾಗುತ್ತಿದ್ದ ಬಾಧೆಯನ್ನು ಸಹಿಸಲಾರದೇ ಶ್ರೀಕೃಷ್ಣನು ಸತ್ಯಭಾಮಾ ಸಹಿತನಾಗಿ ನರಕಾಸುರನೊಡನೆ ಯುದ್ಧಕ್ಕೆ ಹೋಗಿ ಮಹಾ ಚೇತನಾದನು. ಆವನ ಸೂಚನೆಯಂತೆ ಸತ್ಯಭಾಮೆಯು ನರಕನನ್ನು ಸಂಹರಿಸಿದಳು ನರಕಾಸುರನು ಅಮಾವಾಸ್ಯೆಯ ಮೊದಲ ದಿನವೇ ಪ್ರಾಣಬಿಟ್ಟು ಆದ್ದರಿಂದ ಆ ಚತುರ್ದಶಿಯು. ನರಕ ಚತುರ್ದಶೀ ಎಂದು ಹೆಸರು ಪಡೆಯಿತು. ಲೋಕವು ಪೀಡಾವಿಹೀನವಾಗಿ ಸಂತಸಗೊಂಡು ಮಾರನೇ ದಿನವೇ ಹೆಬ್ಬವನ್ನಾಚರಿಸಿತು. ಇದು ದೀಪಾವಳಿಯ ಆಚರಣೆಗೆ ಮತ್ತೊಂದು ಕಾರಣ.

ಕ್ರೈಸ್ತಶಕವು ಪ್ರಾರಂಭವಾಗುವ ಮೊದಲೇ ವಿಕ್ರಮ ಶಕೆಯು ಪ್ರಾರಂಭವಾಯಿತು. ಗುಜರಾತಿಗಳೂ, ಮಾರವಾಡಿಗಳೂ ಈ ಶಕೆಯನ್ನೇ ಗೌರವಿಸುತ್ತಾರೆ. ವಿಕ್ರಮ ಶಕವು ದೀಪಾವಳಿಯಂದೇ ಪ್ರಾರಂಭವಾಗುತ್ತದೆ. ಆ ದಿನವೇ ವಿಕ್ರಮನು ಶಕರನ್ನು ಸಂಹರಿಸಿ ಶಕಾರಿ ಎಂಬ ಬಿರುದನ್ನು ಪಡೆದನು.

ಈಗಿನ ಕಾಲಗಳಲ್ಲಿ ದೀಪಾವಳಿಯು ವಾಸ್ತವಿಕ ದಿನವಾದ ಅಶ್ವಿನ ಕೃಷ್ಣ ಅಮಾವಾಸ್ಯೆಗೆ ಅನೇಕ ದಿನಗಳು ಮೊದಲೇ ಮನೆಗಳಲ್ಲಿ ಸಂಭ್ರಮವು ಏಳುತ್ತದೆ. ಮನೆ-ಮರಗಳನ್ನು ಸ್ವಚ್ಛಗೊಳಿಸಲಾರಂಭಿಸುವರು. ಬಾಗಿಲು, ಕಿಟಿಕಿ ತಳಗಳಿಗೆ ಬಣ್ಣಗಳು ಹಚ್ಚಲ್ಪಡುತ್ತವೆ ಮತ್ತು ಮನೆಗಳು ಎಲ್ಲಾ ರೀತಿಯಿಂದಲೂ ಅಲಂಕರಿಸಿ ಸುಂದರಗೊಳಿಸಲ್ಪಡುತ್ತವೆ. ಹೊಸ ಹೊಸ ಬಟ್ಟೆಗಳು ಹೊಲಿಸಲ್ಪಡುತ್ತವೆ. ಮತ್ತು ಹೊಸ ಹೊಸ ಪತ್ರಿಕೆಗಳು ಖರೀದಿ ಮಾಡಲ್ಪಡುತ್ತವೆ.

ದೀಪಾವಳಿಯಂದು ಉದಯಿಸುವ ಸೂರ್ಯನೊಡನೆಯೇ ಪೇಟೆಯಲ್ಲಿ ವಿಚಿತ್ರ ಶೋಭೆಯು ಉದಯವಾಗುತ್ತದೆ. ಹೋದಲ್ಲಿ ನೆಲೆಯರೂ ತಿರಿದೀ ವ್ಯಾಪಾರಿಗಳೂ ಅನೇಕಾನೇಕ ಸುಂದರವಾದ ರುಚಿ-ರುಚಿಯಾದ ತಿಂಡಿಗಳಿಂದ ತಮ್ಮ ಅಂಗಡಿಗಳನ್ನು ಅಲಂಕರಿಸುತ್ತಾರೆ. ಪೇಟೆಗಳಲ್ಲಿ ಜನಗಳು ತಮ್ಮ-ತಮ್ಮ ಪರಿಚಿತ ಮಿತ್ರರನ್ನು ಭೇಟಿ ಮಾಡುತ್ತಾರೆ. ಮತ್ತೂ ಅವರ ಮನೆಗಳಿಗೆ ಮಿಠಾಯಿಗಳನ್ನು ಕಳಿಸುತ್ತಾರೆ. ತಮ್ಮ ಮನೆಗೆ ಹರರು ಕಳುಹಿಸಿದ ಮಿಠಾಯಿಗಳ ರುಚಿ ನೋಡಿ ಆನಂದ ಪಡುತ್ತಾರೆ.

ದೀಪಾವಳಿಯ ನಿಜವಾದ ಮಜ ರಾತ್ರಿಯಲ್ಲಿದೆ. ಬಡವರೂ, ಶ್ರೀಮಂತರೂ ಎಲ್ಲರೂ ತಮ್ಮ-ತಮ್ಮ ಶಕ್ತ್ಯನುಗುಣವಾಗಿ ದೀಪಗಳನ್ನುರಿಸುತ್ತಾರೆ. ಈಗಿನ ಭವ್ಯ ವೈಜ್ಞಾನಿಕ ಯುಗದಲ್ಲಿ ದೀಪಗಳ ಅಧಿಕಾಂಶ ಭಾಗಗಳನ್ನು ಎಲೆಕ್ಟ್ರಿಕ್ ಬಲ್ಬುಗಳು ತೆಗೆದುಕೊಂಡಿವೆ. ಬಣ್ಣ-ಬಣ್ಣದ ಬಲ್ಬುಗಳಿಂದ ಭವನಗಳು ಭವ್ಯವಾಗಿ ಸರ್ವ ಸಂಪತ್ಸವೃದ್ಧವಾದ ಇಲಕಾಪುರಿಯಂತೆ ಜಗ-ಜಗಿಸುತ್ತದೆ. ದೀಪಗಳ ಉಜ್ವಲ ಪ್ರಭೆಯಂತೂ ವರ್ಣಿಸಲಸಾಧ್ಯ. ಪಟ್ಟಣಗಳಲ್ಲಿಂತೂ ವರ್ಣಿಸಲಸಾಧ್ಯವಾದ ಅಲಂಕಾರವಿರುತ್ತದೆ. ಅಧಿಕಾಂಶ ಜನ

(ಮುಂದೆ ಸುದ್ದಿ ನೋಡಿರಿ)

Phone: 66

SRI KRISHNA JEWELLERY MART

READY MADE JEWELLERY DEPT.

COMMISSION AGENTS,

TENKAPET, **UDIPI**, S KANARA.

ಇಲ್ಲಿ ಪಾತ್ರಿಯಾವ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೇರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, 'Dove mark' ಡೈಮಂಡುಗಳು, ಚಿನ್ನದ ಕೆಲಸಗಳಿಗೆ ಬೇಕಾಗುವ ಎಲ್ಲಾ ಸಾಮಾನುಗಳೂ, ಉಡುಗರೆಗೆ ಬೇಕಾದ ಫ್ಯೆನ್ಸಿ ಬೆಳ್ಳಿಯ ಸಾಮಾನುಗಳೂ, ನುರಿತ ಕೆಲಸಗಾರರಿಂದ ನಿತ್ಯರಾಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು ಮತ್ತು ಇನ್ನಿತರ ಮ್ಯಾಲುಗಳು ಯಾವಾಗಲೂ ಮಾರ್ಕೆಟ್ ದರವನ್ನೆ ಸಿಗುತ್ತವೆ.

Prop: U. Raghavendra Krishna Bhat

ದಕ್ಷಿಣ ಕನ್ನಡದಲ್ಲಿ ರೇಲ್ವಾರಿಗಳು?

ಕೃಷ್ಣಕುಮಾರ ಕಲ್ಲೂರ್, ಮುಂಬಯಿ.

ದಕ್ಷಿಣ ಕನ್ನಡದಲ್ಲಿ ಸಧ್ಯ ಇರುವುದು ೬ ಮೈಲಿನ ರೇಲ್ವಾರಿ ಮಾತ್ರ ಕರ್ನಾಟಕದ ಜಿಲ್ಲೆಗಳಲ್ಲೆಲ್ಲ ಅತ್ಯಂತ ಮುಂದುವರಿದ ಜಿಲ್ಲೆ ದಕ್ಷಿಣ ಕನ್ನಡವೇ! ಸಮಷ್ಟಿಯಾಗಿ ಪರಿಶೀಲಿಸಿದರೆ ಇದು ಬೆಂಗಳೂರು-ಮೈಸೂರು ಭಾಗಗಳಿಗಿಂತಲೂ ಭಾರವಾಡ ಜಿಲ್ಲೆಗಿಂತಲೂ ಮುಂದುವರಿದದ್ದು. ಇದರರ್ಥ ಅಲ್ಲಿರುವುದೆಲ್ಲ ಇಲ್ಲಿ ಇದ್ದೇ ಇದೆ ಎಂತ ಅರ್ಥವಲ್ಲ. ರೇಡಿಯೋ ಸ್ಟೇಶನ್ನಿಲ್ಲ, ವಿಶ್ವವಿದ್ಯಾಲಯವಿಲ್ಲ—ಎಂಬ ಕೆಲ ಮಾತುಗಳು ಕಣ್ಣಿಸುರಾಗುವಂತಿರುವುದು ನಿಜ. ಆದರೆ ಆಧುನಿಕ ಜೀವನದ ಪಂಚಪ್ರಾಣದಂತಿರುವ ರೇಲ್ವೆಗಳೇ ಇಲ್ಲ ಎಂದರೆ ಸ್ವಲ್ಪ ವೈಪರೀತ್ಯದ ಅತಿಶೇಕವೇ ಆಯಿತೆನ್ನಬೇಕು. ಕರ್ನಾಟಕದ ತೀರ ಹಿಂದುಳಿದ ಜಿಲ್ಲೆ -- ಉತ್ತರ ಕನ್ನಡದಲ್ಲಿ ಸಹ ಸುಮಾರು ೪೦ ಮೈಲು ರೇಲ್ವೆ ಇರುವಾಗ, ದಕ್ಷಿಣ ಕನ್ನಡದಲ್ಲಿ ಬರೀ ಆರು ಮೈಲು ಮಾತ್ರ, ಆದರೆ ಮಂಗಳೂರು ಒಂದು "ಟರ್ಮಿನಸ್" ಎಂಬ ಗೌರವವನ್ನು ಪಡೆದಿಲ್ಲವೇ! ಹೌದು. ಆ ಆರು ಮೈಲು ರೇಲ್ವಾರಿ ಹಾಗು ಆ ಟರ್ಮಿನಸ್ ಆಡಿನ ಮೊಲೆಗಳಿದ್ದಂತೆಯೇ ಸರಿ. ಅವುಗಳಿಂದ ಇಡೀ ಜಿಲ್ಲೆಗೇನು ಸಾಕ್ಷಾತ್ಸ್ರ್ಯೋಜನ! ಆದರೂ ಮಂಗಳೂರು ಒಂದರ ಸ್ಥಾನವಾದುದರಿಂದಲೂ, ಆ ಆರು ಮೈಲಿನ ಹಿಂದೆ ಮತ್ತೂ ನೂರಾರು ಮೈಲು ಬ್ರಡ ರೇಲ್ವಾರಿಯಿರುವುದರಿಂದಲೂ ಬಂದರದ ಉತ್ಪತ್ತಿ ಹಾಗು ಅಪ್ರತ್ಯಕ್ಷವಾಗಿ ಆ ನೂಲಕವಾದ ಜಿಲ್ಲೆಯ ಆದಾಯ ಬೇಕಿಯುವುದರಿಂದಲೂ ಆ ರೇಲ್ವಾರಿಗೆ ಒಂದು ಸ್ಥಾನಿಕ ಮಹತ್ವವಾದರೂ ಬಾರದಿಲ್ಲ. ಆದರೆ ಉತ್ತರ ಕನ್ನಡದಲ್ಲಿ ೪೦ ಮೈಲು ರೇಲ್ವಾರಿಯಿದ್ದರೂ, ಆ ಜಿಲ್ಲೆಗೆ, ದಕ್ಷಿಣ ಕನ್ನಡದ ಆರು ಮೈಲಿನಿಂದಾಗುವ ಪ್ರಯೋಜನವೂ ಆಗುತ್ತಿಲ್ಲವೆನ್ನಬಹುದು ಪರಿಸ್ಥಿತಿ ಬಲದಿಂದ ದಾಂಜೇಲಿ ಇಂಜೆಗೆ ಕೆಲಮಟ್ಟಿಗೆ ಬೆಳೆದುದೆಷ್ಟೋ ಅಷ್ಟೇ!

ಭಾಗ್ಯವಂತ ಜಿಲ್ಲೆ

ಆದರೆ ದಕ್ಷಿಣ ಕನ್ನಡದ ಕಸುವು ಹೆಚ್ಚಿನದು. ಅಲ್ಲಿಯ ಜನತೆ ಕಳೆದ ಒಂದು ಶತಮಾನದಿಂದಲೂ ಇಲ್ಲದ ರೇಲ್ವಾರಿಯ ಕೊರತೆಯ ಅರಿವೇ ಆಗದಿರುವಂತೆ ಉತ್ತಮ ತರಗತಿಯ ಬಸ್ಸು-ಟ್ರಕ್ಕುಗಳ ಏರ್ಪಾಡು ಮಾಡಿಕೊಂಡು ದಕ್ಷಿಣ ಕನ್ನಡದ ಯಾವುದೇ ಬಂದರ ಅಭಿವೃದ್ಧಿಗೊಂಡರೆ, ರೇಲ್ವಾರಿಯಿಲ್ಲದೆಯೂ ರಸ್ತೆಗಳ ಸಾರಿಗೆಯಿಂದಲೇ ಅದಕ್ಕೆ ಒಡಗವ ಸರಕನ್ನೆಲ್ಲಾ ಸಾಗಾಟ ಮಾಡಿಕೊಡಬಲ್ಲವು ಎನ್ನುವ ಎದೆಗಾರಿಕೆಯನ್ನು ತೋರಿದರು. ಇದೇ ಆ ಜಿಲ್ಲೆಯ ಹೆಚ್ಚುಗಾರಿಕೆಯ ಕೆಚ್ಚು. ಬೆಂಗಳೂರತ್ತ ಆದುನಿಕ ಉಪಕರಣ, ಸಲಕರಣೆ, ಸಾಧನ-ಸಾಮಗ್ರಿಗಳಿಗೇನೂ ಕೊರತೆಯಿಲ್ಲ. ಆದರೆ ಅದು ಜನರಲ್ಲಿ ಎಷ್ಟೋ ಅಂದರೂ ಕೆಚ್ಚು ಕಡಿಮೆ ಭಾರವಾಡದವರಲ್ಲಿ ಕೆಚ್ಚು ಹೆಚ್ಚು ಆದರೆ ಅದು ಕೊಚ್ಚಿ ಕೊಳ್ಳುವುದರಲ್ಲೇ ವೆಚ್ಚವಾಗಿ ಬಿಡುತ್ತದೆ ಇವೆಲ್ಲ ಮಾತುಗಳನ್ನೆಲ್ಲ ಮನದಂದು ಒಟ್ಟಾರೆಯ ಸಂಸಾರಿಯಲ್ಲಿ, ಒಂದೆರಡು ಹಿಂ ಕೊರತೆಗಳನ್ನು ಗಣಿಸಿದರೂ, ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕದ ಜಿಲ್ಲೆಗಳಲ್ಲೆಲ್ಲ ಹೆಚ್ಚು ಮುಂದುವರಿದ ಜಿಲ್ಲೆ ಎಂದು ಆರಂಭದಲ್ಲಿ ಹೇಳಿದ್ದ. ದಕ್ಷಿಣ ಕನ್ನಡವರೇ ಇದನ್ನು "ಭಾಗ್ಯವಂತ" ಜಿಲ್ಲೆ ಎಂದು ಸಾರಿದ್ದು ಅಕ್ಷರಶಃ ನಿಜ. ಮಂಗಳೂರು-ಉಡುಪಿಗಳ ನಡುವಿನ ಆನಾರೋಗ್ಯಕರವಾದ ತಿಕ್ಕಾಟವನ್ನೊಂದು ಬಿಟ್ಟರೆ ಇದು ನಿಜವಾಗಿಯೂ ಭಾಗ್ಯವಂತ ಜಿಲ್ಲೆ. ರೇಲ್ವಾರಿಗಳು ಬಂದರೆ ಇದು ಇನ್ನೂ ಹೆಚ್ಚು ಭಾಗ್ಯಶಾಲಿಯಾಗುವಲ್ಲಿ ಸಂದೇಹವಿಲ್ಲ. ಆ ರೋಗಕ್ಕೊಂದು ಮಹಾ ಉಪಾಯ ಆಗತ್ಯ; ಅತ್ಯಗತ್ಯ. ಆದು ನೀಗದೆ ಈ ಜಿಲ್ಲೆಗೆ ನಾಡಿನ ನೇತೃತ್ವ ಸಿಕ್ಕುವುದೂ ದಕ್ಕುವುದೂ ಕಷ್ಟ.

ಮೂಗಿಗೆ ಹಚ್ಚಿದ ತುಪ್ಪ.

ದಕ್ಷಿಣ ಕನ್ನಡಕ್ಕೆ ಹೊಸ ರೇಲ್ವಾರಿಯೊಂದು ಆಗಿಯೇ ಬಿಡುತ್ತದೆ ಎಂಬ ಹವಣಿಕೆಯಲ್ಲಿದ್ದೇವೆನಾನೆಲ್ಲ. ಆದರೆ "ಕಪ್ಪಿಗೂ ಲಿಪ್ಪಿಗೂ" ತಪ್ಪು ಗಂಟಾಗುವುದುಂಟಲ್ಲ! ಹಾಗಾಗುವ ಸಂಭವವೇ ಹೆಚ್ಚಾಗಿದೆ. ಹಾಸನ-ಮಂಗಳೂರಿನ ಸರ್ವೇದ ತುಪ್ಪ ನಮ್ಮ ಮೂಗಿಗೆ ಹತ್ತಿ ೨೩ ವರ್ಷಗಳು ಉರುಳಿದುವು. ತೃತೀಯ ಯೋಜನಾವಧಿಯಲ್ಲಿ ಆದರೆ ಹೆಸರೂ ಬಂತು. ಆದರೆ ಹೆಸರು ಬಂದಾಕ್ಷಣಕ್ಕೆ ಆಗಿಯೇ ತೀರುತ್ತದೆಂದು ಹೇಳಬರುವುದಿಲ್ಲ ೩ನೇ ಯೋಜನೆಯಲ್ಲಿ ಮಧ್ಯ ರೇಲ್ವೆ ಕುರ್ಡುವಾಡಿ ಪಂಡರಪುರ--ಮಿರಜಿಗಳ ರೇಲ್ವಾರಿಯು ಬ್ರಾಡ್‌ಗೇಜಾಗುವುದಾಗಿ ಆಡಕವಾಗಿತ್ತು. ಆಗ ಆಗಲಿಲ್ಲವಿಸ್ಪೇ ಅಲ್ಲ, ಮೂರನೇ ಯೋಜನೆಯಲ್ಲಿ ಆದು ಹೇಳ ಹೆಸರಿಲ್ಲದಂತಾಗಿದೆ 'ಸೂಳೆಗೆ ಕೊಟ್ಟ ಮಾತು' ಎಂಬಂತೆ ಇಂಥ ಅನೇಕ ಯೋಜನೆಗಳು ಕೊನೆಯಲ್ಲಿ 'ನೀತಿಕೆಟ್ಟ ಸುದ್ದಿ'ಗಳಾಗುವುದುಂಟು. ಹಾಸನ—ಮಂಗಳೂರು ರೇಲ್ವಾರಿ ಅಂತವನ್ನು ಮೀರಿದೆ ಎಂದು ಹೇಳಲಾಗುವುದಿಲ್ಲ. ಹಾಸನ—ಮಂಗಳೂರು ರೇಲ್ವಾರಿಯಾಗದೆ ಈ ಜಿಲ್ಲೆಯಲ್ಲಿ ಮಿಕ್ಕ ರೇಲ್ವಾರಿಗಳ ಬೆಳೆವಣಿಗೆಯೂಗುವುದೂ 'ಆಜ್ಜೀ ನಿನಗೊಂದ್ಸಟ್ಟೇ ಸೀರೆ' ಎಂದ ಹಾಗೆಯೇ ಸರಿ

ಇಬ್ಬರ ನ್ಯಾಯ ಮತ್ತೊಬ್ಬನ ಆಯ

ಈ ಭಯಕ್ಕೆ ಮುಖ್ಯ ಕಾರಣವೆಂದರೆ, 'ದೇವರು ಕೊಟ್ಟರೂ, ಪೂಜಾರಿ ಕೊಡ' ನಾವೋ, ದೇವರ ಮೇಲೆ ಭಾರಹಾಕಿ ಸುಮ್ಮನೆ ಕೂಡುವವರು, ಪೂಜಾರಿ ತನ್ನ ಕಾಯಕದ ಕೈಲಾಸ ಪಡೆಯದಿರನು. ಭಾರತದ ೩ನೇ ಯೋಜನೆಯಲ್ಲಿ ಹೆಸರಿಸಲ್ಪಟ್ಟ ಹಾಸನ—ಮಂಗಳೂರು ರೇಲ್ವೆ ದಕ್ಷಿಣ ರೇಲ್ವೆಯ ೩ನೇ ಯೋಜನೆಯಲ್ಲಿ ಕಟ್ಟಲ್ಪಡಬೇಕಾಗಿರುವ ರೇಲ್ವಾರಿಗಳ ಪಟ್ಟಿಯಲ್ಲಿ ಹೆಸರಿಗೂ ಕೂಡ ಕಾಣುವುದಿಲ್ಲ. ದಕ್ಷಿಣ ರೇಲ್ವೆಯ ಮುಖ್ಯ ಪಾಠ ಪತ್ಯನನ್ನು ವಹಿಸಿಕೊಂಡ ತಮಿಳರು ತಮ್ಮ ಟೀಳಿಯನ್ನು ಮೊದಲು ಬೇಯಿಸಿಕೊಳ್ಳಲು ಆರಂಭಿಸಿಯೇ ಬಿಟ್ಟಿದ್ದಾರೆ ಬೆಂಗಳೂರು ಸೇಲಂ ರೇಲ್ವೆ ಇದೀಗ ಕಾರ್ಯಗತವೇ ಆಗಿ ಬಿಟ್ಟಿದೆ. ಅದು ಆಗಿಬಿಟ್ಟರೆ ಹಾಸನ-ಮಂಗಳೂರು ರೇಲ್ವಾರಿ ಆನಪೇಕ್ಷ್ಯ ಎಂಬುದು ಅಂಗೈ ನೆಲ್ಲಿಯಷ್ಟು ತಿಳಿಯಾಗಿ ಕಾಣುವ ಮಾತಾಗುತ್ತದೆ ಹಾಗೆ ನೋಡಿದರೆ, ಹಾಸನ-ಮಂಗಳೂರು ರೇಲ್ವಾರಿಯ ಆಗತ್ಯವನ್ನು ಕೊನೆಗೂ ನಿರ್ನಾಮ ಮಾಡುವುದಕ್ಕೇ ತಮಿಳರು ಹಾಕಿದ ಜಾಲ ಆ ಸೇಲಂರೇಲ್ ದಾರಿ. ನಾವು, ಹುಚ್ಚು ಕನ್ನಡಿಗರು, ಮೂರನೆಯ ಯೋಜನೆಯಲ್ಲಿ ಹೆಸರು ಹಾಕಿದ್ದಾರಲ್ಲ, ಇದಕ್ಕಿಂತ ಇನ್ನೇನು ಬೇಕು ಎಂದು ಭ್ರಮದಲ್ಲಿದ್ದೇವೆ ಅಷ್ಟಲ್ಲದೆ, ಮಂಗಳೂರು—ಮಲ್ಪೆಗಳ ವೀರಾವೇಶ 'ಕೊಡಲಿಯ ಕಾವು ಕುಲಕ್ಕೆ ಮೂಲ' ಎಂಬಂತಾಗಿ ನಮ್ಮ ನಮ್ಮಲ್ಲಿಯೇ ಒಮ್ಮತವಿಲ್ಲದಿದ್ದೇವೆ. ಇಷ್ಟೇ ಅಲ್ಲ, ಬೆಂಗಳೂರಿಗೆ ಇನ್ನೊಂದು ರೇಲ್ವಾರಿಯ ಸಂಪರ್ಕ ಬಂದು ಬೆಂಗಳೂರು ಇನ್ನೂ ದೊಡ್ಡ ಜಾಗ್ಯನ್ ಆಗುವುದಲ್ಲಾ—ಎಂಬ ಉಬ್ಬಿನ ಮಬ್ಬಿನಲ್ಲಿ ತಮಿಳರ 'ಪೊಟ್ಟಿಯಲ್ಲಿ ಹೊಕ್ಕು ಬೆನ್ನಲ್ಲಿ ಬಿರಿಯುವ ಉದ್ಯಮಕ್ಕೆ ಉತ್ತೇಜನ ಕೊಡುತ್ತಲಿದ್ದೇವೆ.

ಎಣ್ಣೆ ಬರುವಾಗ ಕಣ್ಣು ಮುಚ್ಚಿದಂತೆ

ಕಳೆದ ಜನವರಿಯಲ್ಲಿ ಪ್ರಕಟಿಸಿದ ಬರೆಹವೊಂದರಲ್ಲಿ ದಕ್ಷಿಣ-ರೇಲ್ವೆ ಜನರಲ್ ಮ್ಯಾನೇಜರರು ೩ನೇ ಯೋಜನೆಯ ಹೊಸ ರೇಲ್ವಾರಿಗಳ ಹೊಳಹಿನಲ್ಲಿ ಹಾಸನ ಮಂಗಳೂರು ರೇಲ್ವಾರಿಯ ಉಲ್ಲೇಖವನ್ನಾಗಲೀ ಆಪ್ರತ್ಯಕ್ಷ ಸೂಚನೆಯನ್ನಾಗಲೀ ಮಾಡುತ್ತಿಲ್ಲವಿಷ್ಟೇ ಅಲ್ಲ, ಕರ್ನಾಟಕದ, ಮುಖ್ಯತ ಹೊಸವೇಟೆ, ಬಳ್ಳಾರಿ ಚಿತ್ರದುರ್ಗ, ತುಮಕೂರು ಭಾಗಗಳ ಉಚ್ಚ ಶ್ರೇಣಿಯ ಕಬ್ಬಿಣ ಹಾಗೂ ಮೆಂಗ್ನೀಜ್ ಅದಿರನ್ನು ಸೇಲಂ ಮಾರ್ಗವಾಗಿ ಕಡಲೂರು ಬಂದರಕ್ಕೆ ಸಾಗಿಸುವುದಕ್ಕಾಗಿ ಸೇಲಂ-ಬೆಂಗಳೂರು ರೇಲ್ವಾರಿ ಪ್ರಸ್ತಾಪ ಮಾ ಪ್ರಾಶಸ್ತ್ಯದಿಂದ ಕಟ್ಟಲ್ಪಡುತ್ತಿದೆ ಎಂಬುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ ಲಲ್ಲದೆ ಹೊಸ ಪೇಟೆ ಬಳ್ಳಾರಿ ಭಾಗದ ಹೆಚ್ಚಿನ ಆದಿರನ್ನು ವಿದ್ಯಾಸಕ್ಕೆ ಸಾಗಿಸುವುದಕ್ಕಾಗಿ ಹೊಸವೇಟೆ— ಗುಂತಕಲ್ಲು ಭಾಗದಲ್ಲಿ ಬ್ರಾಡ್‌ಗೇಜ್ ರೈಲ್ವೆಗೂ ಪ್ರಥಮ ಪ್ರಾಶಸ್ತ್ಯ ಕೊಡಲಾಗಿದೆ ಎಂದೂ ಹೇಳಿದ್ದಾರೆ. ನಮ್ಮ ಆದಿನ ನಿರ್ಯಾತಕ್ಕೆ ಪ್ರಾಮುಖ್ಯತೆ ಕೊಡಲೆಂದೇ ಮಂಗಳೂರು ಬಂದರದ ಅಭಿವೃದ್ಧಿ ಹಾಗು ಹಾಸನ

(ಗರನೇ ಪುಟ ನೋಡಿರಿ)

ಬೆಳಕಿನ ಹಬ್ಬ—
ದೀಪಾವಳಿಯ ಶುಭಾಶಯಗಳು

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು		ರೂ. ನ.ಪೈ.ಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು	,, ,,	3-25

ನಿಮ್ಮ
ದಿನನಿತ್ಯದ ಉಳಿತಾಯವನ್ನು | ಮಾಸಿಕ ಉಳಿತಾಯವನ್ನು
ಪಿಗ್ಮಿ ಡಿಪೋಸಿಟುಗಳಲ್ಲಿ | ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ
ವಿನಿಯೋಗಿಸಿರಿ.

THE KARNATAKA BANK LIMITED

3--7--1962



ಅಳಿಯನಿಗೆ ದೀಪಾವಳಿಯುಡುಗೊರೆ

ಶಿವಶಂಕರ—ಮದ್ರಾಸು

"ಶೃಂಗಾರಜಲ್ಲಿ ಹಸುರು ಬಣ್ಣದ ಕಲ್ಲು ಸ್ಟಿಟ್ಟಲ್ಲಿ ನಿನ್ನ ಗಂಡನಿಗೆ ಹೆಚ್ಚು ಮೆಚ್ಚಿಕೆ ಆಗೀತೇ, ಅಥವಾ ನೀಲಿ ಬಣ್ಣದ ಕಲ್ಲನ್ನಿ ಡಬೇಕೆ?" ಕೆಲ ತಿಂಗಳ ಹಿಂದ ಮದುವೆ ಯಾಗಿದ್ದ ಮಗಳೊಡನೆ ತಂದೆ ಕೇಳಿದ ನು. ದೀಪಾವಳಿ ಬರುತ್ತಿದ್ದಂತೆ ಎಕಾಂತ ದಲ್ಲಿ ಸುಖದ ಪ್ರತೀಕ್ಷೆ ಮಾಡುತ್ತಿರುವದ ನ್ನು ಮಗಳ ಮುದುವೆ ಮಾಡಿರುವ ತಾಯಿ--ತಂದೆ ಮಾತ್ರ, ಆಕೆಯ ಮುಖದಲ್ಲಿ ಬದಲಾವಣೆ ಹೊಂದುತ್ತಿರುವ ಕಾಂತಿಯಿಂದ, ಕಂಡುಕೊಳ್ಳ ಬಲ್ಲರು.

"ಅವರಿಗೆ ಯಾವದರಲ್ಲೂ ಇಷ್ಟವೆಂ ಬುದೇ ಇಲ್ಲ, ಅಪ್ಪ." ಉಡುಗೊರಿಗಾಗಿ ತಂದಿದ್ದ ಉಂಗುರವನ್ನು ಪರೀಕ್ಷಿಸುತ್ತ ಆಕೆ ಉಡಿದಳು.

"ಹೇಗಿದ್ದರೂ ಅದು ಅವಳ ಬೆರಳನ್ನೇ ಅಲಂಕರಿಸುತ್ತದೆ. ಅವಳೇನು ಇಷ್ಟಪಡು ತ್ತಾಳೆಂಬುದನ್ನು ವಿಚಾರಿಸಿಕೊಳ್ಳುವದೇ ಉತ್ತಮ," ಮಗನು ಆಕೆಯನ್ನು ಕೆಣಕಿ ದನು.

"ನನ್ನ ಪ್ರೀತಿಯ ತರುಣನೇ, ನಾಲ ಗೆಯನ್ನಷ್ಟು ಸಡಿಲು ಬಿಡಬೇಡ- ಸದ್ಯದ ಲ್ಲೇ ನಿನ್ನ ಕಲ್ಯಾಣ ಕೂಡಾ ನಡೆಯಲಿ ಕ್ಕಿದೆ. ಆಗ ನಾನು ಆದರ-ವಚನಗಳನ್ನು ಹಿಂದಕ್ಕೊಯ್ಯುತ್ತೇನೆ." ಆಕೆಯು ಅರ್ಥ ಕುಜೋದ್ಯ ಆರ್ಥ ಆಸಕ್ತಿಯಿಂದಲೇ ವಿ ಚ್ಚರಿಸಿದಳು. ಆ ಅಂಗುಲೀಯವನ್ನಾಕೆ ತನ್ನ ಬೆರಳಿಗೆ ಹಾಕಿಕೊಂಡು ಅದನ್ನೇ ನೋಡಲಾರಂಭಿಸಿದಳು. ಆಕೆಯ ಮು ಖಾರವಿಂದ ಅರಳಿತು, ಕೆನ್ನೆಗಳು ಕೆಂಪೇ ರಿದುವು. ಎದೆಯು ಬೇಗ ಬೇಗನೆ ಉಬ್ಬ ಲು-ಕುಗ್ಗಲಾರಂಭಿಸಿತು. ಹಾಗೆಯೇ, ನೀಲರತ್ನದ ಸುತ್ತ ಇರುವ ವಜ್ರಗಳ ಕಿ ಣ್ಣು ಕುಕ್ಕುವ ಪ್ರಕಾರದಲ್ಲಿ, ಬಹಳ ದೂ ರದಲ್ಲಿರುವ ತನ್ನ ಪ್ರಿಯ ಪತಿಯ ಚಿತ್ತೈ ವನ್ನಾಕೆ ಕಂಡುಕೊಂಡಳು; ಬಹುಶಃ ಆ ತನು ಕೂಡಾ ತಮ್ಮ ಆಪೇಕ್ಷಿತ ವಿ ಲನದ ಸಂಖ್ಯೆ ಕನಸು ಕಾಣುತ್ತಿದ್ದಿರಬಹು ದು.

"ಅತ್ತೆಯು ಉಂಗುಲೀಯವನ್ನು ಇವ ಳಿಗೆ ಕೊಡಲು ಬಿಟ್ಟಂತೆ" ಎಂದು ತಾಯಿ ಯು ನಿರಾಶೆಯಿಂದ ನುಡಿದಳು.

"ಅವರಿಗೇನೂ ಹೇಳಲಿಕ್ಕಿರುವದಿಲ್ಲ, ಅಪ್ಪಾ. ನೀವಿದನ್ನು ಖರೀದಿ ಮಾಡಿರಿ. ನಾನು ಕೂಡಾ ನೀಲಿ ಕಲ್ಲನ್ನೇ ಮೆಚ್ಚು ತ್ತೇನೆ" ಆಕೆಯು ನಿರ್ಧಾರವಾಗಿ ಉಡಿ ದಳು.

"ಅಳಿಯನೀಗ ಶನಿದೆಶೆಯಲ್ಲಿದ್ದಾನೆ. ನೀಲಿಕಲ್ಲು ಅವನಿಗೊಳ್ಳೆಯದಂದು ನಾ ನು ಭಾವಿಸಿದೆನು." ಅದೇ ವರ್ಣನವನ್ನು ತಾನಾರಿಸಿರುವದರ ಕಾರಣವನ್ನು ತಂದೆ ಯು ತಿಳಿಯಪಡಿಸಿದನು.

"ಅಳಿಯನು ನಿಜವಾಗಿ ಗೌರವಸ್ಥರಲ್ಲಿ ಗುಲಾಬಿಯೇ ಸರಿ ಆದರೆ ಅವನ ಅಮ್ಮ ಮಾತ್ರ ಕಲ್ಲುಗಳು ಚಿಕ್ಕವು ಅಥವಾ ಹಳೆ ಯ ಕಾಲದ ರಚನೆ. ಹೀಗೆ ದೂರುತ್ತಿರಬ ಹುದು." ಮನೆಯಾಕೆ ಮೂಗಾಡಿಸಿದಳು.

"ನೀನೇನೂ ಬೇಸರಪಡಬೇಡಿ ಅಮ್ಮ ಅವರೇನೂ ಅಮ್ಮನ ರಾಗಕ್ಕೆ ಸರಿಯಾಗಿ ಕುಣಿಯು-ವವರಿಯವದಿಲ್ಲ.' ತಾಯಿ-ತಂ ದೆಯರಿಗೆ ಮಗಳು ಧೈರ್ಯವನ್ನಿತ್ತಳು. ಆಕೆ ಆಡಿದಂತೆ ಅವನು ಪೈಕಿ ಹಾಗೂ ಮೂ ನಸಿಕವಾಗಿ ಬೆಳೆಯುತ್ತಿದ್ದಾನೆ." ಅವರ ಅಮ್ಮ ಅದೇನಾದರೂ ಬೇಕೆಸಿದರೂ ಕೂ ಡಾ ಅವರದನ್ನು ಕೊಯಿಯ ಮೇಲೆ ಹಾಕಿ ಕೊಳ್ಳನದೇ ಇಲ್ಲ" ಆಕೆ ಸೇರಿಸಿದಳು.

"ಸರಿ, ಇನ್ನು ನಿನ್ನ ಶೀರೆಯ ವಿಷಯ ವೇನು?" ತಂದೆಯು ಕೇಳಿದನು.

"ಅಪ್ಪಾ, ಯಾವದರಲ್ಲಿ ಬೇಕಾದರೂ ಸೂಕ್ಷ್ಮತೆ ತೋರಿಸಬಹುದು, ಆದರೆ ನ ನ್ನ ಸೀರೆಯ ವಿಷಯದಲ್ಲಿ ಮಾತ್ರ ಹಾಗೆ ಮಾಡಬೇಡಿ. ಕನಿಷ್ಟಪಕ್ಷ ಹತ್ತಂಗುಲ ವಾ ದರೂ ಜರಿ ಅದರಲ್ಲಿರಬೇಕು. ಇಲ್ಲದಿದ್ದಲ್ಲಿ ಮೂಮಿಯು ಮುಖವನ್ನು ನೋಡಲು ನೆನ್ನಿಂದ ಸಾಧ್ಯವಾಗಲಿಕ್ಕಿಲ್ಲ" ಆಕೆ ಮೆಲ್ಲನೆ ಆಡಿದಳು ಆಗ ಒಂದು ಕಪ್ಪು ಮೋಡವು ಕಂಗೊಳಿಸು ತ್ತಿದ್ದ ಆಕೆಯ ಮುಖಾಗಸದಲ್ಲಿ ಹಾ ಯ್ದು ಹೋಯಿತ.

"ಕಳೆದ ಮೂಸದಲ್ಲಿ, ನಿನಗೆ ನೈಲಾ ನ್ ಶೀರೆಯನ್ನು ತೆಗೆದು ಕೊಡುತ್ತಾನೆಂದು ನೀನು ಹೇಳಿದ್ದಿ" ಮಗಳಿಗೆ ಮೂತೆ ಜ್ಞಾಪಿಸಿದಳು.

"ಅತ್ತೆಯವರ ಅಲ್ಲದೆ ಅವರ ಸ್ನೇಹಿತೆ ಯರ ಮನಸೋಕ್ತ ಚುಚ್ಚು ನುಡಿಗಳು ಅವರಿಗೆ ಗೊತ್ತಿಲ್ಲ ಅವರ ತೀಕ್ಷ್ಣಣ ನೋ ಟವನ್ನೆದುರಿಸ ಬೇಕಾಗುವವಳು ನಾನು ನೀವು ಕನಿಷ್ಟ ಪಕ್ಷ ಹತ್ತಂಗುಲ ಜರಿ ಇ ರುವ ಕಾಂಚಿಪುರಂ ರೇಷ್ಮೆ ಶೀರೆಯನ್ನು ತೆಗೆದು ಕೊಡಿರಿ." ಜರಿಯ ವಿಷಯ ಒ ತ್ತಿ ವ ಗಳು ಮುನ್ನುಚಿನೆ ಇತ್ತಳು.

"ಅಳಿಯನ ಪಂಚೆಯ ವಿಷಯವೇ ನು?" ಅಪ್ಪನು ನಂತರದ ವಿಷಯ ಪ್ರ ಸ್ತಾಪಿಸಿದನು

"ಧೋತರಕ್ಕಾಗಿ ಯಾಕೆ ದುಡ್ಡು ದಂ ಡಮೂಡುತ್ತೀರಿ? ಅಳಿಯ ರಾಯರಿಗೆ ಟೆರಿ ಲೀನ್ ಎಂದರೆ ಮೆಚ್ಚಿಕೆಯಾಗಿರಬಹುದು" ಪತಿಯ ಪರವಾಗಿ ಪತ್ನಿ ತಿಳಿಸಿದಳು.

"ಇಂತಹ ನವ-ನವೀನ ಜಾಳಗಳಿಗೆ ನಾನು ಸಮ್ಮತಿ ಕೊಡುವಂತಿಲ್ಲ. ಅಳಿಯ ನಿಗೆ ಜರಿಯುಂಚಿರುವ ಧೋತಿ ಕೊಡಲೇ ಬೇಕು. ನಿನಗೆ ಬೇಕಾಗಿದ್ದಲ್ಲಿ ಒಂದು ಟೆರಿಲೀನ್ ಕೂಡಾ ಕೊಡಿ" ತಾಯಿ ಧೈ ರ್ಯದಿಂದ ತಡೆದಳು.

"ಹಾಗೆ ಕೊನೆಯಲ್ಲಿ ಬೇಗರಿಗೊಂದು ಪತ್ರ ಕಳುಹಿಸಿದರೆ ಸಾಲದೇ?" ತಂದೆ ಕೇಳಿದನು.

"ಇಲ್ಲ, ಇಲ್ಲ, ಇಲ್ಲ. ಯಾವೆಡೆಯಿಂದ ಲೂ ನಂತರ ಪಿಸಿಪಿ ಮಾತು ಬರುವದ ಕ್ಕೆಡೆ ಕೊಡಲೇ ಕೂಡದು. ಬೇಗರಿಗೆ ಹಾಗೂ ನಮ್ಮ ಅಳಿಯನಿಗೆ ಕೂಡಾ ಬರೆ ಯಿರಿ ನೀವು ಯಾವಾಗಲೂ ನಾಮಾನ್ಯ ವಾಗಿ ಕೆಲ ವಾಕ್ಯಗಳನ್ನು ಗೀಚುವಂತೆ ಈ ಪತ್ರಗಳನ್ನು ಬರೆಯಬೇಡಿರಿ. ದೀಪಾ ವಳಿಗಿಂತ ಕನಿಷ್ಟಪಕ್ಷ ಎರಡು ದಿನ ಮುಂಚೆ ಸಕಲ ಪರಿವಾರ ಸಮೇತರಾಗಿ ಇಲ್ಲಿಗೆ ದಯಮಾಡಿಸುವಂತೆ ಹಾಗೂ ದೀ ಪಾವಳಿಯ ನಂತರ ಒಂದು ವಾರ ನ ಮ್ಮೊಡನಿದ್ದು ಅದರಾತಿಥ್ಯಗಳನ್ನು ಸ್ವೀಕ ರಿಸುವಂತೆ ನಮ್ರತೆಯು ಶಬ್ದಗಳಿಂದ ಕೇ ಳಿಕೊಳ್ಳಬೇಕು. ಮದುವೆಯ ನಂತರ ಇ ಲ್ಲಿಗೆ ಬಂದು ನಮ್ಮ ಆದರಾತಿಥ್ಯಗಳನ್ನು ಸ್ವೀಕರಿಸುವ ಸುಸಂದರ್ಭ ಅವರಿಗೆ ಲಭಿ ಸಿಲ್ಲವೆಂಬುದನ್ನು ತಿಳಿಸಿ, ಈ ಸುಸಂದರ್ಭದ ಸಂಪೂರ್ಣ ಸದುಪಯೋಗವನ್ನು ಪಡೆ ಯಬೇಕಾಗಿ ತಿಳಿಸಬೇಕು. ಅಳಿಯನಿಗೆ ಬರೆಯುವ ಪತ್ರದಲ್ಲಿ, ನಿವನೊಂಎಗೆ ಅವ ನ ಅಪ್ಪ ಅಮ್ಮ, ಸಹೋದರ-ಸಹೋದರಿ ಯರನ್ನು.....' ಆಕೆ ಉದ್ದದ ಪಟ್ಟಿಯ ನ್ನೇ ಕೊಡಲಾರಂಭಿಸಿದಳು.

'ಅಮ್ಮ ಅವರ ಮನೆಯ ಹುಡುಗಿಯ ವನನ್ನು ನೀವು ಮರೆತೇ ಬಿಟ್ಟಿರ್ತೀರಿ!" ತ ನ್ನಜನು ತಮಾಷೆಯಿಂದ ಆಶ್ಚರ್ಯ ವ್ಯಕ್ತ ಪಡಿಸಿದನ .

"ಇದು ತಮಾಷೆಯ ಸಮಯವಲ್ಲ, ಮನಸ್ಸಿನಲ್ಲಿಟ್ಟುಕೊಳ್ಳಿ. ಇಂತಹ ಸಂದ ರ್ಭಗಳಲ್ಲಿ ಗಂಡಿನ ಮನೆಯವರ ವರ್ತನೆ ಯ ವಿಷಯ ನಿನಗೇನು ಗೊತ್ತು? ನಮ್ಮ ಅಜಾಗರೂಕತೆಯಿಂದ ಒಂದೆಳ್ಳನಷ್ಟಾದ ರೂ ಕೊರತೆಯುಂಟಾದಲ್ಲಿ ತೀರಿತು, ಅವ ರ ಚುಚ್ಚು ನುಡಿಗಳಿಂದ ನನ್ನ ಪಾಪದ ಹುಡುಗ ತಲೆ ಎತ್ತಿ ನಡೆಯುವಂತಿಲ್ಲ, ಕ ಣ್ಣೀರು ಸುರಿಸಿ ಸುರಿಸಿ ಒಣಗಿ ಹೋಗ ಬೇಕಾದೀತು." ತನ್ನ ಹುಡುಗ ಬುದ್ಧಿಯ ಹುಡುಗನನ್ನು ಆಕೆ ಹೆದರಿಸಿದಳು. ಗಂಡಿ ನ ಕಡೆಯವರನ್ನು ಅಷ್ಟು ಕಾಲುವಾಗಿ ಕಾಣಲು ಸಾಧ್ಯವಿಲ್ಲವೆಂಬುದರ ಬೇಲೆ ಆಕೆ ಉಪದೇಶವನ್ನಿತ್ತಳು. ಆದಕ್ಕಾಗಿ ಕೆಲ ಘಟನೆಗಳನ್ನು ಸಹಾಯಕ್ಕಾಗಿ ಸೇರಿ ಸಿಕೊಂಡಳು.

"ನೀವು ಅನಾವಶ್ಯಕವಾಗಿ ತಳಮಳ ಗೊಂಡಿರುವಿರಿ, ಅಲ್ಲದೆ ಬುಡರಿಲ್ಲದ ಭ ಯದಿಂದ ಬನ್ನ ಪಡುತ್ತಿರುವಿರಿ, ಅಮ್ಮ ನಮ್ಮ ಭಾವನ ಸೂಚಿಯವರು ಬಹಳ ಪ್ರ ಗತಿ ಶೀಲರಿದ್ದಾರೆ.' ಪುತ್ರನು ಅವರ ಪ ರವಾಗಿ ವಾದ ಹೂಡಿದನು.

"ಪ್ರಗತಿ ಉಡುಸು-ತೊಡುಸುಗಳಲ್ಲಿ ಮಾತ್ರ, ಹಾಗೂ ಊಟದ ಮೇಜಿನ ಮೇ ಲೆ ಮಾತ್ರ ಕಸಿದುಕೊಳ್ಳುವದರಲ್ಲಿ ಹಾ ಗೂ ಯಥಾಚಾರ ವರ್ತನೆಯ ವಿಷಯ ಗಳಲ್ಲಿ ಅವರಿಷ್ಟು ಹಿಂದುಳಿಗವರು ಎಂದ ರೆ ಅವರಿನ್ನೂ ಕ್ರೈವನ ಕಾಲದಲ್ಲಿದ್ದಾರೆ." ಗಂಭೀರವಾಗಿಯೇ ಆಕೆ ಗುಡುಗಿದಳು.

ತಮ್ಮ ತಾಯಿಯ ಜಾಂಠ್ರಿಕ ಜ್ಞಾನ ಭಂಡಾರದ ಬೀಗ ತೆರೆದುದನ್ನು ಕಂಡೊ ಡನೆ ಮಕ್ಕಳು ಬಿದ್ದು ಎದ್ದು ನಗಲಾರಂ ಭಿಸಿದುವು

"ಲೇ, ಯಾವಾಗ ಹಾಗೂ ಎಲ್ಲಿ ನೀ ನು ಕ್ರೈವನ ಕಾಲದ ದಕ್ಷಿಣ ಭಾರತದ [ಉಡ ಪಿಯ] ಇತಿಹಾಸವನ್ನು ಅಭ್ಯಾಸ ಮಾಡಿರ ವದೇನೇ?" ತಂದೆ ಕೂಡಾ ತ ಮಾಷೆ ಹಾಗೂ ವಿನೋದದಲ್ಲಿ ಭಾಗವಹಿ ಸಿದನು..

ಗಂಡಿನ ಕಡೆಯಲ್ಲಿ

"ಸೋದರಿಯ ಮನಯವರು ನಮ್ಮನ್ನು ದೀಪಾವಳಿಗೆ ಆಮಂತ್ರಿಸಿದ್ದಾರೆ." ಗಂಡಿ ನ ತಂದೆ ಎಂ ತನ್ನ ಹೆಂಡತಿಗೆ ಹೇಳಿದನು.

"ಎಂತಹ ಮಾತು—ಆರುವತ್ತು ರೂಪ್ಯಾ ಖರ್ಚು ಮಾಡಿ ಇಲ್ಲಿಂದ ಅಲ್ಲಿಗೆ ಹೋಗಲು ಯಾರು ಇಷ್ಟಪಡುತ್ತಾರೀಂದ್ರೆ? ಹೌದು. ನಮ್ಮ ಹುಡುಗನೇನೋ ಹೋಗಬೇಕು" ಮಡದಿ ಮರು ನುಡಿದಳು.

'ನಮಗದರಿಂದೇನು ನಷ್ಟ?" ಆತನು ಕೇಳಿದನು.

"ಗಂಡಿನ ಕಡೆಯವರು ಉಡುಗೊರೆ ನ್ನು ಕೊಡವದು ಸಾಧಾರಣವಾಗಿ ರೂಢಿಯಲ್ಲಿಲ್ಲ. ಆದರೂ ನಮ್ಮ ಹುಡುಗನು ಒಂದೇ ಕೈಯಲ್ಲಿ ಹೋಗಲಿಕ್ಕಾಗುತ್ತದೆಯೇಂದ್ರೆ? ಅದು ಚೆನ್ನಾಗಿರುವದಿಲ್ಲ. ಹು ಡುಗನಿಗಾಗಿ ಅವನೊಂದು ಸಾಧಾರಣ ೨೦-೨೫ ರೂಪ್ಯಾ ಬೆಲೆಯುಳ್ಳ ಕೃತಕ ರೇಷ್ಮೆಯ ಶೀರೆ ಕೊಡಬೇಕಾದರೆ ಸಾಕು" ಮನಸ್ವಿನಿಯು ಆಕ್ಷೇಪಿಸುತ್ತಿದ್ದರೂ ಅವಳು ಅರುಹಿದಳು.

"ಹಾಗಿದ್ದಲ್ಲಿ ನನಗೆ ಬರಲಿಕ್ಕಾಗುವ ದಿಲ್ಲವೆನ್ನುವದನ್ನವರಿಗೆ ತಿಳಿಸಿಬಿಡು ತ್ತೇನೆ."

"ಅದು ಸರಿ. ಹಾಗೆಯೇ. ನೀವು ವಿಷ ಯದಿಂದಲೇ ಈ ಹಿಂದೆ ಅವರು ಕೊಡು ತ್ತೇನೆಂದು ವಾಗ್ದಾನವಿತ್ತಿರುವ ವಜ್ರದುಂ ಗುರ ಹಾಗೂ ಬಂಗಾರದ ಗಡಿಯಾರದ ಸರದ ಕಾಲು ಜ್ಞಾಪಿಸಿರಿ. ಅದರೊಂದಿಗೆ

(ಉಳಿದ ಸುದ್ದಿ ಪುಟ ೨೮)

LIFE INSURANCE CORPORATION OF INDIA

Udipi Divisional Office,
'Jeevan Krishna',
P. B No 8,
UDIPI.

It is proposed to let the following portions in the Canara Mutual Compound belonging to the Life Insurance Corporation of India, at the junction of Court Road and Church Road, Udipi.

Shop fronts on the ground floor of Canara Mutual Building bearing Door Nos

(i) 13—3—11
(ii) 13—3—12

Interested parties may apply in the prescribed form which should reach the undersigned not later than 31st October 1962. The application forms can be had from the Establishment Department at the Divisional Office during Office hours on any working day.

Udipi,
17—10—1962.

T. R. A. Pai
Sr. Divisional Manager.

ಧ್ವನಿ ತರಂಗಗಳ ವೇಗವನ್ನು ಮೀರಿದ ವಿಮಾನಗಳು ಮತ್ತು ನಾಗರಿಕೋಡ್ಡಾಣ ‡

ಲೇ: ಪ್ರೊ. ಕೆ. ಎಸ್. ನವಣೂರ, ಎಂ. ಎಸ್ಸಿ,
ಕರ್ನಾಟಕ ಸಾಯನ್ಸ್ ಕಾಲೇಜ, ಧಾರವಾಡ.

ಪ್ರಾಸ್ತಾವಿಕ

ಧ್ವನಿ ವೇಗದ ಎರಡರಿಂದ ಮೂರರಷ್ಟು ವೇಗದ ವಿಮಾನಗಳ ಆಕಾರ, ಆಂತರಿಕ ರಚನೆ ಮತ್ತು ಕಾರ್ಯಾಚರಣೆ ಇವುಗಳಿಗೆ ಸಂಬಂಧಿಸಿದ ಎಲ್ಲ ಅಡೆತಡೆಗಳು ನಿವಾರಣೆ ಹೊಂದಿ ಇವುಗಳನ್ನು ವ್ಯಾಪಕ ಹಾರಿಕವಾಗಿ ಉಪಯೋಗಿಸುವ ಕಾಲವು ಸನ್ನಿಹಿತವಾಗಿದೆ ಎಂದು ನಾವೆಲ್ಲರೂ ಆತಿಶಯಿಸಬಹುದಾಗಿದೆ. ಇವುಗಳು ಎಂದಿನಿಂದ, ಬೇರೆ ಈಗಾಗಲೇ ಬಳಕೆಯಲ್ಲಿರುವ ವಿಮಾನಗಳಂತೆ ಉಪಯೋಗದಲ್ಲಿ ಬರಬಹುದು ಎಂಬ ಪ್ರಶ್ನೆಯು ಚರ್ಚೆಯ ವಿಷಯವಾಗಿದೆ.

ನಾರಿಗೆಯ ಇತಿಹಾಸವನ್ನೇ ಹೊಸಹಾಗಿ ರೂಪಿಸಬಹುದಾದ ಈ ಪ್ರಶ್ನೆಯ ಉತ್ತರವು, ನಮ್ಮ ಜೀವನದಲ್ಲಿಯೆ ಕ್ರಾಂತಿಯನ್ನು ತರುವಂತಹದು. ಇಂದು ಈಗಾಗಲೇ ಹಾರಡಲಿರುವ ಸಾಮಾನ್ಯ ವಿಮಾನಗಳಿಗೆ ಎದುರಿಸಲು ಆಗತ್ಯವಿರದಿರುವ ಎರಡು ತೀರಾ ಹೊಸ ಸಮಸ್ಯೆಗಳನ್ನು ಈ ಹೊಸ ರೀತಿಯ ವಿಮಾನಗಳು ಎದುರಿಸಬೇಕಾಗುವವು. ಈ ಎರಡು ಸಮಸ್ಯೆಗಳನ್ನು ಲಾಭವಾಗುವ ದೃಷ್ಟಿಕೋನದಿಂದ ಎದುರಿಸುವುದು ಅಷ್ಟು ಸುಲಭವಾದುದಲ್ಲ ಎಂದು ಹೇಳಬಹುದು:.

ಸಮಸ್ಯೆಗಳು

ಮೊದಲನೆಯ ಸಮಸ್ಯೆಯು, ನಾವು ಯಾವುದನ್ನು Sonic Booms ಎಂದರೆ ಧ್ವನಿಯು ಗರ್ಜನೆ ಎಂದು ಕರೆಯುವೆವೋ ಅದಕ್ಕೆ ಸಂಬಂಧಪಟ್ಟದ್ದು ಎರಡನೆಯ ಸಮಸ್ಯೆಯು ವಿಶ್ವಕಿರಣಗಳಿಗೆ (Cosmic Rays) ಸಂಬಂಧಿಸಿದುದು. ಈಗ ಈ ಸಮಸ್ಯೆಗಳ ವಿವರಗಳನ್ನು ಮತ್ತು ಅವುಗಳ ಪರಿಹಾರಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿವೇಚಿಸೋಣ.

ಧ್ವನಿಯು ವೇಗವು ಸಾಧಾರಣವಾಗಿ ತಾಪಿಗೆ ೭೫೦ ಮೈಲುಗಳಷ್ಟಿರುವುದು. ಈ ಹೊಸ ವಿಮಾನಗಳ ವೇಗವು ಧ್ವನಿ ವೇಗದ ಎರಡರಿಂದ ಮೂರರಷ್ಟನ್ನೂ ಮೀರಿರುವುದು ಎಂದು ಹೇಳಿದಲ್ಲಿ, ಇವುಗಳ ಪ್ರಚಂಡ ವೇಗಗಳ ಕಲ್ಪನೆಯು ಬರುವುದು. ಈಗ ಧ್ವನಿಯ ಗರ್ಜನೆಯ ಸಮಸ್ಯೆಯನ್ನು ವಿವರಿಸಲು ೧೦೦ ಟನ್ನುಗಳಷ್ಟು ಭಾರದ ೧೦೦ ಪ್ರವಾಸಿಕರನ್ನೊಳಗೊಂಡ ಇಂತಹ ಒಂದು ವಿಮಾನವು ಭೂಮಿಯಿದ ೭೦,೦೦೦ ಫೂಟುಗಳ ಎತ್ತರದಲ್ಲಿ ಹಾರುತ್ತಿರುವುದು ಎಂದು ಕಲ್ಪಿಸೋಣ. ಇದು ತನ್ನ ಮಾರ್ಗದಾದ್ಯಾಂತವೂ ಚಲಿಸುವಾಗ ಗುಡುಗಿನ ಸಪ್ಪಳವನ್ನು ಹೋಲುವ ಗರ್ಜನೆಯನ್ನು ಮಾಡುವುದಲ್ಲದೆ, ಕಲಕಲ ಶಬ್ದವನ್ನೂ ಮಾಡುವುದು ಮತ್ತು ಕಿಡಕಿಗಳನ್ನು ಚೂರುಚೂರು ಗೊಳಿಸುವದು ಹಾಗು ೭೦ ಮೈಲುಗಳ ಆಗಲವಾದ ಪಟ್ಟಿಯೊಳಗಿನ ಜನರ ನಿದ್ರೆಯನ್ನೂ ಭಂಗಗೊಳಿಸುವುದು. ತಮ್ಮ ಪ್ರಯಾಣದ ಅವಧಿಯನ್ನು ಹೆಲವು ತಾಸುಗಳಷ್ಟು ಕಡಿಮೆ ಮಾಡಿಕೊಳ್ಳಬೇಕೆನ್ನುವ ನೂರಿಷ್ಟು ಜನರು ಜನ ಸಂಖ್ಯೆಯಲ್ಲಿ ನಿಬಿಡವಾದ ಪ್ರದೇಶಗಳಲ್ಲಿ ವಾಸಿಸುವ ಕೋಟ್ಯಾವಧಿ ಜನರ ನಿದ್ರಾ ಭಂಗಕ್ಕೆ ಕಾರಣವಾಗುವುದು, ಇತಿಹಾಸದಲ್ಲಿಯೇ ಅಪೂರ್ವ ಸಂಗತಿಯೆಂದು ಎನಿಸಬಹುದಾಗಿದೆ. ಹೀಗಾಗುವುದು ನ್ಯಾಯವೇ ಎಂಬುದನ್ನು ಇಂತಹ ಪ್ರಯಾಣಗಳ ಪುರಸ್ಕರ್ತರು ಉತ್ತರಿಸಬೇಕಾಗುವುದು ಇದು ಪರಮಾವಧಿಯ ಅನ್ಯಾಯದಬ್ಬಿಗುವುದೆಂದು ಅಕಾಠೋಡ್ಯಾಣಗಳಲ್ಲಿ ಅತಿಶಯವಾದ ಆಸಕ್ತಿಯನ್ನು ತೋರ್ಪಡಿಸುವವರೂ ಸಹ ಆಭಿಪ್ರಾಯಪಡಬೇಕಾಗುವದು.

ಇಂತಹ ವಿಮಾನಗಳಲ್ಲಿ ಚಲಿಸುವ ಪ್ರಯಾಣಿಕರು ಮತ್ತು ಈ ತೆರದ ಪ್ರವಾಸಗಳ ಪುರಸ್ಕರ್ತರು ಸಮರ್ಥನೆಗೆಂದು ಹಲವು ಮಾತುಗಳನ್ನು ನಮ್ಮೆದುರು ಇರಿಸಬಹುದಾಗಿದೆ. ಉಗಿ ಬಂಡಿಗಳಿಂದ, ಮೋಟಾರುಗಳಿಂದ, ಸಾಮಾನ್ಯ ವಿಮಾನಗಳಿಂದ ಪ್ರಯಾಣಗಳನ್ನು ಕೈಕೊಳ್ಳುವಾಗ ಸಪ್ಪಳವಾಗದೇ? ಇದೇನೋ ನಿಜ. ಆದರೆ ಇಂತಹ ಸಪ್ಪಳದಿಂದ ಅನಾನುಕೂಲವಾವುದು ಕೇವಲ ಹಲವೇ ಜನರಿಗೆ ಮಾತ್ರ. ಆದರೆ ಈ ಹೊಸ ವಿಮಾನಗಳಿಂದ ಉಂಟಾಗುವ ಗರ್ಜನೆಯಿಂದ ತಪ್ಪಿಸಿಕೊಳ್ಳುವುದು ಆಸಾಧ್ಯಕೋಟಿಯದು. ಇಂತಹ ಪ್ರಯಾಣಗಳು ಖಂಡಾಂತರಗಳ ನಡುವೆ ವರ್ಷಟ್ಟುವಾದರೆ, ವಿಜ್ಞಾನದ ಈ ವರವು ಮೂನವರಿಗೆ ಶಾಪವಾಗಿ ಪರಿಣಮಿಸುವಲ್ಲಿ ಸಂದೇಹವಿಲ್ಲ. ರೇಲ್ವೆ, ಸಾಮಾನ್ಯ ವಿಮಾನ ಮುಂತಾದವುಗಳು ಚಲಿಸುವಾಗಿನ ಸಪ್ಪಳವು ಕ್ರಮೇಣವಾಗಿ ವಿರಳತೆಗಳಲ್ಲಿ ಪರಿಣಮಿಸುವುದು ಮತ್ತು ಇವುಗಳಿಗೆ ನಾವು ಹೊಂದಿಕೊಳ್ಳಲು ಸಾಧ್ಯ. ಆದರೆ ಹೊಸ ವಿಮಾನಗಳ ಧ್ವನಿ ಗರ್ಜನೆಯು ಸೂರ್ವ ಸಂಕೇತದಿಂದ ಬರುವಂತಹದಲ್ಲ ಮತ್ತು ಇದು ಬಹಳೇ ತೀಕ್ಷ್ಣವಾದ್ದು ಎಂಬ ಮಾತನ್ನು ಗಮನಿಸಬೇಕಾಗುವದು.

ಹೊಸ ವಿಮಾನಗಳು ಮತ್ತು ನಾಗರಿಕರು

ಹೊಸ ವಿಮಾನಗಳು ನಿದ್ರಾಭಂಗಕ್ಕೆ ಕಾರಣವಾಗುವವು ಎಂಬ ಮಾತನ್ನು ನಾವು ಈ ಮೊದಲೇ ತಿಳಿದಿದ್ದೇವೆ. ನಿದ್ರಾ ಭಂಗವು ನಮ್ಮ ಆರೋಗ್ಯಕ್ಕೆ ಮಾರಕವಿರುವಂತೆ ಇದರಿಂದಾಗಿ ನಮ್ಮ ಕೆಲಸ ಮಾಡುವ ಶಕ್ತಿಯೂ ಕಡಿಮೆಯಾಗುವದು. ಇಂತಹ ನಷ್ಟಗಳನ್ನು ನಮಗೆ ಯಾರು ಭರತಿಮಾಡಿ ಕೊಡುವರು? ಮೇಲಾಗಿ ದುರ್ಬಲ ಹೃದಯವುಳ್ಳವರಿಗೆ ಈ ವಿಮಾನಗಳ ಧ್ವನಿಗರ್ಜನೆಯು ಮಾರಕವಾಗಿ ಪರಿಣಮಿಸುವದು.

ಈ ಪರಿಸ್ಥಿತಿಯಲ್ಲಿ ನಾವು ನಿರ್ವಿಕಾರ ಚಿತ್ತರಾಗಿ ಇಂತಹ ವಿಮಾನಗಳ ಭವಿಷ್ಯವನ್ನು ಕುರಿತು ವಿವೇಚಿಸುವ ಹಂತದಲ್ಲಿ ಈಗ ಇರುವೆವು. ಮೊದಲನೆಯದಾಗಿ ನಾವು ಇವುಗಳನ್ನು ಪೂರ್ತಿಯಾಗಿ ಬಹಿಷ್ಕರಿಸಬೇಕೇ ಅಥವಾ ಹಲವು ಸಂದರ್ಭಗಳಲ್ಲಿ ಇವುಗಳ ಹಾರಾಟವನ್ನು ಸಹನೆಯಿಂದ ತಡೆಯು ಬೇಕೆ? ಯಾವ ದೃಷ್ಟಿಕೋನದಿಂದಲೂ ಈ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸಿದರೆ, ಒಂದೆರಡು ಪ್ರಸಂಗಗಳಲ್ಲಿ ಮಾತ್ರ ಹೆಲವು ನಿರ್ಬಂಧನೆಗಳಿಗೆ ಇವುಗಳನ್ನು ಒಳಪಡಿಸಿ ಹಾರಲು ಬಿಡಬಹುದು ಎಂದು ಹೇಳಬಹುದು. ವೈದ್ಯಕೀಯ ಮತ್ತು ಸಾಮಾಜಿಕ ಕಾರಣಗಳೇ ಈ ಮಹತ್ವದ ಪ್ರಸಂಗಗಳು. ಇಲ್ಲಿ ಅದ್ಭುತವಾಗುವ ಧ್ವನಿ ಗರ್ಜನೆಯು ಒಂದು ನಿಮಿಷವನ್ನು ಮೀರ್ಕದಂತೆ ಇವುಗಳ ಹಗಲಿನಲ್ಲಾಗಲಿ ಇಲ್ಲವೆ ರಾತ್ರಿ ಕಾಲದಲ್ಲಾಗಲಿ ಸಮುದ್ರಗಳ ಮೇಲಿನಿಂದ ಇಲ್ಲವೆ ವಿರಳದಿಂತಿರುವ ವಸತಿ ಪ್ರದೇಶಗಳ ಮೇಲೆ ಹಾರಬಹುದು ಎಂಬುದೇ ಈ ನಿರ್ಬಂಧಗಳು.

ಇಂತಹ ನಿರ್ಬಂಧಗಳಿಗೆ ಒಳಪಟ್ಟು ಹಾರುವ ವಿಮಾನಗಳು ಆಕಾರದಲ್ಲಿ ಚಿಕ್ಕವಾಗಿರ ಬೇಕಾಗುವುದು ಮತ್ತು ಹೆಣದ ದೃಷ್ಟಿಯಲ್ಲಿ ಇವುಗಳು ಲಾಭದಾಯಕವಿಸಿಸತ್ತೆ, ಯಾವುದೊಂದು ಹೊಸ ಉದ್ದಿಮೆಯು ವ್ಯಾರಂಭವಾದೊಡನೆ ಇವುಗಳಲ್ಲಿ ಹಣವನ್ನು ತೊಡಗಿಸಿ ಲಾಭ ಪಡೆಯಲು ಅನೇಕ ಸಾರ್ವಜನಿಕರು ಮುಂದೆ ಬರುವುದುಂಟು. ಈ ವರೆಗೆ ವಿವೇಚಿಸಿದ ಎಲ್ಲ ಮಾತುಗಳನ್ನು ಗಮನಿಸಿ ಮುಂದುವರಿಯುವುದು ಸಾರ್ವಜನಿಕರಿಗೂ ಆವರಂತೆಯೇ ಇಂತಹ ವಿಮಾನಗಳ ಉದ್ದಿಮೆಗೂ ಪ್ರಯೋಜನಕಾರಿ ಎನಿಸುವದರಲ್ಲಿ ಸಂದೇಹವಿಲ್ಲ. ಮುಖ್ಯವಾಗಿ ಈ ಧ್ವನಿ ಗರ್ಜನೆಯನ್ನು ಮತ್ತು ಬೇರೆ ಆಡೆತಡೆಗಳನ್ನು ನಿವಾರಿಸಲು ಹೇಗೆ ಪ್ರಯತ್ನಿಸಬೇಕು ಎಂಬುವನ್ನು ವಿಜ್ಞಾನಿಗಳಿಗೆ ಬಿಟ್ಟುಕೊಟ್ಟು ಈ ಮೊದಲೇ ವಿವರಿಸಿದಂತೆ ಎರಡನೆಯ ಸಮಸ್ಯೆಯಾದ ವಿಶ್ವಕಿರಣಗಳನ್ನು ಕುರಿತು ವಿವೇಚಿಸುವಾ.

ವಿಶ್ವಕಿರಣಗಳ ಸಮಸ್ಯೆ

ವಿಶ್ವಕಿರಣಗಳು ಬಾಹ್ಯಾಕಾಶದಿಂದ ನಮ್ಮ ಭೂಧ್ವಿಗೆ ಬರುವುವೆಂದು ತಿಳಿದಿದೆ. ಇವುಗಳ ಒಟ್ಟು ಮೊತ್ತದ ಶಕ್ತಿಯು ಭೂಮಿಯಿಂದ ೭೦,೦೦೦ ಫೂಟುಗಳ ಎತ್ತರದಲ್ಲಿ ಎಂದರೆ ಎಲ್ಲಿ ನಮ್ಮ ಈ ಹೊಸ ವಿಮಾನಗಳ ಮಾರ್ಗವು ಹಾಯುವುದೋ ಅಲ್ಲಿಯೇ ಇರುವುದು. ವಿಶ್ವಕಿರಣಗಳ ಶಕ್ತಿಯು ಈ ಎತ್ತರದ ಮಟ್ಟದಲ್ಲಿ ಭೂಸ್ಪೃಷ್ಟದ ಮೇಲೆ ಇರುವ ಇವುಗಳ ಶಕ್ತಿಗಿಂತಲೂ ೫೦೦ರಿಂದ ೩೦೦ ಮಡಿಗಳಷ್ಟು ಹೆಚ್ಚಾಗಿರುವದು. ಹೆಚ್ಚಿನ ಪ್ರಮಾಣದಲ್ಲಿ ಅತ್ಯಂತ ಶಕ್ತಿಯುತವಾದ ಜಲಜನಕದ ಬೀಜಾಣುಗಳ (Nucleus) ಘಟಕಗಳಾದ ಪ್ರೋಟಾನ್‌ಗಳನ್ನು ಒಳಗೊಂಡ ಮೂಲ ವಿಶ್ವಕಿರಣಗಳು, ಈ ಎತ್ತರದಲ್ಲಿ ಭೂಮಿಯೆಡೆಗೆ ಪ್ರವೇಶಿಸುವವು. ಆದೇ ಪ್ರಕಾರವಾಗಿ ನಾರಬಿಂದ ಮೇಲೆ ಚಿಮ್ಮುವಟಿಕೆಗಳು ಹೆಚ್ಚಿದಾಗ ವಿಶ್ವಕಿರಣಗಳ ಶಕ್ತಿಯು ಹೆಚ್ಚುವುದಲ್ಲದೆ, ಇವುಗಳು :

(೧೬ನೇ ಪುಟ ನೋಡಿ)

ದೀಪಾವಳಿಯ ಶುಭದಿನ
ನವ ವರ್ಷದ ಶುಭಾಶಯಗಳು

ಹಳೆವರ್ಷ ಕಳೆದು ನವವರ್ಷ ಆರಂಭವಾಗುತ್ತಲೇ ವ್ಯಾಪಾರಸ್ಥರು ತಮ್ಮ ಅಭಿವೃದ್ಧಿಯ ಮಟ್ಟದಲ್ಲಿ ಮೇಲಕ್ಕೇರುತ್ತಾ ಬರುವರು.

ಮುಂಬರುವ ದಿನಗಳಲ್ಲಿ "ನಿನ್ನ ಸೇವೆಯೇ ನಮ್ಮ ಗುರಿ" ಎಂಬ ಧ್ಯೇಯದಿಂದ ದುಡಿಯುತ್ತಿರುವವರಾದ ನಾವು ನಿಮ್ಮ ಪ್ರಶಂಸೆಗೆ ಪಾತ್ರರಾಗಲಿ ಎಂದು ಕೋರುತ್ತೇವೆ.

"ಕೊಪ್ಪೊರೇಶನ್ ಬೇಂಕಿನಿಂದ" ನಿಮಗೆಲ್ಲರಿಗೂ
ನವವರ್ಷದ ಶುಭಾಶಯೆಗಳು.

ದಿ ಕೆನರಾ ಬೇಂಕಿಂಗ್
ಕೊಪ್ಪೊರೇಶನ್ ಲಿ.

ರಿಜಿಸ್ಟರ್ಡ್ ಆಫೀಸು
ಉಡುಪಿ

ಆಡಳಿತ ಆಫೀಸು
ಮಂಗಳೂರು

ಸ್ಥಾಪನೆ 1906

‡ ಜೂನ್ ೧೯೬೧ ಸಾಯನ್ಸ್ ಡಾಯಜೆಸ್ಟಿನಲ್ಲಿ Bo Lundberg ಅವರು ಬರೆದ ಲೇಖನವನ್ನು ಉಪಯೋಗಿಸಿ ಬರೆಯಲಾದುದು—ಲೇ.

ಉಚಿತ ವಾಚನಾಲಯ

ಶ್ರೀಮತಿ ಆರ್. ಕಲ್ಯಾಣಮ್ಮ

ಪಾತ್ರ ಪರಿಚಯ

ದೇವೇ ಗೌಡ— ಪಂಚಾಯತ ಅಧ್ಯಕ್ಷರು.
ಮಂಜೇ ಗೌಡ— ಪಂಚಾಯತಿ ಗುಮಾಸ್ತ
ರಂಗಸ್ವಾಮಿ, ಗೋವಿಂದಯ್ಯ } ಪಂಚಾಯತ
ಮೂದಯ್ಯ, ಹನುಮಂತಪ್ಪ } ಸದಸ್ಯರು

(ದೃಶ್ಯ ೧)

ಕಾಲ—ಮಧ್ಯಾಹ್ನ—ಸ್ಥಳ—ಗ್ರಾಮ ಪಂಚಾಯತಿ ಕಾರ್ಯಾಲಯ.

ದೇವೇ ಗೌಡ— (ದೇವೇ ಗೌಡನು ಎಂದು ಮೇಜಿನ ಮುಂದೆ ಕುಳಿತು ಕಾಗದ ಪತ್ರಗಳನ್ನು ನೋಡಿದ ನಂತರ) ಮಂಜೇ ಗೌಡರೇ! ಎಲ್ಲರನ್ನೂ ಮೀಟಿಂಗಿಗೆ ಬರುವಂತೆ ಹೇಳಿದೀರಾ?

ಮಂಜೇ ಗೌಡ— ಎಲ್ಲರೂ ಬರುವುದಾಗಿ ಹೇಳಿದ್ದಾರೆ ಸ್ವಾಮಿ!

ದೇವೇ ಗೌಡ— (ಗಡಿಯಾರದ ಕಡೆ ನೋಡಿ ಮೂರು ಹೊಡೆಯಲು ಇನ್ನೂ ಐದು ನಿಮಿಷ ಮಾತ್ರವಿದೆ—ಹೊತ್ತಾಗಲಿಲ್ಲವೇ—ಹುಂ—ಸ್ವಲ್ಪ ಹೊತ್ತು ನೋಡೋಣ.

(ಪದಸ್ಯರು ಒಬ್ಬೊಬ್ಬರಾಗಿ ಪ್ರವೇಶಿಸುವರು)

ದೇವೇ ಗೌಡರು— ಬನ್ನೀ ರಂಗಸ್ವಾಮಿ—ಗೋವಿಂದಯ್ಯ—ಬನ್ನಿ ಎಲ್ಲರೂ ಕುಳಿತ ಕೊಳ್ಳಿ. ಈ ದಿನ ಮುಖ್ಯವಾದು ದೊಂದು ವಿಷಯ ಮಾತನಾಡಬೇಕೆಂದೇ ಸಭೆಕರೆದಿದೆ.

ರಂಗಸ್ವಾಮಿ— ಮಂಜೇ ಗೌಡರೂ ಹಾಗೆಂತಲೇ ಹೇಳಿದರು— ಏನೋ ಎಂತೋ ಅಂದುಕೊಂಡು ಎಲ್ಲರೂ ಜಾಗ್ರತೆಯಾಗಿ ಬಂದೆವು

ದೇವೇ ಗೌಡರು— ಏನೂ ಇಲ್ಲ—ನಮ್ಮೂರಿನಲ್ಲಿ ಈಗ ವಾಚನಾಲಯವೇ ಇಲ್ಲದಿರುವುದಲ್ಲವೇ—ಅದಕ್ಕೊಂದು ವ್ಯವಸ್ಥೆ ಮಾಡೋಣವೆಂದು ತೋರಿತು. ನಿಮ್ಮೆಲ್ಲರೊಡನೆ ಮಾತನಾಡಿ ನಂತರ ಏನಾದರೂ ಮಾಡೋಣವೆಂದೇ ಹೇಳಿ ಕಳುಹಿಸಿದೆ.

ರಂಗಸ್ವಾಮಿ— (ಉತ್ಸಾಹದಿಂದ) ಅದು ಅವಶ್ಯವಾದುದೇ—ಈಗ ಜಗತ್ತಿನ ವಿಷಯ ಕೂಡ ತಿಳಿಯದೆ ನಮ್ಮ ಗ್ರಾಮದವರು ಬಹಳ ತೊಂದರೆ ಪಡುತಿದ್ದಾರೆ.

ಗೋವಿಂದಯ್ಯ— ಒಳ್ಳೇ ಯೋಚನೆಯೇ ಸ್ವಾಮಿ—ಆದಷ್ಟು ಜಾಗ್ರತೆ ನಾವಿಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿಯೇ ಬಿಡೋಣ.

ದೇವೇ ಗೌಡರು— ಏನಯ್ಯಾ-ಮೂದಯ್ಯ— ಹನುಮಂತಯ್ಯನವರೇ — ಮಾತಾಡದೆ ಸುಮ್ಮನೆ ಕುಳಿತಿದೀರಲ್ಲಾ—ನಿಮ್ಮಭಿಪ್ರಾಯವನ್ನೂ ತಿಳಿಸಿ.

ಮೂದಯ್ಯ— ನಮ್ಮಭಿಪ್ರಾಯವೇನು ಸ್ವಾಮಿ-ವಾಚನಾಲಯವು ನಮ್ಮ ಗ್ರಾಮಕ್ಕೆ ಅತ್ಯಾವಶ್ಯಕವಾಗಿ ಬೇಕಾದ ವ್ಯವಸ್ಥೆ ಬೇಗ ಸ್ಥಾಪಿಸಿದರೆ ಅನುಕೂಲವೇ —

ದೇವೇ ಗೌಡರು— ಹಾಗಾದರೆ ವಾಚನಾಲಯದ ಸ್ಥಾಪನೆಗೆ ಎಲ್ಲರ ಅನುಮತಿಯೂ ಇದೇ ತಾನೆ?

ಎಲ್ಲರೂ (ಒಟ್ಟಾಗಿ) ಹೌದು-ನಮ್ಮೆಲ್ಲರ ಅನುಮತಿಯೂ ಇದೆ

ದೇವೇ ಗೌಡರು— ವಾಚನಾಲಯದ ಸ್ಥಾಪನೆಗೆ ನಮ್ಮ ಗ್ರಾಮಪಂಚಾಯತಿಯಿಂದ ಐದುನೂರು ರೂಪಾಯಿ ಹಾಕಿ ಕೊಳ್ಳೋಣ ಉಳಿದುದನ್ನು ಚಾರ್ವಜನಿಕರಿಂದ ವಸೂಲ್ಮಾಡಬೇಕಾಗಿದೆ. ಇದಕ್ಕೆ ನಿಮ್ಮ ಒಪ್ಪಿಗೆಯಿದಯೋ?

ಗೋವಿಂದಯ್ಯ— ಅದು ಸಾಧ್ಯವಾಗುವ ಕೆಲಸವೇ ಸ್ವಾಮಿ?

ದೇವೇ ಗೌಡರು— ನೀನೆಲ್ಲರೂ ಮನಸ್ಸು ಮಾಡಿದರೆ ಇದೇನೂ ಅಂತಹ ಪ್ರಮಾದವಾದ ಕಾರ್ಯವೇನೂ ಅಲ್ಲ. ಹೇಗಾದರೂ ಮಾಡಿ ಸಾವಿರಾರು ರೂಪಾಯಿ ಜನೂ ಮಾಡಿ ಒಳ್ಳೊಳ್ಳೆ ಪುಸ್ತಕಗಳನ್ನು ಕೊಂಡು ಇಡೋಣ

ಮೂದಯ್ಯ— ವಾಚನಾಲಯವನ್ನು ಎಲ್ಲಿ ಪ್ರಾರಂಭಿಸುವುದು ಸ್ವಾಮಿ

ದೇವೇ ಗೌಡರು— ಏಕ? ನಮ್ಮ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಮುಂಭಾಗದ ಕೋಣೆಯಿ ಇದೆಯಲ್ಲಾ-ಅಲ್ಲೇ ಇಟ್ಟರಾಯಿತು ಅದೀಗ ಖಾಲಿಯಾಗಿದೆಯಲ್ಲವೇ?

ರಂಗಸ್ವಾಮಿ— ನಮ್ಮ ಮಂಜೇ ಗೌಡರನ್ನೇ ಅದಕ್ಕೂ ಗುಮಾಸ್ತರಾಗಿ ನಿಯಮಿಸಿದರಾಯಿತು.

ದೇವೇ ಗೌಡರು— ಹಾಗೆಯೇ ಮಾಡೋಣ

(ಎಲ್ಲರೂ ಹೋಗುವರು)

(ದೃಶ್ಯ ೨)

ಕಾಲ— ಬೆಳಗಿನ ಹೊತ್ತು ಹನ್ನೊಂದು ಘಂಟೆಯ ಸಮಯ.

ಸ್ಥಳ— ವಾಚನ ಶಾಲೆ.

(ಅನೇಕರು ವರ್ತಮಾನ ಪತ್ರ ಓದುತ್ತಾ ಪುಸ್ತಕ ಓದುತ್ತಾ ಕುಳಿತಿದ್ದಾರೆ.)

ಮೂದಯ್ಯ— ಮಂಜೇಗೌಡರೇ!!"ವಿಕ್ರಮಾದಿತ್ಯ ಚರಿತ್ರೆ" ಇದ್ದರೆ ತೆಗೆದು ಕೊಡಿ

ಮಂಜೇಗೌಡರು— ಅದಿಲ್ಲಾ-ಸ್ವಾಮಿ ಆ ಪುಸ್ತಕ ತಂದೇ ಇಲ್ಲ.

ಮೂದಯ್ಯ— ಇದೇನು ಹಾಳು ವಾಚನಾಲಯನಪ್ಪಾ-ಹೂಂ- ಆದಿರಲಿ-ಚಂಪಾರಾಮಾಯಣವಾದರೂ ಇದೆಯೇ?

ಮಂಜೇಗೌಡರು— ಆ ಪುಸ್ತಕವೇನೇ ಇದೆ ಆದರೆ ಈಗ ಹದಿನೈದು ದಿನಗಳಿಂದ ಆದು ಪ್ರೆಸಿಡೆಂಟರ ಮನೇಲೇ ಇದೆ.

ಮೂದಯ್ಯ— ಒಳ್ಳೇರಾಮಾಯಣವಪ್ಪಾ—ಯಾವುದು ಕೇಳಿದರೂ ಇಲ್ಲ. ಬೇರೆ ಯಾವುದಾದರೂ ಒಳ್ಳೇ ಪುಸ್ತಕಗಳಿದ್ದರೆ ತನ್ನಿ ನೋಡೋಣ

ಮಂಜೇಗೌಡರು— "ರೈತನ ಕೊಲೆ" ಯೆಂಬ ಪುಸ್ತಕ ಮಸ್ತೆತಾನೇ ಅಚ್ಚಾಗಿ ಹೊಸದಾಗಿ ಒಂದಿದೆ—ತಂದುಕೊಡಲೇ-ಒಳ್ಳೇ ಸ್ವಾರಸ್ಯವಾದ ಪತ್ತೇದಾರಿಕಥೆ

ಮೂದಯ್ಯ— (ಬೇಸರದಿಂದ) ರಾಮ ರಾಮ-ಆ ಹಾಳು ಪುಸ್ತಕದ ಹೆಸರೆತ್ತಬೇಡಿ -ಹಿಂದೊಂದು ಪತ್ತೇದಾರಿ ಕಥೆಯನ್ನೋದಿ ನನ್ನ ಹೆಂಡತಿ ರಾತ್ರಿ ಕೂಗಿ ಕೊಂಡದ್ದಕ್ಕೆ ನೆನೆಹೊರೆಯವರೆಲ್ಲರೂ ಎದ್ದು ಗಾಭರಿಯಿಂದೋಡಿಬಂದರು-ಅಂದಿನಿಂದ ಪತ್ತೇದಾರಿ ಕಥೆಂದ್ರೆ ನನಗೂ ಬೇಸರ.

ಮಂಜೇಗೌಡ— ಇಲ್ಲದೇ ಇದ್ದರೆ ಕವಿರ್ದಾಸ್ ಚರಿತ್ರೆಯಿದೆ ತೆಗೆದುಕೊಂಡು ಹೋಗಿ-ಭಕ್ತಿರಸ ಸಹಿತವಾದ ಪುಸ್ತಕ.

ಮೂದಯ್ಯ— ಬದಾವುದು- ಬೇಡ ಮಹಾರಾಯರೇ

ಮಂಜೇಗೌಡ— ಹಾಗಾದರೆ ಈ ವಾರದ "ಪಸ್ಪ" ಎನ್ನುವ ವಾರ ಪತ್ರಿಕೆಯಿದೆಯಲ್ಲಾ ಹೊಸದಾಗಿ ಪ್ರಕಟವಾಗಿರುವುದು ಅದನ್ನು ತರಲೇ?

ಮೂದಯ್ಯ – ಆಲ್ಕೀ ಆದನ್ನು ನೀನಾಗಲೇ ನೋಡಿದಾಯಿತು—ಇಲ್ಲಿಗೆ ನಿನ್ನೆತಾನೇ ಬಂತೇನು?

ಮಂಜೇಗೌಡ— ನೀವು ಓದಿದ್ದು ಕಳೆದವಾರದ್ದಿರಬೇಕು. ಈಗ ಬಂದಿರೋದು ಹೊಸದು. ಈ ವಾರದ್ದು.

ಮೂದಯ್ಯ— ನಿಮಗೇನುಗೊತ್ತು. ಸಮ್ಮನಿರ್ರೀ-ನಾನೋದಿದ್ದು ನನಗೇ ಗೊತ್ತಿಲ್ಲಾಂತೀರಾ? (ಬೀರುವಿನ ಕಡೆ ತೋರಿಸುತ್ತಾ) ಅದೋ ನೋಡಿ ಮೇಲ್ಗಡೆ ದಪ್ಪನಾಗಿ ಕಾಣಿಸ್ತಿದೆಯಲ್ಲಾ-ತೆಗೆಯಿರಿ ಆ ಪುಸ್ತಕಾನ.

ಮಂಜೇಗೌಡ— ಅದು ಇಂಗ್ಲೀಶು-ನಿಮಗೆಲ್ಲಿ ಬರುತ್ತೆ ಇಂಗ್ಲೀಶು—ಸ್ವಾಮಿ

ಮೂದಯ್ಯ— ಎಲ್ಲಾ ಬರುತ್ತೆ—ತೆಗೆಯಿರೀ—ಓದಿದರೆ ಅರ್ಥವಾಗದ್ತೋ ಇಲ್ಲವೋ ಎಂದು ನೋಡುತ್ತೇನೆ

(ರಂಗಸ್ವಾಮಿ ಪ್ರವೇಶಿಸುವನು.)

ರಂಗಸ್ವಾಮಿ— ಏನ್ರೀ ಇಲ್ಲಿ ಒಂದೇ ಒಂದು ಇಂಗ್ಲೀಷು ಪುಸ್ತಕವಿನೆಯಂತಲ್ಲಾ ಅದನ್ನು ಸ್ವಲ್ಪ ತೆಗೀತೀರಾ?

(ಆ ಪುಸ್ತಕವನ್ನು ಇಬ್ಬರಲ್ಲಿ ಯಾರಿಗೆ ಕೊಡುವುದೆಂದು ತಿಳಿಯದೆ ಮಂಜೇಗೌಡರು ಕಣ್ಣು ಕಣ್ಣು ಬಿಡುತ್ತಿದ್ದಾರೆ)

ಮಂಜೇ ಗೌಡ— (ರಂಗಸ್ವಾಮಿಯ ಕಡೆ ತಿರುಗಿ) ಅದು ಇಂಗ್ಲೀಸಿನ ಪುಸ್ತಕ—ನಿಮಗೆಲ್ಲಿ ಬರುತ್ತೆ ಇಂಗ್ಲೀಸು—ಅಲ್ಲದೆ ಅದನ್ನು ಮೊದಲೇ ಮೂದಯ್ಯನವರು ಬೇಕೆಂದಿದ್ದಾರೆ. ಸ್ವಾಮಿ!

ರಂಗಸ್ವಾಮಿ— (ಖಿಟ್ಟನಿಂದ) ಹಾಗಾದರೆ ಅದನ್ನವರಿಗೇ ಕೊಡಿ—ಇನ್ನೊಂದು ಸಲ ನಾನವನ್ನು ನೋಡುತ್ತೇನೆ.

(ಹುಡುಗನೊಬ್ಬನು ಪ್ರವೇಶಿಸುವನು)

ಹುಡುಗ— (ಓಡುತ್ತಾ ಬಂದು)—ತಕ್ಕೊಳ್ಳಿ—ಈ ದಿನ ಅಧ್ಯಕ್ಷರ ಮನೇಲಿ ಅವರ ನೆಂಟರಾರೋ ಊರಿಗೆ ಹೋಗ್ತಾರಂತೇ—ಸಾಮಾನು ಸೊಪ್ಪು ಕಟ್ಟಬೇಕಂತೆ—ಅದಕ್ಕೆ ಹಳೇ ಪೇಪರಿದ್ದರೆ ತರಹೇಳಿದರು. ಕೊಡಿ-ಹೊತ್ತಾಯಿತು-ಬೇಗ.

ಮಂಜೇ ಗೌಡ— (ಬೇಸರದಿಂದ) ಒಳ್ಳೇ ರಾಮಾಯಣಕಣಪ್ಪಾ (ಹುಡುಗನ ಕಡೆ ತಿರುಗಿ) ಅಲ್ನೋಡಪ್ಪಾ—ಮೇಜಿನ ಮೇಲಿರೋ ಎಲ್ಲಾ ಕಾಗದಗಳನ್ನೂ ಸುತ್ತಿಕೊಂಡೋಡಪ್ಪಾ.

(ಹನ್ನೆರಡು ಘಂಟೆಯ ನಂತರ ವಾಚನಾಲಯ ಮುಚ್ಚಲ್ಪಡುವುದು)

(ದೃಶ್ಯ ೩)

ಕಾಲ-ಮಧ್ಯಾಹ್ನ ೩ ಘಂಟೆ—ಸ್ಥಳ—ವಾಚನ ಶಾಲೆ ಹಿಂಬಾಗಿಲಿನಿಂದ ದೇವೇ ಗೌಡರು ವಾಚನಾಲಯದೊಳಗೆ ಪ್ರವೇಶಿಸುವರು. ಮಂಜೇ ಗೌಡ ಬನ್ನಿ-ಬನ್ನಿ-ಎಂದು ಸ್ವಾಗತಿಸುವರು)

ದೇವೇ ಗೌಡರು—ಮಂಜೇಗೌಡರೇ—

(ಇಲ್ಲೇ ಪುಟ ನೋಡಿರಿ)

ಆಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೂಟ್ ಆಸ್ಥಮಾ ನಿವಾರಕೌಷಧಿಯನ್ನು ತಾ 11-11-62ಕೇ ಹುಣ್ಣಿಮೆ ರಾತ್ರಿ ಬೀರನೊಂದಿಗೆ ಸೇವಿಸುವುದರಿಂದ ಆಸ್ಥಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P O. Chitrakot U. P.

ಲೇಖಾಂಕ ೬

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ದೊಡ್ಡ ದೊಡ್ಡ ನಗರಗಳಲ್ಲಿ ಸಾಮಾನ್ಯವಾಗಿ ಜನನ ಮತ್ತು ಮರಣ ಇವೆರಡೂ, ಆಸ್ಪತ್ರೆಗಳಲ್ಲಿಯೇ ಆಗುವುದು ಪದ್ಧತಿ. ಗರ್ಭಿಣಿಯಾದ ಸ್ತ್ರೀಯನ್ನು ಹೆರಿಗೆಗಾಗಿ ದೊಡ್ಡ ಆಸ್ಪತ್ರೆಗೆ ಸೇರಿಸಿಬಿಟ್ಟರೆ ಅಲ್ಲಿ ಸೌಕರ್ಯಕ್ಕೇನೂ ಕೊರತೆಯಿಲ್ಲ. ಆದರೆ, ಹೆರಿಗೆಯಾದ ಬಳಿಕ ಆ ಹೆತ್ತ ಹೆಂಗುಸಿನ ಅದೇ ಮಗು ಆಕೆಗೆ ಸಿಕ್ಕೀತು, ಎಂದು ಹೇಳುವುದು ಮಾತ್ರ ಸುಲಭವಲ್ಲ! ಆಸ್ಪತ್ರೆಗಳಲ್ಲಿ ಹೆರಿಗೆಯಾದರೆ, 'ಒಬ್ಬಳ ಮಗು ಮತ್ತೊಬ್ಬಳಿಗೆ' ಹೀಗೆ ಮಕ್ಕಳು ನರ್ಸುಗಳ ಅಜಾಗ್ರತೆಯಿಂದ ಅದಲು ಬದಲಾಗುತ್ತವೆಯೆಂದರೆ, ಇದು ಆಶ್ಚರ್ಯಸಂಗತಿ! ಆದರೂ ಅಪರೂಪವಾಗಿಯಾದರೂ ಹೀಗಾಗಲಾರದೆಂದೇನೂ— ಹೇಳಲು ಸಾಧ್ಯವಿಲ್ಲ. ಆದರೆ, ಈ ಅದಲು ಬದಲಾವಣೆಯಲ್ಲಿ 'ಹೆಣ್ಣು ಹೆತ್ತವಳಿಗೆ ಗಂಡು!' 'ಗಂಡು ಹೆತ್ತವಳಿಗೆ ಹೆಣ್ಣು'! ಹೀಗೂ ಆಗಲಾರದೇನೋ!

ಮಾನ್ಯ ರಾಜಾಜಿಯವರು ತಮ್ಮ "ಭವಿಷ್ಯವಾಣಿ" ಎಂಬ ಒಂದು ಕಥೆಯ ಮೂಲಕ, ಆಸ್ಪತ್ರೆಯಲ್ಲಿ ಜನನವಾದ ಮಕ್ಕಳೀರ್ವರು ಅದಲು ಬದಲಾದ ಮೋಜಿನ ಘಟನೆಯೊಂದನ್ನು ಬಹಳ ಜೆನ್ನಾಗಿ ಚಿತ್ರಿಸಿರುವರು. ಆದರೆ— ಈ "ಎಕ್ಸ್‌ಛೇಂಜ್" ಆಗ, ಆ ದಾದಿಯರ ಹೊರತು ಮತ್ತಾರಿಗೂ ತಿಳಿದಿರುವುದಿಲ್ಲ! ಮಕ್ಕಳು ದೊಡ್ಡವರಾಗಿ ವ್ಯವಹಾರ ಕ್ಷೇತ್ರಕ್ಕಿಳಿದಾಗ—"ಈ ಮಕ್ಕಳ ಕುರಿತು ಜ್ಯೋಸರು ಜಾತಕದಲ್ಲಿ ಭವಿಷ್ಯ ಬರೆದಿಟ್ಟಂತೆ, ಮಕ್ಕಳ ವ್ಯವಹಾರ ನಡೆಯದಿದ್ದಾಗ ಆ ಹೆತ್ತವರಿಗೆ ಚಿಂತೆಯೂಗುವುದೇ ಹೊರತು, ಆಗಲೂ ಈ "ರಹಸ್ಯ" ಗೊತ್ತಾಗುವುದಿಲ್ಲ. ಆದರೆ ಕಥೆಗಾರರು ಮಾತ್ರ ಈ ರಹಸ್ಯದ ಬದಲಾವಣೆಯ ಮೇಲೆ ನೊದಲಿಸಿದಲೇ ಕಣ್ಣಿಟ್ಟರುತ್ತಾರೆ!

'ಜ್ಯೋತಿಷ್ಯವೆ ಸುಳ್ಳಾಗದು' ಎಂಬ ವಿಡಂಂರವನ್ನೂ ಶ್ರೀ ರಾಜಾಜಿಯವರು ಈ ಕಥೆಯ ಮೂಲಕ ವ್ಯಕ್ತಪಡಿಸುತ್ತಾರೆ. ಈ ಕಥೆಯನ್ನೋದಿದಾಗ, ಶ್ರೀ ರಾಜಾಜಿಯವರ ಕಥನ ಕಲಾ ಚಾತುರ್ಯದಿಂದಾಗಿ ಓದುಗರ ಮನಃಪಟಲದಲ್ಲಿ ಸಹಜವಾಗಿಯೇ ಮುಗುಳು ನಗೆಯೊಂದು ಮೂಡುವುದು!

ಸ್ವಾಮಿನಾಥ ಆಯ್ಯರಿಗೆ ಮದುವೆಯಾಗಿ ಎಷ್ಟೋ ವರ್ಷಗಳಾಗಿದ್ದರೂ ಸಂತತಿಯೇ ಇರಲಿಲ್ಲ. ಅವರು ತಮ್ಮ ಶಾಲೆಯ ತಮ್ಮ ಶಿಷ್ಯರನ್ನೇ "ತನ್ನ ಮಕ್ಕಳೆಂದು" ಭಾವಿಸುತ್ತಿದ್ದರು ಆದರೆ ಅವರ ಪತ್ನಿ ಅಖಿಲೆಗೆ ಇದು ಹೇಗೆ ಸಾಧ್ಯ? ಆಕೆಯೇನೂ ಮಾಸ್ತರಿಣಿಯಾಗಿರಲಿಲ್ಲ. ಹೀಗಾಗಿ ಮಕ್ಕಳಿಲ್ಲದ ಚಿಂತೆ, ಅಖಿಲೆಗೇ ವಿಶೇಷವಾಗಿತ್ತು.

ಸಂತತಿ ಪ್ರಾಪ್ತಿಗಾಗಿ ಒಂದು ಸಲ ಅಯ್ಯರರೂ ಅವರ ಪತ್ನಿಯೂ ತೀರ್ಥಯಾತ್ರೆ ಮಾಡಿಕೊಂಡು ಬರುವುದಾಗಿ ನಿರ್ಧಾರ ಮಾಡಿ, ಪಳನಿ ಮಧುರೆ, ಶ್ರೀರಂಗ ನೊದಲಾದ ಕ್ಷೇತ್ರಗಳಿಗೆ ಹೊರಟರು. ಕೊನೆಗೆ ವೈಸೂರಿಗೂ ಹೋದರು. ಅಶ್ವತ್ಥಪೂಜೆ' ಮಾಡಿಸಿದರೆ ಸಂತತಿಯೂಗುವುದೆಂದು ಕೇಳಿದ ಅವರು ಅಲ್ಲಿ ಒಂದೆರಡು ಅಶ್ವತ್ಥಪೂಜೆಗಳನ್ನೂ ಮಾಡಿಸಿದರು. ಅಖಿಲೆಯು ಜಾತಕದಲ್ಲಿಯೂ ಕೂಡ-'ಈಕೆ ಮುಂದೆ ಗರ್ಭವತಿಯೂಗಬಹುದು! ಸಂತತಿ ಆಗದಿರಲಿಕ್ಕಿಲ್ಲ' ಎಂಬ ಭವಿಷ್ಯವಾಣಿ' ಇದ್ದುದನ್ನು ಜ್ಯೋಸರೂ ಮತ್ತೊಮ್ಮೆ ಸೂಚಿಸಿದ್ದರು.

ಅಶ್ವತ್ಥ ಪೂಜೆಯು ಫಲವೋ ಭವಿಷ್ಯವಾಣಿಯ ಫಲವೋ ಅಂತೂ, ಅಯ್ಯರರು ತೀರ್ಥಯಾತ್ರೆ-ಯಿಂದ ಮರಳಿದ ಆಶ್ಚರ್ಯಾವಧಿಯೊಳಗಾಗಿಯೇ ಅಖಿಲೆ ಗರ್ಭವತಿಯಾದಳು! ಅಯ್ಯರರ ಅಖಿಲೆಯ, ಸಂತೋಷಕ್ಕೆ ಆಗ ಮೇರೆಯೇ ಇರಲಿಲ್ಲ ಅಯ್ಯರರ ಮಿತ್ರರು—'ನೋಡಿ, ನಿಮ್ಮಾಕೆಗೆ ಮದುವೆಯಾಗಿ ಎಷ್ಟೋ ವರ್ಷಗಳ ಮೇಲೆ ನಿಗರ್ಭವಿದು! ಈ ಹೆರಿಗೆ ಬಹು ಕಷ್ಟವಾದೀತು' ನೀವು ಅವರನ್ನು ಹೆರಿಗೆಗೆ ಎಗ್ಮೂರಿನ ದೊಡ್ಡ ಆಸ್ಪತ್ರೆಗೇ ಸೇರಿಸಿಬಿಡಿ!' ಎಂದು ಮುಂತಾಗಿ ಸಲಹೆಯಿತ್ತರು. ಮನೆಯಲ್ಲಿಯೂ ಸರಿಯಾದ ಸೌಕರ್ಯವಿಲ್ಲದುದರಿಂದ ಅಯ್ಯರರೂ ಈ ಸಲಹೆಗೆ ಒಪ್ಪಿದರು. ಅಖಿಲೆಯನ್ನು ಹೆರಿಗೆಗೆ ಆಸ್ಪತ್ರೆಗೆ ಸೇರಿಸಲಾಯಿತು.

ದೊಡ್ಡ ಆಸ್ಪತ್ರೆಗಳಲ್ಲಿ ಎಷ್ಟೋ ಹೆರಿಗೆಗಳು ಏಕ ಕಾಲದಲ್ಲಿ ಆಗುತ್ತವೆ. ಆಂತೆಯೇ ಅಖಿಲೆಯೂ ಒಂದು ದಿನ ಪುತ್ರವತಿಯಾದಳು. ಅದೇ ದಿನ ಅದೇ ವೇಳೆಯಲ್ಲಿ ಇನ್ನೀರ್ವರು ಹೆಂಗಸರೂ ಹೆತ್ತಿದ್ದರು. ಈ ಮೂರು ಮಕ್ಕಳೂ ಹೃಷ್ಟಪುಷ್ಟವಾಗಿ, ತೂಕದಲ್ಲಿಯೂ ಒಂದೇ ರೀತಿ ಇದ್ದುವು. ಆದರೆ, ಬಣ್ಣದಲ್ಲಿ ಮಾತ್ರ ಒಂದು ಮಗು ನಸುಕಪ್ಪಗಿತ್ತು. ಮತ್ತೆರಡು ಬಿಳಿಯಾಗಿದ್ದುವು. ಹೆರಿಗೆಯಾದ ಕೂಡಲೇ ಮಕ್ಕಳನ್ನು ಮಿಯಿಸಿ ದಾದಿಯರು ತೂಕ ಮಾಡುವ ಕೋಣೆಗೆ ತೆಗೆದುಕೊಂಡು ಹೋಗಬೇಕಿತ್ತು; ಅಂದು ಆ ಎಳೆಯ ಜೀವಗಳನ್ನು ಮುದ್ದಿಸುತ್ತ ನಗುತ್ತ ನಲಿಯುತ್ತಿದ್ದ ಆ ದಾದಿಯರು ಅವು ತಮ್ಮ ಮಕ್ಕಳೇ ಆಗಿನೆ! ಎಂಬ ಸಂತೋಷದಲ್ಲಿ ರುಮಂತಿದ್ದರು!

ಮಕ್ಕಳು ಬದಲಾವಣೆಯಾಗದಂತೆ, ಆ ಮೂಗಳಿಗೆ ಗುರುತಿನ ಚೀಟು ಹಚ್ಚುವುದು, ಆಸ್ಪತ್ರೆಯ ನಿಯಮವಾಗಿತ್ತು. ಆದರೆ, ಅಖಿಲೆಯು ಮಗುವನ್ನು ಮಿಯಿಸಿದ ದಾದಿಗೆ ಏಂತಾಮದ ನೇಳೆಯೂದುದರಿಂದ,ಆಕೆ ಅದನ್ನು ಮತ್ತೋರ್ವ ದಾದಿಯ ಕೈಗಿತ್ತು ವಿವರಗಳನ್ನು ಹೇಳಿ ಹೊರಟು ಹೋದಳು. ಅಲ್ಲಿ ಮೂವರುದಾ ದಿಯರೂ ಸೇರಿ ಕುಲುಕುಲು ನಗುತ್ತ ಮಕ್ಕಳನ್ನು ಮುದ್ದಿಸುವ ಸಡಗರದಲ್ಲಿ ಅವುಗಳಿಗೆ ಗುರುತಿನ ಚೀಟು ಹಚ್ಚಲು ಒಂದು ಕ್ಷಣ ಮರೆತೇ ಬಿಟ್ಟರು! ಮರುಕ್ಷಣದಲ್ಲೇ ಮಕ್ಕಳಿಗೆ ಗುರುತಿನ ಚೀಟು ಹಚ್ಚುವ ಕೋಣೆಗೆ ತೆಗೆದುಕೊಂಡು ಹೋದರು. ಆದರೆ, ಆ ಮಕ್ಕಳು ಒಬ್ಬ ದಾದಿಯ ಕೈಯಿಂದ ಮ.

(ಉಳಿದ ಪುಟ ನೋಡಿರಿ)

ಎಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್,
ರಥಬೀದಿ, ಮಂಗಳೂರು.

ಇವರ 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಿಗಳು

ಧಾತುಪುಷ್ಟಿ ಲೇಹ (ಸುವರ್ಣ ಸಾಲಾಮಿಶ್ರಿ ಕಲ್ಪದ ಮಿಶ್ರ) ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಸ್ಖಲನೆ, ಶರೀರದ ಉಷ್ಣತೆ ಸೊಂಟ ನೋವು, ಕೈ ಕಾಲು ಬಚ್ಚುವುದು, ಮಲಬದ್ಧತೆ, ಬಳಜ್ವರ, ಅಶಕ್ತತೆ— ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯಕ್ಕೆ ದಿವ್ಯ. 450ಗ್ರಾಂ. ರೂ. 7=00 225ಗ್ರಾಂ. ರೂ. 4=00

ಬೃಹನವಪ್ರಾಶ ಲೇಹ (ಬಂಗಾರ ಮಿಶ್ರ) ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ, ಉಬ್ಬಸ ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು. 450ಗ್ರಾಂ. ರೂ. 6=00 225ಗ್ರಾಂ. ರೂ. 3=25.

ಅಶೋಕಾರಿಷ್ಟ ಮತ್ತು ಮಾತ್ರೆ ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ರಕ್ತ ಹೀನತೆ, ಬಳಜ್ವರ, ಸೊಂಟನೋವು ಕೈಕಾಲು ಬಚ್ಚು ಬರುವುದು, ಕೈ ಕಾಲು ಉರಿ, ಮಂತಾದವುಗಳಿಗೆ ದಿವ್ಯ. ಬಾಟ್ಲಿ 1ರ ರೂ. 4=00

ಕಸ್ತೂರಿ ಮಿಶ್ರಣ ದಶಮೂಲ ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅತ್ಯುತ್ಕೃಷ್ಟವಾದ ಶಕ್ತಿವರ್ಧಕ ರಸಾಯನ. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ ಶಿಶುವಿಗೂ ಧಾರಾಳವಾಗಿ ಹಾಲು ಸಿಗುವಂತೆ ಮಾಡುವುದು. 660 ಮಿ. ಲಿ. ರೂ. 6=00. 330 ಮಿ. ಲಿ. ರೂ. 3=00. 220 ಮಿ. ಲಿ. ರೂ. 2=25.

ಕಸ್ತೂರಿ ಮಿಶ್ರ ದಶಮೂಲಾರಿಷ್ಟ ಅರುಚಿ, ವಾಂತಿ, ಅಜೀರ್ಣ, ಅಗ್ನಿಮಾಂದ್ಯ, ಅಶಕ್ತಿ, ಕಫ, ಕೆಮ್ಮು ದಮ್ಮು, ಕಾಮಲೆ, ವಾತ, ಬಳಜ್ವರ ಮೊದಲಾದವುಗಳನ್ನು ಗುಣಪಡಿಸುವುದು ಇದನ್ನು ಬಾಣಂತಿಯರು ಸಹ ಉಪಯೋಗಿಸಬಹುದು. 660 ಮಿ ಲಿ. ರೂ. 4=50 440 ಮಿ. ಲಿ. ರೂ. 3=25.

ಗರ್ಭರಕ್ಷಕ ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯೂದ ಔಷಧಿ. ಚಪಲತೋಷ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ ವಾಯು ಉಪದ್ರವ, ಕೈ ಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 4=00

ಔಷಧಿ ಸಿಗುವ ಸ್ಥಳ: 1) ನ್ಯೂ ಕೆನರಾ ಜನರಲ್ ಸ್ಟೋರ್ಸ್ ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕುಲ್ಲ, 2) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ 648-A ಡಿಲ್ಲೈರ್ ರೋಡ್, ಬ್ಯಾಕುಲ್ಲಾ, 3) ವಿಸಾಯಕ ಜನರಲ್ ಸ್ಟೋರ್ಸ್ ಗೋವಂದಿ ರೋಡ್ ಚಿಂಬೂರು, 4) ಮಂಗಳೂರು ಜನರಲ್ ಸ್ಟೋರ್ಸ್, Near ಪೆರಡ್ಯಾಸ್, ಸಿನಿಮಾ ಮಾಹಿಮ್, 5) K. C. ಶೆಟ್ಟಿ, ರಘುರಾಜ್ ಭವನ್, ಗೋಖಲೆ ರೋಡ್ ದಾದರ್. 6) K. D. ಶೆಟ್ಟಿ, Near Mohan Studio, ಕುರ್ಲಾ ರೋಡ್ ಅಂಧೇರಿ, 7) ಸಾಯನ್ ಫಾರ್ಮೆಸಿ & ಸ್ಟೋರ್ಸ್ 87-A, ಕೈಲಾಸ್ ಕೋಟೆಜ್, ಸಾಯನ್ ವೆಸ್ಟ್, ಸಾಯನ್, 8) ನ್ಯೂ ಕರ್ನಾಟಕಾ ಜನರಲ್ ಸ್ಟೋರ್ಸ್, ನಟರಾಜ್ ಸಿನೆಮಾ ಬಿಲ್ಡಿಂಗ್, ಚಿಂಬೂರ್, 9) ಶ್ರೀ ವೆಂಕಟೇಶ ಪ್ರೊವಿಜನ್ & ಜನರಲ್, ಸ್ಟೋರ್ಸ್, ತೆಲುಗಾದ್ರಿಪುರಂ ಬೆಂಗಳೂರು. 10) ಕೆನರಾ ಸ್ಟೋರ್ಸ್, ಮಡಿಕೇರಿ. 11) ಪ್ರಭು ಫಾರ್ಮೆಸಿ, ಕಾರ್ಕಳ. 12) ಪಿಲ್ಯಾಟ್ ಸ್ಟೋರ್ಸ್, ಹುಳ್ಕೆ. 13) ಶ್ರೀಧರ ಭಟ್ ಬ್ರದರ್ಸ್ ಪುತ್ತೂರು. 14) ಕೈ ಸ್ಟೋರ್ಸ್, ಪುತ್ತೂರು 15) ಜಯ ಫಾರ್ಮೆಸಿ, ಕುಂದಾಪುರ. 16) H. ಗಣಪಯ್ಯ ನರಸಿಂಹ ಕಾಮತ್, ಕುಂದಾಪುರ. 17) ಶ್ರೀ ಕೃಷ್ಣಾ, ಫಾರ್ಮೆಸಿ ಪುತ್ತೂರು. 18) ನವಭಾರತ ಬುಕ್ ಡಿಪೊ ಉಡುಪಿ.

ಪೋಸ್ಟ್ ಮುಖಾಂತರ ಔಷಧಿ ಬೇಕಾದವರು ಔಷಧಿ ಕ್ರಯದ ಅರ್ಧಾಂಶ ಹಣವನ್ನು ಮನಿಯಾರ್ಡರ್ ಮೂಲಕ ರವಾನಿಸತಕ್ಕದ್ದು.

ಯಕ್ಷಗಾನ ಆಟ, ಕೂಟ

ಲೇಖಕರು— ಶ್ರೀ ಶಿವರಾಮ ಕಾರಂತ

ಇಂದು ೭೦ ತುಂಬಿದ ಕೋಟ ಶಿವರಾಮ ಕಾರಂತರು ಯಕ್ಷಗಾನದಲ್ಲಿ ನವೀನ ಪ್ರಯೋಗಗಳನ್ನು ನಡೆಸುತ್ತಿದ್ದಾರೆ ಅವರು ಬರೆದ 'ಯಕ್ಷಗಾನ–ಬಯಲಾಟ'—ಸಂಶೋಧನಾ ಗ್ರಂಥವು ವಿದೇಶ–ದೇಶಗಳಲ್ಲಿ ಪುರಸ್ಕೃತವಾಗಿದೆ ಹೀಗೆ ಅದ್ವಿತೀಯರಾಗಿ ಮೆರೆದ ಕಾರಂತರ ಯಕ್ಷಗಾನ ಪ್ರೇಮ, ಸಾಹಿತ್ಯ ಕೃಷಿಗಳು ಇಂದು ನಿನ್ನೆಯವಲ್ಲ. ಅವರು ಹಲವು ವರ್ಷಗಳಿಗೆ ಮೊದಲೇ ಯಕ್ಷಗಾನದಲ್ಲಿ ತುಂಬು ಆಸಕ್ತಿ ವಹಿಸುತ್ತಿದ್ದರು.

ಈ ಲೇಖನವು 13—1—1936ರ ನವಯುಗ ಪರ್ಯಾಯ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಅದನ್ನು ಇಲ್ಲಿ ಉದ್ಧರಿಸಿದ್ದೇವೆ. ೬೦ರ ಆನುಭವವಿರುವ ಇಂದಿನ ಕಾರಂತರನ್ನು ಮಾತ್ರ ಬಲ್ಲವರು ೪೦ರ ಹೊದಲೇ ಗುಡುಗುತ್ತಿದ್ದ ಅಂದಿನ ಕಾರಂತರನ್ನೂ ಅರಿಯಲು ಇದು ಸಹಕಾರಿಯಾಗಬಹುದು. (ಸಂ)

ಯಕ್ಷಗಾನವು ದಕ್ಷಿಣ ಕನ್ನಡದ ಒಂದು ವಿಶಿಷ್ಟ ಭಾಗ್ಯ. ನಮ್ಮ ಹಳ್ಳಿಸಂಸ್ಕೃತಿಯು ತೆನೆಯೆಂದೂ ಅದನ್ನು ಕರೆಯಬಹುದು. ಆದೀಗ ಪ್ರೋತ್ಸಾಹರಹಿತವಾಗಿದೆಯೆಂದೂ, ಅಸುಧಾರಿತವಾಗಿದೆಯೆಂದೂ ಅದನ್ನು ಸುಧಾರಿಸಬೇಕೆನ್ನುವವರು ಹಲವರಿದ್ದಾರೆ ಸುಧಾರಣೆಗೆ ಸಾಧ್ಯವಲ್ಲದ ಯಾವುದೇ ವಸ್ತುವು ಇಲ್ಲದಿರಲು, ಯಕ್ಷಗಾನವು ಆ ನಿಯಮವನ್ನು ಮೀರಲಾರದು. ಆದರೆ ಸುಧಾರಕರು ಯಾವ ದೃಷ್ಟಿಯುಳ್ಳವರಾಗಬೇಕು ಎಂಬುದನ್ನು ನಾವು ತಿಳಿಯಬೇಕಾಗಿದೆ ವಿದ್ಯಾವಂತರು ಈ ಕಲೆಗೆ ಕೈಯಿಕ್ಕಿ ಸುಧಾರಿಸಬೇಕು—ಎನ್ನುವವರಿದ್ದಾರೆ. ವಿದ್ಯಾವಂತರೆನ್ನುವಾಗ ಇಂಗ್ಲೀಷ್ ಓದಿಕೊಂಡವರೇ, ಸಂಸ್ಕೃತ ಓದಿರಬೇಕೆಂದೆನಿಲ್ಲವೇ? ಎಂಬುದೊಂದು ಸಂಶಯ ಬರುವುದು ಆದರೆ ಬಿ ಎ. ಕಲಿತವನೂ, ವಿದ್ಯೋಮಣಿಯೂದವನೂ ಕಲಿ, ರಸಜ್ಞತೆಗಳ ಗಂಧಗಾಳಿಯಿಲ್ಲದವರಿರಬಹುದು; ಅಂಧವರೇ ಅಧಿಕ ಈಗಿನ ಶಿಕ್ಷಣವು ಅದಕ್ಕೆ ಪೂರಕವಾಗಿದೆ ಆದುದರಿಂದ ವಿಶ್ವವಿದ್ಯಾಲಯದ ಪದವಿಯು ಯಕ್ಷಗಾನ ಸುಧಾರಣೆಗೆ ನೆರವಾಗಲಾರದು, ಅಂತೆಯೇ ಸಂಸ್ಕೃತ ಪಾಂಡಿತ್ಯ. ಇವು ಆಚರೋಕ್ತ ಸಾಧನಗಳು.

ನಾವು ಸುಧಾರಣೆ ಎನ್ನುವ ಮೊದಲು ಕಲೆಯು ಸ್ವರೂಪ ತಿಳಿದಿರಬೇಕು. ಎಲ್ಲ ಕಲೆಗಳಿಗೂ ಅನ್ವಯಿಸುವ ಸಾಮಾನ್ಯ ನಿಯಮಗಳು ಕೆಲವಿವೆ, ಇನ್ನು ಆಯಾಯ ಕಲೆಗೆ ವಿಶೇಷವಾದ ನಿಯಮಗಳೂ ಇರುತ್ತವೆ

ಕಲೆಯು ಸೌಂದರ್ಯೋಪಾಸನೆಯ ಮಾರ್ಗ. ಕಲೆಯು ಪಾಲಿನ ಸೌಂದರ್ಯವು "ವಿಷಯಕ್ಕೆ ಒಪ್ಪುವ ಪೈಕಿ" ಎಂದು ತಿಳಿಯಬೇಕು, ಬರಿಯದಾದ ಒಂದು ಸೌಂದರ್ಯವಿಲ್ಲ ಇನ್ನು ಹಾಗೆಯೇ ಜನರಂಜನೆಯು ವಿಚಾರ—ಇದು ಕಲೆಯ ಪರೋಕ್ಷ ಗುರಿ, ಪ್ರತ್ಯಕ್ಷ ಗುರಿಯಲ್ಲ ಯಕ್ಷಗಾನ ಕಲೆಯು ಇತರ ಕಲೆಗಳಂತೆ ಸುಂದರ, ಸಾರಸ, ಸಮ್ಮೇಳ, ತೋಲ Balance) ಇಂಥವನ್ನು ಕೂಡಿರಬೇಕು. ಇನ್ನು ಉದರ ಪ್ರದರ್ಶನವು ಕೇವಲ ಸಂದು ವ್ಯಕ್ತಿಯನ್ನು ದೊಂದಿಲ್ಲ. ವಾಸ್ತು ಶಿಲ್ಪದಂತೆ ಹಲವರನ್ನು ಹೊಂದಿದ. ಕವಿಯು ಸ್ಥಪತಿಯು ಸ್ಥಾನವನ್ನು ಹೊಂದಿದರೆ, ಉಳಿದವರು ಅಲ್ಲಿನ ಮರಗೆಲಸ, ತೂಲಿ ಓಡಾರಿಗಳಂತೆ ಸ್ಥಪತಿಯು ಆಜ್ಞೆಗೆ, ಆಶಯಕ್ಕೆ ಒಳಗಾಗಿ ನಡೆಯಬೇಕು.

ಒಂದು ಮನೆಗೆ ಒಪ್ಪುವ ಕಂಭ, ಮಾಗಿಲು, ಮಾಡು, ಮೆಟ್ಟಿಲುಗಳಿರ ಬೇಕು, ಬರಿಯ ಕಂಭವೊಂದು, ತುಂಬ ಚೆನ್ನುವನೆ ಕೆತ್ತನೆಯದಾದರೂ, ಮನೆಗೆ ತೋಳೆಯಾದಿದ್ದರೆ ಅದಕ್ಕೆ ಅಲ್ಲ ಸ್ಥಾನವಿಲ್ಲ. ಇತ್ತ ಕಂಭಕ್ಕಾಗಿ ಮನೆ ಕಟ್ಟುವುದಿಲ್ಲ. ಒಬ್ಬ ಅರ್ಥಧಾರಿಗಾಗಿ ಯಕ್ಷಗಾನ ಬಾಳಲಾರದು. ಅದು ನಾಟಕ ಕಲೆಯಂತೆ ಪಾತ್ರೆಗಳನ್ನು ಹೊಂದಿದೆ. ಇದರ ಪ್ರತಿಯೊಂದು ಅರ್ಥ, ಹಾಡು, ವಾದ್ಯ—ಮೊದಲಾದುವು 'ಮುಖ್ಯ ಉದ್ದೇಶದೊಡನೆ ಮೇಳ ಹೊಂದಬೇಕು. ಅಲ್ಲಿ ಬರಿಯ ಕಾಶಿತ್ಯ, ಬರಿಯ ಹಾಡು, ಬರಿಯ ವಾದ್ಯಲಿಯು ಒಂದೊಂದೇ ಜೆನ್ನಾಗಿದ್ದರೂ ಸಾಲದು, ಆ ಜೆನ್ನು, ಎಂಬುದು ಅಲ್ಲಲ್ಲಿ ಪ್ರತಿಷ್ಠಿತವಾಗುವ ರಸಕ್ಕೆ ಒಪ್ಪಬೇಕು. ಒಟ್ಟು ಪ್ರಸಂಗದ ದೃಷ್ಟಿಯಿಂದಯೆಂದು ತನ್ನ ಸ್ಥಾನಕ್ಕೆ, ಪ್ರವೇಶದ ಅಳತೆಯಿಂದ ಪ್ರದರ್ಶಿತವಾಗ ಬೇಕು.

ಈ ವಿಚಾರಗಳನ್ನು ಮೊದಲು ಯಕ್ಷಗಾನ ಕೂಟ (ತಾಳ ಮದ್ದಲೆ)ಗಳ ದೃಷ್ಟಿಯಿಂದ ವಿಮರ್ಶಿಸಿ, ಆ ಬಳಿಕ ಅದಕ್ಕೆ ಹಿರಿದೆಂದು ನನಗೆ ಕಾಣುವ ಯಕ್ಷಗಾನ ಆಟಕ್ಕೆ ಬರುವ

ತಾಳಮದ್ದಲೆಯ ಉಪಕರಣಗಳೆಂದರೆ—ಪಾತ್ರಗಳು, ಹಾಡುಗಾರರೆ, ಹಿಮ್ಮೇಳದವರು ಇವರೊಳಗಿನ ವೈಪರೀತ್ಯದಿಂದ ಗಮನಿಸುವ ಹಾಡುಗಾರನು ಶ್ರುತಿಯಿಂದ ಹಾಡುತ್ತಾನೆ ನಡುವೆ ವಾತುಗಳು ಬರುತ್ತವೆ ಇವು ಸೊಪಲಿಸಶ್ರುತಿಗೆ ಕೂಡಿದ್ದರಾಯಿತು ಇಷ್ಟವಾದರೆ ಚಿಲ್ಲಿಯೋ ಸಾರಸ್ಯ ಹೋಯಿತು ಭಾವದ ವಿಳಪಣೆಗೆ ಈ ನಾದವು ಕಡಿದು ಸಂದುಗೂಡಿಸಿ ಸಾಗಬಾರದು ಅರ್ಥಗಾರನು ಶ್ರುತಿಹೀನವಾದ ತನ್ನದೇ ಸ್ವರದಿಂದ ಮಾತಿಗೆ ಇಳಿಯಬಾರದು ಅಲ್ಲಿ ತಾನೊಂದು ನಾದದ ಆವರಣಕ್ಕೆ ಆಳು ಎಂದು ತಿಳಿಯಬೇಕು

ಈಗ ಕದಾ ಪಾತ್ರಗಳ ವಿಚಾರ ಎತ್ತಿಕೊಂಡ ಪ್ರಸಂಗವು 'ಆಂಗದ ಸಂಧಾನ' ವಾದರೆ ಆಂಗದ ಪ್ರಹಸ್ತನೆಂಥ ವ್ಯಕ್ತಿಗಳಿಗೆ ಸ್ವಂತವಾಗಿ ಅಸ್ತಿತ್ವವಿಲ್ಲ ಅವರು ಅಲ್ಲಿನ ಪ್ರಸಂಗದ ದಾಸರು ಈ ಪಾತ್ರಗಳನ್ನು ಧರಿಸಿದ ಅರ್ಥಗಾರರು ತಪಸಿಗಾಗಿ ಪ್ರಸಂಗವಿಲ್ಲವೆಂದೂ, ಪ್ರಸಂಗಕ್ಕಾಗಿ ತಾವಿರುವೆವೆಂದೂ ಹೊರಲು ತಿಳಿಯಬೇಕು ಈ ಪ್ರಸಂಗವನ್ನು ಕಾವ್ಯದ ದೃಷ್ಟಿಯಿಂದ ಕಲ್ಪಿಸಿಕೊಟ್ಟವನೊಬ್ಬನಿದ್ದಾನೆ ಅವನ ಆಶಯಗಳಿಗೆ ಅವನು ವಿವಿಧ ಪಾತ್ರಗಳಿಗೆ ಮಾಡಿ ಕೊಟ್ಟ ಮೇರೆಯಿದೆ ಈ ಮೇರೆಯನ್ನೂ ಅರ್ಥಗಾರರನ್ನೂ ಅರ್ಥದ ದೃಷ್ಟಿಯಿಂದಲೂ ವಿಂಗಡಿಸಿರಬಾರದು, ಸಮಯದ ದೃಷ್ಟಿಯಿಂದಲೂ ವಿಂಗಡಿಸಿರಬಾರದು ಒಟ್ಟು ಕಥೆಯಲ್ಲಿ ತನ್ನ 'ಕಾಲ'ವೆಷ್ಟು ಎಂದು ತಿಳಿಯದೆ ಹೋದರೆ ಚೆಲುವಿನ ಕಂಭ ಕೆತ್ತಲು ಬರುವ ಒಡಗಿಯು, ಸ್ಥಪತಿಯು ಆಶಯವನ್ನು

ವಿಖ್ಯಾತ ಸಾಹಿತಿ

ಕಲಾವಿದ ದಂಪತಿಗಳು
ಲೀಲಾ — ಕಾರಂತ

ನೇರ ನಡೆನುಡಿಯ ಹೆಸುಳೆ ಮನಸ್ಸಿನ ಉಲ್ಲಾಸ ಪ್ರವೃತ್ತಿಯ ಉದ್ಯಮ ಶೀಲರಾದ ಕೋಟ ಶಿವರಾಮ ಕಾರಂತರಿಗೆ ಅರುವತ್ತು ತುಂಬಿತು ಎಂದರೆ ಹೆಚ್ಚಿನವರು ನಂಬಲಾರರು. ಇಪ್ಪತ್ತರ ಹುಮ್ಮಸ್ಸು ಎಪ್ಪತ್ತರಲ್ಲಿ ಎಪ್ಪತ್ತರ ಅನುಭವ ಇಪ್ಪತ್ತರಲ್ಲಿ ಇರುವ ಕೆಲವೊಂದು ಅದ್ಭುತ ವ್ಯಕ್ತಿಗಳು ಇದ್ದಾರೆ. ಇಂತಹವರಲ್ಲಿ ಕನ್ನಡದ ಕಾರಂತರೂ ಒಬ್ಬರು ಎಂದರೆ ಸಲ್ಲುವುದೋ ಏನೋ! ಹಿರಿಯರು ಅವರನ್ನು 'ಕಡಲ ತಡಿಯ ಭಾರ್ಗವ' ಎಂದು ಕರೆದರು. ಅವರನ್ನು ದೂರದಿಂದ ಕಂಡವರು ಇವನ್ನು ಅನುಮೋದಿಸಿದರು ಕಾರಂತರ ಕೆಚ್ಚೆದೆಯ ಎಂಟೆದೆಗೆ ಸಡ್ಡು ಹೊಡೆದವರು ಸಾಗರದಂತೆ ವಿಶಾಲ, ಆತ್ಮವಿಶ್ವಾಸವು ಆಕಾಶದಷ್ಟು ಎತ್ತರ ಪರ್ವತದಂತೆ ಆಚಲ. ಅನುಭವ ಶ್ರಾವಣ ಮಾಸದ ಮೋಡದಂತೆ ಸಿಹಿಸಿಹಿ, ಸುವಿಖ್ಯಾತ ಸಾಹಿತಿಯೆಂದರೆ, ಅದು ಉಪಮಾತೀತ ಸಾರ್ಥಕವಾದ ಬಾಳನ್ನು ಬದುಕಿ, ಬದುಕಿನಿಂದಲೇ ಪಾರವನ್ನು ಕಲಿತ ಕಾರಂತರು ಅಪರೂಪ ವ್ಯಕ್ತಿ ಅದ್ಭುತ ಶಕ್ತಿ.

'ಕಲೆಯು ಕಲೆಗಾಗಿ' ಎಂಬ ವಾದ ಒಂದು ಕಾಲದಲ್ಲಿತ್ತು. ಪಾಶ್ಚಾತ್ಯ ವಿದ್ವಾಂಸರು ಮೊದಮೊದಲಿಗೆ ಇದನ್ನು ಒಪ್ಪುತ್ತಾ ಬಂದರಾದರೂ ಮುಂದೆ ಅವರಲ್ಲಿಯೂ ಈ ತತ್ವದ ಬಗ್ಗೆ ಸಂದೇಹವೆದ್ದಿರಬೇಕು. ಕನ್ನಡದ ಕಾರಂತರು ಕಲೆಯು ಕಲೆಗಾಗಿ ಅಲ್ಲ, ಕಲೆಯು ಬದುಕಿಗಾಗಿ ಎಂಬ ಆದರ್ಶವನ್ನು ಎತ್ತಿ ಹಿಡಿದವರು. ಯಾವುದೇ ಕಲೆಯು ಮಾನವನ ಒದುಕಿನ ನೋಲೆ ಸೂಕ್ತ ಪ್ರಭಾವ ಬೀರಲಾರದು, ಆತನಿಗೆ ಉಪಯುಕ್ತವೆನಿಸದು ಎಂದರೆ, ಅಂತಹ ನಿರುಪಯೋಗಿ ಕಲೆಯ ಆರಾಧನೆಯಿಂದ ಅವನಿಗೇನು ಲಾಭ? ಆತನು ಅದನ್ನು ಏಕಾದರೂ ಪುರಸ್ಕರಿಸಬೇಕು, ಆರಾಧಿಸಬೇಕು? ಜೀವನವನ್ನು ಸುಂದರವಾಗಿರಲು 'ಸತ್ಯಂ ಶಿವಂ ಸುಂದರಂ' ಸ್ವರೂಪಿಯಾದ ಕಲೆಯು ಸಹಕಾರಿಯಾಗುವುದರಿಂದಲೇ ಜೀವನಕ್ಕಾಗಿ ಕಲೆ ಬದುಕಿಗಿಂತ ಹೊರತಾದ ಬೇರೆ ಕಲೆ ಇಲ್ಲ.

ಕಾರಂತರ ಶಕ್ತಿ ಅದ್ಭುತ. ಆರಿಗೆಲ್ಲ ನ್ನಾದರೂ ಪುಡಿಗುಟ್ಟಿ ನೀರೊಸರಿಸಬಲ್ಲ ಸಾಹಸ ಅವರದು. ಗೊಬ್ಬರದ ಗುಂಡಿಯಲ್ಲೂ ರಸವನ್ನು ಎತ್ತಬಲ್ಲ ಪವಾಡ ಪುರುಷರು ಅವರು. ನ್ಯಾಯನಿಷ್ಠುರಿಯೆನಿಸಿದ ಇವರು ದಾಕ್ಷಿಣ್ಯ ಪರರಲ್ಲ, ತನಗೆ ಸರಿದೋರಿದುದನ್ನು ತನ್ನ ಮುಂದೆ ಯಾರೇ ಇರಲಿ ಹೇಳಿ ಬಿಡುವ ಅಭ್ಯಾಸ ಅವರದು. ಅನ್ಯಾಯವನ್ನು, ಅಪಚಾರವನ್ನು ಮೌನವಾಗಿ ಸಹಿಸುವ ಇಂದಿನ ದಿನಕ್ಕೆ ಬೇಕಾದ ಗುಣ ಅವರಲ್ಲಿಲ್ಲ. ಇದರಿಂದಾಗಿಯೇ ಕೆಲವರು ಬೇಸರಗೊಳ್ಳುವುದಕ್ಕೆ ಕಾರಣವಾಗಿದೆ. ಆನೆ ನಡೆದುದೆ ದಾರಿ, ಕಾರಂತ ತುಳಿದುದೇ ದಾರಿ.

'ಆಡು ತಿನ್ನದ ಸೊಪ್ಪು ಇಲ್ಲ'ವೆನ್ನುತ್ತಾರೆ. ಕಾರಂತರು ಮೆಟ್ಟದ ಕ್ಷೇತ್ರವೂ ಇಲ್ಲ ಇವರ ಹಚ್ಚಿದ ಜೀವನ ಸಾಹಿತ್ಯ-ಸಂಶೋಧನೆಗಳಲ್ಲಿಯೇ ಕಳೆದುದು ನಿಜ; ಆದರೆ, ದೇಶಭಕ್ತಿಯಿಂದ, ರಾಜಕಾರಣದಿಂದ ಇವರು ದೂರವಾಗಿಲ್ಲ. ಆಧ್ಯಾತ್ಮಿಕತೆ- ವೈಜ್ಞಾನಿಕತೆಗಳ ಸಂಸ್ಕಾರವೂ ಇವರಿಗೆ ಇದ್ದೇ ಇದೆ. ನಿತ್ಯ ನೂತನ ಪ್ರಯೋಗ ಶೀಲರಾದ ಕಾರಂತರು ತಾವೃತ್ತಿ ವಹಿಸಿಟ್ಟದ ವಸ್ತುವಿಲ್ಲ; ಮಾಡದಕೆಲಸವಿಲ್ಲ. ಈ ಯೆಲ್ಲವುಗಳಲ್ಲಿ ಅವರು ಯಶಸ್ವಿಯಾಗಿದ್ದಾರೆಯೇ ಎಂಬುದೊಂದು ಪ್ರಶ್ನೆ. ಇದಿದ್ದಾರೆಂದೇ ಹೇಳಬೇಕು; ಸಾಮಾನ್ಯವಾಗಿ ಯಶಸ್ವಿಯಾಗಿದ್ದಾರೆ; ಜೀವನದ ಪಾರಗಳನ್ನು ಅರಿತುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಸೃಷ್ಟಿಯೆಂದರೆ ಬೋಗಗಿರೆದು ಹರಿಯುವ ಜರಿಯಂತೆ ಅಡೆ ತಡೆಗಳನ್ನು ಗಣಿಸದೆ ಗುರಿ ಮುಟ್ಟಿದ ಬಳಿಕವೇ ವಿಹಾವಲೋಕನ ಮಾಡುವ ಹವ್ಯಾಸ ಅವರದು. ಇಲ್ಲದೆ ಹೋಗಿದ್ದರೆ, ಬಾಲಪ್ರಪಂಚ, ಈ ಜಗತ್ತು ಇತ್ಯಾದಿ ಬೃಹತ್ ವಿಶ್ವಕೋಶಗಳ ರಚನೆ ಅವರಿಂದ ಆಗುತಿತ್ತು ಎಂದು ಖಂಡಿತ ಹೇಳಲಾಗದು.

ಕಾರಂತರು ಗೀತ ನಾಟಕಗಳ ರಚನೆಯಲ್ಲಿ ತೊಡಗಿ ಕನ್ನಡದ ಗೀತ ನಾಟಕ ಪ್ರವರ್ತಕರೆನಿಸಿದರು ಮೂಕ ಚಿತ್ರಗಳ ನಿರ್ಮಾಣ ಮಾಡಿದರು, ನಾಟಕ-ನೃತ್ಯಗಳಲ್ಲಿ ಸ್ವಯಂ ಭಾಗವಹಿಸಿದರು ಯಾರೂ ಮುಟ್ಟದಂತಹ ಕ್ಷುದ್ರ ಜನರನ್ನು ನಾಯಕರನ್ನಾಗಿ ಮಾಡಿ ಮಧ್ಯಮ ವರ್ಗತ್ತು ನಿಮ್ನ ವರ್ಗದ ಜನರ ಜೀವನದ ಮೇಲೆ ಬೆಳಕು ಬೀರಿದರು. ಅವರ ಒಂದೊಂದು ಸಾಹಿತ್ಯ ಕೃತಿಯೂ ಒಂದೊಂದು ವಿಶಿಷ್ಟ ಸಮಸ್ಯೆಯನ್ನು ವಿವೇಚಿಸಿ ಶಕ್ತವಾಗಿದೆ. ರಾಜ ಮಹಾರಾಜರ ಐಶ್ವರ್ಯದ ಸುಪ್ರವೃತ್ತಿಗೆಯಲ್ಲಿಕರುಬುತ್ತಿರುವವರ ಜಾತ್ರೆಯೆದುರು ಜನಸಾಮಾನ್ಯರ ಚರಿತ್ರೆಯೇನೂ ಕಡಿಮೆಯಲ್ಲವೆಂದು ತೋರಿಸಿದ ಕ್ರಾಂತಿಕಾರಿ ಕಾರಂತರು ಎನ್ನುವವರು ಇದ್ದಾರೆ ಮರ ದೇವಾಲಯಗಳು ಸಂಸ್ಕೃತಿಯ ಕೇಂದ್ರಗಳು, ಪದಾಚಾರದ ಮೂಲಗಳು ಎನಿಸಿದ್ದ ಕಾಲ ಒಂದಿತ್ತು—ಆದರೆ, ಇವುಗಳು ಕೊಳ್ಳಿಗಣ್ಣ ಹೆರಿಯದ ನೀರಿನಲ್ಲಿ ಕ್ರಿಮಿಕೀಟಗಳ ಪುಟ್ಟಿಗೆ ಕಾರಣವೆನಿಸಿ ಅವುಗಳ ಪಾವಿತ್ರ್ಯವನ್ನು ಕೆಡಿಸಿ ಅವನ್ನು ದುರಾಚಾರ, ಅತ್ಯಾಚಾರಗಳ ಕೇಂದ್ರವನ್ನಾಗಿಸಿದಾಗ, ಅಂಧ ಶ್ರದ್ಧಾವಂತರು ಅವುಗಳ ಕ್ರೌರ್ಯ ದಾಸರಾಗಿರುವಾಗ, ರಹಸ್ಯೋದ್ಘಾಟನೆ ಮಾಡಿದ ಸಾಹಸಿಗರಲ್ಲಿ ಅಧಿಸುರುಪರು ಇವರು. ಇವರೆ ದೇವದಾಸರು ಮತ್ತು ಗರ್ಭಗುಡಿ ಎಂಬ ಕೃತಿಗಳಿಂದ ನೊಂದು ಕಂಗಾಲಾದ ಸನ್ಯಾಸಿಗಳೂ ಮಡಿ ನಂತರೂ ಹೆಲವರಿದ್ದಾರೆ.

ತನ್ನ ಕಂಡ ಸತ್ಯವನ್ನು ಲಂಜದೆ ಮರೆ ಮಾಡದೆ ಹೇಳುವುದು ಕೆಲವೊಮ್ಮೆ ಅಪಾಧವಾಗಲೂ ಬಹುದು. 'ಸತ್ಯಂ ಪ್ರಿಯಾತ್ ಪ್ರಿಯಂ ಬ್ರೂಯಾತ್' ಎಂದಿದ್ದರೂ ಪ್ರಿಯ ಸತ್ಯವನ್ನು ಮಾತ್ರ ಹೇಳುವ ಅಭ್ಯಾಸ ಕಾರಂತರಿಗಿಲ್ಲ. ಆದುದರಿಂದಲೇ ಅವರು ನಿಷ್ಠುರವಾದಿ, ಸ್ಪಷ್ಟವಕ್ತೃ, ನಿರ್ದಾಕ್ಷಿಣ್ಯ ವ್ಯಕ್ತಿ ಎನಿಸಿದ್ದಾರೆ. ಅನಿಸಿದ್ದನ್ನು ಆಡುವ, ಆಡುವಂತೆ ನಡೆಯುವ ಕಾರಂತರಿಗೆ ರಾಜಕಾರಣ ಒಗ್ಗದಿರುವುದು ಸಹಜ ಅವರ ನೆ

ಉಡುಪಿಯಲ್ಲಿ ನಡೆದ ಯಕ್ಷಗಾನ ತರಬೇತಿ ಶಿಬಿರದಲ್ಲಿ ನಿರ್ದೇಶಕ ಕಾರಂತ.

ಕಲಾವಿದ ಕಾರಂತ



ಕಾರಂತರು ಜನಿಸಿದ ಕೋಟೆಯ ಒಂದು ನೋಟ.

ಡ ಬುದುಕಿನ ಅಳದಿಂದಬಂದುದು; ಅದು ಅಧರಕ್ಕೆ ಕಹಿಯೆನಿಸಬಹುದು; ಅ ದರೆ ಉದರಕ್ಕೆ ಸಿಹಿಯೂಗಲೇ ಬೇಕು. 'ಬದುಕೇ ದೇವರು' ಎನ್ನುವ ಕಾರಂತರಿಗೆ ಬ ದುಕಿನ ಅನುಭವವೇ ದೈವ ಸಾಕ್ಷಾತ್ಕಾರ, ಅದರ ಪಾಠವೇ ಉಪದೇಶಾವ್ಯಾಖ್ಯ.

ಓದುಗನ ಮಟ್ಟಕ್ಕೆ ಸಾಹಿತಿ ಇಳಿಯ ಬೇಕೆ, ಸಾಹಿತಿಯ ಮಟ್ಟಕ್ಕೆ ಓದುಗ ಏ ರಬೇಕೆ? ಎಂಬ ಪ್ರಶ್ನೆ ಪ್ರತಿಯೊಂದು ಸಾಹಿತ್ಯದಲ್ಲೂ ಇದ್ದೇ ಇದೆ. ಜನತೆಗಾಗಿ ಬರೆಯುವ ಕವಿ ಜನತೆಯ ಮಟ್ಟಕ್ಕೆ ಇಳಿದು ಸಾಮಾಜಿಕರಲ್ಲಿ ಒಬ್ಬನಾಗಿ, ಅವರಿಗೆ ರುಚಿಸುವಂತೆ, ಒಗ್ಗುವಂತೆ, ಮೆಚ್ಚುಗೆಯಾಗುವಂತೆ ಕೃತಿ ಬರೆಯಬೇಕು; ಇಲ್ಲಿ ಸಾಹಿತ್ಯದ ಮಟ್ಟವು ಕೆಳಗಿಳಿದರೂ ಜನತೆಗೆ ಬೇಡವಾದ ಸಾಹಿತ್ಯ ನಿರ್ಮಾಣ ಬೇಡವೆಂದು ಒಂದು ವಾದ. ಇದಕ್ಕೆ ಪ್ರತಿಕೂಲವಾದ ಇನ್ನೊಂದು ವಾದವೂ ಇದೆ. ಕಾರಂತರ ಸಾಹಿತ್ಯ ನಿರ್ಮಾಣ ಇವೆರಡಕ್ಕೂ ಮಧ್ಯಮ ವರ್ಗದ್ದೆಂದು ಹೇಳಬಹುದು. ಅದು ಪ್ರಗಲ್ಭವಂತೂ ಅಲ್ಲವೇ ಅಲ್ಲ. ಬೀದಿಯ ಸಾಹಿತ್ಯ ಖಂಡಿತಕ್ಕೂ ಅಲ್ಲ. ಜನರ ಭಿನ್ನ ಭಿನ್ನ ರುಚಿಗೆ ಹೊಂದಿಕೆಯಾಗುವಂತೆ ತೃಪ್ತಿಯೂಗುವಂತೆ ಯಾರಿಂದಲೂ ಬರೆಯುವುದು ಸಾಧ್ಯವಿಲ್ಲ. ಲೋಕದ ಎಲ್ಲರನ್ನೂ ತೃಪ್ತಿಪಡಿಸುತ್ತೇನೆಂದು ಅವರು ಹೇಳಿಕೊಳ್ಳುವುದಿಲ್ಲ. ಕಾರಂತರ ಸಾಹಿತ್ಯ ಸೃಷ್ಟಿಯೆಂದರೆ ಸಾಹಿತ್ಯವನ್ನು ಓದಬೇಕು. ಆನಂದಪಡಬೇಕು ಎಂದು ಆಶಿಸುವವರಿಗೆ ಮಾತ್ರ ತೃಪ್ತಿ ನೀಡುವಂತಹದು.

ಕಾರಂತರು ಕಾದಂಬರಿಕಾರರೆಂದು ಮೊತ್ತ ತಿಳಿದವರು ಹೆಚ್ಚು ಮಂದಿ ಆದರೆ ಅವರು ಕಥೆಗಾರರು, ನಾಟಕಕಾರರು, ಬಾಲಸಾಹಿತ್ಯ ಸೃಷ್ಟಿಕರ್ತರು, ನರ್ತಕರು, ಚಿತ್ರ ಕಲಾವಿದರು, ನಿಘಂಟು ರಚಕರು, ಚಲಚ್ಚಿತ್ರ ನಿರ್ಮಾಪಕರು. ಉತ್ತಮ ವಾಗ್ಮಿಗಳು, ಭಾಷಣ ಕರ್ತರು; ನಿಸರ್ಗ ಪ್ರೇಮಿಗಳು. ಸಂಶೋಧಕರು. ಒಬ್ಬ ಮಹಸ್ಸೀಯರು ಹೇಳಿದಂತೆ ಕಾರಂತರು ಏನು ಮಾಡಿದ್ದಾರೆ ಎಂಬುದಕ್ಕಿಂತ ಏನು ಮಾಡಿಲ್ಲ? ಎಂದು ಯೋಚಿಸುವುದು ಒಳ್ಳೆಯದು. ಕಾರಂತರೆಂದರೆ ಒಂದು ಸಂಚಾರಿ ವಿಶ್ವಕೋಶ, ಸವ್ಯಸಾಚಿ ಪಾರ್ಥನೂ ಹೌದು, ಪಾರ್ಥ ಸಾರಥಿಯೂ ಹೌದು ಆಧ್ಯಾತ್ಮಿಕ ಭಾಷೆಯಲ್ಲಿ ಹೇಳುವುದಾದರೆ, 'ಬ್ರಹ್ಮ' ಇವರಲ್ಲಿ ಎಷ್ಟೂ ಇವೆ;

ಕೃಷ್ಣನು ತನ್ನ ವಿಶ್ವರೂಪದರ್ಶನ ಮಾಡಿದ್ದನಂತೆ; ಕುಮಾರನು ಪದ್ಮಾಸ್ಯ ಸಂಹಾರದ ವೇಳೆಯೂ ವಿಶ್ವರೂಪ ತೋರಿಸಿದ್ದನಂತೆ. ಕಾರಂತರು ನಿಜವಾಗಿಯೂ ವಿಶ್ವರೂಪ ತೋರಿಸಿದ್ದಾರೆ, ತೋರಿಸುತಿದ್ದಾರೆ. 'ವಜ್ರ ಕಠೋರ ಕುಸುಮಕೋಮಲರೆನಿಸಿದ ಕಾರಂತರು ನಾಡಿನ ನುಡಿಯ ಉನ್ನತಿಗಾಗಿ ದುಡಿಯುತ್ತಿರುವವರು. ಅವರ ಮುಡಿಸುವಿಯಿಂದ ಕನ್ನಡದ ನೆಲ ಜನಪದಸನಾಗಿದೆ. ಅವರನ್ನು ಹೆಟ್ಟಿ ನಿಲ್ಲಬಲ್ಲವರು ಕನ್ನಡದಲ್ಲಿ ಇಂದು ಇಲ್ಲ. ಆದುದರಿಂದಲೇ 'ಕನ್ನಡಕ್ಕೊಬ್ಬನೇ ಕಾರಂತ' ಎಂಬ ಉದ್ಗಾರವು ಹುಟ್ಟಿಕೊಂಡಿತ್ತು. ಅದು ಇಂದಿಗೂ ಬಚ್ಚಳಿಯದೆ ಉಳಿದಿದೆ. ಕಾರಂತರು ಅಖಿಲ ಭಾರತ ಪ್ರಸಿದ್ಧಿಗೆ ಗುವ ದಿನ ಸಮೀಪ ಬರುತ್ತಿದೆ; ವಿಶ್ವವಿ ದ್ಯಾಲಯದಿಂದ ಡಿ.ಲಿಟ್ ಪದವಿಯನ್ನು ಕೊಡಿಸುವ ದಿನವೂ ಬೇಗನೇ ಬರಲಿ.

ಶಿವರಾಮ ಕಾರಂತರು ರಾಮಶಿವನೆನಿಸಿದ್ದಾರೆ, ಕನ್ನಡಕ್ಕಾಗಿ ತಮ್ಮ ಜೀವನವನ್ನು ತೇಯುತಿದ್ದಾರೆ. ಕನ್ನಡದ ವರಪುತ್ರ ಶಿವರಾಮ ಬಹುಕಾಲ ನಮ್ಮ ಮುಂದೆ ಇದ್ದು ನಾಡುನುಡಿಯನ್ನು ಬಾಳಿಬೇಕು, ನಾಡಗುಡಿಯನ್ನು ಪಾರಿಪಬೇಕು. ನಾಡಜಡತೆಯನ್ನು ದೂರೀಕರಿಸಬೇಕು. ಕಾರಂತರ ಪೆಸರು ಜಗಜ್ಜನಿತವಾಗಿಬೇಕು ಎಂಬ ಹೆಂಬಲ ಕನ್ನಡಿಗರೆಲ್ಲರಿಪ್ಪೆನ್ನನದಲ್ಲಿದೆ.

(ಇಲ್ಲಿ ಉಪಯೋಗಿಸಿದ ಪಡಿಯಚ್ಚುಗಳನ್ನು ಕಾರಂತ ಸನ್ಮಾನ ಸಮಿತಿ, ಉಡುಪಿ ಮತ್ತು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಸೌಜನ್ಯದಿಂದ)

ಾಳಿ' ನೃತ್ಯರೂಪಕದಲ್ಲಿ ಲೀಲಾ ಮತ್ತು ಶಿವರಾಮ ಕಾರಂತ



ಡಂಬಾಚಾರವನ್ನು ಬಯಲಿಗೆಳೆದ 'ಗರ್ಭ ಗುಡಿ' ನಾಟಕಕ್ಕೆ ತಾರುಣ್ಯದಲ್ಲಿ ವೇಶ ಕಟ್ಟಿದ ಕಾರಂತ.

ಯಕ್ಷಗಾನ ಆಟ, ಕೂಟ

(೧೦ನೇ ಪುಟದಿಂದ)

ಧರ್ಮದ ಮೇಲೆಯೇ 'ಲೀಗ್ ಆಫ್ ನೇಶನ್ಸ್'ನ ಮೇಲೆಯೇ, ಕೊನೆಗೆ ಸಮಾಜ ಸುಧಾರಣೆಯ ಮೇಲೆಯೇ, 'ನೂರೆ ಟೋರಿಯಂ ಬಿಲ್ಲಿ'ನ ಮೇಲೆಯೇ ಪೂತನಾಡುತ್ತಾನೆ ಈ ಕ್ರಮಗಳನ್ನು ನಾವು ಸುಧಾರಣೆಯೆಂದು ತಿಳಿಯುವುದಾದರೆ ಯಕ್ಷಗಾನವು ಸುಧಾರಣೆಯಿಂದ ಯೋಜನ ದೂರವಾಗಿರಲಿ 'ಮೂತುಕುಳಿ'ಗಳು ಪಾತ್ರಧಾರಿಗಳಾದರೇ?

ಯಕ್ಷಗಾನದಲ್ಲಿ ಬರುವ ವ್ಯಕ್ತಿಗಳು ಹೆಚ್ಚಾಗಿ ಭಾರತ, ರಾಮಾಯಣದ ವ್ಯಕ್ತಿಗಳು ನಾವು ಎತ್ತಿಕೊಂಡ ಪ್ರಸಂಗವು ಕಲಾದೃಷ್ಟಿಯಿಂದ, ಪಾತ್ರಯೋಜನೆಯ ದೃಷ್ಟಿಯಿಂದ ಸಮನಿಲ್ಲವಾದರೆ, ಅದನ್ನು ತಿದ್ದಿ ಸರಿಪಡಿಸುವ; ಆದರೆ ಒಮ್ಮೆ ಪ್ರಸಂಗವನ್ನು ಎತ್ತಿಕೊಂಡ ಬಳಿಕ ಅದರ ಆಶಯಕ್ಕೆ ಕೊರತೆಯನ್ನು ತರಕೂಡದು

ಯಕ್ಷಗಾನ ಪಾತ್ರಗಳ ಪರಿಚಯವೆಂದರೆ ಪ್ರಾಚೀನ ಈ ಕಾವ್ಯ ವ್ಯಕ್ತಿಗಳ ಕಾಲದ ಸಂಸ್ಕೃತ ಶ್ಲೋಕಗಳ ಸರಿಚಯವನ್ನಲ್ಲ ರುಕ್ಮಿಣಿಯೋ, ದ್ರೌಪದಿಯೋ ತಮ್ಮ ಅಲಂಕಾರಕ್ಕೆ 'ಅತ್ತರು ಧರ್ಮಾವರ, ಜಾಕೆಟುಗಳನ್ನು' ಬಳಸಿದರೆ ಹೇಗೆ? ಆ ಕಾಲದ ಚಿವರಣಕ್ಕೆ ಒಪ್ಪುವ ಉಡುಗೆ ಆವರಿಗಿರಬೇಕು. ಭಾರತ ರಾಮಾಯಣ ಕಾಲದ ಸಂಸ್ಕೃತಿಯ ಜ್ಞಾನ ನಮಗೆಬೇಕು ಕಾವ್ಯ ದೃಷ್ಟಿಯಿಂದ ಇದು ಬೇಕಾದಂತೆ, ಐತಿಹಾಸಿಕ ದೃಷ್ಟಿಯಿಂದಲೂ ಬೇಕು ಹಿಂದೆ ವಿನರಿಸಿದ ವ್ಯಕ್ತಿಗಳ ಸ್ಥಾನ, ಮಾನ, ದೊಡ್ಡಸ್ತನ, ಕೀಳುತನಗಳ ಸ್ಪಷ್ಟ ಕಲ್ಪನೆಗಳು, ಅವರ ಆವರಣದ ಪರಿಚಯಬೇಕು. ಆಗಿನ ಕದನಗಳ ಕಲ್ಪನೆ, ರಾಜನೀತಿಯ ದೃಷ್ಟಿ, ಅಲಂಕಾರ ಯೋಜನ, ಸಮಾಜ ಜೀವನ ಇವೆಲ್ಲಾ ಬೇಕು ರಾಮ, ಧರ್ಮೋಧ ಸರೆಂಬ ಹೆಸರಿಂದಲೇ ರಾಮಾಯಣ, ಮಹಾಭಾರತಗಳಾದಾವೆ?

ಇಷ್ಟು ಮೂತುಗಳನ್ನು ಯಕ್ಷಗಾನ ಕೂಟಗಳ ವಿಚಾರ ಹೇಳಿ ಈಗಿನ ಆಟಗಳ ವಿಚಾರ ಕಾಲರಿಸುವ ಬಯಲಾಟವನ್ನು ವರ್ಣಿಕೆ, ಹಿನ್ಮೇಳ, ಮೂತುಗಾರಿಕೆ,ಕುಣಿತ ಈ ಎಲ್ಲಾ ದೃಷ್ಟಿಗಳಿಂದ ವಿಮರ್ಶಿಸುವ ಆಟದಲ್ಲಿ ಮೂತುಗಾರಿಕೆಯೂ ಕುಣಿತ ದೊಂದಿಗೆ ಬರುವುದು ಒಂದು ಲಾಭ ತಾಳಮದ್ದಲೆಯ ಅರ್ಥಧಾರಿಗಳ ಉಳಿದೆಲ್ಲ ದೋಷಗಳು ಅದಕ್ಕೆ ಕಟ್ಟಬಹುದಾದರೂ--ಅಧಿಕ ಪ್ರಸಂಗ ಕಡಿಮೆ, ಇದು ಅವರ ಔದಾರ್ಯದಿಂದ ಬಂದುದಲ್ಲ ಬದಲು ಎದೆಗುಂದಿಗೆ. ಶಾಸ್ತ್ರಕೋಶಗಳು ಕುಣಿತದಿಂದ ಹೊಂದುವ ಆಯಾಸದಿಂದ. ಆದರೂ ಒಮ್ಮೆ ನನಗೆ ನೆನಪಿದೆ--ಅರ್ಧ ಗಾರನೊಬ್ಬನು ಕುಣಿಯುವ ಆಟಕ್ಕೂ ಇಳಿದು ಸುಧನ್ವನಾಗಿ ಅರ್ಜುನನೊಡನೆ ಅರ್ಧ ನಿಮಿಷ ಕಾದಿ ಸೋತು (ನಿಜಕ್ಕೂ) 'ಆಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನೊಡನೆ' ಅರ್ಧ ಘಂಟೆ ಉಪನ್ಯಾಸ ಮಾಡಿದನು.

ಯಕ್ಷಗಾನ ವರ್ಣಿಕೆ (Make up) ಯ ವಿಚಾರ--ನಿಜಕ್ಕೂ ಯಕ್ಷಗಾನದ ಭಾಗ್ಯವೆಂದರೆ ಅದರ ಉಡುಗೆ ತೊಡುಗೆ ವರ್ಣಿಕೆಗಳು. ಈ ದೃಷ್ಟಿಯಿಂದ ಜಾವಾ ನಾಟಕಗಳಿಗೆ ಏನೊಂದೂ ಕಡಿಮೆಯಿಲ್ಲದ ಉಡುಗೆ ಮತ್ತು ವರ್ಣಿಕೆಗಳು ನಮ್ಮವೆ. ಕಥಕ್ಕಳಿಗೂ ಇದಕ್ಕೂ ಸಂಬಂಧ ವಿದೆಯೆಂದೂ, ಅದರಿಂದಲೇ ಇದು ಬೆಳೆದಿರಬೇಕೆಂದೂ ಹೇಳುವವರು ಕೆಲವರು. ಇದು ಚಿತ್ರಕಲೆಯ ಗೋಷ್ಠಿಯಿಲ್ಲದವರ ಮತು ಆಂತಹರು ಮೋಹರಮ್ಮನ ಹುಲಿ ವೇಷಕ್ಕೂ, ಯಕ್ಷಗಾನದ ವಾಲಿಗೂ ಗಂಟಿಕ್ಕಬಹುದು

ಕಥಕ್ಕಳಿಯ 'ಕೃಷ್ಣ' ಸಾಮಾನ್ಯ ನೋಟಕ್ಕೆ ಇವನಿಗೂ, ರಾಕ್ಷಸ ರೂಪಕ್ಕೂ ಬಯಲ ವ್ಯತ್ಯಾಸವಿದೆಯೇ?

ಯಕ್ಷಗಾನ ಉಡುಗೆಯಲ್ಲಿ, ತೊಡುಗೆಯಲ್ಲಿ ಪಾತ್ರಗಳಿಗೆ ಒಪ್ಪುವ ರಮಣೀಯತೆಯಿದೆ ನಮ್ಮ ರಾಕ್ಷಸರ ಶೌರ್ಯ, ಶೀಲಗಳು—ಮುಖದ ವರ್ಣಿಕೆಯಲ್ಲಿ ಸೃಷ್ಟಿಯಾಗಿವೆ. ಕಥಕ್ಕಳಿಯ ರಾಕ್ಷಸರು ಯಕ್ಷಗಾನ ರಾಕ್ಷಸರ ಮುಂದೆ ಸೌಮ್ಯ ಪದಾರ್ಥಗಳು ಯಕ್ಷಗಾನದ ರಾವಣ ಕೃಷ್ಣರು ಪಂಚಪಾಂಡವರು ವರ್ಣಿಕೆಯ ದೃಷ್ಟಿಯಿಂದಲೂ ವೀರರು, ಸೊಗಸುಗಾರರು, ಕಥಕ್ಕಳಿಯಲ್ಲಿ 'ರಾವಣ' ರಾಕ್ಷಸನಾಗಿ ಕಾಣುತ್ತಾನೆ ಯಕ್ಷಗಾನದಲ್ಲಿ ಒಪ್ಪದ, ನೀಳವಾದ ವೇಷಗಳೆಂದರೆ ಕೇವಲ ಪಾಮರ ರಂಜನೆಗಾಗಿ ಬರುವ ಹನುಮನಾಯ್ಕ ಅವನ್ನು ವಿಶೇಷ 'ಸ್ತ್ರೀ' ವೇಷಗಳು, ಸ್ತ್ರೀ ಭೂಮಿಕೆಗಳು ಕಲೆಯ ಸೃಷ್ಟಿಗಳ ನಿತ್ಯದ ಅನುಕರಣೆಗಳು ಅವು ಮೂಲದಲ್ಲಿ ಹೀಗಿದ್ದಿರಲಾರದು. ತಮ್ಮ ಆಶ್ರಯದಾತರನ್ನೂ, ಸುತ್ತ ಪರಿಗಡಲೆ ತಿನ್ನುತ್ತ ಕುಳಿತವರನ್ನು ಮೋಹಿಸಲು ಬರುವ ಈ "ಹಣ್ಣು ಬೀರಿ" (1938ನೇ ಮೋಡಲ್) ಗಳು ಆಟದೊಂದಿಗೆ ಬೆರೆಯುವ ಅಭಾಸಗಳು.

ಬಯಲಾಟದ ಉಡುಗೆ, ವರ್ಣಿಕೆಗಳು ಕೇವಲ ನಮ್ಮಲ್ಲಿ ಉಂಟಾದುವು ಎನ್ನುವುದು ಕಷ್ಟ ಅವು ಪ್ರಚಾರದಲ್ಲಿರುವ ಯಕ್ಷಗಾನ ಹಾಡುಗಳಿಗಿಂತಲೂ ಹಳೆಯವಾಗಿ ಕಾಣುವುವು. ಕಥಕ್ಕಳಿಯ ಕಾವ್ಯ ನಿರೂಪಣೆಯನ್ನು ಕಂಡವರು ಇಲ್ಲಿನ ಹಾಡುಗಳನ್ನು ನೋಡಿದವರೋ ನಾನಾರಿಯೆ —ಅದರ ಪಾತ್ರಗಳ ರೂಪು ಉಡುಗೆಗಳು ಬಹು ಹಿಂದಿನವಿರಬೇಕು. ನಮ್ಮ ಹಾಡುಗಳ ಆಯುಸ್ಸನ್ನು ಎರಡು ಶತಮಾನವೆಂದು ತಿಳಿದರೆ—ಈ ವೇಷಗಳು ಪಡೆದ ಪೂರ್ಣತೆಯನ್ನು ಕಂಡರೂ ಇನ್ನೂ ಹಿಂದಿನವು ಹೆಚ್ಚಿನ ಬೆಳವಣಿಗೆಯಾಗಿರುವು ಎಂಬುದು ಸ್ಪಷ್ಟ. ಕಾರಣ— ಅವುಗಳ ಅಲಂಕಾರ, ಆಭರಣ ರೀತಿಗಳು ನಮ್ಮ ನಿತ್ಯದಂತೆಯೂ ಇಲ್ಲ. ಪ್ರಚಾರದಲ್ಲಿರುವ ಶಿಲ್ಪದಂತೆಯೂ ಇಲ್ಲ. ಅವು ಕೇವಲ ಸೃಷ್ಟಿಗಳಾಗಿರಬೇಕು; ಇಲ್ಲವಾದರೆ ತೀರ ಹಿಂದಿನ ಪರಪ್ರಾಂತೀಯ ಸಂಪರ್ಕದಿಂದ ಸೇರಿಕೊಂಡಿರಬೇಕು.

ಪಾಂಡವರ ಉಡುಗೆಯಂತಹ 'ಂದು ಉಡುಗೆಯನ್ನು ಕಂಡರೆ—ಅದರ ಕಿರೀಟ ಮುಂಡಾಸು, ಕವಚಗಳಲ್ಲಿ ಮಂಗೋಲಿಯದ, ನೇಪಾಲ, ಟಿಬೇಟಿನ ಕೆಲವೊಂದು ಮುಖವಾಡ, ಕಿರೀಟಗಳನ್ನು ಹೋಲುತ್ತವೆ ಆದರೆ ನಮ್ಮ ರಾಕ್ಷಸರ ವರ್ಣಿಕೆಯು ಕಥಕ್ಕಳಿಯ ವರ್ಣಿಕೆಗೆ ಸಮೀಪವಾಗಿದೆ (ಒಂದೇ ಅಲ್ಲ)ಇವು ವ್ಯಾಯಶಃ ದಕ್ಷಿಣಾತ್ಯರ ಭೂತದ ವೇಷದಿಂದ ಬಂದಿರಬಹುದೇ ಸಿಂಹಳದ ಭೂತದ ಮುಖವಾಡಗಳು (Davil Masks) ದಕ್ಷಿಣದ ಭೂತದ ವೇಶಗಳು ಅದಕ್ಕೆ ಸಮೀಪವಾಗುವುವು ಆರ್ಯರ ಕಥೆಗಳು ರಾಮಾಯಣ, ಮಹಾಭಾರತಗಳು, ಆರ್ಯರು ದ್ರಾವಿಡರನ್ನು ರಾಕ್ಷಸರ ಹಾಗೆ ನೋಡಲಿಗೆ ತಿಳಿದವರು. ಹೀಗಿರಲು ದ್ರಾವಿಡ ಭೂತದ ವೇಷಗಳನ್ನು ರಾಕ್ಷಸ ವರ್ಣಿಕೆಯ ಯೋಜನೆಗೆ ಕಂದಿರಬಹುದೆ? ಹಾಗಿದ್ದರೆ ಈ ವೇಷ ನಿರ್ಮಾಣದ ಕಾಲವು ತೀರ ಹಿಂದಕ್ಕೆ ಸರಿಯುವುದೆಷ್ಟೆ, ಆಯ ದ್ರಾವಿಡರದಲ್ಲವೆಂದಾಗುವುದು ರಾಕ್ಷಸ ವೇಷಗಳ ಮುಖದ ಚಿಟ್ಟೆಗಳು ಎಲ್ಲಿನವು? ಅವು ನೋಟಕ್ಕೆ ಮಮುರಿಗಳ ವರ್ಣಿಕೆಗೆ ಸಮನಾಗಿವೆ ಅಪ್ಪಿಕದ ಜನರಲ್ಲೂ ಜುಟ್ಟು ಮೂಡುವ ಹಚ್ಚೆಗೆ ಸಮನಾಗಿವೆ ಒಂದು ಕಾಲದಲ್ಲಿ ದ್ರಾವಿಡ ಬಳಗದಲ್ಲಿ ನಿತ್ಯ ಜೀವನದಲ್ಲೇ ಆ ರೀತಿಯ ಶೃಂಗಾರವಿದ್ದಿರಬಹುದೇ? ಇಲ್ಲವೇ ವಿದೇಶೀಯ ಮುಖವಾಡಗಳನ್ನು ಕಂಡು ಉಂಟುಗಿರಬಹುದೇ?

ಹಿಂದೆ ಹೇಳಿದ ಮಂಗೋಲರ (ಇವರಲ್ಲೇ ನೇಪಾಲಿ, ಟಿಬೇಟಿನವರು ಸೇರುತ್ತಾರೆ) ವರ್ಚಸ್ಸು ದಕ್ಷಿಣ ಕನ್ನಡವರ ಮೇಲೆ ಹೇಗಾಯಿತ? ಒಂದು ಕಾಲದಲ್ಲಿ ಕನ್ನಡದ ನರ್ತನ ಕೂಟವು ಹಿಮಾಲಯ ಪ್ರಾಂತ್ಯಕ್ಕೆ ಅಲೆಯುತ್ತಾ ಹೋಗಿರಬಹುದೋ, ಇಲ್ಲವೇ ಈಗಲೂ ನೇಪಾಲದ ಒಂದು ದೇವಾಲಯಕ್ಕೆ ನಮ್ಮ ದೇಶದಿಂದ ಅರ್ಚಕರಾಗಿ ಹೋಗುವ (ಶಂಕರಾಚಾರ್ಯರ ಕಾಲದಿಂದೀಚೆಗೆ) ಯಾವನಾದರೊಬ್ಬ ನರ್ತನ ಪ್ರಿಯನು ಇಲ್ಲಿಗೆ ಬಂದು ಅದನ್ನು ಪ್ರಚುರ ಪಡಿಸಿದನೇ? ಈ ಯಾವುದೋ ಕಾಲದ ದೃಷ್ಟಿಯಿಂದ ಯಕ್ಷಗಾನ ವೇಷ ಪದ್ಧತಿಯನ್ನು ತೀರ ಹಿಂದಕ್ಕೆ ಸೆಳೆಯುವುದು.

ಈಗ ಕುಣಿತದ ವಿಚಾರ-ಇಲ್ಲಿಯೂ ಕಥಕ್ಕಳಿಗೂ ಯಕ್ಷಗಾನಕ್ಕೂ ಸಂಬಂಧವಿಲ್ಲ ಇವೆಂಡು ಬೇರೆಯೇ ನೃತ್ಯ ಮಾರ್ಗಗಳು ಕಥಕ್ಕಳಿಯ ನೃತ್ಯ ವಿಧಾನವು ವಿಶೇಷ ಬೆಳವಣಿಗೆಯನ್ನು ತೋರಿಸುವುದಿಲ್ಲ ಆದರಲ್ಲಿ ಹೆಜ್ಜೆಯ ಬಡಿತಗಟ್ಟಿ, ಕಾಲಿಗೆ ಮುಂಗೆಡೆ ಬಾಗುಬರುವುದು. ಜೆಜ್ಜೆಗಳ ವೈವಿಧ್ಯವೂ ಇಲ್ಲ. ಯಕ್ಷಗಾನದಲ್ಲಿ ಕಾಲುಗಳು "ಆಟ್ಟೆ" ಬಾಗುಳ್ಳವು, ಕಾಲು ಹೆಜ್ಜೆ ಮೃದುವಾಗಿ ಬೀಳುವುದು ಹೆಜ್ಜೆಯಲ್ಲಿ ಬಲುವಿಧಗಳವೆ.ಇಲ್ಲಿನ ಉರುಳಾಟ, ಸುತ್ತಾಟಗಳು ಬೇರೆ, ರಂಗಭೂಮಿಯ ಸೃಷ್ಟಿಯಿಂದ ನರ್ತಕರು ಪ್ರತಿರೂಪಗಳನ್ನು (Patterns) ನಡೆದು ಕುಣಿದು ಸಾಗುತ್ತಾರೆ

ಕಥಕ್ಕಳಿಯು ಹಾವ ಪ್ರಧಾನ(Gestures) ಕಾರಣ ಅದು ಅಲ್ಲಿನ ಪ್ರಾಚೀನ ಭೂತದ ಕುಣಿತದ ಮೇಲೆ ಬರತ ನಾಟ್ಯದ ವರ್ಚಸ್ಸನ್ನು ಪಡೆದು ಉಂಟಾದುದಿರಬೇಕು ನಮ್ಮಲ್ಲಿನದು ಕೇವಲ ಕುಣಿತದಿಂದಲೇ ಸಾಗುವುದು

ರಾಕ್ಷಸರ ಪ್ರಾತರ್ವಿಧಿ ಒಂದಲ್ಲದೆ ಉಳಿದೆಲ್ಲಿಯೂ ನಮ್ಮಲ್ಲಿ ಹಾರ್ಗಳು ಕಾಣಿಸುವುದಿಲ್ಲ, ನೃತ್ಯ ವಿಧಾನಕ್ಕೆ ತಾಲ, ರೇಖಾ ಪ್ರಾಸ (Rythm) ಭಂಗಿ, ಅಂಗ ವಿನ್ಯಾಸಗಳು ಮುಖ್ಯ ಇವುಗಳಿಂದ ಭಾವ ಪ್ರದರ್ಶನವಾಗುವುದ.

ನಮ್ಮಲ್ಲಿನ ನೃತ್ಯ ಪದ್ಧತಿಯು ಜೀವಂತಿಗೆ ತುಂಬ ಅವಕಾಶ ಉಳ್ಳದು, ನಮ್ಮ ಕುಣಿತದಲ್ಲಿ ಬರಿಯ ಕಾಲುಕುಣಿತ, ಮಂಡಿತಗಳೇ ಬಹಳವಾಗಿವೆ, ಆದರೆ ಮೈಯ ಭಂಗಿಗಳೂ, ವಿನ್ಯಾಸಗಳೂ ತೀರ ಕಡಿಮೆ, ಭಾವ ದೃಷ್ಟಿಯಿಂದ ಹೆಜ್ಜೆ ಹಾಕಿದಂತೆ ಮೈಯ ಭಾಗಗಳನ್ನೂ ಸಹಿಸಬೇಕು ಬೆರಳಿನ ತುದಿಯ ತನಕ ಭಾವಕ್ಕೆ ಬಳಸಬೇಕು ಶರೀರದ ಮೇಲು ಭಾಗಕ್ಕೆ ಭಾವಸ್ಪರ್ತಿಪಾದನೆಯ ಶಕ್ತಿ ಕಳಗಿಲ್ಲ ನಮ್ಮಲ್ಲಿನ ಮದ್ದಲೆಗಾರರು ತಮ್ಮ ಅಧಿಕಾರದಲ್ಲಿ ಕುಣಿತವನ್ನಿಟ್ಟುಕೊಂಡುದರಿಂದ ಬರಿಯ ಕುಣಿತ ಬೆಳೆಯಿತು. ಶರೀರದ ಮೇಲ ಭಾಗವು ಮರಕಟ್ಟಿತು.

ಆದರಂತೆ ಮುಖಭಾವಗಳನ್ನು (ಮುದ್ರೆಗಳನ್ನು) ನಾವು ಬೆಳೆಯಿಸಬೇಕಾ ಭರತನಾಟ್ಯವನ್ನು ಅನುಸರಿಸುವ ಕಥಕ್ಕಳಿಯು ಇದಕ್ಕೂ ಮುಂದೆ ನರಿದಿದೆ. ಇದನ್ನು ನಾವು ಅನುಸರಿಸುವ ಕಾರಣವಿಲ್ಲ ಕಾರಣ ಭಾವಗಳಿಗೆ ಮೀಳವಾಗುವ ಮುಖ ಮುದ್ರೆಗಳು ಬೇರೆ, ಶೀಘ್ರಾಪ್ರಾಸ, ನರ್ತನಗಳಿಗೆ ಮೇಳವಾಗುವಮುಖಮುದ್ರೆಗಳು ಬೇರೆ.

ಈ ದೃಷ್ಟಿಗಳಿಂದ ಸುಧಾರಣೆಯೂಗಲು ನಮ್ಮಲ್ಲಿನ ಕಲಾದೃಷ್ಟಿ ಬೆಳೆಯಬೇ

(೨೩ನೇ ಪುಟ ನೋಡಿ)

ಮಂಗೋಲಿಯದ ಹೆಂಗಸೊಬ್ಬಳ ತಲೆಯ ಅಲಂಕಾರ ಈ ಮೂರಿಯ ಅಲಂಕಾರವು ನೇಪಾಳ, ಟಿಬೇಟುಗಳಲ್ಲಿವೆ ಅದಂದಲೇ ನಮ್ಮಲ್ಲಿಯ "ಮುಂಡಾಸು" (ಕರ್ಣನು) ಹುಟ್ಟಿರಬಹುದೇ?

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

(ಗಂತೇ ಸುಟದಿಂದ)

ತ್ತೊಬ್ಬಳ ಕೈಗೆ ಹೀಗೆ ಮೊದಲೇ ವಿಷಮ ಯವಾಗಿದ್ದ ಕಾರಣ, ಈಗ, ಯಾವ ಮಗು ಹೂರದು? ಎಂಬ ಸಮಸ್ಯೆ ತಲೆದೋರಿತು. ಆದರೆ, ಆ ಚತುರ ದಾದಿಯರು ಆ ನಸು-ಕಪ್ಪು ಬಣ್ಣದ ಮಗುವನ್ನು ನಸುಕವಪ್ಪಾಗಿದ್ದ ಎಂಟನೇ ವಾರ್ಡಿನ ಓರ್ವ ಮುಸಲ್ಮಾನೀ ಹೆಂಗುಸಿನದೆಂದು ಗುರುತಿಸಿ, ಅಲ್ಲಿಗೆ ತಲುಪಿಸಿದರು. ಇನ್ನೀರ್ವರು ಮಕ್ಕಳಲ್ಲಿ ಬಿಳಿ ಬಿಳಿಹೂಗಿದ್ದ ಒಂದು ಮಗು ಅದೇ ಬಣ್ಣದ ತಾಯಿ, ಅಪಿಲೆಯದೆಂದು ತೀರ್ಮಾನವಾಯಿತು. ಮೂರನೆಯ ಮಗುವಿನ ಬಗ್ಗೆ ಆಗ ಸಮಸ್ಯೆಯೇ ಉಳಿಯಲಿಲ್ಲ! ಹೀಗೆ ಸಂಶಯಕ್ಕೆಡೆಯಿಲ್ಲದಂತೆ ಆ ದಾದಿಯರು ಕಾರ್ಯ ಗೈದರು.

'ಓರ್ವ ಪ್ರಸ್ಸೀ ನರ್ಸಿನೊಡನೆ, ಆ ಯ್ಯರು ಮಗುವಿನ ಆರೋಗ್ಯದ ವಿಚಾರ ಕೇಳುತ್ತ ಅಪಿಲೆಗೆ ವಿವರಿಸುತ್ತಿರುವಾಗ ಅಪಿಲೆಯ ಮಗುವಿ[illegible] ವಿಯಿಸಿದ ಆ ಮೊದಲನೆಯ ದಾದಿ ಒಂದು ಮಗುವನ್ನೆತ್ತಿಕೊಂಡು ಹೊರಗೆ ಬಂದಳು. ಆಗ ಡ್ಯೂಟಿಯಲ್ಲಿದ್ದವಳೂ ಅವಳೊಡನೆಯೇ ಹೊರಗೆ ಬಂದಳು. ಮಗು ಬಹು ಮುದ್ದಾಗಿತ್ತು. ಅದನ್ನು ನೋಡು ನೋಡುತ್ತಿದ್ದಂತೆಯೇ ಆ ಮೊದಲನೆಯ ದಾದಿ–'ಆಕೆ! ಈ ಮಗುವಿಗೆ ತೊಡೆಯ ಹತ್ತಿರ–ಒಂದು ಎಳ್ಳಿನ ಮಚ್ಚೆ ಇದ್ದುದು, ಅದು ಹೇಗೆ ಇಷ್ಟು ಬೇಗ ಮಾಯವಾಯಿತು?' ಎಂದು ಆಶ್ಚರ್ಯಗೊಂಡಳು. ಆಗ ಎರಡನೆಯ ದಾದಿ–'ಹಾಗಾ' ದರೆ ಆ ಎಳ್ಳಿನ ಮಚ್ಚೆ ಇದ್ದ ಮಗು ಈ ಹೆಂಗುಸಿನದೇ? ಆ ಮಗು ಆ ಎಂಟನೇ ವಾರ್ಡಿನ ಮುಸಲ್ಮಾನೀ ಹೆಂಗುಸಿನದಿರಬೇಕೆಂದು ತಿಳಿದು ನಾವು ಅದನ್ನು ಅಲ್ಲಿಗೆ ಕಳುಹಿಸಿದ್ದೇವಲ್ಲ?'

'ಓಹ್! ದೇವರೇ! ಹಾಗಾದರೆ ಈ ವಿಷಯ ಇನ್ನು ಗುಟ್ಟಾಗಿರಲಿ!' ಮೊದಲನೆಯ ದಾದಿ ಪಿಸುಗುಟ್ಟಿದಳು.

'ಜೇ! ಅದು ಹೇಗಾದೀತು? ನಿನಗೆ ಸರಿ ನೆನಪಿದ್ದರೆ, ನಾವು ಈಗಲೇ ಮಕ್ಕಳನ್ನು ಬದಲಾಯಿಸಿ ಸರಿಪಡಿಸೋಣ!'

'ಅಯ್ಯೋ! ಹುಚ್ಚಿ! ನಾವು ಇನ್ನು ಹಾಗೆ ಮಾಡಿದರೆ,ಆ ತಾಯಂದಿರು ಎಂದಿಗೂ ಅದನ್ನು ಒಪ್ಪಲಾರರು. ಇದರಿಂದಾಗಿ ನಾವು ಕೆಲಸವನ್ನೂ ಕಳೆದುಕೊಳ್ಳ ಬೇಕಾದೀತು! ಇದು ರಹಸ್ಯವಾಗಿಯೇ ಇರಲಿ!ಇನ್ನು ಆದರ ಪ್ರಸ್ತಾಪವೇ ಬೇಡ! ಮೊದಲನೆಯ ದಾಥ ನಿರ್ಧಾರ ಪೂರ್ವಕವಾಗಿ ಹೇಳಿದಳು.

ಅಪಿಲೆಗೆ ಗಂಡು ಮಗು ಹುಟ್ಟಿದುದೇ ಒಂದು ಸಂತೋಷ. ಈ ಬದಲಾವಣೆಯೂ ರಿಗಾದರೂ ಹೇಗೆ ಗೊತ್ತಾಗ ಬೇಕು? ಅಂತು ಅಯ್ಯರರಿಗೆ ಮುಸಲ್ಮಾನರ ಮಗು! ಅಬ್ದುಲ್ಲರಿಗೆ ಬ್ರಾಹ್ಮಣರ ಮಗು! ಹೀಗೆ ಈ ಅದಲು ಬದಲು ನಡೆಸೇ ಹೋಯಿತು!

ಹನ್ನೆರಡು ದಿನಗಳು ಕಳೆದ ಬಳಿಕ ಕ್ರಮವಾಗಿ ಅಯ್ಯರರು ಮತ್ತು ಅಬ್ದುಲ್ಲರು ತಂತಮ್ಮ ಮನೆಗಳಿಗೆ ಮಡದಿ ಮಕ್ಕಳೊಡನೆ, ತೆರಳಿದರು. ಈರ್ವರ ಮನೆಗಳಲ್ಲಿಯೂ, ಮಕ್ಕಳ ಲಾಲನೆ ಪಾಲನೆ ಯಾವುದಕ್ಕೂ ಕೊರತೆಯಿಲ್ಲದೆ, ಚೆನ್ನಾಗಿಯೇ ನಡೆಯಿತು.

ಜ್ಯೊಸರು, ಅಯ್ಯರರ ಮಗುವಿನ ಕುಂಡಲಿಯನ್ನು ತಯಾರಿಸಿ ನೋಡಿ—'ಈತನು ಭಾರೀ ದೊಡ್ಡ ವ್ಯಾಪಾರಿಯಾಗುತ್ತಾನೆ. ಆದರೆ ಈತನಿಂದ ತಂದೆ ತಾಯಿಗೆ ನಿರಿಗೇನೂ ವಿಶೇಷ ಅನುಕೂಲವಾಗದು' ಎಂದು ಭವಿಷ್ಯವಾಣಿ ನುಡಿದಿದ್ದರು ಆಗ ಅಯ್ಯರರು— 'ಅವನು ಚೆನ್ನಾಗಿದ್ದರೆ ಸಾಕು, ನಮಗೆ ಮತ್ತೇನು ಬೇಕು?' ಎಂದು ನುಡಿದರು.

ಈ ಮಕ್ಕಳು ದೊಡ್ಡವರಾಗಿ ವೃತಹಾರ ಕ್ಷೇತ್ರದಲ್ಲಿ ಕಾಲಿರಿಸಿದರು, ಅಬ್ದುಲ್ಲರ ಮಗ ಸುಲೇಮಾನನು ದೊಡ್ಡ ವ್ಯಾಪಾರಿಯಾಗಿ ಪ್ರಖ್ಯಾತಿ ಹೊಂದಿದನು. ಅಯ್ಯರ ಮಗ ಅಶ್ವತ್ಥ ನಾರಾಯಣನು ಬಹು ಪ್ರಯತ್ನದಿಂದ, ಎಸ್ ಎಸ್. ಎಲ್. ಸಿ. ಪಾಸುಮಾಡಿ ಕೆಲಸಕ್ಕಾಗಿ ಅಲೆದಾಡ ತೊಡಗಿದನು. ಕೆಲಸದ ಬೆನ್ನ ಹತ್ತಿ ಬೊಂಬಾಯಿಗೆ ಹೋದನು. ಆದರೆ ಹೋದಲ್ಲೆಲ್ಲ ಆತನಿಗೆ ಅಪಜಯವೇ ಕಾದಿರುತ್ತಿತ್ತು. ಕೊನೆಗೆ ಪೆಚ್ಚು ಮೋರೆ ಹಾಕಿ ಮನೆಗೆ ಮರಳಿದ ಮಗನನ್ನು ಕಂಡ ಅಯ್ಯರರು—'ಈ ಹುಡುಗ ಭಾರೀ ವ್ಯಾಪಾರಿಯಾಗುತ್ತಾನೆಂದು ಜ್ಯೊಸರು ಕೇಳಿದ್ದರು. ಈಗ ಆದುದೇನು? ಇವರೆಲ್ಲ ರಕ್ಕು ಜ್ಯೊಸರು!' ಎಂದು ಬೇಸರದಿಂದ ನುಡಿದರು. ಆಗ—ಅಪಿಲೇ ನೀವು ಹೀಗೆ ಹೇಳಿ ಬಾರದು. ಜ್ಯೊಸರು ಹೇಳಿದ್ದಂತೆಯೇ ಆಲ್ಲವೇ ನಮಗೆ ಸಂತತಿಯೂದುದು?' ಅವರ ಭವಿಷ್ಯವಾಣಿ ಸುಳ್ಳಾಗಲಾರದು. ಅಶ್ವತ್ಥನನ್ನು ವ್ಯಾವಾರದ ವ್ಯವಹಾರ ಕಲಿತು ಕೊಳ್ಳುವುದಕ್ಕಾಗಿ, ಎಲ್ಲಿಯಾದರೂ ಯೋಗ್ಯರಿಂದ ಚೆಟ್ಟಿಯರರಲ್ಲಿಗೆ ಕಳುಹಿಸಿಕೊಡಿ!' ಎಂದಳು. ಕಥೆ ಇಲ್ಲಿಗೆ ಮುಕ್ತಾಯವಾಗುತ್ತದೆ.

ತಮ್ಮ ಹುಡುಗ ಮಗುವಾಗಿದ್ದಾಗಲೇ ಅಬ್ದುಲ್ಲರಲ್ಲಿಗೆ ಬದಲಾವಣೆಯಾಗಿ ಹೋಗಿ, ಅಲ್ಲಿ ಜ್ಯೊಸರು ಹೇಳಿದ್ದಂತೆ ದೊಡ್ಡ ವ್ಯಾಪಾರಿಯಾಗಿದ್ದಾನೆ! ಮುಸಲ್ಮಾನರ ಹುಡುಗ ಈಗ ತಮ್ಮ ಮಗನಾಗಿದ್ದು, ಹೆಡ್ಡ ದೂಮನಾಗಿದ್ದಾನೆಂದು ಪಾಪ! ಅಯ್ಯರರಿಗೆ–ಹೇಗೆ ತಾನೆ ಗೊತ್ತಾಗಬೇಕು?

ಇಲ್ಲಿಯ ಸ್ವಾರಸ್ಯವೆಂದರೆ, ಈ ಮಕ್ಕಳ ಬದಲಾವಣೆಯ ವಿಚಾರ, ಆ ದಾದಿಯರು ಮತ್ತು ಈ ಕಥೆಗಾರರ ಹೊರತು ಯಾರಿಗೂ ತಿಳಿದಿಲ್ಲ! ಆ ದಾದಿಯರು ಈ ಬದಲಾವಣೆಯನ್ನು ರಹಸ್ಯವಾಗಿಯೇ ಇರಿಸಿದ್ದರೂ, ಈ ಕಥೆಗಾರರು, ಆ ರಹಸ್ಯವನ್ನು ತಿಳಿದು ತಮ್ಮ ಈ ಕಥೆಯ ಮೂಲಕ ತಿಳಿಸಿ ದೊಡ್ಡ ಅಸ್ಪತ್ರೆಗಳಿಗೆ ಹೆರಿಗೆಗಾಗಿ ತಮ್ಮ ಮನೆಯ ಹೆಂಗುಸರನ್ನು ಕಳುಹಿಸುವವರಿಗೆ ಒಂದು ಎಚ್ಚರಿಕೆಯನ್ನು ಕೊಟ್ಟು ಉಪಕಾರ ಮಾಡಿದ್ದಾರೆ!

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. 11—11—62 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಪೀರಿನಲ್ಲಿ ತೆಗೆದು ಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh)

ಮುಂಬೈಯಲ್ಲಿ ಚಹಾ ಹಾಗೂ ಕಾಫಿಯ ಪ್ರಸಿದ್ಧ ಕೇಂದ್ರ.

ಸಂದರ್ಶಿಸಿದಲ್ಲಿ ಖಾತ್ರಿಯಾಗುವುದು.

ಪ್ರಭಾತ್ ಟೀ ಅಂಡ್ ಕಾಫಿ ಸೆಂಟರ್

(ಪ್ರೋ: ಬಿ ನಗರ್‌ದಾಸ್ ಅಂಡ್ ಕೋ.)

205–209, ಸರ್ದಾರ್ ವಿ. ಪಿ. ರೋಡ್, ಗೋಲ್ಪೀಠ,

ಮುಂಬೈ—4.

PRABHAT TEA & COFFEE CENTRE

[Prop: B. NAGARDAS & CO.]

205—209, Sardar V. P Road, Golpitha,

Somji Building, BOMBAY—4.

PHONE: 332353

ರಾಜ್ಯದ ಪ್ರತಿಯೊಬ್ಬ ಜಮೀನುದಾರ, ಗೇಣಿದಾರ ಹಾಗೂ ಭೂಮಾಲಿಕನ ಹಕ್ಕು ಬಾಧ್ಯತೆಗಳನ್ನು ಸಮೂಲಾಗ್ರವಾಗಿ ಮಾರ್ಪಡಿಸುವ ಅತ್ಯಂತ ಕ್ರಾಂತಿಕಾರಕವಾದ ಹಾಗೂ ಸದ್ಯದಲ್ಲೇ ಜಾರಿಗೆ ಬರಲಿರುವ

ಮೈಸೂರು ಭೂ ಸುಧಾರಣೆಗಳ ಅಧಿನಿಯಮ (ಶಾಸನ) 1961

ಬರೆದವರು: ಕೆ. ಎಸ್. ಆಳ್ವ, ಎಡ್ವಕೇಟ್,

ಜಮೀನಿನಲ್ಲಿ ಹಿತಸಂಬಂಧವುಳ್ಳ ಪ್ರತಿಯೊಬ್ಬನಿಗೆ ಹಾಗೂ ಪಂಚಾಯತುಗಳಿಗೆ, ಮತ್ತು ಸಹಕಾರ ಸಂಘಗಳಿಗೆ ಬೇಕಾದ ಅತ್ಯುಪಯುಕ್ತ ಪುಸ್ತಕ-

ಬೆಲೆ ರೂ. 4|- ವಿ ಪಿ. ಪಿ. ಖರ್ಚು ಪ್ರತ್ಯೇಕ.

ಪ್ರತಿಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಕೆ. ಎಸ್. ಆಳ್ವ, ಎಡ್ವಕೇಟ್,

ಕೊಡಿಯಾಲಬೈಲ್, ಮಂಗಳೂರು 3.

ದೀಪಾವಳಿಯ ಶುಭಾಶಯಗಳು

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು

ಉಡುಪಿ — ದ. ಕನ್ನಡ

ಮ್ಯಾನೇಜರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಪಾಲುಕೋಟೆ, ಉಡುಪಿ

ಉಚಿತ ವಾಚನಾಲಯ

(೧೫ನೇ ಪುಟದಿಂದ)

ವಾಚನಾಲಯ ಚೆನ್ನಾಗಿ ನಡೆದುಕೊಂಡು ಬರುತ್ತಿದೆಯಲ್ಲವೇ?

ಮಂಜೇ ಗೌಡ— ನಡೆದುಕೊಂಡು ಬರುತ್ತಿದೆ—ಸ್ವಾಮಿ—ಆದರೆ.....

ದೇವೇ ಗೌಡರು—ಮಂಜೇ ಗೌಡರೇ ಏಕೆ? ನೀವು ಬೇಸರ ಪಡುತ್ತಿರುವಂತೆ ಕಾಣುತ್ತೆ—ಏನು ಸಮಾಚಾರ. ನನ್ನಲ್ಲಿ ಹೇಳುವುದಕ್ಕೇನು! ಸಂಕೋಚಪಡದೆ ತಿಳಿಸಿ—ತಕ್ಕ ಪರಿಹಾರ ಕಾರ್ಯಕ್ರಮ ಕೈಗೊಳ್ಳೋಣ.

ಮಂಜೇ ಗೌಡ— ಅದಕ್ಕೇನು ಕಡಮೆ—ಮಹಾ ಸ್ವಾಮಿ—ಈಗ ಈ ವಾಚನಾಲಯದಲ್ಲಿದ್ದ ಪುಸ್ತಕಗಳಲ್ಲಿ ಮುಕ್ಕಾಲು ಭಾಗಕ್ಕೆ ಹೆಚ್ಚಾಗಿ ಹೊರಗೆ ಹೋಗಿದೆ.

ದೇವೇ ಗೌಡ— (ಆನಂದದಿಂದ) ಹಾಗೆ ಹೇಳಿ—ಅದರಿಂದ ಹೆಚ್ಚು ಮಂದಿ ಪುಸ್ತಕ ಓದುತ್ತಿರುವರೆಂದಾಯಿತು — ಅಲ್ಲವೇ!

ಮಂಜೇ ಗೌಡ— ಎಲ್ಲಾ ಎರಡು ತಿಂಗಳ ಕೆಳಗೆ ತೆಗೆದುಕೊಂಡು ಹೋದ ವುಗಳು.

ದೇವೇ ಗೌಡ— (ಗಾಭರಿಯಿಂದ) ಏನುದಿರಿ ಅವರೇಕೆ ಅವುಗಳನ್ನು ಹಿಂತಿರುಗಿಸಿಲ್ಲ!

ಮಂಜೇ ಗೌಡ— (ವಿನಯದಿಂದ) ಏನತ್ತು ಸಲ ಕೇಳಿದ್ದಾಯಿತು—'ನಿಮ್ಮ ಪುಸ್ತಕಾನ ನಾವು ತಿಂದು ಬಿಡುತ್ತೇವೇನ್ರೀ" ಂದು ಗದರುತ್ತಾರೆ. ನಾನೇನು ಮಾಡಲಿ—ಸ್ವಾಮಿ!

ದೇವೇ ಗೌಡ— (ವಿಸ್ಮಯದಿಂದ) ಹಾಗೆ ಮಾಡಿದರೂ ಮಾಡುವರೇ!

ಮಂಜೇ ಗೌಡ— ಏನುತಿಂದು ಬಿಡುವರೇ!

ದೇವೇ ಗೌಡ— ಇಲ್ಲಾ. ಹೀಗಿದ್ದರೆ ಅವರಿಂದ ಪುಸ್ತಕ ಹಿಂತಿರುಗಿ ಬರುವ ಬಗೆ?

ಮಂಜೇ ಗೌಡ— ನಾಳೆಯೇ ನಾನು ಪುಸ್ತಕಗನ್ನು ಈ ವಾರದ ಕೊನೆಯೊಳಗಾಗಿ ಹಿಂತಿರುಗಿಸದವರಿಗೆ ಫೈನ್ ಹಾಕಲ್ಪಡುವುದು. ಎಂದು ನೋಟೀಸು ಬೋರ್ಡಿನಲ್ಲಿ ಹಾಕಿಬಿಡುತ್ತೇನೆ.

ದೇವೇ ಗೌಡರು— ಅದೇ ಸರಿಯಾದ ಉಪಾಯ—ಹಾಗೆಯೇ ಮಾಡಿ (ದೇವೇ ಗೌಡರು ತಮ್ಮ ಕಾರ್ಯಾಲಯದೊಳಗೆ ಹೋಗುವರು—ತೆರೆ)

(ದೃಶ್ಯ ೪)

ಸ್ಥಳ— ಉಚಿತ ವಾಚನಾಲಯ—ಕಾಲ—ಬೆಳಿಗ್ಗೆ ಹತ್ತೂವರೆ ಘಂಟೆಯ ಸಮಯ.

(ರಂಗಸ್ವಾಮಿ ಪ್ರವೇಶಿಸುವರು—ಮಂಜೇ ಗೌಡರು ಮೇಜಿನ ಮುಂದೆ ಕುಳಿತಿದ್ದಾರೆ.)

ರಂಗಸ್ವಾಮಿ— ಮಂಜೇ ಗೌಡರೇ ಇದೋ ತಗೊಳ್ಳಿ. ನಾನು ಕೊಂಡುಹೋದ ಪುಸ್ತಕ ವಾಪಸು ಮಾಡಿದ್ದೇನೆ.

ಮಂಜೇ ಗೌಡ— (ಕೈಗೆ ತೆಗೆದುಕೊಂಡು ತಿರುಗಿಸಿ ತಿರುಗಿಸಿ ನೋಡುತಾ) ಏನು ಸ್ವಾಮಿ? ಇದರ ರೂಟ್ಟುಗಳೆಲ್ಲಾ ಏನಾದವು?

ರಂಗಸ್ವಾಮಿ— ಅದೇ—ಅದು ದಪ್ಪವಾಗಿ ಚೆನ್ನಾಗಿತ್ತು. ನಮ್ಮ ಹುಡುಗನ ವ್ಯಾಕರಣ ಪುಸ್ತಕದ ರೊಟ್ಟು ಹರಿದುಹೋಗಿತ್ತು. ಚೆನ್ನಾಗಿದೇಂತ ಅದಕಿಟ್ಟು ಹೊಲಿದು ಕೊಟ್ಟುಬಿಟ್ಟೆಕಂಡ್ರೀ

ಮಂಜೇ ಗೌಡ (ಮೆಲ್ಲಗೆ) ಒಳ್ಳೇ ಕಥೆಯಪ್ಪಾ ಇದು! ಕೇಳೋವರಿಗೆ ಏನೆಂದು ಹೇಳಲಿ?

ಗೋವಿಂದಯ್ಯ— (ಪ್ರವೇಶಿಸಿ) ಮಂಜೇ ಗೌಡ್ರೇ—ನಾನು ತೆಗೆದುಕೊಂಡು ಹೋದ ಪುಸ್ತಕ ತಂದಿದ್ದೇನೆ—ತೆಗೆದು ಕೊಳ್ರೀ

ಮಂಜೇ ಗೌಡ— (ಪುಸ್ತಕವನ್ನು ಕೈಲಿ ತೆಗೆದುಕೊಂಡು) ಪುಸ್ತಕದಲ್ಲಿಲ್ಲಿ ಬಂತ್ರೀ ಇಷ್ಟು ನೀರು.....ಏನಿದು? ಪುಸ್ತಕಕ್ಕೇನಾದರೂ ಸ್ನಾನಾ ಗೀನ ಮಾಡಿಸಿದೀರೇನು? ಚೆನ್ನಾಯಿತು.

ಗೋವಿಂದಯ್ಯ— (ನಗುತ್ತಾ)ಇಲ್ಲಾ ಕಣೀ—ಪುಸ್ತಕವನ್ನಿಟ್ಟುಕೊಂಡು ಗಾಳಿ ಬೀಸಿಕೊಳ್ಳುತಿದ್ದೆ—ಆಗ ಅದು ಕೈಜಾರಿ ಗಾಳಿಗೆ ಹಕ್ಕದಲ್ಲಿಟ್ಟಿದ್ದ ನೀರಿನ ತೊಟ್ಟಿಯೊಳಗೆ ಬಿದ್ದು ಹಾಗಾಯಿತಷ್ಟೇ.

ಮಂಜೇ ಗೌಡ— (ವಿಸ್ಮಯ ಮತ್ತು ಬೇಸರದಿಂದ) ಅಯ್ಯೋ ರಾಮೂ! ಪುಸ್ತ ದಿಂದಲೇ ಬೀಸಿಕೊಳ್ತಾ ಇದ್ದಿರಿ!

ಮೂದಯ್ಯ— (ಬಂದು) ಮಂಜೇ ಗೌಡರೇ—ತಗೊಳ್ಳಿ—ಪುಸ್ತಕವನ್ನು ತೆಗೆದು ಬೀರುವಿನಲ್ಲಿಡಿ—ಅದರ ಮಧ್ಯದಲ್ಲಿದ್ದ ನಾಲ್ಕು ಪೇಜುಗಳನ್ನು ನನ್ನ ಹೆಂಡತಿ ಹರಿದು ಒಲೆ ಹತ್ತಿಸಲು ಉಪಯೋಗಿಸಿದಳು. ಉಳಿದ ಪೇಜುಗಳೆಲ್ಲಪೂ ಸರಿಯಾಗಿವೆ.

ಮಂಜೇ ಗೌಡ— ಪುಸ್ತಕ ಆದರಲ್ಲಾ ಚೆನ್ನಾಗಿರೋ ಪುಸ್ತಕ ಹರಿದೇ ಒಲೆ ಹತ್ತಿಸೋದು ಬೇರೇನೂ ಸಿಗಲಿಲ್ಲವೇ?

ಮೂದಯ್ಯ— ಏನೂ ಸಿಗದ್ದರಿಂದಲೇ ಪುಸ್ತಕದ ಕಾಗದ ಹರಿದು ಒಲೆ ಹತ್ತಿಸಿದ್ದು. ಹಲ್ಲುಪುಡಿ ಪೊಟ್ಣ ಕಟ್ಟೋಕೆ ನಾನೇನೂ ಹರಿಯಲಿಲ್ಲಾ.

ಮಂಜೇ ಗೌಡ— ನಿಮ್ಮ ಮಾತಿಗೆ ಏನು ಹೇಳೋದು ಹೇಳಿ.

ಹನುಮಂತಪ್ಪ— ಮಂಜಯ್ಯ ಗೌಡರೇ—ತೆಗೆದುಕೊಳ್ಳಿ ಪುಸ್ತಕಾನ. ಒಂದು ಚಿತ್ರ ಬಿಟ್ಟು ಉಳಿದುದೆಲ್ಲಾ ಸರಿಯಾಗಿದೆ—ನೋಡಿಕೊಳ್ಳಿ.

ಮಂಜೇಗೌಡ— ಅದಂಲ್ಲಿದ್ದುದೆಲ್ಲಾ ಒಂದೇ ಒಂದು ಚಿತ್ರ ತಾನೇ ಸ್ವಾಮಿ—ಅದೇನಾಯಿತು?

ಹನುಮಂ 'ಪ್ಪ— ನಮ್ಮ ಮಗ ಇದಾನೆ ನೋಡ್ರಿ—ಕಟ್ಟೂ ಅವನು ಆದರಲ್ಲಿರೋ ಪಟಾನ ಹರಿದು...

ಮಂಜೇಗೌಡ— (ಗಾಭರಿಯಿಂದ) ಏನಂದಿರಿ? ಹರಿದನೆ?

ಹನುಮಂತಯ್ಯ— ಹಾದು-ಹರಿದು ತನ್ನ ಚರಿತ್ರೆ ಪುಸ್ತುಕಕ್ಕಂಟಿಸಿ ಕೊಂಡಿದ್ದಾನೆ. ಬೇಡಾಂದೇ ಕೇಳಲಿಲ್ಲ. ಏನು ಮಾಡಲಿ ಹೇಳಿ.

ಮಂಜೇಗೌಡ (ಮೆಲು ದನಿಯಿಂದ) ಒಳ್ಳೇ ಜೋಕಪ್ಪಾ ಇದು.

ಹನುಮಂತಯ್ಯ— ನಮ್ಮ ಕಿಟ್ಟಿ ಕೆಲಸಾ ನೀಪ್ಪೊಂದು ಸಲ ನೋಡಬೇಕು ಕಂಡ್ರೀ-ನೋಡಿದರೆ ತಲೆದೂಗುವಿರಿ. ಅಷ್ಟು ಚೆನ್ನಾಗಿ ಕೈಗೆಲಸಮಾಡ್ತಾನೆ.

ಮಂಜೇಗೌಡ— (ಬೇಸರದಿಂದ) ಆ ದಕ್ಕೇನು? ನೋಡಿದರಾಯಿತು—ನೋಡೋಣ ಒಂದು ದಿನ.

(ದೇವೇ ಗೌಡರು ಪ್ರವೇಶಿಸುವರು)

ದೇವೇಗೌಡರು (ಮಂಜೇಗೌಡರ ಕಡೆ ತಿರುಗಿ) ಮಂಜೇಗೌಡರೇ ಎಷ್ಟು ಪುಸ್ತಕಗಳು ಹಿಂತಿರುಗಿ ಬಂದಿವೆ?

ಮಂಜೇಗೌಡ— ಏನು ಹೇಳಲಿ ಸ್ವಾಮಿ.—ನಾಲ್ಕರಲ್ಲೊಂದು ಭಾಗ ಬಂದಿದೆ ಅದು ಈ ಸ್ಥಿತಿಯಲ್ಲಿ (ಹರಿದಿರುವ ಪುಸ್ತಕಗಳನ್ನು ತೋರಿಸುವರು)

ದೇವೇ ಗೌಡರು— ಯಾಕೆ! ಎಲ್ಲಾ ಹೀಗಾಗಿದೆ! ಚೆನ್ನಾಗಿಟ್ಟಿರಲಿಲ್ಲವೇ?

ಮಂಜೇಗೌಡ— ಪುಸ್ತಕಗಳು ರಟ್ಟು ಸಹಿತ ಇದ್ದರಲ್ಲವೇ ಚೆನ್ನಾಗಿರೋಕೆ. ಅರ್ಧಕ್ಕಿಂತ ಹೆಚ್ಚು ಪುಸ್ತಕಗಳು ನನ್ನ ಕೈಲಿರೋ ಪುಸ್ತಕಗಳೆ ಹಾಗಿವೆ. ಅರ್ಧಕ್ಕೆಲ್ಲಾ ಲಿಲ್ಲ. ಕೈಯಿಲ್ಲ-ತಲೆಯಿಲ್ಲ-ಯುದ್ಧದಿಂದ ಹಿಂತಿರುಗಿದ ಸಿಪಾಯಿಗಳಂತಿವೆ.

ದೇವೇಗೌಡರು- ವಾಚನಾಲಯ ಈ ರೀತಿನಲ್ಲಿ ನಡೀತಾ ಇದ್ದರೆ ಮುಂದೆದರ ಗತಿ!

ಮಂಜೇಗೌಡ — ಗತಿಯೇನು? ಗಂಗಮ್ಮನ ಪಾಲು ಅರ್ಧಂಬರ್ಧ ಇರ್ಕೊ ಪುಸ್ತುಕಗಳನ್ನೆಲ್ಲಾ ಹಳೇ ಪೇಪರು ಮಾರೋವನಿಗೆಕೊಟ್ಟು ಕೈತೊಳೆದುಕೊಳ್ಳೋದು—ತಿಳಿದೇ ಇದೆ.

ದೇವೇ ಗೌಡರು— (ಬೇಸರದಿಂದ) ಏನು ಮಾತ್ತೆ? ಕೊನೆಗೆ ಮಾಡಬೇಕಾದ್ದು ಹಾಗೆಯೇ.

ಮಂಜೇ ಗೌಡ— ನನಗೂ ಈಗ ಸ್ವಲ್ಪ ಬಿಡುವು ದೊರಕೀತು.

ದೇವೇ ಗೌಡರು — (೫ರ ಬೇಸರದಿಂದ) ಸರಿ—ಆಗಲಿ—ನೋಟೀಸು ಬೋರ್ಡಿನಲ್ಲಿ—"ಆನಿರೀಕ್ಷಿತವಾದ ಕೆಲವು ಕಾರಣಗಳಿಂದ ವಾಚನಾಲಯ ಮುಚ್ಚಲ್ಪಟ್ಟಿದೆ—ಎಂದು ಬರೆದು ತಗಲು ಹಾಕಿಬಿಡು—ಅರ್ಧಂಬರ್ಧ ಇರೋ ಪುಸ್ತಕಗಳನ್ನೆಲ್ಲಾ ಹೋದ ಬೆಲೆಗೆ ಕೊಡುವ ದಾರಿನೋಡು.

(ದೇವೇ ಗೌಡರು ಹೊರಡುವರು.)

(ತೆರೆ)

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿ ಕರ್ನಾಟಕ ಸಂಘದ ಮೂರು ಪ್ರಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಅಧುನಿಕ ಪ್ರಪಂಚದ ಮಹತ್ತರವಾದ ಅಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಅಧಿಕಾರ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು. ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩=೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಡಿ. ಮು. ಕೋರ್ಟ್‌ನಲ್ಲಿ

RIA 1128/62 O S 322/56

ಶ್ರೀನಿವಾಸ ತಂತ್ರಿ ಕೂಡಾ —ವಾದಿರು ಮತ್ತು

ಅಬ್ಬಕ್ಕು ಸೆಟ್ತಿ ಕೂಡಾ —ಪ್ರತಿವಾದಿರು. ಇವರೊಳಗೆ

ಸಪ್ಲಿಮೆಂಟು ೨ನೆ ಪ್ರತಿವಾದಿ.

ಸಿದ್ದು ಸೆಟ್ಟಿ—ಅಬ್ಬಕ್ಕು ಸೆಟ್ತಿ ಮಗ ಉದ್ವಿಶಾಲಕ್ಕು ಕೊಡಪೂಡು ಗ್ರಾಮ-ಯಿವರಿಗೆ ವಾದಿರು ಪ್ರತಿವಾದಿರ ಮೇರೆ ಮೂವಿದ ಮೇಲಿನ ನಂಬ್ರವ್ಯ ತಾ 25—10—62ಕ್ಕೆ ತಪ್ಪದೆ ಯಿಪ್ಪರುವರಿಂದ ನಿಮ್ಮ ಆಕ್ಷೇಪಣೆ ವಗ್ಗೆರೆಯಿದ್ರೆ ಜಾಹೀರು ಮೂಡುವರೆ ಮೇಲ್ಕಂಡ ಕೋರ್ಟ್‌ನಲ್ಲಿ 10 ಗಂಟೆಗೆ ಹಾಜ್ರಾಗಿ ಮಾನವಿನಿಕೊಳ್ಳಬೇಕು ಯಿಲ್ಲವಾದ್ರೆ ಎಕ್ಸ್ ಪಾರ್ಟ್ ಮಾಡಲಾಗುವುದು.

P. Padmanabha Rao,
Vakil for Plff.

ಉಡ್ಪಿ, 16.10.62

ಹೊಸ ಪುಸ್ತಕ—

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಕವಲು ದಾರಿ— ಕೆಂಪು ದೀಪ

ಪಾವನಗೊಂಡ ಕನ್ನಡ ನಾಡು

— ಸುದಾಸ

ಈ ತಿಂಗಳ ಹತ್ತನೆಯ ತಾರೀಖು; ನಮ್ಮ ವಾಲಿನ—ಎರಡೂವರೆ ಕೋಟಿ ಕನ್ನಡಿಗರ ಪಾಲಿನ—ತುಂಬು ಸಂಭ್ರಮದ ದಿನ; ಕಳೆದುಹೋಯಿತು. ಚಿರಕಾಲ ಸ್ಮರಿಸಿಕೊಳ್ಳುವ ರೀತಿ ಕಳೆದುಹೋಯಿತು. ದಿನ ಪತ್ರಿಕೆಗಳು, ವಾರಪತ್ರಿಕೆಗಳು ಈ ಸವಿ ನೆನಪನ್ನು ಅನುಪಮವಾಗಿ ಚಿತ್ರಿಸಿ, ತಮ್ಮ ಕರ್ತವ್ಯವನ್ನು ಚಿಮ್ಮುಕಟ್ಟಾಗಿ ಪಾಲಿಸಿದವು. ಕೆಲವು ಕಡೆ ಸಂತೋಷ ಸೂಚಕ ಸಮಾರಂಭಗಳು ನಡೆದವು.

ಅರುವತ್ತು ವರ್ಷಗಳ ಬಹು ಅಂಶವನ್ನು ಕನ್ನಡದ ನಾಡು, ಕನ್ನಡದ ಕಲೆಯ ಸೇವೆಯಲ್ಲಿ ಕಳೆದ ಕಾರಂತರ ಕುರಿತು ಬರೆಯಬೇಕಾದುದೇನೂ ಇಲ್ಲ. ಬರೆಯಬೇಕಾದುದು ನಮ್ಮ ಕುರಿತು—ಎರಡೂವರೆ ಕೋಟಿ ಕನ್ನಡಿಗರ ಕುರಿತು.

ಆದರೂ ಇಲ್ಲಿ ಅವರ ಕುರಿತೆರಡು ಮಾತು.

ಜೀವನದ ಬಹುಮುಖಗಳ ತಪ್ಪಚ್ಚಿ ಯೇ ನಡೆಸಿ ಯಶಸ್ಸುಗಳಿಸಿದ್ದಾರೆ ಅವರು. ನಟನಾಗುತ್ತಿದ್ದರೆ ಶ್ರೇಷ್ಠ ನಟನಾಗುತ್ತಿದ್ದರು. ನಾಟ್ಯಕಾರನಾಗುತ್ತಿದ್ದರೆ ಜಗತ್ಪರ್ಯಟನೆ ನಡೆಸಿ, ಕೀರ್ತಿ ಗಳಿಸುತ್ತಿದ್ದರು, ವಿಶ್ವಕೀರ್ತಿ. ಆದೇ ಮಾತು ಸಂಗೀತಕಾರನಾಗಿರುತ್ತಿದ್ದರೂ ಅವರಿಗೆ ಒಪ್ಪುತ್ತದೆ. ಆದರೆ ಅದರಿಂದ ಅವರು ಸುಖಿಗಳಾಗುತ್ತಿರಲಿಲ್ಲ. ಸಮೂಹದ ವಿಪರೀತ ಸಡಿಲಳಿಕೆಗಳ ಮೇಲೆ ಅಸ್ತ್ರಪ್ರಯೋಗ ಪಡೆಸಲಾಗುತ್ತಿರಲಿಲ್ಲ.

ಅಂದರೆ, ಈಗ ಅವರು ಸುಖಿಗಳೇ? ಸಮಾಜವನ್ನು ತಿದ್ದುವ ಯತ್ನದಲ್ಲಿ ಅವರು ಯಶಸ್ವಿಯಾಗಿದ್ದಾರೆಯೆ?

ಈ ಪ್ರಶ್ನೆಗೆ ಉತ್ತರಿಸುವದು ನಮ್ಮ ವಿಧಿಗೆ ಹೊಂದಿಕೊಂಡಿಲ್ಲ.

ಹಿಂದೊಮ್ಮೆ ತಲೆ ಎತ್ತಿ ಮೆರೆದ ಕನ್ನಡ ನಾಡು, ಇಂದು ತನ್ನ ಹೀಮೆಯನ್ನು ಕಳೆದುಕೊಂಡಿದೆ, ಜಪ್ಪೆ ಅಲ್ಲ, ನಮ್ಮ ರಾಜಕೀಯ ಬಡಾಬಟೆ ಜಾತೀಯ ತಿಕ್ಕಾಟ, 'ಸ್ವಜನ' ಮೋಹವನ್ನು ಕಂಡು ಜಗತ್ತು ನಗುವಂತಾಗಿದೆ. ಹಿಂದೆ ಏಕೀಕರಣ ಚಳವಳಿ ನಡೆಯುತು. ಈಗ ವಿಭಜನಾ ಚಳವಳಿ ನಡೆಯುತ್ತಿದೆ. ಕನ್ನಡ—ಕನ್ನಡಿಗರೆಂದು ಹಿಂದೆ ಕನವರಿಸುತ್ತಿರುವವರಲ್ಲಿ ಕೆಲವರು ಈ ವಿಭಜನೆಯ ಪೌರೋಹಿತ್ಯ ವಹಿಸಿದ್ದಾರೆ. ಜಾತೀಯತೆಯ ಅಂತರ್ಮುಖಿ ಗುಣಗಳಂತೂ ಮಾದರಿ ಮೈಸೂರಿನಲ್ಲಿ ಮಾದರಿಯಾಗಿಯೇ ಉಳಿಯುತ್ತದೆ. ಇದು ನಮಗೆ ತಿಳಿದಿರುವ ನಮ್ಮವರ ಸತ್ಯ!

ಈ ನಾಡು ಮತ್ತೆ ಬೆಳಗಬೇಕೆಂದು ಕಾರಂತರು ಅಹರ್ನಿಶಿ ಹೋರಾಡಿದ್ದಾರೆ. ಕನ್ನಡಿಗರಲ್ಲಿ ನಾಡ ಅಭಿಮಾನ ಮೂಡಬೇಕೆಂದು ಹಲವು-ಹತ್ತು ಯತ್ನಗಳನ್ನು ಮಾಡಿದ್ದಾರೆ; ನಾಡಿನಿಂದಲೆ ತಾಳಿದ್ದಾರೆ ನಿರಾಶೆಗೊಂಡಾಗ ಗುಡುಗಿದ್ದಾರೆ. ಗುಡುಗಿ ಕನ್ನಡಿಗರನ್ನು ಬಡಿದೆಬ್ಬಿಸಲು ಜೋರಾಡಿದ್ದಾರೆ. ಆದರೂ— ಕೊನೆಗೂ ಅಳಿಗುರಿಲ್ಲ ಚಿಗುರುವ ಸೂಚನೆಯೂ..

ತಮ್ಮ ಕೀರ್ತಿ ದುಂದುಭಿನೊಳಗ ಬೇಕೆಂದು ಅವರೆಂದೂ ಬಯಸಿಲ್ಲ ಹಾಗೆ ಬಯಸುತ್ತಿದ್ದರೆ, ಅವರ ವಿಚಾರವಾಣಿ ಕಂಡುದನ್ನು ಕಂಡಂತೆ ಹೇಳಬೊರದುತ್ತಿರಲಿಲ್ಲವೇನೋ? ಅವರ ಚುಚ್ಚು ನುಡಿ—ಬಿಚ್ಚು ನುಡಿಯೇ ಒಂದು ಅಮೂಲ್ಯ ದಾನ. ಆ ದಾನವನ್ನು ಸ್ವೀಕರಿಸುವ ವ್ಯಕ್ತಿ ಇಲ್ಲವೆ ನಾಡು, ಚಿರಕಾಲ ತನ್ನನ್ನು ರಕ್ಷಿಸಿಕೊಳ್ಳ ಬಲ್ಲುದು. ಅದನ್ನು ಸ್ವೀಕರಿಸುವ ಎದೆಗಾರಿಕೆ ಕನ್ನಡಿಗರಲ್ಲಿ ಇದ್ದಂತಿಲ್ಲ.

ಇರುತ್ತಿದ್ದರೆ—

ಇನ್ನೂ ನವರೆಗೆ ಎರಡೂವರೆ ಕೋಟಿ ಕನ್ನಡಿಗರು ತಲೆ ತಗ್ಗಿಸಿ ಕೊಂಡಿರಬೇಕಾಗಿರಲಿಲ್ಲ.(ತಲೆ ತಗ್ಗಿಸುವದಂತೂ ತುಂಬಾ ಹಿತಕರ ನವ-ಗೆ!)

ಕಾರಂತರಲ್ಲಿದ್ದುದು ಆತ್ಮಬಲ ಮಾತ್ರ. ಶತಬಾಹುಬಲ, ಸಹಸ್ರಬಾಹುಬಲ, ಕೋಟಿಬಾಹುಬಲ ಬಾಡಲು ಅಸಾಧ್ಯವಾದುದನ್ನು ಅವರು ಒಬ್ಬರೇ ನಾಡಿ ತೋರಿಸಿದ್ದಾರೆ ಎಂತಹ ಕ್ಲಿಷ್ಟಸನ್ನಿವೇಶಗಳಲ್ಲೂ ಅವರು ಅವರಾಗಿಯೇ ಉಳಿದಿದ್ದಾರೆ. ಯಾರ ನೆರವೂ ಇಲ್ಲದೆ ಏಕಾಂಗಿಯಾಗಿ ಅವರು ಶ್ರಮಿಸಿದ್ದಾರೆ. ನಮ್ಮ ಬಾಳು ಸರಳ ಸುಂದರವಾಗುವಂತೆ, ಸುಖಮಯವಾಗುವಂತೆ ಅವರು ರಚಿಸಿದ ದಾರಿಯಲ್ಲಿ ಸಾಗಲು ಯಾವ ಆಪತ್ತೂ ಇಲ್ಲ ಯಾಕೆಂದರೆ, ಅದನ್ನು ನಿಪುಣ ತಂತ್ರಜ್ಞ—ಕಾರಂತರು, ಚೆನ್ನಾಗಿ ಪರೀಕ್ಷಿಸಿ ನಿರ್ಮಿಸಿದ್ದಾರೆ.

ಅವರ ಕೃತಿ ಸಪ್ತಾಹ ನಡೆಯುವೆಕೆಂದು ಹಲವು ಮಂದಿ ಬಯಸಿದ್ದಾರೆ. ಎರಡೂವರೆ ಕೋಟಿ ಕನ್ನಡಿಗರು ಇದರಲ್ಲಿ ಪಾಲುಗೊಳ್ಳಬೇಕು. ಇನ್ನೂ ಕೆಲಸವಾಯದಲ್ಲಿ ಕನ್ನಡ ನಾಡಿನ ಪುನೆ ಮಾತಾಗಿರುವ ಈ ಹಿರಿಯ ತಪಸ್ವಿ ಯಕ್ಷಗಾನದ ಮೂಲಕ ಭಾರತೀಯರಿಲ್ಲರ ಮನೆ ಮಾತಾಗುವಂತಾಗಲಿ ಸಂಶಯವಿಲ್ಲ ಆಗ್ರ—

ಭಾರತವಿಡೀ ಈ ಹಿರಿಯನನ್ನು ಕೊಂಡಾಡುವಾಗ ನಾವು—ಮುಖಕ್ಕೆ ಮುಸುಕು ಹಾಕಿಕೊಳ್ಳಬೇಕಾದೀತು. ಸದ್ಯಕ್ಕಂತೂ ಭಾರತದ ಸರ್ವ ವಿಕ್ಯಾಗಳಿಂದ ಕನ್ನಡನಾಡನ್ನು ಅಪಹಾಸ್ಯ ದೃಷ್ಟಿಯಿಂದ ನೋಡಲಾಗುತ್ತಿದೆ. ಕಲ್ಲು ಬೀರುವ ಮುಖದತ್ತ ಉಗುಳುವ ಸಮಯ ಮುಂದೆ ಬಾರದಿರಲಿ.

ಆದರ ನೊದಲೇ ನಾವು ನಮ್ಮನ್ನು ಅರಿತುಕೊಳ್ಳಬೇಕು. ಕಾರಂತರನ್ನು ಗೌರವಿಸುವದರಿಂದ ಅವರ ಘನತೆ ಹೆಚ್ಚಬಾರದು. ನಮ್ಮ ಘನತೆಯಷ್ಟಕ್ಕೆ ಹೆಚ್ಚಿಸಿಕೊಂಡಂತೆ; ಕನ್ನಡವನ್ನ ತಲೆಗೆ ಕೇರೀಟ ತೊಡಿಸಿದಂತೆ

ಕಾರಂತರಿಗೆ ಜಯವಾಗಲೆಂದು ಹಿರಿಯರೊಬ್ಬರು ಆಂದಿದ್ದಾರೆ ನಾನು ಕನ್ನಡಿಗರಿಗೆ ಜಯವಾಗಲೆನ್ನುವೆ.

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಧ್ವನಿ ತರಂಗಗಳ ವೇಗವನ್ನು ಮಿಕ್ಕಿದ ವಿಮಾನಗಳು ಮತ್ತು ನಾಗರಿಕೋಡ್ಯಾಣ

(ಲನೇ ಪುಟದಿಂದ)

ಮೂಸಗಳಂತಹ ಘನವಸ್ತುಗಳನ್ನು ಸಂಧಿಸಿದಾಗ ವಿದ್ಯುತ್ ರಹಿತವಾದ ನ್ಯೂಟ್ರಾನ್‌ಗಳೆಂಬ ಕಣಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸುವವು.

ಇಂತಹ ಪ್ರದೇಶಗಳಲ್ಲಿ ಪ್ರವಾಸವನ್ನು ಕೈಕೊಳ್ಳುವವರ ಮೇಲೆ ವಿಶ್ವಕಿರಣಗಳು ಯಾವ ಪರಿಣಾಮಗಳನ್ನು ಬೀರುವವು ಎಂಬ ವಿಷಯದಲ್ಲಿ ಬಿನ್ನಾಭಿಪ್ರಾಯಗಳಿರುವವು. ಇಂತಹ ಪ್ರಯಾಣಗಳಲ್ಲಿ ವಿಶ್ವಕಿರಣಗಳಿಂದ ಯಾವುದೇ ಗಂಡಾಂತರವೂ ಇಲ್ಲವೆಂದು ಹಲವು ತಜ್ಞರು ಅಭಿಪ್ರಾಯಪಡುವರು ಬೇರೆ ಹಲವು ತಜ್ಞರ ಅಭಿಪ್ರಾಯಗಳ ಮೇರೆಗೆ ಇಲ್ಲಿಯ ಪ್ರಯಾಣಿಕರಿಗೆ ಕ್ಯಾನ್ಸರ್ ರೋಗವು ಅಂಟಿಕೊಳ್ಳುವ ಭೀತಿಯು ಹೆಚ್ಚಾಗಿರುವುದಲ್ಲದೆ ಇಂತಹ ಪ್ರಯಾಣಿಕರ ಸಂತತಿಗಳು ಸಹ ಅನೇಕ 'ವಿಶ್ವಕಿರಣ ಮೂಲ' ರೋಗಗಳಿಗೆ ಕುತ್ತಾಗಬಹುದು ಕಾರಣ ಇಂತಹ ಪ್ರವಾಸಗಳನ್ನು ಕೈಕೊಳ್ಳುವ ಪೂರ್ವದಲ್ಲಿ ವಿಶ್ವಕಿರಣಗಳಿಂದಾಗಿ, ಮುಂಬರುವ ಪೀಳಿಗೆಯ ಮೇಲೆ ಯಾವುದೇ ಅನಿಷ್ಟ ಪರಿಣಾಮವು ಸಂಭವಿಸಲಾರದೆಂಬುದನ್ನು ನಿಶ್ಚಿತಗೊಳಿಸುವುದು ವಿಹಿತವೆಂಬ ಮಾತನ್ನು ಒತ್ತಿ ಹೇಳುವ ಅಗತ್ಯವಿಲ್ಲ. ಹಲವು ತಜ್ಞರು ಇಲ್ಲಿ ಯಾವುದೇ ಗಂಡಾಂತರವಿಲ್ಲವೆಂಬುದಾಗಿ 'ತಮಗೆ ಎನಿಸುವುದೆಂದು' ಕೇಳುವುದು ನಮಗೆ ಬೇಡ, ಆದರೆ ಪ್ರಯೋಗಗಳಿಂದ ಅಭಿರಿಸಲ್ಪಟ್ಟ ನಿಶ್ಚಿತ ಅಭಿಪ್ರಾಯಗಳಿಗೆ ಮಾತ್ರ ಇಲ್ಲಿ ಬೆಲೆಯಿದೆ ಎಂಬುದನ್ನು ಎಲ್ಲರೂ ತಿಳಿದು ಬೇಕು.

ಮುಂಬರುವ ಪೀಳಿಗೆ

ಮುಂಬರುವ ಪೀಳಿಗೆಗೆ ಯಾವುದೇ ಗಂಡಾಂತರವಿಲ್ಲವೆಂದು ನಿಶ್ಚಯಿಸುವ ಭಾರವು ಇಂತಹ ಪ್ರವಾಸಗಳನ್ನು ಪುರಸ್ಕರಿಸುವವರ ಮೇಲೆಯೆ ಇದೆ ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವೇ ಇಲ್ಲ. ಈ ರೀತಿಯಾಗಿ ಹೇಳಲು, ಪ್ರಯೋಗ ಶಾಲೆಗಳಲ್ಲಿ ಈ ಪ್ರಯೋಗಗಳಿಗೆ ಅಗತ್ಯವಿರುವ ಸಂದರ್ಭಗಳನ್ನು ಕಲ್ಪಿಸುವುದೆ. ಅನಿವಾರ್ಯವಿದೆ. ಇಲ್ಲಿ ಪ್ರಯೋಗಗಳೆಂದು ಪೂರ್ವಭಾವಿಯಾಗಿ ಪ್ರಾಣಿಗಳನ್ನು ಉಪಯೋಗಿಸಿದರೂ ನಿಶ್ಚಿತ ಪರಿಣಾಮಗಳು ದೊರೆಯಲು ಕಾಲಾವಕಾಶವು ಹತ್ತುವರುಷ ಇಲ್ಲಿಯ ಘನೆಂತರಗಳನ್ನು ಆಧರಿಸಿ ಮನುಷ್ಯರನ್ನು ಇಂತಹ ಪರೀಕ್ಷೆಗಳಿಗೆ ಒಳಪಡಿಸಬೇಕಾಗುವುದು. ಎಂದೆರೆ ಈ ಎಲ್ಲ ಪರಿಣಾಮಗಳು ನಿಶ್ಚಿತ ಅಭಿಪ್ರಾಯಗಳನ್ನು ಕೊಡುವ ವರೆಗೆ, ಇಲ್ಲಿಯ ನಾಗರಿಕ ಉಡ್ಯಾಣಗಳು ಮತ್ತು ಇವುಗಳಲ್ಲಿಯ ಮುಂದುವರಿಯುವಿಕೆಯು ಸ್ಥಗಿತ ಗೊಳಿಸಲ್ಪಡಬೇಕೆ? ಈ ಸಂದರ್ಭದಲ್ಲಿ ನಾವು ಯಾವುದನ್ನು ಇಲ್ಲಿಯ ವಿಷಯಕ್ಕೆ ಸಂಬಂಧಿಸಿದಂತೆ ಪ್ರಗತಿಯೆಂದು ಕರೆಯಬೇಕೆಂಬುದನ್ನು ಮತ್ತು ವಿಜ್ಞಾನದ ಪ್ರಗತಿಯನ್ನು ತಡೆಗಟ್ಟುವ ಉದ್ದೇಶವನ್ನು ಯಾರೂ ಹೊಂದಿಲ್ಲವೆಂಬ ವಿಷಯವನ್ನು ಲಕ್ಷ್ಯದಲ್ಲಿರಿಸಿ, ವಿಚಾರ ಮಾಡೋಣ. ಭೂಮಿಯ ಮೇಲೆ ವಾಸಿಸುವ ಜನರಿಗೆ ತಮ್ಮ ನಿತ್ಯದ ವ್ಯವಹಾರದಲ್ಲಿ ಯಾವುದೇ ಆಪತ್ತಿಲ್ಲವೆಂಬಷ್ಟು ಮೂಡದೆ, ಹೆಚ್ಚು ಜನರಿಗೆ ಆತಿ ಕಡಿಮೆ ವೇಳೆಯಲ್ಲಿ ತಮ್ಮ ಕಾರ್ಯಗಳನ್ನು ಪೂರೈಸುವ ಅವಕಾಶವನ್ನು ಕಲ್ಪಿಸುವುದನ್ನೇ ಇಲ್ಲಿ ನಾವು ಸಾಧಿಸಬೇಕೆಂದಿರುವ ಪ್ರಗತಿಯೆಂದು ವಿವರಿಸಬಹುದು.

ಕೊನೆಯದಾಗಿ

ಈ ವರೆಗೆ ವಿವರಿಸಿದ ಎಲ್ಲ ಮಾತುಗಳನ್ನು ಲಕ್ಷ್ಯದಲ್ಲಿರಿಸಿ ಈಗ ಜನಸಾಮಾನ್ಯರು ವಿಜ್ಞಾನಿಗಳಿಂದ ಏನನ್ನು ಅಪೇಕ್ಷಿಸುತ್ತಾರು ಎಂಬುದನ್ನು ಸಿರ್ವಿಕಾರ ಮನಸ್ಸಿನಿಂದ ಹೇಳುವುದು ಸೂಕ್ತವೆನಿಸುವುದು. ನಮಗೆ ವಿಜ್ಞಾನವು ಪ್ರಗತಿಯನ್ನು ಹೊಂದುವುದು ಬೇಕು ಆದರ ಇಂತಹ ಪ್ರಗತಿಯು ಮಾನವ ಜನಾಂಗಕ್ಕೆ ಮತ್ತು ಅದರ ಪೀಳಿಗೆಗೆ ಮಾರಕವಾಗದಂತಿರಬೇಕು' ಎಂಬುದೇ ನಾಗರಿಕರ ಬೇಡಿಕೆಯು. ಇಂತಹ ವಿಮಾನಗಳ ದ್ವನಿನಿರ್ಜನೆ ಅಥವಾ ವಿಶ್ವಕಿರಣಗಳ ಅನಿಷ್ಟ ಪರಿಣಾಮ ಇವುಗಳಿಂದ ಹಾನಿಯಾಗದಂತಹ ಹಾರಾಟವು ಇಂದು ಎಲ್ಲರಿಗೂ ಇಷ್ಟವಾದುದು. ಈ ದಿಶೆಯಲ್ಲಿ ಸಂಶೋಧನೆಗಳನ್ನು ವಿಜ್ಞಾನಿಗಳು ಜರಗಿಸಲಿ ಮತ್ತು ಇವುಗಳ ಪರಿಣಾಮಗಳನ್ನು ಆಧರಿಸಿ ಇಂತಹ ವಿಮಾನಗಳು ರಚಿತವಾಗಲಿ.

ಇಂತಹ ವಿಮಾನಗಳನ್ನು ಯಾವ ರಾಷ್ಟ್ರವು ಮೊದಲು ತಯಾರಿಸುವುದು ಎಂಬ ವಿಷಯದಲ್ಲಿ ಪೈಪೋಟಿಯು ಬೇಡ. ರಾಷ್ಟ್ರಗಳು ಪಂತವನ್ನು ಗೆಲ್ಲುವುದೇ ಇದ್ದಲ್ಲಿ ಅವುಗಳು ತಮ್ಮಲ್ಲಿ ಹುಡುಗಿದ 'ವಿನೇಕದೊಡನೆ' ಸ್ಪರ್ಧೆಯನ್ನು ಏರ್ಪಡಿಸಲಿ ಈ ನೊದಲೇ ವಿವರಿಸಿದ ಗಂಡಾಂತರಗಳಿಂದ ರಹಿತವಾದ ಶುತ್ತು ಕಡಿಮೆ ನಿಶ್ಚದಲ್ಲಿ ಹೆಚ್ಚು ವೇಗದಿಂದ ಚಲಿಸುವ ವಿಮಾನಗಳನ್ನು, ವಿಶ್ವಕಿರಣಗಳ ಗಂಡಾಂತರ ವಟ್ಟದಿಂದ ಕೆಳಗೆ ಇರುವ ಹೊದರಿನಲ್ಲಿಯೇ ಚಲಿಸುವಂತೆ ಮಾಡುವ ಸಂಶೋಧನೆಗಳನ್ನು ಕೈಕೊಳ್ಳಲು ಎಲ್ಲ ವಿಜ್ಞಾನಿಗಳಿಗೂ ಬಿನ್ನವಿಸೋಣ. ಇಂತಹ ಸಾಧನೆಯು ಜನತೆಗೆ ಮತ್ತು ಉದ್ಯಮಗಳಿಗೆ ಕೂಡಿಯೇ ಪೋಷಕವಾಗುವದು. ಹೀಗಾದಲ್ಲಿ, ಭಿನ್ನ ಭಿನ್ನ ರಾಷ್ಟ್ರಗಳು ಕಣಕಾಸಿನ ಹಾಗು ಸಂಸ್ಕೃತಿಯ ವಿಷಯಗಳಲ್ಲಿ ಏಕ್ಯತ್ಯವನ್ನು ಸಾಧಿಸಲು, ಈ ತೆರದ ಪ್ರಗತಿಯು ತೀವ್ರವಾದ ಸಲವನ್ನು ಕೊಡುವಲ್ಲಿ ಪರಿಣಮಿಸುವದು.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ರಾಜಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಅಳಿಯನಿಗೆ ದೀಪಾವಳಿಯುಡುಗೊರೆ

(೭ನೇ ಪುಟದಿಂದ)

ಹಾದು. ಅವರು ೭೦-೮೦ ರೂಪಾಯಿ ಬೆಲೆ ಇರುವಷ್ಟು ಬೆಳ್ಳಿ ಸಾಮಾನುಗಳನ್ನು ಕೊಟ್ಟಾರು. ಆದನ್ನು ಸೂಚಿಸಬೇಕಾಗಿಲ್ಲ. ಆದು ಅವರ ಇಷ್ಟದಿಂದ ಕೊಟ್ಟಾರು." ಬರೆಯಬೇಕಾಗಿರುವ ರೂಪು-ರೇಷೆಗಳ ಕುರಿತು ಮಡದಿ ಪುರುಷನಿಗೆ ಮಾಹಿತಿಕೊಟ್ಟಳು.

ಈ ಮಾತುಗಳೆಲ್ಲವನ್ನೂ ಕಾಗದದ ಮೇಲೆ ಹಾಕುವದು ಚೆಂದ ಕಾಣ್ತಡಿಯೇನೇನ?" ಆ ವಿಷಯದಲ್ಲಡಕವಾಗಿರುವ ಸೂಕ್ಷ್ಮತೆಯನ್ನು ಅವನು ತಿಳಿಯಪಡಿಸಿದನು.

"ಕೊಟ್ಟ ಮಾತಿಗೆ ಅವರು ತಪ್ಪುತ್ತಾರಂತೆಲ್ಲ. ಹೆಣ್ಣಿನ ತಾಯಿ ನನಗೆರಡು ಮೂರು ಪತ್ರ ಬರೆದಿದ್ದಳು. ಒಂದಕ್ಕೂ ನಾನು ಉತ್ತರ ಬರೆದಿರುವದಿಲ್ಲ. ತಪ್ಪು ನನ್ನದೇ ಇದೆ. ಆವಳ ಓಲೆಗಳಿಗೆ ಅಭಿನಂದನೆಗಳನ್ನರ್ಪಿಸಿ, ನನ್ನ ಸೋಮಾರಿತನಕ್ಕೆ ಕ್ಷಮೆ ಕೋರಿ ನಾನೂ ಒಂದು ಸಾಲು ಬರೆಯುತ್ತೇನೆ ಆದನ್ನು ನಿಮ್ಮ ಪತ್ರದೊಂದಿಗೆ ಇಟ್ಟುಬಿಟ್ಟು ಕಳುಹಿಸಿಬಿಡೀಂದ್ರೆ." ಒಂದು ನೇಳೆ ಪಾಕ್ಷಿಣ್ಯಕ್ಕೊಳಗಾಗಿ ಗಂಡನು ಹೆಣ್ಣಿನ ಮನೆಯವರಿಗೆ, ತನ್ನ ನೀಕ್ಷಣೆಯಂತೆ ಕಾಗದ ಬರೆಯದಿದ್ದಲ್ಲಿ ಸುತ್ತಿ ಬಳಸಿ ತಾನಾದರೂ ಜ್ಞಾಪಕಪಡಿಸಬೇಕೆಂದು ಜಾಣಕೃತನದ ಹೆಂಡತಿ ಬಹಳ ಮುಂಜಾಗರೂಕತೆಯಿಂದ ಹೇಳಿದಳು.

ಹೊಸ ಅಳಿಯನು ಒಂದು ಒಗಟಿನಂತಿರುತ್ತಾನೆ ಅವನಿಗೊಂದು ಮಗು ಆಗುವ ವರೆಗೆ ಅವನನ್ನು ಬಹಳ ಮನಸ್ಸಿಗೆ ಹಚ್ಚಿಕೊಳ್ಳಬೇಕಾಗುತ್ತದೆ ಮಗು ಜನಿಸುವ ವರೆಗೂ ಅವನ ತಲೆಯಲ್ಲಿ ಅದೇನೇನೋ ಹತ್ತಿಕೊಂಡು ಇರುತ್ತದೆ. ಮಾವನ ಮನೆಯಲ್ಲಿ ಅವನು ನಡೆದುಕೊಳ್ಳುವ ಜಗಳಗಂಟ ಸ್ವಭಾವವು ಆದು ಅವನ ನೈಜ ಸ್ವಭಾವವನ್ನು ಸೂಚಿಸುತ್ತದೋ ಅಥವಾ ಆಡಮೈ ಕಸಿದುಕೊಳ್ಳಲು ತಂದೆ-ತಾಯಿಯರು ಹೂಡಿರುವ ಸಂಚಿಗೆ ಸರಿಯಾಗಿ ಅವನು ವರ್ತಿಸುವದೋ ಎಂಬುದು ದೇವರಿಗೆನೇ ಗೊತ್ತು.

ಅಳಿಯನ ಆಗಮನ

ಅಳಿಯನ ಆಗಮನದಿಂದ ಮನೆ ಬೆಳಗಲಾರಂಭಿಸಿತು. ಅವನು ತನ್ನ ಪಾನ ರಕ್ಷೆಯ ಕಟ್ಟುಗಳನ್ನು ಬಿಡಿಸಲು ಕುರ್ಚಿಯಲ್ಲಿ ಆಸೀನನಾದನು. ಮುಗುಳ್ನಗುತ್ತ ಬಂದ ಮಾವನು ವಿಮ್ಮಕ್ಷಂಕವನ್ನೋಡಿಸಿ, ಅಳಿಯನ ಪ್ರಯಾಣದ ಪ್ರಯಾಸದ ಕುರಿತು ಕೇಳಿದನು. ಭಾವನು ಅವನ ಕೈಯ್ಯಿಂದ ಪ್ರಯಾಣ-ಚೀಲವನ್ನು ತೆಗೆದುಕೊಂಡನು. ಅಡುಗೆ ಕೋಣೆಯಲ್ಲಿ ಮಾಡುತ್ತಿದ್ದ ಕೆಲಸವನ್ನು ಅರ್ಧದಲ್ಲಿಯೇ ಬಿಟ್ಟು, ಅಳಿಯನು ಅದೃಷ್ಟ ಬೆಳೆದಿದ್ದಾನೆಂದು ಕಣ್ಣಾರೆ ಕಾಣುವದಕ್ಕಾಗಿ ಹೊರಗೆ ಅತ್ತೆ ಅಡಿಯಿಟ್ಟಳು. ಅಭ್ಯಾಸ ಮಾಡಿದ್ದ ನಡಿಗೆಯಿಂದ ನಲ್ಲೆ ಹೊರಗೆ ಬಂದು ಉಗಿ ಬಂಡಿಯಲ್ಲಿ ಬರುವಾಗ ಬೆಗೆ ಹಾಗೂ ಧೂಳಿನಿಂದ ಕಪ್ಪಾಗಿರುವ ಉಡುಪುಗಳಿಗೆ ಕೈಕೊಡುತ್ತ" ಮೊದಲು ಸ್ನಾನ ಮಾಡಿರಿ. ಬಿಸಿ ನೀರು ಸಿದ್ಧವಾಗಿ ಇದೆ" ಎಂದು ತಿಳಿಸಿದಳು.

"ಸ್ವಲ್ಪ ವಿಶ್ರಾಂತಿ ಪಡೆದುಕೊಳ್ಳಲಿ. ನೀನ್ಯಾಕೆ ಅವಸರ ಪಡಿಸುತ್ತಿ? ಅವನಿಗೆ ತಿನ್ನಲಿಕ್ಕೆ ಲಘು ಉಪಹಾರ ಹಾಗೂ ಕಾಫಿ ತೆಗೆದುಕೊಂಡು ಬಾರೀನೇ" ಮಗಳ ದಕ್ಷತೆಯ ಕೊರತೆಗೆ ಪ್ರೀತಿಯಿಂದಲೇ ವಾಗ್ದಂಡನೆಯನ್ನಿತ್ತಳು ತಾಯಿ. ಆಗ ಅವನ ಚರ್ಯೆಯಿಂದಲೇ ಅವನಿಗಲ್ಲಿ ಒಳ್ಳೆಯ ಸ್ವಾಗತವಿದೆ ಎಂಬುದು ಗೊತ್ತಾಗುತ್ತಿತ್ತು.ತೈಲಾಭ್ಯಂಜನದ ಸಮಯ ಅಳಿಯನ ಗುಟ್ಟು ಬಯಲಾಗುತ್ತದೆ. ಸಂಪ್ರದಾಯದಂತೆ ಎಣ್ಣೆ ಮುಂತಾದವುಗಳನ್ನು ತಿಕ್ಕಿ ಕೊಳ್ಳುವದಕ್ಕೆ ಅತ್ತೆ ಅರುಹಿದೊಡನೆ ಅಳಿಯ ಸಿಡಿಮಿಡಿಗುಟ್ಟುತ್ತಾನೆ. "ಕಂಗಾಲಾಗಬೇಡಿಂದ್ರೆ" ಎನುತಿಗೆನೇ ನಿಂತುಕೊಂಡಿದ್ದ ಮಡದಿ ಮೊರೆ ಇಡುವಂತೆ, ಸೌಮ್ಯ ಕಿಡಿಗಳನ್ನು ಹಾರಿಸುವಂತೆ ದೃಷ್ಟಿ ಹಾಯಿಸಿದಾಗ, ಗಲ್ಲಗಳಲ್ಲಿ ಅಲೆಗಳದ್ದಾಗ ಅವನ ಮೊಂಡತನ ಮಾಯವಾಯಿತು. ಅವನು ಅಸಮ್ಮತಿಸದೆ ಕಾಲುಗಳನ್ನು ಸೀಡಿದನು. ಬಾಗಿಲುಗಳ ಹಿಂದುಗಡೆಯಿಂದಲೇ ಅತ್ತೆಯು ಕೃತಜ್ಞತೆಯಿಂದ ನಡುಗುತ್ತಿರುವ ಸ್ವರದಿಂಬಲೇ ಹಾಡಲಾರಂಭಿಸಿದಳು. ದಂಪತಿಗಳ ಸುತ್ತಮುತ್ತ ನಿಂತುಕೊಂಡು ವಿನೋದ, ತಮಾಷೆಗಳನ್ನು ಕಾಣುತ್ತಿದ್ದ ಎಳೆಯರ ಬಳಗವು ಒಡನೆ ಕೈಚಪ್ಪಾಳೆ ತಟ್ಟಲಾರಂಭಿಸಿದುದರಿಂದ ಹಾಡಿನ ಸ್ವರ ಕೇಳಿಬರಲಿಲ್ಲ.

ಬಚ್ಚಲಿನ ಬಾಗಿಲಿನಲ್ಲೇ ನಿಂತುಕೊಂಡಿದ್ದನಲ್ಲೆ ಗಟ್ಟಿ ಸ್ವರದಲ್ಲಿ "ನೋಡೀಂದ್ರೆ, ಸಾಬೂನು ಮತ್ತು ಬೈರಾಸು ಇಲ್ಲಿವೆ. ಆ ಕೊಳವೆಯನ್ನು ತಿರುಗಿಸಿದರೆ ಬಿಸಿ ನೀರು ಬರುತ್ತದೆ. ಈ ನಳ್ಳಿಯನ್ನು ತಿರುಗಿಸಿದರೆ ತಣ್ಣೀರು ಬರುತ್ತದೆ" ಹೇಳುತ್ತಿದ್ದಂತೆ ಸುತ್ತಮುತ್ತ ದೃಷ್ಟಿ ಹಾಯಿಸಿಕೊಂಡಳು.

"ಠೀ, ತಂದೆಯವರೊಂದೂ ವಜ್ರದುಂಗುರವನ್ನು ತಂದಿದ್ದಾರ್ರಿ. ನಿಮ್ಮಮ್ಮ ನವರೇನಾದರೂ ಉಡುಗೊರೆಯ ವಿಷಯ ಹೇಳಿದ್ದಾರೇನೋಂದ್ರೆ?" ಆತುರದಿಂದ ಆಕೆ ವಿಚಾರಿಸಿದಳು.

"ನನ್ನ ಬಳಿ ಅವರೇನೂ ಹೇಳಿರುವದಿಲ್ಲ. ಆದರೆ ಅಪ್ಪನವರೊಂದಿಗೆ ಮಾತಾಡುತ್ತಿದ್ದಾಗ ಚಿನ್ನದ ಕೈಗಡಿಯಾರದ ಕುರಿತು ಮಾತಾಡುತ್ತಿದ್ದುದು ನನ್ನ ಕಿವಿಗೆ ಬಿದ್ದಿದೆ." ಅವಳಿಗೆ ಕಣ್ಣನ್ನೆ ಮೊಡುತ್ತಾ ಅವನು ತಿಳಿಸಿದನು. ಆಕೆಯ ಬೆನ್ನೆಲುಬಿನಲ್ಲಿ ನಡುಕ ಉಂಟಾಯಿತು.

"ಅಪ್ಪಾಜೀ ಅದನ್ನು ತೆಗೆದುಕೊಂಡಿರುವದಿಲ್ಲ. ಈಗ ನಾನವರಿಗದನ್ನು ತಿಳಿಲೇನ್ರಿ" ಆಕೆ ಅಲುಗಾಡಿದಳು.

"ಬುದ್ಧಿ ಇಲ್ಲದವಳಂತೆ ವರ್ತಿಸಬೇಡಕಣೇ. ನೀನೆಲ್ಲಿಗೂ ಈಗ ಓಡುವ ಅವಕತೆ ಇಲ್ಲ. ನಿಲ್ಲೇ" ಅವನಾಕೆಯ ಕೈಗನ್ನು ಹಿಡಿದುಕೊಂಡನು. ಆಗ ಹೆಜ್ಜೆಯ ಸದ್ದು ಕೇಳಿಬಂತು.

"ಸೀಗೆಪುಡಿ ಎಲ್ಲಿದೇನೇ?" ತನ್ನ ಕೈದ ಸುಳಿವು ಆಗಂತ.ಕನಿಗೆ ಸಿಗದಂತೆ ಗಟೇಕೆಂದು ನಡೆಸುವ ತನ್ನ ಚಮತ್ಕಾರಕ್ಕಾಗಿ ನಗು ಬರುತ್ತಿದ್ದರೂ ತಡೆ ಹಿಡಿದು ಅವನು ಕೇಳಿದನು.

"ಯಾರೂ ಇಲ್ಲಾಂದ್ರೆ" ತುಂಟತನದಿಂದ ಗಂಟಲಿನಲ್ಲೇ ನಗುತ್ತ ನುಡಿದಳು ಅದೊಂದು ಕ್ಷಣಕ್ಕೆ ಮಾತ್ರ. "ನಿಮ್ಮಮ್ಮನವರೇನಾದ್ರೂ....' ಆಕೆ ಸುಗಣಿ ಪ್ರಾರಂಭಿಸಿದಳು. ಅತನು ಆಕೆಯ ಬಾಯಿಯ ಮೇಲೆ ಕೈ ಇಟ್ಟುಬಿಟ್ಟನು.

"ನೀನ್ಯಾತಕ್ಕೆ ಹೀಗೆ ಬೆದರುರುವನೇ? ಬಾರೇ, ನಲ್ಲೆ. ಮುಗುಳ್ನಗುತ್ತಿರು ಎನ್ನುತ್ತ ಮೆಲ್ಲ ಮೆಲ್ಲನೆ ಆಕೆಯ ಕೆನ್ನೆಳನ್ನು ಹಟ್ಟಿದನು ಆಕೆಗೆ ನಾಚಿಕೆಯೂ ತು. ಆಕೆ ನಾಚಿದುದನ್ನು ನೋಡಿ ಆಕೆಂಗದ್ದವನ್ನು ಹಿಡಿದೆತ್ತಿ "ಬಾ, ಬಾ. ಸುಹೀಗೆ ಈಗ ನಕ್ಕಂತೆ ಮುಗುಳ್ನಗು' ಎದನು.

ಆಕೆಯ ಆನಂದಭರಿತ ಹತ್ತು ವರ್ವಯಸ್ಸಿನ ತಂಗಿ ಕೇಕೆ ಹಾಕುತ್ತ ಸಿಳ್ಯಾತ್ತಿರುವ ಕೆಡಿ ಬಾಣಗಳನ್ನು ಹಿಡಿದುಕೊಂಡು ಅತ್ತವೇ ಓಡಿಬಂದಳು. ಹಬ್ಬದ ಎಣ್ಣೆ ಸ್ನಾನಕ್ಕಾಗಿ ಅವನು ಒಡನೆ ಕದಳನ್ನು ಮುಚ್ಚಿಕೊಂಡನು

(ಮೂಲ— ಯಸ್. ವಿ. ಕೃಷ್ಣಮೂರ್ತಿ, "ದಿ ಹಿಂದೂ" ೭—೧೦—೬೦)

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಜ್ಜೋಲಗದ ವೈಭವವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

ಭಾರತದ ಗುರುಕುಲ ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು; ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲತ್ತಪಗದೆ ೦-೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಆರಣ್ಯ ಪರ್ವೋಕ್ತವಾದ ಕಿಮೀರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವ ದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನಮೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಉಡುಪಿಯಲ್ಲಿ ಪಾವಂಜೆ ಗುರುರಾವ್ & ಸನ್ಸ್ ಇವರಲ್ಲಿ ಸಿಗುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುನುಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.**

ಹರಕೆ

ಶ್ರೀಮತಿ ಸರೋಜಿನಿ ಮಹಿಷಿ, ಧಾರವಾಡ.

ಪೋಗಿ ಬರುವೆನು ಇಂಯೆ,
ಪೋಗಿ ಬರುವೆನು ಸಖಿಯೆ,
ಪೋಗಿ ಬರುವೆನೆ ತಂಗಿ,
ಪೋಗಿ ಬರುವೆನು ತಮ್ಮ
ಆಗಲಿಕೆಯ ದುಃಖದಲಿ
ಹೆಜ್ಜೆಗಳ ಕಿತ್ತಿಡುತ
ಆಗಲಿ ಪೋಗದ ನೋಟ
ಕಷ್ಟದಲಿ ಎತ್ತಿಡುತ
ಎರಡು-ದಶಕದ ಬೇರು
ನೇಗಿಲ ಮಮತೆಗಳುಂಟು
ಎರಡು ಒಲುಮೆಯ ಧಾರೆ,
ಕಿತ್ತ ಹಚ್ಚಲು ಬಹುದೆ!
ಮಲ್ಲಿಗೆಯ ಪರಿ ಬಿಡಲು,
ಎನ್ನ ಮರೆಯದೆ ತಿಳಿಸಿ
ಸಂಪಿಗೆಯ ಅರಳಿದರೆ,
ಎನ್ನನುನ ತರಲುನದು
ಹುಟ್ಟಿ ಗಿಳಿ ನುಡಿಯುತಿರೆ,
ದಿಟ್ಟಿಹಸು ಕೂಗುತಿರೆ
ನೆಟ್ಟನೇ ನೆನೆಯುವೆನು
ಎಡೆಕುಂಬಿ ತವರವರ
ನೆಲದ ಗಣ, ಹೊಸ ಕವಿಯು
ಸರಿಜಯದ ಹೊಸ ಬೆಳಕು
ಜಲದ ಗುಣ ನೈಗೂಡಿ
ಬೇರಿಳೆಯೆ ದಿನವೆಪತೊ!
ಎರಡು ಮನೆಗಳ ಬಳ್ಳಿ,
ಮಮತೆ ಚಿಗುರಿದ ಕುಡಿಯು
ಎರಡು ವಂಶಕೆ ಹೆಸರು,
ತರುವ ಹರಕೆಯು ನೀಡು.

ದಕ್ಷಿಣ ಕನ್ನಡದಲ್ಲಿ ರೇಲ್ವಾರಿಗಳು

(೬ನೇ ಪುಟದಿಂದ)

ಮಂಗಳೂರು ರೇಲ್ವಾರಿ ಆಗುವುದಗತ ಎಂಬುದೇ ಬಂದಂತಾಭಿವೃದ್ಧಿ ಹಾಗೂ ರೇಲ್ವಾರಿಗಳ ಅಡಿಪಾಯ ಅದಸ್ಟೇ ತಮಿಳರು ಬುಡ ಮೇಲು ಮಾಡಿದ ಮೇಲೆ, ಮಂಗಳೂರು ಬಂದರದ (ಅದೇ ಇಲ್ಲದ ಮೇಲೆ) ಹಾಸನ—ಮಂಗಳೂರು ರೇಲ್ವಾರಿಯ ಪ್ರಶ್ನೆಯೇ ಬೀಳದಂತಾಗುತ್ತದೆ. ಎಣ್ಣೆ ಬರುವಾಗ ಕಣ್ಣು ಮುಚ್ಚಿದರು ಎಂಬಂತೆ ನಾವು ನಮ್ಮ ಪ್ರಾಂತಕ್ಕೆ ಪ್ರಪ್ರಥಮ ಪ್ರಾಶಸ್ತ್ಯದ ಒಂದು ಸಂಧಿಯನ್ನು ಕಳೆನು ಕೊಳ್ಳಲು ತೊಡಗಿದ್ದೇವೆ ಎನ್ನಬಹುದು. ಈ ವಿಷಯದಲ್ಲಿ ತಮಿಳರ ಸಾಹಸ, ಕೈವಾಡ ದೊಡ್ಡದು. ಮೊದಲನೆಯದಾಗಿ ಅವರು ನಮಗೆ ಪೂರ್ತಿ ಮಂಕುಬೂದಿ ಎರಚಿದ್ದಾರೆ. ಎರಡನೆಯದಾಗಿ, ಮಂಗಳೂರು – ಮಲ್ಪೆಗಳಿಂದ ಖರೀ ೧೫೦—೨೦೦ ಮೈಲುತರದಲ್ಲಿರುವ ಉಚ್ಚ ತರಗತಿಯ ಕಬ್ಬಿಣ ಮೆಂಗನೀಜನ್ನು ೩೦೦—೪೦೦ ಮೈಲು ದೂರದ ಮದ್ರಾಸು-ಕಡಲೂರುಗಳಿಗೆ ಸಾಗಿಸಲು ಈ ವಣಿಸಿದ್ದಾರೆ, ನಮ್ಮ ಬಂದರಗಳ ಹಾಗು ಮಲೆನಾಡಿನ ಅಭಿವೃದ್ಧಿಯ ರೇಲನ್ನೇ ತಪ್ಪಿಸಲು ಯತ್ನಿಸುತ್ತಿದ್ದಾರೆ ಮೂರನೆಯದಾಗಿ ಕೆಲಸವನ್ನು ಆಗಲೇ ಆರಂಭಿಸಿಬಿಟ್ಟಿದ್ದಾರೆ

ವಿರೋಧ ಆಗತ್ಯ

ಸದ್ಯ ದಕ್ಷಿಣರೇಲ್ವೆ ಹೊಸವು ಹಾಕಿರುವ ಕರ್ನಾಟಕಕ್ಕೆ ಸಂಬಂಧಪಟ್ಟ ಬೆಂಗಳೂರು—ಸೇಲಂ ಹಾಗು ಹೊಸಪೇಟೆ. ಗುಂಟಕಲ್ಲು (ಬ್ರಾಡ್‌ಗೇಜ್) ರೇಲ್ವಾರಿಗಳು ತೋರಿಕೆಯಲ್ಲಿ ಮಾತ್ರ ಹಿತಕಾರಿಯೆಂಬಂತಿದ್ದು ನಿಜವಾಗಿ ಅತ್ಯಂತ ಅಹಿತಕಾರಿಯಾಗಿದ್ದು ನಮ್ಮ ಪ್ರಾಂತದ ಆರ್ಥಿಕ ಅಸ್ತಿವಾರವನ್ನೇ ಬುಡ ಮೇಲು ಮಾಡುವಂತಹವಿವೆ ಇಷ್ಟೇ ಅಲ್ಲ ನಾಳೆ ಅವನ್ನು ಕರ್ನಾಟಕದ ಪುಣ್ಯದ ವೆಚ್ಚಕ್ಕೆ ಖರ್ಚು ಹಾಕುತ್ತಿದೆ ಭಾರತ ಸರಕಾರ! ಎಂದರೆ ‘ಕರ್ನಾಟಕದಲ್ಲಿ ಅಥವಾ ಕರ್ನಾಟಕಕ್ಕಾಗಿ ಇಷ್ಟು ಮೈಲು ರೈಲು ಹಾಕಲ್ಪಟ್ಟಿತು ಮೂರನೇ ಯೋಜನೆಯಲ್ಲಿ’’ ಎಂದು ನಮ್ಮ ಮೇಲೆ ಹರಿಲಿ ಹೊರಿಸಲು ಅಡ್ಡಿಯಿಲ್ಲದಂತಾದೀತು. ನಮಗೆ ಅತ್ಯಂತ ಅಹಿತಕಾರಿಯಾದುದೇ ನಮ್ಮ ಪುಣ್ಯದ ತಲೆಗೆ ಕಟ್ಟಲ್ಪಡುವುದೆಂದರೆ ಎಂತಹ ಅಪಹಾಸ! ವಿರೋಧಾಭಾಸ! ನಿಜವಾಗಿ ಕನ್ನಡಿಗರು ಈ ಉದಕ್ರಮಗಳನ್ನು ಪ್ರಚಂಡವಾಗಿ ವಿರೋಧಿಸಿ, ಅವಶ್ಯವೆಂದರೆ ಸತ್ಯಾಗ್ರಹವನ್ನೂ ಹೂಡಬೇಕು; ಅಂತಹ ಪ್ರಬಲ ಪರಿಸ್ಥಿತಿ ನಮಗಾಗಿ ಕಾದಂತಿದೆ. ಕನಿಷ್ಠ ಪಕ್ಷ ಅನ್ಯರಿಗೇನು ಬೇಕೋ ಅದನ್ನು ಮಾಡಿದರೆ ಮಾಡಿ; ಆದರೆ ಕನ್ನಡಿಗರಿಗೆ ಜೀವಾಳದ ಪ್ರಶ್ನೆಯಾಗಿರುವ ನಮಗಗತ್ಯವಾಗಿರುವ ರೇಲ್ವಾರಿಗಳನ್ನೆಂತೂ ನಾವೆ ಪಡೆದೇ ತೀರುವೆವು” ಎಂಬ ಸತ್ಯದ ಆಗ್ರಹವನ್ನೂ, ಗಟ್ಟಿಗತನವನ್ನೂ, ಗಂಡುಸುತನವನ್ನೂ ಕನ್ನಡಿಗರು ತೋರಬೇಕಾದ ಗಂಭೀರ ಪರಿಸ್ಥಿತಿ ಉದ್ಭವಿತವಾಗಲಿದೆ. ಆರಂಭದಲ್ಲಿಯೇ ಹೇಳಿದಂತೆ, ಬೀಜವಿಲ್ಲದೆ ಫೊಕೆಯಿಲ್ಲ ಎಂಬಂತೆ ಇಂದು ಹಾಗಲಕಾಯಿ ಬೆಳೆಯದಿದ್ದರೆ ದಕ್ಷಿಣ ಕನ್ನಡದ ಮುಂದಿನ ರೇಲ್ವಾರಿಗಳೆಲ್ಲಿ ಕನಸಿನ ಗಂಟೇ ಎಂಬಂತಾಗುವಲ್ಲಿ ಸಂದೇಹವಿಲ್ಲ ಮೊದಲು ಹಾಸನ-ಮಂಗಳೂರು ಆ ಮೇಲೆ ಬೇಕಾದರೆ ಬೆಂಗಳೂರು-ಸೇಲಂ.

ಸುಪ್ರಭಾತ

ಹೊನ್ನ ರಸದ ಬೆಳಕು ಬರಲು
ಬಾನು ಬಯಲು ತುಂಬುತಿರಲು
ತಂಪು ಗಾಳಿ ಸುಳಿಯುತಿರಲು
ತರೆಯು ನಲಿದಳು
ಹಕ್ಕಿ ನಿಚಯ ಉಲಿದು ನಲಿಯೆ
ಉಷೆಯು ಬಂದಳು! ‖ ೧ ‖

ಮೇಲೆ ಬಾನಕಟ್ಟೆಯೊಡೆದು
ನೋರಿ ರೋಯ್ತೆ ಸೊಬಗು ಸಿಡಿದು?
ಬಾನು ಬಯಲು ಬಾಯಿ ತೆರೆದು
ಅದನೆ ಕುಡಿದಿದೆ!
ಸಗ್ಗವಿಳಿದ ಬಂತೆ ತರೆಗೆ?
ಜೀವವು ಹರಿದಿದೆ! ‖ ೨ ‖

ಹರಿದ ಸೊಬಗು ಧರಣಿಯೆಲ್ಲ
ಬೆಳಕು ಧಳಕು ಕರಗಿತಲ್ಲ
ಹೊಸರು ಜಗನೆ ಮೂಡಿತಲ್ಲ
ಉಷೆಯು ಬರುತಿರೆ!
ನಸ್ಪೋಲ್ಲಾಸ ಮೂಡಿ ಬಂತು
ಉಷೆಯು ಬರುತಿರೆ! ‖ ೩ ‖

ತಳಿರ ನೆರಿಗೆ ಹಾರುತಿರಲು
ಒಳ್ಳೆ ಬಳಿಯ ಜೋಲು ತಿರಲು
ಬಿದಿರ ಹಿಂಡು ಶ್ರುತಿಯ ನಿಡಲು
ಧರೆಯು ಮೆರೆದಳು
ಸುಪ್ರಭಾತವಿದುವು ನಿಜದಿ
ಉಷೆಯು ಸರಿದಳು ‖ ೪ ‖

ಉಷೆಯ ನಾಟ್ಯದಾಟದಿಂದ।
ಧರಣಿಯೇಳೆ ತೋಷದಿಂದ
ಜಾಡ್ಯ ಕಳೆಯೆ ಗೆಲವಿನಿಂದ
ದಿನವು ಬಂದನು ॥
ಆಗಲಲಿ ಬಾಲ ಕೇಳಿ
—ಯೂಡಿ ಬಂದನು ॥ ‖ ೫ ‖

ಬಾಲ ರವಿಯು ತೋಷದಲ್ಲಿ
ಮೂಡುಬೆಟ್ಟ ದಂಚಿನಲ್ಲಿ
ಸಪ್ತ ವರ್ಣವನ್ನು ಚೆಲ್ಲಿ
ನಲಿದ, ನಿಂದನೋ?
ದೇವಿ ಉಷೆಯ ಮುರುಳುಗೊಳಿಸಿ
ಒಲಿದು ಬಂದನೋ! ‖ ೬ ‖

ಯು ನಾರಾಯಣ ಸೇರಿಗಾರ್, ಉದ್ಯಾವರ.

—: ಭ್ರಮರಾರಿ :—

* * *

ನೀನರಳಿ ಪ್ರಕೃತಿಯಲಿ
ನಗುತ್ತಿದ್ದರೇನು!
ಸೌರಭದ ಸಂಚಯದಿ
ಬಳುಕಿದ್ದರೇನು'
ಕೆಂಪಿನುಂಪಿನ ಬಣ್ಣ
ಹೊಂದಿದ್ದರೇನು.'
ಸಂಪ. ಕಂಪಿನ ರಸ
ಹರಡಿದ್ದರೇನು.!
ಅಂದ ಚೆಂದಕೆ ಪ್ರೀತಿ
ಗಳಿಸಿದ್ದರೇನು.!
ಮೇಟಿ ಪಟ್ಟಣ ತುಂಬ
ಇಣಿಕಿದ್ದರೇನು.!
ಇತರ ಪುಷ್ಪಗಳಿಂದ
ಬೇರಾಗಿದ್ದರೇನು.!
ಸಂಪಿಗೆ ಇಂದಿಗೂ
'ಭ್ರಮರಾರಿ' ನೀನು!

—‘ಸಿರಿಪತಿ’

ದೀಪಾವಳಿಯ ಶುಭಾಶಯಗಳೊಂದಿಗೆ ನಿಮ್ಮ ಮಿತ್ರರಿಗೆ
ಉಚಿತ ಉಡುಗೊರೆ ಕೊಡಲು ಯೋಗ್ಯ ಪುಸ್ತಕ

‘ಇಂಗ್ಲಿಷ್ ಕಲಿಯಲಿಲ್ಲವಲ್ಲಾ’ ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತನ್ನಷ್ಟಕ್ಕೆ ತಾನೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ
ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!



ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.
ಹೊಸ ಮುದ್ರಣ—ಸಾದಾ ಪ್ರತಿ 2·00. ಉತ್ತಮ ಪ್ರತಿ 2:50

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನನಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಟೆಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಸೌಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಅನೇಕರಿಂದ ಆರು ನುಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ 1=75, ಬಿಳಿ ಕಾಗದ!
ರೂ.೨೫ಕ್ಕೆ ೩೦ ನಾಣ್ಯದಿಂದ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
**ನವಯುಗ ಸೇಲ್ಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.**

ದೀಪಾವಳಿಯ ವೈಶಿಷ್ಟ್ಯಗಳು

(ಜನೇ ಪುಟದಿಂದ)

ರು ಪೇಟೆಗಳಲ್ಲಿಯ ಆನಂದವನ್ನು, ಅಲಂಕಾರವನ್ನು ನೋಡಲಾಗಿಯೇ ಪಟ್ಟಣಗಳಿಗೆ ಹೋಗುತ್ತಾರೆ. ಎಷ್ಟು ನೋಡಿದರೂ ಇನ್ನೂ ನೋಡಬೇಕೆನ್ನುವಷ್ಟು ಸೌಂದರ್ಯವು ಅಲ್ಲಿ ತುಂಬಿರುವುದು.

ಇಡಿ ಪ್ರಸಂಚದಲ್ಲಿ ಎಲ್ಲೆಲ್ಲೂ ಆನಂದವೇ ತುಂಬಿದೆಯೊ ಎಂಬಂತೆ ಎಲ್ಲ ಜನರೂ ತಮ್ಮ ತಮ್ಮ ಸುಖದುಃಖಗಳನ್ನು ಮರೆತು ಆನಂದದಲ್ಲಿ ತಲ್ಲೀನರಾಗುವರು. ಈ ದೀಪಾವಳಿಯಲ್ಲಿ ಸಿಹಿ ತಿಂಡಿಗಳನ್ನು ಹೆಚ್ಚಾಗಿ ಮಾಡುವ ಪದ್ಧತಿ ಇದೆ. ಬಹಳ ಉತ್ಸಾಹದಿಂದ ಹುಡುಗರು ಈ ಸಿಹಿ ತಿಂಡಿಗಳನ್ನು ತಿನ್ನುತ್ತಾರೆ.

ಆದರೆ ಈ ಆನಂದದ ಪರ್ವವು ಆನಂದದಲ್ಲೇ ಸಮಾಪ್ತವಾಗುವುದಿಲ್ಲ. ಸಾಮಾನ್ಯವಾಗಿ ಯಾವಾಗಲೂ ಕೆಟ್ಟದ್ದು ಒಳ್ಳೆಯದರಲ್ಲೂ, ಅನ್ಯಾಯವು ನ್ಯಾಯದಲ್ಲೂ, ದುರಾಚಾರವು ಸದಾಚಾರದಲ್ಲೂ, ಆಪಾಯವು ಎಚ್ಚರಿಕೆಯಲ್ಲೂ ಇದ್ದೇ ಇರುತ್ತವೆ. ದೀಪವು ಕತ್ತಲೆಯನ್ನು ನಿವಾರಿಸಲಾಗಿ ಇರುತ್ತದೆ. ಕತ್ತಲೆಯ ನಿವಾರಣೆಯೂ ಆಗುತ್ತದೆ. ಆದರೆ ಕತ್ತಲೆ ಇರುವುದೆಲ್ಲಿ? ದೀಪದ ಬುಡದಲ್ಲೇ ಅಲ್ಲವೆ? ಆದರಂತೆ ಈ ದೀಪಾವಳಿಯ ಆನೊಂದೋ ತಾಪಹದ ಜೊತೆಯಲ್ಲಿ ದುಃಖ, ಶೋಕ, ಕೋಪ, ತಾಪಗಳು ಹಲವು ಸೇರಿವೆ. ಆ ದಾವುದೆಂದು ನೋಡುವಾ ..

ದೀಪಾವಳಿಯಂದು ಮನುಷ್ಯರುಗಂಡುಗಳನ್ನು ಸುಡುತ್ತಾರೆ ಹಿಂದುಮುಂದಿನ ಆಲೋಚನೆ ಇಲ್ಲದೆ ಎಲ್ಲೆಂದರಲ್ಲಿ ಹೇಗೆಂದರ್ಹಾಗೆ ಮದ್ದುಗುಳಿಗೆ ಬೆಂಕಿ ಇಡುತ್ತಾರೆ. ಇದರಿಂದ ಮನೆಮರಗಳೂ, ಅಂಗಡಿ ಬೀದಿಗಳೂ, ಕೊನೆಗೆ ಪ್ರಾಣವೂ ಹೋಗುವ ಸಂಭವ ಉಂಟು. ಈ ರೀತಿ ಕೆಲವರ ಆನಂದವು ಹಲವರ ದುಃಖಕ್ಕೆ ಮೂಲವಾಗುವುದು. ಆನಂದದ ಪರ್ವವು ಆನಂದದಲ್ಲಿಯೇ ಸಮಾಪ್ತವಾಗಬೇಕು. ಒಬ್ಬಿಬ್ಬರ ಆನಂದವಲ್ಲ ಎಲ್ಲರ ಆನಂದ. ವಿಶ್ವಾನಂದ.

ಇನ್ನೊಂದೆಂದರೆ—ದೀಪಾವಳಿಯ ರಾತ್ರಿ ಜನರು ಜೂಜಾಡುವರು ಈ ದಿನ ಕೇವಲ ಜೂಜಾಟದಲ್ಲೇ ಕಳೆದರೆ ವರ್ಷ ವಿಡೀ ಲಕ್ಷ್ಮಿಯು ತಮ್ಮ ಮನೆಯಲ್ಲಿ ವಾಸಮಾಡುವಳೆಂದು ಈ ಜೂಜು ಕೋರರ ನಂಬುಗೆ. ಕೇವಲ ನಂಬುಗೆಯೇ ಮಾತ್ರವಲ್ಲದೇ ಈ ಜೂಟುಕೋರರ ಬಾಯಿಯಲ್ಲಿ ಶಾಸ್ತ್ರಾಧಾರಗಳೂ ಇರುತ್ತವೆ. "ಈ ಜನ್ಮದಲ್ಲಿ ಯಾವನು ದೀಪಾವಳಿಯಂದು ಜೂಜಾಡುವುದಿಲ್ಲವೊ ಅವನು ಮುಂದಿನ ಜನ್ಮದಲ್ಲಿ ಕತ್ತೆಯಾಗುವನು."

ಎನ್ನುವರು. ಆದರೆ ಈ ರೀತಿ ಜೂಜಾಡುವುದು ಬಹಳ ಕೆಟ್ಟದ್ದು. ಜೂಜಿನಲ್ಲಿ ಒಬ್ಬನು ಗೆದ್ದರೆ ಇನ್ನೊಬ್ಬನು ಸೋತೇ ಸೋಲುವನೆಂಬುದು ನಿಶ್ಚಯ. ಈ ರೀತಿ ಅನೇಕರು ಪರಿಶ್ರಮಿಗಳು ಬೆವರು ಸುರಿಸಿ ಸಂಪಾದಿಸಿದ ಹಣವನ್ನು ಕೆಲವಾರು ಘಂಟೆಗಳಲ್ಲಿ ಕಳೆದುಕೊಂಡು ದುಃಖಪಡುವರು. ಆನಂದ ಮತ್ತು ಪ್ರಕಾಶದ ಈ ಪರ್ವವು ಅವರ ಪಾಲಿಗೆ ಅಂಧಕಾರ ಮತ್ತು ಶೋಕದ ಪರ್ವವಾಗುವುದು.

ಕೆಲವರು ಕಳ್ಳರ ನಂಬುಗೆ ಈ ರೀತಿ ಇದೆ.—"ಇಂದೇ ರಾತ್ರಿ ಕಳ್ಳತನ ಮಾಡಿ ತಮ್ಮ ಭಾಗ್ಯವನ್ನು ಬಂದೋಬಸ್ತು ಮಾಡಿಕೊಳ್ಳ ಬೇಕು" ದೀಪಾವಳಿಯ ರಾತ್ರಿ ಕಳ್ಳತನ ಮಾಡಿ ಒಳ್ಳೊಳ್ಳೆ ಮೂಲುಗಳನ್ನು ಹೊಂದಿದರೆ ಇಡೀ ವರ್ಷವು ಕಳ್ಳತನವು ಸುಖದಾಯಕವೆಂದು ಮತ್ತೊಂದು ನಂಬುಗೆ. ಇದೇ ಆಶೆಯಿಂದ ಅವರು ಕಳ್ಳತನಕ್ಕೆ ಹೊರಡುತ್ತಾರೆ. ಅಂತಹ ಬಯಂಕರ ಕರಾಳ ಕಾರ್ಗತ್ತಲೆಯ ರಾತ್ರಿಯೂ ಕೂಡಾ ಅವರಿಗೆ ಅನುಕೂಲವಾಗಿರುತ್ತದೆ. ಏಕೆಂದರೆ ಧನಿಕರು ದೀಪಾವಳಿಯಂದು ತಮ್ಮ ಮನೆಗೆ ಲಕ್ಷ್ಮಿ ಬರುವಳೆಂದೂ, ಬಾಗಿಲನ್ನು ಹಾಕಿದರೆ ಅವಳು ಸಿಟ್ಟಿನಿಂದ ಹೊರಟು ಹೋಗುವಳೆಂದೂ, ತಿಳಿದು ಬಾಗಿಲನ್ನು ತೆಗೆದು ದೀಪವಿರಿಸಿ ಹಾಯಾಗಿ ಮಲಗಿ ನಿದ್ರೆ ಹೋಗುತ್ತಾರೆ ಲಕ್ಷ್ಮಿ—ಗಿಕ್ಷ್ಮಿ ಯೂರೂ ಬರೋದಿಲ್ಲ ಇಲ್ಲಿಗೆ. ..ಕಳ್ಳರು ಬರ್ತಾರೆ ಇದ್ದ ಬದ್ದ ಸಾಮಾನುಗಳನ್ನು ಎತ್ತಿಕೊಂಡು ಹೋಗುತ್ತಾರೆ ಇಂತಹ ಅಸಂದದ ಪರ್ವದಲ್ಲೂ ಇಂತಹ ಕಳ್ಳತನ ಮುಂತಾದನಗಳು ನಡೆಯುವುದು ಮನುಷ್ಯತ್ವಕ್ಕೆ ಧಕ್ಕೆತರುವಂತಹ ವಿಷಯ ಜೂಜು ಮತ್ತು ಕಳ್ಳತನ ಇವೆರಡೂ ಬಹು ಕೆಟ್ಟದ್ದು. ಅದರಲ್ಲೂ ದೀಪಾವಳಿಯಂತ ಪರ್ವವನ್ನು ಇದಕ್ಕೆ ಆಶ್ರಯವಾಗಿ ತೆಗೆದುಕೊಳ್ಳುವುದು. ಇನ್ನೂ ಬಹು, ಬಹು, ಬಹು ಕೆಟ್ಟದ್ದು.

ದೀಪಾವಳಿಯು ಆನಂದದ ಪರ್ವ ನಾನೆಲ್ಲರೂ ಇವನ್ನು ಆನಂದದಿಂದ ಆಚರಿಸ ಬೇಕು. ನಾವು ಆನಂದ ಪಡುವುದನ್ನು ನೋಡಿ ಪರರ ಆನಂದವೂ ಬೆಳೆಯುವಂತೆ ಆಗ ಬೇಕು. ಎಲ್ಲರೊಡನೆ ನಾವು ಆನಂದ ಪಡುವುದನ್ನು ತಿಳಿದವರು ನಿಜವಾದ ಆನಂದ, ಬ್ರಹ್ಮಾನಂದ, ಆತ್ಮಾನಂದ, ಪರಮಾನಂದ, ಮಹಾಪಾನಂದ ಇತ್ಯಾದಿ ಇತ್ಯಾದಿಯಾಗಿ ಕರೆದಿರುವರು.

॥ ಭಾರತೀಯ ಸಂಸ್ಕೃತಿಗೆ ಸನ್ಮಂಗಳವಾಗಲಿ ॥

ಕೈಮು ಸಲ್ಲಿಸಲು ವಿಳಂಬವಿಲ್ಲ

ಎಲ್. ಐ. ಸಿ.ಯ ಅಧ್ಯಕ್ಷ ಕೌಲರ ಪ್ರಕಟಣೆ

ಇತ್ತೀಚೆಗೆ ದೇಶದ ಪತ್ರಿಕೆಗಳು, ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್‌ನ ನ್ಯೂ ಇಂಡಿಯಾ ಯುನಿಟ್‌ನವರು ದಿವಂಗತ ಎನ್. ರಾಜರತ್ನಮ್ ನಾಡರ್ ಅವರಿಗೆ ಮೂರಾಟ ಮೂಡಿದ ಪಾಲಿಸಿಯ ಮೇಲೆ ಕ್ಲೈಮ್ ಕುರಿತು ಮದ್ರಾಸ್ ಹೈಕೋರ್ಟ್ ತೀರ್ಪಿನ ಪರಿಣಾಮವಾಗಿ ಕಾರ್ಪೊರೇಷನ್‌ನ ಮೇಲೆ ಕುಂಬಾ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತವೆ.

ಈ ತೀರ್ಪನ್ನು ಎಲ್ಲಾ ದೃಷ್ಟಿಗಳಿಂದಲೂ ಪರಿಶೀಲಿಸಿ, ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್ ಮೇಲಿನ ಪಾಲಿಸಿಯ ಕ್ಲೈಮ್ ಹಣ (ಅಂದರೆ ಸಂಪೂರ್ಣ ವಿಮೆ ಹಣ) ರೂ ೫೨,೦೦೦ವನ್ನು ಹಕ್ಕುದಾರರಿಗೆ ಸಲ್ಲಿಸಿದೆ. ಜತನದಲ್ಲಿಡಲು ಕಾರ್ಪೊರೇಷನ್‌ನ ವಶದಲ್ಲಿಟ್ಟಿರುವ ಮತ್ತು ನ್ಯಾಯವಾಗಿ ಸಲ್ಲಬೇಕಾದ ಪಾಲಿಸಿದಾರರ ವಿಮೆ ಹಣವನ್ನು ಪಾಲಿಸಿದಾರರಿಗೆ ಅಥವಾ ಹಕ್ಕುದಾರರಿಗೆ ಸಲ್ಲಿಸುವುದು ನಮ್ಮ ನೀತಿ ಮತ್ತು ಧರ್ಮವಾಗಿರುತ್ತದೆ.

ಪ್ರಮೋಸಲ್‌ಗಳನ್ನು ತುಂಬಿಸಿ ಕೊಡುವ ಸಮಯದಲ್ಲಿ ವಿಮೆಕಾರರಿಗೆ ಸಂಬಂಧಪಟ್ಟ ಹೇಳಿಕೆಗಳನ್ನು ಅಡಗಿಸಿರುವ ಪರಿಣಾಮವಾಗಿ ಕೆಲವು ಕ್ಲೈಮ್‌ಗಳನ್ನು ನಿರಾಕರಿಸಲಾಗಿದ್ದರೂ, ಸಾವಿರಾರು ಕುಟುಂಬಗಳು ಜೀವವಿಮಾ ಪಾಲಿಸಿಗಳ ಮೂಲಕ ಹಣವನ್ನು ಪಡೆದಿರುತ್ತವೆ.

—ಸಮಯ ವಿರಿದಾಗ್ಯೂ ಕ್ಲೈಮ್ ಹಣವನ್ನು ಕೊಡಲಾಗಿರುತ್ತದೆ. ಉದಾಹರಣೆಗಾಗಿ ೧೯೬೧ರಲ್ಲಿ ಕಾರ್ಪೊರೇಷನ್ ೭೭೦೦೦ಕ್ಕೂ ವಿರಿ ಕ್ಲೈಮ್‌ಗಳನ್ನು ಕೊಟ್ಟಿರುತ್ತದೆ. ಮರಣದ ಪರಿಣಾಮವಾಗಿ ಬಂದ ಈ ಕ್ಲೈಮ್‌ಗಳ ಹಣವು ಸುಮಾರು ರೂ. ೪ ಕೋಟಿಗಳಾಗಿರುತ್ತವೆ. ಇದೇ ವರ್ಷದಲ್ಲಿ ನಿರಾಕರಿಸಲಾಗಿರುವ ಕ್ಲೈಮ್‌ಗಳು ೩೩೫ ಅಂದರೆ ಒಟ್ಟು ಕ್ಲೈಮ್‌ಗಳ ೧ ೩೪ ಸೇಕಡಾ ಮಾತ್ರ.

ಪಾಲಿಸಿಗಳನ್ನು ಪಡೆದ ಸ್ವಲ್ಪ ಸಮಯದಲ್ಲಿಯೇ ಬಂದ ಮತ್ತು ಶೋಧನೆ ಮಾಡಬೇಕಾದ ಕ್ಲೈಮ್‌ಗಳನ್ನು ಬಗೆಹರಿಸಲು ಹಲವಾರು ಕಾರಣಗಳಿಂದಾಗಿ, ಡಾಕ್ಟರರು ಮತ್ತು ಇತರ ಸಂಬಂಧಪಟ್ಟ ಜನರು ಅವಶ್ಯವಿರುವ ವಿಷಯಗಳನ್ನು ತಿಳಿಸಲು ಅಸಮ್ಮತಿ ಮತ್ತು ಉದಾಸೀನತೆಯನ್ನು ತೋರಿಸುವುದರಿಂದಾಗಿ ಮತ್ತು ಹಕ್ಕುದಾರರಿಂದಲೂ ಸಹಕಾರ ಸಿಗದಿರುವುದರಿಂದಾಗಿ, ವಿಳಂಬವಾಗುತ್ತದೆ. ವಾಡಿಕೆಯೊಗಿ ಕ್ಲೈಮ್‌ಗಳನ್ನು ಸಮಯ ವಿರಿದೆಯೆಂದು ನಿರಾಕರಿಸಲಾಗುವುದಿಲ್ಲ ಅನೇಕ ಕ್ಲೈಮ್‌ಗಳನ್ನು ಸಮಯ ವಿರಿದ್ದರೂ ಅವುಗಳ ಯೋಗ್ಯತೆಗಳನ್ನು ಅವಲಂಬಿಸಿ ಹಣವನ್ನು ಸಲ್ಲಿಸಲಾಗಿದೆ. ಮದ್ರಾಸ್ ಹೈ ಕೋರ್ಟಿಗೆ ಹೋದ 'ನಾಡರ್ ಕ್ಲೈಮ್' ವಿವಾದದಲ್ಲಿ, ಕ್ಲೈಮನ್ನು ಸಮಯ ವಿರಿದೆಯೆಂದು ನಿರಾಕರಿಸಿದ್ದಲ್ಲ. ಇದನ್ನು ಪಾಲಿಸಿ ಕರಾರಿಗೆ ಸಂಬಂಧಪಟ್ಟ ವಿಷಯವನ್ನು ಅಡಗಿಸಿರುವ ಪರಿಣಾಮವಾಗಿ ನಿರಾಕರಿಸಲಾಗಿದೆಯೆಂದು ನ್ಯಾಯಾಧೀಶರ ತೀರ್ಪಿನಲ್ಲಿ ಸ್ಪಷ್ಟವಾಗಿ ತಿಳಿಯ ಬಹುದಾಗಿದೆ. ತಮ್ಮ ಕರ್ತವ್ಯವನ್ನು ಪಾಲಿಸುವಾಗ ಅಧಿಕಾರಿಗಳು ಕೆಲವು ಕ್ಲೈಮ್‌ಗಳನ್ನು ನಿರಾಕರಿಸಿದ್ದಲ್ಲಿ ಇದು ಪಾಲಿಸಿ ಕರಾರಿನ ವಿರೋಧವಾಗಿ ಕಂಡು ಬಂದ ಮುಂಜಾಗೆಗಳ ಪರಿಣಾಮವಾಗಿ ಆಗಿರುತ್ತದೆ.

ಆದುದರಿಂದ ಹೈ ಕೋರ್ಟಿಗೆ ಹೋದ 'ನಾಡರ್' ಪಾಲಿಸಿಯ ವಿವಾದವು ಆ ಧಾರವ ಮೇಲೆ, ಕಾರ್ಪೊರೇಷನ್ ಎಲ್ಲಾ ಕ್ಲೈಮ್‌ಗಳನ್ನೂ ಶೀಘ್ರವಾಗಿ ಸಲ್ಲಿಸಲು ತಡೆಯೊಡುತ್ತಿದೆ ಎಂದು ತಿಳಿದುಕೊಳ್ಳಬೇಕಾಗಿಲ್ಲ. ಶೋಧನೆಗಳನ್ನು ಮಾಡಲು ವಿಳಂಬವಾಗದಂತೆ ಕ್ರಮಗಳನ್ನು ಕೈಕೊಳ್ಳಲಾಗಿದೆ ಆದರೆ ಯಾವುದಾದರೂ ಕ್ಲೈಮಿನಲ್ಲಿ ಏನಾದರೂ ಪ್ರಶ್ನಾಸ್ಪದವೆಯೆಂದು ಸಂಶಯ ಬಂದಲ್ಲಿ ಅದನ್ನು ಸರಿಯಾಗಿ ಪರಿಶೋಧಿಸದೆ, ಅದನ್ನು ಪರಿಗೊಳಿಸಿ, ಅಸಂಖ್ಯಾತ ಪಾಲಿಸಿದಾರರ ಹಿತವನ್ನು ಗಂಡಾಂತರಕ್ಕೆ ಗುರಿ ಮಾಡುವುದನ್ನು ಕಾರ್ಪೊರೇಷನ್‌ನಿಂದ ನಿರೀಕ್ಷಿಸಬಾರದು.



ಅಮೇರಿಕನ್ ಪಿಸ್ತೂಲ್ ಆಟೋ
ಮೇಟಿಕ್ 8 ಗುಂಡು ಮತ್ತು 60
ಗುಂಡು ನಿಮಗೆ ಕೃಪ್ತಿಕರವಾಗದಿದ್ದಲ್ಲಿ
ಹಣ ವಾಪಾಸು ಕೊಡಲಾಗುವುದು.

ಕುಂಪಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ. ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

REY ROGAS & CO., 23-A, Anand Nagar, BOMBAY-26

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50

ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಅತ್ಯಾಧುನಿಕ ಫೇಶನ್ನಿನಲ್ಲಿ ಕಂಗೊಳಿಸಿರಿ

ಮೈಸೂರು ಗೌರ್ನಮೆಂಟಿನ ಶೋಭೆಯುಳ್ಳ ಸಿಲ್ಕು—ಸೀರೆಗಳು, ಜಾರ್ಜೆಟ್‌ಗಳು, ಕ್ರೇಪುಗಳು— ಇವನ್ನು ಧರಿಸಿದರೆ ನೀವು ಅತ್ಯಾಧುನಿಕ ಫೇಶನ್ನಿನಲ್ಲಿ ಕಂಗೊಳಿಸುವಿರಿ, ಮೈಸೂರು ಗೌರ್ನಮೆಂಟ್ ಸಿಲ್ಕುಗಳು ಬಹಳ ನಯವಾಗಿವೆ. ಮೋಹಕವಾಗಿವೆ ಮತ್ತು ಆಕರ್ಷಕ ಬಣ್ಣಗಳಲ್ಲಿ ಶ್ರೇಷ್ಠವಾಗಿವೆ. ಅವು ಎಲ್ಲೆಡೆಯಲ್ಲಿಯೂ ಫೇಶನ್ನಿನ ಆಯ್ಕೆಯಾಗಿವೆ.

ಮೈಸೂರು ಗೌರ್ನಮೆಂಟ್ ಸಿಲ್ಕ್

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫೇಕ್ಟರಿ,

ಮೈಸೂರು.

ಶೋ ರೂಮು ಇರುವ ಸ್ಥಳ: ಕೆಂಪೇ ಗೌಡ ರೋಡ್,
ಅಲಂಕಾರ ಥಿಯೇಟರಿನ ಎದುರು,
ಬೆಂಗಳೂರು—**9.**

ಯಕ್ಷಗಾನ ಆಟ, ಕೂಟ

(೧೪ನೇ ಪುಟದಿಂದ)

ಕು. ನಷ್ಟವಾದ ಸ್ತ್ರೀ ಭೂಮಿಕೆಯನ್ನು ನಾವು ಉಡಿಗೆ ತೊಡಿಗೆಗಳ ದೃಷ್ಟಿಯಿಂದ ತಿರುಗಿ ಹುಟ್ಟಿಸಬೇಕಾಗಿದೆ. ಅದರಂತೆ ಹಾಸ್ಯಗಾರ, ಋಷಿಗಳ, ಪಾತ್ರಪೋಷಣೆಯು ಹೊಸತಾಗಿ ಆಗಬೇಕಾಗಿದೆ; ಇದು ಚೆತ್ರಕಾರನ ರಾಜ್ಯ.

ಇನ್ನು ನರ್ತನದ ಸುಧಾರಣೆಯು ಒಂದು ದೊಡ್ಡ ಕೆಲಸ. ಈಗಿರುವ ನೃತ್ಯ ವಿಧಾನಗಳನ್ನು ನಾವು ತಿಳಿದರೆ ಸಾಲದು. ಆದಕ್ಕೆ ಒಪ್ಪು, ಭಂಗಿ, ಮೈ ಚಲನೆಗಳನ್ನು ತಿಳಿಯಲು ನಮ್ಮ ನರ್ತನಕಾರರು ಶಿಲ್ಪ, ಚಿತ್ರಗಳ ತೋಲ (Balance) ಭಂಗಿ, ರೇಖಾ ಪ್ರಾಸಗಳನ್ನು ತಿಳಿಯಬೇಕು. ನರ್ತನಕ್ಕೆ ನಿಕಟ ಸಂಬಂಧವುಳ್ಳ ಕಲೆಯು ಶಿಲ್ಪ, ಚಿತ್ರಗಳು ಇವನ್ನೆಲ್ಲ ಬೆಳೆಯಿಸಿಕೊಂಡರೆ ಆಟಗಳಲ್ಲಿನ ಮೂತು ಗಾರಿಕೆಯು ಹಿಮ್ಮೆಟ್ಟಿ ಬಹುದು. ಈಗ ಮೂತುಗಾರಿಕೆಯನ್ನು ನಾವು ಕತ್ತರಿಸಿ ಬಿಟ್ಟಿರೆ, ಕಾಳಗ ಒಂದು ಬಿಟ್ಟು ಉಳಿದ ಯಾವುದೂ ಬರಿಯ ಕುಣಿತದಿಂದ ತಿಳಿಯುವಂತಿಲ್ಲ

ಮೂತುಗಾರಿಕೆಗೆ ಯಕ್ಷಗಾನಆಟದಲ್ಲಿ ಪ್ರಾಶಸ್ತ್ಯ ಬಂದಿತೆಂದು ತಿಳಿಯಲಾಗಿದೆ. ಆದರಂತೆಯೇ ಭಂಡಿನ ಚೀಲವಾದ ಹೊತ್ತು ಬಾಕ ಹಾಸ್ಯಗಾರನಿಗೆ ಸ್ಥಾನ ಈಗೆಂದರೆ ನಮ್ಮ ಆಟವು ರಾತ್ರಿ ಬೆಳಗಿನ ನೃತನಕ ನಡೆಯ ಬೇಕು. ದೂರದ ಹಳ್ಳಿಗಳಿಂದ ಬರುವವರು ಬರಿಯ ಒಂದು ತಾಸಿನ ವಿನೋದಕ್ಕಾಗಿ ಆರು ಮೈಲಿ ನಡೆದಾರೆ? ಹೀಗೆಂದು ನಡುವೆ ಮೂತು ಹಾಸ್ಯಗಳ ಕೇಲನ್ನ ಬಡಿದಿದ್ದಾರೆ. ಹೀಗಿರಲು ಕೇಲುಗಳೇ ಮನೆಯ ಮುಕ್ಕಾಲು ಪಾಲು ಸ್ಥಳವನ್ನು ಆವರಿಸುವುದರಲ್ಲಿ ಆಶ್ಚರ್ಯವೇನು?

ರಸಾತ್ಮಕವಾದ ಒಂದು ದೃಶ್ಯವು ಇಂಧ ಕಡೆ ಆಧವಾ ಮೇಳೈಸದ ಒಡವೆಗಳನ್ನು ನಡುವೆ ನೋಣಿಸಿಕೊಂಡು ಸಾಗುವಂತಿಲ್ಲ. ಪ್ರೇಕ್ಷಕನ ಮನಸ್ಸು ರಸಗಳಲ್ಲಿ ಮುಳುಗಿರುವ ವೇಳೆಗು ಮಿತಿಯಿದೆ. ಆದುದರಿಂದ ಯಕ್ಷಗಾನವನ್ನು ಹೀಗೆ ಹತ್ತು ಗಂಟೆಗಳ ಕಾಲ ಕಲಾದೃಷ್ಟಿಯಿಂದ ಬೆಳೆಸುವುದು ಶಕ್ಯವಿಲ್ಲ.

ಇಷ್ಟೆಲ್ಲ ಹೇಳಿ ಯಕ್ಷಗಾನದ ಹಿಮ್ಮೇಳದ ವಿಚಾರ ಹೇಳದಿದ್ದರೆ ಹೇಗೆ? ಇಲ್ಲಿ ಭಾಗವತರೂ, ವಾದನಕಾರರೂ ಮುಖ್ಯರು. ಇಡೀ ರಾತ್ರಿಯ ಕೂಗಿನಿಂದ, ಕೇಳಲು ಇಂಪಾದ ಕೊನೆಗೆ ಸಹಸೀಯವಾದ ಕಂಠವುಳ್ಳ ಹಾಡುಗಾರರು ನಮ್ಮಲ್ಲಿ ಉಳಿದೇ ಇಲ್ಲ. ಇದ್ದ ಕೆಲವರು ತಾವು ಮಂದ್ರ, ಮಧ್ಯಮ, ಸಪ್ತಕಗಳಲ್ಲಿ ಸುಖವಾಗಿ ಹಾಡಲು ಶಕ್ತಿಯುಳ್ಳವರಾದರೂ ತಾರಕದಲ್ಲಿ ಕಿರುಚಿ, ಕರ್ಕಶ ಧ್ವನಿಯು ಹೊಸ ಪದ್ಧತಿಯನ್ನು ಸ್ಥಾಪಿಸುತಿದ್ದಾರೆ.

ಈಗ ಹಾಡುಗಾರಿಕೆಯ ಸುಧಾರಣೆ ನಡೆದಿದೆ. ಯಕ್ಷಗಾನದ ಹಾಡುಗಳಿಗೆ ಕಾಂಭೋದಿ, ಭೈರವಿ, ಬಿಲಹರಿಗಳೆಂದು ಹೆಸರಿರುವುದಾದರೂ ಹಳೆಯ ಸಂಪ್ರದಾಯದವರಲ್ಲಿ ಆರಾಗ ಜ್ಞಾನ ಉಳಿದಿಲ್ಲ. ಆವರಲ್ಲಿ ನಾಲ್ಕಾರು ರಾಗಗಳು ಬಳಕೆಯಲ್ಲಿವೆ. ಈ ಕೊರತೆಯನ್ನು ನೀಗಿಸುವೆವೆಂದು ಕೆಲವರು ದಕ್ಷಿಣಾದಿ ಮೂರ್ಗದಲ್ಲಿ ಹಾಡುವ ಹವ್ಯಾಸಕ್ಕೆ ಬಿದ್ದು 'ಯಕ್ಷ'ರನ್ನು ಗಂಧರ್ವರಿಂದ ತುಳಿಸಿ ಬಿಟ್ಟಿದ್ದಾರೆ. ಜಳೆಯ ಸಂಪ್ರದಾಯದವರಲ್ಲಿ ಹಲವು ರಾಗಗಳ ಪರಿಚಯವಿಲ್ಲ, ನಿಜ. ರಾಗದ ಹೆಸರು ಬಾರದು ನಿಜ. ಆದರೆ ಅವರಲ್ಲಿ ಯಕ್ಷಗಾನಕ್ಕೆ ವಿಶಿಷ್ಟವಾದ ಲಹರಿ (Lilt) ಒಪ್ಪು, ಅಲಾಪ, ರೀವಿ, ಉಕ್ಕು (Flourish)ಗಳಿವೆ. ಅವೇ ಹಾಡುಗಳನ್ನು ದಕ್ಷಿಣಾದಿಗೆ ಬಗ್ಗಿಸಿದವರು ಇವನ್ನೆಲ್ಲಾ ಮರೆತೇ ಬಿಟ್ಟಂತೆ ಕಾಣುವುದು ನಮ್ಮ ಹಳ್ಳಿಯ ಹಲವು ಹಾಡುಗಳು ಪಾಡ್ದನಗಳು ಒಂದಲ್ಲ ಒಂದು ದಕ್ಷಿಣಾದಿ ರಾಗವ ಹೆಸರಿಗೆ ಒಕ್ಕುವುವು. ಆದರೆ ಅವನ್ನು ದಕ್ಷಿಣಾದಿ ಸಂಗೀತ ಮೂರ್ಗಕ್ಕೆ ಸಮಾನಾಗಿ ಹಾಡಿದರೆ ಆಳ್ಗಳಲ್ಲಿರುವ ಲಹರಿ, ಒಪ್ಪು ಉಕ್ಕುಗಳು ಮಾಯವಾಗುವುವು. ಯಕ್ಷಮೂರ್ಗವನ್ನು ಗಂಧರ್ವ ಗಾನದಿಂದ ಪ್ರತ್ಯೇಕಿಸುವುದು ಈ ವೈಶಿಷ್ಟ್ಯಗಳು. ಕನ್ನಡ ಸುಧಾರಿಸಿರಿ ಎಂದರೆ ಕನ್ನಡ ಬಿಟ್ಟು ಸಂಸ್ಕೃತ ಇಲ್ಲವೆ ಇಂಗ್ಲೀಷಿನಲ್ಲಿ ಮಾಡಿದಾಡಿದರೆ ಏನು ಬಂದೀತು?

ಹಿಮ್ಮೇಳದ ವಿಚಾರ—ನಮ್ಮಲ್ಲಿ ಹಲವು ಬಾರಿ ಚರ್ಮವಾದ್ಯಕೋವಿದರು ಹಾಡುಗಾರಿಕೆಯ ಭಾವವನ್ನು ಪ್ರತಿಪಾದಿಸಬೇಕೆಂಬುದನ್ನೇ ಮರೆಯುವರು. ಆವರಲ್ಲಿ ಶಾಸ್ತ್ರೀಯ

ಜಗವಿಂದು ಸಾಗುತಿದೆ....

ಭಾಸ್ಕರ ಜಿ. ಶೆಟ್ಟಿ,
ಗ್ರಾಂಟ್ ಮೆಡಿಕಲ್ ಕಾಲೇಜು, ಮುಂಬೈ.

+++++

ಕಾಲಮೂಯೆಯೋ ಇದು ಜಗಲಯದ
ಛಾಯೆಯೋ?
ದೈವಶಾಸವೋ, ಪೂರ್ವದಾ ಮನುಜ
ಪಾಸವೋ?
ತುಂಬಿರುವರೀ ಜಗದಿ
ಜೀವಿಗಳೀ ಸಂಕುಳದಿ;
ಗೋಮುಖದ ವ್ಯಾಘ್ರಗಳು,
ಕಾಮುಕದ ಕುನ್ನಿಗಳು,
ಕಪಟದಾ ನರಿಗಳು,
ಮರ್ಕಟ ನರಜಾತಿಗಳು,
ಆರಿವರು ಜೀವಿಗಳು ಜೀವಿಯೂ
ತಿಂಬವರು?
ಮಾನವರೋ ಯೂ ನರಭಕ್ಷಕ
ದಾನವರೋ?

ಕಲಿಕಾಲ ಮಹಿಮೆಯೋ
ಕಾಲಚಕ್ರ ತಿರುಗಣೆಯೋ;
ಸತ್ಯವೆಂಬುದು ಹಾರಿ
ಮಿಥ್ಯವದಿಂದು ಬೀರಿ;
ಪ್ರೇಮವದಂದು ಗಮಿಸಿ
ಕಾಮವದಿಲ್ಲಿ ನೆಲಸಿ,
ಆಗಿರುವುದೀ ಭೂಮಿ ಬರಿಶೂನ್ಯ
ಮರುಭೂಮಿ!
ಏನಿದೇನಿದು ದೇವ, ಏನು
ನಿನ್ನಯ ಮಾಯ!
ಮೋಸದಾ ಬಲೆಯುಲ್ಲಿ,
ಹೇಸದಾ ಕೊಳೆಯುಲ್ಲಿ,
ಸೂಸದಾ ಜಿಜ್ಞಾಸದಲಿ,
ಬೀಸದಾ ಪವನದಲಿ,
ಬಿದ್ದಿಹರು ಜನವಿಂದು,
ಕುಗ್ಗಿಹುದು ಜಗವಿಂದು.
ಸಾಗುತಿಹುದು ಜನವಿಂದು ಕರಾಳ
ದುರಂತಕೋ?
ವೇಗದಲಿ ಜಗಸಾಗುತಿದೆ
ಪ್ರಳಯದಂತಕೊ!?

(೨೩ನೇ ಪುಟದಿಂದ)

ಡೆ ಬಾವಿ ತೋಡಿದ್ದರೂ ನೀರು ಬಾರದೆ ನಿರಾಶರಾಗಿ ಕುಳಿತಿದ್ದ ಸಂದರ್ಭದಲ್ಲಿ ಇವರು ವರಾರವನ್ನು ಪರಿತೀಲಿಸಿ, ಒಂದೇ ಸ್ಥಳವನ್ನು ನಿರ್ದೇಶಿಸಿದರು. ಅವಿಶ್ವಸನೀಯವಾದಲೇ, ಅಲ್ಲಿ ತೋಡಲು ನೀರು ಸಿಕ್ಕೆಯೇ ಸಿಕ್ಕಿತು. ತನ್ನ ಆಸ್ತಿ ಪಾಸ್ತಿಗಳನ್ನೂ ಪುಸ್ತಕವನ್ನೂ ಸಮಾಜಕ್ಕಾಗಿ ವಿನಿಯೋಗಿಸಿದ ದಿ। ರಂಯರ ಕೊನೆಯ ದಿನಗಳು ದುಃಖ ಪ್ರದವಾಗಿಯೇ ಇದ್ದವು. ಅವರ ಹೆಸರಿನಲ್ಲಿ ಇಂದು ಒಂದು ಟ್ರಸ್ಟ್ ನಿರ್ಮಿಸಿ ಕಡ್ರಿ ಜೋಗನ್ನ ಆದಕ್ಕೊಪ್ಪಿಸುವ ಸೂಚನೆಯಿದೆ.

ಉಡುಪಿಯ ಲಯನ್ಸ್ ಕ್ಲಬ್ಬಿನವರು ಮೊನ್ನೆ ತಾ. ೧೯ರಂದು ಈ ಆರ್ಯಕ್ರಾಂತಿ ಪುರುಷನ ಭವ್ಯ ಚಿತ್ರವನ್ನು ಮಂಗಳೂರಿನ ವಕೀಲ್ ಶ್ರೀ ಜಿ. ಸೋಮಶೇಖರರಾಯರಿಂದ ಅನಾವರಣ ಮಾಡಿಸಿ ಕೊಂಡುದು ಯೋಗ್ಯ ಸ್ಮಾರಕವಾಗಿದೆ. ಲಯನ್ಸ್ ಕ್ಲಬ್ಬಿನ ಆದ್ಯಕ್ಷ ಶ್ರೀ ಟಿ. ಎ. ಪೈಯವರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿಯೇ ಲಯನ್ಸ್ ಕ್ಲಬ್ಬಿನವರು ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ರಿಫ್ರಿಜರೇಟರ್ ಕೊಳ್ಳುವರೆ ರೂ. ೨೦೦೦ವನ್ನು ಸೋಮಶೇಖರರಾಯರ ಮೂಲಕ ಡಾ। ಫೋಮಸ್ ರಿಗೆ ಒಪ್ಪಿಸಿದರು. ವಿಶಾಲವಾದ ಪ್ರಕೃತಿ ಸೌಂದರ್ಯವನ್ನು ಕನಸಿಗೆ ಮೆದಲಾಗಿ ತೋರಿಸಿ ಕೊಟ್ಟವರು ತನ್ನ ಗುರುಗಳಾದ ರಾಮಚಂದ್ರರಾಯರೆಂದು ಡಾ॥ ಟಿ. ಎಂ. ಎ. ಪೈಯವರು ಈ ಸಂದರ್ಭದಲ್ಲಿ ಮಾತನಾಡುತ್ತ ಹೇಳಿದರು.

ಸಮಾಜ ಸುಧಾರಕ ರಾಮಚಂದ್ರರಾಯರನ್ನು ಅನೇಕರು ಮರೆತಿದ್ದರೂ ಎಸ್. ಎಸ್. ಪಿ ಕಾಮತರು ಆವರ ಪರೋಪಕಾರ ಜೀವನವನ್ನು ಜ್ಞಾಪಿಸುವ ಸಂದರ್ಭವನ್ನು ಒದಗಿಸಿದ್ದಾರೆಂದು ಶ್ರೀಟಿ ಎ ಪೈಯವರು ಈ ಸಂದರ್ಭದಲ್ಲಿ ಹೇಳಿದರು. ಯಿದು ಯೋಗ್ಯವಾಗಿದೆ.

ಪುತ್ತೂರು ಡಿ. ಮುಕೋರ್ಟಿನಲ್ಲಿ

R E P 272/1962 O S 473/55
R E A 343/62

ಕರ್ತಾರ್ ಶ್ರೀ ಸೋಮನಾಥ ದೇವರ— ಭಂಡಾರ —ಅರ್ಜಿದಾರರು
ಮತ್ತು
ಶಾರದಾ ಬಾಯಿ ಕೂಡಾ —ಎದ್ರಿರು.

೩ನೇ ಎದ್ರಿ—ಅಹಲ್ಯ ದೇವಿ, ಕೃಷ್ಣ ಎಳ್ಚಿತ್ತಾಯರ ಮಗಳು, ಮಂಗಳೂರು ಶಹರಾ ಶರವು ಗಣಪತಿ ದೇವಸ್ಥಾನದ ಬಳಿಯಲ್ಲಿ—ಇವರಿಗೆ

ಮೇಲ್ಕಂಡ ರಿಟ್ರಿ ಅಮಲ್ದಾರಿಯಲ್ಲಿ ಯಿ ಸ್ಪಿಹಾರಿನ ಶರತ್ತುಗಳನ್ನು ನಿರ್ಣಯಿಸುವರೆ ಕೂಡ ತಾ 2—11—1962ಕ್ಕೆ ವ್ಯಾಜ್ಯದ ಯಿರುವುದರಿಂದ್ದ, ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ ಗಂಟೆ 11ಕ್ಕೆ ಹಾಜ್ರಾಗಿ ಉದಾಹರಿಸಿದ್ದಲ್ಲಿ ನಿಮ್ಮ ವಿನಾ ಮುಂದಿರಿಸಲಾಗುವುದಂತ ಅರ್ಜಿದಾರರಿಗೆ ಏಲಂಗೆ ನಿಲ್ಲುವರೇ ಪರ್ಮಿಷನ್ ಕೊಡಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ತಿಳಿಸೇಣವಾಗಿದೆ.

(Sd) N Subramanyam
Advocate for Petr.

ಪೊಕ್ಕಾಂ ಪುತ್ತೂರು
ತಾ. 20—10—62.

ಚರ್ಮ ರಕ್ಷಣೆಗಾಗಿ

ಮೈಸೂರು ಸ್ಯಾಂಡಲ್ ಸಾಬೂನು

ಅದ್ವಿತೀಯವೆನಿಸಿದೆ

ಈ ಅಲಂಕಾರಿಕ ಟ್ಯಾಲೆಟ್ ಸೋಪಿನಲ್ಲಿ ಕೂಡಿರುವ ಶುದ್ಧ ಗಂಧದ ಎಣ್ಣೆಯು ನಿಮ್ಮ ಚರ್ಮವನ್ನು ಆರೋಗ್ಯದಲ್ಲಿರಿಸುತ್ತದೆ; ಮಾತ್ರವಲ್ಲದೆ ಅದಕ್ಕೆ ತಾರುಣ್ಯ ಶೋಭೆಯನ್ನೂ ಕೊಡುತ್ತದೆ.

ವಿಶಿಷ್ಟ ಗುಣಗಳಿಂದ ಪ್ರತ್ಯೇಕತೆಗೆ ಹೆಸರಾದ

ಟ್ಯಾಲೆಟ್ ಸಾಬೂನು.

ಗೌರ್ನಮೆಂಟ್ ಸೋಪ್ ಫೇಕ್ಟರಿ

ಬೆಂಗಳೂರು.

LICENCE NO. 31
Licensed to Post without Prepayment

ದೀಪಾವಳಿಯ ಶುಭಾಶಯಗಳು

ದೀಪಾವಳಿಯು ನಮ್ಮ
ಅಸಂಖ್ಯಾತ ಗ್ರಾಹಕರಿಗೆ,
ಹಿತಚಿಂತಕರಿಗೆ
ಶುಭಸಂತೋಷಗಳನ್ನು
ತರಲಿ . . .

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ

ಉಡುಪಿ.

ಸ್ಥಾಪನೆ: 1925

Edited, Printed & Published by K H Shetty at the Navayuga Press, Udipi, S. India.

ಪ್ರಸಿದ್ಧ ಕವಿ
ಎ. ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಎರಡು
ಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 8

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 1—11—1962 ಗುರುವಾರ

20ನ ಪೈಸೆ
ವಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೮

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲುಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ—
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಭಾರತಕ್ಕೊಂದು ಪಂಥಾಹ್ವಾನ

ಚೀನೀಯರ ದುರುದ್ದೇಶದ ಆಕ್ರಮಣ

ದೇಶದ ಸ್ವಾತಂತ್ರ್ಯ ಭದ್ರತೆಗಳ ರಕ್ಷಣೆಗೆ ಜನಜನವೂ ಸೈನಿಕನಾಗಬೇಕು; ತನುಮನಧನದಿಂದ ಮಾತೃಭೂಮಿಯ ವಿಮೋಚನೆಗೆ ಟೊಂಕಕಟ್ಟಬೇಕು.

"ಆತಿ ಸರ್ವತ್ರ ವರ್ಜಯೇತ್" ಎಂಬುದು ನಿತ್ಯ ಸತ್ಯ. "ಹಿಂದೀ-ಚೀನೀ ಭಾಯೀ ಭಾಯೀ ನಾವು ಜಗತ್ತಿನ ಶಾಂತಿಗೆ-ಸಂಜಶೀಲದ ಭದ್ರ ಪಂಚಾಂಗದ ಮೂಲ ಮಿತ್ರರಾಗಿ ಕಾರ್ಯ ಮಾಡುವ" ಎಂದು ಹೇಳಿ ನೆಹರೂರವರನ್ನು ಪ್ರೇಮದಿಂದ ಆಲಿಂಗನಮಾಡಿದ್ದ ಚೌ. ಎನ್. ಲಾಯಿಯವರಿಗೆ ಇಂದು ಶಾಂತಿಯ ಬದಲು ಪ್ರೀತಿಯ ಬದಲು ಆಕ್ರಮಣವೇ ಬೇಕಾಯಿತು. ಅತ್ಯಂತ ಪ್ರೀತಿ ಪಾತ್ರ ಮಿತ್ರನು ವೈರಿಯಾದರೆ ನಮ್ಮ ಕಡು ವೈರಿಯಾಗಿ ಬಿಡುತ್ತಾನೆ. ಅಂತೆಯೇ ಮಿತ್ರರಾಗಿದ್ದು ಅವರು ಇಂದು ಆಕ್ರಮಣ ಮಾಡುವಷ್ಟು ಮುಂದೆ ಬಂದರು. ಭಾರತೀಯರು ಶಾಂತಿಸ್ವರೂಪರು ಎಂದು ಮನಗಂಡ ಅವರು ನಮ್ಮನ್ನು ಹೆದರಿಸಿ, ನಮ್ಮ ಪ್ರದೇಶಗಳನ್ನು ಬಲಾತ್ಕಾರದಿಂದ ಹಾಗೂ ಉಪಾಯದಿಂದ ಕಸಿದುಕೊಳ್ಳಬಹುದೆಂದು ನಿಶ್ಚೈಸಿದರು. ಅಥವಾ ತಮ್ಮ ದೇಶದಲ್ಲಿರುವ ಜನರಿಗೆ ಇರಲು ಸ್ಥಳವಿಲ್ಲ ವೆಂದು ಸ್ಥಳ ಸಂಪಾದಿಸಲು ಈ ಚಾಣಕ್ಯ ನೀತಿ ಮಾಡುತ್ತಿರುವರೆನ್ನುವುದೂ ಸಾಧ್ಯ. ಇದಕ್ಕೆ ಈ ಯುದ್ಧ ಬೇಕೇ? ಅಲ್ಲಿಂದಲೂ ಭಾರತವೇ ಯುದ್ಧ ಮಾಡುತ್ತಿದೆ, ಆಕ್ರಮಣ ಮಾಡುತ್ತಿದೆಯೆಂದು ವಸ್ತುಸ್ಥಿತಿಯನ್ನು ಅಡಗಿಸಿ ಆರೋಪಿಸುತ್ತಿದ್ದಾರೆ. ನಮ್ಮ ಶಾಂತಿ ಪ್ರಿಯತೆ, ಸಹನೆ—ಪ್ರೇಮಗಳು ಅವರ ಆಕ್ರಮಣವೆಂಬ ಜ್ವಾಲೆಗೆ ಆಜ್ಯವಾಯಿತು. ಅಸ್ಯಾದಲ್ಲೇಕೆ—ಇಡಿಯ ಜಗತ್ತಿನಲ್ಲಿ ಶಾಂತಿ-ಭದ್ರತೆಗಳನ್ನು, ಐಕ್ಯ-ಕಲ್ಯಾಣಗಳನ್ನು ನೆಲೆಗೊಳಿಸಲು ಶಕ್ತವಾಗಿದ್ದ ಭಾರತ-ಚೀನಗಳೊಳಗೆ ಆಕ್ರಮಣ ಹೋರಾಟ, ಮತ್ತಿನ್ನು ಯುದ್ಧ!

ಹಿಮಾಲಯದ ಈ ಗುದ್ದಾಡುವ ಪ್ರದೇಶಗಳಲ್ಲಿ ಇಂದು ಯುದ್ಧದ ಕಾರ್ಮೋಡಗಳು ದಟ್ಟವಾಗಿ ಹಬ್ಬಿವೆ. ಕಳೆದ ಕೆಲವು ವರ್ಷಗಳಿಂದಲೂ ಚೀನೀಯರು ತಮ್ಮ ಸುಭದ್ರ ಸೇನಾ ರಾಣ್ಯಗಳನ್ನು ನಿರಾತಂಕವಾಗಿ ಸ್ಥಾಪಿಸಿ ಆಕ್ರಮಣಕ್ಕೆ ಪರಿಪೂರ್ಣವೆನಿಸುವ ಸಿದ್ಧತೆ ಮಾಡಿದ್ದಾರೆ. ಇಷ್ಟಕ್ಕಿಂತಲೂ ಹೆಚ್ಚಿನ ರಾಣ್ಯಗಳನ್ನು, ಸಾವಿರಗಟ್ಟಲೆ ಸೈನಿಕರನ್ನು, ಮಿಸಾಯಿಲುಗಳನ್ನೂ ಫಿರಂಗಿಗಳನ್ನೂ ತೋಪುಗಳನ್ನು ಸಂಗ್ರಹಿಸುವ ಚೀನೀಯರ ಈ ತಯಾರಿಯ ಉದ್ದೇಶ ಭಾರತದ ಮೇಲಣ ಆಕ್ರಮಣ ಎಂಬುದನ್ನು ಬೇರೆ ಹೇಳ ಬೇಕೇ? ಪಾಕಿಸ್ತಾನದೊಡನೆ ವೈತ್ರಿ ಬೆಳೆಸುವ ಚೀನದ ದುರುದ್ದೇಶ ನಿಜಕ್ಕೂ ಕ್ಷುಲ್ಲಕ ಹಾಗೂ ನಿಂದಾಪೂರ್ಣವಾದುದು. ನೇಪಾಲ ನಮ್ಮ ಸನಿಹದ ರಾಷ್ಟ್ರ. ನಮ್ಮ ರಕ್ಷಣೆಯಿಲ್ಲದೆ ಅದು ನಿರ್ಭೀತಿಯಿಂದ ಇರಲಾರದು. ಹಾಗಿರುವಾಗ ತಾವೇ ನೇಪಾಲದ ರಕ್ಷಣೆಕಾರಿಂದು ಹೇಳಿ ಅವರ ಮೈತ್ರಿ ಬೆಳೆಸುವುದೇಕೆ? ಭಾರತದ ಶತ್ರುಗಳನ್ನು ತನ್ನ ಮಿತ್ರರೆನ್ನಿಸಿ, ಭಾರತದ ಕಮ್ಯೂನಿಸ್ಟರನ್ನು ತಮ್ಮ ಬಲೆಗೆ ಹಾಕಿಕೊಳ್ಳಲೆತ್ನಿಸುವ ಚೀನದ ಈ ಸ್ವಾರ್ಥಪೂರ್ಣ ದುರುದ್ದೇಶಕ್ಕೆ ಎಂದೂ ಜಯ ಸಿಗಲಾರದು. ಎಂಬುದನ್ನು ಅದು ಮನಗಾಣ ಬೇಕು.

ಉಭಯ ಗಡಿಗಳ ಪರಿಸ್ಥಿತಿ ಈಗ ಭೀಕರವಾಗಿದೆ. ಚೀನಾದಂತೆ ನಮ್ಮ ಸರಕಾರವೂ ಯುದ್ಧ ಮಾಡುತ್ತಿದ್ದರೆ ಪರಿಸ್ಥಿತಿ ಟಿಂತಾ ಜನಕವಾಗುತ್ತಿತ್ತು. ಮೆಕ್ ಮಹೋನ್ ರೇಪಿಯೇ ಧಾರಿತ—ಚೀನಗಳ ಗಡಿಯೆಂದು ಯುಕ್ತ ರಾಷ್ಟ್ರ ಸಂಘದ ಭೂಪರವೇತೋರಿಸುತ್ತಿರುವಾಗ ಅದು ತನ್ನ ಗಡಿಯಲ್ಲವೆಂದು ಚೀನ ವಾದಿಸಿ ಮುಂದೆ ಬಂದು ನಮ್ಮ ಪಲವಾರು ಪ್ರದೇಶಗಳನ್ನು ಕಬಳಿಸಿಕೊಂಡಿದೆ. ನಾವ್ಯಾಚು ನದಿಯ ದಕ್ಷಿಣದ ಪ್ರದೇಶಗಳೆಲ್ಲ ನಮ್ಮ ಕೈಬಿಟ್ಟವೆ. ಬೌದ್ಧ ಭಿಕ್ಷುಗಳ ಕೇಂದ್ರ 'ತವಾಂಗ್' ಪಟ್ಟಣ ಚೀನೀಯರ ವಶವಾಗಿವೆ. ಆದರೆ ಜನರಿಗೆ ಏನೂ ಹಾನಿ ಸಂಭವಿಸಲಿಲ್ಲವೆಂಬುದು ಇದ್ದುದರಲ್ಲೇ ಸಂತೋಷದ ವಿಚಾರ. ಲಡಾಕ್‌ನ ಉತ್ತರ ಭಾಗ ಇಲ್ಲವಾಗಿದೆ. ಚೀನೀಯರ ಗಡಿ ಈಗ ಇಡಿಯ ಉತ್ತರ ಭಾರತವನ್ನೇನುಂಗುವಷ್ಟು ದೊಡ್ಡದಾದಂತೆ ತೋರುತ್ತಿದೆ. ಚೀನೀ ಸೈನಿಕರು ಗಡಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಜಮೆಯಾಗಿ ಆಕ್ರಮಣ ಮಾಡುತ್ತಿದ್ದಾರೆ; ಗುಂಡು ಹಾರಿಸುತ್ತಿದ್ದಾರೆ. ಅವರಿಗೆ ಯುದ್ಧದ ಭಯವಿಲ್ಲ. ಭಯವಿರುವುದು ನಮಗೆ. ಅವರಿಗೆ ಶಾಂತಿ ಬೇಕಿಲ್ಲ. ಅವರಿಗೆ ಜಗತ್ತಿನ ಹಿತಸಂರಕ್ಷಣೆಯು, ಸಂಯುಕ್ತ ರಾಷ್ಟ್ರ ಸಂಘದ ತತ್ವಗಳ ಪಾಲನೆ ಮಾಡುವ ಅಗತ್ಯವಿಲ್ಲ. ಅಗತ್ಯವಿರುವುದು ನಮಗೆ. ಯಾಕೆಂದರೆ ಅಂತಾರಾಷ್ಟ್ರೀಯ ನೀತಿ ನಿಯಮಗಳಿಗೆ ಕಟ್ಟುಬಿದ್ದವರು ನಾವು!

ಆದರೆ, ಭಾರತವೂ ಇನ್ನೆಷ್ಟು ಸುಮ್ಮನಿರುವಂತಿಲ್ಲ. ನಮ್ಮ ನೆಚ್ಚಿನ ಪ್ರಧಾನಿ, ಜಗತ್ತಿನ ಎಲ್ಲರ ಗೌರವನನ್ನೇ ತನ್ನೆಡೆಗೆ ಸೆಳೆದುಕೊಂಡ ಶ್ರೀ ನೆಹರೂರವರು 'ಭಾರತಕ್ಕೆ ವಿಜಯ ಕಟ್ಟಿಟ್ಟ ಗಂಟು' ಎಂದು ಸಾರಿದ್ದಾರೆ. ಆದರೂ ನಾವು ದುಡುಕಬಾರದೆಂದು ಹೇಳಿದ್ದು ಸಂದರ್ಭೋಚಿತವಾಗಿದೆ. ನೆಹರೂರವರು ದೂರದರ್ಶಿತ್ವವುಳ್ಳವರು, ಆಲೋಚಕರು, ಶಾಂತಿಪ್ರಿಯರು. ಭಾರತವೆ ಒಂದಿಂಚು ಸ್ಥಳ ಪರಕೀಯರ ವಶವಾಗುವಂತೆ ಇಲ್ಲ ಎಂದು ಅವರು ಉದ್ಗರಿಸಿದ್ದಾರೆ. ಜಗತ್ತಿಗೇ ಆದರ್ಶ ರಾಷ್ಟ್ರವೆಂದೂ, ಶಾಂತಿ-ಸಹಜೀವನ ತತ್ವಗಳ ರಾಷ್ಟ್ರವೆಂದೂ ಹೇಳಿಸಿಕೊಂಡ ನಮ್ಮ ದೇಶ ಇಂದ ದುರ್ಧರ ಸಂದರ್ಭದಲ್ಲಿ ಎಂದೂ ತತ್ವಪಾಲನೆಯಲ್ಲಿ ವಿಶ್ವಾಬೀಳದು, ಎಡವಿಬೀಳದು ನಮ್ಮ ನೆಹರೂರವರು ಭಾರತದೊಡನೆ ಸಂಪರ್ಕವಿರುವ ಎಲ್ಲಾ ರಾಷ್ಟ್ರಗಳಿಗೆ ಪತ್ರ ಬರೆದು ಅದರಲ್ಲಿ ಭಾರತ ಚೀನಾಗಳ ಗಡಿಯ ಸಂಪೂರ್ಣ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಅದು ಜಗತ್ತಿನ ಶಾಂತಿಗಾಗಿಯೇ ದುಡಿಯುವುದು. ಆದರೆ ಚೀನೀಯರು ಇನ್ನು ನಮ್ಮ ಮನೆಯೊಳಗೆ ನುಗ್ಗಿ ಗುಂಡು ಹಾರಿಸುವುದನ್ನು ಸಹಿಸುವಂತಿಲ್ಲ. ಅವರು ತಾವು ಆಕ್ರಮಿಸಿದ ಸ್ಥಳದಿಂದ ಹಿಂದೆ ಸರಿದರೆ ಮಾತ್ರ ತಾವು ಸಂಧಾನಕ್ಕೆ ಸಿದ್ಧರೆಂದು ಹೇಳಿದ್ದಾರೆ. ಒಂದು ವೇಳೆ ಚೀನಾ ತನ್ನ ಇದೇ ರೀತಿಯ ಆಕ್ರಮಣವನ್ನು ಮುಂದುವರಿಸುತ್ತಿ ರುವುದೇ ಆದರೆ ಸಹಿಲಾರೆವು. ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದು ಸಮಂಜಸವಾಗಿದೆ. ಇದರಿಂದ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಭಾರತದ ಶಾಂತಿಪ್ರಿಯತೆಯನ್ನು ಚೆನ್ನಾಗಿ ಮನಗಾಣದೆ ಇರಲಾರವು.

ಹೇಗಿದ್ದರೂ ನಾವಿಂದು ಸುಮ್ಮನಿರುವಂತಿಲ್ಲ. ನಮ್ಮ ರಾಷ್ಟ್ರದ ಭೌಗೋಳಿಕ ಪರಿಸ್ಥಿತಿಗಳನ್ನು ಕಳೆದ ತಾ. ೨೬ರಂದು ನಮ್ಮ ಘಟನೆಯ ೩೫ನೇ ಕಲಮಿನ ಅನ್ವಯ ಒಂದು ವಿಶೇಷ ಆಜ್ಞೆಯನ್ನು ಜ್ಯಾರಿಗೊಳಿಸಿದ್ದಾರೆ. ಸೈನ್ಯಕ್ಕೆ ಯುದ್ಧ ಸಿದ್ಧತೆ ಮಾಡುವ ಆಜ್ಞೆ ಕೊಟ್ಟಿದ್ದಾರೆ. ಯಾರಿಗೂ ಮತ್ತೊಬ್ಬರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಅಧಿಕಾರವಿಲ್ಲ. ಮೂಲಭೂತ ಹಕ್ಕುಗಳನ್ನು ರಕ್ಷಿಸಲು ನಮ್ಮಿಂದ ಏನೆಲ್ಲಾ ಮಾಡಲು ಸಾಧ್ಯವಿದೆಯೋ ಅದನ್ನು ಕೊನೆಯುಸಿರಿರುವ ತನಕ ಧೀರತನದಿಂದ ಮಾಡಿಯೇ ತೀರುವೆವು ಎಂದು ಹೇಳಿದ್ದಾರೆ. ಕೇಂದ್ರ ಮಂತ್ರಿಮಂಡಳದಲ್ಲಿ ದೇಶದ ಆಪಾಯ ಪರಿಸ್ಥಿತಿಯನ್ನು ಚೆನ್ನಾಗಿ ಮನನಮಾಡಿ ಮಾರ್ಗದರ್ಶನ ಮಾಡಲು ಶ್ರೀ ನೆಹರೂರವರು ಅಧ್ಯಕ್ಷರಾಗಿರುವ, ಶ್ರೀಗಳಾದ, ಮೊರಾರ್ಜಿ ದೇಸಾಯಿ, ಲಾಲ್ ಬಹದ್ದೂರ್ ಶಾಸ್ತ್ರಿ, ಎಸ್. ಕೆ. ಪಾಟೀಲ್ ಮತ್ತು ಟಿ. ಟಿ. ಕೆ.ಯವರು ಸದಸ್ಯರಾಗಿರುವ ಒಂದು ಸಮಿತಿಯನ್ನು ರಚಿಸಿಕೊಳ್ಳಲಾಗಿದೆ.

ಪ್ರಸವಾಧ್ಯಕ್ಷ ಅಶೋಕಮೆಹ್ತಾರವರು ಸಮಗ್ರ ದೇಶದ ಜನತೆ ಪಕ್ಷ, ಪಂಥ, ಜಾತಿ-ನೀತಿ, ಮತ್ತು ಎಲ್ಲಾ ತರದ ಭೇದ ಭಾವನೆಗಳನ್ನು ತೊರೆದು ದೇಶ ರಕ್ಷಣೆಗೆ ತನುಮನ, ಧನಗಳಿಂದ ಸಹಾಯ-ಸೇವೆ ಮಾಡಲು ಬನ್ನಿ ಕಂಕಣಬದ್ಧರಾಗಬೇಕೆಂದು ಹೇಳಿದ್ದಾರೆ. ದೇಶದ ರಕ್ಷಣಾನಿಧಿಗೆ ಸಾಕಷ್ಟು ಹಣ ಸಂಗ್ರಹಿಸಿಕೊಡಬೇಕೆಂಬ ಶ್ರೀ ನೆಹರೂರವರ ಮಾತಿಗೆ ಎಲ್ಲಾ ಕಡೆಗಳಿಂದಲೂ ಪ್ರೋತ್ಸಾಹ ಹಾಗೂ ಗೌರವ ದೊರಕುತ್ತಿದೆ. ಹೆಚ್ಚೇಕೆ ಈ ಸಲದ ದೀಪಾವಳಿಯನ್ನು ಸಂತೋಷದಿಂದ ಆಚರಿಸದೆ ನಾವೀಗ ಯುದ್ಧದ ಸಂಧಿಕಾಲದಲ್ಲಿದ್ದೇವೆ ಎಂಬುದನ್ನು ಮನಗಾಣಬೇಕೆಂದು ನಮ್ಮ ಪ್ರಧಾನಿ ಕರೆಯಿತ್ತಿ

(ಎನೇ ಪುಟ ನೋಡಿರಿ)

ಖೀರಾ
ನೀವು ತಾಳಿಕೆ-ಬಾಳಿಕೆಯನ್ನು-ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಚ್ಚಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ – ಶಾಸ್ತ್ರಿ & ಕೋ, ಹಂಪನಕಟ್ಟೆ ಮಂಗಳೂರು 1
KHIRA

ಬೆಂಗಳೂರಲ್ಲಿ ಬೇಸ್ತು

ಲೇಖಕಿ— ಶ್ರೀಮತಿ ದೇವಕಿ ಎಂ. ಶೆಟ್ಟಿ, ಬೀರೂರು.

ಪಾತ್ರಗಳು

ಬಸವ — ಹಳ್ಳಿಯ ಮಧ್ಯಮ ತರಗತಿಯ ರೈತ.
ತಿಮ್ಮಿ — ಬಸವನ ಹೆಂಡತಿ.
ವರದಾಚಾರಿ — ಬೆಂಗಳೂರಲ್ಲಿ ಇರುವ ಒಬ್ಬ ಸೂಟುಧಾರಿ ವಂಚಕ.
ನರ್ಗಿಸ್ — ವಂಚಕನ ಸೂಳೆ.
ಶಿವಕುಮಾರ— ಜಮೀನ್ದಾರನ ಮಗ.

ಜೋಯಿಸರು, ಜೋಯಿಸರ ಹೆಂಡತಿ, ಹೋಟೆಲ್ ಮೆನೇಜರರು.
ಮಾಣಿ. ಭೀಮಸೇನಾಚಾರ್, 1ನೇ ವ್ಯಕ್ತಿ, 2ನೇ ವ್ಯಕ್ತಿ.

●

ದೃಶ್ಯ ೧

(ಜೋಯಿಸರ ಮನೆ ಹೆಂಡತಿ ರಂಗವಲ್ಲಿ ಹಾಕುತ್ತಿರುತ್ತಾಳೆ. ಬಸವಣ್ಣನ ಪ್ರವೇಶ.)

ಬಸವ— ಸ್ವಾಮಿ ಜೋಯಿಸ್ರೇ, ಓ ಜೋಯಿಸ್ರೇ, ಕ್ಷೀರಸಾಗರ ಭಟ್ರೇ, ಸ್ವಾಮಿ.....

ಜೋಯಿಸರ ಹೆಂಡತಿ— ಯಾರವ್ವಾ ಅದೂ, ಮಜ್ಜಿಗೆ ನೀರು ಕಾಣೋಕೆ ಗತಿಯಿಲ್ಲ. ಕ್ಷೀರಸಾಗರ ಭಟ್ರೇಂತ ಬೇರೆ ಕೂಗ್ತೀಯಾ.

ಬಸವ— ನಾನಮ್ಮ ಬಸವಣ್ಣ. ಕ್ಷೀರ ಸಾಗರ ಭಟ್ರು ಇಲ್ವೇನಮ್ಮ.

ಜೋ. ಹೆಂ— ಯಾವ ಬಸವಣ್ಣ ಲಿಂಗವಂತರ ಬಸವಣ್ಣನೋ, ವೀರಭದ್ರ ದೇವರ ಬಸವಣ್ಣನೋ, ವಾಲಗದಲ್ಲಿ ಬರುವ ಬಾವಣ್ಣನೋ, ಚಿಪ್ಪಿಗರ ಬಸವಣ್ಣನೋ ಆಧವಾ ಆ...ಮೂದಿಗರ ಬಸವಣ್ಣನೋ.

ಬಸವ— ಯಾವ ಬಸವಣ್ಣನೇ ಆಗಿರಲಿ, ಮೊದಲು ಜೋಯಿಸ್ರನ್ನು ಆಸ್ಪು ಕರೀರಿ. (ಸ್ವಗತ) ಒಬ್ಬಬ್ಬ ಈಯನ್ಮ ನಾರಿಯೋ, ಜೆಮ್ಮೂರಿಯೋ, ಗಂಡುಬೀರಿಯೋ ತಿಳಿಯದಾಗಿದೆ. ಮೂರನೇ ಹೆಂಡತೀಂತ ಬಯಾಳ ಮುದ್ದು ಮಾಡ್ತಾರೇಂತ ಕಾಣಿಸುತ್ತೆ ಮುದುಕಪ್ಪ. ಆದಕ್ಕೇನಾಲಗೆ ಹರಿದತ್ತ ನಾಬೇತಾಗಿ ಮಾತಾಡ್ತಾರೆ.

ಜೋ. ಹೆಂ— ಪೂಜೆಯಲ್ಲಿದ್ದಾರೆ, ಯಾರು ಬಂದರೂಂತ ಹೇಳ್ಲೀ..... ....

ಬಸವ— ತಿಮ್ಮಕ್ಕನ ಗಂಡ ಬಸವಣ್ಣಂತ ಹೇಳಿ.

ಜೋ. ಹೆಂ—ಆ ಹಾ ಹಾ ಹಾ, ನೀನು ಹೇಳೋ ರೀತೀ, ಜೆನ್ನಾಗಿದೆ. ತಿಮ್ಮಕ್ಕನ ಗಂಡಾಂತ ಅಂದು ಬಿಟ್ಟರೇ ನಿನಗೆ ಬೇರೆ ಕಸಬೇ ಇಲ್ಲಾಂತ ಕಾಣಿಸುತ್ತದೆ.

ಬಸವ— ನಿಮ್ಮಂತಕ್ಕ, ಊರು, ತಿಂದು, ನೆಮ್ಮದಿಯಾಗಿರುವಷ್ಟು ಜಮೀನಂತೂ ಇದೆ. ಮೊದಲು ಸ್ವಲ್ಪ ಜೋಯಿಸ್ರನ್ನ ಕರೀತೀರೊ, ಆಥವಾ ರಾವಣ ಜೋಯಿಸ್ರಲ್ಲಿಗೆ ಹೋಗಲೋ.

ಜೋ. ಹೆಂ— ಅಬ್ಬಯ್ಯೋ, ರಾವಣ ಜೋಯಿಸ್ರಲ್ಲೂ ಹೋಗಬೇಡ. ಕುಂಭಕರ್ಣರಲ್ಲಿಗೂ ಹೋಗ ಬೇಡ. ಪೂಜೆ ಮತ್ತೆ ಮಾಡ ಬಹುದು. ಕಳಿಸ್ತೇನೆ. ದುಡ್ಡು, ಗಿಡ್ಡೂ ತಂದಿದ್ದೀಯಾ.

ಬಸವ— (ಸಿಟ್ಟಿನಿಂದ ಮೌನ)

ಜೋ. ಹೆಂ— ಇದ್ರೆ ನನ್ನ ಕೈಯಲ್ಲಿ ಕೊಡ್ತೀಯೇನಪ್ಪ.

ಬಸವ— (ಮೌನ. ಜೋಯಿಸರ ಹೆಂಡತಿ ಒಳಗೆ ಹೋಗುತ್ತಾಳೆ ಮುಖ ಗಂಟಿಕ್ಕುತ್ತೆ)

ದೃಶ್ಯ ೨ ಪೂಜೆಯ ಕೋಣೆ

ಜೋಯಿಸರು ಗಂಟೆಯೊಂದಿಗೆ ಜೋರಾಗಿ ಪೂಜೆಯಲ್ಲಿರುತ್ತಾರೆ)

ಜೋಯಿಸರು— (ಹೆಂಡತಿ ಬಂದುದನ್ನು ನೋಡಿ) ಯಾರು ಭಾಗ್ಯ ಲಕ್ಷ್ಮೀ ಅದೂ....

ಜೋ. ಹೆಂ— ಆ ಹಾ ಹಾ ಹಾ, ಭಾಗ್ಯ ಲಕ್ಷ್ಮಿಯಂತೆ, ಭಾಗ್ಯಲಕ್ಷ್ಮಿ!! ನೀವೋ ಕ್ಷೀರ ಸಾಗರ ಭಟ್ರು, ಕ್ಷೀರ ಸಾಗರನೇ ಮತ್ತೆ. ಇನ್ನು ನಮ್ಮ ಭಾಗ್ಯಕ್ಕೆ ಕಮ್ಮಿ ಏನಿದೇಂತ. ಭಾಗ್ಯಲಕ್ಷ್ಮೀಂತ ಕರೆಯೋಕೆ ನಾಚಿಕೆಯೂಡ್ರೂ ಬೇಡ್ವೇಂದ್ರೆ ಧರ್ಮ, ಹೋಗಿ, ಹೋಗೀಂತ ಮೊದಲು ಹೊರಗೆ. ನಿಮ್ಮ ಗುರು ಬಸವಣ್ಣ ಬಂದಿದ್ದಾನೆ,ಅವನಿಗಷ್ಟು ಪುರಾಣ ಹೇಳಿ, ಅವನು ಕೊಡೋ, ಪುಡಿ ಕಾಸು ತನ್ನಿ, ಭಾಗ್ಯ ಲಕ್ಷ್ಮಿಗೆ ಲಕ್ಷ್ಮೀ ಪೂಜೆ ಮಾಡೋದಕ್ಕೆ.

ಜೋ— ಅಬ್ಬಬ್ಬ! ನಿನ್ನ ಕರಿಚಾಟವೇ, ಹೋರುವ ಹೆಂಡತಿಯನ್ನೂ ಸೋರುವ ಮನೆಯನ್ನೂ ಬಿಡಬೇಕೆಂದು ಹಿರಿಯರು ಹೇಳಿದ್ದು ಸುಳ್ಳಲ್ಲ.

ಜೋ. ಹೆಂ.—ಅದಕ್ಕೆ ಮತ್ತೆ ವರ್ಷ ಅರುವತ್ತು ವಾಟಿದರೂ ಇಬ್ಬರು ಮಡದಿಯರಿದ್ದೂ ನನ್ನನ್ನು ಅರಿಸಿ ಮಾಡಿಕೊಂಡಿರೋದು.

ಜೋ.— ಸಾಕಪ್ಪಾ ಸಾಕು ನಿನ್ನ ಪ ಹೆವಾಸ. ನೂಲೋ ಹೆಂಡತೀನ ಬಿಟ್ಟು ಹೇಲೋ ಹೆಂಡತೀನ ಕಟ್ಟಿಕೊಂಡಾ ಮುಂಡೇ ಗಂಡಾ ಎಂಬಂತಾಯಿತು ನೆನ್ನೆ ಪಾಡು. ಈ ಮರುಕವಿಲ್ಲದ ಹೆಣ್ಣಿಗಿಂತ ಮರದ ನೆರಳೇ ವಾಸಿ. ಮಕ್ಕಳಿಲ್ಲದೋರಿಗೆ ಸದ್ಗತಿಯಿಲ್ಲಂತ ಇವಳನ್ನ ಕಟ್ಟಿಕೊಂಡದ್ದಕ್ಕೆ ಮೊದಲಿನೋರೂ ಹೆರಲಿಲ್ಲ. ಇವಳೂ ಹೆರಲಿಲ್ಲ. ಮೊದಲಿನವರಿಬ್ಬರೂ ಸತ್ತದ್ದನ್ನಾದರೂ ಹೆತ್ತರು. ಇವಳೋ ಸತ್ತದ್ದನ್ನೂ ಹೆರದ ಹುಟ್ಟು ಬಂಜೆ.

ಜೋ. ಹೆಂ.— (ಸಿಟ್ಟಿನಿಂದ) ನೋಡೀ, ನೋಡೀಂದ್ರೆ, ಬಾಯಿಗೆ ಬಂದಂತೆಲ್ಲ ಬೊಗಳ್ಬೇಡೀಂದ್ರೆ, ಮೊದಲೇ ವಯಸ್ಸು ಅರವತ್ತು ದಾಟೋಯಿತೂಂದೆ. ಮೂಡಬಾರದ್ದನ್ನು ಮೂಡಿಬಿಟ್ಟ ಮೇಲೆ ಆಗಬಾರದ್ದೇ ಆಗೋದು. ನಿಮ್ಮನ್ನ ಕಟ್ಟಿಕೊಂಡೂ ಕುಂಕುಮ ಬೇಗ ಅಳಿಸಿಕೊಳ್ಳಬೇಕೆಂದು ನನಗೇನೂ ಮನಸ್ಸಿರಲಿಲ್ಲ. ಮದುವೆಗೆ ಮೊದಲು, ಕಾಸಿನ ಸರಮೂಡಿಸಿ ಹಾಕ್ತೇನೇಂತ ಹೇಳಿದ್ದಿರಿ. ಒಂದೆಕ್ಕೆ ಎಡಿಕೆ ತೋಟ ನನ್ನ ಹೆಸರಿಗೆ ಬರೆಸ್ತೇನೇಂತ ನಮ್ಮ ತಂದೆಗೆ ಆಸೆ ಕೋರಿಸಿದ್ದು ಮರೆತೇ ಹೋಯಿತೇನು? ಈ ಅರಗುತುಂಬಿದ ಗುಂಡಿನ ಸರ, ಹೂವಿನಷ್ಟು ಹಗುರವಾಗಿರುವ ತಲೆಕುಚ್ಚು, ಎರಡೆರಡು ಬಂಗಾರದ ಬಳೆ, ಮೂರೇ ಮೂರು ಜರದ ಸೀರೆ ಬಿಟ್ರೆ ನೀವು ಕೊಟ್ಟದ್ದಾದರೂ ಏನೂಂತ ಮೊದಲು ಬೊಗಳೀಂದ್ರೆ.

ಜೋ.— ಅಷ್ಟಾದ್ರೂ ಕೊಟ್ರೂ, ನಿನ್ನಂತಹ ಹೆಮ್ಮಾರಿಯ ಕನ್ಯಾಸೆರೆ ಬಿಡಿಸಿದೆನಲ್ಲ. ಅದಾದ್ರು ನಿನ್ಗೆ ನೆನಸೋದಿಲ್ವಲ್ಲಾ, ಶಿವನೇ,....

ಜೋ. ಹೆಂ.— ಏನೂ....ಏನೂ.... ಈ ಮುದುಕಪ್ಪನ ಮೂತೂಂತ. ಮೇಲ್ಮನೆ ರಾವಣ ಭಟ್ರು, ಕೆಳಮನೆ ಭೀಮ ಭಟ್ರೂ ನನಗಾಗಿ ಕೋರ್ಟಿನ ತನಕ ಜಗಳ ಕಾದದ್ದು ನಿಮಗೆ ನೊತ್ತಿಲ್ವೇನೋ, ವಂಗಳೂರಿನ ಮಂಗೇಶ ಭಟ್ಟರೂ, ಕಾರ್ಕಳದ ಕರಿಯ ಭಟ್ರೂ ನನ್ನ ಕೈಹಿಡಿವ ಭಾಗ್ಯಶಾಲಿಗಳಾಗಬೇಕೆಂದು ಹೆಣಗಿದ್ದು ನಿನಗೆ ಗೊತ್ತಿಲ್ವೇನೋ.

ಜೋ— ಹೆಣಗಿದ್ದು ಅವರಲ್ಲ. ಅವರಿಗೆ ಕೊಡಬೇಕೆಂದು ಹೆಣಗಿ ಹೆಣಗಿ ನಿನ್ನಪ್ಪನ ಹೆಣ ಬಿದ್ದು ಹೋಯ್ತಪ್ಪೆ.

ಜೋ. ಹೆಂ— ನನ್ಮುಪ್ಪನ ಹೆಣ ಬಿದ್ದು ಹೋಗಿಲ್ಲ. ನಿಮ್ಮ ಹೆಣ ಬೀಳಬಾರದೆಂದು ನಮ್ಮವ್ವಾ..... ನಿಮ್ಮಂತ ಅರ್ಧ ಹೆಣಕ್ಕೇ ನನ್ನ ಕಟ್ಟಬಿಟ್ಟರು. ಅಯ್ಯಯ್ಯೋ, ಇಂತಹ ಮುದುಕನ್ನ ಕಟ್ಟಿಕೊಂಡೂ, ಇಂತಾ ಕೆಟ್ಟ ಮಾತು ಕೇಳ್ಬೇಕಾಯ್ತಲ್ಲಾ, ಶಿವನೇ, ನಮ್ಮಪ್ಪ. (ಅಳುವಳು)..... (ಸ್ವಗತ) ಸದ್ಯ ಈ ಮೂರಾಯ್ರು ಕಣ್ಣು ಮುಚ್ಚ್ರೀದ್ರೊಳ್ಗೆ ಆ ಆಸ್ತಿನಾದ್ರೂ ನನ್ನ ಹೆಸ್ರಿಗಷ್ಟು ಬರೆಸ್ಬಿಡಪ್ಪಾ..... (ಜೋರಾಗಿ ಅಳುವಳು)

ಜೋ— ಶಿನ, ಶಿವಾ, ಈ ಹೊಯ್ಮಲಿಯೊಡನೆ ಹೋರಾಡೋದಕ್ಕಿಂತ ಬಿಸಿಲುಗಲ್ಲ ಮೇಲೆ ಹೋರಾಡೋದು ಲೇಸು. ಅಬ್ಬಬ್ಬ, ಇವಳೊಡನೆ, ಬಾಳಬೇಕಾದರೆ ತಂತ್ರಗಾರನೂ ಅಲ್ಲ ಮಹಾ ಕುತಂತ್ರಗಾರನೇ ಆಗಬೇಕು. ಶಿವನೇ ಎಲ್ಲ ನಿನ್ನಿಚ್ಛೆ, ಹ್ಞುಂ..... (ಹೋಗುವರು).

ದೃಶ್ಯ ೩

(ಜೋಯಿಸರ ಮನೆಯ ಜಗುಲಿ. ಬಸವಣ್ಣ ಕುಳಿತಿರುವನು. ಜೋಯಿಸರ ಪ್ರವೇಶ)

ಜೋಯಿಸರು— ಓಹೋ ನಮ್ಮ ಬಸವಣ್ಣ! ಪೂಜೆ ಹೊತ್ತಿನಾಗೇ ಬಂದಿದ್ದೀಯಾ? ಶುಭ ಗಳಿಗೆಯಲ್ಲೇ ಬಂದಿದ್ದೀಯಾ? ಏನು ಕೇಳಬೇಕಾಗಿತ್ತು? ದೂರ ಪ್ರಯಾಣ ಮಾಡುವ ಹಾಗೆ ಕಾಣಿಸುತ್ತದೆ.

ಬಸವ— ಹ್ಞಾಂ....! ಇವೇನು ಸ್ವಾಮಿ ಆಶ್ಚರ್ಯ. ನೀವು ಮಹಾ ಜ್ಞಾನಿಗಳೆಂದು ತಿಳಿದೇ ಇಲ್ಲಿಗೆ ಬಂದೆ ಸ್ವಾಮಿ. ಬೆಂಗಳೂರಿಗೆ ಹೋಗಿ ಕಟ್ಟಾ ನೋಡಿ ಬೇಕಂತ ಆರು ತಿಂಗಳ ಮೊದಲಿಂದಲೇ ತಯಾರಿ ಮಾಡ್ತಾ ಇದ್ದೇನೆ ಸಾಮಿ. ಆದ್ರೂ ಒಂದು ಒಳ್ಳೆ ಗಳಿಗೇನೇ ಕೂಡಿ ಬರೋಲ್ವಲ್ಲಾಂತ ಯೋಚನೆಯಲ್ಲಿದ್ದೇನೆ. ನೋಡಿ ಸ್ವಾಮಿ ಈಗ ಎಲ್ಲ ತಯಾರಾಗೈತೆ. ನೀವು ಒಳ್ಳೆ ಪ್ರಶಸ್ತ ದಿನ ಘಳಿಗೇ ಹೇಳಬಿಟ್ರೆ ನಿಮ್ಮಧಿಯಿಂದಾ ಹೊರಟ್ಟಾ ನೋಡಿಕೊಂಡು ಬರೋಣಾಂತಾ.....

ಜೋ— ಓಹೋ ಹಾಗೋ. ನನಗೆ ಮೊದಲೇ ಹೊಳೀತು ನೀನು ಇಲ್ಲಿ ಬಿಟ್ಟು ರಾವಣ ಜೋಯಿಸ್ರಲ್ಲೀನಾದ್ರೂ ಹೋಗಿದ್ರೇ..... ನಿನ್ನ ಕಥೆ ಬೇಸರಿಸ್ತಿತ್ತು.

ಬಸವ— ಅವರೂ ಜ್ಯೋತಿಷ್ಯಾನ್ನಾಗಿ ಹೇಳ್ತಾರೆಂತ ಕೇಳಿದ್ದೆ.

ಜೋ— ಹೇಳ್ತಾನೆ ಅವನ ಸಿಂಡ. ಅವನಪ್ಪ ನಮ್ಮಪ್ಪನ ಮನೆಯಲ್ಲಿ ಆಳಾಗೇ ಮಾಡ್ತಿದ್ದ. ನಮ್ಮಪ್ಪ ಜ್ಯೋತಿಷ್ಯ ನೂರಾರ್ಮಂಡ್ರು ನಾನೊಂಡಬ್ಬಲ್ ಜ್ಯೋತಿಷ್ಯ ಮೂರಾರ್ಮಂಡ್ರೂ.

ಬಸವ— ನಿಮ್ಮ ಮಕ್ಕಳು ಇನ್ನು ಏನೇನು ಗತ್ತಾರೋ ಸ್ವಾಮಿ.

ಜೋ— ಕಾರಣ ಪುರುಷರೀಗೆ, ಮಹಾ ವಿದ್ವಾಂಸರೀಗೆ, ಮಹಾ ಜ್ಞಾನಿಗಳಿಗೆ ಮಕ್ಕಳು ಹುಟ್ಟಿದ್ದನ್ನು ಎಲ್ಲಾದ್ರೂ ಕೇಳಿದ್ದೀಯಾ ಬೆಪ್ಪು ತಕಡಿ. ಅವೆಲ್ಲ ಪಾಪ ಮಾಡೋದಕ್ಕೆ ದಾರೀಂತ ಹಿರಿಯರು ಹೇಳಿದ್ದಾರೆ. ಧರ್ಮಾತ್ಮರಿಗೆ ಪುಣ್ಯ ಜೀವಿಗಳಿಗೆ, ಮೋಕ್ಷಕ್ಕೆ ಹೋಗೋವಾಗ ಯಾವ ಬಂಧನಾನೂ ಇರಬಾರದು.

ಬಸವ— ನುತ್ತಿ ಒಂದಲ್ಲ, ಎರಡಲ್ಲ ಮೂರು ಜನ ಧರ್ಮಪತ್ನಿಯರಿದ್ದಾರೆ ಸ್ವಾಮಿ, ಅದೂ ಬಂಧನಾ ಅಲ್ವೆ.

ಜೋ— ಆದೆಲ್ಲ ನಿನಗ್ಯಾಕೋ

(ಇನ್ನೇ ಸುಟಿ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಈ ಕ್ಲಾ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಿಷ್ಟ ಪ್ರಕಾರದ ಸೌಜನ್ಯದ ಸೇವೆ.

ದಿ. ಪೂಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ಧಾರಾವಾಹಿ ೭

ರಾಜಾಜಿಯವರ ಕಲಾಸಿದ್ಧಿ

ಪ ಶ್ಚಾ ತ್ತಾ ಪ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ಶ್ರೀ ರಾಜಾಜಿಯವರು, ವಿಶ್ವ ವಿಖ್ಯಾತ ಭಾರತೀಯ ಗ್ರಂಥಗಳಾದ, ''ರಾಮಾಯಣ'' ''ಮಹಾಭಾರತ''ಗಳನ್ನು ಮಥಿಸಿ, ಅವುಗಳ ಸಾರ ಸರ್ವಸ್ವವನ್ನು ತಮಿಳು-ಇಂಗ್ಲೀಷು ಭಾಷಾ ಸಾಹಿತ್ಯಕ್ಕೆ ನೀಡಿರುವರು. ವೇದ, ಉಪನಿಷತ್ತು, ಗೀತೆ, ಇವುಗಳ ನೇರಲೂ ಅವರು ಗ್ರಂಥಗಳನ್ನು ಬರೆದಿರುವರು. ಶಿಶುವಾಲನೆಯ ವಿಚಾರದಲ್ಲಿ ಕೂಡ ಅವರು ಗ್ರಂಥರಚನೆ ಮಾಡಿರುವರು. ಭಾರತದ ಸ್ವಯಂ ಗೌರ್ನರ್ ಜನರಲ್ಲರಾಗಿ ಶೋಭಿಸಿರುವ ಮೊನ್ನೆ ರಾಜಾಜಿಯವರು ಸಾಹಿತ್ಯ ಸಾಮ್ರಾಟರೂ ಆಗಿರುವರು.

ರಾಮಾಯಣದ ''ಸೀತಾಪಹರಣ''ದ ಒಂದು ಘಟನೆಯನ್ನೆತ್ತಿಕೊಂಡು, ಶ್ರೀ ರಾಜಾಜಿಯವರು, ''ಪಶ್ಚಾತ್ತಾಪ''ವೆಂಬ ತಮ್ಮ ಒಂದು ಕಥೆಯ ಮೂಲಕ ಜೋಡಿಸಿರುವ ದೃಶ್ಯ, ಜೋಡಣೆ, ಹಾಗೂ ಸಂಭಾಷಣೆ, ಶ್ರೀಯುತರ ಕಥಾಕಂತ್ರಿದ-ಹಿರಿಮೆಗೆ, ಕಥನ ಕಲಾ ಚಾತುರ್ಯದ, ಸಿದ್ಧಿಗೆ, ಒಂದು ಉತ್ತಮ ನಿದರ್ಶನದಂತಿದೆ. ಆ ಕಥಾ ದೃಶ್ಯ ನೋಡಿರಿ—'ರಾವಣನಿಂದ ಅಪಹರಿಸಲ್ಪಟ್ಟ ಸೀತಾ ದೇವಿಯು ಅಶೋಕ ವನದಲ್ಲಿ ಕ್ರೂರರಾದ ರಾಕ್ಷಸಿಯರ ನಡುವೆ, ಅಪಾರ ದುಃಖವನ್ನು ಸಹಿಸುತ್ತ ಅನ್ನಾಹಾರ ನಿದ್ರೆಗಳನ್ನು ತೊರೆದು ಎಷ್ಟೋ ದಿನಗಳನ್ನು ಕಳೆದಳು ಆ ಸಮಯದಲ್ಲಿ ಶ್ರೀ ರಾಮ ಧ್ಯಾನವೂ ಮಾಡುತ್ತಿದ್ದ ಸೀತೆಗೆ ಲಕ್ಷ್ಮಣನು ಅಕಯ ಎದುರಿಗೆ ಬಂದು ನಿಂತು ದುಃಖಿತನಾಗಿ—ಅತ್ತಿಗೆ!...ಅಂದು ನೀವು ನನಗೆ ಎಂತಹ ಕಟು ನುಡಿಗಳನ್ನಾಡಿದಿರಿ!' ಎಂದು ಹೇಳುತ್ತಿರುವಂತೆ ಭಾಸವಾಗುತ್ತಿರಲು, ಆ ಹಿಂದಿನ ಘಟನೆಯ ನೆನಪಿಸಿಕೊಂಡಾಗಿ ಆಕೆ ಅಸಹನೀಯ ಯಾತನೆಯಿಂದ ಚಡಪಡಿಸುತ್ತಿದ್ದಳು' ಅದೇ ವೇಳೆಯಲ್ಲಿ ಆಕೆ ಮನಸ್ಸಿನಲ್ಲೇ ಯೋಚಿಸಿದಳು—

'ಅಯ್ಯೋ! ನಿರ್ಮಲ ಹೃದಯರಾದ ಆ ಮಹನ್ನು ನಾನು ನುಡಿಯಬಾರದ ಮಾತುಗಳಿಂದ ನುಡಿದು ಬಹಳವಾಗಿ ನೋಯಿಸಿದೆ! ನನ್ನ ನುಡಿಗಳ ಮೂಲಕ ಉಂಟಾದ ಆ ಪಾಪವು ರಾವಣನು ನನ್ನನ್ನು ಇಲ್ಲಿಗೆ ಅಪಹರಿಸಿಕೊಂಡು ಬಂದ ಪಾಪ ಕೃತ್ಯಕ್ಕಿಂತಲೂ ಮಿಗಿಲಾದುದಾಗಿದೆ! ಛಾಯ್! ನಾನು ನನ್ನ ವೈದುನರಿಗೆ ಹಾಗೆ ಹೇಳಬಾರದಾಗಿತ್ತು! ಆದರೆ ಇನ್ನೇನು ಮಾಡಲಿ?' ಎಂದು ಮನದಲ್ಲೇ ಯೋಚಿಸಿಕೊಂಡು ಪಶ್ಚಾತ್ತಾಪಪಡುತ್ತಿದ್ದ ಸೀತಾ ದೇವಿಗೆ, ಆದೇ ಸ್ಥಿತಿಯಲ್ಲೇ ಸ್ವಲ್ಪ ನಿದ್ರೆಯ ಜೊಂಪು ಹತ್ತಿದಂತಾಯಿತು.

ಕಣ್ಣು ಮುಚ್ಚುತ್ತಲೇ ಸೀತೆ ಒಂದು ಸ್ವಪ್ನವನ್ನು ಕಂಡಳು! ಸ್ವಪ್ನದಲ್ಲಿ ಕನ್ನೆದುರಿಗೇ ಬಂದು ನಿಂತಿದ್ದ ಮೈದುನ ನನ್ನು ಕಂಡ ಸೀತೆ ಆನಂದ ಬಾಷ್ಪಗಳನ್ನುದುರಿಸುತ್ತ ಜೇಳಿದಳು—

'ಹಾ! ನೀವು ಬಂದೇ ಬಿಟ್ಟಿರಾ? ನೆನ್ನೆ ಈ ವರೆಗಿನ ದುಃಖ ಈಗ ನನಗೊಂದು ಕನಸಿನಂತಿದೆ!' ಆಗ ಲಕ್ಷ್ಮಣನು—

'ಹೌದು, ನಾನು ಬಂದಿದ್ದೇನೆ—ಅತ್ತಿಗೆ! ಇನ್ನು ನೀವು ದುಃಖಿಸ ಬಾರದು. ನಿಮ್ಮನ್ನು ಏಕಾಂಗಿಯಾಗಿ ಬಿಟ್ಟು ಹೋದ ಅಂದಿನ ನನ್ನ ತಪ್ಪನ್ನು ಕ್ಷಮಿಸಲಾರಿರಾ? ಅತ್ತಿಗೆ....?' ಎಂದು ಕೇಳಿದನು.... ಮನಃ ಮಂದಹಾಸವನ್ನು ಬೀರುತ್ತ ಲಕ್ಷ್ಮಣನು—'ಓಹ್! ಅಂದು ನೀವು ಎಂತಹ ಧಲ ಹಿಡಿದಿರಿ! ನಿಮ್ಮ ಆ ಧಲದ ಪರಿಣಾಮವಾಗಿ ಇಂದು ಈ ದುಃಖವನ್ನು ಅನುಭವಿಸ ಬೇಕಾಯಿತು! ಎಂದನು.

ಆಗ ಸೀತೆ – 'ನಿಜವಾಗಿಯೂ ಆಗ ನನಗೇನಾಗಿತ್ತೋ? ನಾನಂಯೆ! ಆದರೆ ನೀವು ನನ್ನೊಬ್ಬಳನ್ನೇ ಬಿಟ್ಟು ಹೋದುದು ಸರಿಯೇ ನಾನು ಎಂತಹ ಕಟುನುಡಿಗಳನ್ನಾಡಿದ್ದರೂ, ನೀವು ನಿಮ್ಮ ಅಣ್ಣನ ಮುಂದೆ ಮಾಡಿದ ಪ್ರತಿಜ್ಞೆಯನ್ನು ಮರೆತು, ಹಾಗೆ ವರ್ತಿಸಿದುದು ಯೋಗ್ಯವೇ? ಸಿಟ್ಟಿನ ಭರದಲ್ಲಿ ನಾನೇನೋ ಹೇಳಬಾರದ ಮಾತುಗಳನ್ನು ಹೇಳಿಬಿಟ್ಟೆ! ಆದರೆ ನನ್ನ ಮಾತುಗಳಿಗಾಗಿ ನೀವು ನಿಮ್ಮ ಪ್ರತಿಜ್ಞೆಯನ್ನು ಮುರಿದು ಬಾರದಾಗಿತ್ತು!' ಎಂದಳು; ದುಃಖಿಸಿನೊದ ಸೀತೆ.

ಅಸ್ಪರಲ್ಲಿ ಸಮಯುಕ್ತೆ ಸರಿಯೂಗಿ ನಾವರದರು ಅಲ್ಲಿಗೆ ಹೇಗೆ ಬಂದು ತಲುಪಿದರೋ ಏನೋ! ಬಂದವರೇ ಹೇಳಿದರು—'ಯಾವ ಪ್ರತಿಜ್ಞೆಯದು? ಪ್ರತಿಜ್ಞೆಯ ವಿಚಾರ ನನಗೇನೂ ತಿಳಿದಿಲ್ಲವಲ್ಲ?'

ಸಂದರ್ಭಕ್ಕೆ ಸರಿಯೂಗಿ ಕಲಹವ ಬೀಜ ಬಿತ್ತಲು ನಾರದರು ಆಗಮಿಸುವುದು ಪದ್ಧತಿ ತಾನೇ. ಸ್ವಪ್ನದಲ್ಲಿ ಹೀಗೆ ಅನಿರೀಕ್ಷಿತ ಆಗಮನವಾದಂತೆ ತೋರುವುದೂ ಸಹಜವೇ ಆಗಿದೆ. ಸೀತೆಯ ಧ್ವನಿ ಈಗ ಸ್ವಲ್ಪತಾರಕಕ್ಕೇರಿತು! ಆಕೆ ಏನು? ಏನೆಂದಿರಿ? ಲಕ್ಷ್ಮಣನು ಪ್ರತಿಜ್ಞೆ ಮಾಡಲಿಲ್ಲವೇ? ಆಂತೆಯೇ ಏನೇ ಆದರೂ ನೀವು ನಿಮ್ಮ ಪ್ರತಿಜ್ಞೆಯಂತೆ ನಡೆಯಬೇಕಾದುದು ನಿಮ್ಮ ಕರ್ತವ್ಯವಾಗಿತ್ತ!" ಎಂದು ಹೇಳಿದ ಸೀತೆಯ ನುಡಿಗಳನ್ನು ಕೇಳಿದು ಲಕ್ಷ್ಮಣನು ನೋಂದುಕೊಂಡು—'ಅತ್ತಿಗೆ! ನೀವು ಅಂದು ನುಡಿದ ಸಹಸಲಸಾಧ್ಯವಾದ ನುಡಿಗಳು ಮುನಃ ನೆನಪಾಗುವಂತೆ ದಯವಿಟ್ಟು ಮಾತನಾಡಬೇಡಿರಿ!" ಎಂದು ಹೇಳಿದಾಗ ಸೀತಾದೇವಿಯು ಜಗತ್ತೇ ನಿಮ್ಮನ್ನು ಬೇಕಾದರೆ ಜರೆದಾಡುತ್ತಿದ್ದರೂ, ನೀವು ಅಪಕೀರ್ತಿಗೆ ಗುರಿಯಾಗುತ್ತಿದ್ದರೂ, ಸಹ ಪರ್ಣ ಕುಟೀರದಲ್ಲಿ ನೀವು ನನ್ನನ್ನು ಒಬ್ಬಳನ್ನೇ ಬಿಟ್ಟು—ಹೊರಟು ಹೋದುದು, ನ್ಯಾಯವಲ್ಲ ತವಾಗಲಾರದು!' ಎಂದು ನುಡಿಯಲು ಲಕ್ಷ್ಮಣನು ತಲೆ ತಗ್ಗಿಸಬೇಕಾಯಿತ.!

'ಸೀತೆಯ ಕಟು ನುಡಿಗಳನ್ನು ಲೆಕ್ಕಿಸದೆ, ನಾನು ಪರ್ಣ ಕುಟೀರದಲ್ಲೇ ಇರುತ್ತಿದ್ದರೆ, ರಾವಣನ ತಂತ್ರ ನಡೆಯುತ್ತಿರಲಿಲ್ಲ! ಈ ದುಃಖವೂ ಪ್ರಾಪ್ತವಾಗುತ್ತಿರಲಿಲ್ಲ!' ಎಂದು ಲಕ್ಷ್ಮಣನು ತನ್ನಲ್ಲೇ ಹೇಳಿಕೊಂಡು ಮರುಗುತ್ತಾನೆ! ಆ ಬಳಿಕ ಇದೇ ಮಾತುಗಳನ್ನು ಸೀತೆಯೊಡನೆ ಹೇಳಿದಾಗ ಸೀತೆಗೆ ಹರ್ಷವಾಗುತ್ತದೆ! ಹರ್ಷಗೊಂಡ ಸೀತಾದೇವಿಗೆ ಲಕ್ಷ್ಮಣನು

(ಐಂಸೇ ಪುಟ ನೋಡಿರಿ)

ಪುತ್ತೂರು ಡಿ. ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ವ್ಯಾಜ್ಯ ನಂಬ್ರ 256/1962.

ಸೊರಕೆ ಕೃಷ್ಣಪ್ಪ— ವಾದಿ.

ಬೆಂಕಮ್ಮ ಮತ್ತು ಇತರರು

—ಪ್ರತಿವಾದಿರು

1ನೇ ಪ್ರತಿವಾದಿ ಬೆಂಕಮ್ಮ, ಕೊರಸೊಳು ಕಂಗಿಸಿನ ಮಗಳು, ಬಂಟವಾಳ ತಾಲೂಕು, ಉಳಿ ಗ್ರಾಮ.

—ಇವಳಿಗೆ ತಿಳಿಸುವುದೇನೆಂದರೆ

ಕೈಯಚೇಟಿನಲ್ಲಿ ಆಮಾನತ್ತಿಟ್ಟ ಹಣದ ಪಸಾಲೆಗೆ ವಾದಿಯು ದಾಖಲುಮಾಡಿದ ಈ ದಾವೆಯು ತಾ. 7-11-62ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ನಿರ್ದಿಷ್ಟ ಅವಧಿಯೊಳಗೆ ಹಾಜರಾಗಿ ತಪ್ಪದೆ ನಿಮ್ಮ ಸೈನು ಪಾಜ್ಯಂಟ್ಲಿ ತೀರ್ಮಾನಿಸಲಾಗುವುದು.

ಬಿ. ಚಿದಾನಂದ ರಾವ್,
ವಾದಿಯ ವಕೀಲ್.

ಪುತ್ತೂರು, 12—10—62.

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮೊಂಗಳೂರು-3

ಪರಿಷ್ಕರಿಸಿದ ಮತ್ತು ಪೆಚ್ಚಿಸಿದ ತೇವಣಾತಿ ಬಡ್ಡಿ ದರಗಳು:

ಕಾಯಂ ತೇವಣಾತಿಗಳು:		ರೂ. ನ.ಪೈ.ಸೆ
ಒಂದೆರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ತೇವಣಾತಿಗಳು	,, ,,	3-25

ನಿಮ್ಮ

ದಿನನಿತ್ಯದ ಉಳಿತಾಯವನ್ನು ಮಾಸಿಕ ಉಳಿತಾಯವನ್ನು
ಹಸಿ ಡಿಪೋಸಿಟುಗಳಲ್ಲಿ ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಪುತ್ತೂರು ಡಿ. ಮುನ್ಸೀಫ್ ಕೋರ್ಟಿನಲ್ಲಿ

S. C. 407/62

ನಾರಾಯಣ ಕೆದಿಲಾಯ—ವಾದಿ

ಮತ್ತು

ಗಿಳ್ಕಿಂಜ ರಾಮ ಭಟ್ಟ—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ವಾದಿಯು ನಿಮ್ಮ ಮೇಲೆ ದಾಕ್ಲು ಮಾಡಿದ ಮೇಲಿನ ವ್ಯಾಜ್ಯವು ನಿಮ್ಮ ಹಾಜ್ರಾತಿ ಬಗ್ಗೆ ತಾರೀಕು 7-11-62ಕ್ಕೆ ಇನೆ. ಆವರಲ್ಲಿ ನೀವು ಉದಯರಿಸುವುದಿದ್ರೆ ಸದ್ರಿ ವ್ಯಾಜದೆಗೆ 11 ಗಂಟೆಗೆ ಸರಿಯೂಗಿ ಕೋರ್ಟು ಹುಜೂರು ಪಾಜ್ರು ಆಗಿ ಉದಯರಿಸಿಕೊಳ್ಳತಕ್ಕದ್ದು. ಇಲ್ಲವಾದ್ದಲ್ಲಿ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು. ತಿಳಿದಿರಲಿ.

Badekila Ishwara Bhat,
Advocate for Plaintiff.

ಪುತ್ತೂರು, ತಾರೀಕು 17-10-62.

ಹದಗೆಡುತ್ತಿರುವ

ಭಾರತದ ಆರ್ಥವ್ಯವಸ್ಥೆ

ಶ್ರೀ ಬಿ. ನಾರಾಯಣ ಜೋಗಿತ್ತಾಯ.

ನಮ್ಮ ದೇಶದ ಆರ್ಥಿಕ ಧೋರಣೆಯು ಕ್ಷೇಮಕರವಲ್ಲವೆಂದು ಎಲ್ಲಾ ವಿಮರ್ಶಕಾರರೂ ರಾಜಕೀಯ ತಜ್ಞರೂ ಅಭಿಪ್ರಾಯ ಪಟ್ಟಿದ್ದು ಸರಿಯೆಂದು ನಮ್ಮ ಹೇಳಿಕೆ. ಪಾಶ್ಚಾತ್ಯರು ಹೋದರೂ ಹೆಜ್ಜೆ ಹೆಜ್ಜೆಗೂ ಅವರನ್ನೇ ಅನುಸರಿಸುತ್ತಿರುವ ನಮ್ಮ ಸರಕಾರ ಇನ್ನೂ ಸರಿಯಾಗಿ ಆರ್ಥ ನೀತಿಯ ಬಗ್ಗೆ ವಿಚಾರ–ಸಂಶೋಧನೆ ಮಾಡಿದುದಿಲ್ಲ. ಒಂದು ವೇಳೆ ಮಾಡಿದುದಿನ್ನೂ ಆದರಲ್ಲಿ ತುಂಬಾ ತಪ್ಪು ಮುಖ ಇವೆ ತುಂಬಾ ಹಣ ವೆಚ್ಚ ಮಾಡಿ ಕೈಗಾರಿಕೆಗಳನ್ನು ಬೆಳೆಸಿ ನಾವು ಪಾಶ್ಚಾತ್ಯ ರಾಷ್ಟ್ರಗಳಂತೆ ಕೈಗಾರಿಕೆಯ ರಾಷ್ಟ್ರಗಳಾಗಬೇಕು; ಎನ್ನುವುದೇ ನಮ್ಮ ಪ್ರಮುಖ ಧೋರಣೆ. ಈ ಕೈಗಾರಿಕೆಗಳಿಗಾಗಿ ಹೊರಗಿನಿಂದ ನಮ್ಮ ಮಿತ್ರರಾಷ್ಟ್ರಗಳಿಂದ ಸಾಕಷ್ಟು ಸಾಲ ಸಹಾಯ ತಂದು ಹಾಕಿದರಾಯಿತು ಎಂಬ ಧೈರ್ಯ ನಮ್ಮ ಸರಕಾರದ್ದು. ಹಣ ಎಷ್ಟೇ ಖರ್ಚಾಗಲಿ ನಮ್ಮ ಕೈಗಾರಿಕೆಗಳಿಂದ ಮುಂದೆ ಹೊಸ್ಸಕೊಪ್ಪರಿಗೆಯೇ ಸಿಗುವುದೆಂದು ನಮ್ಮ ಸರಕಾರ ಒತ್ತಿ ಹೇಳುತ್ತಿದೆ.

ಆದರೆ ಪಶ್ಚಿಮ ರಾಷ್ಟ್ರಗಳ ಈ ಕೈಗಾರಿಕೆಯ ಉನ್ನತಿಯ ಗುಟ್ಟೇನು? ಕ್ರಮವೇನು? ಎಂದರಿಯದ ನಮ್ಮ ಸರಕಾರ ತಪ್ಪು ಹೆಜ್ಜೆ ಇಡುತ್ತಿದೆ. ಅವುಗಳೆಲ್ಲ ಕ್ರಮ ಕ್ರಮವಾಗಿ ಬೆಳೆದುವು. ಆ ರಾಷ್ಟ್ರಗಳ ಅನುಭವವನ್ನು ಬಳಸಿಕೊಂಡು ನಾವು ಅವು ಬೆಳೆದುದಕ್ಕಿಂತ ಬೇಗನೆ ಬೆಳೆಯಬಹುದು. ಆದರೆ ಅಲ್ಲಿ ನೂರು ವರ್ಷ ತಗಲಿದ ಕೆಲಸಕ್ಕೆ ನಮ್ಮಲ್ಲಿ ೧೦ ವರ್ಷಗಳು ಸಾಕು ಎಂಬುದು ಬರಿಯ ಬಯಲ ಭ್ರಾಂತಿ. ತೆಂಗಿನ ಮರ ನಟ್ಟ ೬ ವರ್ಷಗಳಲ್ಲಿ ಫಲ ಕೊಡುತ್ತದೆ; ಕಸಿಯಾದರೆ ೪ ವರ್ಷಗಳಲ್ಲಿ ಫಲಕೊಟ್ಟು ನಾವು ಲಾಭ ಪಡೆದೆವು ಎಂಬುದು ಸತ್ಯವಾಗಬಹುದು. ಆದರೆ ಕೈಗಾರಿಕೆಯೆಂದರೆ ಬರಿಯ ಹಣ ವಲ್ಲ. ಸಾಮಗ್ರಿ, ಜನ, ಯಂತ್ರ, ಮೇಲ್ವಿಚಾರಕರು, ಇಂಜನಿಯರರು, ಎಲ್ಲಾ ಇರಬೇಕು. ನಾವು ಸಾಮಗ್ರಿಗಳನ್ನು ಒದಗಿಸಿದರೂ ಆದಕ್ಕೆ ಒಂದು ಮಿತಿಬೇಡವೇ? ಯಂತ್ರಗಳನ್ನು ಹೊರಗಿಂದ ತರಬೇಕು. ಯಂತ್ರಗಳನ್ನು ಚಲಿಸುವ ಕ್ರಮ ಕಲಿಯಲು ಪರದೇಶಗಳಿಗೆ ಹೋಗಿ ಬರಬೇಕು ನಮ್ಮವರೇ ಒದಗುವ ತನಕ ಹೊರಗಿನವರನ್ನು ಇರಿಸಿಕೊಳ್ಳೋಣ ಎಂದರೆ ಆವಂಗೆ ಒಂದಕ್ಕೆ ನೂರರಷ್ಟು ಸಂಬಳ ಕೊಡಬೇಕು. ಒಂದು ವೇಳೆ ಅವರು ಬಂದರೂ, ಅವರ ನಿರೀಕ್ಷೆ, ರಾಜಭೋಗಕ್ಕೇ ಮಿಸಲು. ಹೀಗಿರುವಾಗ ನಮ್ಮ ಕೈಗಾರಿಕೆಗಳಿಂದ ನಿರೀಕ್ಷಿಸಿದ ಫಲವಾದರೂ ಸಿಗುವುದು ಹೇಗೆ?

ಸಾಮಾನ್ಯವಾಗಿ ಧನ ಸಹಾಯ ಒದಗಿಸುವ ದೇಶ ಯಂತ್ರಗಳನ್ನು ತನ್ನಿಂದ ಕೊಂಡುಕೊಳ್ಳಲಿ ಎಂದು ಆಪೇಕ್ಷಿಸುತ್ತದೆ. ನಮ್ಮ ಉತ್ತರ ಬಹುಶಃ ಆಗಲಿ ಎಂದು ಇಂಥ ಸಂಗತಿಯಲ್ಲಿ ಒಂದು ರಾಷ್ಟ್ರ ಹಾಕುವ ಬೆಲೆಯು ಇನ್ನೊಂದು ರಾಷ್ಟ್ರವು ಹಾಕುವ ಬೆಲೆಗಿಂತ ಬೇರೆಯಾಗಿರಲಾರದು. ಹೇಗೂ ಇದೂ ಹೆಚ್ಚಿನ ಬೆಲೆಯೇ. ನಾವು ಯಂತ್ರಗಳನ್ನು ಮಾಡಿಕೊಳ್ಳುವುದು ಎಂದಿದ್ದರೆ ಕೆಲಸ ಎರಡು ವರ್ಷ ಸಾವಕಾಶ ಆಗಬಹುದು. ಆದರೆ ಬೆಲೆ ನಾಲ್ಕರಲ್ಲಿ ಒಂದು ಭಾಗ ಮಾತ್ರ ನಮ್ಮವ್ಯವಹಾರದಲ್ಲಿ ಈ ರೀತಿಯ ಮಿತತಪ್ಪಿಹೋಗಿದೆ. ಹಾಗೆಯೇ ವೆಚ್ಚದಲ್ಲಿ ಹಿಡಿತ ಸಾಲದು. ಇದರಲ್ಲಿ ಸ್ವಲ್ಪ ಭಾಗ ಅನುಭವ ಶಾಲೆಯೆಂಬುದರ ಫಲ, ಇನ್ನು ಕೆಲವು ಅಧಿಕಾರದಲ್ಲಿರುವವರು ಆಯೋಗ್ಯರಾದುದರ ಫಲ ಇನ್ನು ಕೆಲವು ಯಂತ್ರ, ಯಂತ್ರಕ್ಕೆ ಸಹಜವಾದ ರೀತಿಯಲ್ಲಿ ತೊಂದರೆ ಕೊಡುವುದರ ಫಲ. ಇದರ ಮೇಲೆ ಒಂದು ಕೈಗಾರಿಕೆಯ ಸ್ಥಾಪನೆಗೆ ಮೊದಲ ನಿರೀಕ್ಷೆಯ ವೆಚ್ಚ ಒಂದು ಮುಟ್ಟಿದ್ದು, ಆದರೆ, ಕೊನೆಯ ವಾಸ್ತವದ ವೆಚ್ಚ ಇದರ ಇಮ್ಮಡಿ, ಮುಮ್ಮಡಿ ಆಗುವ ಸಂಭವ ಬೇರೆ. ಹೀಗಾಗಿ ನಮ್ಮ ರಾಷ್ಟ್ರ ನಿರೀಕ್ಷಿಸಿದ ಬಹು ಪಾಲು ಫಲವನ್ನು ಕೊಡುತ್ತಿಲ್ಲ. ಫಲ ಇಷ್ಟಾದರೆ ಸಾವಿರದ ಮೇಲೆ ಇಷ್ಟು ಬಡ್ಡಿಯನ್ನು ಕೊಡಬಹುದು ಎಂದು ಮೊದಲಲ್ಲಿ ಮಾಡಿದ ಲೆಕ್ಕ ತಲೆಕೆಳಗೆ ಆಗುತ್ತದೆ.

ಈ ಮಧ್ಯೆ ಏನಾದರೂ ವ್ಯತ್ಯಾಸವಾಗಿ ಕೆಲಸ ನಿಂತುಹೋದರೆ ಆದನ್ನು ಸರಿಪಡಿಸಬೇಕಾದರೆ ಅದಕ್ಕೆ ಮತ್ತಷ್ಟು ಸಾಲ. ಈ ರೀತಿ ಈ ವ್ಯವಹಾರ ಒಂದು ಕೇಡಿನ ಸುಳಿಯಲ್ಲಿ ಸಿಕ್ಕಿಕೊಂಡಿದೆ.

ಸರಕಾರ ಹಾಕಿಕೊಂಡ ಯೋಜನೆಗಳಿಗೆ ಸರಿಯಾಗಿ ಹೊರಗಿನ ಸಹಾಯ ಸಾಲ ಒದಗಲಿಲ್ಲ ಎಂದರೆ ಸರಕಾರ ಮೂಡುವದೇನು? ಒಪಗು ಹಣದ ಮಿತಿಗೆ ಸರಿಯಾಗಿ ಕೆಲಸವನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳಬಹುದು. ಇದು ವಿವೇಕದ ದಾರಿ. ವ್ಯವಹಾರ ಬಲ್ಲ ಎಲ್ಲಾ ಸರಕಾರ ಈ ರೀತಿ ಮಾಡೀತು. ಆದರೆ ನಮ್ಮ ಸರಕಾರ ಇನ್ನೂ ಹೊಸದು. ಅಂತೆಯೇ ನಮ್ಮ ಮಂತ್ರಿಗಳೂ ಹೊಸಬರು. ಇದರಲ್ಲಿರುವ ಜನ ದಕ್ಷರಿರಬಹುದು. ಆದರೆ ಅನುಭವವುಳ್ಳವರಲ್ಲ. ಹೊಸದಾಗಿ ಅಸ್ತಿಯ ಯಜಮಾನನಾಗಿ ಬಂದ ತರುಣನಂತಿದೆ ಈ ಅಧಿಕಾರಿಗಳ ವ್ಯವಹಾರ. ಕೈಯಲ್ಲಿ ಕಾಸು ಓಡಾಡುವುದೇ ಇವರಿಗೆ ಒಂದು ಸಂತೋಷ. ತಮ್ಮ ಮೂತಿ ನೆಡೆಯುವುದೇ ಆವರಿಗೊಂದು ಹೆಮ್ಮೆ. ಜನರಿಂದ ಹಣ ಎತ್ತುವುದಕ್ಕೆ ಅವರು ಹೆತ್ತ ದಾರಿ ತುಳಿಯುತ್ತಿದ್ದಾರೆ. ನಮ್ಮ ಹಿಂದಿನ ಶ್ರೀ ಕೃಷ್ಣಮಾಚಾರಿಯವರು ಯೂರೋ ಒಬ್ಬ ಜಾಣ ಆರ್ಥಶಾಸ್ತ್ರಜ್ಞನ ಸೂಚನೆಯನ್ನು ದೊಡ್ಡದು ಮಾಡಿಕೊಂಡು ಬೇರೆಲ್ಲಿಯೂ ಇಲ್ಲದಿದ್ದ ಎರಡು ಹೊಸ ಕಛೇರಿಗಳನ್ನು ಸ್ಥಾಪಿಸಿದರು. ನಮ್ಮ ಈಗಿನ ಆರ್ಥಮಂತ್ರಿ ಮು.ರಾರ್ಜಿಯವರು 'ಪೈ ಜ್ ಬೋಂಡ್' ಯೋಜನೆಯನ್ನು ಆರಂಭಿಸಿದರು. ಆದರೆ ಈಡಿಗೆ ಇವರು ಜನರಲ್ಲಿ ನಿಧಿಯೂಗಿರುವ ಚಿನ್ನವನ್ನು ಹೊರಗೆ ತರಬೇಕಾದೀತು ಎಂದು ಹೇಳಿಕೆ ಕೊಟ್ಟಿದ್ದಾರೆ.

ಕೃಷ್ಣಮಾಚಾರ್ಯರ ತೆರಿಗೆಗಳಿಂದ ಒಗಬಹುದೆಂದು ನೀರಿಕ್ಷಿಸಿದ ವರಮಾನ ಕೂಡಾ ಬಹಳವೇನೂ ಅಲ್ಲ. ಆ ತೆರಿಗೆ ಜನರ ಮನಸ್ಸನ್ನು ಕೆರಳಿಸಿದ್ದು ನಿಜ; ಶುಭ ಏನನ್ನು ಸಾಧಿಸಲಿಲ್ಲ. 'ಪೈ ಜ್ ಬೋಂಡ್" ಯೋಜನೆ ಸ್ಥಿಮಿತ ಬುದ್ಧಿಯ ಜನರನ್ನೂ ಲೋಭದತ್ತ ಸೆಳೆಯಿತು. ಹೊರತಾಗಿ ಬೇರೆಯೂವ ಪ್ರಯೋಜನವೂ ಆಗಲಿಲ್ಲ. ನಿಧಿಯೂಗಿರುವ ಚಿನ್ನವನ್ನು ಹೊರಗೆ ತೆಗೆಯಬೇಕೆಂಬ ಹೊಸ ಮತು ಜನರಲ್ಲಿ ಭಯಮೂಡಿಸಿದೆ ಹೊರತು ಸರಕಾರಕ್ಕೆ ಅದು ಲಾಭವನ್ನು ತರಲಾರದು.

ಬ್ರಿಟಿಷರು ನಮ್ಮಲ್ಲಿ ನೋಟುಗಳನ್ನು ಕಾಗದದ ರೂಪಾಯಿಗಳನ್ನು ಅಚ್ಚುಮಾಡಿಸಿದರು. ಇದಕ್ಕೆ ಕಾರಣ ಆಗಿನ ಯುದ್ಧಗಳಾಗಿದ್ದುವು. ನಮ್ಮ ಹಣದಲ್ಲಿ ಸ್ವಲ್ಪ ಭಾಗವಾದರೂ ಚಿನ್ನದ ಅಂಶ ವಿರಬೇಕೆಂಬ ಪೂರ್ವಸೂತ್ರವೂ ಯವಾಯಿತು. ಬೇಕಾದಷ್ಟು ಕಾಗದದ ರೂಪಾಯಿಗಳನ್ನು ತಯಾರಿಸಿ ಜನತೆಯಲ್ಲಿ ಹರಿಯ ಬಿಟ್ಟರು. ಯುದ್ಧ ಮುಗಿದ ಬಳಿಕ ಅವರು ಇದನ್ನು ಬಹಿಷ್ಕರಿಸದೆ ನಿಶ್ಚಿಂತರಾಗಿದ್ದರು. ಆದರೆ ಅವರು ನಮ್ಮ ದೇಶವನ್ನು ಬಿಟ್ಟು ಕೊಡಬೇಕಾಯಿತು. ನಡೆಯುವಾಗ ತಾವು ತಂದ ಹೊಲಸನ್ನು ತೊಳೆಯುವ ಕೆಲಸವನ್ನು ಭಾರತದ ಹೊಸ ಸರಕಾರಕ್ಕೆ ಬಿಟ್ಟು ತಮ್ಮ ದಾರಿಯನ್ನು ಹಿಡಿದರು.

ಆದರೆ ಹೊಸ ಸರಕಾರ ವಿಧಿಯಿಲ್ಲದೆ ಹಿಂದಿನ ದಾರಿಯನ್ನು ತುಳಿಯಿತು. ಈ ರೀತಿ ಅಚ್ಚು ಮಾಡಿದ ಕಾಗದದ ಹಣವನ್ನು ಉಪಯೋಗಿಸುವುದು ಅನಾಯಮೆಂದು ಯಾವ ಸರಕಾರಕ್ಕೂ ತಿಳಿಯಬೇಕು. ಆದರೆ ನಮ್ಮ ಸರಕಾರಕ್ಕೆ ತಿಳಿಯಲಿಲ್ಲ. ಮತ್ತಷ್ಟು ಅಚ್ಚಿನ ಕಾಗದದ ಹಣ ಬೆಳೆದು ಹಾಹಾಕಾರ ಎದ್ದಾಗ ನಮ್ಮ ಸರಕಾರ ಏನೇನೋ ವಿವರಣೆ ಹೇಳಿತು ತನ್ನದಾರಿ ತಪ್ಪು ಎಂದು ಅದಕ್ಕೆ ತಿಳಿಯಲಿಲ್ಲ.

ಒಂದು ರಾಷ್ಟ್ರವನ್ನು ಹಾಳುಮಾಡಬೇಕಾದರೆ ಕಾಗದ ರೂಪಾಯಿಯಂಥ ಸಾಧನೆ ಮತ್ತೊಂದಿಲ್ಲ. ಈ ಕಾಗದ ಸಾಲದ ಸತ್ರ ಅಷ್ಟೇ. "ನಿಮ್ಮಿಂದ ನೂರು ರೂಪಾಯಿ ಪ್ರಯೋಜನ ಪಡೆದಿದ್ದೇವೆ. ನೀವು ನಮ್ಮಿಂದ ನೂರು ರೂಪಾಯಿ ಪ್ರಯೋಜನ ಪಡೆಯಿರಿ" ಎಂಬುದೇ ಇದರ ಅರ್ಥ. ಸರಕಾರ ನಮ್ಮಿಂದ ಹಣ ಪಡೆದು ದಾಯಿತು. ಈ ಪತ್ರವನ್ನು ಕೈಯಲ್ಲಿ ಹಿಡಿದವನು ಆದರಿಂದ ಪ್ರತಿ ಫಲ ಪಡೆಯುವುದು ಹಾಗೆಯೇ ಉಳಿದಿದೆ. ಮಧ್ಯೆ ಈ ಪತ್ರ ಪ್ರಯೋಜನಗಳನ್ನು ತರುತ್ತಾ ಒಂದು ಕೈಯಿಂದ ಇನ್ನೊಂದು ಕೈಗೆ ಹೋಗುತ್ತದೆ. ಸರಕಾರಕ್ಕೆ ಸಲ್ಲಬೇಕಾದ ಹಣವಾಗಿ ಆದು ರಾಷ್ಟ್ರದ ಕೋಶಕ್ಕೆ ಹೋದಾಗ ಅದರ ಚಲನೆಯ ಒಂದು ಆವರ್ತ ಮುಗಿಯುತ್ತದೆ. ನಿಜವಾದ ದುಡಿಮೆ ನಿಜವಾದ ಸಾಮಾನಿಗೆ ಪ್ರತಿಯಾಗಿ ಕೊಟ್ಟ ಈ ಸಾಲದ ಪತ್ರ ಉಳಿದೆಲ್ಲ ಸಾಲದ ಪತ್ರಗಳಂತೆ ಪ್ರಯೋಜಕ ಅಥವಾ ನಿಷ್ಪ್ರಯೋಜಕ ವಸ್ತು. ಸಾಲ ತೆಗೆದುಕೊಂಡಿರುವವನು ಗಟ್ಟಿಆಳು, ಆಸ್ತಿ ಉಳ್ಳವನು ಸಾಲಕ್ಕೆಳೆಯವಿಲ್ಲ. ಅವನಲ್ಲಿ ಆಸ್ತಿ ಬಹಳ ಇಲ್ಲ; ಈ ಪತ್ರಕ್ಕೆ ಬೆಲೆ ಏನೂ ಇಲ್ಲ. ಹಾಗಾದರೆ ಸಾಲ ಕೊಟ್ಟರುವ ಸರಕಾರದ ಆಸ್ತಿ ಯಾವುದು? ಅದು ಕೋಶದಲ್ಲಿಟ್ಟಿರುವ ನಿಜವಾದ ವಸ್ತು. ಆದರೆ ಇಂಥ ವಸ್ತುವನ್ನು ಇಡದೆ ಬರೀ ಕಾಗದವಪ್ಪನ್ನೇ ಹೊರಡಿಸಿದರೆ....?

ಹಣದ ಬೆಲೆ ಕಡಮೆ ಆದುದರಿಂದ ಅಂಗಡಿಗಳಲ್ಲಿ ಏನನ್ನು ಕೊಳ್ಳಬೇಕಾದರೂ ಈ ಇಳಿದ ಬೆಲೆಯ ಹಣವನ್ನು ಹೆಚ್ಚು ಹೆಚ್ಚಾಗಿ ಕೊಡಬೇಕಾಗುತ್ತದೆ ಎಂದರೆ ಪದಾರ್ಥಗಳ ಬೆಲೆ ಏರುತ್ತದೆ. ನಮ್ಮ ದೇಶದಲ್ಲಿ ಈ ೧೫ ವರ್ಷಗಳಲ್ಲಿ ಪದಾರ್ಥಗಳ ಬೆಲೆ ಏರಿದುದಕ್ಕೆ ಇಂಥ ಹಣದ ಉಬ್ಬರ ಒಂದು ಕಾರಣ. ಇದೊಂದು ರೀತಿಯ ಅಕ್ರಮವಂಚನೆ. ನಮ್ಮ ಸರಕಾರ ಅಭಿವೃದ್ಧಿಗೊಳ್ಳುವ ಅರ್ಥವ್ಯವಸ್ಥೆಯಲ್ಲಿ ಕೊರತೆಯ ಧನವಿನಿಯೋಗವು ಅನಿವಾರ್ಯ ಎಂದು ಮುಂತಾಗಿ ಸಮರ್ಥನೆಯನ್ನು ಹೇಳುತ್ತಿದೆ. ಇತರ ಕಡೆಗಳಲ್ಲಿ ಹೀಗೆಯೇ ಆಗುತ್ತಿದೆ ಎನ್ನುತ್ತಿದ್ದಾರೆ. ಸರಕಾರ ಜನರ ಯೋಗ್ಯತೆ ಅರಿತು ಅನಂತ

(ಇನೇ ಪುಟ ನೋಡಿರಿ)



ಅತ್ಯುತ್ತಮ ಟಾನಿಕ್

ನಿಮ್ಮ ದೇಹ — ಮನಸ್ಸುಗಳಿಗೆ
ಆರೋಗ್ಯವನ್ನೂ ಬಲವನ್ನೂ, ನವಚೈತನ್ಯವನ್ನೂ
ತಂದು ಕೊಡಬಲ್ಲ ಏಕಮಾತ್ರ ಟಾನಿಕ್

ಉಳಿತಾಯ

ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಗಂಭೀರ ಪರಿಸ್ಥಿತಿ—

ಭಾರತ-ಚೀನ ಬಿಕ್ಕಟ್ಟು

ಶ್ರೀ ವಿ. ವಿ. ಕಟ್ಟಿ, ಪೂನ.

ದೇಶ ದೇಶಗಳೊಳಗಣ ವ್ಯವಹಾರ—ವ್ಯಕ್ತಿಗಳೊಳಗಣ ವ್ಯವಹಾರದಂತೆಯೆ. ಇಂದು ಮಿತ್ರರಾಗಿದ್ದವರು ನಾಳೆ ಶತ್ರುಗಳಾಗುತ್ತಾರೆ; ಇಂದಿನ ವೈರಿಗಳು ಯಾವಾಗಲೂ ಹಾಗೆಯೇ ಇರುತ್ತಾರೆನ್ನಲು ಬರುವುದಿಲ್ಲ; ಇಬ್ಬರು ಅತ್ಯಂತ ಗೆಳೆಯರಲ್ಲಿ ಒಬ್ಬನು ಯಾವ ಕಾರಣವೂ ಇಲ್ಲದೆ ಇನ್ನೊಬ್ಬನ ಮೇಲೆ ತಿರುಗಿ ಬೀಳುವುದಕ್ಕೆ ವಿಶ್ವಾಸಘಾತುಕತನವೆನ್ನುತ್ತಾರೆ. ಎಂದು ದೇಶಗಳೊಳಗೆ ನಡೆದ ಇಂತಹ ವಿಶ್ವಾಸಘಾತುಕತನದಲ್ಲಿ ಚೀನವು ಭಾರತಕ್ಕೆ ಮಾಡಿದ ಮೋಸಕ್ಕಿಂತ ಹೆಚ್ಚಿನ ಉದಾಹರಣೆ ಇತ್ತೀಚಿಗಿನ ಚರಿತ್ರೆಯಲ್ಲಿ ಸಿಗಲಾರದು. ನವ್ಯದೇಶವು ಸ್ವಾತಂತ್ರ್ಯವಾದಂದಿನಿಂದ ಚೀನದ ಸ್ನೇಹ ಬಯಸಿ ಸಿತು ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳು; ಮೊದಲನೆಯದಾಗಿ ಭಾರತ ಮತ್ತು ಚೀನವು ವಿಸ್ತಾರ ಖಂಡದ ಎರಡು ಪ್ರಮುಖರಾಷ್ಟ್ರಗಳಾಗಿರುವುದರಿಂದ ಇವುಗಳೊಳಗಿನ ಮೈತ್ರಿಯು ಜಾಗತಿಕ ಶಾಂತಿಗೆ ಆಗತ್ಯವೆನ್ನುವ ಭಾವನೆ ಎರಡನೆಯ ಕಾರಣವೆಂದರೆ ಪ್ರಧಾನ ಮಂತ್ರಿ ಶ್ರೀ ನೆಹರೂರವರ ವ್ಯಕ್ತಿತ್ವ ಮತ್ತು ಧ್ಯೇಯ ಎಲ್ಲರನ್ನು ಸ್ನೇಹಿತರಂತೆ ಪರಿಗಣಿಸಬೇಕೆನ್ನುವುದು ಅವರ ತತ್ವವಾದರೆ, ಪ್ರಥಮ ದರ್ಶನದಲ್ಲಿ ಗೆಳೆತನ ಬೆಳೆಯುವುದು ಅವರ ಸ್ವಭಾವ. ಹೀಗಾಗಿ ಚೀನದ ಮಿತ್ರಿ ಮಂತ್ರಿ ಚೌ ಎನ್ ಲೈಯನ್ನು ಅವರು ತಮ್ಮಂತೆಯೆಂದು ತಿಳಿದು ಸಹೋದರನಿಗೆ ಸಮಾನರೆಂದು ಕರೆಯತೊಡಗಿದರು. ಆನೇಕ ವೇಳೆಗಳಲ್ಲಿ ಹೆಚ್ಚಿನ ಪಾಶ್ಚಾತ್ಯ ದೇಶಗಳು ಕಮ್ಯುನಿಸ್ಟ್ ಚೀನವನ್ನು ಯುಕ್ತರಾಷ್ಟ್ರ ಸಂಸ್ಥೆಯಿಂದ ಹೊರಗಿಡಲು ಎಷ್ಟು ಪ್ರಯತ್ನಿಸಿದ್ದರೋ ಆಷ್ಟೂ ನೆಹರೂ ಸರಕಾರವು ಚೀನವನ್ನು ಯುಕ್ತರಾಷ್ಟ್ರ ಸಂಸ್ಥೆಯ ಮೆಂಬರನ್ನಾಗಿ ಮಾಡಲು ಪ್ರಯತ್ನಿಸಿಟ್ಟಿತ್ತು. ಅಷ್ಟಲ್ಲದೆ 1955ರಲ್ಲಿ ನಡೆದ ಬಾಂಡಂಗ್ ಅಧಿವೇಶನದಲ್ಲಿ ಚೀನದ ಪ್ರಧಾನಿಗೆ ಸಲ್ಲದ ಸನ್ಮಾನವನ್ನು ನೆಹರೂರವರೇ ಮಾಡಿದ್ದರು. ಈ ಎಲ್ಲ ಉಪಚಾರವು ನೀರಿನಲ್ಲಿ ಹೋಮ.ಗೈದಂತಾಯ್ತು. ಹಾಲೆರೆದವರ ಕೈ ಕಚ್ಚಿದ ಸರ್ಪದಂತಹ ಗುಣವನ್ನು ಚೀನವು ಇತ್ತೀಚೆಗೆ ವ್ಯಕ್ತಪಡಿಸಿದೆ.

ಇಂತಹ ಹೀನ ಕೃತ್ಯವನ್ನು ಚೀನವು ತೊಡಗಲು ಕಾರಣವೇನೆಂದು ಯಾರೂ ಸರಿಯಾಗಿ ಹೇಳುವಂತಿಲ್ಲ. ಕಮ್ಯುನಿಸ್ಟ್ ರಾಷ್ಟ್ರಗಳನ್ನು ಬಿಟ್ಟುಳಿದ ದೇಶಗಳಲ್ಲಿ ಅತ್ಯಂತ ಗೆಳೆತನವನ್ನು ತೋರಿಸಿದ ಭಾರತದ ಗಡಿಗಳನ್ನು ನೂರಿಪ್ಪತ್ತು ಸಾವಿರ ಚದರ ಮೈಲುಗಳಷ್ಟುಳ್ಳುತ್ತರದ ಭಾಗವನ್ನು ಆವರಿಸಿಕೊಂಡು ವಿಶ್ವಪ್ರಾಣದ ಯುದ್ಧಕ್ಕೆತೊಡಗಿರುವುದರಲ್ಲರ್ಥವೇನ? ಕೆಲವರ ಅಭಿಪ್ರಾಯದ ಪ್ರಕಾರ (ಇಂತವರಲ್ಲಿ ಬಹು ಮಂದಿ ಭಾರತದ ಕಮ್ಯುನಿಸ್ಟರು) ಚೀನವು ಅಷ್ಟು ದೊಡ್ಡ ತಪ್ಪು ಮಾಡಿಲ್ಲ. ಅವರೆನ್ನುವಂತೆ ಭಾರತ ಮತ್ತು ಚೀನದ ಗಡಿ ತಂಟಾ ಉದ್ದವಾಗಿದ್ದು, ಪರ್ವತಮಯ ಹಾಗೂ ನಿರ್ಜನವಾದ ಪ್ರದೇಶವಾಗಿದೆ. ಸರಿಯಾದ ಗಡಿ ಗೊತ್ತಿಲ್ಲದಿರುವುದರಿಂದ ಭಾರತವು ತನ್ನದೆನ್ನುವ ಪ್ರದೇಶ, ಚೀನದವರ ಅಭಿಪ್ರಾಯ ಪ್ರಕಾರ ಅವರಿಗೆ ಸೇರಿದ್ದು. ಈ ವಾದ ಸಹಜವಾದದ್ದೇ; ಇಂತಹ ಪ್ರಸಂಗಗಳು ಒಂದನ್ನೊಂದು ತಾಗಿಕೊಂಡಿರುವ ದೇಶಗಳಲ್ಲಿ ಆಗಾಗ ಬರತ್ತವೆ ಆದರೆ ಇದು ನಿಜವಾಗಿದ್ದರೆ ಚೀನವು ಗೆಳೆತನದಿಂದಿದ್ದ ಭಾರತದೊಡನೆ ತನ್ನ ಗಡಿಯ ಕುರಿತು ಮಾತುಕತೆ ನಡೆಸಿ ಶಾಂತ ರೀತಿಯಿಂದಲೇ ಸಮಸ್ಯೆಯನ್ನು ತೀರ್ಮಾನಿಸಿಕೊಳ್ಳುವುದನ್ನು ಬಿಟ್ಟು ಒಂದೇ ಸಮನೆ ದೇಶದೆ ಕೇಳಿಬಲಾತ್ಕಾರಕ್ಕೆ ಹೊರಟುದೇಕೆ? ಭಾರತದ ಕಮ್ಯುನಿಸ್ಟರಿಗೆ ಸಹಾಯ ಮಾಡಲಿಕ್ಕಾಗಿ ಚೀನವು ಹೀಗೆ ಮಾಡುತ್ತಿದೆಯೆಂದು ಇನ್ನು ಕೆಲವರು ಲಘುವ್ಯಾಖ್ಯಾನ. ಚೀನದಂತೆ ಭಾರತವು ಕಮ್ಯುನಿಸ್ಟ್ ದೇಶವಾಗುವುದೆಂದು ಕಾದು ಜೇಸತ್ತ ಚೀನದ ಮುಖಂಡರು ಈ ರೀತಿ ಗಡಿಯ ಜರ್ಜಿಯನ್ನೆಬ್ಬಿಸಿ ಯುದ್ಧತ್ಕಾರಂಭಿಸಿದರೆ ಭಾರತದ ತಮ್ಮ ಒಂಭೂಗಳು ಕ್ರಾಂತಿಯನ್ನೆಬ್ಬಿಸಿ ಸರಕಾರ ನ್ನಾಪಿಸಲು ಅವಕಾಶ ಒದಗಿಸಿಕೊಳ್ಳಬಹುದೆಂದು ಮಾವುತ್ಸೆ ತುಂಗ್ ಮತ್ತಿತರ ಚೀನದ ನಾಯಕರು ತಿಳಿದಿದ್ದರೆ ತಂಬಾ ಮೋಸ ಹೋದಾತೆ ಯೇ ಸರಿ. ಅದೇಕೆಂದರೆ ಭಾರತದಲ್ಲಿ ಕಮ್ಯುನಿಸ್ಟರಿಗೆ ಸಾಕಷ್ಟು ಬೆಂಬಲವಿಲ್ಲವೆನ್ನುವುದು ಕಳೆದೆರಡು ಚುನಾವಣೆಗಳಲ್ಲಿ ಸ್ಪಷ್ಟವಾಗಿದೆ. ಅದಲ್ಲದೆ ಪರರಾಷ್ಟ್ರದೊಡನೆ ಆವರು ಸಂಚು ಬೆಳೆಸಿದರೆ ಅವರನ್ನು ನಮ್ಮ ದೇಶದ ಜನರು ಎಂದೂ ಮರೆಯಲಿಕ್ಕಿಲ್ಲವೆನ್ನುವುದು ಭಾರತದ ಕಮ್ಯುನಿಸ್ಟರಿಗೂ ಸಾಕಷ್ಟು ತಿಳಿದಿದೆ. ನಿಜವಾಗಿ ನೋಡುವುದಾದರೆ ಚೀನದ ಈ ಮತಿಗೆಟ್ಟ ವರ್ತನೆಯಿಂದ ಭಾರತದ ಕಮ್ಯುನಿಸ್ಟರು ಇನ್ನೂ ಹೆಚ್ಚಿನ ಸಂಕಷ್ಟಕ್ಕೀಡಾದರೇ ಹೊರತು ಲಾಭ ಗಳಿಸಿಲ್ಲ.

ಇತ್ತೀಚೆಗೆ ಚೀನದ ಅತ್ಯಾಚಾರದ ಕುರಿತು ಮಾತನಾಡುತ್ತಾ ಶ್ರೀ ನೆಹರೂ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದರು: "ಚೀನದ ಚರಿತ್ರೆಯನ್ನು ಪರೀಲಿಸಿದರೆ ಅದು ನೊದಲಿನಿಂದಲೂ ತನ್ನ ರಾಜ್ಯವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯುಳ್ಳದ್ದಾಗಿ ಕಾಣುಬರುತ್ತದೆ. ಕಮ್ಯುನಿಸ್ಟರು ಕ್ರಾಂತಿ ಮೂಲಕ ರಾಜ್ಯ ಸ್ಥಾಪಿಸಿದ ಮೇಲಂತೂ ಈ ಮನೋಭಾವನೆ ಇನ್ನಷ್ಟು ಪ್ರಬಲವಾದಂತಿದೆ." ಚೀನವು ಭಾರತದ ಗಡಿಯನ್ನು ಬಲತ್ಕಾರದಿಂದ ಡಾಟ ಮುನ್ನುಗ್ಗುತ್ತಿರಲು ನಮ್ಮ ದೇಶದ ಮೇಲಿನ ಮಸ್ಸರವೇ ಮುಖ್ಯಕಾರಣವೆಂಬ ಕಾಣುತ್ತದೆ ವಿಸ್ತಾರ ಬಂಡವಾಳ ಮುಖ್ಯವಾದ ಎರಡು ರಾಷ್ಟ್ರಗಳಾದ ಭಾರತ ಮತ್ತು ಚೀನಗೊಳಗೆ ಬಂದು ತರವಾದ ಗುಪ್ತ ಸ್ಪರ್ಧೆಯಿದೆಯೆಂಬ ಚೀನದವರು ಕಲ್ಪಿಸಿಕೊಂಡಿರಬೇಕೆಂತೆ ತೋರುತ್ತಿದೆ ಒಂದು ಕಮ್ಯುನಿಸ್ಟ್ ದೇಶವಿದ್ದು, ಇನ್ನೊಂದು ಪ್ರಜಾಪ್ರಭುತ್ವಕ್ಕೆ ಸೇರಿದ: ಎರಡೂ ದೇಶಗಳ ಪಂಚವಾರ್ಷಿಕ ಯೋಜನೆಯ ಮೂಲಕ ಜನರ ಆರ್ಥಿಕ ಸ್ಥಿತಿ ಸುಧಾರಣೆಯ ಕಾರ್ಯದಲ್ಲಿ ನಿರತವಾಗಿರುವುದು ಇತರ ದೇಶಗಳು ನೋಡುತ್ತಿರುವುದರಿಂದ ಭಾರತಕ್ಕಿಂತ ಚೀನವೇ ಹೆಚ್ಚಿನ ಪ್ರಗತಿ ಹೊಂದಬೇಕೆಂದು ಅವರು ನಿರ್ಧರಿಸಿದಂತಿದೆ. ಮೊದಲೊದಲು ಚೀನವು ನಮ್ಮ ದೇಶಕ್ಕಿಂತ, ಕೃಷಿ ಮತ್ತು ಕೈಗಾರಿಕೆಗಳಲ್ಲಿ ಹೆಚ್ಚಿಗೆ ಅಭಿವೃದ್ಧಿಗೊಂಡಿದೆಯೆಂದು ಕೊಚ್ಚಿಕೊಂಡರೂ ಅಲ್ಲಿಯ ಆಹಾರದ ಪರಿಸ್ಥಿತಿ ನೆಟ್ಟಿಗಿಲ್ಲವೆಂಬುದು ಇತ್ತೀಚೆಗೆ ವ್ಯಕ್ತವಾಗಿದೆ. ಇದರಿಂದ ವಿಸ್ತಾರದ ಇತರ ರಾಷ್ಟ್ರಗಳು ಭಾರತವನ್ನೂ ಅನುಕರಿಸಿ ಬಹುದನ್ನುವ ಭಯ ಚೀನದ ನಾಯಕರಿಗುಂಟಾದಂತೆ ಕಾಣುತ್ತದೆ. ಇದನ್ನು ತಡೆಗಟ್ಟಲು ಭಾರತದೊಡನೆ ಚಿಕ್ಕ ಪ್ರಮಾಣದ ಯುದ್ಧವೆ ತೊಡಗಿ, ಅಷ್ಟಕಟ್ಟು ಅಧಿಕಾರಾರೂಢ ಯ ಬಗ್ಗಾಗಿ ವಿಸಲಿರಿಸಿದ ಹಣವನ್ನು ಯುದ್ಧೋಪಕರಣಗಳ ಮೇಲೆ ವ್ಯಯಿಸಬೇಕೆನ್ನುವ ಲೆಕ್ಕ ಅವರದಿಂಬೇಕು. ಇದರಲ್ಲಿ ಅವರು ಈಗಾಗಲೇ ಸ್ವಲ್ಪ ಮಟ್ಟಿಗೆ ಜಯಹೊಂದಿದಂತೆ ಕಾಣುತ್ತದೆ.

ಚೀನದೊಡನೆ ತಿಕ್ಕಾಟಲೆರಂಭವಾದಂದಿನಿಂದ ಭಾರತವು ಲಡಾಕ್ ಮತ್ತು ನೇಫಾ ಪ್ರದೇಶಗಳಲ್ಲಿ ಹೊಸದಾಗಿ ನೂರಾ ಬೇಕಾಗಿ ಒಂದು ರಸ್ತೆಗಳಬಗ್ಗೆ ಸುಮಾರು ೧೫೦ ಕೋಟಿ ರೂಪಾಯಿ ಖರ್ಚುಮಾಡಬೇಕಂಗಿ ಒಂದು ಇನ್ನು ರಷ್ಯ ಮತ್ತಿತರ ಕಡೆಗಳಿಂದ ಕೊಂಡುಕೊಳ್ಳುತ್ತಿರುವ ವಿಮಾನ ಮತ್ತು ಇತರ ಆಧುನಿಕ ಯುದ್ಧೋಪಕರಣಗಳ ಬಗ್ಗೆ ಅದೆಷ್ಟು ಹಣ ಬೇಕಾಗುವುದೆಂದು ಸರಿಯಾಗಿ ತಿಳಿದಿಲ್ಲ. ಇದರಿಂದ ಮುಂದಿನ ಪಂಚವಾರ್ಷಿಕ ಯೋಜನೆಗೆ ತೊಂದರೆ ಬಂದೀತೆಂದು ಕೆಲವರ ಮತ ಅದರೆ ತನ್ನ ದೇಶದ ಸಂರಕ್ಷಣೆಗಾಗಿ ಆದರಲ್ಲೂ ಕಮ್ಯುನಿಷ್ಟ್ ಚೀನದೊಡನೆ ಹೋರಾಡುವ ಭಾರತಕ್ಕೆ ಬೇಕಷ್ಟು ಸಹಾಯ ನೀಡಲು ಅಮೆರಿಕವು ಸ್ಥಿರವಾಗಿರುದು ನಮ್ಮ ಸುದೈವವೆನ್ನಬೇಕು

ಭಾರತ ಮತ್ತು ಚೀನಗಳೊಳಗಣ ಈ ಜಗಳದಲ್ಲಿ ರಷ್ಯವು ತಳೆದ ಧೋರಣೆಯು ಸ್ವಾರಸ್ಯದ್ದಾಗಿದೆ. ಚೀನವು ಒಂದುಮುಖ್ಯ ಕಮ್ಯುನಿಷ್ಟ್ ದೇಶವಾದರೂ ಅದರ ಪಕ್ಷವನ್ನು ಬಹಿರಂಗವಾಗಿ ಸೇರಿದ್ದುದು ರಷ್ಯವು ಭಾರತದ ಮೇಲಿಟ್ಟಿರುವ ವಿಶ್ವಾಸವನ್ನು ಪ್ರಕಟಿಸುತ್ತದೆ. ಅಲ್ಲದೆ ರಷ್ಯಾ ಭಾರತಕ್ಕೆ 'ಮಿಗ್' ವಿಮಾನಗಳ

(ಉಳಿದ ಭಾಗ ನೋಡಿರಿ)

ಮತ್ತೊಂದು ಆಕರ್ಷಣೀಯ

ಉಳಿತಾಯ ಯೋಜನೆ

ರೆಕರಿಂಗ್—
ಡಿಪಾಸಿಟ್ ಸ್ಕೀಮ್

ವಿಶೇಷ ಸೌಲಭ್ಯಗಳು:

- ಮಾಹೆಯಾನ ರೂ 5/ ರಿಂದ ರೂ 500/- ವರೆಗಿನ ಕಂತು ಕಟ್ಟುವ ರೆಕರಿಂಗ್ ಡಿಪಾಸಿಟ್ ಖಾತೆಯನ್ನು ನೀವು ತೆರೆಯಬಹುದು.
- ರೆಕರಿಂಗ್ ಡಿಪಾಸಿಟ್ ಸ್ಕೀಮಿನ ಅವಧಿಗಳು— 12, 24, 36, 46 ಮತ್ತು 60 ತಿಂಗಳುಗಳು.
- ಸಾನಕಾಶವಾಗಿ ಕಟ್ಟಿದ ಕಂತುಗಳಿಗೆ ದಂಡವನ್ನೇನೂ ಕೊಡಬೇಕಾಗಿಲ್ಲ
- ಚಕ್ರಬಡ್ಡಿ — ಸಾಲಿಯಾನಾ 4 %

ಹೆಚ್ಚಿನ ವಿವರಗಳನ್ನು ನಿಕಟವರ್ತಿ ಶಾಖೆಯಲ್ಲಿ ವಿಚಾರಿಸಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ. 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸ್: ಮಂಗಳೂರು. ಅಡಳಿತ ಕಛೇರಿ ಬೆಂಗಳೂರು.

— ಬೇಕಾಗಿದ್ದಾರೆ —

ಕೃಷಿ ಹಾಗೂ ಹೂದೋಟದ ಕೆಲಸದಲ್ಲಿ ಅನುಭವವುಳ್ಳ 40 ವರ್ಷದ ಕೆಲಸ ನುರಿತ ಕೆಲಸಗಾರನೊಬ್ಬನು ಕಾಲೇಜಿನ ಪಣ್ಣು-ಹೂದೋಟದಲ್ಲಿ ಕೆಲಸ ಮಾಡಲು ಬೇಕಾಗಿದ್ದಾನೆ ನೇತನ ತಿಂಗಳಿಗೆ ರೂ. 12-00 + ದಿನಂದಿನ ಭತ್ತೆ ತಿಂಗಳಿಗೆ ರೂ. 30-00 (ವೇತನದ ಪರಮಾಣ 12-2-30—3-60). ಶೈವ. ಗೆಲಸದಲ್ಲಿ ಅನುಭವಸ್ಥನೆಂದು ಖಾತ್ರಿಯಾದಲ್ಲಿ ವೇತನವನ್ನು ಹೆಚ್ಚಿಸಲಾಗುವುದು. ಇಚ್ಛು ಕರು ನವೆಂಬರ 15ನೇ ತಾರೀಖಿನೊಳಗಾಗಿ ತಮ್ಮ ಅರ್ಜಿಯನ್ನು ಪ್ರಿನ್ಸಿಪಾಲ್, ಎಮ್. ಜಿ. ಎಮ್. ಕಾಲೇಜ್ ಉಡುಪಿ, ಕುಂಜಿಬೆಟ್ಟು (P. O) ಅವರಿಗೆ ಕಳಿಸತಕ್ಕದ್ದು.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪	ಉಡುಪಿ ೧೯-೧೧-೧೯೬೨	ವಾರ ೮

ಬೆಂಕಿ ಬಿದ್ದಿದೆ ಮನೆಗೆ

ಮಾತೃಭೂಮಿಯು ಸ್ವರ್ಗಕ್ಕೂ ಮಿಗಿಲಾದುದು ಎಂಬುದೊಂದು ನಾಳ್ನುಡಿ. ನಿಜ, ಅದನ್ನು ಆಲ್ಲಗಳೆಯುವಷ್ಟು ಎದೆಗಾರಿಕೆ ಯಾರೂ ತೋರಿಸುವುದಿಲ್ಲ. ಆದರೆ, ಈ ನಾಳ್ನುಡಿಯಲ್ಲಿ ಅಡಕವಾದ ಕಾರ್ಯಶೀಲತೆಯನ್ನು ಕೃತಿ ರೂಪದಲ್ಲಿ ತೋರಿಸಬೇಕಾಗಿ ಬಂದಾಗ ಪ್ರಾಣ ನೀಡುವಷ್ಟು ಕೊಡುಗೊಳ್ಳುವವರು ಅದನ್ನು ಪ್ರತ್ಯಕ್ಷವಾಗಿ ನಿರಾಳರಿಸಿದಂತೆ. ಎಂತಲೇ ನಮ್ಮ ರಾಷ್ಟ್ರ ಭೂಮಿಯ ಮೇಲೆ ತಮ್ಮ ಕೃಭುತ್ವವಿದೆಯೆಂದು ಅನ್ಯರಿಗೆ ಅಬ್ಬರಿಸುತ್ತ ಚೀನೀಯರು ಮಾಡುತ್ತಿರುವ ಆಕ್ರಮಣವು ನ್ಯಾಯ ಮತ್ತು ನೀತಿಯ ದೃಷ್ಟಿಯಿಂದ ಅಕ್ರಮವಾದುದೆಂದು ಲೋಕವೇ ಬೊಬ್ಬಿಡುತ್ತಿರುವಾಗ, ನಾವಾದರೂ ನಮ್ಮ ಕಸುವನ್ನು ಕ್ರೋಢೀಕರಿಸಿ ಈ ದುರಾಕ್ರಮಣವನ್ನು ಬಗ್ಗುಬಡಿಯದಿರುವುದು ಸಾಧ್ಯವಿಲ್ಲ. ಯಾವನೇ ಇರಲಿ, ತನ್ನ ತಾಯಿಯು ಮೂನ-ರಕ್ಷಣೆಯಿಶ್ವಾಸನ-ಪತನಗಳನ್ನು ಕಡೆಗಣಿಸುವುದು ಅವಹೇಳನ ಮತ್ತು ಪಂಡತನದ ಪ್ರತೀಕ. ಶರೀರದಲ್ಲಿ ಪ್ರಾಣವಿರುವ ವರೆಗೆ ಹೊತೆಯ ರಕ್ಷಣೆಗಾಗಿ ಹೋರಾಡುವುದು ಪ್ರತಿ ಪುತ್ರನ ಕರ್ತವ್ಯ. ಭಾರತ ಮಾತೆಯ ಹಾಲುಂಡು, ಆಕೆಯಿಂದ ದಿವ್ಯ ಜೀವಿತನಗೊಂಡುಬಾಳುತ್ತಿರುವ ನಾವು ಇಂದು ಆಕೆಯ ನೋಲಾಗುತ್ತಿರುವ ಅನ್ಯಾಯವನ್ನು ಎದುರಿಸಿ, ಈ ಕುತ್ತದಿಂದ ಆಕೆಯನ್ನು ಬದುಕಿಸುವ ದೃಢ ಪ್ರತಿಜ್ಞೆಯನ್ನು ಮಾಡಿದ್ದೇವೆ.

ಪ್ರಧಾನಿ ನೆಹರುರವರು ಸಂಧಾನ ಪ್ರಿಯರು; ಶಾಂತಿ ಪ್ರವಾದಿಗಳು. ಪಂಚಶೀಲದ ವೈಶಿಷ್ಟ್ಯಪೂರ್ಣ ವಿದೇಶ ನೀತಿಯನ್ನು ಜಗತ್ತಿಗೆ ಕೊಟ್ಟ ಜಗನ್ಮಾನ್ಯ ಸಮಾಲೋಚಕರು. ಭಾರತವು ಹೇಡಿತನದಿಂದ ನಿರ್ವೀರ್ಯನೆನಿಸಿ ಶಾಂತಿ ಮಂತ್ರವನ್ನು ಪರಿಸುತ್ತಿದೆಯೆಂದು ಯಾರಾದರೂ ತಿಳಿದಿದ್ದರೆ, ಅದು ತಪ್ಪು ಕಲ್ಪನೆ. ಅಹಿಂಸೆಯನ್ನು ಸಾರುವುದು ನಪುಂಸಕತೆಯ ದ್ಯೋತಕವೆಂದು ಊಹಿಸಿದರೆ, ಅದು ಸಂಪೂರ್ಣ ಸುಳ್ಳು. ಅಹಿಂಸೆಯೆಂದರೆ, ಪ್ರಾಣಿ ಮಾತ್ರವನ್ನು ನೋಯಿಸದಿರುವುದು ಎಂದೊಂದು ಅರ್ಥವಾದರೆ, ಅನ್ಯಾಯವನ್ನು, ದುರಾಕ್ರಮಣವನ್ನು ಪ್ರತಿಭಟಿಸಬಾರದು ಎಂಬದು ಹೇಳುವುದಿಲ್ಲ. ಅಹಿಂಸಾಪ್ರಿಯ ಭಾರತದ ಮೇಲೆ ಸೊಕ್ಕಿದ ಚೀನೀಯರು ಧಾಳ ಮೂಡಿ ದೇಶದ ಸಮಗ್ರತೆಗೆ, ಭದ್ರತೆಗೆ, ಉನ್ನತಿಯ ಮಾರ್ಗಕ್ಕೆ, ಅಹಿಂಸೆಯ ಆದರ್ಶಕ್ಕೆ ಪಂಥಾಹ್ವಾನವನ್ನು ನೀಡಿರುವ ಈ ವಿಷಮ ಸನ್ನಿವೇಶದಲ್ಲಿ, ಸಂಧಿಗ್ಧ ಪರಿಸ್ಥಿತಿಯಲ್ಲಿ ಅಘೋಷಿತ ಯುದ್ಧ ನೇಫಾ ಮತ್ತು ಲಡಖ ಪ್ರದೇಶದಲ್ಲಿ ನಡೆಯುತ್ತಿರುವುದು. ಇನ್ನೇನು, ಸದ್ಯವಲ್ಲೇ ಉದ್ಘೋಷಿತ ಕದನವಾಗುವುದು. ಆದರೆ, ಭಾರತವು ತಾನು ಯುದ್ಧವನ್ನು ಬಯಸಲಿಲ್ಲ; ಬಾರೆಂದದನ್ನು ಕರೆಯಲಿಲ್ಲ, ಪರರ ರಾಜ್ಯಾಪಹರಣಕ್ಕೆ ನಾವು ಎಳಸಿ ಹೋರಾಡುತ್ತಿಲ್ಲ. ಸಮರವೇ ಬಂದು ನಮ್ಮನ್ನು ಕೆಣಕಿದಾಗ ನಾವು ಸುಮ್ಮನಿರುವುದು ಎಂದಿಗೂ ಸಾಧ್ಯವಿಲ್ಲ. ಒಂದು ವೇಳೆ, ಹಾಗೆ ಸುಮ್ಮನುಳಿದೆವೆಂದರೆ, ಅದು ಹೇಡಿತನ.

ಯುದ್ಧವೆಂದರೆ, ಹೋರಾಟವೆಂದರೆ, ಅದರ ಭೀಕರ ಪರಿಣಾಮವನ್ನು ನೆನೆದರೆ ಮನಸ್ಸು ಉದ್ರಿಕ್ತ ಸಾಗರದಂತೆ, ಅಲ್ಲಕಲ್ಲೋಲವಾಗುವುದು ಸ್ವಾಭಾವಿಕ-ಆದರೆ ನಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಅದನ್ನು ಸಹಿಸಿಕೊಳ್ಳಬೇಕು. ಮನಸ್ಸೆಂದು ಮನೆಕಟ್ಟಿಸಿಕೊಟ್ಟಿದ್ದಾರೆ, ನಮ್ಮ ಹಿರಿಯರು ಅದಕ್ಕೆ ವರ್ಷಾಸ್ಥಿತಿ ಸುಣ್ಣ ಬಣ್ಣ ಮಾಡಿಸ ಬೇಕಾಗುತ್ತದೆ. ಇದಕ್ಕೆ ಹಣ ವೆಚ್ಚವಾಗುತ್ತದೆಯೆಂದು ಮನೆಯನ್ನು ಬೇರೆಯವರಿಗೆ ಒಪ್ಪಿಸಿಬಿಡುವುದು ಧರ್ಮವಲ್ಲ; ಪೌರುಷವಲ್ಲ, ಅಧರ್ಮ. ಭಾರತದೇಶ ನಮ್ಮೆಲ್ಲರ ಮನೆ; ನಮ್ಮ ಪೂರ್ವಜರ ಆಸ್ತಿ. ಇದನ್ನು ಪೋಷಿಸಿ ಭದ್ರಗೊಳಿಸುವುದು ನಮ್ಮ ಕರ್ತವ್ಯ. ಕೋಟ್ಯಂತರ ಜನರ ಅನೋಘ ತ್ಯಾಗದ ಫಲವಾದ ಇದನ್ನು ಚೀನೀಯರ ಅಗ್ನಿ ಕುಂಡದಲ್ಲಿ ಆಹುತಿಯಿಡಲು ನಮಗೆ ಅಧಿಕಾರವಿಲ್ಲ. ನಾವು ಅದರ ರಕ್ಷಣೆಗೆ ಬದ್ಧ ಕಂಕಣರಾಗಲೇ ಬೇಕು. " ಹಾರಲಿ ನೈಸೆತ್ತರು ಹಾರಿ। ಹೋದರೆ ಹೋಗಲಿ ತಲೆ ಹಾರಿ।" ಎಂದು ದೇಶದ ರಕ್ಷಣೆಗೆ ಹೋರಾಡಿ ತಾಯ್ನಾಡನ್ನು ಉಳಿಸಲು ಸನ್ನದ್ಧರಾಗಬೇಕು. ಇದಕ್ಕಾಗಿ ಪ್ರತಿ ಭಾರತೀಯನೂ ತನ್ನಿಂದ ಸಾಧ್ಯವೆನಿಸಿದ ಸರ್ವ ಪ್ರಕಾರದ ನೆರವನ್ನು ನೀಡಬೇಕು; ಅಂಜುಕುಳಿಯಾಗದೆ, ಭಾರತ ಮಾತೆಯ ಪಾವಿತ್ರ್ಯವನ್ನು, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ವ್ರತಧಾರಿಯಾಗಬೇಕು.

ನಮ್ಮ ವೀರ ಯೋಧರು ಅಸಮಾನ ಹಿಮವತ್ ಪ್ರದೇಶದ ಗುಡ್ಡಕೊಳ್ಳಗಳಲ್ಲ ಮಾತೃ ಭೂ ಸಂರಕ್ಷಣಾ ದೀಕ್ಷಾಬದ್ಧರಾಗಿ ಹೋರಾಡುತ್ತಿದ್ದಾರೆ. ನಮ್ಮ ಸರಕಾರವು ಶಕ್ಯವಿರುವ ಸರ್ವ ವಿಧದ ಸಂರಕ್ಷಣೋಪಾಯಗಳನ್ನು ಕೈಗೊಳ್ಳುವಲ್ಲಿ ವ್ಯಸ್ತವಾಗಿದೆ. ಎಲ್ಲ ರೀತಿಯ ಸಮರೋಪಯೋಗಿ ಶಸಾಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳುವುದಕ್ಕೂ ಉತ್ಪಾದಿಸುವುದಕ್ಕೂ ತೀವ್ರ ಗಮನ ಹರಿಸಿದೆ. ಮಾತ್ರವಲ್ಲ, ಜನತೆ ಧೈರ್ಯಗೆಡದೆ ಧೈರ್ಯದಿಂದ ಒದಗಿ ಬಂದ ಪರಿಸ್ಥಿತಿಯನ್ನು ವೀರ ಮೂಯೆ ಧೀರ ಪುತ್ರರಂತೆ ಎದುರಿಸಬೇಕು ಎಂದು ಕರೆಯಿತ್ತಿದೆ. ರಕ್ಷಣಾ ಧೀರಕ್ಕಾಷ್ಟೆ ಬದ್ಧರಾದ ಸೈನಿಕರಿಗೆ ಸರ್ವವಿಧದ ನೆರವು ನೀಡಬೇಕೆಂದು ಕರೆಯಿತ್ತಿದೆ. ಈಗಾಗಲೇ ದೇಶದ ಎಲ್ಲ ಮೂಲೆಗಳಿಂದಲೂ ಅಸಂಖ್ಯಾತ ಪ್ರಮಾಣದಲ್ಲಿ ನಗದು ಮತ್ತು ಚಿನ್ನದ ರೂಪದಲ್ಲಿ ಧನಸಂಗ್ರಹವಾಗುತ್ತಿದೆ. ನಮ್ಮ ಸಂಪೂರ್ಣ ಶಕ್ತಿಯಿಂದ ಚೀನೀಯ ಆಕ್ರಮಣಕಾರರನ್ನು ಹಿಮ್ಮೆಟ್ಟಿಸುವಲ್ಲಿ ಕೆಲವೆಡೆ ಯಶಸನ್ನೂ ನಾವು ಪಡೆದಿದ್ದೇವೆ. ಆದರೆ, ಬಹು ಸಂಖ್ಯಾಕ ಸೇನೆಯಿಂದ ಕೂಡಿದ ಚೀನಿಯ ರಾಕ್ಷಸರನ್ನು ಹೊರದಬ್ಬ ಬೇಕಾದರೆ, ಇನ್ನೂ ಕೆಲವು ಕಾಲ ಬೇಕಾಗಬಹುದು; ನಮ್ಮ ಜನತೆ ಇನ್ನೂ ಹೆಚ್ಚಿನ ತ್ಯಾಗ ಮಾಡಬೇಕಾಗಲೂ ಬಹುದು. ಆದರೆ, ಮಾತೃಭೂಮಿ ರಕ್ಷಣಾ ಕಾರ್ಯದಲ್ಲಿ ವಂಚಕರಾದ ಚೀನಿಯರನ್ನು ಸಮರ್ಥವಾಗಿ ಎದರಿಸುವಲ್ಲಿ ನಾವು ಹಿಂದಾಗಲಾರೆವು. ಜಗತ್ತಿನ ಎಲ್ಲ ಸಾರ್ವಭೌಮ ರಾಷ್ಟ್ರಗಳ ಸಹಾನುಭೂತಿ ಸಹಾಯಗಳು ನಮ್ಮ ಕಡೆಗಿವೆ. ಹಾಗಿರುವಾಗ, ಯುದ್ಧ ಸಿದ್ಧಿಗೆ ದೇಣಿಗೆಯಿತ್ತು, ಸೈನಿಕರಿಗೆ ಸಹಾಯ ವಿತ್ತು, ತಮ್ಮ ಶಕ್ತಿಗೆ ಮೀರಿ ಪ್ರಯತ್ನಿಸಿ ದೇಶದ ಪಾವಿತ್ರ್ಯವನ್ನೂ ಸಾರ್ವಭೌಮತೆಯನ್ನೂ ಸಂರಕ್ಷಿಸವಿರಿಸುವುದು ಪ್ರತ್ಯೇಕ ನಾಗರಿಕನ ಪ್ರಥಮ ಕರ್ತವ್ಯ. ಮನೆಗೆ ಬೆಂಕಿ ಬಿದ್ದಾಗ, ಆದನ್ನು ಆರಿಸ ಬೇಡವೆ?

ಚೀನೀಯ ದುರಾಕ್ರಮಣವನ್ನು ಹತ್ತಿಕ್ಕುವಲ್ಲಿ ಒಬ್ಬೊಬ್ಬರೋಕ ಪಂಥದಲ್ಲಿ ನಿಂದು ನಮ್ಮನ್ನು ನಾವು ಉಳಿಸಿಕೊಳ್ಳೋಣ; ದೇಶಕ್ಕಾಗಿ ನಮ್ಮ ಧರ್ಮಸ್ಥವನ್ನೂ ಸಮರ್ಪಿಸೋಣ.

ಚುನಾವಣಾ ಪರಿಣಾಮ

ಉಡುಪಿ ವತ್ತು ಮಂಗಳೂರು ನಗರ ಸಭೆಗಳ ಚುನಾವಣೆಗಳು ಮುಗಿದು ಬಂದ ಫಲಿತಾಂಶವನ್ನು ಗಮನಿಸುವಾಗ, ಎಂದೂ ನಗರಗಳಲ್ಲಿ ಕಾಂಗ್ರೆಸ್ಸು ಬಹುಮತವನ್ನು ಪಡೆದಿದೆ; ಕಾಂಗ್ರೆಸ್ ಪಕ್ಷದ ಮೇಲೆ ತಮಗಿರುವ ವಿಶ್ವಾಸವನ್ನು ಜನತೆ ಪ್ರದರ್ಶಿಸಿ ಮತ್ತೊಮ್ಮೆ ಒಳ್ಳೆಯ ಕೆಲಸವನ್ನೇ ಮಾಡಿದೆ. ಆದರೆ, ಹಿಂದಿನ ನಗರ ಸಭಾ ಸಮಿತಿಗಳಲ್ಲಿದ್ದ ಗುಂಭೀರತೆಯು ಮಾತ್ರ ಆಯ್ಕೆಯಾದ ಸಮಿತಿಯಲ್ಲಿ ಇಲ್ಲವೆಂಬ ದೂರು ಅಲ್ಲಲ್ಲಿ ಕೇಳಿ ಬರುತ್ತಿದೆ. ಇದಕ್ಕೆ ಕಾರಣವೇನು ಎಂಬುದನ್ನು ಕೂಲಂಕಷ ವಿವೇಚನೆಯಿಂದ ಅರಿತುಕೊಳ್ಳಬೇಕು. ಸುಶಿಕ್ಷಿತರು, ಯೋಗ್ಯತಾ ಸಂಪನ್ನರು ಈಗೀಗ ಚುನಾವಣೆಗಳಿಂದ ನಿರ್ಲಿಪ್ತರಾಗುವತ್ತ ವಾಲಿ ಹೋಗುತ್ತಿರುವುದಕ್ಕೆ ರಾಜಕಾರಣದಲ್ಲಿನ ಕುಂದುಕೊರತೆಗಳೇ ಕಾರಣವೆಂದು ಹೇಳುತ್ತಾರೆ. ಇದು ಬಹುಮಟ್ಟಿಗೆ ಸತ್ಯವೆಂದೂ ಒಪ್ಪಿಕೊಳ್ಳಬಹುದು. ಹೀಗಾಗಿ ಸಭಾ ಸಮಿತಿಯ ಮಟ್ಟವು ಇಳಿವರಿಯಾಗುವುದು ಸಂಭವನೀಯ. ಹಾಗಿದ್ದರೂ ಆಯ್ಕೆಗೊಂಡ ಸಭಾಸದರು ತಮ್ಮ ಕರ್ತವ್ಯ ಪರಿಜ್ಞಾನವನ್ನು ಮಾಡಿಕೊಂಡು ನಗರಾಭಿವೃದ್ಧಿಗೆ ನೆರವಾಗುವರೆಂದು ಆಶಿಸುತ್ತೇನೆ. ಬಹುಮತವನ್ನು ಕಾಂಗ್ರೆಸ್ಸಿಗೆ ತಂದು ಕೊಟ್ಟ ಮಾತದಾರರನ್ನು ಅಭಿನಂದಿಸುತ್ತೇನೆ.

ಈ ಬಾರಿಯ ಚುನಾವಣೆಗಳಲ್ಲಿ ಕೆಲವೊಂದು ವೈಪರೀತ್ಯಗಳು ಸಂಭವಿಸಿದಂತೆ ದೃಗ್ಗೋಚರವಾಗುತ್ತಿರುವುದಾದರೂ ಜನತೆಯ ಅಭಿಲಾಷೆಯಿದ್ದಂತೆ ಸನ್ನಿಯಾರು ಆಯ್ಕೆಗೊಂಡಿದ್ದಾರೆಯೆಂದು ಮಾತ್ರ ಹೇಳಬೇಕಾಗುತ್ತದೆ. ಜನರುಬೇಗಿರುವರೋ ಅಂತಹ ಸರಕಾರವು ಪ್ರಜಾಸತ್ತೆಯಲ್ಲಿ ರಚಿಸಲಾಗುವುದು ಎಂದು ಬಲ್ಲವರಿಬಹುದು. ಇದನ್ನು ನಾವು ಒಪ್ಪಿಕೊಂಡರೆ, ಸ್ಫೂರ್ತಿಗೊಂದು. ಸಮರ್ಥವಾದ ದೊರೆತಂತಾಗುವುದು ತುರುಸಿನ ಹೋರಾಟ ಚುನಾವಣೆಯು ವೇಳೆ ನಡೆಯಿತಾದರೂ ನಗರ ಒತ ನಾಧನೆಯಲ್ಲಿ ಇಂತಹ ಹೋರಾಟಗಳು ನಡೆಯದಿರಲಿ ಎಂದು ಸೂತ್ರ ಇಂದು ಅನ್ನ ಬಹುದಾಗಿದೆ. ಸರ್ವದ್ವೀನೇಕಿಗಳ ಈ ಆಶಯವನ್ನು ಆಯ್ಕೆಗೊಂಡ ಸದಸ್ಯರು ಗಮನಿಸಿ ನಗರಾಭಿವೃದ್ಧಿಕಾರ್ಯಗಳಲ್ಲಿ ಹೆಮ್ಮೆಪ್ಪಿನಿಂದ ಕಾರ್ಯಪ್ರವೃತ್ತರಾಗಲೆಂದು ಹಾರೈಸುತ್ತೇವೆ.

— ——

ವಿನಂತಿ

ನಾವು ಈ ಮೊದಲು ಮಾಡಿಕೊಂಡ ವಿನಂತಿಯಂತೆ ಹಲವು ಚಂದಾದಾರರು ತಮ್ಮ ಚಂದಾಹಣವನ್ನು ಕಳಿಸಿ ಕೊಟ್ಟಿದ್ದಾರೆ. ಅವರೆಲ್ಲರಿಗೂ ನಾವೆ ಕೃತಜ್ಞರು. ಇನ್ನೂ ಚಂದಾಹಣ ಕಳಿಸದಿರುವ ಚಂದಾದಾರರು ಈ ವಿನಂತಿಯನ್ನಾದರೂ ಮನ್ನಿಸಿ ತಮ್ಮ ಚಂದಾಹಣವನ್ನು ನಯಮಾಡಿ ಕಳಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕಳಿಸುವ ವಿ. ಪಿ. ಪಿ. ಯನ್ನಾದರೂ ಅನ್ಯಥಾ ಭಾವಿಸದೆ ಸ್ವೀಕರಿಸುವಂತೆ ವಿನಂತಿಸುತ್ತೇನೆ.

—ನೆನೇಜರ್, ನವಯುಗ.

ಶ್ರೀ ಟಿ. ಎ. ಪೈಯವರ ವಿನಂತಿ-

ಜನಜೀವನಕ್ಕೆ ಅತ್ಯಾವಶ್ಯಕವೆನಿಸಿರುವ ಸಾಮಗ್ರಿಗಳಿಗೆ ಇಂತಹ ಕಠಿಣ ಪರಿಸ್ಥಿತಿಯಲ್ಲಿ ಯಾವುದೇ ತರದ ಕೃತಕ ಬೆಲೆಯೇರಿಕೆಯನ್ನು ಉಂಟುಮಾಡದಿರಬೇಕೆಂದು ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಶ್ರೀ ಟಿ. ಎ. ಪೈಯವರು ಬೆಲ್ಲೆಯ ವ್ಯಾಪಾರೀ ಬಂಧುಗಳನ್ನೂ ಇತರರನ್ನೂ ವಿನಂತಿಸಿಕೊಂಡಿದ್ದಾರೆ.

ನಾವೀಗ ಚೀನದೊಂದಿಗೆ ಹೋರಾಡುತ್ತಿದ್ದೇವೆ. ಅದು ಎಷ್ಟು ದೊಡ್ಡದು ಅಥವಾ ಎಷ್ಟು ಸಮಯ ಮುಂದುವರಿಯಬಹುದು ಎಂಬುದು ಯಾರಿಗೂ ತಿಳಿಯದು. ಯಾವುದೇ ರೀತಿಯ ದುಸ್ಸಕ್ತಿಗಳಿಗೆ ಪ್ರಾಮುಖ್ಯತೆಯನ್ನೂ ಎಡೆಯನ್ನೂ ಕೊಡದೆ ಪ್ರತಿಯೊಂದು ಕಾರ್ಖಾನೆಯಲ್ಲಿ ಪ್ರತಿಯೊಂದು ಪಕ್ಷಗಾರಪಕ್ಷ ಉತ್ಪನ್ನವನ್ನು ಹೆಚ್ಚಿಸಿ ಭಾರತದ ರಕ್ಷಣಾ ಶಕ್ತಿಯನ್ನು ವರ್ಧಿಸಲು ನೆರವಾಗಿರಿ ಎಂದು ನಮ್ಮ ಪ್ರಧಾನಿಯವರು ಕರೆಯಿತ್ತಿದ್ದಾರೆ. ಯುದ್ಧಗಳ ಸಮಯದಲ್ಲಾಗುವಾಗ ಬಹಿದಾದ ಕೊರತೆ, ಬೆಲೆ ಏರಿಕೆ, ಕಳ್ಳಸಂತೆ ಮೊದಲಾದ ಸಹಜವಿರೋಧಿ ಚಟುವಟಿಕೆಗಳು ಈ ಸಮಯದಲ್ಲಿ ಹೆಚ್ಚು ಬಾರದು. ಇದಕ್ಕಾಗಿ ತುಂಬಾ ಜಾಗ್ರತೆ ವಹಿಸಬೇಕು. ಬಡ ಜನರು ಸಂಕಷ್ಟ ಪೀಡಿತರಾಗದಂತೆ ಉತ್ತಮ ರೀತಿಯಲ್ಲಿರುವವರು ಗಮನಿಸಬೇಕು ಸಾಮಗ್ರಿಗಳಿಗೆ ಯಾವುದೇ ಕೃತಕ ಬೆಲೆಯೇರದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅಂತೆಯೇ ಇಡಸ್ಸರಿತ ವ್ಯಾಪಾರಿ ಬಂಧುಗಳು ಸಾಮಾಜಿಕ ಹಿತ ದೃಷ್ಟಿಯಿಂದ ಸಮಾನ ರೀತಿಯಲ್ಲಿ ನಡೆದುಕೊಳ್ಳುವರೆಂದು ನನ್ನ ನಂಬಿಕೆ. ನಮಗೆ ಅವಶ್ಯಕವಿರುವ ಸಾಮಾನ್ಯ ಎಲ್ಲಾ ಸಾಮಗ್ರಿಗಳನ್ನು ನಾವು ನಮ್ಮಲ್ಲಿಯೇ ತಯಾರಿಸುತ್ತಿರುವುದರಿಂದ, ಅವುಗಳ ಮಾರಾಟಕ್ಕೆ ಯಾವ ಪ್ರಸಂಗಗಳು ಹೆಚ್ಚಿಗೆ ಇಲ್ಲ. ಹೀಗಿರುವಾಗ ನಮ್ಮಲ್ಲಿ ತಯಾರಾಗುವ ಸಾಮಗ್ರಿಗಳಿಗೆ ಬೆಲೆ ಹೆಚ್ಚಾಗುವುದಿದ್ದರೆ ಅದರಲ್ಲಿ ಯಾವ ನ್ಯಾಯವೂ ಇಲ್ಲ ಯಾವುದೇ ಪರಿಸ್ಥಿತಿಯಲ್ಲಿ ಕೃತಕ ಬೆಲೆಯ ಸುಳಿವು ಕಂಡಲ್ಲಿ ಸರ್ವವಿಧದಿಂದಲೂ ಅದನ್ನು ಅಡಗಿಸಬೇಕಾಗಿರುವುದು ಅತೀ ಅಗತ್ಯ ಎಂದು ಶ್ರೀ ಪೈಯವರು ವಿನಂತಿಸಿದ್ದಾರೆ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ನಗರ ಸಭೆಯ ಚುನಾವಣಾ ಫಲಿತಾಂಶ—

ಉಡುಪಿ ನಗರ ಸಭೆಯ ಚುನಾವಣೆಯು ಸಲುವಾಗಿ ಕಳೆದ ತಾ. 24ರಂದು ಶಾಂತರೀತಿಯಲ್ಲಿ ಮತದಾನ ನಡೆದು ಮರುದಿನ ಮತಗಣನೆಯೊಗಿ ಉಡುಪಿ ನಗರ ಸಭೆಯ 17ವಾರ್ಡುಗಳ 20ಸ್ಥಾನಗಳಲ್ಲಿ (ಮಹಿಳೆಯರಿಗೆ ಕಾದಿಟ್ಟ ಸ್ಥಾನ 2. ಪ್ರಜಾನರಿಗೆ ಒಂದು) 20ಸ್ಥಾನಗಳಿಗೂ ಸ್ಪರ್ಧಿಸಿದ್ದ ಕಾಂಗ್ರೆಸ್ 12 ಸ್ಥಾನಗಳನ್ನು ಗೆದ್ದು ಬಹುಮತ ಗಳಿಸಿದೆ ಇತರೆಗಳಲ್ಲಿ 5ಸ್ಥಾನಗಳು ಮೊದಲೇ ಅವಿರೋಧವಾಗಿ ಪಡೆದಿರುವುದಾಗಿದೆ. ಚುನಾವಣೆಯೂದ 15ಸ್ಥಾನಗಳಿಂದ ಹೆಚ್ಚಿಗಿ 7ಸ್ಥಾನಗಳನ್ನು ಕಾಂಗ್ರೆಸ್ ಗಳಿಸಿದೆ. ಉಳಿದ 8ರಲ್ಲಿ 1ಸ್ಥಾನವನ್ನು ಜನಸಂಘವು 7ನ್ನು ಕಮ್ಯುನಿಸ್ಟ್ ಬೆಂಬಲಿತ ಸ್ವತಂತ್ರರು ಮತ್ತು ಸ್ವಯಂ ಸ್ವತಂತ್ರರು ಸಂಪಾದಿಸಿದ್ದಾರೆ

ಅವಿರೋಧವಾಗಿ ಚುನಾಯಿತರಾದ ಕಾಂಗ್ರೆಸ್ ಸದಸ್ಯರು—

1. ಅಂಬಲಪಾಡಿ ವಾರ್ಡು — ಬಿ ಅಪ್ಪಾಜಿ ರಾವ್.
2. ಬೈಲೂರು ,, ಓ. ಮೆ ಕಾ
3. ಕಾಡಬೆಟ್ಟು (2ಸೀಟು) ಗೋಪಾಲ ಕೃಷ್ಣ (ಕಾದಿಟ್ಟ ಹರಿಜನ ಸ್ಥಾನ)
   ,, ಇರ್ವಿನ್ ಅಂದ್ರಾದೆ
4. ಬನ್ನಂಜೆ ,, ಎಂ. ವಿಠಲ ಶೆಟ್ಟಿ.

ಚುನಾವಣೆಯಲ್ಲಿ ಆರಿಸಿಬಂದವರು—

(ಆರಿಸಿಬಂದವರ ಹೆಸರುಗಳನ್ನು ವಸ್ತು ಅಕ್ಷರಗಳಲ್ಲಿ ಕೊಟ್ಟಿದೆ.)

5. ಗುಂಡಿಬೈಲು (2 ಸೀಟು)

ಕಾಳಪ್ಪ ನೆಟ್ಟೆ (ಸ್ವ) 387.

ವೆಲೆಂಟೈನ್ ವಾಲ್ಟರ್— (ಸ್ವ. ಸುಹೆಯರಿಗೆ ಕಾದಿಟ್ಟ ಸ್ಥಾನ) 310

ಯು. ಬಿ ಪ್ರಭಾಕರ ರಾವ್(ಕಾಂ)326

ರಾಧಾ (ಕಾಂ.) 263

6. ಕಡಿಯೂಳಿ— ದೇವದಾಸ ಶೆಟ್ಟಿ (ಜ ಸಂ) 256

ಅನಂತರಾಮ ಉಪಾಧ್ಯಾಯ(ಕಾಂ)197

7. ಕುಂಜಿಬೆಟ್ಟು— ಜನಾಯ ತೋಲ್ಲ (ಸ್ವ) 348

ಬಿ. ವಾಸುದೇವಯ್ಯ (ಕಾಂ) 298

8. ಟೌಪರ್ ವಾರ್ಡು — ಆರ್. ಎನ್. ಪಾಂಗಣ್ಣಾಯ (ಸ್ವ) 242.

ಎ. ಜೆ. ಆಲ್ಬೆ (ಕಾಂ.) 169

9 ಪಣಿಯೂಣಿ — ಎಂ. ಎಂ. ಮಧ್ವಸ್ಥ (ಕಾಂ) 258

ಕೆ. ಅನಂತಕೃಷ್ಣ (ಜ. ಸ) 238.

10 ತೆಂಕುಮಣಿಪಾಲ— ಪಿ. ರಂಗನಾಥ ಶೆಣೈ (ಕಾಂ) 361.

ಎಂ. ವಿಠಲ ಕಿಣಿ (ಜ. ಸ) 282.

11. ಸೆಂಟ್ರಲ್— ಕೆ. ಕೇಶವ ಕಾಮತ್ (ಕಾ) 331.

ವಿ. ಪದ್ಮನಾಭ ನಾಯಕ್ (ಸ್ವ).

12. ಶಿವಳ್ಳಿ— ಬಾಬುಜಿನ್ ಸಾಹೇಬ್ (ಕಾಂ) 289.

ಕೆ. ದಾಸ ಸೇರಿಗಾರ (ಸ್ವ) 201.

13. ಮಾಬಸ್ತಿಕಟ್ಟೆ— ನಾರಾಯಣ ಸೇರಿಗಾರ (ಸ್ವ) 275.

ಯು. ರಾಮರಾವ್ (ಕಾಂ) 207

14 ಕನ್ನರ್ಪಾಡಿ — ಡೇನಿಸ್ ಸಲ್ದಾನ್ನ (ಕಾಂ) 294

ಗಂಗಯ್ಯ ಸೇರಿಗಾರ (ಸ್ವ) 283

15. ಕನ್ನಿಮಾಲ್ಕಿ— ಚಂದ್ರಶೇಖರ ಸೆಟ್ಟಿಗಾರ (ಕಾಂ) 279

ಎನ್. ಕೆ. ಆರ್ ಹೆಬ್ಬಾರ್ (ಸ್ವ) 212

16. ಒಳಕಾಡು— ರಾಧಾಕೃಷ್ಣ ಶೆಟ್ಟಿ (ಕಾಂ) 310

ಎನ್. ರಾಮಚಾಸ್ ನಾಯಕ್ (ಜ. ಸ) 160

ಅಜ್ಜರಕಾಡು (2 ಸೀಟು)

ಎನ್. ಸೀತಾರಾಮ ಕಾಮತ್(ಸ್ವ)197

ಸುಮತೀ ರಾವ್ (ಸ್ವ. ಮಹಿಳೆಯರಿಗೆ ಕಾದಿಟ್ಟ ಸ್ಥಾನ) 207.

ಎಚ್. ಶೇಖರೇಶ ನಾಯಕ್(ಕಾಂ.)178

ಸಿರಿನ್ ಸಿಕ್ವೇರ, (ಕಾಂ ಜೊಗಸರಿಗೆ ಕಾದಿಟ್ಟ ಸ್ಥಾನ) 168

ಮೈಸೂರು ಕೆಥೊಲಿಕ್ ಯುನಿವರ್ಸಿಟಿ ವಿದ್ಯಾರ್ಥಿ ನಿಲಯಕ್ಕೆ ತರಬೇತಿ ಶಿಬಿರ—

ಮೈಸೂರು ರಾಜ್ಯದ ಕೆಥೊಲಿಕ್ ಯುನಿವರ್ಸಿಟಿ ಹೆಡರೇಶನ್‌ನ ವಾರ್ಷಿಕ ನಾಯಕತ್ವ ತರಬೇತಿ ಶಿಬಿರವು ಕಳೆದ ತಾ. 8ರಿಂದ ತಾ. 18ರ ವರೆಗೆ ಉಡುಪಿಯ ಬ್ಲೆಸ್ಡ್ ಸಿಸಿಲೀಸ್ ರೈಸ್ಕೂಲಿನಲ್ಲಿ ನಡೆಯಿತು. ಈ ಶಿಬಿರವನ್ನು ಉದ್ಘಾಟಿಸುತ್ತಾ ಸುರತ್ಕಲ್ಲಿನ ರೆ ಫಾ. ಪಿ ಮಿಂರಂಜರವರು ಭಾರತೀಕ ಸಂಸ್ಕೃತಿಯ ಸಾಮಾನ್ಯ ಅರ್ಥಕ್ಕೆಪಡೆಗೆ ವಿದ್ಯಾರ್ಥಿಗಳು ಮಾತ್ರವಲ್ಲ ಸಹಕಾರ ಗಮನ ಕೈತಂದರು ಸಮಾಜವನ್ನು ಭದ್ರವಾದ ತಳಪಡಿಯಲ್ಲಿ ಕಟ್ಟುವಂಥಾದ್ದು ಈ ಸಂಸ್ಥೆಯ ಸದಸ್ಯರ ಜವಾಬ್ದಾರಿಯಾಗಿರುತ್ತಾ ಈ ವಿಚಾರದಲ್ಲಿ ಪ್ರತಿಯೊಬ್ಬರೂ ಭಾವೈಕ್ಯತೆಯಿಂದ ಸ್ಪಂದಿಸಬೇಕೆಂತ ಕಾರ್ಯಾಗಾರಗಳು ಪ್ರೇರಿಯಬೇಕೆಂದು ವಿದ್ಯಾರ್ಥಿಗಳನ್ನು ವಿನಂತಿಸಿದರು.

ಆರಂಭದಲ್ಲಿ ಹೆಡರೇಶನ್‌ನ ಅಧ್ಯಕ್ಷ ಶ್ರೀ ಶಿತ್ತಾರ್ಡಿ ವಿಲಿಯಂ ಪಿಂಟೊರವರು ತಮ್ಮ ಸ್ವಾಗತ ಭಾಷಣದಲ್ಲಿ ೬ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಈ ಸಂಘದ ಚಟುವಟಿಕೆಗಳನ್ನು ವಿವರಿಸಿ ಈ ವಿಶೇಷದಲ್ಲಿ ರೆ ಫಾ. ಸಿಲ್ವೆಸ್ಟರ್ ಡಿಸೋಜರ ಕಾರ್ಯದಕ್ಷತೆಯನ್ನು ಕೊಂಡಾಡಿದರು ಸುರತ್ಕಲ್ ನಿಟ್ಟೆ ಫೆಸನ್ ಯುನಿಟಿನ ಶ್ರೀ ನೆವಿಲ್ ಮಸ್ಕರೇಞಸರು ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಪೌಂಗಳೂರು ಸೈಂಟ್ ಸಿಸಿಲೀಸ್ ಕಾಲೇಜಿನ ಯೂನಿಟಿನ ಅಧ್ಯಕ್ಷೆ ಕುಮಾರಿ ಲೀಲಾ ಸಲ್ದಾನರವರು ಧನ್ಯವಾದ ಸಮರ್ಪಿಸಿದರು.

ಉಡುಪಿಯಲ್ಲಿ ಪ್ರಥಮ ಬಾರಿಯಾಗಿ ಜರಗಿದ ಈ ಶಿಬಿರದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ಉತ್ತರ ಕೆಡೆಗಿಂದ 20 ಪ್ರತಿನಿಧಿಗಳು ಬ್ಯಾಗವಹಿಸಿದ್ದರು ಕಾರ್ಯಕ್ರಮದಲ್ಲಿ ಯುನಿವರ್ಸಿಟಿ ವಿದ್ಯಾರ್ಥಿ ಜೀವನದಲ್ಲಿ ಪ್ರಾರ್ಥನೆಯ ಮಹತ್ವ" ಎಂಬ ವಿಷಯದ ಮೇಲೆ ವಿಚಾರ ವಿನಿಮಯ. ಸಾರ್ವಜನಿಕ ಭಾಷಣ ತರಬೇತಿ, ಶ್ರಮದಾನ ಮೊದಲಾದ ಕಾರ್ಯಕ್ರಮಗಳಿದ್ದವು. ಪ್ರಾರ್ಥನೆಯ ವಿವಿಧ ವಿಚಾರಗಳ ಮೇಲೆ ರಾ ಜೆ ಅರೆಕ್ಸಾಂಡರ್, ರಾ ಜೆ ಡಿ ವೇಲಿಯತ್ ಗಾರ್ನೆಟ್ ರೇಗೊ ಮತ್ತು ಮೊರ್ಸೆಲ್ ಡಿಸೋಜ ಇವರುಭಾಷಣ ಮಾಡಿದರು ಶ್ರೀ ವಿಲಿಯಂ ಪಿಂಟೊ ಶಿತ್ತಾರ್ಡಿ ಇವರು ಈ ತರಬೇತಿ ಶಿಬಿರದ ನಾಯಕರಾಗಿದ್ದರು.

ಯು ಎನ್. ಒ ದಿನಾಚರಣೆ

ಉಡುಪಿ ಮೋಡರ್ನ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಯು. ಎನ್. ಒ. ದಿನಾಚರಣೆಯು ತಾ 25—10—62ರಂದು ಉಡುಪಿ ಬೋರ್ಡ್ ಆಫ್ ಸ್ಕೂಲಿನ ಅಧ್ಯಾಪಕ ಶ್ರೀ ಬಿ. ಆನಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿನಿಯೊಡ ಬಳಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್ ಎಲ್. ಭಟ್ಟರು ಸ್ವಾಗತಿಸಿದರು. ವಿದ್ಯಾರ್ಥಿಗಳಿಂದ ಯುಕ್ತ ರಾಷ್ಟ್ರ ಸಂಘದ ಆಗಿಕ ಅಭಿವೃದ್ಧಿಯ ಪ್ರಚಾರಗಿತು ಭಾರತದ ಅಣ್ವಸ್ತ್ರ ನಿಷೇಧದ ಠರಾವನ್ನು ಚರ್ಚಿಸಲ್ಪಟ್ಟು ಮಂಜೂರಾಯಿತು. ಅಧ್ಯಕ್ಷರು ಯುಕ್ತರಾಷ್ಟ್ರ ಸಂಘದ ಸ್ಥಾಪನೆ ಧ್ಯೇಯ ಧೋರಣೆಗಳ ಮತ್ತು ಕಾರ್ಯ ಸಾಧನೆಗಳ ಕುರಿತು ಮಾತನಾಡಿದರು. ಕೊನೆಯಲ್ಲಿ ಅಧ್ಯಾಪಕ ಶ್ರೀ ಕೆ. ರಮಾನಾಥರಾಯರು ಧನ್ಯವಾದಗಳನ್ನು ಅರ್ಪಿಸಿದರು.

'ಗಂಗಾವತಿ ಕ್ಲೆನಿಕ್'—

ಡಾ. ಬಿ. ರತ್ನಾಕರ ಹೆಗ್ಡೆ ಚಿ ಸಿ. ಪಿ. ಎಂ.(ಮದ್ರಾಸ್) ರವರು 'ಗಂಗಾವತಿಯಲ್ಲಿ ತೊಡಗಿದ ಸೂತನ ಗಂಗಾವತಿ ಕ್ಲೆನಿಕ್'ನ ಸ್ಥಾರಂಭೋತ್ಸವವು ತಾ. 31—10—62ನೇ ಬುಧವಾರ ವಿಜೃಂಭಣೆಯಿಂದ ನೆರವೇರಿತು.

ಅಂಬಲ್ಪಾಡಿ—

ಪಂರೆಯಲ್ಲಿ ಪ್ರತಿ ಯಂತೆ ದೀಪಾವಳಿ ಬಲಿಪಾಡ್ಯದ ದಿನಾಚರಣೆಯು ತಾ. 29ರಂದು ಕ್ರಿಶ್ಚಿಯನ್ ಡ್ಯಾಸ್ಕೂ

ವಾರ್ತಾ ಪೇದಿಕೆ

ಕೃಷ್ಣ ಮೆನನ್

ದೇಶದ ಸಂರಕ್ಷಣಾ ಮಂತ್ರಿ ವಿ. ಕೆ. ಕೃಷ್ಣಮೆನನ್ನರ ಮೇಲೆ ಕೆಲವು ಕಾಂಗ್ರೆಸ್ ನಿಗರಿಗೂ ವಿಶ್ವಾಸವಿಲ್ಲ. ಅವರೆ ಪಂಡಿತ ನೆಹರೂರವರ ವರ ಸ್ನೇಹಿತರಾದ ಅವರಮೇಲೆ ಇದೆ. ಉತ್ತರ ಮುಂಬಯಿಯಲ್ಲಿ ವಿರೋಧಿ ಪಕ್ಷಗಳ ಒಕ್ಕೂಟದ ಬೆಂಬಲದಿಂದ ಸ್ವತಂತ್ರ ಪಕ್ಷಾಭ್ಯರ್ಥಿಯಾಗಿ ನಿಂತ ಕೃಷ್ಣಮೆನನ್ ಅವರು ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದ ಈ ಉಪಚುನಾವಣೆಯ ಫಲಿತಾಂಶವು ಕೃಷ್ಣಮೆನನ್ ಅವರ ಮಂತ್ರಿ ಪದವಿಗೆ ಯಾವ ಅಪಾಯವನ್ನೂ ತಂದಿಲ್ಲ. ಆದರೆ ಈ ಫಲಿತಾಂಶವು ಕೃಷ್ಣಮೆನನ್ ಅವರ ಜನಪ್ರಿಯತೆಯ ಮೇಲೆ ಬೆಳಕು ಚೆಲ್ಲಿದೆ. ಕೃಷ್ಣಮೆನನ್ ಅವರು ಕಾಂಗ್ರೆಸ್ ಪಕ್ಷದ ಸದಸ್ಯರಲ್ಲ. ಆದರೆ ಅವರು ಕಾಂಗ್ರೆಸ್ ಪಕ್ಷದ ಸಹಾಯದಿಂದ ಮಂತ್ರಿಯಾಗಿದ್ದಾರೆ. ಅವರು ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ಚುನಾಯಿತರಾಗಿ ಬಂದಿದ್ದರೆ ಅವರ ಸ್ಥಾನ ಇನ್ನೂ ಭದ್ರವಾಗಿರುತ್ತಿತ್ತು. ಆದರೆ ಅವರು ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ಚುನಾಯಿತರಾಗಿ ಬರಲು ಇಷ್ಟಪಡಲಿಲ್ಲ. ಅವರು ಸ್ವತಂತ್ರ ಪಕ್ಷದ ಸದಸ್ಯರಾಗಿ ಚುನಾಯಿತರಾಗಿ ಬಂದಿದ್ದರೆ ಅವರ ಸ್ಥಾನ ಇನ್ನೂ ಭದ್ರವಾಗಿರುತ್ತಿತ್ತು. ಆದರೆ ಅವರು ಕಾಂಗ್ರೆಸ್ ಪಕ್ಷದ ಸಹಾಯದಿಂದ ಮಂತ್ರಿಯ

ಚೀನೀಯರ ದುರುದೇಶದ ಆಕ್ರಮಣ

(ನಿನ್ನೇ ಪುಟದಿಂದ)

ದ್ದಾರೆ. ಇದಂಲಿ ನಾವೆಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿದ್ದೇವೆ? ಎಂಥದುರ್ದರ ಸನ್ನಿವೇಶದಲ್ಲಿದ್ದೇವೆ. ನಮ್ಮ ಹೊಣೆಗಾರಿಕೆಗಳೇನು? ಕರ್ತವ್ಯಗಳೇನು? ಎಂಬುದನ್ನು ಇಂದು ಭಾರತ ಮಾತೆಯ ಮಕ್ಕಳಾದ ನಾವೆಲ್ಲ ತಡಮಾಡದೆ ಯೋಚಿಸಿ, ನಿರ್ಧಾರಮಾಡಿ ನಮ್ಮ ತಾಯಿಯ ರಕ್ಷಣೆಗೇ ಸ್ಕರ ಕಂಕಣ ಬದ್ಧರಾಗ ಬೇಕಾಗಿದೆ.

ಇಂದು ಭಾರತ—ಚೀನಗಳ ಗಡಿ ವಿವಾದಗಳು ಜಗತ್ತಿನ ಎಲ್ಲಾ ಪ್ರಮುಖ ಹಾಗೂ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳ ಗಮನ ಸೆಳೆದಿದೆ ಜಗತ್ತಿನ ಎರಡು ಶಕ್ತಿಶಾಲಿ ರಾಷ್ಟ್ರಗಳಾದ ರಷ್ಯ ಮತ್ತು ಅಮೇರಿಕೆಗಳು ಕೂಡಾ ಇದರಲ್ಲಿ ತುಂಬಾ ಮುತುವರ್ಜಿ ವಹಿಸಿವೆ ರಷ್ಯದ ಪ್ರಧಾನಿಯೇ ಅವರು ತಾವು ಸಂಧಾನಕ್ಕೆ ಬರುವುದಾಗಿ ತಿಳಿಸಿದ್ದಾರೆ. ಆದರೆ ಚೀನಾ ಆಕ್ರಮಿತ ಪ್ರದೇಶಗಳಿಂದ ಹಿಂಜರಿಯದೆ ಸಂಧಾನದ ಪ್ರಶ್ನೆಯಿಲ್ಲವೆಂದು ಸ್ಪಷ್ಟವಾಗಿ ಭಾರತ ತಿಳಿಸಿದೆ.

ಬ್ರಿಟನ್ನಿನಿಂದ ಆವಶ್ಯಕ ಹಸ್ತಚಾಲಿತ ಅಸ್ತ್ರಗಳನ್ನು ಭಾರತ ತರಿಸಿದೆ. ಪ್ರಧಾನಿ ಮ್ಯಾಕ್‌ಮಿಲ್ಲನ್ನರು ನೆಹರೂರವರೊಡನೆ ಪ್ರತಿಕ್ಷಣ ಕ್ಷಣಕ್ಕೂ ಟೆಲಿಫೋನ್ ಮೂಲಕ ಸಂಪರ್ಕವಿರಿಸಿಕೊಂಡಿದ್ದಾರೆ. ಈಜಿಪ್ತದ ಅಧ್ಯಕ್ಷ ನಸ್ಸೇರರು ಒಂದು ಆಫ್ರೋ—ಏಶ್ಯ ಮತ್ತು ಯುರೇಷ್ಯ ರಾಷ್ಟ್ರಗಳ ಸಮ್ಮೇಲನ ಜರಗಿಸಿ ಈ ಸಮಸ್ಯೆಯನ್ನು ಪರಿಹರಿಸುವ ಸಿದ್ಧತೆ ಮಾಡತ್ತಿದ್ದಾರೆ. ಜಗತ್ತಿನ ಶಾಂತಿಪ್ರಿಯ ಹಾಗೂ ಸ್ವಾತಂತ್ರ್ಯಪ್ರಿಯವಾದ ಎಲ್ಲಾ ರಾಷ್ಟ್ರಗಳ ಒಲವು, ಸಹಕಾರ, ಸಹಾನುಭೂತಿ ಹಾಗೂ ವಿಶ್ವಾಸ ಇಂದು ಭಾರತದ ಕಡೆಗಿದೆ, ಎಂಬುದು ಸರ್ವವಿಶ್ರುತ. ಯಾಗಿದ್ದರೂ ರಷ್ಯದ ಧೋರಣೆ ಮಾತ್ರ ಈಗ ತಾಟಸ್ಥ್ಯವೆಂದು ಹೇಳಲಾಗುವಂತಿಲ್ಲ. ಆಲ್ಲಿನ ಸರಕಾರಿ ಪತ್ರಿಕೆ 'ಪ್ರಾವ್ದಾ'ವು ಚೀನಿಯರ ಶಾಂತಿಸ್ನೇಹತೆ, ಮತ್ತು ನ್ಯಾಯ ಪ್ರಿಯತೆಗಳ ಹಾಗೂ, ಗಡಿರಕ್ಷಣೆಗೋಸ್ಕರ ಮಾಡುತ್ತಿರುವ ಯುದ್ಧವನ್ನು ಸಮರ್ಥಿಸಿ, ಪ್ರಶಂಸಿಸಿ ಎದುರು ಪುಟದಲ್ಲೇ ಬರೆಯುತ್ತಿದೆ. ಆದೇನೇ ಇದ್ದರೂ ರಷ್ಯ ಈ ತನಕ ಚೀನಕ್ಕೆ ಶಸ್ತ್ರಾಸ್ತ್ರಗಳನ್ನು ಕೊಟ್ಟಲ್ಲವೆಂದು ತಿಳಿದುಬಂದಿದೆ.

ಇಂದು ಜಗತ್ತಿನಲ್ಲೆಲ್ಲಾ ಯುದ್ಧದ ಭೀಕರ ಸೂಚನೆಯೇ ಕಂಡುಬರುತ್ತಿದೆ. ಕ್ಯೂಬಾದಲ್ಲಿ ಅಮೇರಿಕಾ–ರಷ್ಯಗಳೇ ಘರ್ಷಣೆ ಮಾಡಿಕೊಳ್ಳುವಂತೆ ತೋರುತ್ತಿದೆ. ಪರಸ್ಪರ ತಪ್ಪುತಿಳುವಳಿಕೆಗಳೇ ಭಿನ್ನಾಭಪ್ರಾಯಕ್ಕೆ ನಾಂದಿಯೆಂಬುದರಿಂದ ರಶ್ಯ—ಅಮೆರಿಕೆಗಳ ತುಮುಲವು ಪ್ರಾರಂಭವಾದಂತೆ ಗೋಚರವಾದರೂ ಅದು ತುಸು ಶಾಂತಿಗೊಂಡಂತಿದೆ. ಇದರಲ್ಲಿ ಸಂಯುಕ್ತ ರಾಷ್ಟ್ರ ಸಂಘದ ತಾತ್ಕಾಲಿಕ ಪ್ರಧಾನ ಕಾರ್ಯದರ್ಶಿಯು ಥಾಂಟರ ಪಾತ್ರವೂ ಮಹತ್ವಪೂರ್ಣವಾಗಿದೆ.

ಹೀಗೆ ಯುದ್ಧದ ಕಾರ್ಮೋಡವು ಭಾರತದ ಉತ್ತರದ ಗಡಿಯಲ್ಲಿ ಬಹುದಟ್ಟವಾಗಿ ಹರಡಿದೆ. ಗುಡುಗುತ್ತಿದೆ. ಹನಿ ಹನಿ ಮಳೆಯೂ ಸುರಿಯುತ್ತಿದೆ. ಇನ್ನು ಒನಕೆ ಧಾರೆಯ ಸೋನೆ ಸುರಿಯುವುದಷ್ಟೇ ಬಾಕಿ. ಭಾರತವು ಚೀನಾದ ಆಕ್ರಮಣವನ್ನು ಎದುರಿಸಿ, ಅವರಿಂದ ದೇಶವನ್ನು ಮುಕ್ತಗೊಳಿಸುವ ದೃಢ ನಿರ್ಧಾರ ಮಾಡಿದೆ, ತಕ್ಕ ವ್ಯವಸ್ಥೆಯನ್ನೂ ಮಾಡಿದೆ; ಮಾಡುತ್ತಿದೆ. ಭಾರತದ ನ್ಯಾಯ ನೀತಿಗೆ ಜಗತ್ತಿಗೆ ಜಗತ್ತೇ ಮೆಚ್ಚಿ ತಲೆದೂಗುತ್ತಿರುವಾಗ, ಚೀನೀಯ ರಾಕ್ಷಸನನ್ನು ಅವನೂರಿಗೆ ಓಡಿಸುವ ದಿನ ಬಹುದೂರವಿಲ್ಲ. ಈ ಕಾರ್ಯಕ್ಕೆ ಭಾರತೀಯರೆಲ್ಲರೂ ಕಟಿಬದ್ಧರಾಗಿದ್ದಾರೆ.

ಭಾರತ–ಚೀನ ಬಿಕ್ಕಟ್ಟು

(ನಿನ್ನೆ ಪುಟದಿಂದ)

ನ್ನು ಮೂರಲ್ಲೊಪ್ಪಿದ್ದು ಚೀನದವರನ್ನು ಕೆರಳಿಸಿದೆಯೆಂದು ಕೆಲವರನ್ನತ್ತಿದ್ದರೂ ಭಾರತ ಮತ್ತು ಚೀನಗಳೊಳಗೆ ಭೀಕರ ಯುದ್ಧ ಪ್ರಾರಂಭವಾದಲ್ಲಿ ರಷ್ಯವು ನಮಗೆ ಸಹಾಯ ಮಾಡೀತೆನ್ನುವ ಧೈರ್ಯ ಬಹು ಮಂದಿಗೆ ಇದ್ದಂತೆ ಕಾಣುವುದಿಲ್ಲ. ಅಂತಹ ಕರಿಣ ಸಂದರ್ಭ ಎಂದೂ ಬರಲಾರದೆಂದು ಹಾರೈಸುವ.

ನಮ್ಮ ದೇಶದ ಒಂದಕ್ಷಣೆ ಪರರಾಷ್ಟ್ರಗಳ ಸಹಾಯದ ಮೇಲೆ ಹೊಂದಿಕೊಂಡಿರಬಾರದು. ನಮ್ಮ ಜನರು ತಮ್ಮ ಚಿಕ್ಕ ಪುಟ್ಟ ಜಗಳಗಳನ್ನೆಲ್ಲ ಮರೆತು ಒಂದಾಗಿ ದೇಶಾಭಿಮಾನವನ್ನು ವ್ಯಕ್ತಪಡಿಸಬೇಕು. ತಮ್ಮ ತಮ್ಮ ಕಾರ್ಯವನ್ನು ಇನ್ನಷ್ಟು ನಿರತೆಯಿಂದ ವಹಿಸಿ ದೇಶದ ಕೃಷಿ ಮತ್ತು ಕೈಗಾರಿಕೆಯಲ್ಲಿ ಉತ್ಪಾದನೆಯನ್ನು ಹೆಚ್ಚಿಸಿದರೆ ಮಾತ್ರ ಚೀನ ಬಗೆದ ದ್ರೋಹಕ್ಕೆ ತಕ್ಕ ಪ್ರತಿಕ್ರಿಯೆಯಾಗುವುದು. ಚೀನವು ಆಕ್ರಮವಾಗಿ ಆವರಿಸಿಕೊಂಡಿರುವ ನಮ್ಮ ದೇಶದ ಭಾಗವನ್ನು ಪುನಃ ಪಡೆಯಲು ಬಹು ಸಮಯ ಹೋರಾಡಬೇಕಾದೀತು. ಇಷ್ಟು ಸಂಕಟದ ಪರಿಸ್ಥಿತಿ ಭಾರತೀಯರಿಗೆ ಸ್ವಾತಂತ್ರ್ಯ ಸಿಕ್ಕಿದ ಹದಿನೈದು ವರ್ಷಗಳಿಂದ ಬಂದಿಲ್ಲ. ಇದೊಂದು ಪರೀಕ್ಷಾ ಸಮಯವೆಂಬುದನ್ನು ಮರೆಯಲಾಗದು. ಸತ್ಯಕ್ಕೆ ಜಯ ವಿದೆ.

ಕನಲು ದಾರಿ—ಕೆಂಪು ದೀಪ

ಮಕ್ಕಳಿವರೇನಮ್ಮ ಎರಡೂವರೆ ಕೋಟಿ?

—ಸುದಾಸ.

ಕೆಲವರು ವೈಭವದ ಮೆರವಣಿಗೆಗಾಗಿ ಬದುಕುತ್ತಾರೆ. ಕೆಲವರು ಸಮಾಜಕ ಲ್ಯಾಣಕ್ಕಾಗಿ ತನ್ನ ಸರ್ವಸ್ವವನ್ನು ಧಾರೆ ಎರೆದುಬಿಡುತ್ತಾರೆ. ಅವರು ಸುತ್ತಲಿನ ಸಾವು–ನೋವುಗಳನ್ನು ಗಮನಿಸುವದಿಲ್ಲ. ಇವರು ಅದಕ್ಕಾಗಿ ಕಣ್ಣೀರು ಮಿಡಿಯುವರು. ಅವರಿಗೆ ವಿಲಾಸ ಜೀವನವನ್ನು ಪೂರ್ಣಗೊಳಿಸುವದು ಹೇಗೆ ಎಂಬ ಕಿವಿ. ಇವರಿಗೆ ಕರ್ತವ್ಯಕ್ಕೆ ಚ್ಯುತಿಯಾಗದ ರೀತಿ ಹೇಗೆ ಸೇವೆ ಸಲ್ಲಿಸಲಿ ಎಂಬ ಆತುರ. ಅವರ ದಾರಿ ಅವರಿಗೆ. ಇವರ ದಾರಿ ಇವರಿಗೆ.

ಬದುಕಿದ್ದು ಜನತೆಗಾಗಿ. ಅವರದ್ದು ತುಂಬು ಆದರ್ಶದ ಪರಿಪೂರ್ಣ ಜೀವನ.

ಉಟ್ಟುದು ಖಾದೀ ಬಟ್ಟೆ. ತೊಟ್ಟದ್ದು ದಾರಿದ್ರ್ಯ ದೀಕ್ಷೆ

ಕಾರ್ನಾಡು ಸದಾಶಿವ ರಾಯರು.

ಹಲವು ರಾಜಕೀಯ ವ್ಯಕ್ತಿಗಳಿಗೆ, ದೇಶಭಕ್ತರಿಸಿಕೊಂಡವರಿಗೆ, ಹಿಂದೊಮ್ಮೆ—ಅವರ ಸಂಪತ್ತು ಸೂರೆಗೊಳ್ಳುವ ಕೊನೆಯ ಗಳಿಗೆಯ ವರೆಗೆ–ಸ್ಫೂರ್ತಿಯ ಹೆಸರಾಗಿತ್ತು.

ಸುತ್ತಲಿನ ಜನತೆ ಕಷ್ಟಕಾರ್ಪಣ್ಯಗಳಲ್ಲಿ ಬಳಲುವದನ್ನು ಕಂಡು, ಸಮಾಜದ ಕ್ರೂರ ನಡಾವಳಿಗಳಿಗೆ ಬಲಿಯಾಗುವದನ್ನು ಕಂಡು, ಆ ಹಿರಿಯ ಜೀವ—ನೊಂದವೆದೆಗಳನ್ನು ಸಾಂತ್ವನಗೊಳಿಸಲು ಹೋರಾಡಿ, ಆ ದಾರಿಯಲ್ಲಿ ತಮ್ಮ ಸರ್ವಸ್ವವನ್ನೂ ಕರ್ಪಿಸಿದವರಾಗಿ—

—ಆ ಹೆಸರನ್ನು ಸ್ಮರಿಸುವದು ವಿಹಾ ಪರಾಧವೆನಿಸಿತು, ಆವರ ಆದರ್ಶ ಪ್ರೇಮಿಗಳಿಗೆ (!)

ಆಗ ಆವರೊಮ್ಮೆ ಅಂದರು—ಕೊನೆಗೊಮ್ಮೆ ನಾಡಿಗೆ ಎಚ್ಚರವಿತ್ತರು

ನಾಡು ಎಚ್ಚರಗೊಳ್ಳುವ ದಿನವೊಂದು ಬರುತ್ತದೆ. ನಾನು ಮಾಡಿದ ನಿರ್ಮಲಾಂತಃಕರಣದ ಸೇವೆ ಅಕ್ಷಯವಾಗಿ ಉಳಿಯುವುದು. ಅಧರ್ಮ ಲೋಕದಲ್ಲಿ ಬಹು ಕಾಲ ಬಾಳಲಾರದು—ಎಂಬ ಎಚ್ಚರಿಕೆಯಿತ್ತರು.

ಈ ಸ್ವಾತಂತ್ರ್ಯಪ್ರಿಯನನ್ನು, ನಾಡ ನುಡಿ ಪ್ರಿಯನನ್ನು, ಜನಸೇವಾ ಪ್ರಿಯನನ್ನು, ಮುಂಬಯಿ ಗೌರವ ದಿಂದ ಕಂಡಿತು. ಜನತೆ—ಕನ್ನಡ ಜನತೆ ಮರೆತರೂ, ಭಿನ್ನ ಭಾಷಾ ಜೀವಿಗಳು ಮರೆಯಲಿಲ್ಲ. ಅವರು ತೀರಿಕೊಂಡಾಗ ಸಹಸ್ರಾರು ಮುಖಗಳು ಕಣ್ಣೀರು ಸುರಿಸಿದವು. ವಿಕ್ಟೋರಿಯಾ ಗಾರ್ಡನ್ ಬಳಿಯ ರಸ್ತೆ 'ಕಾರ್ನಾಡ್' ಸದಾಶಿವ ರಾವ್ ಸ್ಟ್ರೀಟ್' ಎಂಬ ಹೆಸರಿನ ಫಲಕ ಹೊತ್ತು ಮೆರೆಯಿತು.

ಇಂದು—ಅಲ್ಲಿ—ಆ ಹೆಸರಿಲ್ಲ. ಯಾಕೆ ಇಲ್ಲ? ಇದು ಮುಂಬಯಿಯ ಕನ್ನಡಿಗರು ಮೂರುವರೆ ಲಕ್ಷದ ಎಣಿಕೆಯಲ್ಲಿ ಎಣಿಸಲ್ಪಡುತ್ತಿರುವ ಮುಂಬಯಿ ಕನ್ನಡಿಗರು ವಿಚಾರಿಸ ಬೇಕಾದ ಪ್ರಶ್ನೆ.

ಡಾ| ಉಗ್ರಾಣಕರ್, ಜಾರ್ಜ್ ಫರ್ನಾಂಡಿಸರಂತಹ ಕೆಚ್ಚೆದೆಯ ಕನ್ನಡಾಭಿನೂನಿಗಳು, ನಗರ ವಾಲಿಕೆಯ ಸದಸ್ಯರಾಗಿರುವಾಗ ಆವರು ಪ್ರಯತ್ನ ಪಟ್ಟರೆ ಇದು ಮಹಾ ಸಮಸ್ಯೆಯನ್ನಿಸೀತೆ?

ಸದಾಶಿವರಾಯರು ನಮ್ಮ ಕಣ್ಮುಂದೆ ಇಲ್ಲ ಆವರು ಹೊತ್ತಿಸಿದ ಆದರ್ಶದ ಸಂಜು ಅಲ್ಲಿ—ಇಲ್ಲಿ ಸುಸ್ಪಷ್ಟವಾಗಿ ಉರಿದು ಕನ್ನಡ ನಾಡನ್ನು ಬೆಳಕಿನ ದಿಶೆಯಲ್ಲಿ ಸಾಗುತ್ತಿದೆ. ಅರಿತುಕೊಳ್ಳುವದೇನು ಮಹಾ? ಅರಿತುಕೊಂಡು ನಡೆಯುವದಷ್ಟೆ ಮಹಾ ಎನಿಸುತ್ತದೆ.

ಕನ್ನಡ ನಾಡಿನ ಪುಣ್ಯ ವಿಶೇಷವೆನಿಸಿ ನಮ್ಮ ಕಣ್ಮುಂದೆ ಇರುವ ಇನ್ನೊಂದು ಹಿರಿಯ ಜೀವ, ಕರ್ನಾಟಕತ್ವದರ್ಶನದ ತಪಸ್ವಿ ಆಲೂರ ವೆಂಕಟರಾಯರು. ಅವರು ಎಲ್ಲರಿಗೂ ಪರಮ ಪೂಜ್ಯರು. ಕುಲಪುರೋಹಿತರೆಂದು ಆವರನ್ನು ಗೌರವಿಸುತ್ತಾರೆ ಆವರೆ ಆವರ ಹಿರಿಯ ಹೆಂಬಲಿ ಕನ್ನಡನಾಡನ್ನು 'ಕರ್ನಾಟಕ' ಎಂಬ ಪದದಿಂದ ಕರೆಯಿರಿ ಎನ್ನುವತ್ತಗವನ್ನು ಕೊಡುವವರೆಷ್ಟು ಮಂದಿಯಿದ್ದಾರೆ? ಆ ಕುರಿತು ಯೋಚಿಸುವಾಗ ನುಡಿ ಹೊರಡುವದಿಲ್ಲ. ಎಷ್ಟೆ ಭಾರವಾಗುತ್ತದೆ.

ಆಂತೆಯೇ—

ಮಕ್ಕಳಿವರೇ ನಮ್ಮ ಎರಡುವರೆ ಕೋಟಿ ಎಂಬ ಕೂಗೊಂದು ಸುತ್ತಲಿನ ನಾಡಿನಿಂದ ಕೂಗಿಡುತ್ತ ಕನ್ನಡಾಂಬೆಯನ್ನು ಆಣಕಿಸುತ್ತಿರುವಂತೆ ಅನಿಸುತ್ತದೆ.

ಕಾರ್ನಾಡು ಸದಾಶಿವರಾಯರೇ ಆವಂತೆ—

ಒಂದುದಿನ ನಾಡೆಎಚ್ಚರಗೊಳ್ಳುತ್ತದೆ. ಮತ್ತೆ ವಿಜಯ ನಗರದ ಸ್ಥಾಪನೆಯಾಗುತ್ತದೆ. ಜನರ ಬದುಕು ಸುಖಶಾಂತಿಯಲ್ಲಿ ಓಲಾಡುವ ಪುಣ್ಯ ದಿನ ಇಂದಲ್ಲ ನಾಳೆ ಬರುತ್ತದೆ.

ಜನರು ಎಚ್ಚರಗೊಳ್ಳುತ್ತಾರೆ. ಕನ್ನಡ ನಾಡಿನ ಕೆಚ್ಚೆದೆಯ ಬಂಟರು ನಾಡಗಡಿಯನ್ನು ಕಟ್ಟುತ್ತಾರೆ. ಕೋಟಿ, ಕೋಟಿ ಬಾಹುಗಳು ಕನ್ನಡದ ಕೋಟೆಯನ್ನು ನಿರ್ಮಿಸುತ್ತವೆ.

ನಾವೇದೂ ಕನ್ನಡನಾಡನ್ನು ತುಂಬಿನ ಬಿಡೆವು—ಎಂದು—ಇಂದು ಪುಕ್ಕಟ್ಟೆ ಬುಕ್ಕರು ಹೇಳಬೇಕು; ಅಭಿನವ ವಿದ್ಯಾರಣ್ಯ ಆಲೂರ ವೆಂಕಟರಾಯರು ಆಶೀರ್ವದಿಸಬೇಕು



A

ಅಮೇರಿಕನ್ ಪಿಸ್ತೂಲ್ ಆಟೋ
ಮೇಟಿಕ್ 6 ಗುಂಡು ಮತ್ತು 50
ಗುಂಡು ನಿಮಗೆ ತೃಪ್ತಿಕರವಾಗದಿದ್ದಲ್ಲಿ
ಹಣ ವಾಪಾಸು ಕೊಡಲಾಗುವುದು.

ತುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜ್ ರೂ. 2

REY ROGAS & CO., 23-A, Anand Nagar, BOMBAY-26

ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ. ನವಯುಗ ಸ್ಟೋರ್ಸ್ ಉಡುಪಿ.

ಭಾರತದ ಅರ್ಥವ್ಯವಸ್ಥೆ

(ಳನೇ ಪುಟದಿಂದ)

ರವೂನ ಪಡೆದು, ವರವೂನಿದ ಮೊತ್ತ ನ್ನು ವಿೂರದಂತೆ ವೆಚ್ಚವನ್ನು ಹಿಡಿತದ ಟ್ಟು ಹೊರಗಿಂದಾಗಲೀ ಒಳಗಿಂದಾಗ ೀ ಪಡೆದ ಸಾಲವನ್ನು ಅದರ ಮೇಲೆ ತೆ ತೀರ್ಕಾಗುವ ಬಡ್ಡಿಗಿಂತ ಹೆಚ್ಚಿನ ವರ ಕೂನ ತರುವ ಉದ್ಯಮದಲ್ಲಿ ಬಳಸಬೇ ು. ಹೀಗೆ ಮಾಡಿದರೆ ಮೊತ್ತ ಜನರಿಗೆ ಮತ್ತು ರಾಷ್ಟ್ರಕ್ಕೆ ಕ್ಷೇಮವಾಗುತ್ತದೆ. ಪದಾರ್ಥಗಳ ಬೆಲೆ ಹಿಡಿತದಲ್ಲಿ ಏಲ್ಲದೆ ಏರುತ್ತ ಹೋಗುವುದು ಈ ಅಪಾಯದ ಚಿಹ್ನೆ ನಮ್ಮ ರಾಷ್ಟ್ರದಲ್ಲಿ ಬಹಳವಾಗಿ ಾಣುತ್ತದೆ.

ನಮ್ಮ ರಾಷ್ಟ್ರ ಒಟ್ಟಿನಲ್ಲಿ ಬಡ ರಾ ಷ್ಟ್ರ. ನಮ್ಮ ಸರಕಾರಗಳ ವರವೂನ, ೀರವಾಗಿ ಕಾದಾಯವಾಗಿ ಬಂದರೂ ುತ್ತ ಬಳಸಿ ತೆರಿಗೆಯಾಗಿ ಬಂದರೂ, ಬ ುವುದು ಬಹುಪಾಲು ಬಡಜನರಿಂದಲೇ. ಮೇಲಿಂದ ಮೇಲೆ ಕಂದಾಯ ಹೆಚ್ಚಿದರೆ ಅದನ್ನು ನೆಲ ಹಿಡಿದ ಬಡವ ತೆರಬೇಕು. ಬಟ್ಟೆಯ ತೆರಿಗೆ ಹೆಚ್ಚಿದರೆ ಅದನ್ನು ಬಟ್ಟೆ ಪಡೆದುಕೊಳ್ಳುವವ ಅಂದರೆ ಬಡವ ಕೊಡ ಬೇಕು ಹತ್ತು ಜನ ಹಣ ಕೊಟ್ಟು ನೂ ು ಜನ ಬದುಕುವುದು ಯಾವ ರಾಷ್ಟ್ರ ದಲ್ಲೂ ಎಲ್ಲೂ ಕಂಡಿಲ್ಲ. ನಮ್ಮಲ್ಲಿ ಇದು ಬೇರೆ ಆಗುವದು ಸಾಧ್ಯ ಇಲ್ಲ

ನಮ್ಮ ಸರಕಾರಗಳು ಈ ಸಂಗತಿಯ ನ್ನು ಮರೆತಂತೆ ಕಾಣುತ್ತದೆ. ವರ್ಷದಿಂದ ವರ್ಷಕ್ಕೆ ಆಡಳಿತದಲ್ಲಿ ಹೊಸ ಶಾಖೆಗಳು; ಒಂದೊಂದರಲ್ಲೂ ನೂರಾರು ಜನ ಅಧಿ ಕಾರಿಗಳು, ಸಾವಿರಾರು ಜನ ಸೇವಕರು. ವುಗಳಲ್ಲಿ ಕೆಲವು ಅಲ್ಪ ಸ್ವಲ್ಪ ವರವೂ ಫ ತರುವುದಕ್ಕೆ ಸಂಬಂಧಪಟ್ಟವುಗಳು. ುಳಿದುವು ಯಾವುದೋ ಹೆಸರಿನಲ್ಲಿ ಜನ ರ ಕ್ಷೇಮವನ್ನು ಸಾಧಿಸುವುವೆವು ಎಂದು ತಲೆಯೆತ್ತಿದವುಗಳು ಈ ರೀತಿ ದೇಶದಲ್ಲಿ ಸರಕಾರದ ಸಂಬಳಗಾರರ ಸಂಖ್ಯೆ ಹೆಚ್ಚಿ ಹೋಗಿದೆ

ಇನ್ನು ಪ್ರಜೆಗಳು ನಡೆಸುತ್ತಿದ್ದ ಹಲವು ೀರನ ಉದ್ಯಮವನ್ನು ಸರಕಾರ ನಡೆಸು ುದಕ್ಕೆ ಕೈಹಾಕಿ ರಾಷ್ಟ್ರದ ವ್ಯವಹಾ ರ ನಾಲ್ಕು ವಿಭಾಗದಲ್ಲಿ ಮೂನ್ನಾಯಿತೆಂದರೆ ತ್ತು ವಿಚಾರಗಳಲ್ಲಿ ಬಣ್ಣಗೆಟ್ಟಿದೆ. ಜನ ಂಗಡಿಯಿಟ್ಟು, ಬಸ್ಸು ನಡೆಸಿ ಜೀವನ ಮಾಡುತ್ತಿದ್ದ ದಿನದಲ್ಲಿ, ಅಂಗಡಿಯಲ್ಲಿ, ಬಸ್ಸಿನಲ್ಲಿ ಒಂದು ರೀತಿಯ ಅನ್ಯಾಯವಿರು ತ್ತಿತ್ತು ಇವನ್ನು ಸರಿಪಡಿಸುತ್ತೇವೆ ಎಂದು ಸರಕಾರ ಅಂಗಡಿಗಳನ್ನು ಇರಿಸಿ, ಬಸ್ಸುಗ ನ್ನು ಓಡಿಸುವ ಕೆಲಸವನ್ನು ತಗೆದುಕೊಂ ತು. ಇದು ಇನ್ನೊಂದು ರೀತಿಯ ಕಷ್ಟ-ನಷ್ಟಕ್ಕೆ ಕಾರಣವಾಯಿತು.

ಜನರು ನಡೆಸಿದಾಗ ಸರಕಾರ ಮೇಲ್ವಿ ಚಾರಣೆ ನೋಡುತ್ತಾ ಅನ್ಯಾಯವನ್ನು ರಿಪಡಿಸೀತು ಎಂಬ ಒಂದು ನಿರಿ ಕ್ಷೆ ಇ ುವಹುದಾಗಿತ್ತು ಇದೇ ವ್ಯವಹಾರವನ್ನು ರಕಾರ ನಡೆಯಿ.ಸ ತೊಡಗಿ ಅನ್ಯಾಯ ಾಗಿದೆ. ಆದರೆ ಇದನ್ನು ಸರಿಪಡಿಸಲು ೀರಿ ಯಾರು ಬರುತ್ತಾರೆ. ಇದರ ಮೇಲೆ ಂತ ಜನ ನಡೆಸಿದ ವ್ಯವಹಾರದಲ್ಲಿ ಂತ ಎಂಬ ಕಾರಣದಿಂದ ಸ್ವಾರ್ಥ ಎಂ ೋಷ ಇರುವಂತೆ. ಶ್ರದ್ಧೆ ಎಂಬ ಗು ಇರುತ್ತದೆ; ವಿನಯವೂ ಇರುತ್ತದೆ. ಗಡಿಗಾರ, ಬಸ್ಸು ಯಜಮಾನ ಜನರ ನ್ನು ಒಲಿಸಿಕೊಳ್ಳಲು, ಆಕರ್ಷಿಸಲು, ಯ ತ್ನ ಮಾಡುತ್ತಾನೆ. ಸರಕಾರ ಒಡೆಯನಾ ದರೆ ಸಂಬಳ ಪಡೆಯುವ ಅದರ ಸೇವಕ ರು ಸ್ವಂತಗಾರರ ವಿನಯದಿಂದ ಶ್ರದ್ಧೆ ಯಿಂದ ನಡೆಯುತ್ತಾರೆ ಎಂದು ತಿಳಿಯು ವುದು ತಪ್ಪು ಇದೊಂದು ಬರೀ ಉಪಾಹ ರಣೆ. ನಮ್ಮ ರಾಷ್ಟ್ರ ಜೀವನದ ನೂರು ವಿವರದಲ್ಲಿ ಒಂದು ತೆರನ ವೈಫಲ್ಯ ತಲೆ ಯಿಕ್ಕಿದೆ. ಜನರಿಗೆ ನೆಚ್ಚಿ ಹೆಚ್ಚು. ಪ್ರ ಯೋಜನ ಕಡಿಮೆ, ಆಗಿದೆ.

ನಮ್ಮ ಸರಕಾರ, ಪ್ರಜೆ, ಪ್ರಭು ಎನ್ನು ವುದು, ಮನಗಾಣದೆ, ತಾನು ಅಧಿಕಾರದ ಲ್ಲಿರುವ ಕಾರಣದಿಂದ ತನ್ನ ಇಷ್ಟದಂತೆ ನಡೆಯುತ್ತ ಜನರ ಅಪೇಕ್ಷೆಯನ್ನು ಕಡೆ ಗಣಿಸಿ ವರ್ತಿಸುತ್ತದೆ ಇದರಿಂದ ರಾಷ್ಟ್ರ ಜೀವನ ನಿವರ—ನಿವರದಲ್ಲಿ ಕಷ್ಟವಾಗು ತ್ತಿದೆ.

ಪದಾರ್ಥದ ಬೆಲೆ ಹೆಚ್ಚಿದಾಗಲೂ ನ ಮ್ಮ ಸರಕಾರದ ನಾಯಕ ವರ್ಗ ಬೇಳೆ ದುದು ''ಬೆಲೆ ಸ್ತಿಮಿತಕ್ಕೆ ತರಲು ಯತ್ನಿ ಸುತ್ತೇವೆ'' ಎಂದು ಮಾತ್ರ ಇದೇ ಅವರ ಗಿಳಿವಾರ ಬೆಲೆಯೇರಿಕೆಯ ಬಗ್ಗೆ ಗಲಭೆ ಗಳಾದರೂ ನಮ್ಮ ಸರಕಾರ ಇದನ್ನು ಗ ಮನಕ್ಕೆ ತೆಗೆದುಕೊಳ್ಳುದುದು ಶೋಚನೀ ಯ. ಆದರೆ ರಾಷ್ಟ್ರದ ಪ್ರಗತಿಯ ದೃ ಷ್ಟಿಯಿಂದ ಇದು ದುಃಖಾಸ್ಪದ.

ರಾಷ್ಟ್ರಕ್ಷೇಮ ಚಿಂತನೆಯ ದೃಷ್ಟಿ ಯಿಂದ ಕೆಲವೊಂದು ಮೂಗ್ಗಗಳನ್ತ ನ ಮ್ಮ ದೃಷ್ಟಿ ಹರಿಯ ಬೇಕು: ತೆರಿಗೆಯ ನ್ನು ಹೆಚ್ಚಿಸಿ, ಜನರ ಒಲವನ್ನು ಕಳೆದು ಕೊಳ್ಳುವುದನ್ನು ಬಿಟ್ಟುಕೊಟ್ಟು ಕಟ್ಟು ನಿಟ್ಟಿನಿಂದ ಕರ ವಸೂಲು ಮಾಡಿ, ಅಪ ನ್ನು ವೆಚ್ಚವಾಡುವಲ್ಲಿ ತೀವ್ರ ಎಚ್ಚರಿಕೆ ವಹಿಸ ಬೇಕು.

ಜನತೆಯು ಮಾಡುತ್ತಿರುವ ಕಾರ್ಯ ಕ್ರಮ ನಾರಿಗೆ ಇಷ್ಟಾದಿಗಳನ್ನು ರಾಷ್ಟ್ರೀ ಕರಿಸುವ ಹುಚ್ಚಿಗೆ ಬೀಳದೆ, ಜನತೆಯಿಂ ದ ಅಸಾಧ್ಯವೆನಿಸುವಂತಹ ಉದ್ಯಮಗಳ ನ್ನಷ್ಟೇ ಸರಕಾರ ಕೈಗೊಳ್ಳಬೇಕು.

ಆದಷ್ಟು ವಿ.ಟ್ಟಿಗೆ, ಪ್ರತಿಯೊಂದು ವಿ ಷಯದಲ್ಲಿಯೂ ಸ್ವಾವಲಂಬನೆಯನ್ನುಳಿ ಸಿಕೊಳ್ಳಲು ಪ್ರಯತ್ನಿಸ ಬೇಕು ಆಡಳಿತೆ ಯ ಶಿಥಿಲತೆಯನ್ನು, ನಿಧಾನತೆಯನ್ನು ದೂರಮಾಡಿ ಒಡಿತವನ್ನೂ ತೀವ್ರತೆಯ ನ್ನೂ ಪ್ರತಿಷ್ಠಾಪಿಸ ಬೇಕು. ಯೋಜನೆ ಗಳಲ್ಲಿ ಸೇ. ೪೦ ಮೊತ್ತ ಜನತೆಯ ಉಪಯೋಗಕ್ಕೆ ದೊ ರೆ ತಿ ದೆ ಯೆಂದ ಕಾಂಗ್ರೆಸ್ ಉಪ ಸಮಿತಿಯ ಅಭಿಪ್ರಾ ಯವನ್ನು ಗಂಭೀರವಾಗಿ ಪರಿಶೀಲಿಸಿ ಮುಂದಿನ ಯೋಜನೆಗಳನ್ನು ಕಾರ್ಯರೂ ಪಕ್ಕೆ ತರುವಾಗ ಹೀಗಾಗದಂತೆ ಎಚ್ಚರ ವಹಿಸಬೇಕು.

ಸ್ವಾವಲಂಬನೆಯ ಮಂತ್ರ, ಜನಪಿತ ನೆ ಗುರಿಯಾಗುವಂತೆ ತಾಳಪ್ಪಿದ ಅರ್ಥ ವ್ಯವಸ್ಥೆಯನ್ನು ಪುನಾ ರೂಪಿಸಬೇಕಾ ಗಿದೆ.

ಕೆನರಾ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ದಾಮೋದರ ಪೈಯವರ ವಿದೇಶ ಪ್ರವಾಸ

ವಿದೇಶ ಪ್ರವಾಸ ಕೈಗೊಳ್ಳಲಿರುವ ಕೆನರಾ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ದಾಮೋದರ ಪೈ ಅವರ ಗೌರವಾರ್ಥವಾಗಿ ವರ್ತಕ ಪ್ರಮುಖರ ಆತಿಥೇಯ ಸಮಿತಿಯವರು ಏರ್ಪಡಿಸಿದ್ದ ಸತ್ಕಾರ ಸಮಾರಂಭದ ಚಿತ್ರ
ಎಡದಿಂದ ಬಲಕ್ಕೆ: ಶ್ರೀ ವೈಕುಂಠ ಬಾಳಿಗ, ಶ್ರೀ ದಾಮೋದರ ಪೈ, ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು

ಬೆಂಗಳೂರು, ಜ. ೩೦ — ಭಾರತೀಯ ವರ್ತಕರು ವಿದೇಶಗಳಿಗೆ ಕಳುಹಿಸುವ ಸ್ಯಾಂ ಪಲ್ ವಸ್ತುಗಳಿಗಿಂತ, ನಂತರ ಮಾರಿದ ವ ಸ್ತುಗಳು ಕೀಳು ಮಟ್ಟದ್ದೆಂಬ ದೂರಿದೆ ಆದು ನಿಜವೊ ಸುಳ್ಳೊ ನಿಜವಾದರೆ ನೈತಿಕವಾಗಿ ಮಾತ್ರವಲ್ಲ ವ್ಯಾಪಾರ ದೃಷ್ಟಿಯಿಂದಲೂ ಇದು ಕೆಟ್ಟದ್ದು ಎಂದು ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಹೇಳಿದ್ದಾರೆ

ರಶ್ಯ ಮತ್ತಿತರ ಪೂರ್ವ ಯುರೋಪ್ ರಾಷ್ಟ್ರಗಳಲ್ಲಿ ಪ್ರವಾಸ ಕೈಗೊಳ್ಳಲಿರುವ ಕೆ ನರಾ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ದಾಮೋದರ ಪೈಯವರಿಗೆ ಸುಖ ಪ್ರಯಾ ಣ ಕೋರಲು ಭೋಜನ ಕೂಟವನ್ನೇರ್ಪಡಿ ಸಿದ್ದ ಸಾರಜ್ಯೋದ್ಯಮಿಗಳನ್ನುದ್ದೇಶಿಸಿ ಮಾ ತನಾಡಿದ ಶ್ರೀ ನಿಜಲಿಂಗಪ್ಪನವರು ಭಾರತಕ್ಕೆ ಅಪೇಕ್ಷಿತ ತರುವಂತಹ ಯಾವುದೇ ಕಾರ್ಯ ವನ್ನು ವರ್ತಕರು ಮಾಡುವುದಿಲ್ಲವೆಂದು ಆಶಿ ಸಿದರು.

ಆತಿಥೇಯರ ಸಮಿತಿ ಪರವಾಗಿ ಶ್ರೀ ಕೆ ವೆಂಕಟರಾಮಣ್ ಶೆಟ್ಟಿಯವರು ಸ್ವಾಗತ ಭಾ ಷಣ ಮಾಡಿದ ನಂತರ ಶ್ರೀ ಕುಮಾರ ಗುಪ್ತ ರವರು ಮತ್ತು ವಿಧಾನ ಸಭಾಧ್ಯಕ್ಷ ಶ್ರೀ ವೈ ಕುಂಠ ಬಾಳಿಗಾರವರು ಸೂತಾನಾಡಿ ಶ್ರೀ ದಾ ಮೋದರ ಪೈಯವರ ಗುಣಗಾನ ಮಾಡಿದರು.

ಶ್ರೀ ದಾಮೋದರ ಪೈಯವರು ತಮ್ಮ ಉ ತ್ತರದಲ್ಲಿ, ಭಾರತದಲ್ಲಿ ಕಮ್ಯುನಿಸ್ಟ್ ಚೀನಾ ಬ್ಯಾಂಕ್ ಕಾರ್ಯಾಲಯವನ್ನು ಮುಚ್ಚಿದುದ ರ ಪರಿಣಾಮವಾಗಿ ಕಮ್ಯುನಿಸ್ಟ್ ರಾಷ್ಟ್ರಗ ಳೊಡನೆ ನಡೆಯಬೇಕಾದ ವಹಿವಾಟು ಬೇರ ತೀಯ ಬ್ಯಾಂಕುಗಳಿಂದ ನಿರ್ವಹಿಸಲ್ಪಡುತ್ತಿ ದೆಯೆಂದೂ ಅದರಲ್ಲಿ ಸಾಕಷ್ಟು ಭಾಗ ಕೆನರಾ ಬ್ಯಾಂಕಿಗೂ ದೊರಕಿದೆಯೆಂದೂ ತಿಳಿಸಿದರು.

ದೀಪಾವಳಿ ಉಡುಗೊರೆಗೆ ಉತ್ತಮ ಪುಸ್ತಕಗಳು

ಸಾಮಾನ್ಯ ಕಾಹಿಲೆಗಳಿಗೆಲ್ಲಾ ಮನೆಯಲ್ಲೆ ನುಡ್ದು ಮಾಡುವ ವಿಧಾನ ವಿವರಿಸುವ

ಮನೆಮದ್ದು ಗೃಹ ವೈದ್ಯ ಬೆಲೆ: ರೂ. ೨

(ಡಾ| ಕೊರಡ್ಡಿಲ್ ವೆಂಕಟ್ರಾವ್ ವಿರಚಿತ)

ಇಂಗ್ಲಿಷ್‌ನಲ್ಲಿ ಪತ್ರ ವ್ಯವಹಾರ ಮಾಡಲು ಪ್ರತಿಯೊಬ್ಬರಿಗೂ ಅತ್ಯನುಕೂಲವಾದ

Letter Writing Made Easy

(ಸುಲಭದಲ್ಲಿ ಪತ್ರ ಲೇಖನ) ಬೆಲೆ: ರೂ 1—4—0

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುತ್ತವೆ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ಸ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು

ದೊರೆಯುತ್ತವೆ

ನವಯುಗ ಪ್ರೆಸ್, ಉಡುಪಿ.

ಪರ್ಯಾತ್ತಾಪ

(೩ನೇ ಪುಟದಿಂದ)

'ಅತ್ತಿಗೆ! ಆದುದು ಆಗಹೋಯಿತು! ಇನ್ನು ಚಿಂತಿಸಬೇಡಿ!' ಎಂದು ಹೇಳುತ್ತ ನಿದ್ರೆಯಿಂದ ಎಚ್ಚರಗೊಳಿಸುತಿದ್ದಾನೆ! ಎಂಬಂತೆ ಸೀತಾ ದೇವಿಗೆ ಭಾಸವಾಗುತ್ತಿರಲು, ಸೀತೆಗೆ ಭಕ್ಷನೆ ಕನಸಿನಿಂದ ಎಚ್ಚರವಾಯಿತು!

ಸೀತೆ ಕಣ್ಣು ತೆರೆದು ನೋಡುತ್ತಾಳೆ! ಅಲ್ಲೇನಿದೆ? ವಿಕಾರ ರೂಪಿಣಿಯರಾದ ರಾಕ್ಷಸಿಯರು, 'ಏಳು! ಏಳು! ಬೇಗ ಎದ್ದೇಳು! ಇನ್ನು ರಾವಣ ಮಹಾರಾಜರು ಬರುವ ಹೊತ್ತಾಯಿತು! ಇನ್ನು ಅವರೇ ನಿಮ್ಮ ಪತಿದೇವರು!' ಎಂದು ಹೇಳುತ್ತ—ಆಕೆಯನ್ನು ಎಬ್ಬಿಸುತ್ತಿದ್ದಾರೆ!

ಸೀತೆಗೆ ತನ್ನ ಈ ಸ್ವಪ್ನವನ್ನು ನೆನೆದು ಆಕೆಯ ದುಃಖ ದ್ವಿಗುಣಿತವಾಯಿತು! ಗಂಟಲು ಬಿಗಿದುಹೋದಂತಾಯಿತು!

ಇದು ಕಥೆಗಾರ ರಾಜಾಜಿಯವರ, ದೃಶ್ಯ ಜೋಡಣೆ! ಕಥಾತಂತ್ರವನ್ನೊಳಗೊಂಡ ಕಥನ ಕಲಾ ಸಿದ್ಧಿಗೆ ಒಂದು ಸುಂದರವಾದ ಉದಾಹರಣೆ!

ಕಥೆಗಾರ ರಾಜಾಜಿಯವರು ಕೊನೆಗೆ—'ಮುಂದಿನ ಕಥೆ ಎಲ್ಲರಿಗೂ ಗೊತ್ತಿದೆ! ಸೀತಾದೇವಿಯ ಕನಸು ನನಸಾಗುತ್ತದೆ! ಲಕ್ಷ್ಮಣನನ್ನು ಕಟು ನುಡಿಗಳಿಂದ ನೋಯಿಸಿದ ಆ ದುಃಖವು ಸೀತೆಯ ಕೋಮಲ ಹೃದಯವನ್ನು ಮುಳ್ಳಿನಂತೆ ಚುಚ್ಚುತ್ತಿರುತ್ತದೆ! ದುಃಖದಾಯಕವಾದ

ಪುತ್ತೂರು ಡಿ. ಮುನ್ಸಿಫ ಕೋರ್ಟಿನಲ್ಲಿ

O. P. 35/1962

1. ಶಂಕರಿ ದೇವಿ, 2. ರಾಮಚಂದ್ರ,
3. ವಿಜಯಲಕ್ಷ್ಮಿ— ಅರ್ಜಿದಾರರು.

ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

1ನೇ ಅರ್ಜಿದಾರಳು 2-3ನೇ ಮೈನರರ ಗಾರ್ಡಿಯನ್ ರಕ್ಷಕಳಾಗಿ 1ನೇಯವಳ ಗಂಡ ದ 2-3ನೇಯವರ ತಂದೆ ಹಾಲಿ ಮೃತ ಪಟ್ಟ ರಂಭಟ್ಟ, ಡೈರೆಕ್ಟರ್ ಆಫ್ ಪೋಸ್ಟಲ್ ಸರ್ವಿಸ್, ಇವರ ಬಾಬ್ತು ಇನ್ಸೂರೆನ್ಸ್ ಪೋಲಿಸೀಯ ಬಾಬ್ತು ಹಣಗಳ ವಸೂಲಿ ಕಾರಿತು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಸೇಲ್ಕಂಡ ಅರ್ಜಿ ದಾಖ್ಲು ಮಾಡಿರುತ್ತಾರೆ. ಸದ್ರಿ ಅರ್ಜಿಯು ಈ ಕೋರ್ಟಿನಲ್ಲಿ ತಾ. 8—11—62ರಂದು ತಪ್ಪಿ ಲಗ್ಗೆ ಇಟ್ಟಿದೆ. ಈ ಕುರಿತು ಆಕ್ಷೇಪಣೆಯುಳ್ಳವರು ಸದ್ರಿ ದಿನ ಕೋರ್ಟು ಮುಂದೆ 11 ಗಂಟೆಗೆ ಸರಿಯಾಗಿ ಹಾಜ್ರು ಆಗಿ ಉದಹರಿಸಿತಕ್ಕದ್ದು ಇಲ್ಲವಾದಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾದೀತು. ತಿಳಿದಿರಲಿ.

ಕೋರ್ಟು ಹುಕುಂ ಪ್ರಕಾರ,

Badekila Ishwara Bhat,
Advocate for Petitioners.

ಪುತ್ತೂರು, ತಾ. 16-10-62.

ಆಜಾದ್ ಹಿಂದ್ ಸೇನೆ

ದೀಪಾವಳಿಯ ದಿನಗಳು ಸರಿದು ದೀಪೋತ್ಸವದ ದಿನಗಳು ಬರುತ್ತಿರುವಂತೆ ದೇಶದ ಗಡಿ ಪ್ರದೇಶದಲ್ಲಿ ಶತ್ರುಗಳ ಆಕ್ರಮಣದ ಚಿಂತೆಯೂ ಬಲವಾಗುತ್ತಿದೆ. ಚೀನ-ಪಾಕಿಸ್ತಾನಗಳೊಂದನೆ ಯುದ್ಧವೇ ಸಂಭವಿಸಿತಾದರೆ, ಅವುಗಳೊಡನೆ ಹೋರಾಡಲು ನಮಗೆ ಸುಸಜ್ಜಿತ ಸೇನೆಯು ಅವಶ್ಯಕತೆಯಿದ್ದೇ ಇದೆ. ಇಂತಹ ಸೇನೆಯು ಹೆಸರು ಬಂದಾಗ ನೇತಾಜಿಯವರ ಆಜಾದ ಹಿಂದ್ ಸೇನೆಯ ಸ್ಮರಣೆಯೂ ಬಂದೇ ಬರುತ್ತದೆ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಇತಿಹಾಸವನ್ನು ಬರೆಯುವುದಾದರೆ, ನೇತಾಜಿ ಸುಭಾಸಚಂದ್ರ ಬೋಸರು ಮತ್ತು ಅವರು ಸಂಸ್ಥಾಪಿಸಿದ್ದ ಆಜಾದ ಹಿಂದ್ ಸರಕಾರ ಹಾಗೂ ಹಿಂದ್ ಸೇನೆಯ ಉಲ್ಲೇಖದಿಂದ ಅದು ದೂರವಿರಲಾರದು. ಅಕ್ಟೋಬರ್ ೨೧ ಆಜಾದ ಹಿಂದ್ ಸೇನೆಯ ಸ್ಥಾಪನಾ ದಿನ.

೧೯೪೩ರ ಅಕ್ಟೋಬರ ೨೧ರಂದು ಸಿಂಗಾಪುರದಲ್ಲಿ ನೇತಾಜಿಯವರು ಆಜಾದ ಹಿಂದ್ ಸೇನೆಯನ್ನು ಪ್ರಾರಂಭಿಸಿದರು. ಅದೇ ದಿನ ಭಾರತದಲ್ಲಿ ಬ್ರಿಟಿಷ ಸತ್ತೆಯು ಕಂಪಿಸತೊಡಗಿತು; ಈ ಕಂಪನದಿಂದಲೂ ಆಘಾತದಿಂದಲೂ ಬ್ರಿಟಿಷ ನೌಕರ ಶಾಹಿಯು ಮತ್ತೆ ಸುಧಾರಿಸಿಕೊಳ್ಳಲಿಲ್ಲ.

ಇದೇ ದಿನ ಇಂಗ್ಲಿಷರು ತಾವು ಭಾರತದಲ್ಲಿ ತಮ್ಮ ಶಾಸನವನ್ನು ಸುಸ್ಥಿರಗೊಳಿಸಲು ಭಾರತೀಯ ಸೇನೆಯನ್ನು ನಂಬಿರುವುದು ಸಾಧ್ಯವಿಲ್ಲವೆಂದು ಕಂಡುಕೊಂಡರು. ಒಂದೂವರೆ-ಎರಡು ಶತಮಾನಗಳಲ್ಲಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆದ ವಿವಿಧ ಹೋರಾಟಗಳ ಸಂಕೋಲೆಯಲ್ಲಿ ಆಜಾದ ಹಿಂದ್ ಸೇನೆಯೂ ಒಂದು ಗೊಣಸು ಎಂಬುದು ನಿರ್ವಿವಾದ. ಈ ಸೇನೆಯ ಸಂಘಟನೆಯಲ್ಲಿ ಸುಭಾಸರು ತೋರಿದ ಕೌಶಲವು ಭಾರತೀಯರೆಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

ಈ ಸೇನೆಯ ಸೈನಿಕರೆಲ್ಲರೂ ಸುಭಾಸರೊಡನೆ ತುಂಬ ಸ್ನೇಹ ಭಾವನೆಯನ್ನು ಇಟ್ಟುಕೊಂಡಿದ್ದರು. ಇದರಿಂದ ನೇತಾಜಿಯೊಬ್ಬ ವಿಲಕ್ಷಣ ಪುರುಷರೆಂದು ಹೇಳಬಹುದು ೧೯೪೫ರಲ್ಲಿ ನೇತಾಜಿಯವರು ಸಿಂಗಾಪುರ ಸೇರಿನ್ದರು ಎರಡೇ ವರ್ಷಗಳಲ್ಲಿ ಅಗ್ನೇಯ ಆಸ್ಯದಲ್ಲೆಯೇ ಇವರ ಹೆಸರು ಪ್ರಭಾವವೂ ಹರಡಿತೆಂಬುದನ್ನು ನಾವು ಓದುವಾಗ, ಈ ವಾರು ವೇಧ್ಯವಾಗುವುದು.

ಆಜಾದ ಸೇನೆಯು ಕೇವಲ ಎಂಟು ಜನ ಯೋಧರಿಂದ, ಪ್ರಾರಂಭವಾಯ್ತು. ಅಲ್ಪಾವಧಿಯಲ್ಲಿಯೇ ಈ ಸಂಖ್ಯೆಯು ೪೫೦೦ಕ್ಕೇರಿತು. 'ಚಲೋ ದಿಲ್ಲಿ' ಮತ್ತು 'ಜಯ್ ಹಿಂದ್' ಎಂಬೆರಡು ಘೋಷಣೆಗಳು ಈ ಸೈನಿಕರ ಮಂಯಿದಿಂದ ಹೊರಬಂದ್ದಾಗಲೇ ಆಜಾದ ಹಿಂದ್ ಸೇನೆಯ ಶಕ್ತಿಯ ಪರಿಚಯ ಜಗತ್ತಿಗಾಯಿತ್ತು. ಬ್ರಿಟಿಷರ ಮುಜ್ಜಿದ ಕಣ್ಣು ತೆರೆಯಿತು.

—ಗೋರಾ

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R.E.P. 322/1962. O.S 313/58
R E. A. 410/62

ಕುತ್ಯಾರ್ ಶ್ರೀ ಸೋಮನಾಥ ದೇವರ ಭಂಡಾರ— ಅರ್ಜಿದಾರ

ಮತ್ತು

ಶಂಕರ ನಾರಾಯಣ ಭಟ್ಟ ಕೂಡಾ— ಎದ್ರಿರು

6ನೇ ಎದ್ರಿ:- ಅಹಲ್ಯಾ ದೇವಿ, ಕೃಷ್ಣ ಎಳ್ತಿತ್ತಾಯರ ಮಗಳು, ಮಂಗಳೂರು ಶರಾ ಶರವು ಗಣಪತಿ ದೇವಸ್ಥಾನದ ಬಳಿಯಲ್ಲಿ ಇವರಿಗೆ

ಮೇಲ್ಕಂಡ ದಿಕ್ರಿ ಅಮಲ್ದಾರಿಯಲ್ಲಿ ಇಸ್ಟಾರಿನ ಶರ್ತಗಳನ್ವಯ ನಿರ್ಣಯವಾಗಿರುವ ಕೂಪಾತಾ. 13—11—1962ಕ್ಕೆ ವ್ಯಾದೆಯಾಗುವುದರಿಂದ ನಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿನ್ನ ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ ಗಂಟೆ 11ಕ್ಕೆ ಹಾಜ್ರಾಗಿ ಉದಹರಿಸದಿದ್ದಲ್ಲಿ ನಿಮ್ಮ ವಿನಾ ಮುಂದರಿಸಲಾಗುವುದೆಂತಲೂ ಅರ್ಜಿದಾರರಿಗೆ ಏಲಂಗೆ ಕಲ್ಲುವರೆ ಪರವಾಶನ್ ಕೊಡಲಾಗುವುದೆಂತಲೂ ಕೋರ್ಟಿನ ಹ್ಯುಂ ಪ್ರಕಾರ ತಿಳಿಸೋಣಾಗಿಯದೆ.

(Sd.) N. Subramanyam,
Advocate for Petr.

ಪೊಕ್ಕಾಂ: ಪುತ್ತೂರು, ತಾ. 20-10-1962

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R.E.P. 239/1962. O. S 44/1960

ಸ್ಟೇಟ್ ಹಿಘ್ ವೇ ಮೈಸೂರು— ಅರ್ಜಿದಾರ

Vs

ಕಣ್ಣವು ಕೂಡಾ— ಎದ್ರಿರು

ಎದ್ರಿರು:- 1. ಕಜಾವು, ಪೆನ್ಶನ ವಿಧವೆ.
2. ಕೊರಗ } 1ನೇ ಎದ್ರಿ ಅಪ್ರಾ
3. ಸುಕುದಿ } ಯಸ್ತ ಮಕ್ಕಳು
4. ಕೂಸು } ಲಗ್ಗೆ ಗಾರ್ಡಿ.
5. ಕುರಿ } ಯನ್ ತಾಯಿ
6 ಅಮ್ಮು } 1ನೇ ಎದ್ರಿ—

ತೆಂಕ ಕಜೆಕಾರು ಗ್ರಾಮದ ಕಲ್ಲಾರೆ ಬೆಳ್ಳಂಗಡಿ ತಾಲೂಕು — ಇವರಿಗೆ

ಮೇಲ್ಕಂಡ ದಿಕ್ರಿಯಲ್ಲಿ ಅರ್ಜಿದಾರನಿಗೆ ಬರಹ ಹಣಗಳನ್ನು ಕೋರ್ಟು ವಿಪ್ಪೊಸಿಟಿನಲ್ಲಿರುವ ಹಣ ಜಪ್ತಿ ಪಡ್ಡಿ ಕೊಡಿಸಬೇಕೆಂತ ನೂಡಿದ ಅರ್ಜಿಯು ತಾ. 9—11—1962ಕ್ಕೆ ವ್ಯಾದೆಯಿರುವುದರಿಂದ ನಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿನ್ನ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮನ್ನು ಶಿವಾ ನೂಡಿ ಹಣ ಕೊಡಲಾಗುವುದೆಂತಲೂ ಕೋರ್ಟು ಹ್ಯುಂ ಪ್ರಕಾರ ತಿಳಿಸೋಣಾಗಿಯದೆ.

K. T. Bhat,
Advocate, Asst. Government Pleader, Puttur.

ಪೊಕ್ಕಾಂ: ಪುತ್ತೂರು, ತಾ. 20-10-1962.

ರಾಜ್ಯದ ಪ್ರತಿಯೊಬ್ಬ ಜಮೀನುದಾರ, ಗೇಣಿದಾರ ಹಾಗೂ ಭೂಮಾಲಿಕನ ಹಕ್ಕು ಬಾಧ್ಯತೆಗಳನ್ನು ಅಮೂಲಾಗ್ರವಾಗಿ ಮಾರ್ಪಡಿಸುವ ಅತ್ಯಂತ ಕ್ರಾಂತಿಕಾರಕವಾದ ಹಾಗೂ ಸದ್ಯದಲ್ಲೇ ಜಾರಿಗೆ ಬರಲಿರುವ

ಮೈಸೂರು ಭೂ ಸುಧಾರಣೆಗಳ ಅಧಿನಿಯಮ (ಶಾಸನ) 1961

ಬರೆದವರು: ಕೆ. ಎಸ್. ಆಳ್ವ, ಎಡ್ವಕೇಟ್,

ಜಮೀನಿನಲ್ಲಿ ಹಿತಸಂಬಂಧವುಳ್ಳ ಪ್ರತಿಯೊಬ್ಬನಿಗೆ ಹಾಗೂ ಪಂಚಾಯತುಗಳಿಗೆ, ನ್ಯಾಯ ಸಹಕಾರ ಸಂಘಗಳಿಗೆ ಬೇಕಾದ ಅತ್ಯುಪಯುಕ್ತ ಪುಸ್ತಕ-

ಬೆಲೆ ರೂ. 4/- ಏ ಪಿ. ಪಿ ಖರ್ಚು ಪ್ರತ್ಯೇಕ.

ಪ್ರತಿಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಕೆ. ಎಸ್. ಆಳ್ವ, ಎಡ್ವಕೇಟ್,
ಕೊಡಿಯಾಲಬೈಲ್, ಮಂಗಳೂರು 3.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. - ಸಂ.ನ.

ಬೆಂಗಳೂರಲ್ಲಿ ಬೇಸ್ತು

(ತನೇ ಪುಟದಿಂದ)

ಾತಿಗೆ. ದೊಡ್ಡ ಮನುಷ್ಯರಾ ಸಂಸಾರ ಕೇಳು ಜನಾ ಬಾಯಿ ಹಾಕೋದು ಜಾಸ್ತಿ. ಈಗ ಏನು ಬೇಕಂದ್ರೇ.

ಬಸವ— ಅದು ಸರಿ ಸ್ವಾಮೀ, ನೀವು ಟ್ಟೋದು. ದೊಡ್ಡ ಮನುಷ್ಯರಾ ಸಂಸಾರ ದಿದಕೋಕೆ ಹೋದ್ರೆ ಬೇಕಾದಷ್ಟು ಪುಟ್ಟು ಸಿಕ್ಕುತ್ತೆ. ನಮಗ್ಯಾಕ್ ಬೇಕೂ ಾ ಪಾಪಾನೆಲ್ಲಾ ಕಟ್ಟಿಕೊಳ್ಳೋ ಕರ್ಮ. ಪ್ರಯಾಣ ಯಾವಾಗ ಇಟ್ಟುಕೊ ಶ್ಚಿದೊಂತ ಸರಿಯಾಗಿ ನೋಡಿ ಅಷ್ಟು ಳೋ ಸ್ವಾಮೀ.

ಜೋ— (ಸ್ವಗತ) ಎಲಾ ಇವನು ಬಸವಾಂದರೆ ಬಪ್ಪ ಬಸವನಲ್ಲ ಇವಾ— (ಪ್ರಕಾಶ) ಬಹಳ ಲೆಕ್ಕ ಮಾಡಿ, ಗುಣಿಸಿ, ೀರಿಸಿ, ಭಾಗಿಸಿ.) ನಾಳೆ ಬುಧವಾರವಲ್ವೆ ಬಸವಣ್ಣ. ನೋಡಪ್ಪ ನಾಳೆ ಪಸಂದಾದ ದಿನ. ನಾಳೆಯ ದಿನ ಬಿಟ್ರೆಯೋ ಮತ್ತೆ 8-10 ದಿನ ಪ್ರಶಸ್ತವಾಗಿಲ್ಲ ನಾಳೆ ಹೊರ ಟೋದಾದ್ರೆ ಬೆಳಿಗ್ಗೆ 8 ಗಂಟೆಗೇ ಈ ಲ್ಲಿ ಪ್ರಾರದ ನಿನ್ನ ಮನೆಬಿಟ್ಟು ಕಡೂ ರು ಸ್ಟೇಶನ್‌ನಲ್ಲಿ ಹೋಗಿ ಕಾದಿರು. ಾಗೆ ಅಲ್ಲಿಂದ ಬೆಂಗಳೂರಿಗೆ ಹೋಗೋ ೈ ಲು ಹೊರಡುತ್ತೆ. ಅದ್ರಲ್ಲೇ ಹೋಗ್ಬಿಡು ನೀನು ಹೋದ ಕೆಲ್ಸಾ ಎಲ್ಲಾ ಕೈಗೂ ಡುತ್ತೆ

ಬಸವ— ಕೆಲ್ಸಾ ಏನು ಬಂತು ಸ್ವಾ ಮೀ ಹಟ್ಟಾ ನೋಡೋದೇ ಒಂದ್ಕೆಲ್ಸ ಸ್ವಾಮೀ, ದಕ್ಷಿಣೆ ಎಷ್ಟು ಇಡ್ಲೀಸ್ವಾಮೀ.

ಜೋ— ಹೆಚ್ಚೇನೂ ಬೇಡಪ್ಪಾ. ಒಂ ದೆರಡು ರೂ ಾಯಿ ಮಡಗ್ಬಿಟ್ಟು ಹೋಗು.

ಬಸವ— ಇದೇನ್ ಸ್ವಾಮೀ ಎರಡಾ ಣೆ ಜೋತಿಸ್ಯಾ ಎರಡು ರೂ ಾ ಯ್ಗೆ ಬುಟ್ಟೂ.

ಜೋ— ತುಟ್ಟೇ ಕಾಲಾ ಮೇಲಾಗಿ ಮೂರು ಜೊಟ್ಟೇ ಅನೂ ಗುಡಾಣದಂ ತಾ ಹೊಟ್ಟೇಗಳನ್ನ ಸಾಕ್ ಬೇಕೂ.

ಬಸವ—(1 ರೂ. ಇಟ್ಟು ನಮಸ್ಕರಿ ಸುತ್ತಾನೆ. ಜೋಯಿಸ್ರು ಬಾಯಿ ತುಂ ಬಾ ಹರಸ್ತಾರೆ)

ಜೋ— (ಒಳಗೆ ಇಣಿಕಿ) ಲೇ, ನಮ್ಮ ಬಸವ ಕಣೇ ಒಂದಿಷ್ಟು ಬೆಲ್ಲ ನೀರು ಕೊಡೇ.

ಜೋ. ಹೆಂ — (ಬಿಟ್ಟಿನಿಂದ, ಒಳಗಿಂ ದಲೇ) ಬೆಲ್ಲಾನೂ ಇಲ್ಲಾ, ಏನೂ ಇಲ್ಲ.

ಜೋ— ಬೆಲ್ಲಾ ಇಲ್ಲದಿದ್ದರೆ ಬೆಲ್ಲ ದಂತಾ ಮಾತೂ ಇಲ್ವೇನೇ.

ಜೋ. ಹೆಂ— ಬೆಲ್ಲದಂತಾ ಮಾತೂ ಇಲ್ಲವಂದೆ...

ಜೋ— ಬೆಲ್ಲದಂತಾ ಮಾತೂ ಇಲ್ಲ ನಾಪತ್ತೆ ಹಿಟ್ಕೊಗೆ ಬಿದ್ದಿರಬಾರದೇ ಮೂಳೀ ಮಿಂಡಾರು ಪುಳಾನ್ನ ಎಷ್ಟು ತಿಂದುಕೆದರೂ ಜೀನು ಬಂದೀತೇ. ಅಬ್ಬಬ್ಬಾ! ಇವಳಿ.

ಬಸವ— ಸುಮ್ಮನಿರಿ ಸ್ವಾಮೀ, ನೆನ್ನೆ ಕಾಲಾಗೆ ನೀವಿಬ್ಬರೂ ಯಾಕೆ ಜಗಳಾ ಕಾಯ್ತಿರಾ ಹೋಗಿ ಬರ್ರೇನ್ ಸ್ವಾಮೀ (ಮತ್ತೆತ್ತಿಮ್ಮೆ ನಮಸ್ಕರಿಸಿದ)

ಜೋ— ಹೋಗಿ ಬಾಪ್ಪಾ ಬಸವ ಎ ಲ್ಲ ಅನುಕೂಲವಾಗುತ್ತೆ. ಬರುವಾಗ ಎಲೆ ಅಡಿಕೆ ಕುಟ್ಟೋದಕ್ಕೊಂದು ಕಬ್ಬಿಣದಾ ....ತಂದಿದ್ದರೆ ಜೀನ್ನಾಗಿತ್ತ.

ಬಸವ— ನಿನ್ಮನ್ನು ಮರಿತೀನೇ ಸ್ವಾಮೀ ಬರ್ತೇನ್ ಸ್ವಾಮೀ ನಮಸ್ಕಾರ

ದೃಶ್ಯ ೪

(ಬಸವ ಮನೆಬಿಟ್ಟು ಸ್ವಲ್ಪ ದೂರ ಹೊರಟಿದ್ದಾನೆ. ತಿಮ್ಮಿ ಹಿಂದಿನಿಂದ ಓಡಿ ಬಂದು)

ತಿಮ್ಮಿ— ರ್ರೀ, ಅರ್ರೀ, ಯೇ ರ್ರೀ...

ಬಸವ — (ತಿರುಗಿ ನಿಂತು) ನಿನ್ನೆ ಯಿಂದ ಒಂದೇ ಸವನೆ ೨೪ ತಾಸು ಮೂ ತಾಡಿದ್ರೂ ಇನ್ನೂ ಹೇಳೋದು ಮುಗೀ ಲಿಲ್ವೇನೇ?

ತಿಮ್ಮಿ—(ಸಮಿಸಿಸಿ) ಅಲ್ಲಾ.... ಸಾ ನೂ ಆಷ್ಟುದೂರ ಬರ್ತೀನೀಂತ ನಿಮ್ಮಾನ್ನ ಬಿಟ್ಟು ಹ್ಯಾಗಿರೋದೂತ (ಹೋಗುತ್ತಾ ಇರುತ್ತಾರೆ) ಮತ್ತೆ ನೋಡಿ ನಿಮ್ಮ ಚಪ್ಪ ಲಿ ಕೊಡೇ ತಲೇ ದಿಂಬಿನ್ ಕೆಳಗಿಟ್ಟು ಮಲಕ್ಕೊಳ್ಳೀಂತ ಕೊಡೆ ಸರಿ ಮಾಡ್ಕೊಸ್ಲಿ ಕ್ಕೊಂಡು ಬನ್ನೀಂದ್ರೆ. ಅಲ್ಲ ಮತ್ತೆ ನನಗೆ ಆದೇ ಸಂಬ್ಧನ ಹೇಂನ್ತಿ ತಲೇಲಿದೆಯಲ್ಲ ಯೂರಪಿನ್ನು ಅದು ಒಂದು ಹತ್ತು, ಗಿಜಿ ಗಿಜಿ ಹೋಳಿತದಲ್ಲ ಕಲ್ಲಿನ್ ಬಳೆ, ಕಲ್ಲಿ ನ್ ಸರಾ, ತಲೆಗಿಡೋ ಹೂವ್ವ, ಮತ್ತೆ ಟೀಸು, ತಗೋಂಬರ್ತೀರಾಂತ...ಮತ್ತೆ.. ....ಮತ್ತೆ....ನೀವು ಅಲ್ಲಿಗೆ ಹೋದಾಗ ಒಂದೆ ಒಳ್ಳೆ ದೇವ್ರೂ, ರಾಕ್ಷಸ್ರೂ ಬ ರೋವಂತಾ ಅದೆಂತಾದೋ ಸಿನ್ಮಾ ಇ ದೇಂತ ಹೇಳ್ತಿದ್ದಲ್ಲ ಸುಬ್ಬು ಅದೂ ಒಂ ದು ನೋಡ್ಕೊಂಬ್ಬೆಂದೂ ನನಗೂ ಕತೆ ಹೇಳ್ತಿರಾಂದೆ.

ಬಸವ— ಅಲ್ಲ ತಿಮ್ಮಿ, ನಿನಗೆಷ್ಟು ಸಿ ರೀತೀನೆ? ನಿನ್ನೆಯಿಂದಾನೂ ಹೇಳಿದ್ದೇ ಹೇಳ್ತಾ ಇದ್ದೀಯೂ ನಿನ್ನ ಆಸೆ ತೀರಸೊ ಕೇಂತ್ಲೆ ತಾನೇ ನಾನು ಪಟ್ನಾ ನೋ ಡೋಕೆ ಹೋಗೋದು. ಇನ್ನು ಹೋಗು ಹೋಗು .

ತಿಮ್ಮಿ—ನೋಡಿ ನಿಮ್ಮ ಚೀಲ ಜೋ ಪಾನ, ಜುಬ್ಬ, ಪಂಚೆ ಬಿಚ್ಚಿಟ್ಟು ಮಲ ಗೋದೇ ಬೇಡ. ಎಲ್ಲಾನೂ ಮೈಗೆ ಸು ತ್ತಿಕೊಂಡೇ ಮಲಗ್ಬಿಡಿ ಕಳ್ಳು ಬಾಳ ಜ ನಾಂತೆ ಸುಬ್ಬ ಹೇಳ್ತಿದ್ದ ಪಾಕೇಟು ಕೈ ಯಲ್ಲಿದ್ದಂತೆ ಮಂಗಮಾಯಾ ಮಾಡ್ತಾ ರೇಂತ ಸುಬ್ಬ ಹೇಳ್ತಿದ್ದ. ಅಲ್ಲಿ ಮನುಷ್ಯರು ಎತ್ತುಗಳಂತೆ ಎಳೆಯೋ ಗಾಡಿ ಇದೇಂತ ಹೇಳಿದ್ನಲ್ಲ ಸುಬ್ಬ. ಅದ್ರ ಲ್ಲೂ ಕೂತು ಒಮ್ಮೆ ಎಳೆಸಿಕೊಂಡು ನೋಡೀಂತ ಅದು ಹೇಗೆ ಎಳಿತಾರೀಂತ ನೋಡೇ೦ಬ್ಬೆನ್ನಿ. ಎತ್ತಿನಂತೆ ಎರಡು ಕಾಲು ಎರಡು ಕೈಗಳನ್ನೂ ನೆಲಕಿಟ್ಟಾರಿ ಎಳೀಬಹುದು ಅಲ್ವೇಂದ್ರೆ. .

ಬಸವ— ಎಲ್ಲಾ ನೋಡಿದ ಮೇಲೆ ತಾನೇ ಹೇಳೋದು?

ತಿಮ್ಮಿ— ಅಲ್ಲಾ ಅಲ್ಲಿ ಆಕಾಶದಷ್ಟೆತ್ತ ರಕ್ಕೆ ಮನೆಗಳಿವೆಯಂತೆ. ಅಲ್ಲಿ ನಾವು ಕಾಣದಂತ ಕೇಳದಂತ ತಿಂಡಿ ಮಾಡ್ತಾ ರಂತೆ. ಒಂದಷ್ಟು ತಗೋಂಬರ್ತೀರಾಂತ....

ಬಸವ—ಅಷ್ಟೇ ತಾನೇ?ನಾನು ಹೋ ಗೋದಾದ್ರೂ ಮತ್ತಾರ್ಯಾಕೇಂತ. ಸರಿ ಇನ್ನು ನೀನು ಹೋಗು. ..ಹೋಗಮ್ಮ, ಹೋಗು ಮನೆಕಡೆ ಜೋಪಾನ.

ತಿಮ್ಮಿ— (ಕಣ್ಣೊರಸಿಕೊಂಡು) ಅಗ್ಲಿ ಹೋಗ್ಬನ್ನಿ (ಮುಖ ಬಾಡಿಸಿ ನಿಲ್ಲುವಳು.

ಬಸವ— ನಿನಗೆನ್ನು ಹಿರೀತೀನೆ! ನಿ ನ್ನೆ ಬಟ್ಟು ಹೋಗೋಕೇ ಮನಸ್ಸು ಬ ರೋಲ್ವಲ್ಲೇ ತಿಮ್ಮಿ. (ಮುಖ ಸಪ್ಪಗೆ ಮಾಡ್ಕೊಂಡು ಹೊರಡುತ್ತಾನೆ)

ತಿಮ್ಮಿ— (ಸ್ವಲ್ಪ ತಡೆದು) ರ್ರೀ, ಓ ರ್ರೀ ಸ್ವಲ್ಪ ನಿಲ್ರೀ (ಓಡಿಬರ್ತಾಳೆ).

ಬಸವ— (ತಿರುಗಿ ನಿಂತು) ಮತ್ತೇನ್ ನೆನಸ್ಕೊಂಡೆಯ್ಯೇ ಎಂಪೆ....

ತಿಮ್ಮಿ— ಬಿಲ್ಲಿ ಹೇಗೂ ಒಳ್ಳೆ ಗಳಿಗೇ ಲಿ ಹೊರಟ್ತಿದ್ದೀರಿ ಹೋಗ್ಬನ್ನಿ ಅಲ್ಲಾ ನಿಮ್ಮ ಚೀಲ, ಕೊಡೆ ಜೋಪಾನಾಂತ. ಚಪ್ಪಲೀನೂ ಜೋಪಾನ. ಅಲ್ಲಿ ಹಣಾ ಉಳ್ದಿದ್ರೆ ಎಮ್ಮೆ ಕಟ್ಕೋಕೆ ನಾಲ್ಕು ಹಗ್ಗಾ ತಗೊಂಡ್ ಬನ್ನಿ. ಹಿಂದಿ ಅಲ್ಲಿ ಮಣಕ್ಕೆ 2½ ರೂ ಗೆ ಸಿಗುತ್ತದಂತೆ. ಹಾಗೇ ಒಂ ದಾರು ವಣ ಹಿಂಡಿನೂ ಗಾಡಿಯೊಳಗೆ ಹಾಕ್ಸಿಕೊಂಡು ಬಂದ್ರೇ...

ಬಸವ— ಲೇ ಆವೆಲ್ಲಾ ನೀನು ಹೇಳ್ಬೇ ಕೇನು? ನನ್ನ ಮನೆಗೇ, ನನ್ ತಿಮ್ಮಿಗೇ ಏನೇನ್ ಬೇಕೂ ಅನ್ನೋದು ಪಟ್ಟದ ಅಂಗಡಿ ನೋಡಿವ್ ಕೂಡ್ಲೆ ನನಗೇ ಹೊ ಳಿಯಕಿಲ್ವೆ? ಇನ್ನು ಹೋಗು (ಇಬ್ಬ ರೂ ಹೋಗುವರು. ಒಂದಷ್ಟು ದೂರ ಹೋದ ಮೇಲೆ ಬಸವ ಏನೋ ನೆನಸಿ ಕೊಂಡು

ಬಸವ— ತಿಮ್ಮೀ...ಲೇ ತಿಮ್ಮೀ....

ತಿಮ್ಮಿ— (ಓಡಿ ಬಂದು) ಅಯ್ಯೋ ಏನೂಂದ್ರೆ? ಯಾಕ ಕರೆದಿರೀಂದ್ರೆ?

ಬಸವ— ಹೇಳೋಕೇ ಮರೆತ್ ಹಟ್ಟಿದ್ದೆ ಗಲವಟೇಲಿ. ರಾತ್ರಿ ಮಲಗುವಾಗ ಅಗಳಿ ಗಟ್ಟಿಯಾಗಿ ಹಾಕ್ಕೊಂಡು ಮಲ ಗೂಂತ. ಎಮ್ಮೆ ನಾಲ್ಕು ದಿನ ಹೊರಗೆ ಬಿಡೋದೇ ಬೇಡಾಂದೆ.ಅಷ್ಟೋ ಇಷ್ಟೋ ಇದ್ದ ಚಿನ್ನ, ಪನ್ನ, ಚಿಲ್ಲರೆ ಗಿಲ್ಲರೆ, ಆಕ್ಕೆ ಡಬ್ಬದೊಳಗೆ ಹಾಕಿ ಬೀಗ ಹಾಕ್ಬಿಟ್ಟೋ ದ್ರೆ ಯಾರಿಗೂ ಸಂಶಯ ಬರೋಲ್ಲ ತಿ ಳೀತಾ, ಕೇಳ್ಸಿತೇನೇ? 'ಕೇಳ್ಸಿತೂಂದ್ರೆ' ಮತ್ತೇ ಆ ದೊಡ್ಡ ಮಚ್ಚು ಇದೆಯಲ್ವೇ ನೆ, ಅದನ್ನು ತಲೆ ಕೆಳಗೇ ಮಡಕೊಂಡು ಮ ಲಗಿ ಬಿಡು. ಒಂದು ವೇಳೆ ರಾತ್ರಿಗೀತ್ರಿ ಅಪಾಯಗಿಪಾಯ ಆ ತೊಂ ದ್ರೆ ಇನ್ನಿ ಜೀವ ರಕ್ಷಣೇಗೇಂತ. ನಿಮ್ಮಪ್ಪ ಬಂದ್ರೂ, ಯಾರ್ ಬಂದ್ರೂ, ಬಾಗಿಲ ಮಾತ್ರ ತೆಗಬ್ಯಾಡ, ತಿಳಿತೇ - ಮತ್ತೆ ... ಆ—ಹೋಲಿ. .ಸೂ...ಮಗ ಕರಿಯಪ ಬಂದ್ರೇ, ಗಿಂದ್ರೆ, ಜಾಡೂ ಆಡಿಸ್ಬೇಡ, ಬಾಗಿಲೂ ತಗಿಬೇತ. ವ ಪಾ ಕೆಲಾವತಿ ಸೂಳೇಮಗ ತಂದ ಜೆತವ ನ—ಜೋ ಪಾನಾಂದೇ ...ಲೇ .ಜೋಪಾನಾಂದೇ

ತಿಮ್ಮಿ— ಆದೆಲ್ಲ ನಾ ನೋಡಿಕೊಳ್ತೀ ನೀಂದ್ರೆ ನೀವು ಮಾವ ಯೋಚನೆಯಿಲ್ಲ ದೆ ಹೋಗಿ ಬನ್ನೀಂದ್ರೆ....(ಆನಂತ್ತಾ ನಿ ಲ್ಲುವಳು).

ಬಸವ— (ತಂಬೂ ಮುಸಿ ಮುಸಿ ನ ಕುತ್ತ) ಅಳಬೇಡ ತಿಮ್ಮಿ ಅಳ್ಬಾರ್ದು. ಹಿಂಗೆ ಕಣ್ಣೀಗು ಸುರಿದ್ರೆ ನ-ನ್ ನಿನ್ ಬಿ ಟ್ಟು ಹೋಗೋದ್ ಹೇಗೆ ಹೇಳು. (ಬಾಯಿಬಿಟ್ಟು ಅಳುತ್ತಳೆ) ಅಬ್ಬ! ಏನು ಪಿರೀತೀನೇ ನಿಂದು, ನನ್ ಮೇಲೆ ನ ಮ್ಮ ಈ ಪಿರೀತಿ ಸಂಸಾರದ ಮುಂದೆ ಆ ಜೋಯಿಸ್ರ ಸಂಸಾರಾನ ನಿವಾಳಿಸಿ ಒಗೀ ಬೇಕು. ನಿನ್ನಂತಾ ಹೆಂಡ್ತಿ ನನಗೆ ಸಿಕ್ಕೆ ದ್ದ ನನ್ನ ಪೂರ್ವ ಕಾಲದ ಪಣ್ಯಾಂತ ಈಗ ಗೊತ್ತಾಗುತ್ತೆ. ಹೋಗು, ಹೋಗು ನನ್ನ ಬಂಗಾರ, ಹೋಗು...ಮನಸ್ಸನ್ನ ಕಲ್ಲಾಮಾಡಿಕ್ಕೊಂಡು ನಾನೂ ಹೋಗಿ ಬಿಡ್ತೀನಿ. (ಹೋಗುವನು)

(ಮುಂದುವರಿಯುವುದು)

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಹೊಸ ಪುಸ್ತಕ—
'ನಚಿಕೇತ'ರ
ನವೀನ ಕಾದಂಬರಿ—
ಹನುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿವರಗಳಿಗೆ,
ನವಯುಗ ಪ್ರೆಸ್, ಉಡುಪಿ.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಆವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. ೭—೦—೦.
ಒಂದು ಪ್ರತಿ ಬೇಕಾದವರು ರೂ 50 ನ್ನು ಮನಿಯೊರ್ಡರು ಮಾಡಿ ಸಿಕೊಳ್ಳಬಹುದು.
ಸಮಗ್ರ ಪುಸ್ತಕ ಭಂಡಾರ, ಉಡುಪಿ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ
ಸಾವಿರಾರು ಸೇವಕಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು
ಪ್ರತಿಯೊಬ್ಬ ಸೇವಕಾತಿಗಾರರಿಗೆ ಇಲ್ಲಿ ನೈಯತ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿಜಯ ಬೇಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd 1931. Phone No. 240. — ಮಂಗಳೂರು—3

REGD. No. B. G. 176
LICENCE No. 31
Licensed to Post without Prepayment

ನೆರೆಯ ಭೂತಾನದ

ಪ್ರಧಾನ ಮಂತ್ರಿ — ಜಿಗ್ಮೇ ದೋರಜಿ

ಕಳೆದ ವರ್ಷದಲ್ಲಿ ಭೂತಾನದ ಪ್ರಧಾನ ಮಂತ್ರಿ ಶ್ರೀ ಜಿಗ್ಮೆ ದೋರಜಿಯವರು ಭಾರತವನ್ನೊಮ್ಮೆ ಸಂದರ್ಶಿಸಿ ಪ್ರಧಾನಿ ನೆಹರುಗಳನ್ನು ಕಂಡಿದ್ದರು. ಇಂದು ನಡೆಯುತ್ತಿರುವ ಭಾರತ-ಚೀನಾ ಸೀಮಾ ಹೋರಾಟವು ಸುಪ್ತವಸ್ಥೆಯಲ್ಲಿದ್ದ ಕಾಲವದು. ಇಂದು ದೋರಜಿ ಧೀರತನದಿಂದ ಉಚ್ಚರಿಸಿದ್ದರು: "ಚೀನೀಯರು ನಮ್ಮ ಶವಗಳ ಮೇಲೆ ನಡೆದುಕೊಂಡೇ ಭೂತಾನವನ್ನು ಪ್ರವೇಶಿಸಬೇಕಾಗುವುದು" ಎಂದು.

ಆ ದಿನಗಳಲ್ಲಿ ಭೂತಾನದ ಮೇಲೆ ಚೀನೀಯರು ಕಣ್ಣಿಟ್ಟಿರುವರು ಎಂಬುದು ತಿಳಿದು ಬಂದಿರಲಿಲ್ಲ; ಎಂದರೆ, ಅವರು ಚೀನೀಯ ಆಕ್ರಮಣ ಇಲ್ಲವೇ ಆಕ್ರಮ ಪ್ರವೇಶದ ಬಗ್ಗೆ ಯೋಚಿಸುವ ಅಗತ್ಯವೇ ತೋರಿಬಂದಿರಲಿಲ್ಲ. ಕಳೆದ ಸಪ್ತಂಬರ ತಿಂಗಳಲ್ಲಿ ಒಂದು ಕೆಂಪದಂತಿ ಅವರ ಕೆವಿಗೂ ಬಿತ್ತು. ಸಿಕ್ಕಿಂ, ನೇಪಾಳ ಮತ್ತು ಭೂತಾನಗಳನ್ನು ಒಟ್ಟು ಸೇರಿಸಿ ಹಿಮಾಲಯ ಸಂಯುಕ್ತ ರಾಷ್ಟ್ರವೊಂದನ್ನು ರಚಿಸುವ ಹಂಚಿಕೆಯು ನಡೆಯುತ್ತಿದೆಯೆಂದೂ ಇದರಲ್ಲಿ ಚೀನೀಯರ ಕೈವಾಡವೂ ಪರಿಣಾಮಕಾರಿ ಪ್ರಭಾವ ಬೀರುತ್ತಿದೆಯೆಂದೂ ಗೊತ್ತಾದ ಬಳಿಕ ಅವರಿಗೆ ಸಹಿಸಲಾಗಲಿಲ್ಲ; ಅವರು ಈ ಹವಣಿಕೆಯನ್ನು ಖಂಡಿಸಲೇ ಬೇಕಾಯಿತು.

ಭಾರತದ ಮಟ್ಟಿಗೆ ಹೇಳುವುದಾದರೆ, ಭೂತಾನವೊಂದು ನೆರೆಯ ರಾಷ್ಟ್ರವೆಂಬ ವ್ಯವಹಾರ ಹಿಂದಿನಿಂದಲೂ ನಡೆದು ಬಂದುದು. ಆದರೆ, ಶ್ರೀ ಜಿಗ್ಮೇ ದೋರಜಿಯವರು ಅಲ್ಲಿನ ಪ್ರಧಾನಿಗಳಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಈ ಪರಿಸ್ಥಿತಿಯು ತಿಳಿಯಾಗುತ್ತ ಬಂತು ರಾಷ್ಟ್ರರಲ್ಲಿ ಎರಡೂ ದೇಶಗಳ ನಡುವೆ ಒಂದು ಒಡಂಬಡಿಕೆಯೂ ಯಿತು; ಇದರ ಪರಿಣಾಮವಾಗಿ ಉಭಯ ರಾಷ್ಟ್ರಗಳ ನಡುವೆ ವ್ಯವಹಾರವು ಸುವ್ಯವಸ್ಥಿತವಾಗಿ, ಸ್ನೇಹಪೂರ್ಣವಾಗಿ ಬೆಳೆದು ಬಂತು. ಈ ಕಾರಣದಿಂದಲೇ ಇರಬೇಕು, ಭೂತಾನದ ಮಹಾರಾಜರನ್ನು "ಪದ್ಮವಿಭೂಷಣ" ಪ್ರಶಸ್ತಿಯಿತ್ತು ಗೌರವಿಸಿದವರು ಭಾರತದ ರಾಷ್ಟ್ರಪತಿಗಳು. ನಮ್ಮ ಪಂಡಿತ ನೆಹರೂರವರೂ ನಾಲ್ಕು ವರ್ಷಗಳಿಗೆ ಮೊದಲು ಭೂತಾನಕ್ಕೆ ಸೌಹಾರ್ದಮಯ ಭೆಟ್ಟಿ ನೀಡುವುದಕ್ಕಾದರೂ ಇದ್ದ ಪ್ರಬಲ ಕಾರಣ ಇದೇ ಇರಬೇಕು.

ಶ್ರೀ ದೋರಜಿಯವರು ಭೂತಾನದ ಚುನಾಯಿತ ಪ್ರಧಾನಿಗಳಲ್ಲ. ಸಾಮಾನ್ಯವಾಗಿ ನಿಯುಕ್ತ ಪ್ರಧಾನಿಯ ಮೇಲೆ ಜನತೆಯ ಸದಭಿಪ್ರಾಯವಿರುವುದಿಲ್ಲ. ಆದರೆ, ದೋರಜಿಯವರ ಪರಿಸ್ಥಿತಿ ಇದಕ್ಕೆ ವ್ಯತಿರೇಕ. ಅವರು ಏಕಕಾಲದಲ್ಲೇ ಮಹಾರಾಜರ ಮತ್ತು ಜನಸಮುದಾಯದ ವಿಶ್ವಾಸವನ್ನೂ ಬೆಂಬಲವನ್ನೂ ಗಳಿಸಿಕೊಂಡಿದ್ದಾರೆ. ಇದಕ್ಕೆ ಕಾರಣ ವಾದರೂ ಇಲ್ಲದೆ ಇಲ್ಲ. ಇವರು ಬಹು ಕಾಲದಿಂದ ಪ್ರಭಾನಿ ಪದದಲ್ಲಿ ಉಳಿದಿರುವಂತಿದ್ದರೂ ತೀರ ನೆರಳಾಗಿಯೇ ಜೀವಿಸುತ್ತಾರೆ. ಜನತೆಯ ಸುಖ ದುಃಖಗಳ ಪ್ರತ್ಯಕ್ಷಾನುಭವ ಅವರಿಗಿದೆ. ಜನರನ್ನು ಉನ್ನತಿಯ ದಾರಿಯಲ್ಲಿ ಮುನ್ನಡೆಸುವ ಸಕಲ ಪ್ರಯತ್ನಗಳನ್ನೂ ಅವರು ಮಾಡುತ್ತಾರೆ, ಮಾಡಿ ಸಫಲರಾಗುತ್ತಾರೆ.

ಶ್ರೀ ದೋರಜಿಯವರ ತಂದೆಯವರೂ ಭೂತಾನಿನ ಪ್ರಧಾನಿಯಾಗಿದ್ದರು. ಆಗವರು, ತನ್ನ ಮಗನಿಗೊಂದು ಉತ್ತಮ ಪಾರವನ್ನು ಕಲಿಸಿಕೊಟ್ಟಿದ್ದರು: "ಭೂತಾನಕ್ಕೆ ಪ್ರಧಾನ ಮಂತ್ರಿಗಿಂತ ಹೆಚ್ಚಾಗಿ ಡಾಕ್ಟರರು, ಇಂಜಿನಿಯರರು ಮೊದಲಾದವರ ಆವಶ್ಯಕತೆಯಿದೆ." ತಮ್ಮ ತಂದೆಯವರ ಈ ಪಾಠವನ್ನು ಮರೆಯದೆ, ಈ ಕೊರತೆಯನ್ನು ಹೋಗಲಾಡಿಸುವುದಕ್ಕೆ ಬದ್ಧ ಕಂಕಣರಾದ ದೋರಜಿ ಜನತೆಯ ಶ್ರೀತ್ಯಾದರಗಳಿಗೆ ಪಾತ್ರರಾದರೆ, ಆಶ್ಚರ್ಯವಿಲ್ಲ.

ಶ್ರೀ ಜಿಗ್ಮೇ ದೋರಜಿಯವರು ಈ ವರ್ಷವೂ ಕೆಲವು ದಿನಗಳಿಗೆ ಮೊದಲು ನೆಹರುಗಳನ್ನು ಭೆಟ್ಟಿ ಮಾಡಿದರು. ಕೆಂಪು ಚೀನವು ಲಡಖ ಮತ್ತು ನೇಫಾ ಪ್ರದೇಶದಲ್ಲಿ ಆಕ್ರಮಣವನ್ನು ಯುದ್ಧ ನೀತಿಯನ್ನನುಸರಿಸಿ ಮುಂದವರಿಸುತ್ತಿದೆ. ಭೂತಾನ, ಭಾರತ ಮತ್ತು ಟಿಬೇಟುಗಳ ಸೀಮಾ ಸಂಧಿನಲ್ಲೀಗ ಚೀನ—ಭಾರತಗಳ ನಡುವೆ ಹೋರಾಟ ನಡೆಯುತ್ತಿದೆ ಭೂತಾನವನ್ನು ಸಂಪೂರ್ಣ ಮನ್ನಿಸುತ್ತೇವೆಂಬ ಚೀನೀಯರ ಹೇಳಿಕೆಗಳು ಒಂದಲ್ಲ ಒಂದು ದಿನ ಪೊಳ್ಳಾಗದೆ ಉಳಿಯುವವೆಂದು ಹೇಳುವಂತಿಲ್ಲ. ನೇಪಾಳದ ಆಂತರಿಕ ರಾಜ ಕಾರಣ, ಭಾರತದ ಮೇಲೆ ವ್ಯರ್ಥಾರೋಪ ಹೊರಿಸುತ್ತಿರುವ ನೇಪಾಳೀಯರ ಪ್ರವೃತ್ತಿಯನ್ನು ಕಾಣುವಾಗ, ಆಲ್ಲಿ ಕೆಂಪು ಗೂಗೆ ಹೊಕ್ಕಿದೆಯೆಂದು ತಿಳಿದರೆ, ಆಶ್ಚರ್ಯವಿಲ್ಲ, ಅದೇ ಕೆಂಪು ಗೂಗೆಯು ಭೂತಾನವನ್ನೂ ಹೊಗಬಹುದು. ಈ ವಿಷಮ ಸನ್ನಿವೇಶದಲ್ಲಿ ಭಾರತ-ಭೂತಾನ ಪ್ರಧಾನಿಗಳ ಭೆಟ್ಟಿಯಾದುದು ನಿಜಕ್ಕೂ ಮಹತ್ವಪೂರ್ಣವಾದುದು.

ನಗುವು ಸಹಜದ ಧರ್ಮ

ಯೋಗ್ಯ ಸಲಹೆ

ಮೂವತ್ತು ವರ್ಷದಷ್ಟು ಹಳಬನಾದ ನೌಕರನ ಕಾರ್ಯದಿಂದ ಪ್ರಸನ್ನನಾದ ಮೇನೇಜರು ಅವನ ವೇತನದಲ್ಲಿ ಹೆಚ್ಚಳ ಮಾಡಿದರು. ತನ್ನ ಜೀವಮಾನದಲ್ಲಿಯೇ ಮೊತ್ತ ಮೊದಲು ಇಂತಹ ಸಂದರ್ಭ ಪಡೆದ ಆತ ಯೂನಿಯನ್ ಸೆಕ್ರಿಟರಿಗೆ ಸಂತೋಷದಿಂದ ಸುದ್ದಿ ತಿಳಿಸಿದ.

ಸೆಕ್ರಿಟರಿ ಸಲಹೆಯಿತ್ತ— ಮಿತ್ರ, ಕಳೆದ ಮೂವತ್ತು ವರ್ಷಗಳಿಂದ ನೀತನದಲ್ಲಿ ಭಡ್ತಿಕೊಡದೆ ವಂಚಿಸಿದ್ದಾರೆಂದು ಲೇಬರ್ ಕೋರ್ಟಿನಲ್ಲಿ ದಾವೆ ಹೂಡು.

ಂ ಂ ಂ

ಅದಲ್ಲ, ಇದು....

ಒಬ್ಬ ಸುಂದರರಾವಣನಂತಹ ಹುಡುಗ ಸೆಲೂನಿಗೆ ತೆರಳಿ ಹೇಳಿದ 'ದಿಲೀಪ ಕಟ್ ಕೊಡು"

ಕೆಲಸಿ ಆತ್ತತ್ತ ಹೊರಳಿ ನುಡಿದ, 'ಸ್ವಾಮಿ, ತಾವು ಅಕ್ಷೇಪಿಸುವುದಿಲ್ಲವಾದರೆ, 'ಡೇವಿಡ್ ಕಟ್' ಮಾಡುತ್ತೇನೆ. ಏಕೆಂದರೆ, ಕೆಲವು ವರ್ಷಗಳಿಂದ ಪಿಕ್ಚರ್ ನೋಡುವುದಕ್ಕೆ ಬಿಡುವೇ ನನಗೆ ದೊರೆಯಲಿಲ್ಲ.'

ಹುಡುಗ ತಬ್ಬಿಬ್ಬಾದ.

ಂ ಂ ಂ

ಇಂಟರ್‌ವ್ಯೂ ಸಕ್ಸಸ್

ಒಬ್ಬ ಕುಡುಕ ಇನ್ನೆಲ್ಲಿಯೂ ನೌಕರಿ ದೊರೆಯದಿರಲು ಮದ್ಯ ನಿಷೇಧ ಕಾರ್ಯಾಲಯಕ್ಕೆ ಅರ್ಜಿ ಸಲ್ಲಾಯಿಸಿದ ಇಂಟರ್‌ವ್ಯೂಗೆ ಆರ್ಡರ್ ಬಂತು. ಅಧಿಕಾರಿಗೆ ಈತನನ್ನು ಕಂಡೊಡನೆಯೇ ಕುಡುಕನೆಂದು ತಿಳಿಯಿತು. ಆವರಿಬ್ಬರಲ್ಲಿ ಪ್ರಶ್ನೋತ್ತರ ನಡೆಯಿತು.

"ರಮ್‌ನ ವಿಷಯದಲ್ಲಿ ನಿಮಗೇನು ಗೊತ್ತಿದೆ?"

"ಎಲ್ಲವೂ ರಮಿನ ಮೂಯ, ರಾಮ ರಾಮ ಫೋಟ ರಮ್ ರಹೇ ಎಂದು ನೀತೆಯಿದೆಯಲ್ಲ?"

"ಜಾನೀವಾಕರ್‌ನ ವಿಷಯದಲ್ಲಿ?"

"ಕ್ಷಮಿಸಿ, ನಾನು ಸಿನಿಮಾ ನೋಡುವುದಿಲ್ಲ.?

"ಡಬಲ್ ಸಿಕ್ಸ್‌ನ ಬಗ್ಗೆ?"

"ಅದು ನಿಮ್ಮ ಕಾರ್ಯಾಲಯದ ಟೆಲಿಫೋನ್ ನಂಬರ್ ಅಲ್ಲವೆ"?

ಂ ಂ ಂ

ಆಮಂತ್ರಣ ಸ್ವೀಕಾರ

ಒಮ್ಮೆ ಸುಪ್ರಸಿದ್ಧ ಲೇಖಕ ಜಾರ್ಜ್ ಬರ್ನಾರ್ಡ್ ಶಾರಿಗೆ ಒಬ್ಬಾಕೆ ಶ್ರೀಮಂತ ಮಹಿಳೆಯಿಂದ ಆಮಂತ್ರಣ ಬಂತು. ಪತ್ರಿಕೆಯಲ್ಲಿ ತನ್ನ ಹೆಸರಿನ ನಂತರ 'ಇರಿಂದ ೬೦ ತನಕ ಮನೆಯಲ್ಲೇ ಉಳಿಯುತ್ತಾಳೆ' ಎಂದು ಬರೆದಿತ್ತು.

ಶಾರು ಅದೇ ಪತ್ರಿಕೆಯಲ್ಲಿ ಬರೆದು ಕಳಿಸಿದರು, 'ಜಾರ್ಜ್ ಬರ್ನಾರ್ಡ್ ಶಾರೂ ಳರಿಂದ ೬೦ ತನಕ ಮನೆಯಲ್ಲೇ ಉಳಿಯುವರು."

ಂ ಂ ಂ

ಸೂಕ್ತ ತೀರ್ಮಾನ

ಒಂದೊಮ್ಮೆ ಬರ್ನಾರ್ಡ್ ಶಾರು ತಮ್ಮ ಹೆಂಡತಿಯೊಡನೆ ವ್ಯಂಗ್ಯವಾಗಿ ಹೇಳಿದರು: 'ಗಂಡಸರು ಪೆಂಗುಸರಿಗಿಂತ ಒಳ್ಳೆಯ ರೀತಿಯಲ್ಲಿ ತೀರ್ಮಾನ ಮಾಡುತ್ತಾರೆ."

ಅದಕ್ಕೆ ಹೆಂಡತಿ ಉತ್ತರಿಸಿದಳು: 'ಖಂಡಿತಕ್ಕೂ ಆದುದರಿಂದಲೇ ನೀವು ನನ್ನನ್ನು ವಿವಾಹವಾದಿರಿ; ನಾನು ನಿಮ್ಮನ್ನು!"

ಬ್ಯಾಂಕ್ ಎಕೌಂಟ್

ಏನು ಅದರ ತಿರುಳು

ವ್ಯವಹಾರ ಜೀವನದಲ್ಲಿ ಯಶಸ್ಸು ಪಡೆಯಬೇಕಾದರೆ, ಹಣ ಕಾಸಿನ ಮೇಲೆ ಪೂರ್ಣ ಹತೋಟಿ ಅವಶ್ಯ. ಒಂದು ಒಳ್ಳೆಯ ಬ್ಯಾಂಕಿನಲ್ಲಿ ಎಕೌಂಟ್ ತೆರೆಯುವುದರಿಂದ ಈ ಹತೋಟಿಯು ಸುಲಭವಾಗುತ್ತದೆ.

ಸಾರ್ವಜನಿಕರಲ್ಲಿ ಬ್ಯಾಂಕ್ ವ್ಯವಹಾರದ ಸಾಮಾನ್ಯ ಜ್ಞಾನವನ್ನು ಹರಡುವ ಉದ್ದೇಶದಿಂದ ನಾವು "ಬ್ಯಾಂಕ್ ಎಕೌಂಟ್: ಏನು ಅದರ ತಿರುಳು" ಎಂಬ ಅತ್ಯುಪಯುಕ್ತ ಕೈಪಿಡಿಯೊಂದನ್ನು ಪ್ರಕಟಿಸಿದ್ದೇವೆ.

ನಿಮ್ಮ ಪ್ರತಿಗಾಗಿ ಸಮೀಪದ ಶಾಖೆಗೆ ಅಥವಾ ಪ್ರಧಾನ ಕಾರ್ಯಾಲಯಕ್ಕೆ ಬರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ,
ಉಡುಪಿ, ಮೈಸೂರು ರಾಜ್ಯ.

Edited Printed & Published by K. H. Shetty at the Navayuga Press, Udipi, S. K.

ಪ್ರಸಿದ್ಧ ಕವಿ
ಎಸ್. ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ತಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಎರಡು
ಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1931 ಸ್ಥಾಪನೆ
Regd. No. B.G 176
Vol. 42 No. 9

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 8—11—1962 ಗುರುವಾರ

20ನೆ ಪೈಸೆ
ವಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೯

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ—
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಸೀಮಾ ಪ್ರದೇಶದಲ್ಲಿ
ಭಾರತೀಯ ಯೋಧರ ತೀವ್ರ ಮುನ್ನಡೆ

ಯುದ್ಧಕ್ರಮಣಕಾರಿಯಾದ ಚೀನೀಯರು ಭಾರತದ ಮೇಲೆ ಮೂಡಿದ ಧಾಳಿಗಳಲ್ಲಿ ಮೊದಲಿನ ದಿನಗಳಲ್ಲಿ ಯಶಸ್ಸನ್ನು ಪಡೆದರೇನೋ ನಿಜವೇ. ಆದರೆ, ಸಶಕ್ತ ಮೂರ್ಗವನ್ನು ಹೆಟ್ಟಿ ನಿಲ್ಲುವುದು ಅವರಿಗೆಂದೇನು, ಯಾರಿಗೂ ಸಾಧ್ಯವಿಲ್ಲ ಇದರ ಸಮರ್ಥನೆಯು ಈಗ ಆಯಿತು ಎಂಬಂತೆ ಭಾರತೀಯ ಯೋಧರು ಚೀನೀಯ ಆಕ್ರಮಣಕಾರರಿಗೆ ಸರಿ ಮಿಗಿಲೆನಿಸಿ ಹೋರಾಡುತ್ತ ಮಾತೃಭೂಮಿಯ ರಕ್ಷಣೆಯ ಮಹಾಕಾರ್ಯದಲ್ಲಿಯೇ ವ್ಯಸ್ತರಾಗಿದ್ದಾರೆ. ಇತ್ತೀಚೆಗೆ ಬಂದಿರುವ ವರದಿಗಳ ಆಧಾರದಿಂದ ಹೇಳುವುದಾದರೆ, ಚೀನೀಯರು ಭಾರತೀಯ ರಕ್ಷಣಾ ಸೇನಾನಿಗಳಿಂದ ಬಲವಾದ ಏಟನ್ನು ಸಡೆದಿದ್ದಾರೆ. ಇದರಿಂದಾಗಿ ಅವರು ಮೊದಲಲ್ಲಿ ಬಾರಿಸಿದ ವಿಜಯ ಭೇರಿಯು ಸರಾಜಯದ ಸ್ವರವೆಬ್ಬಿಸಲು ಇನ್ನು ಹೆಚ್ಚು ಸಮಯ ವಿಲ್ಲ. ಮೊದಲಿಗೆ ಭಾರತೀಯ ಸೇನೆಯು ಗಡಿ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿರಲಿಲ್ಲ. ಏಕೆಂದರೆ, ಸ್ನೇಹ ಹಸ್ತವ ಚಾಚುತ್ತ ಮುಂದೆ ಬರುವವರಂತೆ ಕಪಟನಾಟಕವಾಡಿದ್ದ ಚೀನೀಯರೂ ಇಂತಹ ಘೃಣಿತ ಕಾರ್ಯಕ್ಕೆ ಕೈ ಹಾಕುವರು ಎಂದು ಯಾರೊಬ್ಬರೂ ಭಾವಿಸಿರಲಿಲ್ಲ. ಅಚರಲ್ಲೂ ಪಂಚಶೀಲದ ಜನಕ ನೆಹರು ಅಂತಹ ವಿಚಾರವನ್ನು ಕನಸಿನಲ್ಲೂ ಊಹಿಸಿರಲಾರರು. ಆದರೂ ಚೀನೀಯರು ವರದ ಹಸ್ತ ಚಾಚುತ್ತಿದ್ದಂತೆಯೇ ಸಮರದ ಸಿದ್ಧತೆಯನ್ನೂ ಮಾಡುತ್ತಿದ್ದು ಹೊಂಚು ಹಾಕುತಿದ್ದರು, ತಮ್ಮ ಹೆಂಚಿತೆಯನ್ನು ಕಾರ್ಯರೂಪಕ್ಕೆ ಇಳಿಸಲು.

ಚಳಿಗಾಲ ಪ್ರಾರಂಭವಾಗುವುದಕ್ಕೆ ಮೊದಲೇ ತಮ್ಮ ಪಾದವನ್ನು ಭದ್ರವಾಗಿ ಊರುವ ಆಕಾಂಕ್ಷೆಯಿಂದ ಅವರು ಧಾಳಿಯನ್ನೇ ಮಾಡಿದರು. ಬರೇ ಗಡಿಯ ಪಹರೆ ಕಾಯುತಿದ್ದ ನಮ್ಮ ಸೈನಿಕರು ದಿಟ್ಟ ತನದಿಂದ ಪ್ರತಿಭಟನೆಯನ್ನು ಇತ್ತರು ನಿಜ; ಅವರು ಹಿಂದೆಸರಿಯದೆ ಮತ್ತೇನನ್ನು ತಾನೇ ಮಾಡಲಾಪರು? ಅನೀಕ್ಷಿತವಾಗಿ ಮುಂದೆ ಬಂದ ಈ ಸ್ವಾತಂತ್ರ್ಯದ ಆಹ್ವಾನವನ್ನು ಭಾರತ ಅವಶ್ಯ ಸ್ವೀಕರಿಸಲೇ ಬೇಕಾಯ್ತು; ಆವಶ್ಯಕ ಸೈನಿಕರನ್ನೂ ಶಸ್ತ್ರಾಸ್ತ್ರಗಳನ್ನೂ ಕೂಡಿ ಹಾಕಿ ಹಿಮಾಲಯದ ಹಿಮ ಪ್ರದೇಶಕ್ಕೆ ಅಟ್ಟಲೇ ಬೇಕಾಯಿತು. ನಿಜ ಹೇಳ ಬೇಡಾಂದರೆ, ಆ ಮೇಲೆಯೇ ಭಾರತವು ತೀವ್ರವಾದ ಪ್ರತಿ ದಾಳಿ ನೀಡಲು ಸಮರ್ಥವಾಯಿತು. ಚೀನೀಯರ ಮುನ್ನಡೆ ಕುಂಠಿತವಾಯಿತು; ಕೆಲವೆಡೆ ಅವರು ಹಿಂದೆ ಸರಿಯಲೂ ಬೇಕಾಯಿತು; ಭಾರತೀಯರ ಮುಂದೆ ಕವಿದಿದ್ದ ಚಿಂತೆ ದೂರವಾಗ ದೊಡಗಿತು. ಈ ಮೇರೆಯಿಂದ ಕೊಂಡುಕೊಂಡ ಶಸ್ತ್ರಾಸ್ತ್ರಗಳು ಈಗಾಗಲೇ ಬರತೊಡಗಿವೆ. ಇಂದು ನಮ್ಮಲ್ಲಿ ಗೆಲುವಿನ ಭಾವೆ ಕಾಣಿಕೊಳ್ಳಲಾರಂಭವಾಗಿದೆ. ಎಲ್ಲರೂ ಹೆದರಿ ಸಾಯಬೇಕಾಗಿರುವಂತೆ ಭೀಕರ ಪರಿಸ್ಥಿತಿ ಗಡಿಯಲ್ಲಿಂದು ಉಳಿದಿಲ್ಲವೆಂದು ಹೇಳಲು ನಮಗೀಗ ಧೈರ್ಯ ಬಂದಿದೆ.

ಹಿಮಾಲಯದಂತಹ ದುರ್ಗಮ ಘಾಟಿಗಳಲ್ಲಿ, ಮಾನವ ಜೀವನವೇ ಅಸಾಧ್ಯವೆನ್ನುವಂತಹ ಭೀಷಣ ಪ್ರದೇಶದಲ್ಲಿ ಹೋರಾಟವು ಬಹು ಕಾಲದ ವರೆಗೆ ನಡೆಯುವುದೆಂಬುದು ಕಷ್ಟ. ಏಕೆಂದರೆ, ಇಷ್ಟರಲ್ಲಿಯೇ ಚಳಿಗಾಲವಲ್ಲಿ ಪ್ರಾರಂಭವಾಗುತ್ತಿದೆ; ಆಗ ಸೈನಿಕರಿದ್ದೂ ಸಾಧಿಸುವುದೇನನ್ನು? ನಿಸರ್ಗವನ್ನೆದರಿಸಿ ಅದನ್ನು ಸಮರರಂಗವನ್ನಾಗಿ ಮಾಡುವುದು ಚೀನಿಯರಿಂದ ಸಾಧ್ಯವಿಲ್ಲ ಸೈನಿಕ ಬಲವವರಲ್ಲಿ ಅಧಿಕವಿದ್ದೀತು, ಇದೆ. ನಮ್ಮಲ್ಲೂ ಅದನ್ನು ಎದುರಿಸಲು ಸರ್ವ ಶಕ್ತ ಸೇನೆಯಿದ್ದೇ ಇದೆ. ಕೃಷ್ಣಮೆನನ್ ಹೇಳಿದಂತೆ ನಮಗಿಂದು ಬೇಕಾಗಿರುವುದು ಸೈನಿಕರಲ್ಲ; ಅವರು ಉಪಯೋಗಿಸ ಶಸ್ತ್ರಾಸ್ತ್ರಗಳು. ಅಮೆರಿಕೆಯಿಂದಲೂ ಬ್ರಿಟನ್ನಿನಿಂದಲೂ ನಾವು ಈಗಾಗಲೇ ಶಸ್ತ್ರಾಸ್ತ್ರಗಳನ್ನು ತರಿಸಿಕೊಂಡಿದ್ದೇವೆ. ಇವುಗಳ ಉಪಯೋಗವೂ ಈಗ ಆಗತೊಡಗಿದೆ ಹಾಗಾಗಿ ನಮ್ಮ ಸಂರಕ್ಷಣಾ ಸೇನೆಯ ಬಲವು ಪರ್ಯಾಪ್ತವಾಗಿದೆ, ಚೀನೀಯ ಅನೈತಿಕ ಆಕ್ರಮಣವನ್ನು, ಶಕ್ತಿ ಮದದ ಕೊಬ್ಬನ್ನು ದೂರ ಮಾಡಲು ಇವು ಸಶಕ್ತವಾಗಿವೆ.

ಈ ನಡುವೆ ದೇಶ-ವಿದೇಶಗಳ ರಾಜಕಾರಣ ಪರಿಸ್ಥಿತಿಯು ಪರಿವರ್ತನೆಗೊಂಡುದನ್ನು ಅಲ್ಲಗಳೆಯುವಂತಿಲ್ಲ. ನಮ್ಮ ಸಂರಕ್ಷಣಾ ಮಂತ್ರಿ ಮೆನನ್ನರು ಈಗ ಸಂರಕ್ಷಣೋಪಕರಣಗಳ ಮಂತ್ರಿಯಾಗಿ ಮಾತ್ರ ಉಳಿದು, ಪ್ರಧಾನಿ ನೆಹರುರವರೇ ಸಂರಕ್ಷಣಾ ಖಾತೆಯನ್ನು ವಹಿಸಿಕೊಂಡಿದ್ದಾರೆ. ಮೆನನ್ನರ ಮೇಲೆ ಪ್ರಧಾನಿಗಳಿಗೆ ಆದೆಷ್ಟು ವಿಶ್ವಾಸವಿದ್ದರೂ ರಾಷ್ಟ್ರದ ಜನತೆಯಲ್ಲಿ ಹೆಚ್ಚಿನವರು ಅವರನ್ನು ನಂಬುವುದಿಲ್ಲ. ಈ ಬಗೆಯ ಮೆನನ್ನ ಅವಿಶ್ವಾಸ ಇಂದಲ್ಲ, ಬಹಳ ಹಿಂದೆಯೇ ಹುಟ್ಟಿತ್ತು. ದೇಶವ ಗಂಡಾಂತರ ಪರಿಸ್ಥಿತಿಯನ್ನು ಎದುರಿಸುತ್ತಿರುವ ಮನೆಗೆ ಬೆಂಕಿ ಬಿದ್ದಿರುವ ಈ ವಿಷಮ ಸನ್ನಿವೇಶದಲ್ಲಿ ಅವಸ್ಥರವೂ ಎದ್ದಿತ್ತು, ತತ್ಪರಿಣಾಮವಾಗಿಯೇ ನೆಹರು ಜನತೆಯ ಆಶಯವನ್ನು ಈಡೇರಿಸಿದರು, ದೇಶದ ಎಲ್ಲ ನಾಗರಿಕರ ಸಹಾನುಭೂತಿ ಮತ್ತು ಸಹಾಯವು ಆವಶ್ಯವಿರುವುದರಿಂದ, ಅದರ ಅಭಿವ್ಯಾಯಕ್ಕೆ ಮುನ್ನಣಿ ನೀಡಬೇಕಾದುದು ಪ್ರಜಾಸ್ಫುಟತ್ವದ ಸಂಪ್ರದಾಯವೆನಿಸಿದುದರಿಂದ ನೆಹರೂ ಈ ರೀತಿಯ ಕ್ರಮ ಕೈಗೊಳ್ಳಲು ಮುಂದೆ ಎಂದರೆನ್ನಬಹುದು.

ಬ್ರಿಟಿಷ್ ಸಾಮ್ರಾಜ್ಯದಿಂದ ಬಾರತವು ದೂರವಾಗಿ ಸ್ವತಂತ್ರ ರಾಷ್ಟ್ರವೆನಿಸಿದರೂ ಕಾಮನ್‌ವೆಲ್ತ್ ಮಹಾ ಮಂಡಳದ ಸದಸ್ಯ ರಾಷ್ಟ್ರವಾಗಿದೆ. ಆದುದರಿಂದ ಮತ್ತು ತನ್ನ ಕವ್ಯನಿಜಂ ವಿರೋಧಿ ನೀತಿಯಿಂದ ಅದು ಭಾರತಕ್ಕೆ ಸರ್ವವಿಧದ ಸಹಾಯ ನೀಡಲು ಸಿದ್ಧವಿದೆ. ಇದನ್ನು ಮಹಾರಾಣಿ ಎಲಿಜಬೆಥರೂ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಘೋಷಿಸಿದ್ದಾರೆ. ಪಾರ್ಲಿಮೆಂಟ್ ಸದಸ್ಯರೆಲ್ಲರೂ ಈ ನಿಸೆಯಲ್ಲಿ ಅವತೊಣಿನೆ ಸಹಮತರಾಗಿದ್ದಾರೆ.

ಅಮೆರಿಕೆಯಿಂದಲೂ ಭಾರತಕ್ಕೆ ಉಪಕರಣಗಳು ಬಂದಿವೆ. ಇದರ ಮೌಲ್ಯವನ್ನು ರೂಪಾಯಿಗಳಲ್ಲಿಯೇ ತೆರುವ ಬಗೆ ಮಾತುಕತೆ ನಡೆಯಲಿವೆ. ಅಮೆರಿಕೆಯ ಈ ಕೊಡುಗೆಯು ಚೀನೀಯರ ಅನ್ಯಾಯವೆನಿಸಿದ ಆಕ್ರಮಣದಿಂದ ಭಾರತವನ್ನು ಮುಕ್ತಗೊಳಿಸುವುದಕ್ಕಾಗಿ ಒಂದು ಸ್ನೇಹಿತ ರಾಷ್ಟ್ರದಸಹಾನು ಭೂತಿಯ ಪ್ರತೀಕವಾಗಿ. ಕೆನೆಡಾ, ಆಸ್ಟ್ರೇಲಿಯಾಗಳೂ ಹೆಚ್ಚಿನ ಆಫ್ರೇಷ್ಯಾದ ರಾಷ್ಟ್ರಗಳೂ ಭಾರತಕ್ಕೆ ಸೈನಿಕ ಬೆಂಬಲವನ್ನು ನೀಡಿನೆ; ಮಾತ್ರವಲ್ಲ ಅವಶ್ಯ ವೆನಿಸಿದರೆ, ಸೈನಿಕ ನೆರವನ್ನೂ ನೀಡುವುದಕ್ಕೆ ತಯಾರಾಗಿವೆ.

ಇಲ್ಲ, ಸಂಯುಕ್ತ ಅರಬ ರಾಷ್ಟ್ರದ ಅಧ್ಯಕ್ಷ ನಸ್ಸೇರರನ್ನು ಅವಶ್ಯ ಸ್ಮರಿಸಿಕೊಳ್ಳಬೇಕು. ಹಿಂದಿನಿಂದಲೂ ನಸ್ಸೇರರು ಭಾರತದ ಸನ್ಮಿತ್ರರು. ಅವರು ನಾಲ್ಕು ಆಂಶಗಳ ಒಂದು ಸಂಧಾನ ಸೂತ್ರವನ್ನು ತಯಾರಿಸಿದರು ಕೂಡಲೇ ಸಮರಕ್ಕೆ ಕಡಿವಾಣ ಯುದ್ಧ ಪೂರ್ವಕ್ಕೆ ಮೊದಲಿದ್ದ ಸ್ಥಳಗಳಿಗೆ ಇಕ್ಕಡೆಯವರೂ ಹಿಂದೆಸರಿಯುವುದು ಎರಡೂ ಪಡೆಗಳ ನಡುವೆ ತಟಸ್ಥ ವಲಯ ನಿರ್ಮಾಣ ಮತ್ತು ಗಡಿ ಸಮಸ್ಯೆಯನ್ನು ಶಾಂತ ವಿಧಾನಗಳಿಂದ ಬಗೆಹರಿಸುವುದು ಇವರ ಆಶಯ ಇವುಗಳನ್ನು ಚೀನಿಯರು ತಿರಸ್ಕರಿಸಿದೆಯೆಂದು ಗೊತ್ತಾಗಿದೆ. ಪರಿಣಾಮವೇನೇ ಇರಲಿ, ನಸ್ಸೇರರ ಸಂಧಾನ ಪ್ರಯತ್ನ ಮುಂದೆಯೂ ಮುಂದುವರಿಯಬಹುದು.

ರಶ್ಯನ್ ನೀತಿ ಮಾತ್ರ ಪರಿವರ್ತನವಾದಂತಿದೆ. ಅದರ ನಿಲುವಿನ ಚೀನೀಯರಿಗೆ ಸಹಾಯಕವೆನಿಸುವಂತಿದೆ. ಭಾರತಕ್ಕೆ ಮಿಗ್ ವಿಮಾನಗಳನ್ನಾಗಲೀ ಇತರ ಶಸ್ತ್ರಾಸ್ತ್ರಗಳನ್ನಾಗಲಿ, ನೀಡಲಾಗುವುದಿಲ್ಲವೆಂದು ತಿಳಿಯುತ್ತದೆ. ಹಿಂದೊಮ್ಮೆ ಭಾರತದ ಕಡೆಗೆ ಸದ್ಭಾವನೆ ಹರಿಸಿದ್ದ ಸೋವಿಯತ್ತು ಈಗ ಮಿಗ ಮೇಷನೆಣಿಸುವಂತಿದೆ. ಆದರೆ, ಒಂದು ಮಾತನ್ನು ನಾವು ಗಮನಿಸಬೇಕು. ಭಾರತಕ್ಕೆ ಅದು ನೆರವಾಗುವುದು ಬೇಡ, ಅವೇ ಕಾಲವಧಿ ಚೀನೀಯರ್ಯಾರೂ ಶಸ್ತ್ರಾಸ್ತ್ರಗಳನ್ನೆದು ಪೂರೈಸಬಾರದು.

ಪಾಕಿಸ್ತಾನದ ಅಪ್ರಬುದ್ಧ ಈಗ ತುರಬಲಿಕಂತಿದೆ. ಆದರೆ, ಅದನ್ನು ಕೇಳುವವರು ಮಾತ್ರ ಯಾರೂ ಇದ್ದಂತಿಲ್ಲ. ಅಮೆರಿಕೆಯ ಮಾತಿನಲ್ಲಿ ಕೇಳುವುದಾದರೆ, ಭಾರತಕ್ಕೆಂದು ಶಸ್ತ್ರಾಸ್ತ್ರಗಳ ಪೂರಯ್ಯೆಯಾಗುತ್ತಿರುವುದು ಕೆಂಪು ಚೀನಾದಿಂದ ಬದುಕಿಕೊಳ್ಳಲು, ಚೀನವಿಂದು ಭಾರತಕ್ಕೆ ಮಾತ್ರ ಶತ್ರುವೆಂದು ತೋರಿಬರಬಹುದು. ಆದರೆ, ವಿಶಾಲವಾದ, ಸರಕ್ತವಾದ ಭಾರತವನ್ನೇ ನುಂಗಬಂದ ಅದು ಪಾಕಿಸ್ತಾನವನ್ನೂ ಕಬಳಿಸುವುದಿಲ್ಲವೆಂದೇನು? ಚೀನೀಯ ಆಕ್ರಮಣ ಭಾರತಕ್ಕೆ ಮಾತ್ರ ಬಂದ ವಿಪತ್ತಲ್ಲ; ಅದು ಇಡಿಯ ಉಪಖಂಡಕ್ಕೆ ಬಂದ ಆಹ್ವಾನ. ಹುಷಾರು

(ಬನೀ ಪುಟ ನೋಡಿರಿ)

ಖೀರಾ
ನೀವು ತಾಳಿಕೆ—ಬಾಳಿಕೆಯನ್ನು—ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಪೆಟ್ಟಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ—ಶಾಸ್ತ್ರಿ & ಕೊ, ಹಂಪನಕಟ್ಟೆ, ಮಂಗಳೂರು।
KHIRA

ಬೆಂಗಳೂರಲ್ಲಿ ಬೇಸ್ತು

ಲೇಖಿಕೆ— ಶ್ರೀಮತಿ ದೇವಕಿ ಎಂ. ಶೆಟ್ಟಿ, ಬೀರೂರು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೫

(ಬಸವ ಬೆಂಗಳೂರು ಸ್ಟೇಶನ್‌ನಲ್ಲಿ ಇಳಿದಿರುತ್ತಾನೆ. ಕಣ್ ಕಣ್ ಬಿಡ್ತಾ ಸುಬ್ಬನನ್ನು ಅರಸ್ತಾ ಇರ್ತಾನೆ ಅಷ್ಟರಲ್ಲಿ ಅವನನ್ನೆ ಹುಡುಕಿಕೊಂಡು ಬಂದವನಂತೆ ಒಬ್ಬ ಸೂಟುಧಾರಿ ಸಿಗರೇಟ್ ಎಳೀತಾ ಅವನ ಹತ್ತಿರಕ್ಕೆ ಬರುತ್ತಾನೆ. ಬಸವ ಒಂದು ಕಡೆ ಕಕ್ಕಾಬಿಕ್ಕಿಯಾಗಿ ನಿಂತು ಕೊಂಡು.)

ಬಸವ— ಅಯ್ಯಪ್ಪಾ, ನಾನ್ಯಾಕ್ ಬಂಪ್ಪಪ್ಪಾ ಈ ಪಟ್ಟಕ್ಕೆ! ಸುಬ್ಬ ಬರ್ಲೇ ಇಲ್ಯಲ್ಲಾ ದೇವರೇ. ಅಯ್ಯೋ ಅವನಿನ್ನೂ ಬಂದೇ ಇಲ್ಲಬಲ್ಲಾ! ನಾನೆಲ್ಲೀಂತ ಹೋಗಲಿ ಭಗ್‌ವಂತಾ, ಇಳಿದ ಜನ ಎಲ್ಲಾ ಹೋಗೇ ಬಿಟ್ರಲ್ಲಾ, ರೈಲಲ್ಲಿ ನನ್ನ ಜತೆ ಪರಿಚಯ ಆದೋರೂ, ನನ್ನ ದುಡ್ಡಿನಿಂದ ಕಾಫಿ ಕುಡಿದೋರೂ, ರೈಲಿಳಿದ ಕೂಡ್ಲೆ ಒಂದು ಮಾತೂ ಆಡ್ದೆ ಮುಂಗ ಮಾಯವಾಗಿ ಬಿಟ್ರಲ್ಲಾ!

ಸು. ಧಾರಿ— (ಬಹಳ ಗೊತ್ತಿದ್ದವನಂತೆ) ಒಹೋಹೋ ನೀನು ಇಲ್ಲಿ.....!!

ಬಸವ— (ಗಾಬರಿಯಿಂದ) ನೀವ್ಯಾರು ಸಾಮಿ, ನಾನ್ ನಿಮ್ಮ ಈ ಜನ್ಮದಲ್ಲಿಂತೂ ನೋಡಿಯೇ ಇಲ್ಲ. ಪೂರ್ವ ಜನ್ಮದಲ್ಲಾ ನೋಡಿದ್ದು ಜ್ಞಾಪಕಾನೇ ಇಲ್ಲಾ ನೀವು ಪೋಲೀಸ್ರು ಗೀಲೀಸ್ರು ಅಲ್ವಲ್ಲ

ಸೂ. ಧಾರಿ— ಅಲ್ಲ ಕಣೋ ನುಂಕಾ ದಿನ್ನೆ ನಿನಗೆ ನನ್ನ ನೆನಪೇ ಇಲ್ವೇ? ನೀನು ಬಂದದೆಲ್ಲಿಂದಾ ಹೇಳು. ನಿನ್ನ ಹೆಸರೇನು ಶೇಳು. ನೀನೆ ಹೌದೋ ಅಲ್ಲಪೋ ತಿಳೀತದೆ.

ಬಸವ— ನನ್ನ ಹೆಸರು ಬಸವ ನಾನು ಬಂದಿದ್ದು ಲಕ್ಷ್ಮೀ ಪುರದಿಂದ.

ಸೂ.ಧಾರಿ— ನಾನೂ ಆಲ್ದಿಯೇನೇ. ನಿನಗೆ ನನ್ನ ಗುರುತೇ ಹತ್ತೊಲ್ಲನೇ.

ಬಸವ— (ಇನ್ನೂ ಆಶ್ಚರ್ಯಗೊಂಡು)— ಏನ್ ಸ್ವಾಮಿ ನಿಮ್ಮಂತ ಆಫೀಸ್ರು ನಮ್ಮೂರಿನ ಅನುವಾಸಿನ ಊರಲ್ಲೂ ಇಲ್ಲಾಂತಂದ್ರೆ....

ಸೂ. ಧಾರಿ— ನಿಮ್ಮೂರಿನಿಂದ ಕೆಲವು ವರ್ಷಗಳ ಹಿಂದೆ ಒಬ್ಬ ಓಡಿ ಹೋಗಿದ್ದೋನಾದ್ರೂ ನೆನಪಿದೆಯೇಂತ ಕೇಳಿದೆ.

ಬಸವ— (ತಲೆ ಕೆರೆಯುತ್ತ) ಹ್ಞಾಂ! ನೆನಪಿಗೆ ಬಂತು. ಈಗ ಹನ್ನೆರಡು ವರ್ಷಗಳ ಕೆಳಗೆ ನಾಗ ಚಾರಿಯು ಮಗ ವರದಾಚಾರೀಂತ ಒಬ್ಬ ಓಡಿಹೋಗಿದ್ದ. ಅವನು ಅರಸೀಕೆರೆಯಲ್ಲಿ ಸತ್ತಾಂತ ಸುದ್ದಿ ಬಂದಿತ್ತು.

ಸೂ ಧಾರಿ— ನೋಡಿದ್ಯಾ... ಈಗಾದ್ರೂ ತಿಳೀತೇ. ಅದೇ ವರದಾಚಾರಿ ನಾನೂಂತ. ಸತ್ತಿದ್ದು ಸುಳ್ಳು. ಇನ್ನು ನನ್ನ ಹೆಸುರುಕಿ ಆ ಹಳ್ಳಿ ಕೊಂಪೆಗೇ ಮತ್ತೆ ಎಳಕೊಂಡು ಹೋಗ್ತಾರೇಂತ ಆ ತರಹ ನಾನೇ ಸುದ್ದಿ ಹುಟ್ಟಿಸಿದ್ದೆ.

ಬಸವ— ಆದರೇ.....! ಅವನು ದಪ್ಪಗೇ..... ಕುಳ್ಳಗೇ..... ಇದ್ದಾ..... ಅವನಿಗೀಗ ಇದ್ದಿದ್ರೆ ವಯಸ್ಸು ಮೂವತ್ತೈದಾದ್ರೂ ಇರ್ಬೇಕಾಗಿತ್ತು. ನಿನ್ ನೋಡಿದ್ರೆ, ತೆಳ್ಳಗೆ, ಬೆಳ್ಳಗೆ. 25 ವರ್ಷದ ಹುಡುಗಾ ಇದ್ದಂಗೆ ಇದ್ದೀಯೂ!

ವರದ— ಅಹ್ಹಹ್ಹಾ! ಅದೇ ಕಣೋ ಇರೋದೂ, ಪಟ್ಣದಲ್ಲಿ ಮಜಾಂತಂದ್ರೆ. ಈ ಬೆಂಗ್ಳೂರಲ್ಲಿ ಯಾವ ರೂಪಾನೂ ಪಡೀ ಬಹುದೂ, ಯಾವ ಸುಖ ಬೇಕಾದ್ರೂ ಅನುಭೋಗಿಸ್ಬಹುದು. ನೋಡು, ನಿನ್ನ ಈ ಡೊಳ್ಳು ಹೊಟ್ಟೆ, ನಿನ್ನ ಈ ಕರೀ ಬಣ್ಣ, ಈ ಜುಟ್ಟು, ಈ ಬೊಟ್ಟು, ಕಡೆಗೇ....ನಿನ್ನೆಲ ಒಂಟೀನೂ ಹೋಗುತ್ತೆ? ಈಗ ಆದಿದ್ದಿ ಬಿಡು. ನೀನೆಲ್ಲಿಗೆ ಹೋಗ್ಬೇಕು? ನೆಂಟ್ರು ಮನೆ ಇದ್ಯೋ ಆದೂ ಇಲ್ವೋ?

ಬಸವ— ನಮ್ಮ ಸುಬ್ಬ ಬರ್ತೀನೆ ಅಂದಿದ್ದ. ನಮ್ಮೂರ ಜಮೀನ್ದಾರರ ಮಗ್ನೂ ಇಲ್ಲೇ ಎಲ್ಲೋ ಓದ್ತಾ ಇದ್ದಾರೆ. ಸುಬ್ಬನ ಹೆತ್ತಕ್ಕೆ ನನ್ನ ಕರಕೊಂಡು ಹೋಗ್ಬಿಟ್ಟೆ ನಿನ್ನುಪಕಾರ ನಾನು ಮರೆಯೂಕೇ ಇಲ್ಲ.

ವರದ— ಅವನನ್ನ ನಾನು ನೋಡಿಯೇ ಇಲ್ಲ. ಆಪರೂಪಕ್ಕೆ ಬಂದಿದ್ದೀಯೂ. ನಾನ ಒಂದು ಹೋಟ್ಲಲ್ಲಿ ರೂಮ್ ಮಾಡ್ಕೊಂಡು ಇದ್ದೀನೆ. ಅಲ್ಲೇ ನೀನೂ ಬಂದಿದ್ಬಿಡು. ನೀನು ಬಂದದ್ದಾದರೂ ಯಾಕೇಂತ ಹೇಳ್ಲೇ ಇಲ್ವಲ್ಲ?

ಬಸವ— ಇನ್ನಾಕೆ ಬರೋದು, ಹುಟ್ಟಿದವ ಸಾಯೋ ಮೊದ್ಲು ಪಟ್ಟ ನೋಡಿ ಸಾಯಬೇಕೂಂತ ಗಾದೇನೇ ಇದೆಯಲ್ಲ. ಅಷ್ಟೆ, ಮೂರು ದಿನ ಇದ್ದು ಎಲ್ಲ ನೋಡ್ಕೊಂಡು ಹೋಗೋಣಾಂತ.

ವರದ— ಓ ಹಾಗಾಂದ್ರೆ ದುಡ್ಡುಗಿಡ್ಡು ಜೋರಾಗಿ ತಂದಿರ್ಬೇಕ.!

ಬಸವ— ಹೆಚ್ಚೇನೂ ತಂದಿಲ್ಲ. ಒಂದಿನ್ನೂರು ರೂಪಾಯಿ ತಂದೀನಿ.

ವರದ— ಅಷ್ಟಿಟ್ಟುಕೊಂಡು ಹೀಗೆ ನಿಂತಿದ್ದೀಯಲ್ಲ. ಇಲ್ಲಿ 'ಸಿಕ್ ಸೊಕೆಟ್' ಬೇರೆ ಇದೆ.

ಬಸವ— ಹ್ಞಾ! ಹಾಗಂದ್ರೇನು?

ವರದ— ಹಾಗಂದ್ರೆ ಕತ್ತರಿ ಪ್ರಯೋಗ. ಹಣದ ಜೇಬನ್ನೇ ಕತ್ತರಿಸಿ ಮುಂಗಮೂಯೂ ಮೂಡೋಡು. ಬಾ, ಬಾ, ಬೇಗ ಹೋಗೋಣ. (ಹೋಗುವರು)

ದೃಶ್ಯ ೬

[ಬಸವ ಮತ್ತು ವರದಾಚಾರಿ ಒಂದು ಹೋಟೆಲಿನಲ್ಲಿ ರೂಮುಹಿಡಿಯುತ್ತಾರೆ. ಬಸವನಿಗೆ ಆಲ್ಲಿಯ ಅಂದ ಚಂದ, ಕನ್ನಡಿ ನಾಲ್ಕೂ ಕಡೆಗೆ, ಸ್ಪ್ರಿಂಗಿನ ಮಂಚ, ಆದು, ಇದು, ನೋಡಿಯೇ ಬೆಪ್ಪು ಹಿಡಿದವನಂತೆ ಕೂತಿರ್ತಾನೆ. ಅವನಿಗೆ ತಾನೆಲ್ಲಿದ್ದೀನೆಂಬುದೇ ತಿಳಿಯದೆ ಮುಂಕು ಹಿಡಿದಂತಿರುತ್ತದೆ)

. ವರದ—ಅದೆಲ್ಲ ಸರಿ. ಈಗ ನಾವು ಸ್ನಾನ ಮಾಡಿ, ಊಟಮಾಡ್ಕೊಂಡು ಆದೇನ್ ನೋಡ್ಬೇಕೊ,ಸಿತಗೊಳ್ಬೇಕೋ ಅದೆಲ್ಲಇವತ್ತೇ ಮುಗಿಸ್ಬಿಡೋಣ. ನಾಳೆ ಸಿನಿಮಾ ನೋಡಿ, ಬೆಂಗಳೂರಿನ ಒಳ್ಳೊಳ್ಳೆಯ ಸ್ಥಳಾ ನೋಡ್ಕೊಂಡು ನಾಡದು ನಿನಗೆ ಹೋಗುವುದಕ್ಕೆ ಸರಿಯಾಗುತ್ತೆ. ಈಗ ನಿನಗೆ ಸಾವಾನು ಏನೆಲ್ಲ ಬೇಕು ಅನ್ನೋದನ್ನ ಹೇಳು.

ಬಸವ—ನನ್ನ ಹೇಂಡ್ತಿ, ತಿಮ್ಮಿ ನಿನಗೊತ್ತೇನ-? ಅವಳಿಗೆ ಒಂದ್ಸೀರೆ ಈಗಿನ ನಮೂನೆದ್ದು, ನೈಟೀಸ್, ಯೂರಪಿನ್ನು, ಟೀಪು, ಒಳೆ...ಎಲ್ಲ ಒಂದಿಪ್ಪತ್ತೈದು ರೂಪಾಯಿನೊಳಗಿರ್ಬೇಕು ನೋಡು ಪಾಪ ನನ್ ತಿಮ್ಮಿ ಹೆಂಗಿದ್ದಾಳೋ ಏನೋ ಅತ್ತೂ, ಅತ್ತೂ, ಸಣ್ಣವಾಗಿರ್ಬೇಕು ಇಷ್ಟರಲ್ಲೇ. ಮದುವೆ ಆಗಿ ಹದಿನೈದು ವರ್ಷ ಕಳೀತು. ಒಂದು ದಿನಾನಾದ್ರೂ ಆ ಪಳಪನ್ನ ನಾನು ಬಿಟ್ಟೋನಲ್ಲ. ನನ್ನ ಆವಳು ಬಿಟ್ಟೋಳಲ್ಲ. ಮಕ್ಕೂ ಮುರೀ ಇಲ್ಲಾಂತ ನನ್ನೇ ಮಗೂ ಸಾಕಿದಂಗೆ ಸಾಕಿದ್ದಾ ನನ್ ತಿಮ್ಮಿ, ಪಾಪ... [ಕಣ್ಣು ಒರಸುವನು]

ವರದ— ಥೂ, ನಿನ್ನ ಪಟ್ಟದಲ್ಲೂ ಹೆಳ್ಳೀನ. ಆ ಹಳ್ಳೀ ಹೆಂಡ್ತೀ ಮುಕ್ಕನ್ನ ನೆನೆಸೋಕು, ನಿನ್ನನ್ನೇ ನಾನು ನೋಬಲು ನೋಡಿದ್ದು, ಹೆಣ್ಣಂ, ಹೋಗು ಮೊದಲು ಸ್ನಾನ ಮುಗಿಸಿ ಬಾ, ನಾನು ಕೆಳಗೆ ಹೋಗಿ ಊಟದ ವ್ಯವಸ್ಥೆ ಮಾಡಿ ಬರ್ತೀನಿ [ಹೋಗುವನು]

ಬಸವ—(ಬಚ್ಚಲು ಮನೆಗೆ ಹೋಗಿ ಅಲ್ಲಿಂದ ಹೊರ ಬಂದು) ಅಬ್ಬ! ಏನು ಮಯೂಂಕಂದ್ರೆ ತಿರುಗಿಸಿದಷ್ಟು ಬಿಸಿನೀರೂ ಬರ್ತೈತೆ, ತಣ್ಣೀರೂ ಬರ್ತೈತೆ. ಎಲ್ಲಿಂದ, ಏನು, ಆನ್ನೋದೇ ತಿಳಿಯೋದಿಲ್ಲಲ್ಲ!! ಪಟ್ಣಂತಂದ್ರೆ... ! ಇದೇನಾ ದ್ರೂ ಮೂಯೂ ಲೋಕ ಆಗಿರ್ಲಿಕ್ಕಿಲ್ಲ.... .... ! ಅಲ್ಲಾ....ನಮ್ಮ ವರದಾಚಾರಿ ಪುಣ್ಯಾನೇ ಪುಣ್ಯ ದಿನಾ ಇಂಥ ಸುಖ ಅವನ ತಲೇಲಿ ಬರೆದಿರ್ಬೇಕಾದರೆ! ಪೋಲಿ ತಿರುಗ್ತಾ ಇದ್ದೋನು ಓಡಿ ಬದ್ರೂ ಇಂತಾ ಸುಖಾ ಪಡ್ತಾನಲ್ಲ!! ಸುಖಾನ! ನಾವೂ ಇದ್ದೀವಿ ಹಳ್ಳಿ ಮುಂಕುಗಳು ದುಡೀತೀವಿ, ತಿನ್ತೀವಿ, ದ್ ಕೊಳ್ತೀವಿ. ಬೆಳಗೂ ರಾತ್ರಿ ಇದ್ದ ನನ್ ಕೆಲಸ, ನನ್ ಸುಖಾ, ಹ್ಞೂಹ್ ನಮ್ದೂ ಒಂದು ಜೀವನಾನೇ ಅಂತ ಥೂತ್, ಆ ಗಲೀಜು ಮಣ್ಣಲ್ಲಿ ಗೇದೂ ಗೇದೂ, ಆ ಸೆಗಣೀ ಎಮ್ಮೇ ತೊಳೆದೂ, ತೊಳೆದೂ, ಬೆಲೂಂತಿಲ್ಲ, ಮುಕೇಂತಿಲ್ಲ ಚಳೇಂತಿಲ್ಲ ಎಲ್ಲಾ ಕಾಲದಾಗೂ ದುಡಿದೂ ದುಡೂ ನನ್ ರೂಪಾನೇ ಕೆಟ್ ಹೋಗತೆ. ಈಗಾ....ನಾನೂ ಯೋಸ್ನೆ ಮಾಡ್ಬೇಕು. ನನ್ ತಿಮ್ಮಿ ಜತಗೇ ಇಲ್ಲಿ ಬಂದ್ ವಾಸಾ ಮಾಡ್ಬೇಕೂಂತ ಯೋಸ್ನೆ ಬರ್ತತೆ. ಬಿಬ್ಬಬ್ಬ ! ಏನು ಶೋಕೇ ಜನಾ ಈ ಊರಲ್ಲಿ ಗಂಡ್ಸು ಹೆಂಗ್ಸು ವೇಷ ಹಾಕುತ್ತಾರೆ. ಹೆಂಗ್ಸು ಗಂಡ್ಸಾಗಿ ವೇಶ ಹಾಕ್ಕೊಂಡು ತಿರುಗ್ತಾರೆ ಗಂಡಸ್ರಂತೆ ಕೂದ್ಲೂ ಕತ್ತರಿಸಿಕೊಂಡು ಓಡುತ್ತಾರೆ ಅಲ್ಲಾ.... .... ನಾನೂ ನನ್ ತಿಮ್ಮಿನೂ ಇಲ್ಲಿಗೆ ಬಂದ್ ಹೆಂಗೇ ಮಾಡ್ಕೊಂಡ್ರೆ !... ಥೂ, ಥೂ ಏನು ಹಾಳು ಯೋಸ್ನೆ ತಿಮ್ಮಿ, ಕೂದಲೆ ಹೆಂಗ್ ಹೇಳಿದ್ರೆ, ಕವಾಳಕ್ಕೇ .... (ಅಷ್ಟರಲ್ಲಿ ಮಂಚದಿಂದ ಹಾರಿ ನಿಲ್ಲಿಸಿತ್ತಾನೆ ಅವನು ಕೂತಲ್ಲಿ ಹತ್ತಿರದಿಂದ "ಟ್ರಿಣ್ರಿಂ.... ಟ್ರಿಣ್ರಿಂ ....ಟ್ರಿಣ್ರಿಂ. ... ಟ್ರಿಣ್ರಿಂ.... .... ಎಂಬ ಟೆಲಿಫೋನು ಎರಿಸುತ್ತಿರುತ್ತದೆ. , ಎಲ್ಲಂದ ಏನು ಏನು ಬುದು ತಿಳಿಯದೆ ಆ ಕಡೆ ಈ ಕಡೆ ಓಡುತ್ತಾ ಇರುತ್ತಾನೆ.)

ಬಸವ— ಅಯ್ಯೋಪ್ಪಾ! ....ವರದ ಚಾರೀ! ಇದೇನೋ ! ಈ ಭೂತದ್ ಮನೆಲಿ ನನ್ ಬಿಟ್ಟು ಎಲ್ಲಿ ಹೋದ್ಯೊ? ಯಾರೂ ಇಲ್ಲ ಈ ಕೋಣೇಲಿ ಇದೇನೋ ಕರ್ಕಶ ಶಬ್ದಾ—!! ನನ್ನ ಕೊಲೆ ಮಾಡ್ಬೇಕಾಂತ ಮಾಡಿದ್ಯಾ ಹೆಂಗೆ-.... ದೇವನಪ್ಪಾ... ಬಾಗಿಲು ತೆಗೆದು ಓಡ್ಬರುತ್ತಾನೆ. ಅವನೆದುರಿಗೆ ನಾಜೂಕಿನ ಧಳಕು ಪಳಕಿನ ಸೀರೆಯುಟ್ಟು, ಪೌಡರ್ ಸ್ನೊ, ಬಣ್ಣ ಬಳಿದುಕೊಂಡ ಯುವತಿಯಂತೆ ಕಾಣುವ ಹೆಂಗಸು ಬರುತ್ತಾಳೆ ಅವಳನ್ನು ನೋಡಿ ಕಣ್ ಕಣ್ ಬಿಡ್ತಾನೆ.)

ಬಸವ— ಹ್ಞಾಂ! ಇದೇನು ಮೆಲೋಕವೇ ಸರಿ. ಇವಳು ಅಪ್ಸರೆನೆ ಸರಿ. ನಮ್ಮೂರ ಬಯಲಾಟದಲ್ಲಿ ರಂಭೆ ವಾರ್ಟು ಮಾಡಿದ ಗಂಡಸಂತಿದೆಯಲ್ಲ ಅದ್ರೂ ಬಾಳ ಚಲೋದಂಗಿ ಕಾಣ್ತಾಳೆ. ಇವಳು ಹೆಣ್ಣೇ ಕಣ್ಬೇಕು.

ಹೆಂಗಸು— (ಮುಗುಳು ನಗುತ್ತ ಅವನ ಕೈ ಹಿಡಿದು) ಇದೇನು ಓಡಿ ಹೋಗ್ತಾ ಇರೋದು? ತಪ್ಪು ಕಚ್ಚಿ ಬದ್ದು ಹೋಗುದ್ದೂ ಗೊತ್ತಿಲ್ವೆ ಯೂಕಷ್ಟು ಗಾಬರಿ ಪಟ್ಟು ಇದ್ದೀರಿ?

(ಇನ್ನೇ ಸುಖ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಲೇಖಾಂಕ ೮

ರಾಜಾಜಿಯವರ ಕಲಾಸಿದ್ಧಿ

ರಾಯಪ್ಪನ ತಾಯಿ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ಮಲತಾಯಿಯ ದೆಸೆಯಿಂದ ಕಷ್ಟ ಕ್ಕೀಡಾದ ಹುಡುಗನೊಬ್ಬನ ದುಃಖವು ಯವಾದ ಜೀವನವನ್ನು ಶ್ರೀ ರಾಜಾಜಿ ಯವರು ತಮ್ಮ "ತಾಯಿ" ಎಂಬ ಕಥೆ ಯ ಮೂಲಕ ಚಿತ್ರಿಸಿರುವರು ಮಲ ತಾ ಯಿಯಿಂದ ನೊಂದ ಮಕ್ಕಳ ಕಥೆಯೇ ನೂ ಹೊಸತಲ್ಲವೆಂದು ಕೆಲವರು ಭಾವಿಸ ಬಹುದು. ಈ ಕಥಾ ವಸ್ತು ಸರ್ವಜನದಲ್ಲಿ ನಿತ್ಯ ಸತ್ಯವಾದುದು, ಹಾಗೂ ಇದರ ಸ ಲವಲ ಮುಖಗಳ ಚಿತ್ರಣ ಸಾಹಿತ್ಯದ ಮೂಲಕ ಶ್ರಕಾಶಕ್ಕೆ ಬರುತ್ತಿರುವುದಾದ ರೂ, ಶ್ರೀ ರಾಜಾಜಿಯವರು, ಈ ಅನಾ ಥ ಹುಡುಗನೊಬ್ಬನ ಕರುಣ ಕಥೆಯ ವಿ ಚಿತ್ರ ಪರಿಸ್ಥಿತಿಯನ್ನು ತಾವು ಸ್ವತಃ ಕಂ ಡು ನಿರೂಪಿಸಿರುವ ರೀತಿ, ನಾವೀನ್ಯತೆ ಯಿಂದ ಕೂಡಿದೆ. ಸರ್ವಜನದ ಮಲತಾ ಯೇ ತೆಂದೆಯವರು ಈ ಕಥೆಯನ್ನೊದಿದರೆ, ಅವರ ಹೃದಯ ಕರಗಬಹುದು, ಪುತ್ರವಲ್ಲ ಯಾರು ಓದಿದರೂ, ಮನ ಮರುಗೀತು! ಕಥೆಗಾರರ ಕಥಾ ನಿರೂಪ ಣೆಯು, ಆ ಘಟನೆ, ನಮ್ಮ ಮುಂದೆ ನಡೆ ಯುತ್ತಿರುವಂತೆ, ಚಿತ್ರಿಸುತ್ತಿದೆ.

ಶ್ರೀ ರಾಜಾಜಿಯವರು ಕಥಾ ನಾಯಕನ ಪರಿಚಯವನ್ನು ವಾಚಕರಿಗೆ ಮೊದಲೇ ಮಾಡಿಸಿಕೊಡುತ್ತಾರೆ—

"ರಾಯಪ್ಪನು ನಮ್ಮೂರಲ್ಲಿ ಹೇಸರು ಪಡೆದಿರುವ ಒಬ್ಬ ಹುಡುಗ. ಅವನು ಜಾತಿ ಯಲ್ಲಿ ಕ್ರೈಸ್ತಿಯನ್. ಆದರೆ ಪ್ರತಿ ನಿತ್ಯವೂ ಅವನು ನಮಸ್ಕಾರ ಮಾಡುವುದು ವಿನಾಯಕನಿಗೆ! ಮತ್ತು ರಾತ್ರೆ ಅತ ಮಲಗುವುದು ವಿನಾಯಕನ ಗುಡಿಯಲ್ಲಿ; ದೇವರ ಹಿಂಬದಿಯಲ್ಲಿ! ರಾತ್ರೆ ಮಲಗುವುದಕ್ಕೆ ವಿನಾಯಕನ ವರ್ಷಿಯ ಹಿಂ ಭಾಗದ ಸ್ಥಳಕ್ಕಿಂತ ಜಿನ್ನಾಗಿರುವ ಬೇ ರೆ ಸ್ಥಳವಿದೆ, ಎಂದರೆ, ರಾಯಪ್ಪ ಆದ ರಿಂದಿಗೂ ಒಪ್ಪತಕ್ಕವನಲ್ಲ! ಕೆಲವರು ಅವನೊಡನೆ - 'ನೀನೇಕಪ್ಪ ಗಣಪತಿಯ ಗುಡಿಯಲ್ಲಿ ಮಲಗುತ್ತೀಯ' ಎಂದು ಕೇಳು ವುದಾಗ ಅತ-'ನನಗೆ ಅದರಿಂದಲೇ ಅ ಧಿಕ ನೆಮ್ಮದಿ ಸಿಕ್ಕುತ್ತದೆ!' ಎನ್ನುತ್ತಿದ್ದ. ಮ ತ್ತೆ ಯಾರಾದರೂ ಅತನನ್ನು-'ನೀನೇ ಕ್ರೈಸ್ತಿಯನ್ ಜಾತಿಗೆ ಸೇರಿದ್ದೋ? ಆಥ ವಾ ನಿನ್ನ ಅಪ್ಪನೂ ಕ್ರೈಸ್ತಿಯನ್ ಜಾತಿ ಯವನೇ?' ಎಂದು ಪ್ರಶ್ನಿಸಿದಾಗ-ರಾ ಯಪ್ಪ-ಹೆಮ್ಮೆಯಿಂದಲೇ..ನಾನೇ ಸೇರಿ ದ್' ಎಂದು ಹೇಳುತ್ತಿದ್ದನಂತೆ ಇಷ್ಟು ಪರಿಚಯ ಹೇಳಿ ಕಥೆಗಾರರೆ, ಕಥೆಯ ನ್ನು ಮುಂದುವರಿಸುತ್ತಾರೆ. ಕಥೆಯು ಸಾ ರಾಂಶ ಇಷ್ಟು—

'ಕಂದ ಸ್ವಾಮಿ ಅಯ್ಯರರು ಪಂಜುಪ ಗ್ರಾಮದ ಎಕೌಂಟೆಂಟರಾಗಿದ್ದರು. ಒಂದು ದಿನ ಅವರ ಪತ್ನಿ ಶೈತಾನಕಂಡಂಬ ಕೆರೆಗೆ ಸ್ನಾನಕ್ಕೆ ಹೋದವರು ಕಾ ಣ ಜಾರಿ ಬಿದ್ದುಬಿಟ್ಟರು. ಕೆರೆಯಲ್ಲಿ ಮುಳುಗುವ ಮೊದಲು ಆಕೆ-'ಅಯ್ಯೋ ನನ್ನ ಪತ್ತೇ! ನನ್ನ ಹುಡುಗನಿಗನ್ನು ಯಾರು ಗತಿಯಪ್ಪಾ!?' ಎಂದು ಬೊಬ್ಬಿ ಟ್ಟಂತೆ ಮರುಕ್ಷಣದಲ್ಲೇ ಆಕೆ ಕೆರೆಯ ಲ್ಲಿ ಮುಳುಗಿ ಪ್ರಾಣ ಬಿಟ್ಟಿದ್ದಳು! ಆಕೆ ಯ ಆರು ವರ್ಷದ ಹುಡುಗ ವೆಂಕಟರಾ ಯ ಅನಾಥನಾದ! ಕಂದ ಸ್ವಾಮಿ-ಅಯ್ಯ ರರು, ಹೊಸ ಹುಡುಗಿಯನ್ನು ಹುಡುಕಿ ಜೇರೆ ವದುನೆ ಮಾಡಿಕೊಂಡರು. ಹುಡು ಗ ವೆಂಕಟು, ಕೆಲವು ಕಾಲ ಮಲತಾಯಿ ಯ ಸೇವೆ ಮಾಡುತ್ತಾ ಕಳೆದನು. ಆದರೆ ದಿನ ದಿನವೂ ಆ ಮಲತಾಯಿ, ಏನಾದ ರೂ ನೆಪಹುಡಿದು, ಈ ಹುಡುಗನನ್ನು ಕ ರುಣೆಯಿಲ್ಲದೆ ಹೊಡೆಯತೊಡಗಿದಳು. ಗಂಡನೊಡನೆಯೂ ದೂರು ಜೇಳಿ ಹೊ ಡೆಸತೊಡಗಿದಳು. ಆ ತಂದೆಯೂ ಕೂಡ ಹೊಸ ಹೆಂಡತಿಯ ಮೋಹದಿಂದ ಮಗ ನನ್ನು ಬಡಿಯುಲಾರಂಭಿಸಿದಾಗ, ಆರು ವರ್ಷದ ಹುಡುಗ ವೆಂಕಟುಗೆ ಆಧಾರವೇ ಇಲ್ಲದಾಯಿತು! ಈ ಸ್ಥಿತಿಯಲ್ಲಿ ಕಣ್ಣೀರು ಳಿಸುತ್ತಿದ್ದ ವೆಂಕಟು ಶಾಲೆಯಲ್ಲೂ ದಡ್ಡ ನಾಗಿ ಮಾಸ್ತರರಿಂದಲೂ ಹೊಡೆತ ತಿನ್ನು ತ್ತಿದ್ದ. ಅವನಿಗೆ, ಆತನ ತಾಯಿಯದೇ ಯೋಚನೆಯಾಗಿತ್ತು!

ಒಂದು ದಿನ ಈ ಹುಡುಗ, ತನ್ನ ಗೆಳೆ ಯ ಶೌರಿಯೊಡನೆ, ಆತನ ಮನೆಗೆ ಹೋ ದಾಗ, ಅಲ್ಲಿ ಶೌರಿಯ ತಾಯಿ ಮೇರಿ, ಶೌರಿಯನ್ನು ಪ್ರೀತಿಯಿಂದ ವೈಡಡವಿ ಒ ಳಗೆ ಕರೆದುಕೊಂಡು ಹೋ ದು ದನ್ನು ನೋಡಿದ ವೆಂಕಟುಗೆ, "ಅಯ್ಯೋ! ತನ್ನ ತಾಯಿ ಏಕೆ ಹೀಗೆ ಮಾಡುವುದಿಲ್ಲ"? ಎಂದು ಕಂಡಿತು. ಶೌರಿಯ ತಾಯಿ ಮೇರಿ ವೆಂಕಟುವನ್ನೂ ಪ್ರೀತಿಯಿಂದ ಕಂಡು ಉಪಚರಿಸಿದಳು. ಮತ್ತು ನೀನು ವರ್ಜಿನ ಮೇರಿಯನ್ನು ಪ್ರಾರ್ಥಿಸಿದರೆ ನಿನ್ನ ತಾ ಯಿ ಸಿಕ್ಕುತ್ತಾಳೆ! ಎಂದು ಹೇಳಿ ಮೇರಿ ಯ ಪರತೋರಿಸಿದಳು. ಮೇರಿಯ ಪರ ವಸ್ಥೇ ಎಪೆಯಿಕ್ಕದೆ ನೋಡಿದ ಹುಡುಗ ನಿಗೆ, ಆತನ ತಾಯಿಯು ಆ ಪರದಿಂದ ಇಳಿದು ಬಂದ ಹಾಗಾಯಿತು! ಹೀಗೆ ತಾಯಿ.ಯೊಡನೆ ಭಾವನಾ ಲೋಕದಲ್ಲಿ ವಿಹರಿಸುತ್ತಿದ್ದ ವೆಂಕಟು ಮತನಾಡುತ್ತ ಒಬ್ಬ ವಾದ್ರಿಯ ಮನೆಗೆ ಹೋಗುತ್ತಾನೆ! ಆಗ ಆತನ ತಾಯಿ, ತಾನು ಪಾದ್ರಿಯು ಮನೆಗೆ ಬರುವುದಿಲ್ಲವೆಂದು ಹೇಳಿ ಅದೃ ಶ್ಯಳಾದಳು. ಆ ಪಾದ್ರಿಯು ಹುಡುಗನ ನ್ನು ಉಪಚರಿಸಿ, 'ಈ ನೋಡಯ್ಯ ನಿನ್ನ ತಾಯಿ!' ಎಂದು ಹೇಳಿದ. ಆದರೂ ಹು ಡುಗ ಒಪ್ಪಲಿಲ್ಲ. ಆಸ್ಪತ್ರೆಲ್ಲೇ ಆತನ ಮೈ ಕಾವೇರಿ ಜ್ವರ ಬಂದಿತ್ತು. ತಾಯಿಯನ್ನೆ ಗಲಿದ ದುಃಖದಿಂದ ಆತ ಅಂದು ರಾತ್ರೆ, ಆ ಊರಿನ ವಿನಾಯಕನ ಗುಡಿಗೆ ಹೋ ಗಿ ಆ ಮೂರ್ತಿಯಹಿಂದುಗಡೆ ಮಲಗಿದ. ಆತನಿಗೆ ನಿದ್ರೆ ಬಂದೊಡನೆಯೇ ಆತನ ತಾಯಿ ಹತ್ತಿರ ಬಂದು ಮೈದಡವಿ ಆತ ನನ್ನು ಉಪಚರಿಸುತ್ತಿರುವಂತೆ ಭಾವನಾ ಯಿತು. ಆ ಬಳಿಕ ಆತಾಯಿ ವೆಂಕಟೂ ನೀನು ಪ್ರತಿ ನಿತ್ಯವೂ ಇಲ್ಲಿಗೆ ಬಂದು ಮ ಲಗಿಕೋ! ನಾನು ನಿತ್ಯವೂ ನಿನಗೆ ನಿದ್ರೆ ಬಂದೊಡನೆ ಬಂದು ಕಾಣಿಸಿಕೊಳ್ಳುತ್ತೇ ನೆ!' ಎಂದು ಮತು ಕೊಟ್ಟಳಂತೆ! ಹೀಗೆ, ಈ ಹುಡುಗ ಆ ಬಳಿಕ ನಿತ್ಯವೂ ಗಣೇಶನ ಗುಡಿಗೆ ಬಂದು ಮಲಗ ತೊಡ ಗಿದ. ನಿತ್ಯವೂ ಆತನಿಗೆ ತಾಯಿಯ ದರ್ಶನವಾಗ ತೊಡಗಿ ಆತ್ಮಶಾಂತಿಲಭಿ ಸಿತು. ತಾಯಿಯನ್ನಗಲಿದ ಶಬ್ದಲಿಗೆ ಅದಕ್ಕಿಂತ ಹೆಚ್ಚಿನದೇನುಬೇಕು?

ಆದರೆ ಈ ಸಂತೋಷ ಆತನಿಗೆ ಹೆ ಚ್ಚು ದಿನ ಉಳಿಯಲಿಲ್ಲ. ಒಂದು ದಿನ

(ಐದನೇ ಪುಟ ನೋಡಿರಿ)

ಕ್ಷಯರೋಗವನ್ನು ಗುಣಪಡಿಸಬಹುದೇ?

ಆಧುನಿಕ ಔಷಧ ಚಿಕಿತ್ಸೆಯಿಂದ ಕ್ಷಯರೋಗವನ್ನು ಗುಣಪಡಿಸಬಹುದು. "ನೆಮ್ಬೈಬೈಸಿನ್" "ವಾರಾ ಎಮ್ಮಿನೊ ಸೆಲ್ಫೊವೈಬಿಸಿನ್" ಮತ್ತು "ಪಸೊಸಿಯೂಸಿಡ್" ಎಂಬೀ ಔಷಧಗಳು ಅತ್ಯಂತ ಪರಿಣಾಮಕಾರಿ ಯಾದುವು; ಮತ್ತು ಅವನ್ನು ಜಾಗರೂಕತೆಯಿಂದ ಹೆಚ್ಚಿನ ಅವಧಿ ವರೆಗೆ ಕೊಟ್ಟರೆ ಉತ್ತಮ ಫಲಿತಾಂಶ ನಿಶ್ಚಿತ. ಪ್ರಾಮುಖ್ಯ ವಿಚಾರವೆಂದರೆ ಚಿಕಿತ್ಸೆಯನ್ನು ಜೇಗನೇ ಪ್ರಾರಂಭಿಸುವುದು ಮತ್ತು ಅದನ್ನು ಎಪೆಯ ತಜ್ಞರು ಆಗತ್ಯ ವೆಂದು ನೆನಸುವ ಕಾಲಾವಧಿ ವರೆಗೆ—ಹೆನ್ನೆರಡು ತಿಂಗಳು, ಅಥವಾ ಎರಡು ವರುಷಗಳಾದರೂ ಸರಿಯೇ — ಆ ತನಿಕ ಮುಂದುವರಿಸುವುದು ಈಗಿನ ಕಾಲದಲ್ಲಿ ಕ್ಷಯ ಪೀಡಿತ ರೋಗಿಯೊಬ್ಬನು ಸಂಪೂರ್ಣವಾಗಿ, ಕ್ರಮವಾದ ಮತ್ತು ಕ್ರಿಯಾಶೀಲ ಜೀವನವನ್ನು ಅದಷ್ಟು ಜೇಗನೇ ಯೂವಾಗಲೂ ತಿರುಗಿ ಪಡೆಯಬಹುದಾಗಿದೆ.

ನಮ ಪೆಪಲಿಯಲ್ಲಿರುವ "ಭಾರತ ಕ್ಷಯರೋಗ ಸಮಿತಿ" ಇವರಿಂದ ಹೊರಡಿಸಲಾದ ಆರೋಗ್ಯ ಭೋದನಾ ಸಾಲು.



ಟಿ. ಬಿ ಮೊಹರುಗಳನ್ನು ಕೊಂಡುಕೊಂಡು ನಿಮ್ಮ ರಾಜ್ಯದ ಕ್ಷಯರೋಗ ಸಮಿತಿಯ ಕೈಗಳನ್ನು ಬಲಪಡಿಸಲು ಸಹಾಯ ಮಾಡಿರಿ. ಆಗ ಮಾತ್ರ ಅವರಿಗೆ, ಬಡವರಾದ ಕ್ಷಯರೋಗಿಗಳಿಗೆ ಉಚಿತವಾಗಿ ಔಷಧಗಳನ್ನು ಕೊಟ್ಟು ಸಹಾಯ ಮಾಡಲು ಅನುಕೂಲವಾಗುತ್ತದೆ.

ಒಂದು ಮುದ್ರೆಯ ಬೆಲೆ ಬರೇ ಪತ್ತು ನಯೇಪೈಸೆ ಮಾತ್ರ.

ಮೈಸೂರು ರಾಜ್ಯದ ಕ್ಷಯರೋಗ ಸಮಿತಿ, ಸರಕಾರಿ ಟಿ. ಬಿ. ಸೆನೆಟೋರಿಯಂ, ಪಳೀ ನುದ್ರಾಸು ರಸ್ತೆ, ಬೆಂಗಳೂರು; ದಕ್ಷಿಣ ಕನ್ನಡ ಜಿಲ್ಲಾ ಟಿ. ಬಿ. ಎಸೋಸಿಯೇಶನ್, ಸರಕಾರಿ ವೆನ್‌ಲೋಕ್ ಆಸ್ಪತ್ರೆ, ಮಂಗಳೂರು, ಮತ್ತು ಅವರ ಬೇರೆ ಬೇರೆ ಏಜನ್ಸಿಗಳಲ್ಲಿ ಮೊಹರುಗಳು ಮಾರಾಟಕ್ಕೆ ಸಿಗುತ್ತವೆ

ಹದಿಮೂರನೇ ಟಿ. ಬಿ. ಸೀಲ್ ಮಾರಾಟ ಚಳವಳಿ

(ಹೊಸ ದಿಲ್ಲಿಯಲ್ಲಿರುವ ಭಾರತದ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂಥಾದ್ದು)

ಈ ಸ್ಥಳದ ದಾತೃಗಳು:

Messrs. Jessop & Co. Ltd., Calcutta.

ಪ್ರಕೃತಿ ವೈಭವ ಮಾನವ ಕಲಾಪ್ರತಿಭೆಯು ಮಧುರ ಮಿಲನ

ಪ್ರವಾಸಿಗರ ನಂದನವನ — ಮೈಸೂರು

"ಪ್ರಕೃತಿ ವೈಭವಕ್ಕೆ ಮಾನವನ ಕಲಾ ಪ್ರತಿಭೆ ಸೇರಿದರೆ, ಎಂತಹ ಮೋಹಕ ಸೃಷ್ಟಿ ಮೊಳೆಯಬಲ್ಲದೆಂಬುದಕ್ಕೆ ಮೈಸೂರು ರಾಜ್ಯ ಒಂದು ಅತ್ಯುತ್ತಮ ನಿದರ್ಶನ. ಪ್ರಕೃತಿದತ್ತ, ರಮಣೀಯತೆಗೆ, ಮಾನವ ಕೃತ ಮಂದಿರಗಳು, ಬೃಹದುದ್ಯಮಗಳು, ಜಲಾಶಯಗಳು, ಉದ್ಯಾನವನಗಳು ವಿದ್ಯುಚ್ಛಕ್ತಿ ಯೋಜನೆಗಳು, ವನ್ಯಜೀವಿ ಸಂರಕ್ಷಣ ಕ್ಷೇತ್ರಗಳು, ಪಕ್ಷಿಧಾಮಗಳು, ಪುಷ್ಪರಾಶಿಗಳು, ಗಿರಿಧಾಮಗಳು, ಬಂದರುಗಳು, ಗಣಿಗಳೂ ಸೇರಿ ಹೆಜ್ಜೆ ಹೆಜ್ಜೆಗೂ ಹಿಗ್ಗು ಉಕ್ಕಿಸುವುದು. "ನೋಡಿಯು ಮಂಟಪ" 'ನಮ್ಮ ಮೈಸೂರು ರಾಜ್ಯ'—ಎಂದು ಮೈಸೂರು ರಾಜ್ಯ ಸರ್ಕಾರದ ಪ್ರವಾರ್ತಾ ಶಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಸಿದ್ಧಯ್ಯ ಪುರಾಣಿಕರು ಆಕಾಶವಾಣಿ ಬೆಂಗಳೂರು ಕೇಂದ್ರದಿಂದ, ಇತ್ತೀಚೆಗೆ, 'ಮೈಸೂರು ರಾಜ್ಯದ ಪ್ರೇಕ್ಷಣೀಯ ಸ್ಥಳಗಳು' ಎಂಬ ವಿಷಯವಾಗಿ ಪ್ರಸಾರ ಭಾಷಣ ಮಾಡಿದ್ದಕ್ಕೆ ಹೆಮ್ಮೆಯಿಂದ ನುಡಿದರು. ಅವರ ಪ್ರಸಾರ ಭಾಷಣದ ಪೂರ್ಣ ಸಾರವಿದು—

'ಮನಸೆಳೆವ ಮೈಸೂರು ರಾಜ್ಯದಲ್ಲಿ ಸಂಚರಿಸಿದ ಯಾರಾದರೂ 'ಎಂಥ ತಾಳ್ದೆ ದೋ ಜಿಲ್ವಿನೀದೇಶಂ' ಎಂದು ಉಚ್ಚರಿಸದಿರಲಾರರು. ಎಲ್ಲ ಬಗೆಯ ಆಕರ್ಷಣೆಗಳನ್ನೂ ಒಳಗೊಂಡು, ಮೈಸೂರು ರಾಜ್ಯವು ಪ್ರವಾಸಿಗರ ನಂದನ ವನವೆಂಬ ಅನ್ವರ್ಥಕ ನಾಮವನ್ನೂ ಪಡೆದಿದೆ. ಇತಿಹಾಸ ಸಂಶೋಧಕ, ಕಲಾರಾಧಕ, ಸತ್ಯ ವಿಜ್ಞಾನಿ, ಪುಷ್ಪಪ್ರೇಮಿ, ಕ್ಷೇತ್ರ ಪರ್ಯಟನ ಪ್ರೇಮಿ, ವನ್ಯಮೃಗಾವಿಷ್ಕಾರಿ, ಮಿನ ವಿನೋದಿ, ನಿಸರ್ಗ ಸೌಂದರ್ಯಪ್ರೇಮಿ—ಇತ್ಯಾದಿ ಎಲ್ಲ ಬಗೆಯ ಅಭಿರುಚಿಗಳ ಒಲವುಗಳ ಪ್ರವಾಸಿಗರಿಗೆ ತಕ್ಕ ಪ್ರೇಕ್ಷಣೀಯ ಸ್ಥಳಗಳನ್ನೊಳಗೊಂಡಿದೆ. 'ಮೈ ಚಿಸ್ಸ, ನಗೆ ಮಂಚು, ಭಾವನ್ನ ದುಸುರಿನ' ಮನೋಹರ ಮೈಸೂರು ರಾಜ್ಯ.

ಕನ್ನಡಿಗರು ಕಲೋಪಾಸಕರು

ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿ ಆಳಿದ ಕನ್ನಡಿಗರು ಆದಿಯಿಂದಲೂ ಕಲೋಪಾಸಕರು. ಅವರ ಅವಿರತವಾದ ಕಲಾರಾಧನೆಯ ಕುರುಹುಗಳು ಕನ್ನಡ ನಾಡಿನ ಉದ್ದಕ್ಕೂ ಕಣ್ಣಿಗೆ ಹೆಚ್ಚುವಾಗಿ ಹರಡಿಕೊಂಡಿದೆ. ಕನ್ನಡಿಗರೇ ಕುಸುರಿಸಿದ ವೇರುಳಿನ ಕೈಲಾಸ ದೇವಾಲಯವು ಇಂದು ಕನ್ನಡ ನಾಡಿನಲ್ಲಿಲ್ಲ. ಆದರೇನು? ಈಗ ಇಲ್ಲಿರುವ ಕಲಾಕ್ಷೇತ್ರಗಳನ್ನು ನೋಡಲು ಎರಡು ಕಣ್ಣು ಸಾಲವು. 'ಅತಿ ತುಂಗಾ ಕೃತಿಯಾದರೂ ತ್ರೀ ರೂಪಂ ಆತ್ಮೋಪಮಂ" ಎಂದೆನಿಸಿ ಕ್ಷಿತಿ ಸಂಪೂಜ್ಯನಾಗಿ ನಿಂತಿರುವ ಶ್ರವಣಬೆಳ್ಗೊಳದ ಗೋಮಟೇಶ್ವರ ಸ್ವಾಮಿ, 'ಭಾರತೀಯವಿಲ್ಲ ಕಲೆಯ ವಿರೋಧಕ್ಷ"ವೆಂದು ಘರ್ಜಿಸಿದನಂದ ವರ್ಣೀತವಾಗಿರುವನಬೆಳಂಬೀನ ಕೇದಾರನಾಥರ ದೇವಾಲಯ, ವಿಶ್ವವಿಖ್ಯಾತ ಶಿಲಾ ಬಾಲಿಕೆಯರ ಸೊಬಗಿನ ಸುಗ್ಗಿಯಂತಿರುವ ಬೇಲೂರಿನ ವಿಜಯ ನಾರಾಯಣ ದೇವಾಲಯ, 'ಶಿಲೆಯಲ್ಲವೀ ಗುಡಿಯು ಕಲೆಯೆ ಬಲಿಯು" ಎಂದು ಹೆಸರಾಂತಿರುವ ಸೋಮನಾಥಪುರದ ಸುಂದರ ದೇವಾಲಯ, ಗುಡಾಶಿಲ್ಪದ ಸ್ವರ್ಗದಂತಿರುವ ಬಂದಾಮಿಯ ಮೇಣ ಬಸದಿ, ಸಟ್ಟದ ಕಲ್ಲಿನ ಪ್ರತಿಯಿಲ್ಲದ ಗಳಗನಾಥ ವಿರೂಪಾಕ್ಷ ದುರ್ಗಾ ದೇವಾಲಯಗಳು, ಐಹೊಳೆಯ ಲಾಡಖಾನ ದೇವಾಲಯ, ಹಂಪೆಯ ಶ್ರೀ ವಿರೂಪಾಕ್ಷನ ಭವ್ಯ ಗೋಪುರ, ವಿಜಯವಿಠ್ಠಲ ಮಂದಿರದ ಕಲೆಯು ಸೂರೆ, ಉಗ್ರನರಸಿಂಹ ವಿಗ್ರಹ, ವಿಜಯಪುರದ ಜಗತ್ಪ್ರಸಿದ್ಧ ಗೋಳಗುಮ್ಮಟ, ಇಬ್ರಾಹಿಂ ರೋಜಾಗಳು, ಪಂಪನ ಬನವಾಸಿಯ ಪ್ರಭು ದೇವರ ವೃದಂಗ ವಾದನದಿಂದ ಪೈಮೆವೆತ್ತ ಮಧುಕೇಶ್ವರ ದೇವಾಲಯ, ಕಲಬುರಗಿಯ ಕೋಟೆಯಲ್ಲಿರುವ ಮಸೀದಿ, ಬಿದರೆಯ ಮಹಮೂದ ಗಾವಾನ, ಮದರಸಾ, ಮೂಡಬಿದರೆಯ ಸಾವಿರ ಕಂಭಗಳ ಬಸದಿ, ಶೃಂಗೇರಿಯ ವಿದ್ಯಾಶಂಕರ ಮಂದಿರ, ಮೇಲುಕೋಟೆಯ ನರಸಿಂಹ ದೇವಾಲಯ, ನಂಜನಗೂಡು, ಅಳಗುಪ್ಪ, ಲಕ್ಕುಂಡಿ, ಧರ್ಮಸ್ಥಳ, ಕುಕ್ಕನೂರು, ಇಟ್ಟಗೆ, ಸೇಡಂ, ಹರಿಹರ, ಗದಗು, ಸೊಗಲ ಸೋಮೇಶ್ವರ, ನವಿಲುತೀರ್ಥ, ಸವದತ್ತಿ, ಮೂಕಾಂಬಿಕಾ, ಮೂಕಾಂಬಿಕಾ ದೇವಾಲಯಗಳು—ಇನ್ನೂ ಅನೇಕ ಕಡೆಗೆ ಕನ್ನಡಿಗರ ಶಿಲ್ಪ ಕಲಾ ಜಾತುರ್ಯದ ವಿಜಯ ನೈಜಯಂತಿಗಳಾಗಿ ನಿಂತಿರುವ ದೇವಾಲಯಗಳು ಶಿಲ್ಪಕಲೆಯ ವೈವಿಧ್ಯ ವೈಶಿಷ್ಟ್ಯಕ್ಕೆ, ಔನ್ನತ್ಯಕ್ಕೆ ಸಾಕ್ಷ್ಯಗಳಾಗಿವೆ.

ಪ್ರಕೃತಿ ಶ್ರೀಯ ಆಡುಂಬೊಲ

ಕನ್ನಡ ನಾಡು ರಮಣೀಯ ರಾಜ ಭವನಗಳ ಗುಡಿ ಗೋಪುರ ಕೃತಕಾದ್ರಿಗಳ ಬೀಡುವ ಮಾತ್ರವಲ್ಲ, ಅದು ತೂರೆಕೆರೆ ಕೊಳ ಕಾಲುವೆಗಳ, ಗಿರಿದರಿ ಬೆಟ್ಟಪಟ್ಟಗಳ ನಾಡೂ ಆಹುದು. ಪ್ರಕೃತಿಶ್ರೀಯ ಆಡಂಬೊಲ ಈ ನೆಲ. ದಕ್ಷಿಣದ ತಪ್ಪಲಿನಲ್ಲಿ ಕೇಂದ್ರ ಸ್ಥಾನದಲ್ಲಿದ್ದು ಪೂರ್ವ ಪಶ್ಚಿಮ ಘಟ್ಟಗಳಿಂದ ಆಲಿಂಗಿತವಾಗಿ ನೀಲ ಗಿರಿಯಿಂದ ಆಲಂಕೃತವಾಗಿ, ಕೃಷ್ಣ ಕಾವೇರಿ ತುಂಗಭದ್ರಾ, ಭೀಮಾ ಮಲಪ್ರಭಾ ಮೊದಲಾದ ನದನದಿಗಳಿಂದ ಸಂಶೋಭಿತವಾಗಿ ಸಮಶೀತೋಷ್ಣ ಹವೆಯಿಂದ ಹಿತಕರವಾಗಿ ಮೆರೆಯುತ್ತಲಿರುವ ಈ ನಾಡು 'ನಾಡಿಯ ಸೀಮೆ, ಚಲ್ವೊಗೆವ ತಾಣ, ಸಿರಿಯ ಪೆರ್ಚುಗೆಗೆ ಒಳ್ಳನೆ."

ಪ್ರಕೃತಿ ವೈಭವಕ್ಕೆ ಮಾನವನ ಕಲಾ ಪ್ರತಿಭೆ ಸೇರಿದರೆ ಎಂತಹ ಮೋಹಕ ಸೃಷ್ಟಿ ಮೊಳೆಯಬಹುದೆಂಬುದಕ್ಕೆ ಮೈಸೂರು ರಾಜ್ಯ ಉದಾಹರಣೆಯಾಗಿನೆ. ಪ್ರಕೃತಿದತ್ತ ರಮಣೀಯತೆಗೆ ಮಾನವ ಕೃತ ಮಂದಿರಗಳೇ, ಬೃಹದ್ಯುದ್ಯಮಗಳು. ಜಲಾಶಯಗಳು, ಉದ್ಯಾನವನಗಳು, ವಿದ್ಯುಚ್ಛಕ್ತಿ ಯೋಜನೆಗಳು, ವನ್ಯಜೀವಿ ಸಂರಕ್ಷಣಾ ಕ್ಷೇತ್ರಗಳು, ಪಕ್ಷಿಧಾಮಗಳು ಪುಷ್ಪ ರಾಶಿಗಳು, ಗಿರಿಧಾಮಗಳು, ಬಂದರುಗಳು ಗಣಿಗಳು ಸೇರಿ ಹೆಜ್ಜೆ ಹೆಜ್ಜೆಗೂ ಹಿಗ್ಗು ಉಕ್ಕಿಸುವ 'ನೋಹಿನಿಯ ಮಂಟಪ'ವಾಗಿದೆ—ನೈಸೂರು ರಾಜ್ಯ.

ವಿಜ್ಞಾನಸಿದ್ಧಿ: ಬೃಹದ್ಯುವ್ಯಮಗಳು

ವಿಜ್ಞಾನದ ಸಿದ್ಧಿಯನ್ನುವತ್ತಿತೋರಿಸುವ ಬೃಹದುದ್ಯಮಗಳು ಬೇಕೆ? ಕೃಷ್ಣರಾಜ ಸಾಗರವಿದೆ, ವಾಣಿವಿಲಾಸ ಸಾಗರವಿದೆ; ತುಂಗಭದ್ರಾ ಜಲಾಶಯವಿದೆ. ಭದ್ರಾ ಜಲಾಶಯವಿದೆ. ಘಟಪ್ರಭಾಜಲಾಶಯವಿದೆ, ಇನ್ನೂ ಶರಾವತಿ ಕೃಷ್ಣಾ, ಮಲಪ್ರಭಾ, ಹಿಡಕಲ್ ಮೊದಲಾದ ಅನೇಕ ಜಲಾಶಯಗಳು ನಿರ್ಮಿತವಾಗಲಿವೆ. ಉದ್ಯಾನವನಗಳು ಬೇಕೆ? ಸುಪ್ರಸಿದ್ಧವಾದ ಲಾಲ್‌ಬಾಗ್ ಇದೆ ಲೋಕ ಪ್ರಸಿದ್ಧವಾದ ವೃಂದಾವನವಿದೆ. ಅದೇಕೆ ಮೈಸೂರಿನಿಂದ ಮಂಗಳೂರಿನ ವರೆಗೆ ಸಮಗ್ರ ಪ್ರದೇಶವೇ ಒಂದು ಉದ್ಯಾನವನ

ಕೊಡಗಿನ ಬೆಡಗನ್ನು ಉತ್ತರ ಕನ್ನಡ ಜಿಲ್ಲೆಗಳ ವನ ಶ್ರೀ ವೈಭವವನ್ನು ನೋಡಿಯೇ ಅನುಭವಿಸಬೇಕು. 'ಪಸುರುವ್ವು ಗರಾಗಸಕೆ ಪರ್ವುತಿಹುದಾ ನಾಡೊಳ್ಳಿಯಂ" ಎಂದು ಈ ಪಾವನ ಪ್ರದೇಶವನ್ನು ನೋಡಿಯೇ ಲಕ್ಷೀಶ ವರ್ಣಿಸಿರಬೇಕು. ಏನು ಹೆಸರಿದು—ಕಣ್ಣು ಮುತ್ತಿಡುವ ಸಿರು ಬೆಟ್ಟದಿಂದಿಳಿದು ಕಣಿವೆಗಳಲ್ಲಿ ಕ್ಕಿ ದಾಡುತ್ತಿರುವಂತೆ ಭಾಸವಾಗುವ ಹಸಿರು ಆದಕ್ಕೆ ಬಣ್ಣ ಬಣ್ಣದ ಹೂಗಳ ಕುಸುಮ ಭೀಮಾರಣ್ಯವೇಕೆ? ಇದೆ. ಎರಲೆಯ ಬಿಡೆಕ್ಕಲನ ತೊಟುರಂ ಕರಡಿಯ ಹಬ್ಬ ಕಡಮೆಯೂರ್ ಚವರಿಯ ಹುರಮೆಂಟಿಕಿಯ ಹೊಳಿಲ್ ಕಾಟಿಯ ಕೊಟ್ಟಂ ಪಿಗ್ಗಿಯ ಪಳ್ಳಿ, ಆರಸುಮಿಗದ ಪಟ್ಟಣ ಮೂನೆಯ ಮಟ, ಮೆರಲುಣಗಳ ನೆಲೆ ವನೆಯ ನಲತಿ ಬಂದುರ ಮೂದುದು ಭೂ ಮೊರಣ್ಯ ಮುಗಣ್ಯಮು ಗಾಳಿ ತರಣ್ಯಂ ಇದು ಕವಿ ಮಂಗರಸನ ಕಲ್ಪನೆ ಮಾತ್ರವಲ್ಲ, ಸತ್ಯಸ್ಯ ಸತ್ಯ ಗುಂಡ್ಲುಪೇಟೆಯ ತಾಲೂಕಿನ ಬಂಡೀಪುರ, ಯಳ್ಳಾಪುರ ತಾಲೂಕಿನ ದಾಂಡೇಲಿ, ಕೊಡಗಿನ ನಾಗರ ಹೊಳೆ ಮತ್ತು ಶಿವಮೊಗ್ಗ ಜಿಲ್ಲೆಯ ಜಾಗರ ಕಣಿವೆಗಳಿಗೆ ಹೋಗಿ ಮನಗಂಡು ಬನ್ನಿರಿ.

ಜಲರಾಶಿ—ವಿದ್ಯುಚ್ಛಕ್ತಿ

ಜಲಪಾತಗಳಿರುವಲ್ಲಿ ವಿದ್ಯುಚ್ಛಕ್ತಿಯ ಉಗಮ, ನಮ್ಮ ನಾಡು ಜಲಪಾತಗಳಿಗೂ ಹೆಸರಾದುದು. ಜಗತ್ಪ್ರಸಿದ್ಧ ಜೋಗದ ಜಲಪಾತ, ಸೌಮ್ಯಶ್ರೀಯುಕ್ತ ಶಿವನ ಸಮುದ್ರದ ಜಲಪಾತ, ಯಲ್ಲಾಪುರ ತಾಲೂಕಿನ ಉಂಚಳ್ಳಿ (ಲೂಷಿಂಗ್ಟನ್) ಜಲಪಾತ, ಗೋಕಾಕದ ಜಲಪಾತಗಳನ್ನು ಉಲ್ಲೇಖಿಸಬಹುದು. ಇವುಗಳಲ್ಲಿ ಒಂದೊಂದೂ ಒಂದು ವೈಶಿಷ್ಟ್ಯವನ್ನೊಗೊಂಡಿವೆ. ಶಿವನ ಸಮುದ್ರ ಜೋಗಗಳಲ್ಲಿ ವಿದ್ಯುಚ್ಛಕ್ತಿ ಯೋಜನೆಗಳು ಕಾರ್ಯಗತವಾಗಿವೆ ಶರಾವತೀ ಕಣಿವೆಯ ಮಹಾನ್ ಯೋಜನೆಯ ಕಾರ್ಯ ಬರದಿಂದ ಸಾಗಿದೆ. ಮೇಕೆದಾಟು, ಕಾಳೀ ನದಿ ಯೋಜನೆಗಳೂ ರೂಪುಗೊಳ್ಳುತ್ತಿವೆ. 'ಮಿಂಚು ಹುಟ್ಟುವ ನಾಡು ಮನಸು ಮಾಡಿದಡೊಮ್ಮೆ ಬ್ರಹ್ಮಾಂಡವನ್ನೆಲ್ಲ ಬೆಳಗಬಹುದು" ಎಂಬ ಕವಿಯ ಹಾರೈಕೆ ಕೈಗೂಡುವ ಕಾಲ ದೂರವಿಲ್ಲ.

ಗಿರಿಧಾಮ: ಗಿರಿಮಂದಿರಗಳು

ಗಿರಿಧಾಮಗಳೆ. ಹೇರಳವಾಗಿವೆ ಈ ರಾಜ್ಯದಲ್ಲಿ ಕೋಲಾರ ಜಿಲ್ಲೆಯ ನಂದಿಬೆಟ್ಟ, ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿ, ಕುದುರೆಮುಖ ಶಿವರಗಳು, ಬಳ್ಳಾರಿ ಜಿಲ್ಲೆಯ ರಾಮಗಡ್ಡ, ತುಮಕೂರು ಜಿಲ್ಲೆಯ ದೇವರಾಯನ ದುರ್ಗ,

(ಇನೀ ಪುಟ ನೋಡಿರಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:		ರೂ. ನ.ಪೈ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು	,, ,,	3-25

ನಿನ್ನ

ವಿನಿಮಿತ್ಯದ ಉಳಿತಾಯವನ್ನು ಹಣ ಡಿಪೋಸಿಟುಗಳಲ್ಲಿ | ಮಾಸಿಕ ಉಳಿತಾಯವನ್ನು ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962



ಪ್ರಧಾನ ಮಂತ್ರಿ

ಜನಪ್ರಿಯ ಜವಾಹರಲಾಲ

ಶ್ರೀ ಜವಾಹರಲಾಲ ನೆಹ್ರೂಜೀಯವರಿಗೆ ಅವರು ಜನಿಸಿರುವ ಕುಟುಂಬ, ಕಲಿತಿರುವ ವಿದ್ಯೆಯು ಜೀವನದಲ್ಲಿ ಉತ್ತಮ ಸ್ಥಾನ ಅವರಿಗೆ ದೊರಕುವಂತೆ ಮಾಡಲು ನೆರವು ನೀಡಿವೆ. ಆದರಲ್ಲಿ ಅವರ ಮುಖ್ಯ ಗುಣವೆಂದರೆ ಅದ್ಯಾವದರ ಮುಂತೂ ಅವರು ಮೂತಾಡಿವುದೇ ಇಲ್ಲ, ಅದಕ್ಕಿಂತ ವಿಶೇಷ ಸ್ಥಾನವನ್ನು ಕೊಟ್ಟಿರುವದಿಲ್ಲ ತನಗೆ ಜನ್ಮವಿತ್ತಿರುವ ಕುಟುಂಬಗಳೀ ಹಿರ್ರೂ-ಕ್ಕೇಂಬ್ರಿಜ್‌ಗಳಲ್ಲಿ ತಾವು ಕಳಿದಿರುವ ದಿನಗಳ ಮುಂತಾಗಲೀ ಅವರು ಬಡಾಯಿ ಕೊಚ್ಚಿಕೊಳ್ಳುವದೇ ಇಲ್ಲ ತನ್ನ ಮೇಧಾಶಕ್ತಿಯನ್ನು ಅವರು ಅತಿ ಹಗುರವಾಗಿ ಕಾಣುತ್ತಾರೆ.

ಅವರಲ್ಲರ.ವ ಇನ್ನೊಂದು ಗುಣವೆಂದರೆ ಅವರು ಉತ್ತಮ ಗೆಳೆಯರಿದ್ದಾರೆ. ತೀಕೆಯ ಸಮಯದಲ್ಲಿ ತನ್ನ ಸಚಿವ ಸಂಪುಟದ ಪ್ರತಿಯೋರ್ವನ ರಕ್ಷಣೆಗೂ ಅವರು ಸದಾ ಸಿದ್ಧರಿದ್ದಾರೆ. ಅದೆಂತಹ ಜನಜಂಗುಳಿಯೇ ಇರಲಿ, ಅದರ ನಡುವೆಯೂ ಅವರು ಗೆಳೆಯನ ಗುರುತು ಹಿಡಿಯುತ್ತಾರೆ. ತನ್ನ ಸುತ್ತುಮುತ್ತು ಅನೆಷ್ಟು ದೊಡ್ಡ ವ್ಯಸನ್ಯರೇ ಇರಲಿ, ಆ ವಿಶ್ವನನ್ನು ಅವರು ಅಲ್ಲೇ ಅಲಿಂಗಿಸಿಕೊಳ್ಳುತ್ತಾರೆ, ಪ್ರೀತಿಪೂರ್ವಕ ನಮಸ್ಕಾರ ಸಲ್ಲಿಸುತ್ತಾರೆ ತನ್ನ ಸ್ನೇಹಿತನು ಅದೆಂತ ಹ ಬಡವನೇ ಇರಲಿ, ವಿನಮ್ರನೇ ಇರಲಿ ಅವನನ್ನು ನಮಸ್ಕರಿಸುವುದರಲ್ಲಿ ಅವರಿಗೊಂದಿನಿತೂ ಅಳುಕೆಂಬುದಿರುವದಿಲ್ಲ

ಅವರು ಅತಿ ಶ್ರಮಜೀವಿ ಇದ್ದಾರೆ. ಹಲವರಿಗೆ ಹಲವಾರು ದಿನಗಳು ತಾಗುವ ಕೆಲಸವನ್ನು ಅವರು ಒಂದೇ ದಿನದಲ್ಲಿ ಮುಗಿಸುತ್ತಾರೆ. ಅಷ್ಟು ದುಡಿದರೂ ಮುಖ್ಯಳೊಂದಿಗೆ, ಪ್ರಾಣಿಗಳೊಂದಿಗೆ ಆಡುತ್ತಿರುವಾಗ, ನುರ–ಪುಷ್ಪಗಳ ಅಂದ ಚಂದವನ್ನು ಕಾಣುತ್ತ ತೋಟದಲ್ಲಿ ತಿರುಗಾಡುತ್ತಿರುವಾಗ, ಮಿತ್ರರ ಬಳಿ ಮೂತಾಡುತ್ತ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಿರುವಾಗ ಅವರು ಆಯಾಸಗೊಂಡಿರುವಂತೆ ಕಂಡುಬರುವದಿಲ್ಲ

ನಮ್ಮ ದೇಶದ ಇತರ ವಿದ್ವಾಂಸ, ಘನ ಪಂಡಿತರ ಹಾಗೆ ತಮ್ಮ ಆರೋಗ್ಯದತ್ತ ಅವರು ಅಲಕ್ಷ್ಯ ಭಾವವಿಂದಿರುವದಿಲ್ಲ. ದೇಹದತ್ತ ಗಮನ ಕೊಡದಿರುವದೆಂದರೆ ರೋಗ-ರುಜಿನಗಳಿಗೆ ಆಮಂತ್ರಣವನ್ನೀಯುವದಿದೆ. ದೈಹಿಕ ವ್ಯಾಯಾಮದತ್ತ ಅವರಿಂದೂ ಅಲಕ್ಷ್ಯಭಾವದಿಂದ ಇರುವದಿಲ್ಲ ಅವರಿಂದೂ ಆಸನಾದಿಗಳನ್ನು ಮಾಡುತ್ತಿದ್ದಾರೆ. ಆದರಿಂದಾಗಿ ಇಂದೂ ಅವರು ಪ್ರಕಾಶವಾಗಿ, ಆರೋಗ್ಯವಂತರಾಗಿದ್ದಾರೆ. ಪರ್ಷ್ಯನ್ ಗಾದೆ ತಿಳಿಸುವಂತೆ ಉತ್ತಮ ಆರೋಗ್ಯವು ಸಹಸ್ರ ಬಹುಮಾನದಂತಿದೆ. ನೆಹ್ರೂಜಿಯವರು ಕೂಡಾ ಆ ವಿಷಯದಲ್ಲಿ ಅಶೀರ್ವದಿಸಲ್ಪಟ್ಟವರಿದ್ದಾರೆ.

ಜವಾಹರಲಾಲರು ಅಪೂರ್ವ ಧೈರ್ಯಶಾಲಿಗಳದ್ದಾರೆ. ಅವರಿಗೆ ಭಯವೆಂದರೇನೆಂಬುದು ಗೊತ್ತಿರುವದಿಲ್ಲ ನೈತಿಕವಾಗಿ ಸಾಮಾಜಿಕವಾಗಿ, ದೈಹಿಕವಾಗಿ ಹಾಗೂ ಬೌದ್ಧಿಕವಾಗಿ ಅಪೂರ್ವ ನಿರ್ಭಯತೆಯಿಂದಿದ್ದಾರೆ. ಅದು ಉತ್ತಮ ಗುಣವೇ ಇನೆ. ಆದ ವೇ ಅನೇಕ ಜನರಿಗಿರುವದಿಲ್ಲ ಹಾಗಿದ್ದರೂ ಸಾರ್ವಜನಿಕರೆದುರಿನಲ್ಲಿ ಭಗವಂತನಿಗೂ ತಾನು ಭಯಪಡುವದಿಲ್ಲವೆಂದು ಹೇಳುವದು ಬಹುಶಃ ಸರಿಯಲ್ಲ, ಅದ ಅಷ್ಟು ಜಿನ್ನಾಗಿರುವದಿಲ್ಲ. ತಾನು ಭಗವಂತನಿಗಲ್ಲದೆ ಬೇರೆ ಯಾರಿಗೂ ಭಯಪಡುವದಿಲ್ಲವೆಂದು ಮಹಾತ್ಮ ಗಾಂಧೀಜಿ ಹೇಳುತ್ತಿದ್ದರು ಸಾರ್ವಜನಿಕ ದೃಷ್ಟಿಯಿಂದ ದೇವರಿಗೂ ಭಯ ಪಡುವದಿಲ್ಲವೆನ್ನುವದು ಒಳ್ಳೆಯದಲ್ಲ ಅದೂ ಒಂದು ದೇಶದ ಪ್ರಧಾನಿ ಪಟ್ಟದಲ್ಲಿರುವ ವ್ಯಕ್ತಿ ಹಾಗೆ ಹೇಳಲೇ ಜಾರದು. ಅದರ ಪರಿಣಾಮವು ಸಾಮಾನ್ಯ ಮಾನವನೆ ನೀಲೂ ಬೀಳುತ್ತದೆ. ನೆಹ್ರೂಜಿಗೆ ಅದೇನೂ ವ್ಯತ್ಯಾಸ ಇಲ್ಲದಿದ್ದರೂ ಸಾಮಾನ್ಯ ಮನುಷ್ಯನಿಗೆ ಹಾಗಲ್ಲ. ಅವನಲ್ಲಿ ಅದು ಬಹಳ ಪರಿಣಾಮವನ್ನು ಬೀರುತ್ತದೆ. ಅವನು ನ್ಯಾಯ ಮಾರ್ಗದಲ್ಲಿ ಜೀವನ ಸಾಗಿಸುತ್ತಿರಬೇಕಾದಲ್ಲಿ ಅವನಿಗೆ ಸಮಾಜದ ಹಾಗೂ ಭಗವಂತನ ಭಯ ಇರಲೇ ಬೇಕು. ಇಲ್ಲದಿದ್ದಲ್ಲಿ ಅವನು ಸಮಾಜ ಪೀಡಕನಾಗಲು ಸಾಧ್ಯವಿದೆ.

ಹುಟ್ಟೀ ಅವರಿಗೆ ಬಹಳ ಸಹಾಯ ಮಾಡಿದೆ ಎಂದು ಹಲವರು ಹೇಳುವದುಂಟು ಅವರಿಗೆ ರೀತನೆಂದರೇನು, ಹಸಿವು ಎಂದರೇನೆಂಬುದು ಗೊತ್ತಿರದಿದ್ದಲ್ಲ. ಆದರೆ ಯಾರೂ ಅವರ ಬಳಿ ಅಗಣಿತ ಸಂಪತ್ತಿತ್ತೆಂದು ತಿಳಿದುಕೊಳ್ಳುವದು ಸರಿಯಲ್ಲ. ಅವರೂ ಸಾರ್ವಜನಿಕ ಸೇವೆಯು ಸಮಯ

ಹಣದ ದಾರಿಗಾಗಿ ಹೇಗೆ ಕಾಯುತ್ತಿದ್ದರೆಂಬುದಕ್ಕೆ ಒಂದು ಒಳ್ಳೆಯ ಉದಾಹರಣೆ ಇಲ್ಲಿದೆ. ಅವರೂ ಹಣಕ್ಕಾಗಿ ಬಹಳ ಹಣಗಾಡಬೇಕಾಗುತ್ತಿತ್ತು.

೧೯೩೧ರಂದು ಖಾನಪುರದಲ್ಲಿ ಭೀಕರ ಮತೀಯ ದಂಗೆ ಎದ್ದಿತು ಈ ನರಮೇಧದ ನಡುವೆ ಸಿಕ್ಕಿಕೊಂಡ ದೇಶಭಕ್ತ ವೀರ ಗಣೇಶ ಶಂಕರ ವಿದ್ಯಾರ್ಥಿಯು ಭಯಂಕರ ಆದರೆ ಪ್ರೇರೋಚಿತ ಸಾವನ್ನೆಪ್ಪ ಬೇಕಾಯಿತು ಅವರೊಂದಿಗೆ, ೧೯೩೧ರಲ್ಲಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ರೀ ಜವಾಹರಲಾಲರನ್ನು ಕಾಣಲು ಹೋಗಿದ್ದಾಗ ಅವರು ಅತಿ ಗಡಿಬಿಡಿಯಲ್ಲಿದ್ದರು ಜವಾಹರಲಾಲರು ಭೂಪಟದ ಮೇಲೆ ಪೂರ್ಣ ದೇಶವನ್ನು ಗುರುತಿಸುತ್ತಿದ್ದಾರಲ್ಲದೆ, ಯಾವೊಂದು ವ್ಯಕ್ತಿಯನ್ನೂ ಗುರುತಿಸುತ್ತಿದ್ದಿಲ್ಲ. ಅವರಿಗೆ ಅನ್ಯ ದೇಶಗಳ ರಾಜಕಾರಣಿ ಹಾಗೂ ರಾಜಕೀಯ ತಜ್ಞರೊಂದಿಗೆ ಸಂಪರ್ಕವಿತ್ತು ಮಾತಿನ ಮಧ್ಯೆ "ಇನ್ನೊಂದು ಇಪ್ಪತ್ತೈದು ರೂಪಾಯಿ ಹೆಚ್ಚು ನನ್ನ ಬಳಿ ಇರತ್ತಿದ್ದಲ್ಲಿ ನಾನು ಪರದೇಶಗಳ ಪ್ರಮುಖರೊಂದಿಗೆ ಇನ್ನೂ ಹೆಚ್ಚಿನ ಸಂಪರ್ಕವನ್ನು ಬೆಳೆಸಿಕೊಂಡು ನಮ್ಮ ದೇಶದತ್ತ ಅವರ ಗಮನವನ್ನು ಸೆಳೆದುಕೊಳ್ಳುತ್ತಿದ್ದೆ" ನೆಂದು ಜವಾಹರಲಾಲರು ಹೇಳಿದರು. ಮಾತುಕತೆ ಮುಗಿದ ನಂತರ ಕೋಣೆಯಿಂದ ಹೊರಗೆ ಬಂದಾಗ ಗಣೇಶ ಶಂಕರರು ಶ್ರೀ ಪ್ರಕಾಶರ ಬಳಿ "ಜವಾಹರಲಾಲರು ಗಂಭೀರವಾಗಿಯೇ ಹೇಳಿದರೇನು? ಅವರ ಕಾರ್ಯಕ್ಕಾಗಿ ತಿಂಗಳೊಂದಿಗೆ ಅಷ್ಟು ಚಿಕ್ಕ ಮೊತ್ತ ಇಪ್ಪತ್ತೈದು ರೂಪಾಯಿಗಳ ಅವಶ್ಯಕತೆಯಲ್ಲಿ ಅವರಿದ್ದಾರೇನು? ಅದನ್ನು ನಾನು ನಂಬಲಾರೆ. ನಾನು ಬಡವನಾದರೂ ಆ ಮೊತ್ತವನ್ನು ಎಲ್ಲಿಂದಲಾದರೂ ಸುಲಭವಾಗಿ ಕೂಡಿಸಬಲ್ಲೆನು" ಎಂದು ಹೇಳಿದರು. ವಿಷಯ ಹೀಗಿದ್ದರೂ ಇಪ್ಪತ್ತೈದು ರೂಪ್ಯಾ ತೆಗೆದುಕೊಂಡು ಹೋಗಿ ಜವಾಹರಲಾಲರಿಗೆ ಕೊಡಲು ಯಾರೂ ಮುಂಬಿ ಬರಲಿಲ್ಲ ಸೆ-ಕೋಚಪಟ್ಟರು. ಸಾರ್ವಜನಿಕ ಸೇವೆ ಎಂದರೆ ಧನದ ನಿಧಿಯೇ ಬೇಕಾಗುತ್ತದೆಂದು ಗೆಳೆಯರು ತಿಳಿದುಕೊಂಡಿದ್ದಾರೆ. ಈ ರೀತಿ ಅವಶ್ಯೋ ಸಾರ್ವಜನಿಕ ಸೇವಕರು ಕಷ್ಟ ಅನುಭವಿಸುತ್ತಿದ್ದಾರೆ

ಇಂದು ನಾವು ಅವರ ಜನ್ಮದಿನೋತ್ಸವವನ್ನು ಆಚರಿಸುತ್ತಿದ್ದೇವೆ ಅವರು ದೃಢಕಾಯರಾಗಿದ್ದು, ಆರೋಗ್ಯವಂತರಾಗಿದ್ದು, ಹಲವಾರ ವರ್ಷ ಬಾಳಿ ಒದಗಿ ಈ ದೇಶದ ಜನರನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಲಿ ಎಂದು ಪ್ರಾರ್ಥಿಸುವ ನಾವು ಅವರ ಜೀವನದಿಂದ ಉಪಯುಕ್ತ ವಾರಗಳನ್ನು ಕಲಿತು ರಾಷ್ಟ್ರ ಸೇವೆಯಲ್ಲಿ ನಮ್ಮ ಪಾಲಿನ ಅಳಿಲ ಸೇವೆಯನ್ನು ಸಲ್ಲಿಸೋಣ. [ಆದರಲ್ಲೂ ಅವರಿಂದು ಮಿಶ್ರರಿಂದ ನೋಸಕ್ಕೊಳಗಾಗಿರುವಾಗ ಅವರ ಕೈಗಳನ್ನು ಬಲಪಡಿಸುವದು ಭಾರತೀಯರೆಲ್ಲರ ಕರ್ತವ್ಯವಿದೆ. ಅವರ ಭುಜಕ್ಕೆ ಭುಜಕ್ಕೊಟ್ಟು ಸಂಧಿಗ್ಧ ಪರಿಸ್ಥಿತಿಯಲ್ಲಿ ನಡ್ಡಹೊಡೆದು ನಿಲ್ಲುವ ರತ್ನುಗಳನ್ನು ಹೊಡೆದಟ್ಟುವ.]

(ಮಹಾರಾಷ್ಟ್ರದ ಮಾಜಿ ರಾಜ್ಯಪಾಲ ಶ್ರೀ ಶ್ರೀಪ್ರಕಾಶರ ಲೇಖನ)

—ಶಿವಶಂಕರ, ಮದ್ರಾಸು.


ಸಂಬಳದ ದಿನ
ಸಂಬಳದ ಮರುದಿನ ನೀವೇನು ಸಿರಿವಂತರೋ?
ಅಲ್ಲ, ದಿನಸಿ ಅಂಗಡಿಯವ, ರೊಟ್ಟಿ ಅಂಗಡಿಯವ, ಹಾಲಿನವ ನಿಮಗಿಂತ ಸಿರಿವಂತರಾಗುವರೋ?
ಸಂಬಳದ ದಿನ ಪ್ರಪ್ರಥಮವಾಗಿ ನಿಮ್ಮ ಪಾಲಿನ ಹಣವನ್ನು ತೆಗೆದಿಟ್ಟು ಕೆನರಾ ಬ್ಯಾಂಕಿನ ನಿಮ್ಮ ಸೇವಿಂಗ್ಸ್ ಖಾತೆಯಲ್ಲಿ ಕೂಡಿಡಿರಿ ಜಮೆಯಾದ ಬಡ್ಡಿಯೊಂದಿಗೆ ಅದೆಷ್ಟು ಬೇಗನೆ ನಿಮ್ಮ ಉಳಿತಾಯವು ವೃದ್ಧಿಯಾಗುವುದೆಂಬುದನ್ನು ಗಮನಿಸಿರಿ.
ಇದೀಗಲೇ ಕೆನರಾ ಬ್ಯಾಂಕಿನಲ್ಲಿ ನಿಮ್ಮ ಸೇವಿಂಗ್ಸ್ ಖಾತೆಯನ್ನು ತೆರೆದು ವರ್ಷಕ್ಕೆ
3%
ಚಕ್ರಬಡ್ಡಿ
ಸಂಪಾದಿಸಿರಿ
ಕೆನರಾ ಬ್ಯಾಂಕ್ ಲಿ
ಸ್ಥಾಪನೆ 1906

ರಿಜಿಸ್ಟರ್ಡ್ ಆಫೀಸ್, ಮಂಗಳೂರು.
ಆಡಳಿತ ಕಛೇರಿ: ಬೆಂಗಳೂರು.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೮೨	೯-೧೧-೧೯೬೨	೯

ಮಹತ್ವದ ಪರಿವರ್ತನೆ

ಚೀನೀಯರು ಭಾರತೀಯ ಪ್ರದೇಶದ ಮೇಲೆ ತಮ್ಮ ಪ್ರಭುತ್ವವನ್ನು ಆರೋಪಿಸಿ, ಭಾರತೀಯ ಸೈನಿಕ ಠಾಣ್ಯಗಳ ಮೇಲೆ ಆಕ್ರಮಣವನ್ನೂ ಧಾಳಿಯನ್ನೂ ಮಾಡಲುಪಕ್ರಮಿಸಿದ ಬಳಿಕ ಭಾರತದೊಳಗೆ ಹಲವೊಂದು ಬದಲಾವಣೆಗಳು ನಡೆದಿವೆ. ಮುಖ್ಯವಾಗಿ ಹೇಳುವುದಾದರೆ, ದೇಶದ ಸ್ವಾತಂತ್ರ್ಯಕ್ಕೆ ಬಂದೊದಗಿದ ಈ ಸಂಘಾತಾತ್ಮಾನವನ್ನು ಸ್ವೀಕರಿಸಲು ಸಮಸ್ತ ಭಾರತೀಯರೂ ತಾನು ನಾನೆಂದುಅಸಾರೋತ್ಸಾಹದಿಂದ ಮುಂದೆ ಬರುತ್ತಿರುವುದನ್ನೂ ರಾಷ್ಟ್ರೀಯ ರಕ್ಷಣಾ ನಿಧಿಗೆ ನೆರವಿನ ಅನಂತ ಸಾಗರವೇ ಸುರಿಯುತ್ತಿರುವುದನ್ನೂ ನಾವು ಅವಶ್ಯ ಉಲ್ಲೇಖಿಸಬೇಕು. ಇದಕ್ಕಿಂತಲೂ ಮಹತ್ವದ ಇನ್ನೊಂದು ವಿಚಾರವೆಂದರೆ, ಸ್ವಧಾನಿ ನೆಹರುರವರು ತನ್ನ ಮೊದಲಿದ್ದ ವಿದೇಶ ನೀತಿ ಮಂತ್ರಿಶಾಖೆಯ ಜೊತೆಗೆ ಸಂರಕ್ಷಣಾ ಶಾಖೆಯನ್ನೂ ವಹಿಸಿಕೊಂಡುದು. ಈ ಕಾರ್ಯಕ್ರಮದಿಂದ ಕೆಲವು ಮಹಾ ನಾಯಕರು ಕೃಪ್ತರಾದಂತೆ ಕಂಡು ಬರುತ್ತದೆ; ಮತ್ತು ವೈರಿಯನ್ನು ಹೊರಕ್ಕಟ್ಟುವ ಪರಮ ಪವಿತ್ರ ಉದ್ಯಮದಲ್ಲಿ ಅಖಂಡ ದೇಶದ ಸಹಾಯ ಹಸ್ತ ಮುಂದೆ ಬರುವಂತಾಯಿತು.

ಪ್ರಧಾನಿ ನೆಹರು ಇಂತಹ ಮಹತ್ವದ ಉಪಕ್ರಮವನ್ನು ಏಕೆ ಕೈಗೊಂಡರು ಎಂಬುದರ ಬಗ್ಗೆ ಅವರಿಂದಲೆ ಮತ್ತಾರೂ ವಿವರಣೆ ಕೊಡುವುದು ಸಾಧ್ಯವಾಗದು. ವಿದೇಶ ನೀತಿ ಮತ್ತು ಸಂರಕ್ಷಣಾ ಶಾಖೆಗಳ ನಡುವಣೆ ನೇರ ಸಂಬಂಧವಿರುವುದು ನಿಜ; ದೇಶದ ಸಮಗ್ರತೆಗೆ ಭಂಗವುಂಟಾಗಲಿರುವ ಇಂತಹ ತುರ್ತಿನ ಸಮಯದಲ್ಲಿ ಇವೆರಡೂ ಒಬ್ಬನ ಕೈಯಕ್ಷಿಯೇ ಉಳಿಯುವುದರಿಂದ, ವಿದೇಶಗಳಿಂದ ಅವಶ್ಯಕ ಶಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳಲು ಮತ್ತು ಇತರ ವ್ಯವಹಾರಗಳನ್ನು ವಿಳಂಬವಿಲ್ಲದೆ ಮುಂದುವರಿಸಲು ಅನುಕೂಲವಾಗುವಂತೆ ಅವರೀ ರೀತಿ ಗೆಯ್ದರು ಎಂದರೆ ಅರ್ಥವತ್ತಾಗುವುದು. ಏಕೆಂದರೆ, ಸಂರಕ್ಷಣಾ ಉಪಕರಣಗಳನ್ನು ಸಿದ್ಧಗೊಳಿಸುವ ಹೊಸ ಶಾಖೆಯೊಂದನ್ನು ನಿರ್ಮಿಸಿ ಅದನ್ನು ಶ್ರೀ ಮೆನನ್ನರ ಅಧೀನತ್ವಕ್ಕೆ ಒಪ್ಪಿಸಿರುವುದರಿಂದ ಸಂರಕ್ಷಣೆಗಾಗಿ ದೇಶದ ಒಳಗೆ ಸಾಧನೋಪಕರಣಗಳನ್ನು ಹೆಚ್ಚಿಸುವ ಹೊಣೆಗಾರಿಕೆಗೆ ಮಹತ್ವವನ್ನು ನೀಡಿ ಅದನ್ನು ಅವರ ಮೇಲೆಯೇ ಇಡಲಾಗಿದೆ. ದೇಶದಲ್ಲಿ ಅಂತಹ ಅಯುಧಗಳ ನಿರ್ಮಾಣಕಾರ್ಯವಿನ್ನೂ ಬಾಲ್ಯಾವಸ್ಥೆಯಲ್ಲೇ ಇರುವುದರಿಂದ ಈ ಕಡೆಗೆ ವಿಶೇಷ ಗಮನ ಹರಿಸಲು ಅನುಕೂಲವಾಗುವಂತೆ ನುತ್ತು ತುರ್ತಿನ ಸ್ಥಿತಿಯನ್ನು ಎದುರಿಸಲು ನಿರ್ವಿಘ್ನವಾಗಿ ನೆರವಾಗುವಂತೆ ಈ ರೀತಿಯ ಬದಲಾವಣೆಯನ್ನು ಅವರು ಮಾಡಿದರು ಎಂದು ಕೆಲವರ ಅಭಿಪ್ರಾಯ.

ಇನ್ನು ಕೆಲವರು ಇದಕ್ಕೆ ವ್ಯತಿರಿಕ್ತವಾದ ಮತಗಳನ್ನೇ ಮುಂದಿಡುತ್ತಾರೆ. ಕೃಷ್ಣ ಮೆನನ್ನರು ಕಮ್ಯುನಿಸ್ಟರ ಪಕ್ಷಪಾತಿಯೆಂಬುದಾಗಿ ಅವರ ಮೇಲೆ ಆರೋಪ ಹೊರಿಸಿ, ಅವರಿಂದ ಸಂರಕ್ಷಣಾ ಶಾಖೆಯನ್ನು ಕಿತ್ತುಕೊಳ್ಳಬೇಕೆಂದೂ ಶ್ರೀ ನೆಹರುರವರೇ ಅದನ್ನು ವಹಿಸಿದಲ್ಲಿ ಜನತೆಯ ವಿಶ್ವಾಸವು ಹೆಚ್ಚಾಗುವುದೆಂದೂ ಆಕ್ರಮಣಗಾರರನ್ನು ಹಿಮ್ಮೆಟ್ಟಿಸುವುದಕ್ಕೆ ನೂರು ಬಲ ಬಂದಂತಾಗುವುದೆಂದೂ ಕೆಲವೊಬ್ಬರು ನಾಯಕ ಮಣಿಗಳು ಹೇಳಿದುದನ್ನು ನಾವು ಮರೆಯಬಾರದು. ಹಿಂದೊಮ್ಮೆ ಇದೇ ರೀತಿಯ ವಾದಕ್ಕೆ ವಿಷಯವಾದವರು ಶ್ರೀ ಮೆನನ್, ಅಲ್ಲದೇ ಮೆನನ್ನರ ಮೇಲಿನ ಅಭಿಪ್ರಾಯವನ್ನು ಹೆಚ್ಚಿನವರು ಬದಲಾಯಿಸಿಲ್ಲ. ಸ್ವಯಂ ಕಾಂಗ್ರೆಸಿಗರಲ್ಲಿಯೇ ಮೆನನ್ನರ ಕತ್ಯ ಸಂಧತೆಯ ಬಗ್ಗೆ ಸಂಶಯ ಪಡುವವರು ಅನೇಕ ಮಂದಿಯಿದ್ದರು; ಇಂದಿಗೂ ಇದ್ದಾರೆ. ಆದರೆ, ಮೆನನ್ನರ ಮೇಲೆ ಅವಿಶ್ವಾಸ ತೋರಿಸುವುದೆಂದರೆ, ತನ್ನ ಮೇಲೆ ತೋರಿದಂತೆಯೆಂದು ನೆಹರು ಒಮ್ಮೆ ಅಂದಿದ್ದರು. ಈ ಮಾತನ್ನು ಯಾರೂ ಸಮರ್ಥಿಸಲಿಲ್ಲವಾದರೂ ಮೆನನ್ನರ ಮೇಲೆ ಟೀಕೆಗಳು ಮಾತ್ರ ಕಡಿಮೆಯಾದುವು. ರಾಜಾಜಿ, ಅಶೋಕ ಮೆಹತ ಮೊದಲಾದ ಮಹಾ ಮಹಾ ಮೇಧಾವಿಗಳು ಈ ಬದಲಾವಣೆಗಳನ್ನು ಬಯಸಿದ್ದರು. ಇನ್ನು ಕೆಲವರು ಮತ್ತೂ ಮುಂದೆ ಹೋಗಿ, ಸಚಿನ ಸಂಪುಟದಿಂದಲೇ ಮೆನನ್ನರ ಉಚ್ಚಾಟನೆಯಾಗಬೇಕೆಂದು ಪೇಳುತ್ತಾರೆ.

ಜನತೆಯು ಕೇಳಿಕೆಯನ್ನೇ ಕೇಳಿ ನೆಹರು ಈ ಉಪಕ್ರಮಕ್ಕೆ ತೊಡಗಿದುದು ಇರಬಹುದು; ಅಂತೂ ಇದು ತಾತ್ಕಾಲಿಕ ವ್ಯವಸ್ಥೆಯೆಂಬುದು ನಿಜ. ಆದುದರಿಂದಾಗಿ, ಪರಿಸ್ಥಿತಿ ವಶದಿಂದ, ವ್ಯವಹಾರ ತೀವ್ರತೆಗಾಗಿ ಅವರೀ ರೀತಿ ಮಾಡಿದರೆಂಬುದು ಬೆಚ್ಚು ಸಮರ್ಪಕವೆಂದು ತೋರುತ್ತದೆ. ಸಾಮಾನ್ಯವಾಗಿ ಪ್ರಧಾನ ಮಂತ್ರಿಯ ಕಾರ್ಯ ವ್ಯಾಪ್ತಿಯು ಎಲ್ಲ ಮಂತ್ರಿ ಶಾಖೆಗಳ ಮೇಲೂ ಇರುತ್ತದೆ. ಹಾಗಿರುವಾಗ, ಸಂರಕ್ಷಣಾ ಶಾಖೆಯನ್ನು ಮೆನನ್ನರಿಂದ ಕಿತ್ತುಕೊಳ್ಳುವ ಅಗತ್ಯವಿರಲಿಲ್ಲ. ಈಗಾಗಲೇ ಹೊರಲಾರದೆ ಕಾರ್ಯಭಾರದಿಂದ ಕಂಗೆಟ್ಟ ನೆಹರು ಇನ್ನೂ ಹೆಚ್ಚಿನ ಭಾರವನ್ನು ಹೊರಲು ಮುಂದೆ ಬಂದುದು ಭಾರತೀಯರ ಸೌಭಾಗ್ಯ. ಕಾರ್ಯಬಾಹುಲ್ಯದಿಂದ ಸವೆದಿರುವ ಅವರು ಹೊಸ ಶಾಖೆಯನ್ನು ಸೇರಿಸಿಕೊಂಡುದರಿಂದ ಅವರ ಹೊಣೆಗಾರಿಕೆ ದ್ವಿಗುಣಗಾಯಿತು. ಮೂಜಿ ಜನರಲ್ಲರಲ್ಲಿ ಒಬ್ಬನನ್ನು ಸಂರಕ್ಷಣಾ ಮಂತ್ರಿಯೂಗಿ ನೇಮಿಸಬೇಕೆಂಬ ವಾದವೂ ಇಂದು ಮುಂದಿದೆ. ಅದಂತೂ ಹಾಗೆಯೇ ಇರಲಿ. ದೇಶದ ಅವಶ್ಯಕತೆ ಜನತೆಯ ಅಭಿಮತ ಮತ್ತು ಪರಿಸ್ಥಿತಿಗಳಿಗೆ ಸರಿಯಾಗಿ ಹೊಂದಿಕೊಂಡು ಕಾರ್ಯನಿರ್ವಹಿಸುತ್ತಿರುವ ಭಾರತೀಯ ಸ್ವಾತಂತ್ರ್ಯ ರಕ್ಷಕ ನೆಹರು ದೀರ್ಘಾಯುವಾಗಲಿ; ಅವರ ನೂರ್ಗದರ್ಶನದಲ್ಲಿ ದೇಶ ಕಲ್ಯಾಣವಾಗಲಿ.

ಪಾಕ್ ಅಪಲಾಪ

ಕೆಂಪು ಚೀನಾವೆ ಆಕ್ರಮಣದಿಂದ ಸ್ವರಕ್ಷಣೆಮಾಡಿಕೊಳ್ಳಲು ಭಾರತಕ್ಕೆ ಅಮೆರಿಕ—ಬ್ರಿಟನ್ನುಗಳಿಂದ ಶಸ್ತ್ರಾಸ್ತ್ರಗಳು ಬರುತ್ತಿವೆ. ರಾಷ್ಟ್ರ—ರಾಷ್ಟ್ರಗಳ ನೇರಿನ ಸ್ನೇಹ ಸಂಬಂಧಗಳಿಂದ ಉದಾರ ತಳಹದಿಯಲ್ಲಿ ಇವು ನಮ್ಮ ಕೈ ಸೇರುತ್ತಿವೆ. ಆದರೆ, ನಮ್ಮ ನೆರೆಯ, ದಾಯಾದಿಯಂತೆ ವರ್ತಿಸುತ್ತಿರುವ ಪಾಕಿಸ್ತಾನವು ಇದರಿಂದ ಕಳವಳಗೊಂಡಿದೆ. ಭಾರತದ ಸೈನಿಕ ಶಕ್ತಿ ಹೆಚ್ಚುವುದರಿಂದ, ತನ್ನ ಮತ್ತು ಭಾರತದ ನಡುವಣ ಶಕ್ತಿ ಸಮತೋಲವು ಕಡಿಮೆಯಾಗುತ್ತದೆಯೆಂಬ ಕಾರಣವನ್ನು ಮುಂದಿಟ್ಟು ಈ ವಿಧದ ಕೊಡುಗೆಯನ್ನೆದು ವಿರೋಧಿಸುತ್ತದೆ. ಭಾರತಕ್ಕೆ ಸಹಾಯ ಕೊಡುವುದಾದರೆ ತನಗೂ ಅದೇ ಮೊದಲಾಯ ಸಹಾಯ ದೊರೆಯಬೇಕೆಂದೂ ಅದು ಹೇಳುತ್ತದೆ. ಇನ್ನೂ ಮುಂದುವರಿದು ಭಾರತ-ಪಾಕ್ ಗಡಿಯು ಉದ್ದಕ್ಕೂ ಸೈನಿಕರನ್ನು ನಿಷ್ಪಸಬೇಕೆಂದು ಮಾಜಿ ಗವರ್ನರ್ ಜನರಲ್ ಇಸ್ಕಾಂದರ ಮಿರ್ಜಾರ ವಾದವಿದೆ. ಪಾಕ್ ಅಧಿನಾಯಕರು ಹೀಗೆಲ್ಲ ಅನ್ನಬೇಕಾದರೆ, ಭಾರತವು ಕಾಶ್ಮೀರದ ಮೇಲೆ ದಂಡೆತ್ತಿ ಅದನ್ನು ಸಂಪೂರ್ಣ ವಶಪಡಿಸಿಕೊಳ್ಳುವುದು ಎಂದು ಅವರು ಬಹಳವಾಗಿಹೆದರುತ್ತಾರೆ ಎನ್ನಬೇಕು. ಆದರೆ, ಅಂತಹ ಮೂರ್ಖತನವನ್ನು ಭಾರತವೆಂದಿಗೂ ತೋರಿಸುವುದಿಲ್ಲ. ವಿದೇಶಗಳಿಂದ ಸಹಾಯ ಪಡೆಯುವುದು, ನಮ್ಮ ಭದ್ರತೆಗಾಗಿ ಮಾತ್ರವೇ ಅಲ್ಲದೆ ಪಾಕಿಸ್ತಾನವನ್ನು ಪೇಚಾಟಕ್ಕೆ ಸಿಲುಕಿಸುವ ಉದ್ದೇಶದಿಂದಲ್ಲ. ಹಾಗಿರುವಾಗ ತನ್ನ ಪ್ರತಿಜ್ಞೆಗೆ ಕುಂದುಂಟಾಗುವುದೆಂದು ಊಹಿಸಿ ಪಾಕ್ ನಾಯಕರು ಅಪಲಾಪವೆಬ್ಬಿಸಿದರೆ, ದಾಯಾದ ಮತ್ಸರ ಮಾತ್ರ ವ್ಯಕ್ತವಾದಂತಾಗಿತ್ತು; ಭಾರತದ ಆಕ್ರಮಣವೆಂದರೆ, ಭಾರತೀಯ ಉಪಖಂಡದ ಮೇಲಿನ ಆಕ್ರಮಣವೆಂದು ನಾವು ಎಳೆದುಕೊಂಡರೆ, ಪಾಕ್ ನಾಯಕರ ಅಭಿಯಿ ಪಡುವ ಅಗತ್ಯವಿಲ್ಲ. ಮನೆಗೆ ಬೆಂಕಿ ಬಿದ್ದಾಗ, ಅದನ್ನು ನಂದಿಸಲು ನೀರು ಅರಸಬೇಕೇ ಹೊರತು ಆ ಬಗ್ಗೆ ಜಗಳಕ್ಕೆ ಪ್ರೇರಣೆ ಕೊಡುವುದು ನ್ಯಾಯವೆನಿಸುವಂತಿಲ್ಲ. ಚೀನವು ಭಾರತವೊಂದರ ಶತ್ರುವಲ್ಲ, ಇಡಿಯ ಏಶ್ಯದ ಹಿತಶತ್ರು. ಅದರ ಆಕ್ರಮಣವೆದುರಿಸಲು ಶಸ್ತ್ರಾಸ್ತ್ರ ಪಡೆದರೆ, ಪಾಕೇಕೆ ಹಿಂತೆ ಪಡಬೇಕು? ಪಾಕ್ ಆಕ್ರಮಿತ ಚೀನಾವನ್ನು ಯುದ್ಧದ ಮೂಲಕ ಪಡೆಯುವ ಆಶಯ ಭಾರತಕ್ಕಿರುತ್ತಿದ್ದರೆ, ಎಂದೋ ಹಾಗೆ ಮಾಡಬಹುದಿತ್ತು. ಆದುದರಿಂದ ಪಾಕ್ ನಾಯಕರು ತುಸು ಗಂಭೀರವಾಗಿ ಮಾತಾಡಬೇಕೆನಿಸುತ್ತದೆ.

ವಾರ್ತಾ ವೇದಿಕೆ

ನಿವೃತ್ತ ಜನರಲ್ ಕಾರ್ಯಪ್ಪ

ನಿವೃತ್ತ ಮಹಾದಂಡನಾಯಕ ಕಾರ್ಯಪ್ಪನವರು ಸಮರ್ಥ ಆಡಳಿತೆಗಾರರೆಂದು ಹೆಸರಾದವರು, ಲಡಖ್ ಪ್ರದೇಶವು ಇಂದು ಭಾರತದಲ್ಲಿ ಇರುವುದಾದರೆ ಅದಕ್ಕೆ ಕಾರಣೀಭೂತರು ಅವರು. ಮೊತಿಗಿಂತ ಕೃತಿ ಅವಶ್ಯವೆನ್ನುವ ಇವರು ಕ್ರಾಂತಿಕಾರಕ ಘೋಷಣೆಗಳಿಂದ ಉದ್ರಿಕ್ತ ಮನೋಭಾವದಿಂದ ಮತ್ತು ಉದ್ರೇಕದ ಕೃತ್ಯಗಳಿಂದ ಕಾರ್ಯಸಾಧನೆಯಾಗುವುದಿಲ್ಲವೆನ್ನುತ್ತಾರೆ. ಚೌ ಎನ್ ಲಾಯ್‌ರವರ ಪ್ರತಿಮೆಯನ್ನು ಸುಡುವುದರಿಂದ ಒಡಗಿ ಬರುವ ಪ್ರಯೋಜನವೇನು ಎಂದು ಕೇಳುತ್ತಾರೆ ಇವರು. ಸೀಮಾ ಪ್ರದೇಶದ ಅಂಗುಲಂಗುಲ ಭೂಮಿಯನ್ನು ಬಲ್ಲ ಕಾರ್ಯಪ್ಪನವರು ತಮ್ಮ ಸೇವೆಯನ್ನು ಭಾರತಕ್ಕಾಗಿ ಅರ್ಪಿಸಲು ಮುಂದೆ ಬಂದುದು ನಿಜ; ಆದನ್ನು ಪಡೆಯುವಷ್ಟರ ಮಟ್ಟಿಗೆ ಭಾರತ ಹಿಂದುಳಿಯಲಾರದು.

ಮುರಾರ್ಜಿ ದೇಸಾಯಿ

ಸತ್ತ ಬಂಡವಳವೆನಿಸುವ ಬಂಗಾರವನ್ನು ಹೊರ ತೆಗೆದು ಅದನ್ನು ಜೀವಂತ ಬಂಡವಳವನ್ನಾಗಿ ಮಾಡಲು ಒಂದು ಯೋಜನೆ ಮಾಡುತ್ತಿರುವುದಾಗಿ ವಿತ್ತ ಮಂತ್ರಿ ಮುರಾರ್ಜಿ ಹಿಂದೊಮ್ಮೆ ಹೇಳಿದ್ದರು. ಆದಕ್ಕೆ ಸರಿಯಾಗಿ ಇಂದು ಬಂಗಾರದ ಮೇಲೆಸಾಲ ಪತ್ರಗಳನ್ನುಕೊಡುವಹೊಸ ಪರಿಪಾಠವನ್ನುಅವರು ಪ್ರಾರಂಭಿಸಿದ್ದಾರೆ. ಬಂಗಾರಕ್ಕೆ ನ್ಯಾಯುವಾದ ವಿದೇಶೀ ವಿನಿಮಯ ಪೇಟೆಯ ಮೌಲ್ಯವನ್ನು ತೆತ್ತು ಅದನ್ನು ಕೊಂಡುಕೊಳ್ಳಲು (ನಗದಿಯಾಗಿ ಅಲ್ಲ; ಸಾಲ ಪತ್ರಗಳ ರೂಪದಲ್ಲಿ) ಭಾರತ ಸರಕಾರ ನಿರ್ಧರಿಸಿದೆ. ರಾಷ್ಟ್ರೀಯ ರಕ್ಷಣಾ ನಿಧಿ ಸಂರಕ್ಷಣಾ ಬೋಂಡು ಮೊದಲಾದುವು ಎಲ್ಲರಿಗೂ ನಿಲುಕುವ ಒಂದು ಉಳಿತಾಯ ರೂಪಗಳು. ರಾಷ್ಟ್ರಕಲ್ಯಾಣ ಯೋಜನೆ.

ಅತ್ಯುತ್ತಮ ಟಾನಿಕ್
ನಿಮ್ಮ ದೇಹ — ಮನಸ್ಸುಗಳಿಗೆ
ಆರೋಗ್ಯವನ್ನೂ ಬಲವನ್ನೂ, ನವಚೈತನ್ಯವನ್ನೂ
ತಂದು ಕೊಡಬಲ್ಲ ಏಕಮಾತ್ರ ಟಾನಿಕ್
ಉಳಿತಾಯ
ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಜಾನ್ ಕೆನ್ನೆಡಿ

ಕಾಶ್ಮೀರದ ಮೇಲೆ ಪಾಕಿಸ್ತಾನವೀಗ ಹೆಚ್ಚಾಗಿ ಕಣ್ಣು ಇಟ್ಟಿರುವುದು ನಿಜವೇ. ಭಾರತವು ತನ್ನ ಶಕ್ತಿಯನ್ನು ಚೀನೀಯ ಆಕ್ರಮಣಗಾರರನ್ನು ಹೊರಗಟ್ಟುವುದ ಕ್ಕಾಗಿ ಕೂಡಿಸುತ್ತಿರುವುದು ಅನಿವಾರ್ಯ ವೆಂಬಂತಾದುದರಿಂದ, ಇದೇ ಸಂದರ್ಭವ ನ್ನು ಸಾಧಿಸಿ ಕಿಡಿಗೇಡಿ ಪಾಕ್ ಕಿಡಿಯು ಗುಳಲೂ ಬಹುದು. ಆಗ, ಕೇವಲ ಭಾರ ತಕ್ಕೆ ಮಾತ್ರವಲ್ಲ, ಪಾಕಿಸ್ತಾನಕ್ಕೂ ಚೀ ನೀಯರ ಹೆದರಿಕೆ ತಪ್ಪುವುದು. ಈ ಕಾರ ಣದಿಂದ ಕಾಶ್ಮೀರದ ತಂಟೆಯನ್ನು ಬೇಗ ನೇ ಬಗೆಹರಿಸಿಕೊಳ್ಳಿರಿ ಎಂದು ಅನೌಪ ಚಾರಿಕ ಅಧ್ಯಕ್ಷ ಕೆನ್ನೆಡಿ ಸಲಹೆ ನೀಡಿದ್ದಾರೆ ಕೆನ್ನೆಡಿಯವರ ಈ ಸಲಹೆಯು ಕಾರ್ಯ ಕೃತಗೊಳ್ಳುವುದು ಬಹುದೂರದ ಮಾತು. ಏಕೆಂದರೆ, ಪಾಕ್ ತನ್ನ ಹಳೆಯ ಪೊಂ ಡುವಾದವನ್ನೇ ಪುನರುಚ್ಚರಿಸಿ, ಅನ್ಯಾ ಯವೇ ನ್ಯಾಯವೆಂದು ಸಾಧಿಸ-ತ್ತಿದೆ. ರಶ್ಯದೊಡನೆ ಒಡಂಬಡಿಕೆ ಮಾಡಿಕೊಳ್ಳು ವ ಬೆದರಿಕೆಯನ್ನೂ ಹಾಕುತ್ತಿದೆ.

ನಿಕಿಟಾ ಕ್ರುಶ್ಚೇವ್

ರಶ್ಯನ್ ಪ್ರಧಾನಿ ಕ್ರುಶ್ಚೇವರನ್ನಿಂದು ಚೀನವುಳವ ಎಲ್ಲ ದೇಶಗಳೂ ಕೇಳುತ್ತ ವೆ ಸಮರವೋ ಸಂಧಾನವೊ ಎಂದು ಆದರೆ ದೊಡ್ಡ ಪ್ರಶ್ನೆಗಳನ್ನು ಸುಲಭದಲ್ಲಿ ಉತ್ತರಿಸ ಬಲ್ಲ ಕ್ರುಶ್ಚೇವರಿಗೆ ಈ ಸರಳ ಪ್ರಶ್ನೆಗೆ ಉತ್ತರ ಆಗೋಚರವಾದಂತಿದೆ. ಭಾರತ-ಚೀನಾ ಸಿವೂಗಡಿ ಮತ್ತಿಗ ಭಾರತದ ಮೇಲೆ ಚೀನೀಯ ಆಕ್ರಮಣ ಗಳ ಮೇಲೆ ರಶ್ಯದ ನಿಶ್ಚಿತ ನಿಲುಮೆಯೇ ನೆಂಬುದನ್ನಿಂದೂ ನ್ಯಕ್ತವಾಗಿಲ್ಲ ಹಾವು ಸಾಯಬಾರದು; ಕೋಲು ಮುರಿಯ ಬಾ ರದು ಎಂಬಂತೆ ಅದು ಏನೋ ಏನೋ ಹೇಳಿ ತಪ್ಪಿಸಿಕೊಳ್ಳಲು ನೋಡುತ್ತಿತ್ತು. ಆದರೆ ಇತ್ತೀಚೆಗೆ ಕ್ರುಶ್ಚೇವರ ಹೇಳಿಕೆ ಯಿಂದ ಅವರು ಚೀನೀಯರಿಗೆ ಪರೋಕ್ಷ ವಾಗಿಯೇ ಮಾತಾಡುತಿದ್ದಾರೆ; ಆದರೂ ಸಂ ಧಾನದ ಉಚ್ಚಾರ ಮಾಡುತಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಪಾಕ್ ವಿದೇಶ ಮಂತ್ರಿ ಮಹಮ್ಮದ್ ಅಲಿ ಗುಡುಗಿ

ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

R. E. P. No 23 62

ಮಂಗಳೂರು ಸಬ್ ಕೋರ್ಟ್—

O S No 112/52.

ರುಕ್ಮಿಣಿಪೆಡ್ತಿ ಕೂಡಾ — ಅರ್ಜಿದಾರರು

ಮತ್ತು

ಭೂಪಯ ಸೆಟ್ಟಿ ಕೂಡಾ — ಎದ್ರುದಾರರು

ಇವರೊಳಗೆ

7. ವಿಶ್ವನಾಥ 8. ರವಿ — ಗುಲಾಬಿ ಸೆಟ್ಟಿರ ಮಗಂದಿರು—ಕಾರ್ಯಳ ತಾಲ್ಲೂ ತಾಂತಾವರ ಗ್ರಾಮ.

7 ಮತ್ತು 8 ನೇ ಎದ್ರಿರಿಗೆ ತಿಳಿಯಪಡಿಸುವು ದೇನೆಂದರೆ:—

ಮೇಲಿನ ದಾವೆಯ ಡಿಕ್ರಿ ಅಮಲ್ ಜ್ಯಾರಿಯ ಬಗ್ಗೆ ಅರ್ಜಿದಾರರು ಅರ್ಜಿ ದಾಕ್ಲು ಮಾಡಿರುವುದರಿಂದ ಸದ್ರಿ ಅಮಲ್‌ಜ್ಯಾರಿ ಯೊಕೆ ಮುಂದವರಿನ ಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1962ನೇ ಯಸವಿ-ನವಂಬರ ತಿಂಗಳು 21ನೇ ತಾರೀಕು ಹಗ ಲು ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜ ರಾಗಬೇಕೆಂತ ನಿಮಗೆ ಈ ಮೂಲಕ ತಿಳಿಸಿ ರುತ್ತದೆ.

Y. C. S. Hegde
Advocate for Petns.

ಉಡ್ಪಿ ತಾ.೬-11-62

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ನಗರಸಭಾಧ್ಯಕ್ಷರ ಚುನಾವಣೆ—ನಾಗಿ ಹೊಸತಾಗಿ ಚುನಾಯಿತ ರಾದ ನಗರ ಸಭಾ ಸದಸ್ಯರ ಸಭೆಯೊಂದನ್ನು ಉಡುಪಿ ನಗರಸಭಾ ಆಫೀಸಿನಲ್ಲಿ ತಾರೀಕು

ದುತ್ತೆ, ನೀವು ರಶ್ಯನ್ ಒಡಂಬಡಿಕೆ ಮಾಡಿಕೊಳ್ಳುತ್ತೇನೆ'—ಇದೂ ಅಸಂಭವ ವೆನ್ನುವಂತಿಲ್ಲ.

ರಾಣಿ ಎಲಿಜಬೆಥ್

ಕಾನನ್ ವೆಲ್ತಿನ ರಾಣಿ ಬ್ರಿಟನ್ನು ತನ್ನ ಕಾಮನ್‌ವೆಲ್ತ್ ಮಹಾರಾಷ್ಟ್ರ ಭಾರತಕ್ಕೆ ಪರಿಹಾರ್ಯ ಸಹಾಯನೀಡ ಲು ಮುಂದಾಗಿದೆ ಪ್ರಧಾನಿ ಮೆಕಮಿಲ ನ್‌ರು ಇವನ್ನು ಸ್ಪಷ್ಟವಾಗಿ ಹೇಳಿದ್ದಾರೆ ಕಾರ್ಯರೂಪಕ್ಕೂ ತಂದಿದ್ದಾರೆ. ರಾಣಿ ಎಲಿಜಬೆಥರು ಸಹ ಪಾರ್ಲಮೆಂಟಿನಲ್ಲಿ ಮೂಡಿದ ಭಾಷಣದಲ್ಲಿ ಈ ಸದ-ಶಯ ವನ್ನು ಹೊರಗೆಡಹಿದ್ದಾರೆ ಚೀನಾ-ಭಾ ರತಗಡಿಯನ್ನು ಸೂಚಿಸುವ ಖಂತಾರಾ ಷ್ಟ್ರೀಯ ಮೈತ್ರಿಕಮಹೋನರೇಷನ್ನಿನ ಎಲ್ಲರೂ ಮನ್ನಿಸ-ತ್ತಾರೆ ಆವತ್ತೆ, ಕೆಂಪು ಚೀನ ಒಪ್ಪುತ್ತಿಲ್ಲ. ಅದರ ಬಾಲ ಹಿಡಿ ಯ ತೆಂಡಗಿದ ಕೆಲವರೂನ್ಯಾಯವನ್ನು ನ್ಯಾಯವೆಂದು ಒಪ್ಪಿಕೊಳ್ಳಲು ಹಿಂದ ರಿಯುತ್ತಾರೆ ಆದ-ಪುವರ ಕೊರತೆಯಿಂ ದಲೋ ಸತ್ಯವನ್ನು ಪ್ರಕಟಪಡಿಸಲು ಅವರು ಅಂಜುತ್ತಾರೆ. ಸತ್ಯದ ಮುಂದೆ ನೀತಿಯ ನುಂದೆ, ನ್ಯಾಯದ ಮುಂದೆ ಒಂದಲ್ಲ ಒಂದು ದಿನ ಎಲ್ಲರೂ ತಲೆ ಬಾ ಗಿಯೇ ಬಾಗಬೇಕಾಗುತ್ತದೆ.

15—11—62ರ ಬೆಳಿಗ್ಗೆ 9 ಗಂಟೆಗೆ ಕುಂ ದಾಪುರದ ಆ| ಕಮಿಶನರ್ ಶ್ರೀ ಟಿ. ಜೆ. ನಂಗೇರರು ಕರೆದಿರುವರು. ಸಭಾರಂಭದ ಮೊದಲು ಸದಸ್ಯರು ಪ್ರತಿಜ್ಞಾವಚನ ಸ್ವೀಕರಿ ಸುವರು. ಆನಂತರ ಅಧ್ಯಕ್ಷರ ಚುನಾವಣೆ ಜರಗುವುದು.

ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ— ಆಶ್ರಯದಲ್ಲಿ ವಾಗ್ದೇವಿ, ನೀ ಸಭೆಯೊಂದು ತಾ 13ರಂದು ಹಿರಿಯಡ್ಕ ಬೋ ರ್ಡ್ ಹೈಸ್ಕೂಲಿನ ಹಿಂದೀ ಅಧ್ಯಾಪಕ ಶ್ರೀ ಸಿ ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ತು. ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾಯರು ಸ್ವಾಗತಭಾಷಣ ಮಾಡಿದರು. (ಸಾಮಿಯೂಗುವುದು ಹೇಗೆ?, ಎಂ ಬ ವಿಷಯದ ಮೇಲೆ ವಿದ್ಯಾರ್ಥಿಗಳೂ ಹಿರಿ ಯರೂ ಮಾತನಾಡಿ ತಪ್ಪುಯೇ ಸುಬನೆಂದು ಪಾಠಿಸಿದರು ಸಾಹಿತ್ಯಕಾರ್ಯದರ್ಶಿ ಶ್ರೀ ವಿ. ನಾರಾಯಣ ಜೋಗಿತ್ತಾಯರು ಧನ್ಯವಾದಗಳ ನ್ನು ಆರ್ಪಿಸಿದರು. ವಿದ್ಯಾರ್ಥಿಗಳಿಂದ ಕಥಾ ಕಥನ ಮತ್ತು ಕಾನ್ಯ ವಾಚನಗಳೂ ಈ ಸಂ ದರ್ಭದಲ್ಲಿ ನಡೆದುವು ಶ್ರೀಗಳಾದ ಸಾ. ಚಂದ್ರಶೇಖರ ಜಡಿಗ ಸಿ. ರಾಜಗೋಪಾಲ ಆಚಾರ್ಯರು ಟಿ ನಾರಾಯಣ ಭಟ್ಟರು ತಮ್ಮ ತಮ್ಮ ಅಭಿಪ್ರಾಯಗಳನ್ನು ವಿವೇಚನಾತ್ಮಕ ವಾಗಿ ಮಂಡಿಸಿದ್ದರು.

ಬಸ್ರೂರು—ಭಾರತ ವಾಚನಾಲಯದ ಲ್ಲಿ ಕಳೆದ ತಾ. 13ರಂದು ಚೀತಸ ಕಾರ್ಯಕ್ರಮ ವ ಒಯೆಯರಾದ ಶ್ರೀ ಬಿ ಪರಮೇಶ್ವರ ಆಡಿ ಗರ ನೇತೃತ್ವದಲ್ಲಿ ಉಪ್ಪಿಯ ಶ್ರೀ ಪಿ. ರಾಮ ಕೃಷ್ಣ ಪೈಲೈರ ಹಾಡುಗಾರಿಕೆ ಶ್ರೀ ಬಾಲಕೃಷ್ಣ ದೋಗ್ಪರರ ಮೃದಂಗವಾದನ ಮತ್ತು ಶ್ರೀ ಬಿ ರಮಾನಾಥ ವ್ಯಾ. ನಾಯಕರ ಘಾರ್ಮೋ ನಿಯಂ ವಾದನದೊಂದಿಗೆ ಸಂಗೀತ ಕಾರ್ಯ ಕ್ರಮವು ಯಶಸ್ವಿಯಾಗಿ ಜರಗಿತು.

3600
ಬಹುಮಾನಗಳು

1950ನೇ ಒಡಿನೆನ್ಸ್ ನಂ IXರ ಅನ್ವಯ ನಡೆಯುವ SWS ಸೋಡ್ತಿ ಯಲ್ಲಿ ಟಿಕೇಟು ಕೊಳ್ಳುವವರಿಗೆ ಕೊಡಲ್ಪಡುತ್ತವೆ. ಜಗತ್ತಿನ ಮಹ ತ್ತಾದ ಸೋಡ್ತಿ! ಪ್ರತಿ ತಿಂಗಳ ಕೊನೆಯ ದಿನ ಸೋಡ್ತಿ ಎತ್ತಲಾಗು ತ್ತದೆ! ಪ್ರತಿ ಸಲ ಎತ್ತುವ ಸೋಡ್ತಿಯಲ್ಲಿ **3600** ಗ್ಯಾರಂಟಿಯೂವ ಬಹುಮಾನಗಳು! ಒಂದನೆ ಬಹುಮಾನ **3.75000** ಡೋಲರುಗಳು! 1950ರಿಂದ 45000ಕ್ಕೂ ಹೆಚ್ಚಿನ ಬಹುಮಾನಗಳು ಹಂಚಲ್ಪಟ್ಟಿವೆ. (ನನ್ನ ಗ್ರಾಹಕ ಶ್ರೀ ಜೆ. ರಾಮಯ್ಯ (ಆಂಧ್ರ) ಇವರು ಕಳೆದ ಬಾರಿ ಎತ್ತಲಾದ ಸೋಡ್ತಿಯಲ್ಲಿ ಒಂದು ಬಹುಮಾನ ಪಡೆದಿದ್ದಾರೆ) ಫಲಿ ತಾಂಶ ರೇಡಿಯೊ ಮೇಲಿಂದ! ಫಲಿತಾಂಶದ ನಟ್ಟಿಯನ್ನು ಟಿಕೇಟು ಪಡಕೊಳ್ಳುವ ಪ್ರತಿಯೊಬ್ಬರಿಗೂ ಕೊಡಲಾಗುವುದು! ಈ ತೆರನಾದ ಉತ್ತಮ ರಿಕಾರ್ಡು ಬೇರೆ ಯಾವ ಸೋಡ್ತಿಗೂ ಇಲ್ಲ ನಿಮ್ಮ ಹಣವು ಒಮ್ಮ ಜವೃತ್ತದ ಟಿಕೇಟನ್ನು ಮುಂದಾಗಿ ಪಡೆಯ ಬಲ್ಲುದು. ಟಿಕೇಟಿನ ಬೆಲೆ. 1 ಟಿಕೇಟಿಗೆ ರೂ. 4-50; ಎರಡಕ್ಕೆ ರೂ 8-50; ಐದಕ್ಕೆ ರೂ 20, ಹತ್ತಕ್ಕೆ ರೂ 40, ಇಪ್ಪತ್ತಕ್ಕೆ ರೂ 75; ನೂರುವತ್ತಕ್ಕೆ ರೂ. 140. ಪಾಲಿನ ಹಕ್ಕಿನ ಅರ್ಧ ಟಿಕೇಟಿಗೆ ರೂ. 2-50. ನಿಮ್ಮ ಹೆಸರನ್ನು ದಾಖಲು ಮಾಡಲಿಕ್ಕಾ ಸವಿವರವಾದ ನೋಟೀಸನ್ನು ಕಳುಹಿಸ-ವುದಕ್ಕಾ ವ್ಯಪಸವಾಗಿ ರೂ. 1ನ್ನು ಕಳುಹಿಸಿರಿ. (ಮನಿ ಯೂರ್ಡರ್ ಕೂಪನಿನಲ್ಲಿ ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲಿ ಬರೆಯಿರಿ.) ಒಡನೆ ಇವರಿಗೆ ಕಳಿಸಿರಿ:—

G. LAWRENCE, IV-335, NEW ROAD, COCHIN-2.

ಕು. ಶಿ. ಹರಿದಾಸ ಭಟ್ಟರು ಇಟೆಲಿಗೆ—

ಉಡುಪಿ ಎಂ ಜಿ. ಎಂ. ಕಾಲೇಜಿನ ಪ್ರೆಸ್ ಪ್ರಿನ್ಸಿಪಾಲರೂ, ಪ್ರಸಿದ್ಧ ಸಾಹಿತಿಗ ಳೂ ಆದ ಶ್ರೀ ಕು. ಶಿ. ಹರಿದಾಸ ಭಟ್ಟ ಎಂ. ಎ. ಇವರು ಔಷಧಿ ಅಭಿವೃದ್ಧಿಯ ಕುರಿತು ವಿಶೇಷ ಅಧ್ಯಯನ ನಡೆಸಲು ಇಟೆಲಿ ದೇಶಕ್ಕೆ ಇದೇ ತಾ 12.11.62ಕ್ಕೆ ಬೊಂ ಬಾಯಿಯಿಂದ ತೆರಳಲಿರುವರು. ಬೇರೆ ಬೇರೆ 50 ದೇಶಗಳ 50 ಜನ ಅಭ್ಯರ್ಥಿಗಳಲ್ಲಿ ಶ್ರೀ ಭಟ್ಟರೊಬ್ಬರೇ ಭಾರತದ ಅಭ್ಯರ್ಥಿಗಳಾಗಿರು ವರು ಈ ವ್ಯಾಸಂಗಾವಧಿಯು 6 ತಿಂಗಳ ವರೆಗೆ ಇದ್ದು ಶ್ರೀ ಭಟ್ಟರು 63ನೇ ಜೂನಿನಲ್ಲಿ ಹಿಂತಿರುಗಿ ಬರಲಿರುವರು.

ಇವರನ್ನು ಶುಭಕಾಮನೆಗಳೊಂದಿಗೆ ಸತ್ಕರಿಸಿ ಬೀಳ್ಕೊಡಲು ಉಡುಪಿಯ ಕರ್ನಾಟಕ ಸಂಘದವರು ಇಂದೇ ತಾ. 6ನೇ ಸಂಜೆ ಉ ಪೇಂದ್ರಬಾಗಿನದಲ್ಲಿ ಸ್ನೇಹ ಕೂಟವೊಂದನ್ನು ಡಾ| ಟಿ ಎಂ ಎ. ಪೈಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು ಕರ್ನಾಟಕ ಸಂಘದ ಉ ಪಾಧ್ಯಕ್ಷ ಡಾ| ಕೆ. ಎಲ್ ಏತಾಳರು ಸ್ವಾಗ ತ ಭಾಷಣ ಮಾಡಿ ಶ್ರೀ ಭಟ್ಟರಿಗೆ ಶುಭಹಾರ ಕ್ಕೆ ಮಾಡಿದರು. ಶ್ರೀಗಳಾದ ಮು. ರಾಜೇವ, ಶ್ರೀಮತಿ ಆಡಾರ್, ಕೆ. ಕೆ. ಪೈ ಇವರು ಶ್ರೀ ಭಟ್ಟರ ಬಹುಮುಖ ಪ್ರತಿಭೆ, ಕಾರ್ಯ ಕುಶಲತೆಗಳನ್ನು ಕೊಂಡಾಡಿ ಸುಖ ಪ್ರಯಾಣ ಹಾರೈಸಿದರು ಶ್ರೀ ಭಟ್ಟರು ಉತ್ತರರೂಪ ವಾಗಿ ಮಾತನಾಡುತ್ತ ಇಟೆಲಿ ದೇಶದ ಪ್ರಯಾಣ ಪ್ರಾಪ್ತವಾದ ಬಗೆ, ಉದ್ದೇಶಗಳ ನ್ನು ವಿವರಿಸಿ, ಸ್ನೇಹಿತರ ಸ್ನೇಹಭಾವಕ್ಕೆ ಆ ಭಾರಿ ನ್ಯಕ್ತಪಡಿಸಿದರು ಅಧ್ಯಕ್ಷ ಡಾ| ಪೈಗೆ ಳು ವಿನೋದಾತ್ಮಕವಾಗಿ ಮಾತನಾಡುತ್ತ ನಾ ಗ್ನಿಯೂ ಲೇಖಕರೂ ಆದ ಭಟ್ಟರಂತಹ ಪ್ರ ತಿಭಾವಂತರಿಗೆ ಅಲ್ಲೇನೂ ಕಲಿಯುವುದಾದ್ದಿ ರುವುದಿಲ್ಲವೆಂದೂ ಭಾರತದ ಉಜ್ವಲ ಸಂಸ್ಕೃ ತಿಯ ಸಂದೇಶವನ್ನವರಿಗೆ ಮುಟ್ಟಿಸಬೇಕೆಂ ದೂ ಹೇಳಿ ಸುಖಪ್ರಯಾಣ ಹಾರೈಸಿದರು. ಕಾರ್ಯದರ್ಶಿ ಶ್ರೀ ಕೆ. ಎನ್. ಏತಾಳರು ಧನ್ಯವಾದಗಳನ್ನರ್ಪಿಸಿದರು.

ಮಹಾರಾಷ್ಟ್ರ ಸ್ಟೇಟಿನ ಹೋಟೇಲುಗಳ ಫೆಡರೇಶನ್ನಿನ—ವರವಾಗಿ ಆವ

ರ ಗೌರವ ಜತೆ ಕಾರ್ಯದರ್ಶಿ ಶ್ರೀ ಬಿ. ಗೋ ಪಾಲ ಶೆಟ್ಟರು ರಾಷ್ಟ್ರೀಯ ರಕ್ಷಣಾ ನಿಧಿ ಗೆ ಮಹಾರಾಷ್ಟ್ರವ ಹೋಟೇಲು ರೆಸ್ಟೋರೆಂ ಟು ಮತ್ತು ಕೆಟರಿಂಗ್ ಪ್ರೊಪೆಸರಲ್ಲರೂ ಮುಕ್ತ ಹಸ್ತದಿಂದ ಸಹಾಯ ನೀಡಬೇಕೆಂ ದು ಸಲಹಿಸುತ್ತಾರೆ.

ಕೆನರಾ ಬ್ಯಾಂಕ್ ಲಿಮಿಟೆಡ್—ಇತ

ರು ಪ್ರಧಾನಿಯವರ ರಾಷ್ಟ್ರೀಯ ರಕ್ಷಣಾ ನಿ ಧಿಗೆ ರೂ 1,00,001 ದೇಣಿಗೆ ತೆತ್ತಿರುವರು. ಬ್ಯಾಂಕಿನ ಸಿಬ್ಬಂದಿಯವರು ಒಂದು ದಿನದ ವೇತನವನ್ನು ದೇಣಿಗೆ ಕೊಡಲು ಮುಂದಾಗಿ ಈ ವರೆಗೆ ರೂ. 12,500ಕ್ಕೂ ಹೆಚ್ಚು ಸಂಗ್ರಹವಾಗಿದೆ ಶಿಬ್ಬಂದಿಯ ಬೇಡಿಕೆಗೆ ಆ ಸ್ಪನ್ನೇ ಬೇಂಕಿನವರು ಕೂಡಿಸಿ ಕೊಡಲಿರು ವರು. ಇದು ರೂ. 40,000ವನ್ನು ಆಗ ಬ ಹುದೆಂದು ನಿರೀಕ್ಷಿಸಲಾಗಿದೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R E. P. 135/62 O S 384/69

ಸೆಂಕಪ್ಪಸುಣ ಮನೋಳಿತ್ತಾಯ.

—ಅರ್ಜಿದಾರ

ಪದ್ಮನಾಭ ಆಚಾರಿ, ಕೃಷ್ಣಯ್ಯ ಆಚಾರಿ ಗಳ ಮಗ ಪುತ್ತೂರು ತಾಲೂಕು ಒಳಮೊ ಗ್ರು ಗ್ರಾಮದ ನಿವಾಸಿ —ಎದ್ರಿ

—ಎದ್ರಿಗೆ ತಿಳಿಸುವುದೇನೆಂದರೆ ನಿಮ್ಮ ಸ್ತಿ ರಾಸ್ತಿ ಒಪ್ಪಿ ಬಗ್ಗೆ ದಾಕಲು ಮಾಡಿದ ಈ ಅ ಮಲ್ದಾರಿಯು ತಾ. 13—11—62ಕ್ಕೆ ಇರು ವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಅ ದಿನದ ಉದಯರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಸೈದು ಹಾಜ್ಯಯಿಲ್ಲದೆ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್,
ಅರ್ಜಿದಾರನ ವಕೀಲ.

ಪುತ್ತೂರು, ತಾ. 1—11—62

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೨	೮-೧೧-೧೯೬೨	೯

ಮಹತ್ವದ ಪರಿವರ್ತನೆ

ಚೀನೀಯರು ಭಾರತೀಯ ಪ್ರದೇಶದ ಮೇಲೆ ತಮ್ಮ ಪ್ರಭುತ್ವವನ್ನು ಆರೋಪಿಸಿ, ಭಾರತೀಯ ಸೈನಿಕ ಠಾಣ್ಯಗಳ ಮೇಲೆ ಆಕ್ರಮಣವನ್ನೂ ಧಾಳಿಯನ್ನೂ ಮಾಡಲುಪಕ್ರಮಿಸಿದ ಬಳಿಕ ಭಾರತದೊಳಗೆ ಕೆಲವೊಂದು ಬದಲಾವಣೆಗಳು ನಡೆದಿವೆ. ಮುಖ್ಯವಾಗಿ ಹೇಳುವುದಾದರೆ, ದೇಶದ ಸ್ವಾತಂತ್ರ್ಯಕ್ಕೆ ಬಂದೊದಗಿದ ಈ ಸಂಘಾತಾತ್ಪನವನ್ನು ಸ್ವೀಕರಿಸಲು ಸಮಸ್ತ ಭಾರತೀಯರೂ ತಾನು ನಾನೆಂದುತಿ ಪಾರೋತ್ಸಾಹದಿಂದ ಮುಂದೆ ಬರುತ್ತಿರುವುದನ್ನೂ ರಾಷ್ಟ್ರೀಯ ರಕ್ಷಣಾ ನಿಧಿಗೆ ನೆರವಿನ ಅನಂತ ಸಾಗರವೇ ಸುರಿಯುತ್ತಿರುವುದನ್ನೂ ನಾವು ಅವಶ್ಯ ಉಲ್ಲೇಖಿಸಬೇಕು. ಇದಕ್ಕೆಂತಲೂ ಮಹತ್ವದ ಇನ್ನೊಂದು ವಿಚಾರವೆಂದರೆ, ಪ್ರಧಾನಿ ನೆಹರುರವರು ತನ್ನ ಮೊದಲಿದ್ದ ವಿದೇಶ ನೀತಿ ಮಂತ್ರಿಶಾಖೆಯ ಜೊತೆಗೆ ಸಂರಕ್ಷಣಾ ಶಾಖೆಯನ್ನೂ ವಹಿಸಿಕೊಂಡುದು. ಈ ಕಾರ್ಯಕ್ರಮದಿಂದ ಕೆಲವು ಮಹಾ ನಾಯಕರು ತೃಪ್ತರಾದಂತೆ ಕಂಡು ಬರುತ್ತದೆ; ಮತ್ತು ವೈರಿಯನ್ನು ಹೊರಕ್ಕಟ್ಟುವ ಪರಮ ಪವಿತ್ರ ಉದ್ಯಮದಲ್ಲಿ ಅಖಂಡ ದೇಶದ ಸಹಾಯ ಹಸ್ತ ಮುಂದೆ ಬರುವಂತಾಯಿತು.

ಪ್ರಧಾನಿ ನೆಹರು ಇಂತಹ ಮಹತ್ವದ ಉಪಕ್ರಮವನ್ನು ಏಕೆ ಕೈಗೊಂಡರು ಎಂಬುದರ ಬಗ್ಗೆ ಅವರಲ್ಲದೆ ಮತ್ತಾರೂ ವಿವರಣೆ ಕೊಡುವುದು ಸಾಧ್ಯವಾಗದು. ವಿದೇಶ ನೀತಿ ಮತ್ತು ಸಂರಕ್ಷಣಾ ಶಾಖೆಗಳ ನಡುವೆ ನೇರ ಸಂಬಂಧವಿರುವುದು ನಿಜ; ದೇಶದ ಸಮಗ್ರತೆಗೆ ಭಂಗವೊದಗಲಿರುವ ಇಂತಹ ತುರ್ತಿನ ಸಮಯದಲ್ಲಿ ಇವೆರಡೂ ಒಬ್ಬನ ಕೈಯಲ್ಲಿಯೇ ಇಳಿಯುವುದರಿಂದ, ವಿದೇಶಗಳಿಂದ ಅವಶ್ಯಕ ಶಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳಲು ಮತ್ತು ಇತರ ವ್ಯವಹಾರಗಳನ್ನು ವಿಳಂಬವಿಲ್ಲದೆ ಮುಂದುವರಿಸಲು ಅನುಕೂಲವಾಗುವಂತೆ ಅವರೀ ರೀತಿ ಗೆಯ್ದರು ಎಂದರೆ ಅರ್ಥವತ್ತಾಗುವುದು. ಏಕೆಂದರೆ, ಸಂರಕ್ಷಣಾ ಉಪಕರಣಗಳನ್ನು ಸಿದ್ಧಗೊಳಿಸುವ ಹೊಸ ಶಾಖೆಯೊಂದನ್ನು ನಿರ್ಮಿಸಿ ಅದನ್ನು ಶ್ರೀ ಮೆನನ್ನರ ಅಧೀನಕ್ಕೆ ಒಪ್ಪಿಸಿರುವುದರಿಂದ ಸಂರಕ್ಷಣೆಗಾಗಿ ದೇಶದ ಒಳಗೆ ಸಾಧನೋಪಕರಣಗಳನ್ನು ಹೆಚ್ಚಿಸುವ ಹೊಣೆಗಾರಿಕೆಗೆ ಮಹತ್ವವನ್ನು ನೀಡಿ ಅದನ್ನು ಅವರ ಮೇಲೆಯೇ ಇಡಲಾಗಿದೆ. ದೇಶದಲ್ಲಿ ಆಂತಹ ಆಯುಧಗಳ ನಿರ್ಮಾಣಕಾರ್ಯವಿನ್ನೂ ಬಾಲ್ಯಾವಸ್ಥೆಯಲ್ಲೇ ಇರುವುದರಿಂದ ಈ ಕಡೆಗೆ ವಿಶೇಷ ಗಮನ ಹರಿಸಲು ಅನುಕೂಲವಾಗುವಂತೆ ಮತ್ತು ತುರ್ತಿನ ಸ್ಥಿತಿಯನ್ನು ಎದುರಿಸಲು ನಿರ್ವಿಘ್ನವಾಗಿ ನೆರವಾಗುವಂತೆ ಈ ರೀತಿಯ ಬದಲಾವಣೆಯನ್ನು ಅವರು ಮಾಡಿದರು ಎಂದು ಕೆಲವರ ಅಭಿಪ್ರಾಯ.

ಇನ್ನು ಕೆಲವರು ಇದಕ್ಕೆ ವ್ಯತಿರಿಕ್ತವಾದ ಮತಗಳನ್ನೇ ಮುಂದಿಡುತ್ತಾರೆ. ಕೃಷ್ಣ ಮೆನನ್ನರು ಕಮ್ಯುನಿಸ್ಟರ ಪಕ್ಷಪಾತಿಯೆಂಬುದಾಗಿ ಅವರ ಮೇಲೆ ಆರೋಪ ಹೊರಿಸಿ, ಅವರಿಂದ ಸಂರಕ್ಷಣಾ ಶಾಖೆಯನ್ನು ಕಿತ್ತುಕೊಳ್ಳಬೇಕೆಂದೂ ಶ್ರೀ ನೆಹರುರವರೇ ಅದನ್ನು ವಹಿಸಿದಲ್ಲಿ ಜನತೆಯ ವಿಶ್ವಾಸವು ಹೆಚ್ಚಾಗುವುದೆಂದೂ ಆಕ್ರಮಣಗಾರರನ್ನು ಹಿಮ್ಮೆಟ್ಟಿಸುವುದಕ್ಕೆ ನೂರು ಬಲ ಬಂದಂತಾಗುವುದೆಂದೂ ಕೆಲವೊಬ್ಬರು ನಾಯಕ ಮಣಿಗಳು ಹೇಳಿದುದನ್ನು ನಾವು ಮರೆಯಬಾರದು. ಹಿಂದೊಮ್ಮೆ ಇದೇ ರೀತಿಯ ವಾದಕ್ಕೆ ವಿಷಯವಾದವರು ಶ್ರೀ ಮೆನನ್, ಅಲ್ಲದೇ ಮೆನನ್ನರ ಮೇಲಿನ ಅಭಿಪ್ರಾಯವನ್ನು ಹೆಚ್ಚಿನವರು ಬದಲಾಯಿಸಿಲ್ಲ. ಸ್ವಯಂ ಕಾಂಗ್ರೆಸಿಗರಲ್ಲಿಯೇ ಮೆನನ್ನರ ಸತ್ಯ ಸಂಧತೆಯ ಬಗ್ಗೆ ಸಂಶಯ ಪಡುವವರು ಅನೇಕ ಮಂದಿಯಿದ್ದಾರೆ; ಇಂದಿಗೂ ಇದ್ದಾರೆ. ಆದರೆ, ಮೆನನ್ನರ ಮೇಲೆ ಅವಿಶ್ವಾಸ ತೋರಿಸುವುದೆಂದರೆ, ತನ್ನ ಮೇಲೆ ತೋರಿದಂತೆಯೆಂದು ನೆಹರು ಒಮ್ಮೆ ಅಂದಿದ್ದರು. ಈ ಮಾತನ್ನು ಯಾರೂ ಸಮರ್ಥಿಸಲಿಲ್ಲವಾದರೂ ಮೆನನ್ನರ ಮೇಲೆ ಟೀಕೆಗಳು ಮಾತ್ರ ಕಡಿಮೆಯಾದುವು. ರಾಜಾಜಿ, ಅಶೋಕ ಮೆಹತ ಮೊದಲಾದ ಮಹಾ ಮಹಾ ಮೇಧಾವಿಗಳು ಈ ಬದಲಾವಣೆಗಳನ್ನು ಬಯಸಿದ್ದರು ಇನ್ನು ಕೆಲವರು ಮತ್ತೂ ಮುಂದೆ ಹೋಗಿ, ಸಚಿವ ಸಂಪುಟದಿಂದಲೇ ಮೆನನ್ನರ ಉಚ್ಚಾಟನೆಯಾಗಬೇಕೆಂದು ಹೇಳುತ್ತಾರೆ.

ಜನತೆಯ ಕೇಳಿಕೆಯನ್ನೇ ಕೇಳಿ ನೆಹರು ಈ ಉಪಕ್ರಮಕ್ಕೆ ಕೊಡಗಿದ್ದಾರು ಇರಬಹುದು; ಅಂತೂ ಇದು ತಾತ್ಕಾಲಿಕ ವ್ಯವಸ್ಥೆಯೆಂಬುದು ನಿಜ. ಆದುದರಿಂದಾಗಿ, ಪರಿಸ್ಥಿತಿ ವಶದಿಂದ, ವ್ಯವಹಾರ ತೀವ್ರತೆಗಾಗಿ ಅವರೀ ರೀತಿ ಮಾಡಿದರೆಂಬುದು ಹೆಚ್ಚು ಸಮರ್ಪಕವೆಂದು ತೋರುತ್ತದೆ. ಸಾಮಾನ್ಯವಾಗಿ ಪ್ರಧಾನ ಮಂತ್ರಿಯ ಕಾರ್ಯ ವ್ಯಾಪ್ತಿಯು ಎಲ್ಲ ಮಂತ್ರಿ ಶಾಖೆಗಳ ಮೇಲೂ ಇರುತ್ತದೆ. ಹಾಗಿರುವಾಗ, ಸಂರಕ್ಷಣಾ ಶಾಖೆಯನ್ನು ಮೆನನ್ನರಿಂದ ಕಿತ್ತುಕೊಳ್ಳುವ ಅಗತ್ಯವಿರಲಿಲ್ಲ ಈಗಾಗಲೇ ಹೊರಲಾರದ ಕಾರ್ಯಭಾರದಿಂದ ಕಂಗೆಟ್ಟ ನೆಹರು ಇನ್ನೂ ಹೆಚ್ಚಿನ ಭಾರವನ್ನು ಹೊರಲು ಮುಂದೆ ಬಂದುದು ಭಾರತೀಯರ ಸೌಭಾಗ್ಯ. ಕಾರ್ಯಬಾಹುಳ್ಯದಿಂದ ಸವೆದಿರುವ ಅವರು ಹೊಸ ಶಾಖೆಯನ್ನು ಸೇರಿಸಿಕೊಂಡುದರಿಂದ ಅವರ ಹೊಣೆಗಾರಿಕೆ ದ್ವಿಗುಣವಾಗಿಯಿತು. ಮಾಜಿ ಜನರಲ್ಲರಲ್ಲಿ ಒಬ್ಬನನ್ನು ಸಂರಕ್ಷಣಾ ಮಂತ್ರಿಯೂ ನೇಮಿಸಲೇಕೆಂಬ ವಾದವೂ ಇಂದು ಮುಂದಿದೆ. ಆದಂತೂ ಹಾಗೆಯೇ ಇರಲಿ. ದೇಶದ ಅನಸ್ಯಕತೆ ಜನತೆಯ ಅಭಿಮತ ಮತ್ತು ಪರಿಸ್ಥಿತಿಗಳಿಗೆ ಸರಿಯಾಗಿ ಹೊಂದಿಕೊಂಡು ಕಾರ್ಯನಿರ್ವಹಿಸುತ್ತಿರುವ ಭಾರತೀಯ ಸ್ವಾತಂತ್ರ್ಯ ರಕ್ಷಕ ನೆಹರು ದೀರ್ಘಾಯುವಾಗಲಿ; ಅವರ ಮಾರ್ಗದರ್ಶನದಲ್ಲಿ ದೇಶ ಕಲ್ಯಾಣವಾಗಲಿ.

ಪಾಕ್ ಅಪಲಾಪ

ಕೆಂಪು ಚೀನಾದ ಆಕ್ರಮಣದಿಂದ ಸ್ವರಕ್ಷಣೆಮಾಡಿಕೊಳ್ಳಲು ಭಾರತಕ್ಕೆ ಅಮೆರಿಕ—ಬ್ರಿಟನ್ನುಗಳಿಂದ ಶಸ್ತ್ರಾಸ್ತ್ರಗಳು ಬರುತ್ತಿವೆ. ರಾಷ್ಟ್ರ—ರಾಷ್ಟ್ರಗಳ ಮೇಲಿನ ಸ್ನೇಹ ಸಂಬಂಧಗಳಿಂದ ಉದಾರ ತಳಹದಿಯಲ್ಲಿ ಇವು ನಮ್ಮ ಕೈ ಸೇರುತ್ತಿವೆ. ಆದರೆ, ನಮ್ಮ ನೆರೆಯ, ದಾಯಾದಿಯಂತೆ ವರ್ತಿಸುತ್ತಿರುವ ಪಾಕಿಸ್ತಾನವು ಇದರಿಂದ ಕಳವಳಗೊಂಡಿದೆ. ಭಾರತದ ಸೈನಿಕ ಶಕ್ತಿ ಹೆಚ್ಚುವುದರಿಂದ, ತನ್ನ ಮತ್ತು ಭಾರತದ ನಡುವಣ ಶಕ್ತಿ ಸಮತೋಲವು ಕಡಿಮೆಯಾಗುತ್ತದೆಯೆಂಬ ಕಾರಣವನ್ನು ಮುಂದಿಟ್ಟು ಈ ವಿಧದ ಕೊಡುಗೆಯನ್ನೆದು ವಿರೋಧಿಸುತ್ತದೆ. ಭಾರತಕ್ಕೆ ಸಹಾಯ ಕೊಡುವುದಾದರೆ ತನಗೂ ಅದೇ ಮೊದಗಿಯ ಸಹಾಯ ದೊರೆಯಬೇಕೆಂದೂ ಅದು ಹೇಳುತ್ತದೆ. ಇನ್ನೂ ಮುಂದುವರಿದು ಭಾರತ-ಪಾಕ್ ಗಡಿಯ ಉದ್ದಕ್ಕೂ ಸೈನಿಕರನ್ನು ನಿಲ್ಲಿಸಬೇಕೆಂದು ಮಾಜಿ ಗವರ್ನರ್ ಜನರಲ್ ಇಸ್ಕಾಂದರ ಮಿರ್ಜಾರ ವಾದವಿದೆ. ಪಾಕ್ ಅಧಿನಾಯಕರು ಹೀಗೆಲ್ಲ ಅನ್ನಬೇಕಾದರೆ, ಭಾರತವು ಕಾಶ್ಮೀರದ ಮೇಲೆ ದುಡೆತ್ತಿ ಅದನ್ನು ಸಂಪೂರ್ಣ ವಶಪಡಿಸಿಕೊಳ್ಳುವುದು ಎಂದು ಅವರು ಬಹಳವಾಗಿಹೆದರುತ್ತಾರೆ ಎನ್ನಲೇಬೇಕು. ಅದರೆ, ಅಂತಹ ಮೂರ್ಖತನವನ್ನು ಭಾರತವೆಂದಿಗೂ ತೋರಿಸುವುದಿಲ್ಲ. ವಿದೇಶಗಳಿಂದ ಸಹಾಯ ಪಡೆಯುವುದು, ನಮ್ಮ ಭದ್ರತೆಗಾಗಿ ಮಾತ್ರವೇ ಉಪ್ಪಿದೆ ಪಾಕಿಸ್ತಾನವನ್ನು ಪೇಚಾಟಕ್ಕೆ ಸಿಲುಕಿಸುವ ಉದ್ದೇಶದಿಂದಲ್ಲ. ಹಾಗಿರುವಾಗ ತನ್ನ ಪ್ರತಿಪೈಗೆ ಕುಂದುಂಟಾಗುವುದೆಂದು ಊಹಿಸಿ ಪಾಕ್ ನಾಯಕರು ಅಪಲಾಪವೆಬ್ಬಿಸಿದ್ದರೆ, ದಾಯಾದಿ ಮತ್ಸರ ಮಾತ್ರ ವ್ಯಕ್ತವಾದಂತಾದೀತು; ಭಾರತದ ಆಕ್ರಮಣವೆಂದರೆ, ಭಾರತೀಯ ಉಪಖಂಡದ ಮೇಲಿನ ಆಕ್ರಮಣವೆಂದು ನಾವು ತಿಳಿದುಕೊಂಡರೆ, ಪಾಕ್ ನಾಯಕರ ಅಸೂಯೆ ಪಡುವ ಅಗತ್ಯವಿಲ್ಲ. ಮನೆಗೆ ಬೆಂಕಿ ಬಿದ್ದಾಗ, ಅದನ್ನು ನಂದಿಸಲು ನೀರು ಇರಸಬೇಕೇ ಹೊರತು ಆ ಬಗ್ಗೆ ಜಗಳಕ್ಕೆ ಪ್ರೇರಣೆ ಕೊಡುವುದು ನ್ಯಾಯವೆನಿಸುವಂತಿಲ್ಲ. ಚೀನವು ಭಾರತವೊಂದರ ಶತ್ರುವಲ್ಲ; ಇಡಿಯ ಏಶ್ಯದ ಹಿತಶತ್ರು. ಅದರ ಆಕ್ರಮಣವನ್ನು ದುರಿಸಲು ಶಸ್ತ್ರಾಸ್ತ್ರ ಪಡೆದರೆ, ಪಾಕ್ ಚಿಂತೆ ಪಡಬೇಕಾದ ಪಾಕ್ ಆಕ್ರಮಿಸಿ ಚೀನಾವನ್ನು ಯುದ್ಧದ ಮೂಲಕ ಸದೆಯುವ ಆಶಯ ಭಾರತಕ್ಕಿರುತಿದ್ದರೆ, ಏನೋ ಹಾಗೆ ಮಾಡಬಹುದಿತ್ತು. ಆದರಿಂದ ಪಾಕ್ ನಾಯಕರು ತುಸು ಗಂಭೀರವಾಗಿ ನೂತಾಡಬೇಕೆನಿಸುತ್ತದೆ.

ವಾರ್ತಾ ವೇದಿಕೆ

ನಿವೃತ್ತ ಜನರಲ್ ಕಾರ್ಯಪ್ಪ

ನಿವೃತ್ತ ಮಹಾದಂಡನಾಯಕ ಕಾರ್ಯಪ್ಪನವರು ಸಮರ್ಥ ಆಡಳಿತಗಾರರೆಂದು ಹೆಸರಾದವರು, ಲಡಖ್ ಪ್ರದೇಶವು ಇಂದು ಭಾರತದಲ್ಲಿ ಇರುವುದಾದರೆ ಅದಕ್ಕೆ ಕಾರಣೀಭೂತರು ಅವರು. ಪರಿಣತಿಗಿಂತ ಕೃತಿ ಅವಶ್ಯವೆನ್ನುವ ಇವರು ಕ್ರಾಂತಿಕಾರಕ ಘೋಷಣೆಗಳಿಂದ ಉದ್ರಿಕ್ತ ಮನೋಭಾವದಿಂದ ಮತ್ತು ಉದ್ರಿಕದ ಕೃತ್ಯಗಳಿಂದ ಕಾರ್ಯಸಾಧನೆಯಾಗುವುದಿಲ್ಲವೆನ್ನುತ್ತಾರೆ. ಚೌ ಎನ್ ಲಾಯ್‌ರವರ ಪ್ರತಿಮೆಯನ್ನು ಸುಡುವುದರಿಂದ ಒಡಗಿ ಬರುವ ಪ್ರಯೋಜನವೇನು ಎಂದು ಕೇಳುತ್ತಾರೆ ಇವರು. ಸೀಮಾ ಪ್ರದೇಶದ ಅಂಗುಲಂಗುಲ ಸ್ಥಳವನ್ನು ಬಲ್ಲ ಕಾರ್ಯಪ್ಪನವರು ತಮ್ಮ ಸೇವೆಯನ್ನು ಭಾರತಕ್ಕಾಗಿ ಅರ್ಪಿಸಲು ಮುಂದೆ ಬಂದುದು ನಿಜ; ಅದನ್ನು ಪರಿಯುವಷ್ಟರ ಮಟ್ಟಿಗೆ ಭಾರತ ಹಿಂದುಳಿಯಲಾರದು.

ಮುರಾರ್ಜಿ ದೇಸಾಯಿ

ಸತ್ತ ಬಂಡವಳವನ್ನಿಸುವ ಬಂಗಾರವನ್ನು ಹೊರ ತೆಗೆದು ಅದನ್ನು ಜೀವಂತ ಬಂಡವಳವನ್ನಾಗಿ ಮಾಡಲು ಒಂದು ಯೋಜನೆ ಮಾಡುತ್ತಿರುವುದಾಗಿ ಕೇಂದ್ರ ಮಂತ್ರಿ ಮುರಾರ್ಜಿ ಹಿಂದೊಮ್ಮೆ ಹೇಳಿದ್ದರು. ಅದಕ್ಕೆ ಸರಿಯೋಗಿ ಇಂದು ಬಂಗಾರದ ಮೇಲೆಸಾಲ ಪತ್ರಗಳನ್ನು ಕೊಡುವ ಮಹೋಪರಿವಾರವನ್ನು ಅವರು ನಿಯಂತ್ರಿಸಿದ್ದಾರೆ. ಬಂಗಾರಕ್ಕೆ ನ್ಯಾಯವಾದ ವಿದೇಶೀ ವಿನಿಮಯ ಪೇಟೆಯು ಮಾಲ್ಯವನ್ನು ತೆತ್ತು ಅದನ್ನು ಕೊಂಡುಕೊಳ್ಳಲು (ನಗದಿಯೊಗಿ ಅಲ್ಲ; ಸಾಲ ಪತ್ರಗಳ ಮೂಲದಲ್ಲಿ) ಭಾರತ ಸರಕಾರ ನಿರ್ಧರಿಸಿದೆ. ರಾಷ್ಟ್ರೀಯ ರಕ್ಷಣಾ ನಿಧಿ ಸಂರಕ್ಷಣಾ ಕೋಷ್ಠಂಡು ನೊದಲಾದುವು ಎಲ್ಲರಿಗೂ ತಿಳುಸುವ ಒಂದು ಉಳಿತಾಯ ಮಾರ್ಗ ರಾಷ್ಟ್ರಕಲ್ಯಾಣ ಯೋಜನೆ.

ಅತ್ಯುತ್ತಮ ಟಾನಿಕ್
ನಿಮ್ಮ ದೇಹ — ಮನಸ್ಸುಗಳಿಗೆ
ಆರೋಗ್ಯವನ್ನೂ ಬಲವನ್ನೂ, ನವಚೈತನ್ಯವನ್ನೂ
ತಂದು ಕೊಡಬಲ್ಲ ವಿಕಮಾತ್ರ ಟಾನಿಕ್
ಉಳಿತಾಯ
ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಜಾನ್ ಕೆನ್ನೆಡಿ

ಕಾಶ್ಮೀರದ ಮೇಲೆ ಪಾಕಿಸ್ತಾನೀಯರ ಹೆಚ್ಚಾಗಿ ಕಣ್ಣು ಇಟ್ಟಿರುವುದು ನಿಜವೇ. ಭಾರತವು ತನ್ನ ಶಕ್ತಿಯನ್ನು ಚೀನೀಯ ಆಕ್ರಮಣಗಾರರನ್ನು ಹೊರಗಟ್ಟುವುದಕ್ಕಾಗಿ ಕೂಡಿಸುತ್ತಿರುವುದು ಅನಿವಾರ್ಯ ಸಂಬಂಧವಾದುದರಿಂದ, ಇದೇ ಸಂದರ್ಭವನ್ನು ಸಾಧಿಸಿ ಕಿಡಿಗೇಡಿ ಪಾಕ್ ಕೆಡಿಯು ಗುಲಲೂ ಬಹುದು. ಆಗ. ಕೇವಲ ಭಾರತಕ್ಕೆ ಮಾತ್ರವಲ್ಲ, ಪಾಕಿಸ್ತಾನಕ್ಕೂ ಚೀನೀಯರ ಹೆದರಿಕೆ ತಪ್ಪುವುದು ಈ ಕಾರಣದಿಂದ ಕಾಶ್ಮೀರದ ತಂಟೆಯನ್ನು ಬೇಗನೇ ಬಗೆಹರಿಸಿಕೊಳ್ಳಿರಿ ಎಂದು ಅನೇಕ ಯು ಅಧ್ಯಕ್ಷ ಕೆನ್ನೆಡಿ ಸಲಹೆ ನೀಡಿದ್ದಾರೆ ಕೆನ್ನೆಡಿಯವರ ಈ ಸಲಹೆಯು ಕಾರ್ಯ ಕೃತಗೊಳ್ಳುವುದು ಬಹುದೂರದ ಮಾತು. ಏಕೆಂದರೆ, ಪಾಕ್ ತನ್ನ ಹಳೆಯ ಸೊಂಟವಾದವನ್ನೇ ಪುನರುಚ್ಚರಿಸಿ, ಅನ್ಯಾಯವೇ ನ್ಯಾಯವೆಂದು ಸಾಧಿಸ ತ್ತಿದೆ. ರಕ್ಷಣೆಯ ಒಡಂಬಡಿಕೆ ಮಾಡಿಕೊಳ್ಳುವ ಬೆದರಿಕೆಯನ್ನೂ ಹಾಕುತ್ತಿದೆ.

ನಿಕಿಟಾ ಕ್ರುಶ್ಚೇವ್

ರಶ್ಯನ್ ಪ್ರಧಾನಿ ಕ್ರುಶ್ಚೇವರನ್ನಿಂದು ಚೀನೀಯರಿದ ಎಲ್ಲ ದೇಶಗಳೂ ಕೇಳುತ್ತವೆ ಸಮರೋ ಸಂಧಾನವೊ ಎಂದು ಆದರೆ ದೊಡ್ಡ ಪ್ರಶ್ನೆಗಳನ್ನು ಸುಲಭದಲ್ಲಿ ಉತ್ತರಿಸಬಲ್ಲ ಕ್ರುಶ್ಚೇವರಿಗೆ ಈ ಸರಳ ಪ್ರಶ್ನೆಗೆ ಉತ್ತರ ಆಗೋಚರವಾದುದಾಗಿದೆ. ಭಾರತ-ಚೀನಾ ಸಿಮೊಗಡಿ ಮಷ್ಟೀಗ ಭಾರತದ ಮೇಲೆ ಚೀನೀಯ ಆಕ್ರಮಣಗಳ ಮೇಲೆ ರಶ್ಯದ ನಿಶ್ಚಿತ ನಿಲುಮೆಯೇ ನೆಂಬುವನ್ನಿಂದೂ ವ್ಯಕ್ತವಾಗಿಲ್ಲ ಹಾವು ಸಾಯಬಾರದು; ಕೋಲು ಮುರಿಯ ಬಾರದು ಎಂಬಂತೆ ಆದು ಏನೋ ಏನೋ ಹೇಳಿ ತಪ್ಪಿಸಿಕೊಳ್ಳಲು ನೋಡುತ್ತಿತ್ತು. ಆದರೆ ಇತ್ತೀಚೆಗೆ ಕ್ರುಶ್ಚೇವರ ಹೇಳಿಕೆಯಿಂದ ಅವರು ಚೀನೀಯರಿಗೆ ಪರವಾಗಿಯೇ ಮಾತಾಡುತಿದ್ದಾರೆ, ಆದರೂ ಸಂಧಾನದ ಉಚ್ಚಾರ ಮಾಡುತಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಪಾಕ್ ವಿದೇಶ ಮಂತ್ರಿ ಮಹಮ್ಮದ್ ಅಲಿ ಗುಡುಗಿ

ಉಡ್ಪಿ ಸಬ್‌ಕೋರ್ಟ್ ಜಡ್ಜರ ಕೋರ್ಟಿನಲ್ಲಿ

R E· P No 23 62

ನುಂಗಳೂರು ಸಬ್ ಕೋರ್ಟ್-

O S No 112/52

ಕುಕ್ಕಿನಸೆದ್ದಿ ಕೂಡಾ — ಆರ್ಜಿದಾರರು

ಮತ್ತು

ಭೂಪಯ ಸೆಟ್ಟಿ ಕೂಡಾ — ಎದ್ರಿರು

ಇವರೊಳಗೆ

೧. ವಿಶ್ವನಾಥ ೪ ರನಿ — ಗುಲಾಣಿ ಸೆದ್ದಿರ ಮಗಂದಿರು — ಕಾರ್ಕಳ ತಾಲ್ಲೂ ಕಾಂತಾವರ ಗ್ರಾಮ.

೨ ಮತ್ತು ೬ ನೇ ಎದ್ರಿರಿಗೆ ತಿಳಿಯಪಡಿಸುವುದೇನೆಂದರೆ:—

ಮೇಲಿನ ದಾವಯ ದಿಕ್ಕಿನ ಅಮಲ್ ಜ್ಯಾರಿಯ ಬಗ್ಗೆ ಆರ್ಜಿದಾರರು ಅರ್ಜಿ ದಾಕ್ಲು ಮಾಡಿರುವುದರಿಂದ ಸದ್ರಿ ಅಮಲ್‌ಜ್ಯಾರಿ ಮಾಡಲೆ ಮುಂದೆ ಪರಿಸಿ ಕೊಡದು ಎಂಬುದಕ್ಕೆ ತೋರಿಸಲು ತೋರಿಸಲಿಕ್ಕೆ 1962ನೇ ಇಸವಿ-ನವಂಬರ ತಿಂಗಳು ೧೫ನೇ ತಾರೀಕು ಹಗಲು ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಬೇಕೆಂತ ನಿಮಗೆ ಈ ಮೂಲಕ ತಿಳಿಸಿರುತ್ತದೆ.

Y C· S. Hegde

Advocate for Petnrs.

ಇತಿ ತಾ.6-11-62

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ನಗರಸಭಾ ಧ್ಯಕ್ಷರ ಚುನಾವಣೆ—

ಗಾಗಿ ಹೊಸತಾಗಿ ಚುನಾಯಿತರಾದ ನಗರ ಸಭಾ ಸದಸ್ಯರ ಸಭೆಯೊಂದನ್ನು ಉಡುಪಿ ನಗರಸಭಾ ಆಫೀಸಿನಲ್ಲಿ ತಾರೀಕು

ದಾತೆ, ನಾವು ರಶ್ಯನ್ ಒಡಂಬಡಿಕೆ ಮಾಡಿಕೊಳ್ಳುತ್ತೇವೆ—ಇದೂ ಅಸಂಭವವೆನ್ನುವಂತಿಲ್ಲ.

ರಾಣಿ ಎಲಿಜಬೆಥ್

ಕಾಮನ್ಸ್ ಎಲ್ಲಿನ ರಾಣಿ ಬ್ರಿಟನ್ನು ತನ್ನ ಕಾಮನ್‌ವೆಲ್ತ್ ಮಹಾರಾಷ್ಟ್ರ ಭಾರತಕ್ಕೆ ಪರಿಶೂರ್ಣ ಸಹಾಯನೀಡಲು ಮುಂದಾಗಿದೆ ಪ್ರಧಾನಿ ಮೆಕಮಿಲನ್‌ರು ಇನ್ನು ಸ್ಪಷ್ಟವಾಗಿ ಹೇಳಿದ್ದಾರೆ ಕಾರ್ಯರೂಪಕ್ಕೂ ತಂದಿದ್ದಾರೆ ರಾಣಿ ಎಲಿಜಬೆಥರು ಸಹ ಪಾರ್ಲಮೆಂಟಿನಲ್ಲಿ ಮಾಡಿದ ಭಾಷಣದಲ್ಲಿ ಈ ಸದುದ್ದೇಶವನ್ನು ಹೊರಗೆಡಹಿದ್ದಾರೆ ಚೀನಾ-ಭಾರತಗಡಿಯನ್ನು ಸೂಚಿಸುವ ಅಂತರಾಷ್ಟ್ರೀಯ ಮೈಕಮಹೋನರೇಖೆಯನ್ನು ಎಲ್ಲರೂ ಮನ್ನಿಸುತ್ತಾರೆ ಆದರೆ, ಕೆಂಪು ಚೀನ ಒಪ್ಪುತ್ತಿಲ್ಲ ಅದರ ಬಾಲ ಹಿಡಿಯ ತೊಡಗಿದ ಕೆಲವರೂನ್ಯಾಯವನ್ನು ನ್ಯಾಯವೆಂದ. ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ ಆದರೂದರ ಕೊರತೆಯಿಂದಲೋ ಸತ್ಯವನ್ನು ಪ್ರಕಟಿಸಿಲು ಅವರು ಅಂಜುತ್ತಾರೆ ಸತ್ಯದ ಮುಂದೆ ನೀತಿಯ ವಂದೆ, ನ್ಯಾಯದ ಮುಂದೆ ಒಂದಲ್ಲ ಒಂದು ದಿನ ಎಲ್ಲರೂ ತಲೆ ಬಾಗಿಯೇ ಬಾಗಬೇಕಾಗುತ್ತದೆ

15—11—62ರ ಬೆಳಿಗ್ಗೆ 9 ಗಂಟೆಗೆ ಕೋರ್ಟಾಸುರದ ಆ॥ ಕಮಿಶನರ್ ಶ್ರೀ ಟಿ. ಜಿ ಬಂಗೇರರು ಕರೆದಿರುವರು ಸಭಾರಂಭದ ಮೊದಲು ಸದಸ್ಯರು ಪ್ರತಿಜ್ಞಾವಚನ ಸ್ವೀಕರಿಸುವರು. ಅನಂತರ ಅಧ್ಯಕ್ಷರ ಚುನಾವಣೆ ಜರಗುವುದು.

ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ—

ಅಶ್ರಯದಲ್ಲಿ ವಾರ್ಷಿಕ ಸಭೆಯೊಂದು ತಾ 3ರಂದು ಹಿರಿಯಡ್ಕ ಬೋರ್ಡ್ ಹೈಸ್ಕೂಲಿನ ಹಿಂದೀ ಅಧ್ಯಾಪಕ ಶ್ರೀ ಸಿ ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ನೇಸೀಚಂದ ರಾಯರು ಸ್ವಾಗತಭಾಷಣ ಮಾಡಿದರು ಸಾಮಾಜಿಗಾಗುವುದು ಹೇಗೆ?, ಎಂಬ ವಿಷಯದ ಮೇಲೆ ವಿದ್ಯಾರ್ಥಿಗಳೂ ಹಿರಿಯರೂ ಭಾಷಣಾದಿ ತಪ್ಪಿಯೇ ಸುಖವೆಂದು ವಾದಿಸಿದರು ಸಾಹಿತ್ಯಕಾರ್ಯದರ್ಶಿ ಶ್ರೀಧರ ನಾರಾಯಣ ಜೋಗಿತ್ತಾಯರು ಧನ್ಯವಾದಗಳನ್ನು ಅರ್ಪಿಸಿದರು. ವಿದ್ಯಾರ್ಥಿಗಳಿಂದ ಕಥಾ ಕಥನ ಮತ್ತು ಕಾವ್ಯ ವಾಚನಗಳೂ ಈ ಸಂದರ್ಭದಲ್ಲಿ ನಡೆದುವು ಶ್ರೀಗಳಾದ ಸಾ ಚಂದ್ರಶೇಖರ ಚಡಗ ಪಿ. ರಾಜಗೋಪಾಲ ಆಚಾರ್ಯರು ಟಿ ವಾಮನ ಭಟ್ಟರು ತನ್ನ ತಮ್ಮ ಅಭಿಪ್ರಾಯಗಳನ್ನು ವಿವೇಚನಾತ್ಮಕವಾಗಿ ಮಂಡಿಸಿದ್ದರು.

ಬಸ್ಸಾರು—

ಭಾರತ ವಾಹನಾಲಯದ ಲಿ ಕಳದ ತಾ 28ರಂದು ಚೇತನ ಪ್ರಕಾಶನದ ಒಡೆಯರಾದ ಶ್ರೀ ಬಿ ಪರಮೇಶ್ವರ ಆಡಿಗರ ನೇತೃತ್ವದಲ್ಲಿ ಉಡುಪಿಯ ಶ್ರೀ ಪಿ ರಾಮಕೃಷ್ಣ ಶೆಣೈರ ಹಾಡುಗಾರಿಕೆ ಶ್ರೀ ಬಾಲಕೃಷ್ಣ ಜೋಶ್ಯರರ ಮೃದಂಗವಾದನ ಮತ್ತು ಶ್ರೀ ಬಿ ರಮಾನಾಥ ವ್ಯಾ. ನಾಯಕರ ಹಾರ್ಮೋನಿಯಂ ವಾದನದೊಂದಿಗೆ ಸಂಗೀತ ಕಾರ್ಯಕ್ರಮವು ಯಶಸ್ವಿಯಾಗಿ ಜರಗಿತು.

3600

ಬಹುಮಾನಗಳು

1950ನೇ ಒರ್ಡಿನೆನ್ಸ್ ನಂ IXರ ಅನ್ವಯ ನಡೆಯುವ SWS ಸೋಡ್ತಿಯಲ್ಲಿ ಟಿಕೇಟು ಕೊಳ್ಳುವವರಿಗೆ ಕೊಡಲ್ಪಡುತ್ತವೆ ಜಗತ್ತಿನ ಮಹತ್ತಾದ ಸೋಡ್ತಿ! ಪ್ರತಿ ತಿಂಗಳ ಕೊನೆಯ ದಿನ ಸೋಡ್ತಿ ಎತ್ತಲಾಗುತ್ತದೆ! ಪ್ರತಿ ಸಲ ಎತ್ತುವ ಸೋಡ್ತಿಯಲ್ಲಿ **3600** ಗ್ಯಾರಂಟಿಯೂದ ಬಹುಮಾನಗಳು! ಒಂದನೆ ಬಹುಮಾನ **3,75000** ಡೋಲರುಗಳು! 1950ರಿಂದ 45000ಕ್ಕೂ ಹೆಚ್ಚಿನ ಬಹುಮಾನಗಳು ಹಂಚಲ್ಪಟ್ಟವೆ (ನಮ್ಮ ಗ್ರಾಹಕ ಶ್ರೀ ಜೆ ರಾಮಯ್ಯ (ಅಂದ್ರ) ಇವರು ಕಳದ ಬಾರಿ ಎತ್ತಲಾದ ಸೋಡ್ತಿಯಲ್ಲಿ ಒಂದು ಬಮುಮಾನ ಪಡೆದಿದ್ದಾರೆ) ಫಲಿತಾಂಶ ರೇಡಿಯೊ ಮೇಲಿಂದ! ಫಲಿತಾಂಶದ ಪಟ್ಟಿಯನ್ನು ಟಿಕೇಟು ಪಡಕೊಳ್ಳುವ ಪ್ರತಿಯೊಬ್ಬರಿಗೂ ಕೊಡಲಾಗುವುದು! ಈ ತೆರನಾದ ಉತ್ತಮ ರಿಕಾರ್ಡು ಬೇರೆ ಯಾವ ಸೋಡ್ತಿಗೂ ಇಲ್ಲ. ನಿಮ್ಮ ಹಣವು ಒಂದು ಅದೃಷ್ಟದ ಓಕೇಟನ್ನು ಮುಂದಾಗಿ ಪಡೆಯ ಬಲ್ಲದು. ಟಿಕೇಟಿನ ಬೆಲೆ I ಟಿಕೇಟಿಗೆ ರೂ. 4-50, ಎರಡಕ್ಕೆ ರೂ 8-50; ಐದಕ್ಕೆ ರೂ 20, ಹತ್ತಕ್ಕೆ ರೂ 40, ಇಪ್ಪತ್ತಕ್ಕೆ ರೂ 75; ನಲುವತ್ತಕ್ಕೆ ರೂ 140 ಪಾಲಿನ ಹಕ್ಕಿನ ಅರ್ಧ ಟಿಕೇಟಿಗೆ ರೂ. 2-50. ನಿಮ್ಮ ಹೆಸರನ್ನು ದಾಖಲು ಮಾಡಲಿಕ್ಕೂ ಸವಿವರವಾದ ನೋಟೀಸನ್ನು ಕಳುಹಿಸಿಪುದಕ್ಕೂ ಪ್ರಯತ್ನವಾಗಿ ರೂ. 1ನ್ನು ಕಳುಹಿಸಿರಿ. (ಮನಿ ಯೂರ್ಡರ್ ಕೂಪನಿನಲ್ಲಿ ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲಿ ಬರೆಯಿರಿ) ಒಡನೆ ಇವರಿಗೆ ಕಳಿಸಿರಿ:—

G. LAWRENCE, IV-335, NEW ROAD, COCHIN-2.

ಕು. ಶಿ. ಹರಿದಾಸ ಭಟ್ಟರು ಇಟೆಲಿಗೆ—

ಉಡುಪಿ ಎಂ ಜಿ. ಎಂ. ಕಾಲೇಜಿನ ಪ್ರೆಸಿ ಪ್ರಿನ್ಸಿಪಾಲರೂ, ಪ್ರಸಿದ್ಧ ಸಾಹಿತಿಗಳೂ ಆದ ಶ್ರೀ ಕು. ಶಿ. ಹರಿದಾಸ ಭಟ್ಟ ಎಂ ಎ. ಅವರು ಆರ್ಥಿಕ ಅಭಿವೃದ್ಧಿಯ ಕುರಿತು ವಿಶೇಷ ಅಧ್ಯಯನ ನಡೆಸಲು ಇಟೆಲಿ ದೇಶಕ್ಕೆ ಇದೇ ತಾ 12_11_62ಕ್ಕೆ ಬೊಂಬಾಯಿಯಿಂದ ತೆರಳಲಿರುವರು. ಬೇರೆ ಬೇರೆ 50 ದೇಶಗಳ 50 ಜನ ಆಧ್ಯರ್ಥಿಗಳಲ್ಲಿ ಶ್ರೀ ಭಟ್ಟರೊಬ್ಬರೇ ಭಾರತದ ಆಧ್ಯರ್ಥಿಗಳಾಗಿರುವರು ಈ ವ್ಯಾಸಂಗಾವಧಿಯು 6 ತಿಂಗಳ ವರೆಗೆ ಇದ್ದು ಶ್ರೀ ಭಟ್ಟರು 63ನೇ ಜೂನಿನಲ್ಲಿ ಹಿಂತಿರುಗಿ ಬರಲಿರುವರು.

ಇವರನ್ನು ಪ್ರಥಕಾಮನೆಗಳೊಂದಿಗೆ ಸತ್ಕರಿಸಿ ಬೀಳ್ಕೊಡಲು ಉಡುಪಿಯ ಕರ್ನಾಟಕ ಸಂಘದವರು ಇಂದೇ ತಾ 6ನೇ ಸಂಜೆ ಉಪೇಂದ್ರಬಾಗಿನಲ್ಲಿ ಸ್ನೇಹ ಕೂಟವೊಂದನ್ನು ಡಾ॥ ಟಿ ಎಂ ಎ ಪೈಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ॥ ಕೆ ಎಲ್ ಏತಾಳರು ಸ್ವಾಗತ ಭಾಷಣ ಮಾಡಿ ಶ್ರೀ ಭಟ್ಟರಿಗೆ ಶುಭಾಕಾಂಕ್ಷೆ ಮಾಡಿದರು ಶ್ರೀಗಳಾದ ಮು. ರಾಘ ಶ್ರೀಪತಿ ಆಚಾರ್, ಕೆ. ಕೆ. ಪೈ ಇವರು ಶ್ರೀ ಭಟ್ಟರ ಬಹುಮುಖ ಪ್ರತಿಭೆ, ಕಾರ್ಯ ಕುಶಲತೆಗಳನ್ನು ಕೊಂಡಾಡಿ ಸುಖ ಪ್ರಯಾಣ ಹಾರೈಸಿದರು ಶ್ರೀ ಭಟ್ಟರು ಉತ್ತರರೂಪವಾಗಿ ಮಾತನಾಡುತ್ತ ಇಟೆಲಿ ದೇಶದ ಪ್ರಯಾಣ ಸಾಧ್ಯವಾದ ಬಗೆ, ಉಬ್ಬೇರಗಳನ್ನು ವಿವರಿಸಿ, ಸ್ನೇಹಿತರ ಸ್ನೇಹಭಾವಕ್ಕೆ ಆಭಾರ ವ್ಯಕ್ತಪಡಿಸಿದರು ಆಧ್ಯಕ್ಷ ಡಾ॥ ಪೈಗಳು ಏನೋದಾತ್ಮಕವಾಗಿ ಮಾತನಾಡುತ್ತ ನಾಗ್ಪುರ ಲೇಖಕರೂ ಆದ ಭಟ್ಟರಂತಹ ಪ್ರತಿಭಾಶಾಲಿಗಳು ಆಲ್ಪೀನೂ ಕಲಿಯುವಂತಾದ್ದಿರುವುದಿಲ್ಲವೆಂದೂ ಭಾರತದ ಉಜ್ವಲ ಸಂಸ್ಕೃತಿಯು ಸುವೇರನಸ್ಸವರಿಗೆ ಮುಟ್ಟಿಸಬೇಕೆಂದೂ ಹೇಳಿ ಸುಖಪ್ರಯಾಣ ಹಾರೈಸಿದರು. ಕಾರ್ಯದರ್ಶಿ ಶ್ರೀ ಕೆ. ಎನ್. ಏತಾಳರು ದನ್ಯವಾದಗಳನ್ನರ್ಪಿಸಿದರು.

ಮಹಾರಾಷ್ಟ್ರ ಸ್ನೇಟಿನ ಹೋಟೇಲುಗಳ ಫೆಡರೇಶನ್ನಿನ—

ಪರವಾಗಿ ಆವರ ಗೌರವ ಜತೆ ಕಾರ್ಯದರ್ಶಿ ಶ್ರೀ ಬಿ. ನೋಪಾಲ ಶೆಟ್ಟರು ರಾಷ್ಟ್ರೀಯ ರಕ್ಷಣಾ ನಿಧಿಗೆ ಮಹಾರಾಷ್ಟ್ರದ ಹೋಟೇಲು ಲೈಸೆನ್ಸಿಂಗ್ ಅಥಾರಿಟಿಯ ಮುಕ್ತ ಹಸ್ತದಿಂದ ಸಹಾಯ ನೀಡಬೇಕೆಂದು ವಿನಂತಿಸುತ್ತಾರೆ.

ಕೆನರಾ ಬ್ಯಾಂಕ್ ಲಿಮಿಟೆಡ್-ಇವರು

ಪ್ರಧಾನಿಯವರ ರಾಷ್ಟ್ರೀಯ ರಕ್ಷಣಾ ನಿಧಿಗೆ ರೂ 1,00,001 ದೇಣಿಗೆ ತಿತ್ತಿರುವರು ಬ್ಯಾಂಕಿನ ನಿಬ್ಬಂದಿಯವರು ಒಂದು ದಿನದ ವೇತನವನ್ನು ದೇಣಿಗೆ ಕೊಡಲು ಮುಂದಾಗಿ ಈ ವರೆಗೆ ರೂ 12,500ಕ್ಕೂ ಹೆಚ್ಚು ಸಂಗ್ರಿಸಲಾಗಿದೆ ನಿಬ್ಬಂದಿಯ ದೇಣಿಗೆಗೆ ಆ ಸ್ಥನ್ನೇ ಬೇಂಕಿನವರು ಕೂಡಿಸಿ ಕೊಡಲಿರುವರು ಇದು ರೂ. 40,000ದಷ್ಟು ಆಗಬಹುದೆಂದು ನಿರೀಕ್ಷಿಸಲಾಗಿದೆ.

ಪುತ್ತೂರು ಡಿ ಮು ಕೋರ್ಟಿನಲ್ಲಿ

R E P 135/62 O S 384/60

ನೆಂತಕ್ರಮಣ ಮನೋಳಿತ್ತಾಯ

—ಆರ್ಜಿದಾರ

ಪದ್ಮನಾಭ ಆಚಾರಿ, ಕೃಷ್ಣಯ್ಯ ಆಚಾರಿಗಳ ಮಗ ಪುತ್ತೂರು ತಾಲೂಕು ಒಳಮೊಗ್ರು ಗ್ರಾಮದ ನಿವಾಸಿ —ಎದ್ರಿ

—ಎದ್ರಿಗೆ ತಿಳಿಸುವುದೇನೆಂದರೆ ಬಿಷ್ಟಿ ರಾಷ್ಟ್ರ ಇಸ್ಟ್ ಬಗ್ಗೆ ದಾಖಲು ಮಾಡಿದ ಈ ಅಮಲ್ದಾರಿಯು ತಾ 13—11—62ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯಸಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನ ಸಲಾದೀತು.

ಬಿ ಚಿದಾನಂದ ರಾವ್,

ಆರ್ಜಿದಾರನ ವಕೀಲ.

ಪುತ್ತೂರು, ತಾ. 1—11—62

ಭಾರತೀಯ ಯೋಧರ ತೀವ್ರ ಮುನ್ನಡೆ

(೧ನೇ ಪುಟದಿಂದ)

ವಾಗ ಮಹಮ್ಮದಾಲಿಯವರ ವಾದವು ಶುಷ್ಕ ಮತ್ತು ಬೆಲೆಯಿಲ್ಲದುದು.

ಸಮರಾಹ್ವಾನ ನೀಡುತ್ತಿರುವಂತೆಯೇ ಚೀನೀಯರೊಂದು ಸಂಧಾನದ ಪತ್ರವನ್ನು ಕಳಿಸಿದ್ದಾರೆ; ರಶ್ಯವಾದರೂ ಈ ಅಂಶಗಳಿಗೆ ಒಪ್ಪಿಗೆ ನೀಡಿದಂತಿದೆ. ಇವುಗಳಲ್ಲಿ ಬಹುಸ್ವಾರಸ್ಯಕರವಾದ ಅಂಶವೆಂದರೆ, ಎರಡೂ ಕಡೆಯವರು ಈಗ ಇರುವಲ್ಲಿಂದ ೨೦ ಕೆಲೊ ಮೀಟರ್ ಹಿಂದೆ ಸರಿದು, ಅಲ್ಲಿ ಯುದ್ಧವಿರಾಮ ಪ್ರದೇಶವನ್ನು ಸಾರಬೇಕು. ಲಾಯರ ಬುದ್ಧಿ ಹೀಗೆ ಓಡುತ್ತಿದೆ! ತಾನು ಈ ಗಾಗಲೇ ನುಂಗಿದ್ದು ತನಗೆ, ಮತ್ತೆ ನೀನು ಇನ್ನೂ ಹಿಂದೆ ಹೋಗು (ಅದನ್ನೂ ನಾನು ನುಂಗುತ್ತೇನೆ) ಎಂಬ ಈ ನೀತಿಗೆ ಮೂರ್ಖರೂ ಒಪ್ಪಲಾರ. ಸಂಧಾನದ ಮೊತ್ತು ಮುಂದೆ ಬರಬೇಕಾದರೆ, ಸಪ್ತಂಬರ್ ೮ ರಂದು ಇದ್ದಲ್ಲಿಗೆ ಚೀನಿಯರು ಹಿಂದೆ ಸರಿಯ ಬೇಕು ಎಂದು ನೆಹರು ಹೇಳಿದ್ದಾರೆ. ಇದು ಸಾಧ್ಯವೆಂದನಿಸುವುದಿಲ್ಲ

ಚೀನಾ—ಭಾರತಗಳ ಹೋರಾಟವು ಮುಂದುವರಿಯುವುದಾದರೆ, ಅದು ಸುದೀರ್ಘವೆನಿಸುವುದು. ಅತಿ ಉದ್ದವಾದ ಈ ಮಹಾರಾಷ್ಟ್ರಗಳೆರಡರ ನುರ್ಗಮ ಸೀಮೆಯಲ್ಲಿ ಶಾಂತಿ ನೆಲಗೊಳ್ಳಬೇಕಾದರೆ, ಬಹು ಸಮಯ ಕಳೆಯ ಬೇಕಾದೀತು. ಪ್ರಪಂಚದ ಪ್ರತಿ ರಾಜಕೀಯ ಪರಿಸ್ಥಿತಿಯೂ ಇದರ ಮೇಲೆ ಪ್ರಭಾವ ಬೀರುವುದು ಸಾಧ್ಯ. ಹಾಗಾಗಿ ವಿಶ್ವದ ಮೇಲೆ ತೀವ್ರ ಪರಿಣಾಮ ಬೀರುವ ಈ ದುಸ್ಥಿತಿ ಅದಷ್ಟು ಶೀಘ್ರದಲ್ಲಿ ಕೊನೆಗೊಳ್ಳ ಬೇಕೆಂದು ಎಲ್ಲರೂ ಬಯಸುತ್ತಾರೆ, ನಿಜ. ಆದರೆ ಇದು ಕಷ್ಟ ಸಾಧ್ಯ. ಒಂದು ವೇಳೆ ತೋರಿಕೆಯ ಮಟ್ಟಿಗೆ ಸಾಧ್ಯವಾದರೂ ಅದು ಶಾಶ್ವತವೆನ್ನುವಂತಿಲ್ಲ. ಇಂತಹ ತೋರಿಕೆಯ ಒಡಂಬಡಿಕೆಯಿಂದ ಭಾರತಕ್ಕೆ ಕ್ಷೇಮವಿಲ್ಲ. ಅದುದರಿಂದ ಅದು ಸಂಧಾನಕ್ಕೆ ಮುಂದು ವರಿಯುವಾಗ, ಸೀಮೆಯ ವಿವಾದವು ಮುಂದಾವರಾಲಕ್ಕೂ ಇಲ್ಲವೆಂಬಂತಾಗ ಬೇಕು.

ಮೂತ್ಮ ಭೂಮಿಯ ಸಂರಕ್ಷಣೆಗಾಗಿ ಹೋರಾಡುವ ವೀರ ಯೋಧರಿಗೆ ಸಹಾಯ ನೀಡಬೇಕೆಂಬ ಪ್ರಧಾನಿಯವರ ಕರೆ ನಾಡಿನ ಸರ್ವ ವಲಯಗಳಲ್ಲೂ ಪ್ರತಿಧ್ವನಿಸುತ್ತಿದೆ. ದೇಶದ ಮೂಲೆ ಮೂಲೆಗಳಿಂದಲೂ ಸಹಾಯದ ಸಮುದ್ರವೇ ಹರಿದು ಬರುತ್ತಿದೆ. ಭಾರತೀಯರೆಲ್ಲರೂ ದೇಶ ರಕ್ಷಣೆಯಲ್ಲಿ ಒಂದಾಗಿ ಹೋರಾಡಲು ಸಿದ್ಧರಿದ್ದಾರೆ ಎಂಬುದನ್ನಿದು ಪ್ರತಿಬಿಂಬಿಸುತ್ತದೆ, ದೇಶದ ಸ್ವಾತಂತ್ರ್ಯ ರಕ್ಷಣೆಗೆ ಸಕಲ ಭಾರತೀಯರು ತನುಮನಧನಗಳನ್ನು ಅರ್ಪಿಸಲು ಸದಾ ಸಿದ್ಧರು ಎಂಬುದನ್ನು ಚೀನಾ ನೆನಪಿಸಿಕೊಂಡಿರಲಿ, ಆಕ್ರಮಣಕ್ಕೆ ಶಾಶ್ವತ ಪೂರ್ಣವಿರಾಮ ವಿಕ್ಕುವುದು ಅದು ಅಗ್ರಸರವಾದೀತು. ಇನ್ನಾದರೂ ದುರಾಕ್ರಮಣಕಾರ ಚೀನೀಯರು ತಮ್ಮ ದುರಾಗ್ರಹವನ್ನು ಬಿಟ್ಟು ಕೊಟ್ಟು ಶಾಶ್ವತ ಪರಿಹಾರ ಹುಡುಕಲು ಮನವೂಡಲಿ. ವಿಶ್ವದ ಈ ಬೃಹತ್ ರಾಷ್ಟ್ರಗಳು ಮೈತ್ರಿಯಿಂದ ಸ್ವಾತಂತ್ರ್ಯದ ಒಸಗೆಯನ್ನು ಸಾರುವಂತಾಗಲಿ.

ಹೋರಾಟದ ರಂಗದಲ್ಲಿ

ಧರ್ಮವಿರುವಲ್ಲಿ ಜಯವುಲ್ಕಿರಿ

ಭಾರತ ಮೂತೆಯ ಉದರದಿಂದ ಜನನಕ್ಕೆ ಬಂದ ಪ್ರತಿಯೊಬ್ಬ ಕುವರನೂ ಇಂದು ನಾಡಿನ ಸ್ವಾತಂತ್ರ್ಯಕ್ಕಾಗಿ, ಅನ್ಯಾಯದ ಪರಮಾವಧಿಯನ್ನು ತಡೆಗಟ್ಟಲು ಮುಂದಾಗಬೇಕು. ಇಂದು ಪಕ್ಷ ಸಂಘಗಳ ಭೇದವನ್ನೆಣಿಸದೆ ಎಲ್ಲರೂ ಒಮ್ಮನ ಸ್ಸಿನಿಂದ ಚೀನೀಯರನ್ನು ಎದುರಿಸಲು ಎದ್ದೇಳಬೇಕು.

ಭಾರತವು ಶಿವಾಜಿ, ಅಕ್ಬರ, ಪುರೂರವ, ನೇತಾಜಿ ಮೊದಲಾದ ಮಹಾ ವೀರರಿಗೆ ಜನ್ಮವಿತ್ತ ಮಹಾ ಮೂತೆಯಾಗಿದ್ದಾಳೆ. ಸ್ವಾತಂತ್ರ್ಯಕ್ಕಾಗಿ ತಮ್ಮ ಅಸುವನ್ನೇ ಪಣಕ್ಕೊಡ್ಡಿದ ವೀರ ಮೂತೆಯರೆನ್ನಿಸಿದ ಝಾನ್ಸಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ, ರಾಣಿ ಹೊನ್ನಮ್ಮ ಮೊದಲಾದ ವೀರಾಂಗನೆಯರ ಚಾರಿತ್ರ್ಯವೆಂದೂ ಅಳಿಯದಂತೆ ಉಳಿಸುವ ಕರ್ತವ್ಯ ನಮ್ಮದಾಗಿದೆ. ಭಾರತವನ್ನು ಕೆಣಕಿ ಇಲ್ಲದ ಪೇಚಲ್ಲದ ಆಪಾದನೆ ಭಾರತದ ಮೇಲೆ ಹೊರಿಸಿ, ಭಾರತದ ಮೇಲೆ ಅನ್ಯಾಯದ ಆಕ್ರಮಣವನ್ನೆಸಗಿ ಯುದ್ಧಾಹ್ವಾನ ನೀಡಿ ಮುಂದೊಡ್ಡುತ್ತಿರುವ ಚೀನಾದ ಪ್ರತೀಕಾರಕ್ಕಾಗಿ, ನಾಡಿನ ಸ್ವಾತಂತ್ರ್ಯ ಉಳಿಸಲಿಕ್ಕಾಗಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಸಿದ್ಧನಾಗಬೇಕಾಗಿದೆ.

ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ಜವಾಹರಲಾಲ ನೆಹರೂರು ಈ ವರೆಗೆ ತಾಳ್ಮೆ ವಹಿಸಿ ಶಾಂತಿಯ ಮಂತ್ರವನ್ನು ಪಟಿಸುತಿದ್ದು ದನ್ನೇ ಚೀನಾ ಇಂದು ಭಾರತ ನಿರ್ಬಲ ದೇಶವೆಂದು ಮನಗೊಂಡು ಮುಂದೊತ್ತಲು ಆರಂಭಿಸಿದೆ. ಆದರೆ ಅನ್ಯಾಯವನ್ನು ತಡೆಗಟ್ಟಲು ಭಾರತ ಶಕ್ತವಾಗಿದೆ ಎಂಬ ವಿಚಾರವನ್ನು ರಕ್ಷಣಾ ಮಂತ್ರಿಗಳು ಹಾಗೂ ನೆಹರೂರವರೇ ಹೇಳಿ ಕಾರ್ಯೋಚರಣೆಗೆ ಇಳಿದಿದ್ದಾರೆ. ಒಂದು ವೇಳೆ ಈ ವಿಷಯ ವೇಳೆಯೇ ಮುಂದೆ ಸಾಗುವುದಾದರೆ ನಾಡಿನ ಸ್ವಾತಂತ್ರ್ಯಕ್ಕಾಗಿ ಪ್ರತಿಯೊಬ್ಬ ಪ್ರಜೆಯೂ ಹೋರಾಡಲು ಮುಂದಾಗ ಬೇಕು.

ಚೀನಾದ ಅನ್ಯಾಯದ ಆಕ್ರಮಣವನ್ನು ಭಾರತವೆಂದೂ ಸಹಿಸದು. ನಮ್ಮ ಗಡಿಯನ್ನೇ ಆಕ್ರಮಿಸಿ; ನಮ್ಮ ಮೇಲೆಯೇ ಆಪಾದನೆ ಹೊರಿಸುತ್ತಿರುವ ಚೀನಿಯರಿಗಿಂದು ಬುದ್ಧಿಕಲಿಸಲು ನಾಡಿನಾದ್ಯಂತದ ಪ್ರಜೆಗಳೂ ಹೋರಾಡಲು ಸಿದ್ಧರಾಗಿದ್ದೇವೆಂಬುದನ್ನು ಮನಗಾಣಿಸ ಬೇಕಾಗಿದೆ. ನಮ್ಮ ರಕ್ತದ ಕಣಕಣದಲ್ಲಿಯೂ ದೇಶ ಪ್ರೇಮ ಹೊರ ಹೊಮ್ಮುತ್ತಿದೆ ಎಂಬುದನ್ನು ತೋರಿಸುವ ಸುಸಂದರ್ಭ ಚೀನ ಇಂದು ಭಾರತೀಯರಿಗೆ ಒದಗಿಸಿದೆ. ಅನ್ಯ ರಾಷ್ಟ್ರಗಳು ತಾಳ್ಮೆ ವಹಿಸಿ ನೋಡುತ್ತಿರಲಿ ಭಾರತದ ದೇಶಪ್ರೇಮದ ಪ್ರತೀಕವನ್ನು. ಹಿಂದಿನಿಂದ ಇಂದಿನ ವರೆಗೂ ಭಾರತವು ಅನ್ಯ ದೇಶಗಳಿಗೆ ಅನೇಕ ರೀತಿಯಿಂದ ಮಾರ್ಗದರ್ಶಕವಾಗಿತ್ತು. ಆದರೆ ನಮ್ಮ ಸ್ವಾತಂತ್ರ್ಯವನ್ನೇ ಕಡೆಗಣಿಸಲು ಇಲ್ಲವೇ ಬಲಪ್ರಯೋಗದಿಂದ ಭಾರತವನ್ನು ಬೆದರಿಸಲು ಬರುವುದಾದರೆ ಅದನ್ನು ಎದುರಿಸಲು ಭಾರತದ ಪ್ರತಿಯೊಬ್ಬ ಪ್ರಜೆಯೂ ಹಕ್ಕುದಾರನಾಗಬೇಕಾಗಿದೆ.

ಬಲಿ, ಶಿಬಿ, ಕರ್ಣ, ನೆಹರು ಮೊದಲಾದ ತ್ಯಾಗ ಮೂರ್ತಿಗಳು ಹುಟ್ಟಿ ಬೆಳೆದದ್ದು ಭಾರತದಲ್ಲಿ. ಹರಿಶ್ಚಂದ್ರ, ಧರ್ಮರಾಯ ಮೊದಲಾದ ಸತ್ಯಸಂಧರಿಗೆ ಜನ್ಮವಿತ್ತ ದೇಶ ಭಾರತ. ರಾಮ, ಕೃಷ್ಣ ಬುದ್ಧ, ಗಾಂಧಿ ಮೊದಲಾದ ಅವತಾರಿ ಪುರುಷರನ್ನು ಹೆತ್ತ ಮಾತೆ ಭಾರತ. ಭಾರತದ ಸಂಸ್ಕೃತಿ ಹಿಂದಿನಿಂದಲೂ ಅನ್ಯ ದೇಶಗಳಿಗೆ ಬೆಳಕನ್ನು ನೀಡಿತ್ತು. ಅನ್ಯ ಮತನನ್ನಾಗಲೀ ಅನ್ಯ ದೇಶವನ್ನಾಗಲೀ ಭಾರತವೆಂದೂ ಹೀಗಳೆಯಲಾರದು. ಆದು ಭಾರತದ ವೈಶಿಷ್ಟ್ಯ.

ಭಾರತ ಸ್ವಾತಂತ್ರ್ಯವನ್ನು ಪಡೆದು ಹದಿಮೂರು ವರ್ಷಗಳ ವರೆಗೆ ಭಾರತದ ಭಾಗವೇ ಆದ ಗೋವೆಯಲ್ಲಿ ಪೋರ್ಚುಗೀಸ ಪ್ರಭುತ್ವವನ್ನು ತಾಳ್ಮೆಯಿಂದ ಕಂಡಿತ್ತು. ಆದರೆ ಸಹನೆಗೆ ಬೆಲೆ ಸಿಗದಾಗ ಬಲ ಪ್ರಯೋಗದಿಂದ ಇಪ್ಪತ್ತನಾಲ್ಕು ತಾಸುಗಳ ಒಳಗೆ ಗೋವೆಯನ್ನು ಬಂಧನದಿಂದ ಬಿಡಿಸಿ ಸ್ವಾತಂತ್ರ್ಯವನ್ನು ನೀಡಿತು. ಮೊದಲು ತಾಳ್ಮೆ ವಹಿಸಿ ಆ ಮೇಲೆ ಸಹನೆಗೆ ಬೆಲೆ ಸಿಗದಿರಲು ಕಾರ್ಯರಂಗಕ್ಕಿಳಿಯುವುದು ನಮ್ಮ ಭಾರತದ ಪದ್ಧತಿಯಾಗಿದೆ. ರಾಮಾಯಣ ಮಹಾಭಾರತದ ಕಾಲಗಳಿಂದಲೂ ಅನುಸರಿಸಲ್ಪಟ್ಟ ಹೆಜ್ಜಾರಿಯಾಗಿದೆ.

ಹಿಂದೆ ವ್ಯಾಪಾರಕ್ಕಾಗಿ ಬಂದ ಆಂಗ್ಲೀಯ ಸರ್ಕಾರಿಗಳು; ಪೋರ್ಚುಗೀಸರು; ಡಚ್ಚರು; ಫ್ರೆಂಚರು; ಇಂಗ್ಲೀಷರು ಎಲ್ಲರಿಗೂ ಭಾರತ ಉದರದಿಂದ ಆದರವಿತ್ತು. ಪಾಕಿಸ್ತಾನದಿಂದ ನಿರಾಶ್ರಿತರಾಗಿ ಬಂದವರಿಗೆ ಹಿಂದೂ ಮುಸ್ಲೀಮರೆಂಬ ಭೇದವನ್ನೆಣಿಸದೆ ತನ್ನಲ್ಲಿ ಸ್ಥಳ ಕೊಟ್ಟಿತು.

ಭಾರತ—ಚೀನಗಳ ವ್ಯಾಪಾರ ಹಿಂದಿನಿಂದಲೂ ನಡೆದು ಬಂದಿತ್ತು. ಭಾರತದಲ್ಲಿ ಹುಟ್ಟಿದ ಬುದ್ಧನ ತತ್ವಗಳಿಗೆ ಮನಸೋತು ಚೀನಾಯಾತ್ರಿಕರಾದ ಫಾಹಿಯಾನ್; ಹ್ಯೂಎನ್‌ತ್ಸಾಂಗ್ ಮೊದಲಾದವರು ಇಲ್ಲಿಯೇ ಹಲವು ಕಾಲಗಳಿದ್ದು ತಮ್ಮ ದೇಶಗಳಿಗೆ ಹೋಗಿ ಪ್ರಚಾರ ಕಾರ್ಯವನ್ನು ಮಾಡಿದ್ದರು. ಬೌದ್ಧ ಮತಾವಲಂಬಿಗಳಾದ ಚೀನೀಯರಿಂದು ತಮ್ಮ ಗುರುವಿಗೆ ಜನ್ಮವಿತ್ತ ಭಾರತದ ಮೇಲೆ ಅತ್ಯಾಚಾರವೆಸಗಲು ಮುಂದಾಗಿರುವರು. ಹರ್ಷವರ್ಧನನ ಕಾಲದಲ್ಲಿ ಎಷ್ಟೋ ಬೌದ್ಧ ಸನ್ಯಾಸಿಗಳು ಧರ್ಮ ಪ್ರಚಾರಕ್ಕಾಗಿ ಚೀನಾಕ್ಕೆ ಹೋಗಿದ್ದರು. ಭಾರತ-ಚೀನಗಳೆರಡೂ ಅಕ್ಕ-ತಂಗಿಯರಂತೆ ಅನ್ಯೋನ್ಯ ಮೈತ್ರಿಯಿಂದಿದ್ದುವು. ಆದರೆ ಇಂದು ಚೀನಾ ಹಿಂದಿನದೆಲ್ಲವನ್ನೂ ಮರೆತಂತಿದೆ. ಭಾರತ ವಿಶ್ವಸಂಸ್ಥೆಯಲ್ಲಿ ಚೀನಾದ ಸದಸ್ಯತನವನ್ನು ಬೆಂಬಲಿಸಿತ್ತು. ಚೀನಾದ ಕಮ್ಯೂನಿಸ್ಟ್ ಸರಕಾರಕ್ಕೆ ಮನ್ನಣೆ ಇತ್ತಿತ್ತು! ಅದೆಲ್ಲವನ್ನೂ ಚೀನಾ ಇಂದು ಕಡೆಗಣಿಸಿದೆ.

ಹಿಂದೆ ಭಾರತ ಯುದ್ಧವಾಗಬಾರದೆಂದು ಧರ್ಮರಾಯ ಅದೆಷ್ಟು ಪ್ರಯತ್ನಿಸಿದರೂ ಸಾಧ್ಯವಾಗದೆ ಕೊನೆಗೆ ಯುದ್ಧವನ್ನೆಸಗಲೇ ಬೇಕಾಯಿತು. ಜಯ ಆತನ ಪಾಲಿಗಾಯಿತು. ಬಲಿಷ್ಠನಾದ ರಾವಣನ ಮೂಲ ಬಲವನ್ನು ಕೇವಲ ಕಾಡು ಕಪಿಗಳ ಸಹಾಯದಿಂದ ರಾಮನು ಸಂಹರಿಸಿದನು. ಇದರಿಂದ ಧರ್ಮಕ್ಕೆ ಜಯ ಸಿಗುವುದೆಂಬುವುದಂತೂ ಸಂದೇಹವಿಲ್ಲ.

ಹಾಗೆಯೇ ಇಂದು ಭಾರತ ಯುದ್ಧವಾಗಬಾರದೆಂದು ಹೇಳುತ್ತಿರುವಾಗಲೆ ಭಾರತವನ್ನೇ ಪರೀಕ್ಷಿಸಲು ಚೀನಾ ಮೊರಟಿದೆ. ಶಾಂತಿದೂತರೆನ್ನಿಸಿದ ನೆಹರೂರವರನ್ನು ಚೀನಾ ಟೀಕಿಸಲು ಆರಂಭಿಸಿದೆ. ಇದು ಚೀನಾದ ಗೌರವಕ್ಕೆ ಯೋಗ್ಯವೆನಿಸಬಹುದೆ? ಭಾರತದ ಪ್ರಜೆಗಳೆಲ್ಲರೂ ಧರ್ಮ ನ್ಯಾಯಕ್ಕೆತಲೆ ಬಾಗುವವರು. ಅದಕ್ಕೆ ಅನ್ಯಾಯಕ್ಕೆಂದೂ ತಲೆ ಬಾಗಿಸೆಲಾರೆಂಬುದನ್ನು ಪ್ರತಿಯೊಬ್ಬರೂ ಈ ಸಮಯದಲ್ಲಿ ತೋರಿಸಬೇಕಾಗಿದೆ, ದೇಶಕ್ಕಾಗಿ ತನು-ಮನ-ಧನವನ್ನರ್ಪಿಸಲು ಪ್ರತಿಯೊಬ್ಬರೂ ಪಣತೊಡಬೇಕಾಗಿದೆ. ತ್ಯಾಗಸ್ನೇಹಿಗಳು ಸ್ತ್ರೀ-ಪುರುಷರಾದಿಯಾಗಿ ಎಲ್ಲರೂ ಮುಂದೆ ಬರಬೇಕಾಗಿದೆ.

ಶ್ರೀ ಹಳನಾಡು ಸುಬ್ರಾಯ ಭಟ್ಟ

ಜೀವನದ ಉಳಿತಾಯಕ್ಕೆ ಭದ್ರನಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. — ಮಂಗಳೂರು—೩
Phone No. 240.

ಹೊಸ ಪುಸ್ತಕ—

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟನಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಸಾಕಿನ್ನು ಉಪದೇಶ

— ೧ —

ಕೇಳ ಕಿವಿ ಕಿವುಡಾಯ್ತು—ಸಾಕಿನ್ನು ಉಪದೇಶ,
ಹಾಡಿದಾ ಹಾಡನ್ನೆ ಹಾಡಬೇಡ!
ತಿರುಗಿಸಿದು ಆ ನಿನ್ನ ಹಳೆಯ ರಾಗದ 'ಫ್ಲೇಟು'
ತಲೆ ಒಡಿತವಾಗುತಿದೆ ತಿಳಿದು ನೋಡ!

— ೨ —

ಸ್ವಾರ್ಥದಾಸೆಯ ಬಿಟ್ಟು ಲೋಕವನ್ನು ದೃಢಿಸಿ,—
ಸುಖಸಮತೆಗಾಗಿ ಸಹಕರಿಸೆ ಬನ್ನಿ,
ಜಾತಿಮತ ಭೇದವಂ ಬಿಟ್ಟು ಒಮ್ಮನಸಿದಿಂದ—
ಸೇವೆಮಾಡಿರಿ' ಎನುವೆ ಬರಿಯ'ನಿನ್ನಿ'!

— ೩ —

ಗಾಂಧಿ ವಾದಿಯು ನೀನು ಗಾಂಧಿ ಭಕ್ತನು ನೀನು
ಗಾಂಧಿಯವರಾ ಬಂಟ, ಪಟ್ಟ ಶಿಷ್ಯ!
ಅಯ್ಯೋ ಬೆಪ್ಪೇ! ಮಾತು ಮಾತಿಗೂ ಗಾಂಧಿಯರ
ಹೆಸರಿತ್ತುವುದು ಮಹಾದೋಷ ದೂಷ್ಯ!

— ೪ —

ಗಾಂಧಿವಾದಿಯೊ ನೀನು!—ಏನೊ ಗಾಂಧಿಯ ವಾದ?
ಖಾದಿ ಜುಬ್ಬವ ಧರಿಸಿ ಮೆರೆವುದೆಂದೇ?
ಕರೆದ ಸಭೆಗಳಗೂಡಿ, ಉದ್ಘಾಟನೆಯ ಮಾಡಿ
ಊರ ಜನತೆಗೆ ನೀತಿ ಬೋಧಿಸುವುದೆ?

— ೫ —

ಗಾಂಧಿ ಹೇಳಿದರಂತೆ!—ಗಾಂಧಿ ಹೇಳಿದರಂತೆ!
ಆಡಿದಂತೆಯೆ ಇವರು ನಡೆದ ಪೂಜ್ಯ!
ಜಾಯಲ್ಲಿ 'ಮಗ ಮಗಾ' ಎನುವ ಬಗೆಯಲಿದಗೆಯು,
ನಿಜ ಬಣ್ಣ ತಿಳಿದ ನಿನ್ನುಪದೇಶ ತ್ಯಾಜ್ಯ!

— ೬ —

ಅಧಿಕಾರದಾ ಮೋಹ ಒಂದಿನಿತು ಬಿಟ್ಟಲ್ಲ!
ಸಂಬಳವು ಸಾವಿರದ ಲೆಕ್ಕವಲ್ಲಿ!
ಮನೆಮಂದಿಗಿಲ್ಲ ಗತಿ ಗಂಜಿ ನೀರಿಗು ಇಲ್ಲಿ
ಮಂತ್ರಿಯೊಗುವ ಚಿಂತೆ ನಿನಗೆ ಅಲ್ಲಿ!

— ೭ —

ವಿಷವು ಅಡುವ ನೀತಿ? ಆಚರಣೆಗಿಲ್ಲವದು—
ಬರಿಯ ಜಾಹೀರಾತು ವ್ಯಾಪಾರ ದೃಷ್ಟಿ!
ಮೇದಿಕೆಯ ಮೇಲೇರಿ ಮೈಕಿನೆದುರಲಿ ನಿಂತು
ಸುಖ, ಸಮತೆಯೆಂದೆನುವ ಹೊಸತು ಸೃಷ್ಟಿ!

— ೮ —

ಎಲ್ಲಿ ಶತ್ರದ ನಿನ್ನೆ?—ಎಲ್ಲಿ ಗಾಂಧಿಯ ತತ್ವ!
ಪುಣ್ಯ ಪುರುಷನ ಹೆಸರನೆತ್ತ ಬೇಡ!
ಗಾಂಧಿವಾದವೆ ಬೇಡ—ನೀನು ಸ್ವಾರ್ಥದ ಸೂರೆ
ಮಾತು ನೀತಿಗೆ ಕೂಡು ಕಟ್ಟಲ್ಲ ನೋಡ!

— ೯ —

ಓಟು ಬೇಡಲಿಕಾಗಿ ದಾರಿ ಕೇಳುತ ಬರುವೆ,
ಮತ್ತೆ ಆ ಕೂಡಾನಾ ಹೆಸರೆ ಮರವೆ!
ಶಿಕರು ಮಾತನು ಬಿಟ್ಟು ಮೂರು ಕೆಲಸವ ಮಾಡು
ಜಿಗು ನಮ್ಮೆಲ್ಲರಾ ಬಂಧು-ಬಾಂಧವ!

— ೧೦ —

ಮಾತಿನುಪದೇಶಾ ಮೃತದರಿ ಹೊಟ್ಟಿಗು ಉರಿಯು
ತಣಿವುದೆಂತದು ಶ್ರಳಯ ಅಗ್ನಿಯಂತೆ,
ಮುಗಿಲು ಮುಟ್ಟುವ ನಿನ್ನ ಸೌಧವನ್ನು ಧಹಿಸಿ—
ಬಟ್ಟೆಗತು ಎಚ್ಚರಾಗಿರುವಿಯಂತೆ!

— ೧೧ —

ಕೇಳ ಕಿವಿ ಕಿವುಡಾಯ್ತು ಸಾಕಿನ್ನು ಉಪದೇಶ,—
ಬೇಗನೇ ಮಂಗಲವ ಮಾಡಿ ಮುಗಿಸು!
ಎಲ್ಲರೊಳಿತನು ಸಾಧಿಸಲು ಟೊಂಕ ಕಟ್ಟು ಬಾ
ಇಳಿದು ಗದ್ದೆಯ ಕಟ್ಟಿ ಮಾಡು ಕೆಲಸ!

—ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ.

ಪ್ರವಾಸಿಗರ ನಂದನನನ—ಮೈಸೂರು

(ಳನೇ ಪುಟದಿಂದ)

ಮೈಸೂರು ಜಿಲ್ಲೆಯ ಹಿಮವದ್ಗೋವಾಲ ಸ್ವಾಮಿ ಬೆಟ್ಟ, ಬಿಳಿಗಿರಿ ರಂಗನ ಬೆಟ್ಟಗಳು, ಶಿವನಸಮುದ್ರ ಜಲ್ಲಿಯ ಕೊಡಶಾದ್ರಿ, ವಡಕೇರಿ, ಮಂಗಳೂರಿನ ಕಪರಿ ಬೆಟ್ಟ, ಸವದತ್ತಿಯ ಎಲ್ಲಮ್ಮನ ಗುಡ್ಡೆ, ಕಲಬುರ್ಗಿ ಜಿಲ್ಲೆಯ ಸುರಪುರಗಳು ಉಲ್ಲೇಖನೀಯ, ಗಿರಿಮಂದಿರಗಳು ಬೇಕೆ? ಕನ್ನಡ ರಾಜಂಗಾಚೇಶ್ವರಿಯೂದ ಚಾಮುಂಡಿ ತಾಯಿಯೆ ಗಿರಿಮಂದಿರದಲ್ಲಿ ವಿರಾಜಮಾನಳಾಗಿದ್ದಾಳೆ ಅತ್ಯಂತ ಆಕರ್ಷಣೀಯವಾದ ಮಾದೇಶ್ವರ ಬೆಟ್ಟದಲ್ಲಿ ರಾರಾಜಿಸುವ ಮಾದೇಶ್ವರ ದೇವಾಲಯ ವಿದೆ. ಪುತ್ತೂರು ತಾಲೂಕಿನ ದೊಡ್ಡ ಸುಬ್ರಮಣ್ಯ ದೇವಾಲಯ ಕ್ಷೇತ್ರ ತಲಕಾಡಿನ ಪಂಚಲಿಂಗ ಕ್ಷೇತ್ರಗಳನ್ನು ಮರೆಯುವಂತಿಲ್ಲ. ಶ್ರೀರಂಗ ಪಟ್ಟಣವೇ ಪೂರ್ಣ ಒಂದು ದಿನವೆಲ್ಲಾ ನೋಡಿದರೂ ಮುಗಿಯದಷ್ಟಪ್ರೇಕ್ಷಣೀಯ ಸ್ಥಳಗಳನ್ನೊಳಗೊಂಡಿದೆ ರಂಗನ ತಿಟ್ಟನಲ್ಲಿರುವ ಪಕ್ಷಿರಾಶಿ ನಯನಾ ಮನೋಹರವಾದುದು ಬಸನ ಕಲ್ಯಾಣ ಕೂಡಲಸಂಗಮ ಉಡುಪಿ, ವೇಣೂರು, ಕಾರ್ಕಳ, ಗೊಮ್ಮಟಗಿರಿ ಇನ್ನೂ ನೂರಾರು ಹೆಸರುಗಳನ್ನೂ ಈ ಪ್ರಕ್ಷಣೀಯ ಸ್ಥಳಗಳ ಮಟ್ಟಗೆ ಸೇರಿಸಬಹುದು

ಒಟ್ಟನಲ್ಲಿ ಹೇಳುವುದಾದರೆ ಕನ್ನಡ ನಾಡನ್ನು ಕಂಡವರ ಕಣ್ಣಾಳ ಬರ ಹಿಂಗಿ ಹೋಗುತ್ತದೆ ಒಮ್ಮೆ ಕನ್ನಡ ನಾಡನ್ನು ನೋಡಿದವರು ಇನ್ನೇನನ್ನೂ ನೋಡಲು ಆ

ಇತಿಹಾಸದ ಮೇಲೆ ಬೆಳಕು

ಜೋಳರ ಪ್ರಾಚೀನ ಕೇಂದ್ರ—ಕಾವೇರಿ ಪಟ್ಟಣ

ಮದರಾಸಿನ ಕಾವೇರಿ ಪಟ್ಟಣದಲ್ಲಿ ಇತ್ತೀಚೆಗೆ ನಡೆಸಿದ ಭೂಗರ್ಭ ಸಂಶೋಧನೆಗಳು, ಆ ಸ್ಥಳದ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಿವೆ. ಪ್ರಾಚೀನ ಕಾಲದಲ್ಲಿ ಅದು ಚೋಳರ ರೇವು ಪಟ್ಟಣವಾಗಿತ್ತೆಂಬುದನ್ನು ಇಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳು ಸೂಚಿಸುತ್ತವೆ. ಭಾರತದ ಭೂಗರ್ಭ ಸರ್ವೇಕ್ಷಣ ಇಲಾಖೆಯ ದಕ್ಷಿಣ ವಿಭಾಗವು ಈ ಸ್ಥಳದಲ್ಲಿ ಶೋಧನೆ ನಡೆಸಿದೆ. ಮದರಾಸ್ ರಾಜ್ಯದ ಸಿಯಾಲಿ ಶಾಲ್ಕೋಕಿನಲ್ಲಿರುವ ಈಗಿನ ಕಾವೇರಿ ಪಟ್ಟಣವು ಹಲವಾರು ಮನೆಗಳ ಒಂದು ಸಣ್ಣ ಹಳ್ಳಿ. ಆ ಪ್ರದೇಶದಲ್ಲಿನ ಸ್ವಭಾವ ಮತ್ತು ಸಂಪನ್ಮೂಲಗಳನ್ನೂ ಕಂಡು ಹಿಡಿಯುವ ಮುಖ್ಯ ಉದ್ದೇಶದಿಂದ ಈ ತೀರ ಪ್ರದೇಶದಲ್ಲಿ ಭೂಗರ್ಭ ಅನ್ವೇಷಣೆಯನ್ನು ನಡೆಸಲಾಯಿತು. ಆರಂಭನಲ್ಲಿ ಚೋಳರ ರೇವು ಪಟ್ಟಣವಾಗಿತ್ತೆಂಬ ಜೇಳಲಾದ ಕಾವೇರಿ ಪಟ್ಟಣ ಅಥವಾ ಪಂಪಯಾರಕ್ಕೆ ತೀರ ಸನಿಹದಲ್ಲಿ ಈ ಪ್ರದೇಶವಿರುವುದು.

ಕಾವೇರಿಯ ಮುಖ ಭೂಮಿಯಲ್ಲಿ ಒಮ್ಮೆ ಉಚ್ಚ್ರಾಯ ಸ್ಥಿತಿಯಲ್ಲಿದ್ದ ಈ ನಗರವನ್ನು, ಟಾಲೆಮಿ ಮುಂತಾದ ವಿದೇಶಿ ಲೇಖಕರೂ 'ಪಾಬೆರಿಸ್' ಎಂಪೋರಿಯನ್" ಎಂದು ಕರೆದಿದ್ದಾರೆ. 'ವಿಲಾಸ್ವಾಧಿಕಾರಂ' ಮತ್ತು 'ಮಣಿಮೇಖಲೈ'ಗಳಂತಹ ತಮಿಳು ಸಾಹಿತ್ಯ ಕೃತಿಗಳಲ್ಲಿ ಕಾವೇರಿ ಪಟ್ಟಣವ ವೈಭವವನ್ನು ವರ್ಣಿಸಲಾಗಿದೆ. ಮಣಿಮೇಖಲೆಯು ಶ್ರಕಾರ ಈ ನಗರವು ಸಮುದ್ರದಲ್ಲಿ ಮುಳುಗಿ ಹೋಗಿದೆ.

ಈ ಸ್ಥಳದಲ್ಲಿ ನಡೆಸಿದ ವ್ಯಾಪ್ತಿಯ ಸಂಶೋಧನೆಗಳಿಂದ ಅನೇಕ ವಾಸ್ತವಿಕಾಂಶಗಳಿಗೆ ಸಂಬಂಧಪಟ್ಟ ವಿಷಯಗಳು ಬೆಳಕಿಗೆ ಬಂದಿವೆ ಕ್ರಿಸ್ತಶಕದ ಆರಂಭ ಎಂದರೆ, ಸರಿ ಸುಮಾರು ಅದೇ ಕಾಲದ ಸಂಗಮ ಯುಗದಲ್ಲಿ, ಕಾವೇರಿ ಪಟ್ಟಣವು ಅತ್ಯುಚ್ಚ್ರಾಯ ಸ್ಥಿತಿಯಲ್ಲಿತ್ತೆಂದು ಈ ಅಂಶಗಳಿಂದ ವ್ಯಕ್ತಪಡುತ್ತದೆ.

ಪೆಕ್ಟಿಸಲಾರರು, ಮತ್ತು ಲಕ್ಷ್ಮೀಶನ ಮಾತಿನಲ್ಲಿ ಹೇಳುವುದಾದರೆ "ಅರಳಾದವಳ್ಗೆಗೆಲು ಪೊದರೊಳಗೆ ತಿರುಗಿದೊಡೆ ತೆರಳ ಬಲ್ಲುದೆ ಸಂಪಗೆಯ ಬನಕೆ ಮರಿದುಂಬಿ"

ಆಮೇರಿಕನ್ ಪಿಸ್ತೂಲ್ ಆಟೋ ಮೇಟಿಕ್ 8 ಗುಂಡು ಮತ್ತು 50 ಗುಂಡು ನಿಮಗೆ ಕೃಷ್ಟಿಕರವಾಗಂದಿದ್ದಲ್ಲಿ ಹಣ ವಾಪಾಸು ಕೊಡಲಾಗುವುದು

ತುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು ಬೆಲೆ: ಬೆಲೆ.6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಫರ್ಮಾಕ್ಕೆ ಬೇರೆ 100 ಗುಂಡಿನ ಬೆಲೆ: ರೂ. 6. ಚರ್ಮದ ಬೀಲದ ಬೆಲೆ. ರೂ. 6 ಪೋಸ್ಟ್ ಚಾರ್ಜು ರೂ 2

REY ROGAS & CO., 23-A, Anand Nagar, BOMBAY-26

ಸಮುದ್ರ ತೀರದಲ್ಲಿ ನೈಡವಾಸಲ್ ನಿಂದ ವನಗಿರಿಯ ವರೆಗಿನ ಐದು ಮೈಲಿಗಳ ಘಾಸಲೆಯಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳು, ನಿಸ್ಸಂದೇಹವಾಗಿ ಕ್ರಿಸ್ತಶಕದ ಆರಂಭದ ಕಾಲಕ್ಕೆ ಸೇರಿದವು ಕಪ್ಪು ಮತ್ತು ಕೆಂಪು ಪಾತ್ರೆಗಳು, ಹೆಂಚಗಳು ಮುಂತಾದ ಮಡಿಗಳು ಸಹ ಈ ಕ್ಷೇತ್ರದಲ್ಲಿ ಅಲ್ಲಲ್ಲಿ ದೊರೆತಿವೆ. ಚಚ್ಚೌಕದ ನಾಣ್ಯಗಳೂ ಅಲ್ಲಿ ದೊರೆತಿವೆ. ಆದರಲ್ಲಿ ಒಂದು ಕಡೆ ಹುಲಿಯ ಚಿತ್ರವೂ ಮತ್ತೊಂದು ಕಡೆ ಆನೆಯ ಚಿತ್ರವೂ ಇರುವುದು.

ಸಮುದ್ರಕ್ಕೆ ಪಶ್ಚಿಮದಿಕ್ಕಿನಲ್ಲಿ ಸುಮಾರು ಒಂದು ಫರ್ಲಾಂಗಿನಲ್ಲಿ ಕೆಲೈಯೂರಿನಲ್ಲಿ ಅಪರೂಪದ ಇಟ್ಟಿಗೆಗಳಿಂದ ತಿಳಿ (೩ × ೩ ಅಂಗುಲದ) ನಿರ್ಮಿಸಲಾದ ದೊಡ್ಡ ಗೋಡೆಯು ಭೂಮಟ್ಟಕ್ಕೆ ಳಇಡಿಗಳ ಕೆಳಗಿರುವುದು ಪತ್ತೆಯಾಗಿದೆ. ಈ ಗೋಡೆಯು ಸುಮಾರು ೧೧ ಅಡಿಗಳಷ್ಟು ಆಗಲವಾದ ಕಟ್ಟಡದ ಒಂದು ಭಾಗವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ ಈ ಸ್ಥಳಕ್ಕೆ 'ಮಂಗೈ ಮೂಡಂ' ಅಥವಾ 'ಆಶ್ರಮ' ಎಂಬ ಹೆಸರಿರುವುದು ಪ್ರಾಚೀನ ತಮಿಳು ಕೃತಿಗಳ ರೀತ್ಯಾ ಕಾವೇರಿ ಪಟ್ಟಣದಲ್ಲಿ ಬುದ್ಧ ವಿಹಾರಗಳೂ ಆಶ್ರಮಗಳೂ ಇದ್ದವು.

ತಾಮ್ರಪರ್ಣಿಯ ತಯೋರಾದ ರೋಮನ್ನಾಣ್ಯ ಪೊಂದು 'ವೆಳ್ಳಿಯನ್ ಇರುಪ್ಪು, (ಬೆಳಿಯರ ನಿವಾಸ) ಎಂಬ ಹೆಸರಿನ ನಿವೇಶನದಲ್ಲಿ ದೊರೆತಿದೆ ತಮಿಳು ಸಾಹಿತ್ಯ ಕೃತಿಗಳು, ಯವನರು (ಗ್ರೀಕರು ಮತ್ತು ರೋಮನ್ನರು) ಆ ಪ್ರದೇಶದಲ್ಲಿದ್ದರೆಂದು ತಿಳಿಯುತ್ತವೆ. ಕಾವೇರಿ ಪಟ್ಟಣದ ಸುತ್ತಮುತ್ತ ಅನೇಕ ಸ್ಥಳಗಳಲ್ಲಿ ಪ್ರಾಚ್ಯ ಸಂಶೋಧನೆ ನಡೆಸಲಾಯಿತು. ಆರಂಭ ಯುಗ ಮತ್ತು ಮಧ್ಯ ಯುಗಗಳಿಂದ ಹಿಡಿದು ಇತ್ತೀಚಿನ ವರೆಗೂ ಈ ಸ್ಥಳಗಳಲ್ಲಿ ಜನ ವಸತಿಗಳಿದ್ದವೆಂದು ತಿಳಿದು ಬರುತ್ತದೆ. ಅಸ್ಮತಿಮ ವೀರರೆನಿಸಿದ ವಿಕ್ರಮ ಚೋಳ, ರಾಜ ರಾಜನ ಕಾಲದ ನಾಣ್ಯಗಳೂ ಈ ಸ್ಥಳದಲ್ಲಿ ದೊರೆತು ಈ ಅಂಶವನ್ನು ಮತ್ತಷ್ಟು ದೃಢಪಡಿಸುತ್ತವೆ, ಸುಂದರವಾದ ಹಲವು ಮಣ್ಣಿನ ಪ್ರತಿಮೆಗಳೂ ಇಲ್ಲಿ ದೊರೆತಿವೆ

ಈ ಕ್ಷೇತ್ರದ ಪ್ರಾಮುಖ್ಯತೆಯನ್ನು, ಸಂಪತ್ತನ್ನು, ಇನ್ನಿ ದೊರೆತಿರುವ ಅವಶೇಷಗಳು ಸಾರಿ ಹೇಳುತ್ತವೆ ಈಗಾಗಲೇ ಧನೆ ನಡೆಸಿರುವ ಹಲವಾರು ವಿಜ್ಞಾನೇಶ್ವರಗಳು, ಪ್ರಾಚೀನ ನಗರದ ಉಸನಗರಗಳಾಗಿದ್ದುವೆಂದು ತೋರುತ್ತವೆ. ಪುಗಳ ಬಗೆಗೂ ತಮಿಳು ಸಾಹಿತ್ಯದಲ್ಲಿ ಉಲ್ಲೇಖವಿರುವುದು. ವನಗಿರಿ, ನೈಡವಾಸಲ್, ಸಾಯತ್ಕಾಡು (ಸಂಗಮ ಸಾಹಿತ್ಯದಲ್ಲಿ ಬರುವುದು. ವೆಳ್ಳಿಯನ್ ಇರುಪ್ಪು, ಮಣಿಗ್ರಾಮಂ ಇತ್ಯಾದಿಗಳು ಅತ್ಯಂತ ಸೂಕ್ಷ್ಮ ಕಾಲ ಹಸರುಗಳಾಗಿದ್ದು ಇಂದೇ ನಿರ್ಣಯಕ್ಕೆ ಇಂಬುಗೊಡುತ್ತವೆ. ಈ ಪ್ರದೇಶದಲ್ಲಿ ಭೂಗರ್ಭ ಸರ್ವೇಕ್ಷಣಾಧಿಕಾರಿಗಳು ಸುಮಾರು ಹತ್ತು ದಿನಗಳ ಕಾಲ ಸಂಶೋಧನೆ ನಡೆಸಿದರು

ರಾಯಪ್ಪನ ತಾಯಿ

(೩ನೇ ಪುಟದಿಂದ)

ವೆಂಕಟು ನೋಡುತ್ತಾನೆ, ಆ ವಿನಾಯಕನ ಗುಡಿಯನ್ನು ರಿಪೇರಿ ಮಾಡಲಿಕ್ಕಾಗಿ ಕೆಡವಿ ಹಾಕಿದ್ದರು. ಅಂದು ರಾತ್ರಿ ಆ ಕೆಡವಿದ ಗುಡಿಗೆ ಆತನ ತಾಯಿ ಬಾರದುದನ್ನು ಕಂಡು. ಆಕೆ ಆ ಊರನ್ನೇ ಬಿಟ್ಟು ಮದ್ರಾಸಿಗೆ ಹೋದ. ಅಲ್ಲಿ ಆತ ಕ್ರೈಶ್ಚಿಯನ್ ಜಾತಿಗೆ ಸೇರಿ ರಾಯಪ್ಪ ನೆಂಬ ಹೆಸರಿನಿಂದ; ಪೇಪರು ಮಾರಾಟ ಮಾಡತೊಡಗಿದ." ಈ ಕಥೆಯಲ್ಲಿ ಶ್ರೀ ರಾಜಾಜಿಯವರು, ನಿರೂಪಿಸಿರುವ ಆ ಬೋಧ ಬಾಲಕನು, ಬಾಲ ಮನೋ ವಿಜ್ಞಾನದ ರೀತಿ ಇಂತಿದೆ:—

ಮೇರಿಯು ಶೌರಿಯನ್ನು ಪ್ರೀತಿಯಿಂದ ಮೈದಡವಿ ಉಪಚರಿಸಿದುದನ್ನು ನೋಡಿ, ವೆಂಕಟು ಶೌರಿಯೊಡನೆ—'ಗೆಳೆಯಾ! ನನ್ನ ತಾಯಿ ನನಗೆ ಹೇಗೆ ಸಿಕ್ಕುತ್ತಾಳೆ? ನಿನಗೆ ಇಷ್ಟು ಒಳ್ಳೆಯ ತಾಯಿ ಹೇಗೆ ಸಿಕ್ಕಿದಳಪ್ಪಾ?' ಎಂದು ಕೇಳುತ್ತಾನೆ. ಶೌರಿಗೂ ಈ ಪ್ರಶ್ನೆಗೆ ಉತ್ತರ ಕೊಡುವಷ್ಟು ಜ್ಞಾನವಿರಲಿಲ್ಲ, ಆದರೂ ಆತ—ತಾಯಂದಿರನ್ನು ನಮಗೆ ದೇವರೇ ಕೊಡುತ್ತಾನೆ ವೆಂಕಟೂ! ಆ ದೇವರು ನಿನಗೇಕೆ ಒಳ್ಳೆಯ ತಾಯಿಯನ್ನು ಕೊಡಲಿಲ್ಲವೋ?' ಎನ್ನುತ್ತಾನೆ. ಮತ್ತೆ ತನ್ನ ತಾಯಿಯೊಡನೆ— 'ಅಮ್ಮಾ....ಈ ವೆಂಕಟನ ತಾಯಿ ಅವನಿಗೆ ಏಕವ್ಯಾಯವಾಗಲೂ ಹಾಗೆ ಹೊಡೆಯುತ್ತಾಳೆ? ಊಟವನ್ನು ಹಾಕುವುದಿಲ್ಲವಲ್ಲ? ಅವನಿಗೆ ನಿನ್ನ ಹಾಗಿರುವ ಒಳ್ಳೆಯ ತಾಯಿ ಸಿಕ್ಕಲಿಕ್ಕಿಲ್ಲವೇನಮ್ಮಾ?" ಎಂದು ಕೇಳುತ್ತಾನೆ ಮೇರಿಯು ತನ್ನ ಮಗನ ಸಹಾನುಭೂತಿಯುಕ್ತವಾದ ದಯಾರ್ದ್ರ ಹೃದಯವನ್ನರಿತು ಮುಗ್ಧಳಾಗುತ್ತಾಳೆ. ಆಗ, ವೆಂಕಟು 'ನನಗೆ ನನ್ನ ಮ್ಮಯಾವಾಗ ಸಿಕ್ಕುವಳು? ನೀವು ಶೌರಿಯ ತಾಯಿ ಅದುದು ಹೇಗಮ್ಮಾ? ಎಂದು ಕೇಳುತ್ತಾನೆ.

ಶೌರಿಯ ತಾಯಿಗೆ, ಈ ಅನಾಥ ಬೋಧ ಬಾಲಕನ ಈ ಮಾತುಗಳನ್ನು ಕೇಳಿ, ಕರುಣೆಯುಕ್ಕಿತು ಆಗ ಆಕೆ ಪ್ರೀತಿಯಿಂದ ವೆಂಕಟನ ಮೈದಡವುತ್ತ—'ಅಯ್ಯೋ! ನಿನಗೆ ಇಷ್ಟೂ ಗೊತ್ತಿಲ್ಲವೇ? ನೀನು ಚಿಕ್ಕವನಿದ್ದಾಗ ನಿನ್ನ ತಾಯಿ ಕೆರೆಗೆ ಬಿದ್ದು ತೀರಿ ಕೊಂಡಳು ಮತ್ತೆ ನಿನ್ನ ತಂದೆ ಬೇರೆ ಮದುವೆ—ಮಾಡಿಕೊಂಡರು. ಆ ಮದುವೆಗೆ ನಾನು ಹೋಗಿದ್ದೆ, ನನಗೂ ತಾಂಬೂಲ ಸಿಕ್ಕಿತು! ಈಗ ನಿಮ್ಮಲ್ಲಿರುವಾಕೆ ನಿನ್ನ ತಾಯಿಯಲ್ಲ ವೆಂಕಟೂ! ನೀನು ಮೇರಿಯನ್ನು ಪ್ರಾರ್ಥಿಸು. ನಿನಗೆ ತಾಯಿ ಸಿಕ್ಕುತ್ತಾಳೆ!' ಎಂದಳು.

ಕಥೆಗಾರ ರಾಜಾಜಿಯವರ ಈ ನಿರೂಪಣೆ ಸಹಜವೂ ಸುಂದರವೂ ಆಗಿದೆ.

ಶ್ರೀ ರಾಜಾಜಿಯವರು ತಾವು ಬರೆದ ಈ ಕಥೆಯನ್ನು ಓರ್ವ ಪತ್ರಿಕಾ ಸಂಪಾದಕರಿಗೆ ಕಳುಹಿಸುತ್ತಾರೆ. ಆ ಬಳಿಕ ಲೇಖಕರು ಆ ಸಂಪಾದಕರನ್ನು ಕಂಡಾಗ ಈ ಕಥೆಯ ವಿಷಯದಲ್ಲಿ ಲೇಖಕ ಸಂಪಾದಕರ ನಡುವೆ ನಡೆದ ಸಂಭಾಷಣೆಯಿಂದ ಈ ಕಥೆಯ ಉದ್ದೇಶ ವಾಚಕರಿಗೆ ತಿಳಿದು ಬರುವುದು.

'ಈ ನಿಮ್ಮ ಕಥೆ ವಿಚಿತ್ರವಾಗಿದೆ! ಇದರ ಉದ್ದೇಶವಾದರೂ ಏನು ಸ್ವಲ್ಪ ಹೇಳುವಿರಾ?' ಸಂಪಾದಕರು ಕೇಳಿದರು.

'ಕಥಾ ಲೇಖಕರು ನಸುನಗುತ್ತ—ಆದರ್ಶವೇನು? ನಾನು ಈ ಕಥೆಯನ್ನು ನನ್ನ ಆತ್ಮ ತೃಪ್ತಿಗಾಗಿ ಬರೆದೆ! ಅಷ್ಟೆ!' ಎಂದರು.

'ನೀವೇನು ನಮ್ಮ ಪೇಪರು ಮಾರುವ ರಾಯಪ್ಪನ ಹಾಗೇ ನಗುತ್ತೀರಲ್ಲ? ವಿಧುರರು ಮತ್ತೊಂದು ಮದುವೆ ಮಾಡಿಕೊಳ್ಳುವುದನ್ನು ತಪ್ಪೆಂಬಂತಲಿಕ್ಕಾಗಿ ಈ ಕಥೆ ಬರೆದಿದ್ದೀರಾ! ಹೇಗೆ?'

'ಹಾಗೇನಿಲ್ಲವಲ್ಲ? ಮುದುವೆ ಮಾಡಿಕೊಳ್ಳುವುದು ಯಾವಾಗಲೂ ಚೆನ್ನಲ್ಲವೇ

'ಹಾಗಾದರೆ ಗಣಪತಿ, ಪೂಜೆಯ ಸಮರ್ಥನೆಗಾಗಿ ಈ ಕಥೆ ಬರೆದಿರಬಹುದೇನೋ!'

'ಪೂಜೆ ಎಲ್ಲರ ಪೂಜೆಯೂ ಒಪ್ಪತಕ್ಕದಲ್ಲವೇ? ತಾವು ಬೇಕಾದರೆ ಹಾಗೆ ಭಾವಿಸಬಹುದು!'

'ಹಾಗಾದರೆ ಮಲತಾಯಂದಿರಿಗಾಗಿ ಈ ಕಥೆ ಬರೆದಿರಬಹುದು!" 'ಹಾಂ! ಏನೆಂದಿ? ಮಲತಾಯಂದಿರೂ ಕೂಡ ನಮ್ಮ ಪತ್ರಿಕೆಯನ್ನು ಓದುತ್ತಾರೆಯೇ?,

'ಈ ಕಾಲದಲ್ಲಿ ಮಲತಾಯಂದಿರು ಮಕ್ಕಳನ್ನು ಸ್ವಂತ ತಾಯಿಗಿಂತಲೂ ಚೆನ್ನಾಗಿ ನೋಡಿಕೊಳ್ಳುತ್ತಾರೆ! ತಮಗಿದು ಗೊತ್ತಿಲ್ಲವೇ? ಈಗ ಕಥಾ ಲೇಖಕರು, ಸಂಪಾದಕರಿಗೆ ಸ್ವಲ್ಪ ವಿವರವಾಗಿಯೇ ಹೇಳುತ್ತಾರೆ - 'ಕಾಲಬದಲಾಗಿದೆ! ಅಮದಿರಿಂದ ಮಲ ತಾಯಂದಿರು ನೀವು ಹೇಳುವಂತೆಯೇ ಇರಬಹುದೇನೋ! ಆದರೆ ಹಲವು ಬಗೆಯ ಮಲತಾಯಂದಿರುತ್ತಾರೆಂದು ನಿಮಗೆ ಗೊತ್ತಿಲ್ಲವೇ? ಒಬ್ಬ ಆತ್ತೆ ತನ್ನ ಮುದ್ದಿನ ಸೊಸೆಯನ್ನು ನೋಡಿಕೊಳ್ಳತಕ್ಕವಳು- ಅವಳೂ ಒಂದು ರೀತಿಯ ಮಲತಾಯಿಯೂಗುತ್ತಾಳೆ! ಒಬ್ಬ ಹೆಂಗಸು ತನ್ನಲ್ಲಿ ಕೆಲಸಕ್ಕೆ ಇಟ್ಟುಕೊಂಡ ಒಬ್ಬ ಚಿಕ್ಕ ಹುಡುಗಿಗೆ ಮಲತಾಯಿಯಂತೆಯೇ ಆಗಿ ಹಾಗೇ ವರ್ತಿಸುತ್ತಾಳೆ! ಒಟ್ಟಿನಲ್ಲಿ ಹೇಳುವುದಾದರೆ, ವಿಕಾರ ಹೊಂದುತ್ತಿರುವ ಎಳೆಯ ದೇಹ ಮತ್ತು ಮನಸ್ಸು ಇವುಗಳ ವೇಗಕ್ಕೆ ಸ್ವೇಚ್ಛೆಯಿಂದ ಅಧಿಕಾರ ನಡೆಸಲು ದೊರೆತರೆ ಆಗ ಸ್ತ್ರೀಯಾಗಲೀ ಪುರುಷನಾಗಲೀ, ಅವರು ಒಂದು ರೀತಿಯ ಮಲತಾಯಂದಿರೇ ಆಗುತ್ತಾರೆ! ಸ್ವಾಭಾವಿಕನಾದ ನಿರ್ಮಲವಾದ-ಪ್ರೀತಿ ತಾಯಿಯಿಂದಲೇ ಮಕ್ಕಳಿಗೆ ಲಭಿಸುತ್ತದೆ. ಇತರರೂ ಸಹಜ ವಿಚಾರ ಮಾಡಿ, ತಾಯಿಯಂತೆಯೇ ಪ್ರೀತಿಸುವ ಸ್ಥಿತಿಗತಿಯಲ್ಲಿ ತೊಡಗಬೇಕು. ಹಾಲು ಬೆಳೆಯುತ್ತಿರುವ ಮಗುವಿನ ದೇಹ ಪೋಷಣೆ ಮಾಡುವುದು! ಆದರೆ ಮನಸ್ಸಿನ ಬೆಳವಣಿಗೆಗೆ ನಿರ್ಮಲವಾದ ಪ್ರೇಮವೇ ಅತ್ಯಾವಶ್ಯಕವಾಗಿರತ್ತದೆ. ಇದರ ಹೊರತು ಮಕ್ಕಳ ಮನಸ್ಸು ಚಿವುಟಿಹಾಕಿದ ಸಸಿಯಂತೆ ಮುರುಟಿಹೋಗಬಹುದು!'

'ಸಾಕು....ಸಾಕು ಮಾಡಿ ಈ ವಿಷಯದಲ್ಲಿ ಒಂದು ಭಾಷಣವನ್ನೇ ಬಿಗಿದು ತಾವು ನನಗೆ ತಲೆನೋವು ಬರುವಂತೆ ಮಾಡಿದಿರಿ! ನಮ್ಮ ಪೇಪರು ಮಾರುವ ಹುಡುಗರು ಮೂರ್ಖರೂ ಪೋಲಿಗಳೂ ಆಗಿರುತ್ತಾರೆ. ಆದರೂ ನಾವು ಅದನ್ನು ಗಮನಿಸದೆ, ಸಾಧ್ಯವಾದಷ್ಟು ಒಳ್ಳೆಯ ರೀತಿಯಿಂದ ಅವರನ್ನು ನೋಡಿಕೊಳ್ಳುತ್ತೇವೆ! ಸ್ವಾಮಿ!' ಎಂದರು; ಸಂಪಾದಕರು.

ಕಥೆಗಾರ ರಾಜಾಜಿಯವರಿಗೆ ಸಂಪಾದಕರ ಈ ಮಾತು ಕೇಳಿ ಬಹಳ ಸಂತೋಷವಾಗುತ್ತದೆ. ಆಗ ಅವರು-'ಸ್ವಾಮೀ! ಸಂಪಾದಕರೇ ನನ್ನು ರಾಯಪ್ಪನನ್ನು ಬಹಳ ಚೆನ್ನಾಗಿ ನೋಡಿಕೊಳ್ಳಿರಿ! ಆತನ ವೃತಹಾರದಲ್ಲಿ ನಿಮಗೆ ಎಂದಾದರೂ ವಿಚಿತ್ರ ವರ್ತನೆ ಕಂಡುಬಂದರೆ, ಆತನ ಮೇಲೆ ಕೋಪ ಮಾಡದೆ, ಆತನನ್ನು ವಿನಾಯಕನ ಗುಡಿಗೆ ಕಳುಹಿಸಿಕೊಡಿ. ಆಗ ಎಲ್ಲವೂ ಸರಿಹೋಗುವುದು!' ಎಂದು ಹೇಳುತ್ತ ಕಥೆಯನ್ನು ಪೂರ್ಣಗೊಳಿಸುತ್ತಾರೆ. ಕಥೆಗಾರರ ರಾಯಪ್ಪನು ಏಗೂ ತಿಳಿಗುದವನು. ಆದರೆ ಆತನ ಚರಿತ್ರೆಯು-'ಏಕಂ ರೂಪಂ ಬಹುಧಾಯಃ ಕರೋತಿ ತಮಾತ್ಮ ಸ್ಥಂ ಯೇನ ಪಶ್ಯಂತಿ ಧೀರಾಃ ತೇಷಾಂಸುಖಾಶಾಶ್ವತಂ ನೇತರೇಷಾಂ." ಎಂಬ ಉಪನಿಷದ್ ವಾಕ್ಯವನ್ನು ನೆನಪಾಗುವಂತೆ—ನೋಡುವುದು!

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 606/1962

ಮುದ್ದರಾಯ ಭಟ್ಟ — ವಾದಿ

ಮತ್ತು

ಕುಡ್ಡು ಸಹಲಿಗ—ಮೂಡ ಸಹಲಿಗಸ್ಥ ಮಗ, ಕಾರ್ಕಳ ತಾಲ್ಲ್ಯ ಕಡಂದ್ಲೆ ಗ್ರಾಮಸ್ಥ, Post ಕಡಂದ್ಲೆ. — ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನಂದ್ರೆ:—

ವಾದಿಯು ನಿಮ್ಮ ಮೇಲೆ ಗೇಣಿ ಬಾಕಿಗೆ ಮೂಡಿದ ಮೇಲಿನ ದಾವಾ ನಿಮ್ಮ ಹಾಜರಾತಿ ಬಗ್ಗೆ 27—11—1962ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಸ್ವತಹಾ ಯಾ ವಕೀಲರ್‌ದ್ವಾರಾ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉಜುರುಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಸದ್ರಿ ವ್ಯಾಜ್ಯ ತೀರ್ಮಾನಿಸಲಾಗುವುದೆಂತು.

By order of the Court.

N. M. Adyanthaya,
Advocate for Plaintiff.

Karkala, 2—11—1962.

—: ಸಮಸ್ಯಾ ಪರಿಹಾರ :—

೧

ಮಜ್ಜನದ ಮಠದೂಟದಿಂದಲೆ
ಒಡಲ ಒಗಟನ್ನು ಬಿಡಿಸುತ
ಚಹದ ಬದಲಿಗೆ ನೀರ ಕುಡಿದು
ಜಟದ ಒತ್ತಡ ತಣಿಸುತ

೨

ತುಂಡುಮುಂಡಲಿ ಬೊಕ್ಕತಲೆಯಲಿ
ಬರಿಯ ಕಾಲಲಿ ತಿರುಗುತ
ಪಾವಣಿಸು ಲೇ ದಾನ ಮುಗಿಸಿ
ಮುಷ್ಟಿ ಅಕ್ಕಿಯ ಉಳಿಸುತ

೩

'ಳಿಯರೊ ಬಲ್ಲುಗಳನ್ನು ಉರಿಸಿ
ಎಂಟೊಂದನು ಗಳಿಸುತ
ಕೋಟು ಹರಿಯಲು ನಾಚಿಕೊಳ್ಳದೆ
'ಪ್ಯಾಚಿ,ನಲಿ ದಿನದೂಡುತ.

೪

ವೋಟುದಾನವ ನೀಟಿಯಿಲ್ಲದೆ
'ನೋಟಿನೆಣಿಕೆಯೊಳೇಯುತ,
'ಎಸ್. ಬಿ. 'ಸಿ. ಡಿ. ಶೀರು ಕೊಳ್ಳುತ
'ಜೇಂಕ, ಮೈತ್ರಿಯ ಬೆಳಸುತ

೫

ಕೇಶ ಸರ್ಟಿಫಿಕೇಟು ಪಡೆದು
ದೇಶದುನ್ನತಿ ಕೋರುತ,
ಪೈಸೆ ಪೈಸೆಗೆ ಪೈಸೆ ಸೇರಿಸಿ
ನೂರು ಪೈಸೆಯ ಮಿಗಿಸುತ,
ಏರುತಿಹ ವೆಚ್ಚದ ಸಮಸ್ಯೆಗೆ
ಪಾರವನು ನೀನರಸುಕ.

—'ಸಿರಿಪತಿ'

ಬೆಂಗಳೂರಲ್ಲಿ ಬೇಸ್ತು

(೨ನೇ ಪುಟದಿಂದ)

ಬಸವ— (ಸ್ವಗತ) ಅಬ್ಬ ಎಷ್ಟು ಪರಿಚಯ ಇದ್ದೆ ಹಾಗೇ ಮಾತಾಡ್ತಾಳೆ! ಇವಳೂ ಲಕ್ಷ್ಮೀಪುರದಿಂದ ಓಡಿ ಬಂದವಳಾಗಿರಲಿಕ್ಕಿಲ್ವಲ್ಲ. (ಪ್ರಕಾಶ) ನೀನ್ಯಾರಮ್ಮ, ನನ್ ಗುರ್ತು ಇದ್ದವರ ಹಂಗೆ ಮಾತಾಡ್ತೀಯಲ್ಲ. ಆ ಕಳ್ಳ ವರದಾಚಾರಿ ನನ್ನ ಕೊಲ್ಬೇಕೂಂತ ಮಾಡಿದ್ದಾನೆ. ನೋಡು ಈ ಪಿಶಾಚಿ ಇರೋ ಕೋಣೇಲಿ ನೀರಿಸಿ ಹೋಗಿದ್ದಾನಲ್ಲ. ಕೋಣೇಲಿ ಯಾರೂ ಇಲ್ಲ. ಏನೂ ಇಲ್ಲ. ಆದರೂ ಆದೇನೋ ತನ್ನಷ್ಟಕ್ಕೆ ತಾನೇ ಕಿರ್ಚಿ ಕೇಳ್ತಾ ಇದೆಯಲ್ಲ.

ಹೆಂಗಸು—(ಒಳಗೆ ಬಂದ 'ಫೋನು' ಕೈಗೆ ತೆಗೆದುಕೊಂಡು ಕವಿಗಿಟ್ಟುಕೊಂಡು ಮಾತು ಪ್ರಾರಂಭಿಸುತ್ತಾಳೆ.)

"ಹಲೋ" "ಯಾರಾದು" (ಆ ಕಡೆಯಿಂದ) ನಾನು ನರ್ಸಿಸು (ನಾನು ವರದಾಚಾರಿ" (ಆ ಕಡೆಯಿಂದ)

"ನೀವಾ! ಬಸವ ಅಂತಲೇ ಇಲ್ಲಿದ್ದಾರೆ ನಿಮ್ಮ ಸ್ನೇಹಿತರು ಬಹಳ ಹೆದರಿಕೊಂಡ್ಬಿಟ್ಟಿದ್ದಾರೆ— ಟಿಕೇಟು ಕೊಂಡ್ಕೊಂಡಿರಲ್ಲ ನಾನೂ ನಿಮ್ಮ ಸೂಚನೆಯಂತೆ ಬರ್ತೀನಿ — ಮೂರು ತಗೊಳ್ಳಿ—ಪಾತಾಳ ಭೈರವಿಯೇ? ಈಗ ಬಂದ್ಬಿಡ್ತೀರಿ ತಾನೆ—ಸರಿ. ಫೋನು ಕೆಳಗಿಡ್ತಾಳೆ. ಮತ್ತು ಬಂದು ಬಸವನ ಹತ್ತಿರ ಕುಳಿತುಕೊಳ್ತಾಳೆ)

ಬಸವ— (ಸ್ವಗತ) ಎಲಾ ಇವಳ! ತಿಮ್ಮಿ ಮದುವೆ ಆಗಿ 15 ವರ್ಷಾ ಆದ್ರೂನೂ ಒಂದು ದಿನಾನು ಹಿಂಗೆ ಕುಂತುಕೊಳ್ಳೋ ಧೈರ್ಯ ಕೋರಿಯಿಲ್ಲ. ತಿಮ್ಮಿ ಏನಾದ್ರೂ ನಾನೂ ಈಕೆಯೂ ಹಿಂಗೆ ಕುಂತಿದ್ದನ್ನು ನೋಡಿದ್ರೆ...ಆಗಿಯೇ ಹೋಯ್ತು. ಈ ಅಪ್ಸರೆಯು ಪ್ರಾಣಾನಾ ಒಂದೇ ಸಲ ಹೀರಿಬಿಡ್ತಾಳೆ ಈಗಾ ..ನಾನಾದ್ರೂ ಯಾಕೆ ಆ ಕಡೆ ಒರಗ್ಬೇಕು ಅವಳಾಗಿಯೇ ಕುಂತಿದ್ದಾಳೆ. ಎಷ್ಟದ್ರೂ ಪಟ್ನ ಅಲ್ವೆ? ಇಲ್ಲಿ ಇದೂ ಒಂದು ರೀತಿಯೇ ಇರ್ಬೇಕು. ಅದರಲ್ಲೂ ಹಿಂಗೆ ಕುಂತ್ರೆ (ಮೈಯ್ಯಾಲ್ಲೀನೋ ಬೆವರುತ್ತೆ) ನನಗೂ ಸುಖಾ ಅನಿಸ್ತೈತೆ. (ಪ್ರಕಾಶ) ಆದು ಸರಿ ನೀನು ಯಾರ ಜತೆಗೆ ಮಾತಾಡಿದ್ದು? ವರದಾಚಾರಿ ಜತೆಗೆ ಮಾತಾಡಿದ ಹಾಗೆ ಕೇಳ್ಸಿತಲ್ಲ. ಆ ವರದ ತುಂಡಿನಲ್ಲಿ ಆದ್ ಹೇಗೆ ಅವನ ಜತೆಗೆ ಮಾತಾಡಿದ್ಯೋ ಇದೆಲ್ಲ ನೋಡಿದ್ರೆ ನನಗೆ ಬಹಳ ಗಾಬರಿಯೂಗ್ತಾ ಇದೆ. ನೀವೆಲ್ಲ ಮನುಷ್ಯೋ ಅಥವಾ....

ನರ್ಸಿಸ್— ಅಥವಾ ದೇವಲೋಕದ ದೇವತೆಗಳೂ ಅಂತ ಅಲ್ವೆ?

ಬಸವ— ದೇವಲೋಕದ ದೇವತೆಗಳಾದ್ರೆ ಭಯೂ ಇಲ್ಲಿಲ್ಲ. ಒಟ್ಟಿನಲ್ಲಿ ಭೂತ ಪ್ರೇತ, ಪಿಶಾಚಿಗಳಾಗದಿದ್ರೆ ಅದೇ ನನ್ ಪುಣ್ಯಾಂತ.

ನರ್ಸಿಸ್— ಹ್ಹಿ, ಹ್ಹಿ, ಹ್ಹೀ ನೀವು ಏನೋಂತಿದ್ದೆ. ಮತೆಲ್ಲ ದೊಡ್ಡ ಕವಿಗಳ ಬಾಯಲ್ಲಿಯೇ ಉಗುಳುಸರವಂತು ನೀವೇನು ಹೆದರ್ಕೊಳ್ಳೋದು ಬೇಡ. ನಾವು ಮೊದಲು ಕೆಳಗೆ ಹೋಗಿ ಊಟ ಮಾಡೋಣ. ಅಷ್ಟರಲ್ಲಿ ವರದಾಚಾರಿನೂ ಬರ್ತಾನೆ.

ಬಸವ— ಹಾಮ್ಮ, ಅದೂ ಸರಿನೆ. ಹೊಟ್ಟೆ ಬಾಳ ತಾಳ ಹಾಕ್ತಾ ಇದೆ. ಆಂದ್ದಂಗೆ ನಿನ್ನ ಒಂದು ಮಾತು ಕೇಳ್ಬೇಕಾಗಿತ್ತು. ತಪ್ಪು ತಿಳ್ಕೊಳ್ಳೋದಿಲ್ಲ ತಾನೆ?

ನರ್ಸಿಸ್—ಮಾತುಮಾತಿಗೂ, ನೋಟಿನೋಟಕ್ಕೂ ತಪ್ಪು ಹುಡುಕೋದು ನಿಮ್ಮ ಹಳ್ಳಿಗೆಗೊಡ್ಡುಗಳಿ. ನಾವು ತಪ್ಪು ಹುಡುಕ್ತುತ್ತಾ ಹೋದ್ರೆ ದಿನಕ್ಕೆ ಹದಿನೈದು ಕೇಸಾದ್ರೂ ಸಿಗುತ್ತೆ.(ನಗುವಳು)

ಬಸವ— ಅಬ್ಬ! ನಿನ್ನ ನಗುಗಿಂತಲೂ ನಿನ್ನ ಆ ಚಲೋದಾದ ಹಲ್ಲುಗಳ ಸಾಲನ್ನು ನೋಡಿದ್ರೇ ಹೊಟ್ಟೆ ತುಂಬಬೇಕು. ಆದೇನಾದ್ರೂ....ಅದೇ ಪಟ್ಟಣದಲ್ಲಿ ಇದ್ದ ಹಲ್ಲುಗಳನ್ನೆಲ್ಲ ಕೇಳ್ದೆ, ಬೇರೆ ಚಲೋದಾದ ಹಲ್ಲುಗಳನ್ನು ಕಟ್ಟಿಸಿಕೊಳ್ತಾರೆ ಎಂದು ಕೇಳಿದ್ದೆ ಅವೇನು ಆಗಿರ್ಲಿಕ್ಕಿಲ್ವಲ್ಲ. ಅದೇನಾದ್ರೂ ಇರ್ಲಿ ವರದಾಚಾರಿ ನಿನಗೆ ಏನಾಗ್ಬೇಕೂಂದೆ.

ನರ್ಸಿಸ್— ಪರವಾಗಿಲ್ಲ ಮಾತು ಮಾತಿನಲ್ಲೇ ಒಳ್ಳೆ ಏಟು ಕೊಟ್ಟೇ ಮಾತಾಡ್ತೀರಿ. ಸರಿ. ನೀವು ಹೇಳಿದ್ರೆ ತಿಳ್ದದೆ ಹೇಳ್ತೀರಾ. ನಾನಾದ್ರೂ ಯಾಕೆ ಸಿಟ್ಟು ಮಾಡ್ಕೊಳ್ಳಿ ವರದಾಚಾರಿ ನನ್ನ ಅಣ್ಣಾ ಆ ಗ್ಬೇಕೆ. ಇನ್ನೇನು ಗೊತ್ತಾನೆ.

ಬಸವ— ಎಲ, ಎಲಾ, ಅವನಿಗೆ, ಆ ಪ್ಪ ಒಬ್ಬನ್ನ ಬಿಟ್ರೆ ಅಕ್ಕ, ತಂಗಿ, ಬಂಧು ಬಳಗ ಯಾರೂ, ಯಾಪ್ಲೂ ಇಲ್ಲಾ....

ನರ್ಸಿಸ್— ಇಷ್ಟೇನೇ ನಿಮಗೆ ತಿಳಿಯೋದು ಪಟ್ಟಣದಲ್ಲಿ ಒಬ್ಬರ ಮನೆ ಸೇರಿಕೊಂಡ್ ಮೇಲೆ ಅವನು ಆಲ್ಲದ್ದವರಿಗೆ ಏನಾದ್ರೂ ಆಗ್ಬಹುದು. ನಮ್ಮಪ್ಪನಿಗೆ ಹಾದಿಬಸ್ಲಲ್ಲಿ ಸಿಕ್ಕಿದ್ದ ಕೆಲ್ಸಕ್ಕಿರ್ಲಿ ಎಂತ ನೆನ್ಮ ಬಂದ್ಲೇಗೆ ಕರತಂದ್ರು, ನನ್ನ ನೋಡಿ, ತನ್ನಾಸೆ ತೋಡ್ಕೊಂಡ. ನಾನು ಊಹುಂ ಎಂದೆ ಸರಿ,ನನ್ನಪ್ಪನ್ನಆನ ಚಿಗವಪ್ಪಾ ಎಂದ ನಾನು ಅವನನ್ನು 'ಅಣ್ಣಾ' ಎಂದು ಕರೆದೆ. ಒಟ್ಟಿನಲ್ಲಿ ಬಂದು ತಾಯಿ ಹೊಟ್ಟಿಲೇ ಹುಟ್ಟ ಒರ್ಬೇಕಂತಿಲ್ಲ. ಇಲ್ಲಿ ಹೇಗಿದ್ರೂ ಒಂದು ರೀತಿ ಸಂಬಂಧ ಬೆಳೀತದೆ

ಬಸವ— (ಬಾಯ್ಬಿಟ್ಟಕೇಳ್ತಿರ್ತಾನೆ) ಹಾಂಗಂದ್ರೆ....ಹಾಂಗಿದ್ರೇ...ನನ್ನ ಏನೂಂತ ಕುಂತಿಯೂ?

ನರ್ಸಿಸ್ — ಹತ್ತಿರ ಬಂದು, ಅವನ ಕೈಯನ್ನು ಸವರಿತ್ತಾ) ಅಲ್ಲಾ ನಿಮ್ಮನ್ನು ನೋಡಿದ್ರೆ ಬಾಳ ಒಳ್ಳೆಯವರ ಹಾಗೆ ಕಾಣ್ತೀರಿ. (ಒಂಗುರ ತೆಗೆದು ತನ್ನ ಕೈಯಲ್ಲಿರಿಸಿ ಕೊಳ್ಳುತಾ) ಇದೇನು ಒರಟೋರಟಾಸು ಉಂಗುರಂತೆಂದ್ರೆ (ಬಸವ ಗಾಬರಿಯಾಗ್ತಾನೆ) ಅಲ್ಲಾ ನೀವು ಮೊದಲು ಈ ಜುಟ್ಟು ಕತ್ತರಿಸಿ, ಕ್ರೋಪ್ ಕಟ್ ಮಾಡಿಸ್ಬೇಕು ಆಗ ನೀವು ಮನ್ಮಥನಂತೇ ಕಾಣ್ತೀರ. ಯಾವುದಕ್ಕೂ ವರದಾಚಾರಿ ಬರ್ಲಿ ಓ! ಬಂದೇ ಬಿಟ್ಟ!! (ದೂರ ಸರಿದು ಕೂತುಕೊಳ್ಳುವಳು.)

ಉಂಗುರ ಮುಚ್ಚಿಕೊಂಡಂತೆ ಮಾಡುವಳು. ಬಸವ ಕಣ್ಣನ್ನೆಯಿಂದ ಕೇಳ್ತಾನೆ. ಆವಳು ಹೆದರಿದಂತೆ ಸ್ವಲ್ಪ ತಡೀ ಎಂದು ಕಣ್ಸನ್ನೆ ಮಾಡ್ತಾಳೆ)

ವರದಾ— ನಿನಗೆ ಊಟವಾದ್ರೂ ಮುಗಿಸಿ ಕೂತಿರ್ಬೇಹುದಿತ್ತಲ್ಲ. ಇವತ್ತು ಆ ಥಿಯೇಟ್ರಲ್ಲಿ ಬಾಳ ರಶ್ಶು. ಆದ್ರೂ ಕ್ಯೂನಲ್ಲಿ ಅರ್ಧ ಗಂಟೆ ನಿಂತು ಮೂರು ಟಿಕೇಟು ಹೇಗಾದ್ರೂ ಪಡೀ ಬೇಕಾದ್ರೆ ನನ್ನ ಹೆಣಾ ಬಿದ್ದೋಯ್ತು.

ಬಸವ— ಇಪ್ಪೆಲ್ಲ ನನಗಾಗಿ ಯಾಕೆ ಖರ್ಚು ಮಾಡ್ತೀಯೋ ನಾನ್ ಬೇರೆ ಕಾಣೆ.

ವರದಾ— ಹನ್ನೆರಡು ವರ್ಷಗಳ ನಂತ್ರ ಭೇಟಿ. ಇಷ್ಟೋ ಮಾಡದಿದ್ರೆ ನಾನ್ ಹುಟ್ಟಿದ್ದೂ ನಾರ್ಥಕ ಏನು. ಬನ್ನಿ ಊಟಮಾಡಿ ಬರೋಣ. (ಮೂವರೂ ಊಟಕ್ಕೆ ಹೋಗುವರು)

ದೃಶ್ಯ ೭

(ಡೈನಿಂಗ್ ಹೋಲ್ ಬಸವ ಕುರ್ಚಿಯ ಮೇಲೆ ವರದಯ ಮೇಲೆ ಕೂತ ಹಾಗೇ ಕೂತಿರ್ತಾನೆ. ಬೆಪ್ಪನಂತೆ ಆ ಕಡೆಗೆ ಈ ಕಡೆಗೆಲ್ಲ ನೋಡ್ತಾನೆ. ನಾಲ್ಕೂ ಗೋಡೆಗೆ ಕನ್ನಡಿ. ಉದ್ದಕ್ಕೂ ಕನ್ನ ಮತ್ತು ಅಲ್ಲಿದವರೆಲ್ಲರ ನೂರಾರು ಪ್ರತಿ ಬಿಂಬಗಳನ್ನು ಕನ್ನಡಿಗಳಲ್ಲಿ ಕಾಣ್ತಾನೆ. ಗಾಬರಿಯಿಂದ ಕೂತಿರ್ತಾನೆ)

ಬಸವ— ಲೋ, ವರದಾ, ವರದಾಚಾರೀ ಇದೇನೋ ಇದು. ಮೂಯಲೋಕ ಇದ್ದಂತಿದೆಯಲ್ಲ. ನನಗ್ಯಾಕೋ ಭಾಳ ಭಯೂ ಆಗ್ತಾ ಇದೆ ಕಣೋ!

ವರದ— ಹ್ಹಿ, ಹ್ಹಿ, ಹ್ಹೀ, ಅಯ್ಯೋ ಬೆಪ್ಪೇ. ಇದು ಡೈನಿಂಗ್ ಹಾಲು ಕಣೊ.

ಬಸವ— ಅಯ್ಯಯ್ಯೋ, ಅದೆಂತದರ ಹಾಲಪ್ಪಾ, ಎಮ್ಮೆ, ಹಸುವಿನ ಹಾಲು ಬಿಟ್ಟು ನಾನಿನ್ನೆಂತದರ ಹಾಲೂ ನೋಡಿಯೇ ಇಲ್ಲಪ್ಪ. ನಾವು ಮೊದಲು ಇಲ್ಲಿಂದ ಹೊರಟು ಬಿಡೋಣ ಕಣೋ. (ನರ್ಸಿಸ್ ಕಡೆಗೆ ತಿರುಗಿ) ಏಏ, ನೋಡು ಅಯ್ಯೋ ಪಿಸ್ಸಾ ಬಾಯಿಗೇ ಬರೋಲ್ಲ, ನೋಡು, ನೋಡೂಂದ್ರೆ ನನ್ನ ಉಂಗುಂಂ.....

ನರ್ಸಿಸ್— (ಕಣ್ಣನ್ನೆಯಲ್ಲಿ ಕೊಡ್ತೇನೆ ಆ ಮೆ' ಲೆ ಅನ್ತಾಳೆ)

ಅಷ್ಟರಲ್ಲಿ ಮೂಣಿಯೊಬ್ಬ ದೊಡ್ಡ ದೊಡ್ಡ ಊಟದ ತಟ್ಟಿಗಳೊಡನೆ ಪ್ರವೇಶಿಸುತ್ತಾನೆ. ಆಡಿಗೆಯ ವಾಸನೆ ಗಮ್ಮೆಂದು ಮೂಗಿಗೆ ಬಡಿಯುತ್ತದೆ. ಆಗ ಬಸವ ಎಲ್ಲ ಮರೆತು ಊಟದ ಕಡೆಗೆ ಗಮನವಿಯಿಡುತ್ತಾನೆ)

ಬಸವ— (ಬಹಳ ಕುತೂಹಲದಿಂದ) ಆ ಬಟ್ಟಬ್ಬಾ ಇಷ್ಟು ಸೊಗಸಾದ ಅಡಿಗೆ, ಇಷ್ಟೊಂದು ಸುವಾಸನೆಯ ಊಟ ನನ್ನ ಜನ್ಮದಲ್ಲಿಯೇ ನೋಡಿಲ್ಲ. ಎಷ್ಟು ತರಹ, ಎಷ್ಟಂತೆ, ಇದರಲ್ಲಿ ಏನೇನು ಇನೇಂತ ಲೆಕ್ಕ ಮಾಡೋಕೇ ಆಗೋಲ್ವಲ್ಲ!

ಮೂಣಿ— ಆದಕ್ಕೇನು ಸ್ವಾವಿ, ಅನ್ನ, ಸಾರು, ಸಾಂಬಾರು, ವಡೆ ಪೈಲೊಡೆ, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಚಾರ, ಜೋಂಡ, ಮಜ್ಜಿಗೆ, ಮೋಸರು, ಜಿಲೇಬಿ, ಪಾಯಸ, ಕೇರು, ಕೇಸರಿಬಾತು, ವಾಂಗಿಬಾತು, ಆ ಬಾತು ಈ ಬಾತು—ಅದು, ಇದು.....(ಒಂದೇ ಉಸುರಿಗೆ ಹೇಳ್ತಾ ಇರ್ತಾನೆ.)

ಬಸವ— ಅಯ್ಯಬ್ಬ, ನಿಲ್ಲಿಪ್ಪ, ನೀನು ಪೇಳಿದಷ್ಟು ನಾವೂನಂತೂ ಇಲ್ಲಿ ಇಲ್ಲವೇ ಇಲ್ಲ. ಬಾಳ ಹೇಳಿದೆಯಲ್ಲ, ಅವೆಲ್ಲ ಹೇಗಿರ್ತಾವೋ.

ಮೂಣಿ— ಆವೆಲ್ಲ ತಟ್ಟೆಯಲಿಲ್ಲಿ ಆರ್ಡರ್ ಕೊಟ್ರೇ ತಟ್ಟೆಗೇ ಬಂದು ಬೀಳ್ತೆ. ಅಷ್ಟೇ ಅಲ್ಲ ಸ್ವಾವಿ, ಇನ್ನೂ.....

ವರದ— ಏ ಸೂಣಿ, ವೇಷದಲು ಒಳಹೋಗೋ. ಬಸವ, ನೀನೀಗ ನೊಡಲು ಇದನ್ನು ತಿಂದು ಮುಗಿಸೋ. ಮತ್ತೆ ಎಲ್ಲ ನೋಡೋಣಂತೆ.

ಬಸವ— (ಮೂಣಿ ಹೋಗ್ತಾ ಇರೋದನ್ನ ತಡೆದು). ಇಪ್ಪೆಲ್ಲ ನೀನು ಕೇಳಿಬಿಟ್ಟೆಯಲ್ಲ. ಇಷ್ಟನ್ನೂ ಒಂದೇ ಉಸ್ರಿಗೆ ತಯೂರಿಸೊ! ಆ ನಳ ಮಹಾರಾಯ ನಾರು?

ಮೂಣಿ— (ವಾಪಾಸು ಬಂದು) ನೋಡಿ ಸ್ವಾವಿ, ಅವರೇ ನಮ್ಮ.....

(ಅಷ್ಟರಲ್ಲಿ ದೊಡ್ಡ ಹೊಟ್ಟೆಯ, ಕಪ್ಪು ಬಣ್ಣದ, ಬೆವರಿನಿಂದ ಮೈ, ಬಟ್ಟೆಯೆಲ್ಲ ಒದ್ದೆ ಒದ್ದೆಯಾಗಿದ್ದ ಮನುಷ್ಯ ಬಟ್ಟುಗದೊಂದಿಗೇ ಇವರಿದ್ದಲ್ಲಿ ಬರುವನು. ಬಸವ ಅವನನ್ನು ಕಂಡು ಗಾಬರಿಯಾದವನಂತೆ ಕಣ್ ಕಣ್ ಬಿಡುವನು)

ಮನುಷ್ಯ— ನಾನೇ ಆ ಮಹಾರಾಯ ನನ್ನ ಡಿಸ್ಕಿ ಕೇಳ್ತಿರಾ, ಭಾರತದ ಒಂದನೇ ನಂಬರ್ ಪಾಕ ಶಾಸ್ತ್ರಿ ಪ್ರವೀಣ ಶ್ರೀ, ಶ್ರೀ, ಶ್ರೀ ಭೀಮಸೇನಾಚಾರ್. (ಎಂದು ವಿಸಿಸೆಹುರಿಮಾಡ್ತಾನೆ)

ಬಸವ— ತಿಳೀತು ಸ್ವಾವಿ, ತಿಳೀತು. ನಿಮ್ಮನ್ನು ನೋಡಿದ್ರೇ ನಿನಗೆ ಏನೇನು ಪಾಕ ಮಾಡೋದು ಬರುತ್ತೇ ಎಂದೂ.....

ಮನುಷ್ಯ— ಹ್ಞೆ, ಹ್ಞೆ! ಏದೇನ್ ಕೇಳ್ತಿಯೋ. ಕೇಳು ಮೂಣಿ ಹುಕ್ಕೋ ಮೊದಲುಆ ರೆಕಾರ್ಡು,

(ಮೂಣಿ ರೆಕಾರ್ಡ ಹಾಕುವನು. ಅಷ್ಟಹೆಹ್ಹಹಾ.

ಭೂರಿ ಭೋಜನವಿದು.

ಬಸವ—ಯಪ್ಪೋ! ಇದ್ಯಾರಪ್ಪಾ ಹಿಂಗೆ ಗಂಟ್ಲು ಬಿರಿಯೋ ಹಾಗೆ ಹಾಡಿಕೋದು?

ಮನುಷ್ಯ— ಅವನೇ ನನ್ನ ಮಗ, ಫುಟೋತ್ಕರ್ಷ. ಇಲ್ಲಿಯೇ ಊಟಕ್ಕಿದ್ದ. ನಾವಿರ ಜನಕ್ಕೆ ಮಾಡಿದ್ದನ್ನು ಒಬ್ಬನೇ ತಿಂದು ಕೇಗಿ ಈ ಹಾಡು ಹಾಡ್ಕೊಳ್ತಾ ಇದ್ದ.

ಬಸವ— ಅದಭೂತ, ಅದ್ಭೂತ ಹಾಡು. ನಿಮ್ಮ ಪಾಕಾಂಶದ್ರೆ ಅದಿನ್ನೆಂತೆಂತಾ ಪಾಕ ಇರ್ಬೇಕೋ ಇಷ್ಟಂತ ನನಗೇ ಆರರ್ಯವಾಗ್ತಾ ಇದೆ.

ಮನುಷ್ಯ— ಪಾಕವೊ, ಅದಕ್ಕೇನು, ನಳ ಪಾಕ, ಭೀಮ ಪಾಕ, ಹೆಂಗಸ್ರ ಪಾಕ, ಗಂಡಸ್ರ ಪಾಕ, ಇನ್ನು ಸ್ಪೆಶಲ್ ಆರ್ಡರ್ ಬಂದ್ರೆ ಹುಚ್ಚ ಪಾಕ, ಹಾಸ್ಯ ಪಾಕ ಕವಿ ಪಾಕ, ಮತ್ತೂ ಬೇಕೇ, ಸಿಂಬಳ ಪಾಕ, ಎಂಜಲು ಪಾಕ, ಬೆವರು ಪಾಕ, ವತ್ತೇ ಜಿರಲೇ ಪಾಕ.....

ಬಸವ— ಸದ್ಯಕ್ಕೆ ಸಾಕಪ್ಪಾ ವೂರಾಯೂ ನಿಲ್ಲಿಸೂ.....ನಿಲ್ಲಿಸೂಂದೆ. ಇಷ್ಟೊತ್ತು ನಿನ್ನ ಮಾತು ಕೇಳಿಕೊಳ್ತಾ ತಿಂದದ್ದೂ ನನಗೆ ವಾಂತಿ ಪಾಕ ಮಾಡೋ ಹಂಗಾಗಿ ಬಿಟ್ಟಿದೆ. ಏಳೋ ಏಳೋ ವರದಾಚಾರೀ. ಏನೋ ಇದೆಲ್ಲ ಎಂತಾ ಹೊಲ್ಲಾ. ಏನು ಕತೆಯಪ್ಪಾ.(ಸೀರಿನ ಹತ್ತಿರ ಹೋಗಿ "ವೇಕ್, ವೇಕ್" ಎಂದು ವಾಂತಿ ಮಾಡಿಕೊಳ್ತಾನೆ.)

(ಮುಂದುವರಿಯುವುದು)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಲಿ ಬೀಳ್ಗಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

LICENCE No. 31
Licensed to Post without Prepayment

ಭಾವಿ ಜನಾಂಗ ನಿರ್ಮಾತೆ

ಶಿಕ್ಷಿತ ಮಹಿಳೆಯ ಕರ್ತವ್ಯ

"ಸಂಸರ್ಗಜಾದೋಷ ಗುಣಾಭವಂತಿ" ಎಂಬ ಒಬ್ಬ ತತ್ವಜ್ಞನೂ, ದೂರದ ರ್ಶಿಯೂ ಆದ ಸಂಸ್ಕೃತದ ಕವಿಯ ನೂತಿದೆ. ಸಂಗರ್ಗವು ಮಾನವನ ಜೀವನದ ಮೇಲೆ ಪ್ರಭಾವ ಬೀರುವುದು ಮಾತ್ರವಲ್ಲ ಆದರಿಂದ ಮನುಷ್ಯನಲ್ಲಿ ಗುಣಗಳ ಮತ್ತು ದೋಷಗಳ ಆವಿರ್ಭಾವವೂ ಉಂಟಾಗುತ್ತದೆ. ಮನುಷ್ಯನಲ್ಲಿರುವ ಶಕ್ತಿಗಳಲ್ಲಿ ಅನುಕರಣಾಶಕ್ತಿಯು ವಿಶಿಷ್ಟ ವಾದುದು. ಈ ಶಕ್ತಿಯು ಬಾಲ್ಯದಲ್ಲಿ ಚುರುಕು ಮತ್ತು ತೀವ್ರವಾಗಿರುವುದರಿಂದಲೇ ಹುಡುಗರು ಎಲ್ಲಾ ಮಾತುಗಳನ್ನು ಶೀಘ್ರವಾಗಿ ಕಲಿಯುತ್ತಾರೆ. ಆದರೆ ಕ್ರಮೇಣ ಮನುಷ್ಯನ ಇತರ ಶಕ್ತಿಗಳು ಪರಿಪಕ್ವವಾದಂತೆ ಈ ಅನುಕರಣಾಶಕ್ತಿಯು ಕುಂದುತ್ತಾ ಬರುತ್ತದೆಂದು ಪ್ರಾಜ್ಞರು ಹೇಳುತ್ತಾರೆ. ಇದರಿಂದಲೇ ಮುದ್ದು-ಕರಲ್ಲಿ ಅನುಕರಣೆ ಮಾಡುವ ಶಕ್ತಿಯಿಲ್ಲವೆಂದು ಹೇಳುವದು ಅಕ್ಷರಶಃ ಸತ್ಯವಾಗಿದೆ.

ಈ ಸಂಸರ್ಗವು ದೈಹಿಕ ಮತ್ತು ಮಾನಸಿಕ ವೆಂಬ ದಾಗಿ ಎರಡು ವಿಧವಾಗಿದೆ. ಮೊದಲನೇ ಸಂಸರ್ಗದ ಜ್ಞಾನ, ಜ್ಞಾನೇಂದ್ರಿಯಗಳ ಮೂಲಕ ಮಾತ್ರ ಆಗುತ್ತದೆ. ಆದರೆ ಮಾನಸಿಕ ಸಂಸರ್ಗದ ಜ್ಞಾನ, ಮನಸ್ಸಿನ ಮೂಲಕ ಮಾತ್ರ ಆಗುತ್ತದೆ. ಈ ಸಂಸರ್ಗದಿಂದ ಪ್ರಯೋಜನ ಪಡೆದು ಸಮಾಜ ಪರಿವರ್ತನೆಯನ್ನು ಮಾಡುವುದು ಸಾಮಾನ್ಯ ಮಾತಾಗಿದೆ. ಹೀಗೆ ಮಾಡುವುದು ಈ ಸಮಾಜವೆಂಬ ದೋಣಿಯನ್ನು ನಡೆಸಿಕೊಂಡು ಹೋಗುವ ಅಂಬಿಗರ (ಕರ್ಣಧಾರರ ಮೇಲೆ ಹೊಂದಿಕೊಂಡಿದೆ. ಒಂದು ಉನ್ನತ ಸಮಾಜವನ್ನು ಅಧಃಪತನದ ಅಂಧಕಾರದಲ್ಲಿ ಅದ್ದಿಬಿಡುವುದೂ ಅಧವಾ ಉನ್ನತಿಯ ಉತ್ತುಂಗ ಶಿಖರದಲ್ಲಿ ರಾರಾಜಿಸುವಂತೆ ಮಾಡುವುದು ಈ ಕರ್ಣಧಾರರ ಮೇಲೆ ಹೊಂದಿಕೊಂಡಿದೆ. ಆದುದರಿಂದ ಇಂತಹ ನಾಯಕರು, ಕರ್ಣಧಾರರ ಅವಶ್ಯಕತೆ ಇಂದು ಬಹಳವಿದೆ ಎಂಬುದು ನಿರ್ವಿವಾದವಾದ.

ವರ್ತಮಾನ ಸಮಾಜದಲ್ಲಿ ಸ್ತ್ರೀಯರ ಸಮ.ಸ್ಯೆ ಇನ್ನೂ ಬಗೆ ಹರಿಯದಿದ್ದು ಶೋಚನೀಯ, ಈ ಸ್ತ್ರೀ ಸಮಾಜದ ಕರ್ಣಿಧಾರರು ಸುಶಿಕ್ಷಿತ ಸ್ತ್ರೀಯರು ಆಗಿದ್ದಾರೆ ವರ್ತಮಾನ ಸಮಾಜದಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಒಂದು ಕೋಲಾಹಲವೇ ಎದ್ದಿದೆ. ಇದರಿಂದ ಪ್ರಾಚೀನ ಸಭ್ಯತೆಯ ಯಾವ ಅಂಶಗಳನ್ನು ಇಂದು ಕಾರ್ಯತಃ ಇರಿಸಿಕೊಳ್ಳಬೇಕು? ಯಾವುದು ಬೇಡ? ಮತ್ತು ವಿದೇಶೀ ಸಂಸ್ಕೃತಿಯಲ್ಲಿನ ಯಾವ ವಿಷಯಗಳನ್ನು ಸ್ವೀಕರಿಸಬೇಕು? ಎಂಬುದು ಇಂದಿನವರಿಗೆ ಆರಿಯದುದಾಗಿದೆ. ಎಂಬ ಮಾತನ್ನು ಒಬ್ಬ ವಿಮರ್ಶಕರು ಹೇಳಿದ್ದಾರೆ. ಸಂಸರ್ಗದಿಂದ ಸ್ವಭಾವವಾಗುವಂತಹ ಹೊಸ ಹೊಸ ನಾಧನೆಗಳು ಇಂದು ರೂಪುಗೊಂಡಿವೆ; ಮತ್ತು ಅವು ಮಹತ್ವಪೂರ್ಣವೂ ಆಗಿವೆ

ನಿರೋದೇವಿಯು ಗಿರಿಧರಗೋಪಾಲನಂತಹ ಭಕ್ತಿಪೂರ್ಣ ಕವಿತೆಗಳನ್ನೆಓದಿ ಅನುಕರಿಸುವ ಸ್ತ್ರೀ ಸಮಾಜ ಇಂದು ಇಲ್ಲವಾಗಿದೆ. ಆದರ ಬದಲು ರೇಡಿಯೋದ ಲಿ ಗ್ರಾಮಫೋನಿನಲ್ಲಿ 'ಪ್ರೇಮ ನಗರ್ ಮೇ ಮೈ ಬನಾವೂಂಗೀ ಘರ್', ಎಂಬ ರಾಗ ರಸ, ಪದ್ಯ ರಸವಾಗಿರುವ ಗೀತಗಳು ಇಂದು ಎಲ್ಲಾಕಡೆಗಳಲ್ಲಿ ಅನುಕರಣೆ ಪವಾಗುತ್ತಿರುವುದನ್ನು ನೋಡುತ್ತಿದ್ದೇನೆ.

ಇಂದಿನ ಸಮಾಜದಲಿ ಸ್ತ್ರೀಯರ ಕರ್ತವ್ಯವು ಮನುಷ್ಯರ ಕರ್ತವ್ಯಕ್ಕಿಂತಲೂ ಹೆಚ್ಚಿನದ್ದಾಗಿದೆ. ಯಾಕೆಂದರೆ ಸ್ತ್ರೀಯು ಮೊತ್ತೆತ್ತದ ಹೊಣೆ ಹೊರುವ ದೇವೀ ಸಮಾನ ಸ್ತ್ರೀಯಾಗಿದ್ದಾಳೆ. ತಂದೆಗಿಂತ ತಾಯಿಯೇ ಹೆಚ್ಚು ಸಂತಾನದ ಮೇಲೆ ಪ್ರಭಾವ ಬೀರುವಳು. ಜನನಾ ನಂತರದ ಎರಡುವರ್ಷಗಳು, ಮಗುವಿನ ಆಯುಷ್ಯ ದಲ್ಲೇ ಅತ್ಯಂತ ಮಹತ್ವವಾದುದು

ಅವುಗಳು ಆಗಿವೆಯೆಂದು ಮನೋತತ್ವಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅದು ದರಿಂದ ಈ ಮಾತೃಶಕ್ತಿಯಿಂದಲೇ ಸ್ತ್ರೀಯು ಸಮಾಜದ ವಿಧಾತ್ರಿಯೆಂದೆನಿಸಿಕೊಂಡಿರುತ್ತಾಳೆ.

ಸ್ತ್ರೀಯರ ಹೃದಯ ಬಹುಕೋಮಲ. ದೃಢತೆ ಸ್ತ್ರೀಯಲ್ಲಿ ಒಂದು ಕೃತ್ರಿಮ ಗುಣ. ಯಾಕೆಂದರೆ ಮಗುವಿನಲ್ಲಿರುವ ಕೋಮಲತೆಗೆ ಅವಳೇ ಕಾರಣೀಭೂತಳು ಈ ಜನ್ಮಜಾತ ನೈಸರ್ಗಿಕ ಕೋಮಲತೆಯನ್ನು ಸದುಪಯೋಗದಲ್ಲಿ ಮತ್ತು ದುರುಪಯೋಗದಲ್ಲಿ ವಿನಿಯೋಗಿಸಿಕೊಳ್ಳುವುದು ಸುರುಪರ ಕರ್ತವ್ಯ. ಆದರೆ ಶಿಕ್ಷಿತ ಸ್ತ್ರೀಯರು ತಮ್ಮ ಈ ಕೋಮಲತೆಯನ್ನು ಸಮಾಜದ ಉನ್ನಯನದ ಕಡೆಗೆ, ಜಾಗೃತಿಯ ಕಡೆಗೆ ಕೊಂಡು ಹೋದರೆ ಇಂದಿನ ಸ್ತ್ರೀ ಸಮಾಜ ಮಾತ್ರವಲ್ಲ, ಮನುಷ್ಯ ಸಮಾಜವೂ ಪೂರ್ಣ ರೂಪೇಣ ಸುಧಾರಿಸಿವಾಗಲು ಸಾಧ್ಯವಿದೆ.

ಇಂದಿನ ಸ್ತ್ರೀ ಸಮಾಜದಲ್ಲಿ ಆಗುತ್ತಿರುವ ಅತ್ಯಾಚಾರ. ಅನಾಚಾರಗಳಿಗೆ ಸ್ತ್ರೀ ಸುರುಪರಿಬ್ಬರೂ ಹೊಣೆಗಾರರಾಗಿದ್ದಾರೆ. ಇಂದು ಅವರಿಬ್ಬರ ವರ್ತನೆ, ಸಮಾಜದ ಅಧಃ ಪತನಕ್ಕೆ ಕಾರಣೀಭೂತವಾಗಿದೆ. ವಿಧವಾ, ವಿವಾಹ,ಬಾಲ್ಯ ವಿವಾಹ ಮುಂತಾದ ಕುರೀತಿಗಳು ಇಲ್ಲವಾಗಿವೆಯಾದರೂ ಅದನ್ನು ಮಿಗಿಲಾಗಿಸುವಂತಹ ಕುರೀತಿಗಳು ಇಂದಿನ ಸಮಾಜಕ್ಕೆ ಅಂಟಿಕೊಂಡಿವೆ. ತಾಯಿ, ತಂದೆ, ಅಣ್ಣ, ತಮ್ಮಂದಿರೊಂದಿಗೆ ವರ್ತಿಸುವಂತೆ ಇಂದು ಸ್ತ್ರೀಯು ಪರಪುರುಷನೊಂದಿಗೆ ವರ್ತಿಸುತ್ತಿದ್ದಾಳೆ ಹಿಂದಿನ ಕಾಲದಲ್ಲಿ 'ಪರಪುರುಷನನ್ನು ಕಣ್ಣೆತ್ತಿಯೂ ನೋಡದಿರು' ಎಂಬ ಆರ್ಯೋಕ್ತಿಯಿತ್ತು. ಇದರಿಂದ ಆಂದಿನ ಸ್ತ್ರೀ ಸಮಾಜ ಚೆನ್ನಾಗಿತ್ತು

ಇಂದಿನ ಶಿಕ್ಷಿತ ಸ್ತ್ರೀಯರು ತಮ್ಮ ಭೌತಿಕ ಮತ್ತು ಮಾನಸಿಕ ಸಂಸರ್ಗಗಳಿಂದ ಪರಿವರ್ತನೆಯನ್ನು ಮಾಡುವುದು ಅವಶ್ಯವಾಗಿದೆ. ಅವರಲ್ಲಿ ನಿವೇಕ, ತ್ಯಾಗ ನಿಃಸ್ವಾರ್ಥತೆ, ಮೊದಲಾದುವುಗಳ ಅಗತ್ಯ ತುಂಬಾ ಆಗಬೇಕು. ಆದಕ್ಕಾಗಿಯೇ ಅವರು ತಮ್ಮಈಕ್ಷಣೀಕ ಪ್ರೇಮವನ್ನು ಸಮಾಜವನ್ನು ಬಿಡಬೇಕಾಗಿದೆ. ಇದರಿಂದ ಸಮಾಜಕ್ಕೆ ಸುಖಮಂಟಾಗಿ ಅವರಿಗೂ ಬೃಹತ್ತರ, ಸುಖ-ಶಾಂತಿ ಅಭ್ಯುದಯ ಆಗುವುದರಲ್ಲಿ ಸಂದೇಹವಿಲ್ಲ.

—ಶ್ರೀ ಬಿ. ನಾರಾಯಣ ಜೋಗಿತ್ತಾಯ.

ಅಮೃತ ಬಿಂದು

ಸೂರ್ಯನಿಗೆ ತನ್ನದಾದ ಒಂದೇ ಉಡುಪು ಬೆಳಕು. ಆದರೆ ನೋಡಗಳಿಗೆ ಎರವು ತಂದ ನೂರಾರು ಬಣ್ಣಗಳು!

೦ ೦ ೦

ಸ್ವೈರವು ಮಾತು ಕಲ್ಪನೆಗಳಿಗೆ ಅಂತ್ಯ ಇಲ್ಲದ ಹೆಂಡತಿಯಂತೆ; ನಿದ್ರೆಯು ಅವೆಲ್ಲವನ್ನೂ ಸಹನೆಯಿಂದ ಸಹಿಸಬೇಕಾದ ಗಂಡನಂತೆ!

೦ ೦ ೦

ಕರ್ಮಶೀಲವಾದ ಜೇನುಹುಳ ಹೂವಿನಿಂದ ಜೇನು ಪಡೆದು ಪ್ರತಿರೂಪವಾಗಿ ತನ್ನ ಝೇಂಕಾರ ಸ್ವರದಿಂದ ಹೂವನ್ನು ವಂದಿಸುತ್ತದೆ. ರಂಗುರಂಗಿನ ಪಾತರಗಿತ್ತಿಯು ಹೂವೇ ತನ್ನನ್ನು ವಂದಿಸಬೇಕೆಂದು ಝೇಂಕಾರಪಡುತ್ತದೆ

೦ ೦ ೦

ಎಲ್ಲಾ ತಪ್ಪುಗಳನ್ನು ಹೊರಗಿಡಲೆಂದು ಬಾಗಿಲು ಮುಚ್ಚುವುದಾದರೆ ಸತ್ಯವೂ ಹೊರಗುಳಿಯುವುದು.

೦೦ ೦೦ ೦೦

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಪಿತಾಳೆ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಶ್ರೀಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಬ್ಯಾಂಕ್ ಎಕೌಂಟ್

ಏನು ಅದರ ತಿರುಳು

ವ್ಯವಹಾರ ಜೀವನದಲ್ಲಿ ಯಶಸ್ಸು ಪಡೆಯಬೇಕಾದರೆ, ಹಣ ಕಾಸಿನ ಮೇಲೆ ಪೂರ್ಣ ಹತೋಟಿ ಅವಶ್ಯ. ಒಂದು ಒಳ್ಳೆಯ ಬ್ಯಾಂಕಿನಲ್ಲಿ ಎಕೌಂಟ್ ತೆರೆಯುವುದರಿಂದ ಈ ಹತೋಟಿಯು ಸುಲಭವಾಗುತ್ತದೆ.

ಸಾರ್ವಜನಿಕರಲ್ಲಿ ಬ್ಯಾಂಕ್ ವ್ಯವಹಾರದ ಸಾಮಾನ್ಯ ಜ್ಞಾನವನ್ನು ಹೆರಡುವ ಉದ್ದೇಶದಿಂದ ನಾವು "ಬ್ಯಾಂಕ್ ಎಕೌಂಟ್: ಏನು ಅದರ ತಿರುಳು" ಎಂಬ ಅತ್ಯುಪಯುಕ್ತ ಕೈಪಿಡಿಯೊಂದನ್ನು ಪ್ರಕಟಿಸಿದ್ದೇವೆ.

ನಿಮ್ಮ ಪ್ರತಿಗಾಗಿ ಸಮೀಪದ ಶಾಖೆಗೆ ಅಥವಾ ಪ್ರಧಾನ ಕಾರ್ಯಾಲಯಕ್ಕೆ ಬರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ,
ಉಡುಪಿ, ಮೈಸೂರು ರಾಜ್ಯ.

Edited Printed & Published by K. H. Shetty, at the Navayuga Press, Udipi, S. India.

ಪ್ರಸಿದ್ಧ ಕವಿ
ಎಸ್. ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ಕವಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಎರಡು
ವಿಠಾರಕ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 10

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 15—11—1962 ಗುರುವಾರ

20ನೆ. ಪೈಸೆ
ವಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೧೦

ಯುವಕರ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಷಿಪ್ರ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ—
ನವಯುಗ ಪ್ರೆಸ್,
ಪಾಲುಕೋಟಿ, ಉಡುಪಿ

ಭಾರತದಲ್ಲಿರುವ

ಕಮ್ಯೂನಿಸ್ಟರು ದೇಶಪ್ರೇಮಿಗಳೆ?

ಉಂಡ ಮನೆಗೆರಡು ಬಗೆಯುವ ನಮ್ಮ ದೇಶದ ಕಮ್ಯುನಿಸ್ಟ್ ಪಕ್ಷದ ನೀತಿಗೆ, ಭೋರಣೆಗೆ ಸಮಗ್ರ ಭಾರತದಲ್ಲೇ ಛೀಕಾರ ಧಿಕ್ಕಾರಗಳು ಎಡೆಬಿಡದೆ ಕೇಳ ಬರುತ್ತಿವೆ. ತನಗೆ ಜನ್ಮವಿತ್ತ ತಾಯಿಯನ್ನೇ ಮರೆತು ಮೂರನೆಯವಳನ್ನು ತಾಯಿಯೆಂದು ಸ್ವೀಕರಿಸಿ ಹೊರಟ ನಮ್ಮ ಕಮ್ಯುನಿಸ್ಟರಿಗೆ ನಮ್ಮ ದೇಶದ ಮೇಲೆ ಪ್ರೇಮವಿಲ್ಲ; ವಿಶ್ವಾಸವಿಲ್ಲ ಎಂಬುದನ್ನು ಇತ್ತೀಚಿನ ಘಟನೆಗಳು ಸ್ಪಷ್ಟಪಡಿಸುತ್ತಿವೆ. ಕಮ್ಯುನಿಸ್ಟರಾಗಲೀ ಇತರ ಭಾರತೀಯರೇ ಆಗಲಿ— ಸ್ವದೇಶಕ್ಕೆ ದ್ರೋಹ ಬಗೆದರೆ ಪರಿಣಾಮ ವಿಪರೀತವಾಗುವುದು.

ನಮ್ಮರಾಜ್ಯಾಂಗ ಘಟನೆಯು ವಾಕ್ ಲೇಖನ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಎಲ್ಲರಿಗೂ ಕೊಟ್ಟಿದೆಯೊದರೂನೇಶದ್ರೋಹಿ ಚಟುವಟಿಕೆಗಳನ್ನು ಮಾಡುವವರಿಗೆ ಯಾವ ತರದ ಸ್ವಾತಂತ್ರ್ಯವೂ ಇಲ್ಲವೆಂಬುದನ್ನೂ ನಮ್ಮ ಕಮ್ಯುನಿಸ್ಟರು ತಿಳಿದುಕೊಳ್ಳಬೇಕು. ಜನ್ಮವಿತ್ತ ತಾಯಿಯ ಋಣ ತೀರಿಸಲು ನಮ್ಮಿಂದಾದಷ್ಟು ಸೇವೆಯನ್ನು ತನು-ಮನ-ಧನಗಳಿಂದ ಮಾಡುವುದು ಬಿಟ್ಟು ವೈರಿಗಳೊಂದಿಗೆ ಸಹಮತರಾಗಿ ದೇಶದ ಸ್ವಾತಂತ್ರ್ಯಕ್ಕೆ ಭಂಗತರುವುದು ಆತ್ಮಕ್ಕೇ ಘಾತಕ ಮಾಡುವುದು. 'ಊರಿಗೊಂದು ದಾರಿಯೊದರೆ ಪೋರನಿಗೊಂದು ದಾರಿಯಂತೆ' ಎಂಬ ನಾಣ್ನುಡಿಯಂತೆ ಇಂದು ಸಮಗ್ರ ಭಾರತದ ಜನತೆ ಒಕ್ಕಟ್ಟಿನಿಂದ ಸೈರಿಯನ್ನು ಸದೆಬಡಿಯಲು ಸನ್ನದ್ಧರಾಗುತ್ತಿರುವಾಗ ಇವರು ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದು ತಾನು ಹಾಲು ಕುಡಿದುದನ್ನು ಯಾರೂ ನೋಡಲಿಲ್ಲ ಎಂದು ಕೊಂಡಂತೆ ಭಾರತದಲ್ಲಿದ್ದು ನಮ್ಮ ದೇಶದ ಆಧಾರಗಳಾದ ಬದರೀನಾಥ ಕೇದಾರಗಳನ್ನು ಕಬಳಿಸಲು ಮುಂಬರುತ್ತಿರುವ ಆದ.ರಾಕ್ಷಸಿ ಣಶಾಲೀ ಚೀನೀಯರಿಗೆ ಬೆಂಬಲ ಕೊಡುವುದಾದರೆ ಇದಕ್ಕಿಂತ ಹೀನ ಕೆಲಸ ಭಾರತ ದೇಶದ ಪ್ರಜೆಯೂಗಿ ಮಾಡುವುದು ಬೇರಾವುದೂ ಇಲ್ಲ.

ಕಮ್ಯುನಿಸ್ಟರು ಪ್ರಾರಂಭದಿಂದಲೂ ತಮ್ಮ ವಿರೋಧೀ ಚಟುವ ಟಿಕೆಗಳಿಗೆ ಹೆಸರಾಗಿದ್ದಾರೆ. ಭಾರತ ನೇಶದಲ್ಲಿ ತಾವಿದ್ದರೂ ತಮ್ಮ ಜನ್ಮಭೂಮಿ ಚೀನಾ—ರಷ್ಯಗಳೆಂದು ಬಗೆಯುವ ಈ ಬಂಧುಗಳಿಗೇ ನೆಂದು ಹೇಳಬೇಕೋ ತಿಳಿಯದು. ಯಾವ ಪಕ್ಷವೂ, ಮಹಾ ಪುರುಷನೂ ಧರ್ಮವೂ ದೇಶದ್ರೋಹಿಯೂಗೆಂದು ಉಪದೇಶವಿತ್ತಿದ್ದಿಲ್ಲ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂದು ಜನ್ಮವಿತ್ತ ದೇಶವು ಸ್ವರ್ಗಕ್ಕಿಂತಲೂ ಮೇಲಿಂದೂ ಅದನ್ನು ಪ್ರೀತಿಸಿ ಗೌರವಿಸುವುದು ನಮ್ಮ ಆದ್ಯಕರ್ತವ್ಯವೆಂದೂ ಹೇಳಿರುವಾಗ ಈ ಕಮ್ಯುನಿಸ್ಟರಿಗೆ ಈ ರೀತಿಯ ಮನೋಭಾವ ಹೇಗೆ ಬಂತೊ? ಹೌದು, ಈ ಕಮ್ಯುನಿಸ್ಟರಿಗೆ ಜನಜೀವನವಲ್ಲಿ ಹಾಸುಹೊಕ್ಕಿರುವ ವಿಚಾರಗಳಲ್ಲಿ ನಂಬಿಕೆಯಿಲ್ಲ. ನಮ್ಮ ಭವ್ಯ ಪರಂಪರೆಯ ಪ್ರತೀಕವಾದ ಸಂಸ್ಕೃತಿಯಲ್ಲೇ ಅವರಿಗೆ ವಿಶ್ವಾಸವಿಲ್ಲ. ಇಂಥ ಕ್ರೂರ ಹಾಗೂ ಸ್ವಾರ್ಥ ಮನೋವೃತ್ತಿಯ ಒರಟು ಮನುಷ್ಯರು. ಇವರು ಇವರಿಗೆ ದೇಶಪ್ರೇಮವಿರುವುದಾದರೂ ಹೇಗೆ?

ನಮ್ಮದೇಶದಲ್ಲಿಕಮ್ಯುನಿಸ್ಟರ ಉದಯ ಸ್ವಾತಂತ್ರ್ಯಪ್ರಾಪ್ತಿಯ ನಾಲಕ್ಕು ಪೂರ್ವದಲ್ಲೇ ಆಗಿತ್ತು. ಆದರೆ ಸ್ವಾತಂತ್ರ್ಯ ಸಂಗ್ರಾಮದ ಪರ್ವಕಾಲದಲ್ಲಿ ಇವರವಾತಿಗೆ ಗೌರವ ಸಿಗುವುದರ ಬದಲು ಅಪಮಾನವಾನಾದರಗಳೇ ಸಿಕ್ಕಿದ.ವರಿಂದಲೂ ಅವರು ಸುಮ್ಮುಗಿದ್ದರು. ೧೯೪೨ರಲ್ಲಿ 'ಚಲೇಜಾವ್' ಚಳವಳಿ ಭರದಿಂದ ಸಾಗುತಿತ್ತು. ಬ್ರಿಟಿಷರನ್ನು ಭಾರತದಿಂದ ಕಿತ್ತೆಸೆಯಲು ಭರದಿಂದ ಪೋರಾಟ ನಡೆಯುತಿತ್ತು. ಬ್ರಿಟಿಷರ ಅತ್ಯಾಚಾರಗಳ ಬಗ್ಗೆ ಟೀಕೆಗಳು—ಛೀಕಾರಗಳು ದೇಶದ ಮೂಲೆ ಮೂಲೆಯಲ್ಲೂ ಆಗುತ್ತಿದ್ದರೂ ಅವನ್ನೆಲ್ಲ ಕೇಳಿ ಸುಮ್ಮುಗಿದ್ದು ಕೊಂಡಿದ್ದರು ನಮ್ಮ ಕಮ್ಯುನಿಸ್ಟರು. ಮುಂದೆ ತಮ್ಮ ರಪ್ಪದ ಬಂಧುಗಳು ಅವರನ್ನು ಬ್ರಿಟಿಷರ ವಿರುದ್ಧವಾದ ಚಟುವಟಿಕೆಗಳಲ್ಲಿ ಭಾಗವಹಿಸದೆ ಅವರಿಗೆ ಸಯಾಮ ಮಾಡಬೇಕೆಂದು ವಿನಂತಿಸಿಕೊಂಡಾಗ, ಆ ವಚನವನ್ನು ಶಿರಸಾವಹಿಸಿಕೊಂಡವರು ನಮ್ಮ ಕಮ್ಯುನಿಸ್ಟರು. ಇದರಿಂದಲೇ ನಮ್ಮ ಜನತೆ ಕಮ್ಯುನಿಜಮ್ಮಿನ ಬಗ್ಗೆ ಅಸ್ಥೈರ್ಯ ಹೆದರಿತ್ತು. ಏನು ಬಂದರೂ ಬರಲಿ ಆದರೆ ಈ ಸರ್ವಾಧಿಕಾರ ಮನೋವೃತ್ತಿಯ ಕಮ್ಯುನಿಜಮ್ ಮಾತ್ರಾ ಬೇಡ ಎಂದು ಬೊಬ್ಬಿಡುತ್ತಿದೆ ನಮ್ಮ ಜನತೆ.ಇದು ಬಂದರೆ ತಮ್ಮ ಆಧಾರತನ ಖಂಡಿತ ಎಂದು ಅದು ಚೆನ್ನಾಗಿ ಮನಗಂಡಿದೆ. ತಮ್ಮ ಸ್ವಾರ್ಥಕ್ಕಾಗಿ ದೇಶವನ್ನೇ ಕಡೆಗಣಿಸುವ ಈ ಕಮ್ಯುನಿಸ್ಟರಿಗೆ ಇಂದು ಜನತೆ ಧಿಕ್ಕಾರವಿತ್ತರೆ—ದೇಶದ್ರೋಹಿಗಳೆಂದು ಆಪಾದನೆ ಹೊರಿಸಿದರೆ ಅನುಯಥಾರ್ಥವಾದುದು.

ಇಂದು ರಾಷ್ಟ್ರವು ಗಂಡಾಂತರದಲ್ಲಿದೆ. ಈ ವಿಷಮ ಸನ್ನಿವೇಶದಲ್ಲಿ ಪಕ್ಷ-ಪಂಥಗಳೆಂಬ ಭೇದ ಭಾವನೆಗಳನ್ನು ತ್ಯಜಿಸಿ—ವಿವಾದ-ಜರ್ಚೆಗಳನ್ನು ಬದಿಗಿರಿಸಿ ಪರಸ್ಪರ ಪ್ರೀತಿ-ವಿಶ್ವಾಸಗಳಿಂದ ಕಲೆತು-ಬೆರೆತು ದೇಶ ರಕ್ಷಣೆಗೆ ಬೊಂಕ ಕಟ್ಟುವುದರ ಬದಲು ಚೀನಾವು ಆಕ್ರಮಣ ಮಾಡಿದುದು ಸರಿಯೆಂದು ಹೇಳದರೆ ಯೋರೇ ಇರಲಿ ಅವರಿಗೆ ಭಾರತದಲ್ಲಿ ನಿಲ್ಲಲು ಕ್ಷಣ ಕಾಲವೂ ಸಿಗಲಾರದು. ಚೀನಾವು ಆಕ್ರಮಣಕಾರಿ ದೇಶವೆಂದು ಜಗತ್ತಿಗೇ ತಿಳಿದ ವಿಚಾರ. ದಿನೇ ದಿನೇ ಜೀವಾಣುಗಳಂತೆ ವೃದ್ಧಿಸುತ್ತಿರುವ ಚೀನೀಯರಿಗೆ ನಿಲ್ಲಲು ತಾಣವಿಲ್ಲ. ತಿನ್ನಲು ಸಿಟ್ಟಿಲ್ಲ. ಜಗತ್ತಿನಲ್ಲೇ ಅತ್ಯಂತ ಜನಸಾಂದ್ರತೆಯಿರುವ ದೇಶ ಅದು. ಯುದ್ಧದಲ್ಲಿ ಸಾಕಷ್ಟು ನುರಿತು ಈಗ ಅದು ಶಾಂತಿ ಮಂತ್ರದ ಜನಕನೆನಿಸಿದ ಭಾರತದ ಮೇಲೆ ಮೊದಲು ಸ್ನೇಹ ಹಸ್ತವನ್ನು ಯಾಚಿಸಿ ಈಗ ಉಪಾಯದಿಂದ ಒಂದೊಂದೇ ಕಬಳಿಸುತ್ತಿದೆ. ಚೀನೀಯರನ್ನು ದರೋಡೆಬೋರರು ಎಂದರೆ ಇನ್ನಷ್ಟು ಚೆನ್ನು. ಏಕಂದರೆ ತಾವು ಆಕ್ರಮಣಗಾರರಲ್ಲೆ, ನಾವು ಸಂಧಾನ—ಶಾಂತಿಗಳಿಗೆ ಕದಾ ಸಿದ್ಧರೆಂದು ಹೇಳಿ ಭಾರತವೇ ಆಕ್ರಮಣವಾಡಿದೆಯೆಂದು ಅದು ವ್ಯರ್ಥ ಆರೋಪ ಮಾಡಿವ್ವಾರೆ. ದರೋಡೆ ಮಾಡಲು ಇವರು ಆ ಹುಮಲುಯದ ಗುಡ್ಡಗಾಡುಗಳಲ್ಲಿ ಒದ್ದಾಡುವುದನ್ನು ನೋಡುವಾಗ, ಅದರಲ್ಲೂ ತಮ್ಮ ಸ್ಥೈರ್ಯ-ಧೈರ್ಯಗಳನ್ನು ಪ್ರದರ್ಶಿಸುತ್ತಿರುವುದನ್ನು ಕಾಣುವಾಗ ಇದು ವ್ಯಕ್ತವಾಗುತ್ತದೆ. ನಮ್ಮ ಕಮ್ಯುನಿಸ್ಟರು ಈ ದರೋಡೆಬೋರರಿಗೆ ದಾರಿಯೂಡಿ ಕೊಡುತ್ತಿರುವ ಸಹಾಯ ಮಾಡುತ್ತಿರುವ ಮಿತ್ರರಾಗಿದ್ದಾರೆ. ಆವರು ಹಿಮಾಚಲದಲ್ಲಿ ದರೋಡೆ ಮಾಡುತ್ತಿದ್ದಾರೆ. ಇವರು ದೇಶದ ಒಳಧಾಗದಲ್ಲಿದ್ದು ದರೋಡೆ ಮಾಡಲು ಹೊಂಚು ಹಾಕುತಿದ್ದಾರೆ ಎಂದರೆ ಅತಿಶಯೋಕ್ತಿಯೂಗಲಾರದು.

ನಮ್ಮ ದೇಶದ ಕಮ್ಯುನಿಸ್ಟ್ ಮುಖಂಡರುಗಳು ಎಲ್ಲವರೂ ಸ್ಕೂಲವಾಗಿ ಹೇಳುವುದಿದ್ದರೆ ಚೀನಾದ ಆಕ್ರಮಣವನ್ನು ಸರಿ ಎಂದು ಹೇಳುವವರೇ ಆದರೆ ದೇಶದ ಜನರ, ಸರಕಾರದ ಕಣ್ಣಿಗೆ ಮಣ್ಣೆರಚಬೇಕಲ್ಲ! ಪರಿಸ್ಥಿತಿಯು ಬದಲಾದೊಡನೆಯೇ ಅವರಲ್ಲಿ ಒಂದು ವಿಲ್ಲಕ್ಷಣ ಪರಿವರ್ತನೆಯಾಯಿತು. ಆಕ್ಟೋಬರ ವರೆಗೆ ಚೀನೀಯರು ತಮ್ಮ ಹಕ್ಕಿನ ಸ್ಥಳಗಳನ್ನು ಅಧಿಕಾರದಲ್ಲಿರಿಸಿ ಕೊಳ್ಳಲು ಮಾತ್ರ ಹೀಗೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದ ಆವರು ಮೆಕ್‌ಮೋಹನ್ ರೇಖೆಯೇ ಭಾರತ—ಚೀನಾಗಳ ಗಡಿಯೆಂದು ಒಪ್ಪಿಕೊಂಡು ತದನಂತರ ಚೀನಾವ ಈ ನೆಗ್ಗ ಆಕ್ರಮಣವನ್ನು ಮನಸ್ಸಿಲ್ಲದ ಮನಸ್ಸಿನಿಂದ ಕ್ಷೀಣಸ್ವರದಿಂದ ಖಂಡಿಸಿದರು. ಆದರೂ ಕಮ್ಯುನಿಸ್ಟ್ ಪಕ್ಷದ ಎಲ್ಲಾ ಸದಸ್ಯರ ಸಭೆ ಸೇರಿದಾಗ ಅಲ್ಲಿ ಚೈನಾವನ್ನು ವಿರೋಧಿಸುವ ಬಗೆಗೆ ಒಕ್ಕೊರಲಿನ ಧ್ವನಿ ಕೇಳಿಬರಲಿಲ್ಲ. ಆದು ಆಕ್ರಮಣವಷ್ಟೇ ಮಾಡಲಿಲ್ಲವೆಂದು ಕೆಲವು ಧುರೀಣರು ವಾದಿಸುವಷ್ಟು ಮುಂದುವರಿದರು.

ನಮ್ಮ ದೇಶದ ಕಮ್ಯುನಿಸ್ಟ್ ಧುರೀಣರುಗಳನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಬಹುದು. ಮೊದಲನೆಯ ವಿಭಾಗದಲ್ಲಿ ಕಮ್ಯುನಿಸ್ಟರಾಗಿದ್ದರೂ ದೇಶಕ್ಕಾಗಿ ದುಡಿಯಬೇಕು, ಮಡಿಯಬೇಕು, ಎನ್ನುವವರು ಇವರೆ ಎರತನೆಯವರಲ್ಲಿ ಕಮ್ಯುನಿಸ್ಟ್ ತತ್ವಗಳಿಗೆ ಜೋತುಬಿದ್ದು ಚೀನದ ನಗ್ನ ಆಕ್ರಮಣವನ್ನು ಸಮರ್ಥಿಸುವವರು ಇದ್ದಾರೆ. ಕಮ್ಯುನಿಸ್ಟ್ ಪಾರ್ಟಿಯ ಅಧ್ಯಕ್ಷರಾದ ಶ್ರೀ ಡಾಂಗೆಯವರು ಮೊದಲನೆಯ ಗುಂಪಿಗೆ ಸೇರಿದ ರಾಷ್ಟ್ರೀಯವಾದಿಗಳು. ನಮ್ಮ ತತ್ವ ನೀತಿ ಏನೇ ಇರಲಿ. ದೇಶರಕ್ಷಣೆ ನಮ್ಮ ಆದ್ಯ ಕರ್ತವ್ಯ ಎನ್ನುವ ಅಭಿಪ್ರಾಯ ಆವರದ್ದು. ಶ್ರೀ ಗೋಪಾಲನ್‌ರು ಕೂಡಾ ಇದೇ ಗುಂಪಿ

(೧೩ನೇ ಪುಟ ನೋಡಿರಿ)

ಖೀರಾ
ನೀವು ತಾಳಿಕೆ—ಬಾಳಿಕೆಯನ್ನು—ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಚ್ಚಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ—ಶಾಸ್ತ್ರಿ & ಕೊ, ಹಂಪನಕಟ್ಟೆ ಮಂಗಳೂರು 1
KHIRA

ಬೆಂಗಳೂರಲ್ಲಿ ಬೇಸು

ಲೇಖಕಿ— ಶ್ರೀಮತಿ ದೇವಕಿ ಎಂ. ಶೆಟ್ಟಿ, ಬೀರೂರು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೮

(ವರದಾಚಾರಿ, ಬಸವ, ನರ್ಗಿಸ್ ಮೂವರೂ ಸಿನಿಮೂಕ್ಕೆಂದು ಬೀದಿಯಲ್ಲಿ ಹೋಗುತ್ತಾ ಇರುತ್ತಾರೆ)

ಬಸವ— ಅಲ್ಲ ವರದಾಚಾರಿ, ನೀನು ಕರಕೊಂಡು ಹೋದ ಹೋಟ್ಲು ನೋಡೋಕೆ ಒಳ್ಳೇ ಅರಮನೆ ಇದ್ದಂಗಿದೆ. ಊಟಕ್ಕೆ ಕೂತ ಆ ದೊಡ್ಡ ಹಜಾರ! ಆ ಬ್ಬ ಸಂಡಿವಿಗೆ ಮಾಯೂಂತ ಒಬ್ಬ ಒಂದು ಅರಮನೆ ಕಟ್ಟಿ ಕೊಟ್ಟಿದ್ನಲ್ಲ, ಆ ಕತೆ ಕೇಳಿದ್ದೆ. ಹಂಗೇ ಕಾಣ್ಸುತ್ತಾ ಇತ್ತಲ್ಲ, ಆದ್ರೆ ಆ ಪಾಕಗಳನ್ನ ಕೇಳ ನನಗಂತೂ .....ಇಸ್ಯಪ್ಪಾ, ಅಲ್ಲಾ..... ಒಂದೇ ಉಸ್ರಿಗೆ ಬೂಗಳಿ ಬಿಟ್ಟಲ್ಲ. ಅದೇನೋ ಸಿಂಬ್ಲ ಪಾಕ, ಜಿರಳೇ ಪಾಕಾಂತ್ಲೂ ಅಬ್ಬಬ್ಬ ಅದೇನು ಪಾಕಾನೋ..... ಥತ್.

ವರದ— ಥೂ ನಿನ್ನ, ನಿನಗಿನ್ನೂ ಊಟದ್ದೇ ನೆನಸು. ನಾವು ದಿನಾನೂ ಅದೇ ತಿನ್ನೋದು. ಅದೇ ನನುಗೆ ರುಚಿನೋದೂ ಕೂಡಾ. ಅವನು ಬೊಗಳಿದ್ದನ್ನೆಲ್ಲ ನೀನು ನಂಬೋಕೂ ಆಗ್ಬೇಕು. ಅಲ್ಲ ನಾವಿರಾರು ಜನಕ್ಕೆ ಸಾವಿರ ತರಾ ಮಾಡೋ ಪಾಕ ಯೂವ ಪಾಕ ಬಿದ್ ಹೋಗುತ್ತೋ ಒಟ್ಟೆಯೊಳಗೆ ಯಾರಿಗ್ಗೊತ್ತು? ದೊಡ್ಡ ಬಾಣಲಿಯೊಳಗೆ ಕೇಸರಿ ಬಾತ್ ಮಾಡ್ತಾನೇಂತಿಟ್ಕೊ. ಈ ತಿಕೆಯ ದಿನದಲ್ಲಿ ಜೆನರು ಕೇಸರಿ ಬಾತ್‌ಗೆ ಬೀಳಿದಿದ್ದರೆ ಬೇರೆಲ್ಲಿ ಬೀಳಬೇಕು? ಶೇತವೇನಾದ್ರೂ ಆಯ್ತೂಂದ್ರೆ ಆಗಿಯೇಹೋಯ್ತು. ಮೂಗು ಹಿಡ್ಕೊಂಡು ಸಿನೋದು ಪತ್ತೆ ಚಪಾತಿ ಹಿಟ್ಟು ಕಲ್ಸೋದೂ, ಸುತ್ತು ಮತ್ತ ಇಟ್ಕೊಂಡ ಸಾಮಾನುಗಳಿಗೆಲ್ಲ ಬಿದ್ದದ್ದು ಬಿಸಾಡಿದ್ದೂ ಕೆಲ್ಸದ ಗಡಿಬಿಡಿಯಲ್ಲಿ ಕಾಣ್ಸೋದಾದ್ರೂ ಹೇಗೆ ಹೇಳು. ಇನ್ನೂ ಇಂತದ್ದೇ ಎಲ್ಲ ಸ್ಪಿರಿಟ್‌ನಲ್ಲಿ ಏನೋ ಹಾಡೋದು, ಹಾಡುವ ಗಲಾಟೆಯಲ್ಲಿ ಜಗಳದ ಗಲಾಟೆಯಲ್ಲಿ ಜಿರಳೇನೋ ಇರುವೆನೋ, ಮತ್ತೇನೋ ಎಲ್ಲ ಯೂವ್ದಿದ್ರೋಳಗಾದ್ರೂ ಸೇರ್‌ಕೊಂಡ್ರೆ ಇಲ್ವೋ, ಇದ್ದದ್ದೂ ಸೇರಿದ್ದೂ ಎಲ್ಲಾನೂ ಎಣ್ಣೆಗೆ ಹಾಕಿದಾಂದ್ರೆ ಅಲ್ಲಿಗೆ ಏನು ಕಸರಿದ್ರೂ ಸುಟ್ಟೇ ಹೋಗುತ್ತೇ. ಅದೆಲ್ಲ ಏನೋ ಮಹಾ, ದಿನಾ ತಿಂದ್ಕೊಂಡು ನಾವಿಲ್ವೇನ್ರಿ?

ಬಸವ— ಯಬ್ಬೊಬ್ಬೋ, ಈ ಪಟ್ಟಾಂತಂದ್ರೆ ಇಷ್ಟೇನಾ? ಎಲ್ಲ ಒಳಗೆ ಹುಡುಕಿದ್ರೆ ಹುಳುಕೇ ಇರೋದು. ವೇಟೆ ನೋಡಿದಾಗ ಎಲ್ಲ ನಾಜೂಕು. ಇನ್ನು ಇಲ್ಲಿಯ ಬನಾನಾದ್ರೂ ನಂಬೋದು ಹೇಗೋ. ಏನೋ ವರದಾಚಾರಿ ನನಗಂತೂ ಈಗ ಗಾಬರಿ ಪುಟ್ತಾ ಇವೆ.

ವರದ— (ಉಳು ನುಂಗುತ್ತ) ಅದ್ಕೇ, ನಿನ್ನ ಪುಣ್ಯ ಚೆನ್ನಾಗಿತು. ನಿನ್ನ ಬಾಲ್ಯ ಸ್ನೇಹಿತ ನಾನು ನಿನಗೆ ಸಿಕ್ಕೆದೆ. ಇಲ್ಲವಾದ್ರೆ ನೀನು ಸ್ಟೇಶನ್‌ನಿಂದ್ಲೇ ಹೊರಗೇ ಬರ್ತಾ ಇರ್ಲಿಲ್ಲ.

ಬಸವ—ಅಲ್ಲ ನಿನ್ನ ತಂಗೀ ಹತ್ರಾ...

ನರ್ಗಿಸ್ — (ಕಣ್ಣನ್ನೆಯಿಂದ ಸುಮ್ಮನಿರುವಂತೆ ಸೂಚಿಸಿ) ಅಲ್ಲಣ್ಣ ನನ್ನ ಹತ್ರ ಜೋಪಾನ, ಜೋಪಾನಾ, ಅಂದ್ರು. ನನಗೇನು ಇಲ್ಲಿಯ ನಿಜಾರ ತಿಳೀದಿಲ್ವೇ?

ವರದಾ— ಏನದು ನರ್ಗಿಸ್; ನೋಡು ಬಸವ, ಅವಳ ತಂದೆ ಬಹಳ ಗೌರವಸ್ಥರು. ನನ್ನ ಜತೆಗೆ ನೂತಾ ಅವಳನ್ನ ನಂಬಿಕೆಯಿಂದ ಕಳಿಸ್ದ್ರಾರೆ. ಯೂಕೆ ನಿನಗೇನಾದ್ರೂ ಕೀಟ್ಲೆ ಕೊಟ್ಲೇನು. ನಿನಗೆಷ್ಟು ಸಲ ಹೇಳ್ಬೆಲ್ವೇನರ್ಗಿಸ್. ಮಾನ, ಮರ್ಯಾನೆ ಬಿಟ್ಟು ಏನಾದ್ರೂ ವರ್ತಿಸಿದ್ಯಾ, ನಿನ್ನಪ್ಪ ನಿನ್ನ ಅಲ್ಲೇ ಸಿಗ್ದಾಯ್ಕಾರೆ ತಿಳಿತಾ.

(ನರ್ಗಿಸ್ ಗೌರವಸ್ಥ ಹೆಂಗಸಿನಂತೆ ಇವರಿಗಿಂತ ದೂರದಲ್ಲಿ ತಲೆಗೆ ಮುಸುಕು ಹಾಕ್ಕೊಂಡು ನಡೀತಾಳೆ. ಬಸವ ಉಂಗುರದ ವಿಚಾರ ಸುಮ್ಮನಿರಬೇಕಾಗುತ್ತದೆ.)

ದೃಶ್ಯ ೯

(ಸಿನಿಮಾ ನೋಡಿ ಹಿಂದಿರುಗುತ್ತಾರೆ. ಒಂದು ಹೋಟೆಲ್ ಸಿಗುತ್ತದೆ.)

ವರದಾ— ಅಲ್ಲ ಬಸವ, ನೀನಂತೂ ಅಲ್ಲಿಯ ಊಟ ಇಷ್ಟಪಡಲಿಲ್ಲ. ನಾವಿಲ್ಲೇ ಊಟ ಮಾಡಿ, ಮಲಗೋಕೆ ಅಲ್ಲಿಗೆ ಹೋಗೋಣ. ಆದರೆ..... ನರ್ಗಿಸ್ ಮನೆಗೆ ಹೋಗಲಿ. ಅವಳ ತಂದೆ ಬಹಳ ಸಿಟ್ಟೇಳ್ತಾರೆ. ನಾಳೆ ಒಂಭತ್ತು ಗಂಟೆಗೆ ನಾನೇ ಅವಳ ತಂದೆಯೊಡನೆ ಒಪ್ಪಿಸಿ ಕರ್‌ಕೊಂಡು ಬರ್ತೇನೆ. ಅಂಗಡಿಗಳಿಗೆಲ್ಲ ಹೋಗೋವಾಗ ಬೇಕಾದ ಸಾಮಾನನ್ನ ಆರಿಸೋಕೆ ಹೆಂಗಸಿದ್ರೇ ಒಳ್ಳೇದಲ್ವೆ?

ಬಸವ— ಉಂಗುರದ ನೆನಪಾಗುತ್ತದೆ. ಪುತ್ತೆ ಮರುದಿನ ತೆಗೆದುಕೊಂಡರಾಯ್ತೆಂದು ಸುಮ್ಮನಿರುವನು. (ಸ್ವಗತ) ಛೆ, ನಂಬಿಗಸ್ತರ ಹಾಗೆ ಕಾಣ್ತಾರೆ. ಇವತ್ತು ಬೆಳಗಿಂದ್ಲೂ ಎಷ್ಟು ಕರ್ಚು ಮಾಡ್ತಾ ಇದ್ದಾನೆ ವರದ. (ಪ್ರಕಾಶ) ಅಲ್ಲ ಅವಳು ಹೋಗೋದಾದ್ರೆ ಹೋಗ್ಲಿ, ನನ್ನ ದೇ, ಗಂಟೂ ಒಂದೂ ಕಾಣ್ಸೋದೇ ಇಲ್ಲ. ಏನ್ ಮೂಡ್ಲಪ್ಪಾ. ಇನ್ನೂರು ರೂಪಾಯಿ, 10-15 ರೂಪಾಯ್ನ ಬಟ್ಟೇ, 7-8 ರೂಪಾಯ್ನ ಕೊಡೇ ಒಂದೂ ಕಾಣ್ಸೋದೇ ಇಲ್ವಲ್ಲೋ, ಲೋ ವರದಾಚಾರೀ ಎಲ್ಲಿ ಸತ್ ಹೋದ್ಯೋ, ಅಯ್ಯೋ ನನ್ಸಾಪ್ಪಾ, ನನ್ ಮಗನೇ!

ಹೋಟೇಲ್ ಮೆನೇಜ್ರು— ಯಾರೋ ಅದೂ ಕೆರ್ಚೋದೂ? ವೇಸ್ಟರ್ಸ್ ಗೊತ್ತಿಲ್ಲದೋನೂ, ಲೋ Boy ಬಾರೋ ಇಲ್ಲಿ. ಒಳ್ಕೊಳ್ಳೆ ಮರ್ಯಾದಸ್ತರ್ದು ಬರೋ ಹೋಟ್ಲಲ್ಲಿ ಏನವನ ಕೆಲ್ಸಾಟ ನೋಡೋ. ಹೊರಗೆ ಹೋಗೋಕ್ ಹೇಳೋ.

ಬಸವ— ನಿನ್ನಪ್ಪ ಕೆರ್ಚೋದು ಬೋಳಿ ಮಳ್ಳಳ್ತಿ. ನಾವು ಹೋಟ್ಲಲ್ಲಿಲ್ಲದ ಹೊತ್ತು ನೋಡ್ಕೊಂಡೂ ,ನನ್ ದುಡ್ಡಿನ ಗಂಟ್ನಾ ಹೊಡ್ಕೊಂಗೂ ಈಗ ಯೂಕೆ ಕೆರ್ಚಾನೆ ಆಂತ ಬೊಗಳ್ಕಯೂ? ನಿನ್ನ ಹೋಲಿಸ್ಗೆಗೆ ಹಿಡ್ಸಿ ಕೊಡದಿದ್ರೆ ನಾನು ಲಕ್ಷ್ಮೀಪುರದ ಬಸವಣ್ಣನೇ ಅಲ್ಲ.

ಹೋ. ಮೆ — (ಹತ್ರ ಬಂದು) ಬಾಯ್ಮುಚ್ಚೇ ನೋನ್‌ಸೆನ್ಸ್, ನಿನ್ನ ಏನೂಂತ ತಿಳ್ಕೊಂಡೋ ನೀನೂ. ನಿನ್ನ ಜತೆಗೆ ಹೋದ ಆ ಹೆಂಗಸ್ಸು, ನೀನ್ ಕಟ್ಟಿಕೊಂಡಂಥಾ, ಹೆಂಗಸ್ಸು ಈಗರ್ಧ ಗಂಟೆಗೆ ಮೊದ್ಲು ಬಂದೂ ನಿನ್ನ ರೂಮಿನೆಳಗೆ ಹೋದ್ದು ನೀವು ಇಷ್ಟು ಬರೋದ್ರೊಳಗೆ ಅವಳೂ ನಿನ್ನ ಹೆಸರ್ಗೇಳಿ ಸಾಮಾನು ತಗೊಂಡ್ಬ್ಯೋಸ್ಲು. ನಮ್ಮೇಲೆ ಅನ್ತೀಯೂ ನೀನು! ಹ್ಞೂಂ, ಅಬ್ಬಬ್ಬಾ! ಇವನ ಧೈರ್ಯಕ್ಕೇ.

ಬಸವ— (ಕಕ್ಕಾಬಿಕ್ಕಿಯಾಗಿ) ಹ್ಞಾ!! (ಬಾಯಿಗಲಿಸಿ ಬಿಟ್ಟ ಕಣ್ಣು ಬಿಟ್ಟಂತೆ ಕೂತಿರ್ತಾನೆ) ಅಂ, ಈಗ ಹೋಗ್ತೀನಾ. ಈಗ ನನಗೆ ಹೊಳೀತು. ಅಯ್ಯೋ! ನನ್ನ ಉಂಗ್ರಾನೂ ಹೋಯ್ತಲ್ಲ! ಅವಳೆಲ್ಲಿ ಗಂಟು ಬಿದ್ದಪ್ಪಾ ನಂಗೇ ಇರ್ಲಿ, ಇರ್ಲಿ ವರದಾಚಾರಿ ಬರ್ಲಿ. ಅವಳ ಮುಡಿ ಹಿಡಕ್ಕಂಡ್ ಎಳ್ದ್‌ಕೊಂಡ್ಬಂದೂ ನನ್ನ ಕಾಲ್ಹತ್ತಿ ಬೇಳ್ಸಿ, ದನ್ಮುಯ್ಯಂತ ಹಾಕ್ಸಿ, ನನ್ನ ಸಾಮಾನನ್ನ ನಾ ಪಡೆಯುದಿದ್ರೇ ನನ್ನ ಹೆಸ್ರು ಲಕ್ಷ್ಮೀಪುರದ ಬಸವಣ್ಣನೇ ಅಲ್ಲ.

ಹೋ. ಮೇ— ಯಾರವನು ವರದಾಚಾರೀಂದ್ರೆ? ಅವನು, ನಿನ್ ಜೆತೆಗಿದ್ದಲ್ಲಾ ಅವನೇ? ಸರಿ...ಸರಿ. ಅವನೊಬ್ಬ ಸಿಕ್ ಪಕಡಾರಿ ಸಿಂಗಣ್ಣನಾಗಿದ್ದೇಕು. ಅವಳು ಅವನ ಕೇಸೂ. ಆಗಿದ್ದೇಕು. ನಿನಗೆ ಹೇಗೆ ಗಂಟ್ ಬಿದ್ದಪ್ಪಾ ಅವರೂಂದೆ. ಹಾಗಾದ್ರೆ ಇನ್ನು ನೀನು ತೆಪ್ಪಗೆ ನಿನ್ ಊರಿಗೆ ಹೋಗೋದೇ ನಾಸಿ.

ಬಸವ— ಅಯ್ಯಯ್ಯೋ ದೇವ್ರೇ ನಮ್ಮಪ್ಪಾ (ಎದೆ ಬಡ್ಕೊಳ್ತಾ) ಇನ್ನೂರು ರೂಪಾಯಿ ಗಂಟೇ ಹೋಯ್ತಲ್ಲ. ಅರಸಿ

(ಇಂದೇ ಸುಟ ನೋಡಿರಿ)



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಶೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪೂಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಲೇಖಾಂಕ ೯

ರಾಜಾಜಿಯವರ ಕಲಾಸಿದ್ಧಿ

ಶಾಂತಿದೇವಿ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ಸತ್ಯಂ ಶಿವಂ ಸುಂದರಂ ಎಂಬ ಈ ಮೂರು ತತ್ವಗಳು ಸಂಗಮಗೊಂಡು ರ ಚಿತವಾದ ಸಾಹಿತ್ಯವು ಸತ್ ಸಾಹಿತ್ಯ ವೆಂದು ಹೇಳಿಸಿಕೊಳ್ಳುವುದು- ಸತ್ಯ ಘ ಟನೆಗಳನ್ನು ಶಿವ, ಸಿದ್ಧಾತ್ ಲೋಕ ಕಲ್ಯಾಣದ ಉದ್ದೇಶದಿಂದ ನಿರೂಪಿಸು ವಾಗ ಕಲಾ ಸೌಂದರ್ಯದಿಂದ ಅವುಗ ಳನ್ನು ಸುಂದರವಾಗಿ ಮೂರ್ತಿಡಿಸಬೇಕಾ ಗುವುದು. ಶ್ರೀ ರಾಜಾಜಿಯವರ "ಶಾಂ ತಿ ದೇವಿ" ಎಂಬ ಈ ಕಥೆಯು ಇದಕ್ಕೊಂ ದು ನಿದರ್ಶನದಂತಿರುವುದು.

ಅತ್ತೆ ಸೊಸೆಯರ ನಡುವೆ ಬರುವ ವೈಷಮ್ಯವು ಸಹಜವೂ ಸತ್ಯವೂ ಆಗಿರು ವುದು. ಇದನ್ನು ಶ್ರೀ ರಾಜಾಜಿಯವರು ತಮ್ಮ ಕಥನ ಕಲಾಚಾತುರ್ಯದಿಂದ ಸುಂದರಗೊಳಿಸಿರುವರು. ಈ ಕಥೆಯ ಕೊನೆಯಲ್ಲಿ—ಅತ್ತೆ ಅತ್ತಿಗೆ ಮತ್ತು ಗಂ ಗಂಡನಿಂದ ನೊಂದು ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುವ ಸಮಾ ಜದ ಸೊಸೆಯಂದಿರಿಗೆ, ಈ ಕಥಾನಾಯ ಕಿ ಶಾಂತಿ ದೇವಿಯ ಮೂಲಕ ಶ್ರೀ ರಾ ಜಾಜಿಯವರು ಆದರ್ಶ ಮಾರ್ಗದರ್ಶನ ಮಾಡಿಸುತ್ತಾರೆ. ಸಮಾಜ ಕಲ್ಯಾಣದ ಉದಾತ್ತ ಧ್ಯಾನೆಯಿಂದ ತುಂಬಿದ ಶಾಂತಿ ದೇವಿಯ ಪಾತ್ರವು ಓದುಗರ ಮನದಲ್ಲಿ ಅಚ್ಚಳಿಯದೆ ಉಳಿಯುವಂತಿ ದೆ! ಇಂದು ಈ ಕಥೆಯು 'ಸತ್ಯಂ' ಶಿವಂ' 'ಸುಂದರಂ' ಎಂಬೀ ತತ್ವತ್ರಯಗಳಿಂದ ಕೋಭೆಗೊಂಡಿದೆ.

ಹದಿನಾಲ್ಕು ವರುಷದ ಮುಗ್ಧ ತರು ಣಿ ಶಾಂತಿ ದೇವಿಯು, ಲಕ್ಷ್ಮೀ ಎಂಬ ಶುಭ ನಾಮದಿಂದ ನಟೇಶನ ಸಾಧಾರ್ಯ ಲಕ್ಷ್ಮಿಯಾಗಿ ಅತ್ತೆಯ ಮನೆಗೆ ಬಂದ ಳ. ಲಕ್ಷ್ಮಿಯ ಅತ್ತೆಯ ಮನೆತನ ಪು ರಾತನ ಸಂಪ್ರದಾಯಗಳಿಂದ ಕೂಡಿದು ದಾಗಿತ್ತು. ಅತ್ತೆ ಯಾವ ಕೆಲಸವನ್ನು ಹೇ ಳಿದರೂ ಪುಟ್ಟ ಸೊಸೆ—ಲಕ್ಷ್ಮಿ ನ ಗು ನ ಗು ತ್ತ ಸ್ನೇಹ ಚಾತು ರ್ಯ ಗಳಿಂದ ಪೂರೈಸುತ್ತಿದ್ದಳು. ಆದರೆ ಚಿಕ್ಕಂದಿನಿಂದಲೂ ಆಕೆಯು ಒಂದು ಕೈಗೆ ಸ್ವಲ್ಪ ನೋವು ಇದ್ದ ಕಾರಣ, ಬಾ ವಿಯಿಂದ ಹೆಚ್ಚಾಗಿ ನೀರು ಸೇದಿದರೆ ನೂ ತ್ರ-ಆ ಕೈ ಊದಿಕೊಳ್ಳುತ್ತಿತ್ತು. ಆದರೆ ಇಲ್ಲಿ ಗಂಡನ ಮನೆಯಲ್ಲಿ ಲಕ್ಷ್ಮಿಯೇ ಹೆ ಚ್ಚಾಗಿ ನೀರೆಳೆಯಬೇಕಾಗಿತ್ತು. ಹೀಗೆ ನೀರೆಳೆದು ಆಕೆಯು ಕೈ ಊದಿಕೊಂಡಿತು. ಒಂದು ದಿನ ಆಕೆ, ತಾನು ನೀರೆಳೆಯುವಾ ರದ ಸ್ಥಿತಿಯನ್ನು ಮೆಲ್ಲನೆ ಗಂಡನ ಕಿವಿಗೆ ಹಾಕುತ್ತಾಳೆ. ತನ್ನ ಪುಟ್ಟ ಹೆಂಡತಿಯ ಕಷ್ಟವನ್ನು ತಿಳಿದ ನಟೇಶನು ಬೆಳಗ್ಗೆ ವ್ಯಾಪಾರದ ಬದಲಿಗೆ ತಾನೇ ನೀರೆಳೆ ದು ತುಂಬಿಸುತ್ತಾನೆ. ಈ ವಿಷಯ ಒಂದೆ ರಡು ದಿನಗಳೊಳಗೆ, ನಟೇಶನತಾಯಿಗೂ ವಿಧವೆ ಅಕ್ಕನಿಗೂ ತಿಳಿಸುತ್ತಾರೆ. ಆಗ ನಟೇಶನ ತಾಯಿ—'ಮನೆಯ ಸೊ ಸೆ ನೀರೆಳೆಯಬೇಕು! ಗಂಡಸರು ನೀರೆಳೆ ಯುವುದು ಎಷ್ಟು ನಾಚಿಕೆಗೇಡು!" ಎಂದ ಳು. ನಟೇಶನ ಅಕ್ಕ— 'ಆಕೆ ರಾಣಿಯ ಹಾಗೆ ಕ.ಳಿತುಕೊಳ್ಳಲಿ! ನಾನು ನೀರೆಳೆ ಯುತ್ತೇನೆ!' ಎಂದು ಹಂಗಿಸಿದಳು.ಇದನ್ನು ರಿತ ಲಕ್ಷ್ಮಿ ಮುಂಜಾನೆ, ಯಾರಿಗೂ ಎ ಚ್ಚರವಾಗುವ ಮೊದಲೇ ತಾನೆದ್ದು ನೀರು ತುಂಬಿಸಿ ಯಾರಿಗೂ ತಿಳಿಯದಂತೆ ಬಂದು ಮಲಗುತಿದ್ದಳು. ಎರಡು ಮೂರು ದಿನ ಹೀಗೆ ಮಾಡುತ್ತಿರುವಾಗ ಆಕೆಯ ಕೈ ಊದಿಕೊಂಡಿತು. ಜ್ವರ ಬರತೊಡಗಿತು. ಈಗ ತಾಯಿ-ಮಗಳು ಸೇರಿ, ಸೊಸೆ ಲ ಕ್ಷ್ಮಿಗೆ ಸಹಸ್ರನಾಮ ಮಾಡುತ್ತ ನಟೇಶ ನೊಡನೆ—'ಅಯ್ಯೋ! ನಮಗೆ ಈ ಕೈ ನೋವಿನ ರೋಗದ ಹುಡುಗಿ ಏಕೆ ಬೇಕಿ ತ್ತಪ್ಪಾ? ಈಕೆಯನ್ನು ತೌರುಮನೆಗಾದರೂ ಕಳುಹಿಸಿಬಿಡು!' ಎಂದು ದಿನ ದಿನವೂ ಕಿರಿ ಕಿರಿ ಮಾಡತೊಡಗಿದರು. ತನ್ನ ಆಫೀಸ್ ಕೆಲಸದಿಂದ ಬಳಲಿ ಮನೆಗೆ ಮ ರಳುತ್ತಿದ್ದ ನಟೇಶನಿಗೆ ಒಂದು ಗಳಿಗೆಯೂ ಸಂತೋಷವಿಲ್ಲದಾಯಿತು. ಆತ ತನ್ನ ಹೆಂ ಡತಿಯ ಅಸಹಾಯಕ ಸ್ಥಿತಿಗೆ ಮರುಗಿ ತಾಯಿಯೊಡನೆ ವಾಗ್ವಾದ ಮಾಡಿಯೂ ಕೊನೆಗೆ ತಾನೇ ಸೋತು ತನ್ನ ಪೂರ್ವನಿ ಗೆ—'ನಿಮ್ಮ ಮಗಳಿಗೆ ಸೌಖ್ಯವಿಲ್ಲ! ಬಂ ದು ಕರೆದುಕೊಂಡು ಹೋಗಿ!' ಎಂದು ಕಾಗದ ಬರೆಯುತ್ತಾನೆ. ಆಳಿಯನ ಕಾಗ ದವನ್ನು ನೋಡಿ ಹೊರಟುಬಂದ ಲಕ್ಷ್ಮಿ ಯ ತಂದೆಗೆ ನಟೇಶನ ತಾಯಿ— 'ನಿನ್ನ ಮಗಳು ಹುಟ್ಟುರೋಗದವಳು! ನಮ್ಮ ಚಿನ್ನ ದಂತಹ ಹುಡುಗನಿಗೆ ಈ ಶನಿಯನ್ನು ಏಕೆ ತಂದೆಯೋ? ಎಂದು ಮುಖದ ಮೇಲೆ ಉಗುಳಿದಂತೆ, ಹೇಳಿ ಬಿಡುತ್ತಾಳೆ! ಸಹನೆಯ ನಿಧಿಯಂ ತಿದ್ದ ಲಕ್ಷ್ಮಿಯ ತಂದೆ, 'ಹಾಗೇನೂ ಹುಟ್ಟು ರೋಗ ಅವಳಿಗಿಲ್ಲ! ಹೆಚ್ಚು ಕೆಲ ಸ ಮಾಡಿದರೆ ಒಂದು ಕೈ ನೋವಾಗ್ತ ತ್ತೆ, ಅಷ್ಟೆ'. ಎಂದು ಸೀಳಿ, ಸುಡುವಂತಿ ದ್ದ ಜ್ವರದಲ್ಲಿರುವಾಗಲೇ ಮಗಳನ್ನು ಕರೆ ದುಕೊಂಡು ಹೋಗುತ್ತಾನೆ ಸಾಕಿ ಸಲಹಿ ದ ತಂದೆಗೆ ಮಗಳನ್ನು ಕೈಬಿಡಲಾದೀತೇ? ಶ್ರೀ ರಾಜಾಜಿಯವರು ಈ ಘಟನೆಯನ್ನು ನಿರೂಪಿಸಿದ ರೀತಿ ಎಷ್ಟು ಹೃದಯ ಸ್ಪ ರ್ಶಿಯಾಗಿರುವುದೆಂದರೆ, ಯಾವ ಕನ್ಯಾಸಿ ತೃವಿಗೂ ಈ ಸ್ಥಿತಿ ಬರಲಾಗದು ಎಂದೆ ನಿಸುತ್ತದೆ.

ತಂದೆಯ ಮನೆಗೆ ಹೋದ, ಲಕ್ಷ್ಮಿ (ಶಾಂತಿ) ಕೆಲವು ಕಾಲದ ಬಳಿಕ ಹುಶಾ ರಾಗುತ್ತಾಳೆ. ಬಳಿಕ ಆಕೆಯನ್ನು ಕರೆದು ಕೊಂಡು ಹೋಗುವಂತೆ ಸ್ವಾರ್ಥಿಸಿ ಮಾ ವ ಅಳಿಯನಿಗೆ ಕಾಗದ ಬರೆಯುತ್ತಾನೆ. ಆದರೆ, ಅಪ್ಪರೊಳಗೆ, ತಾಯಿ-ಮಗಳು ಸೇರಿ, ಸಂಧಾನ ನಡೆಸಿ,—'ಲಕ್ಷ್ಮಿಯ ನ್ನು ಕುರೂಪಿ, ಹೆಮ್ಮಾರಿ! ಬಜಾರಿ!' ಎಂ ದು ಹೇಳುತ್ತ, ನಟೇಶನ ಮನದಲ್ಲಿ ತಿರ ಸ್ಕಾರವನ್ನು ಹುಟ್ಟಿಸಿ, ಬಳಿಕ, ತನ್ನ ತ ಮ್ಮನ ಮಗಳು ವಿಮಲಾಕ್ಷಿಯನ್ನು ಮ ನೆಗೆ ಕರೆಸಿಕೊಂಡು:-'ನೋಡೋ! ನಟೇ ಶ! ಈ ನಮ್ಮ ಹುಡುಗಿ! ಎಂಥ ಚಿನ್ನದ ಬೊಂಬೆಯಂತಿದ್ದಾಳೆ!' ಎಂದು ಹೇಳುತ್ತ, ತನ್ನ ತಮ್ಮನ ಮಗಳು ವಿಮಲಾಕ್ಷಿಯನ್ನು ನಟೇಶನಿಗೆ ಎರಡನೆಯ ಮದುವೆ ಮಾಡಿ ಸಿ ತೃಪ್ತಿಯ ಉಸಿರು ಬಿಟ್ಟಳು! ನಟೇಶನ ತಾಯಿ! ವಿಮಲಾಕ್ಷಿ ನಟೇಶನ ಪತ್ನಿಯಾ ದಳು.

ವರ್ಷಗಳೆರಡು ಉರುಳಿದುವು ಸಾಧ್ವಿ ಶಾಂತಿ ದೇವಿಯು ನಿತ್ಯವೂ ಆಂಜನೇಯ ನ ಗುಡಿಗೆ ಹೋಗಿ ಭಕ್ತಿಯಿಂದ ನಮಸ್ಕ ರಿಸಿ, ತನ್ನ ದುಃಖಭಾರವನ್ನು ಇಳಿಸಿಕೊ ದು ಪ್ರಾರ್ಥಿಸತೊಡಗಿದಳು. ಲಕ್ಷ್ಮಿಯ ತಂದೆ, ತನ್ನ ಮಗನೊಡನೆ,—'ಹೇಗಾದರೂ ಮಾಡಿ, ಶಾಂತಿಯನ್ನು ಗಂಡನ ಮ ನೆಗೆ ಕಳುಹಿಸುವ ಪ್ರಯತ್ನ ಮಾಡು!" ಎಂದು ಹೇಳಿ, ಕೊನೆಯ ಉಸಿರನ್ನೆಳೆದ ನು! ನಿರ್ಭಾಗ್ಯೆ ಶಾಂತಿಗೆ ತಂದೆಯು ಮ ರಣದಿಂದ ಗಾಯದ ಮೇಲೆ ಬರೆ ಎಳೆದಂ ತಾಯಿತು! ಶಾಂತಿಯ ಅಣ್ಣ ಕೊನೆಯ ಪ್ರಯತ್ನವೆಂದು, ನಟೇಶನಲ್ಲಿಗೆ ಬಂದಾಗ- ನಟೇಶನ ತಾಯಿ-ಪಾಪಗೂ ಅಕ್ಕ 'ನಿನ್ನ ತಂಗಿಕುಲಟೆ! ನೀಚ ಬುದ್ಧಿಯವಳು! ಅವ ಳಮುಖವನ್ನೂ ಸಹ ನಾವು ನೋಡಲಾರೆ ವು!' ಎಂದು ಮುಂತಾಗಿ ಹೇಳಬಾರದಿ- ರುತುಗಳನ್ನು ಹೇಳಿದರು. ತಾಯಿ ಮ ತ್ತು ಅಕ್ಕನ ಕೈಗೊಂಬೆಯಾದ ನಟೇಶನೂ ಶಾಂತಿಯನ್ನು ನಿರಾಕರಿಸಿದನು.

ಆ ಊರಿನ ಕೆಲವು ದುಷ್ಟ ಹೆಂಗುಸ ರು—'ಅಲ್ಲ! ಇಷ್ಟು ಯೌವನದ ಹೆಣ್ಣು ಗಂಡನನ್ನು ಬಿಟ್ಟು ಉದು ಹೇಗೆ ವರ್ಷಗ ಟ್ಲೆ ಸುಮ್ಮನಿರಬಲ್ಲಳು?' ಎಂದು ಮುಂ ತಾಗಿ ಹೇಳ ತೊಡಗಿದರು. ಆಗ ಸಾಧ್ವಿ ಯಾದ ಶಾಂತಿಗೆ ಆತ್ಮಹತ್ಯೆಯ ಹೊರತು ಬೇರೆ ದಾರಿಯೇ ಇಲ್ಲದಂತಾಯಿತು! ಹೀ ಗೆ ಜೀವನದಲ್ಲಿ ನಿರಾಸೆ-ಹೊಂದಿದ ಶಾಂ ತಿ ದೇವಿಯು, ಮತ್ತೊಂದು ದಿನ ಕೆರೆಗೆ

(೦೦ನೇ ಪುಟ ನೋಡಿ)

ಪುತ್ತೂರು ಡಿ. ಮು ಕೋರ್ಟಿನಲ್ಲಿ

O. S. 364/61 R. E. P. 214/62

ಬಾಬ್ಲಬೆಟ್ಟು ತಿಂಮಪ್ಪ ಗೌಡ —ವಾದಿ ಅರ್ಜಿದಾರ

ಸುಬ್ರಾಯಗೌಡ— ನೆಕ್ಕಾಜಿ ರಾಮಪ್ಪ ಗೌಡರ ಮಗ—ಗುತ್ತಿಗಾರು ಗ್ರಾಮ—ಈಗ ಮಂಗಳೂರು ಶಹರ ಕಡ್ರಿಯಲ್ಲಿ ಲೋರಿ ಡ್ರೈವರನಾಗಿರುತ್ತಾನೆ —ಎದ್ರಿ-ಪ್ರತಿವಾದಿ.

ಸದ್ರಿ ಆಸ್ಪಜಾರಿಯಲ್ಲಿ ಎದ್ರಿಯ ಜಾಬ್ತು ಜಪ್ತಾದ ಲೋರಿಯನ್ನು ಯೇಲಯಿಗೆ ಆಪೇಕ್ಷಿ ಯೇಲಂ ಇಸ್ತಿಹಾರು ಪಗ್ಗೆರೆ ಹಾಜ್ರಿ ಪಡಿಸಿ ಅದರ ಯೇಲಮಿನ ಪರತ್ತುಗಳನ್ನು ನಿರ್ಣಯಿಸಲಿಕ್ಕೆಂತ ತಾ. 28-11-62ಕ್ಕೆ ನೋಟೀಸಿನ ವ್ಯಾಪ್ತಿ ಇಟ್ಟಿರುವದ್ರಿಂದ ಆ ವ್ಯಾಪ್ತಿ ದಿನ ಪ್ರತಿವಾದಿಯು ತನ್ನ ಅಕ್ಷೇಪ ಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತ ಪ್ಪಿದರೆ ಪ್ರತಿವಾದಿ ಎದ್ರಿಯನ್ನು ಶಿವಾಯಿ ಎಂತ ನೂಡಿ ಮುಂದಿನ ತಕ್ಕಿಯಂಪ ಕೇ ಯೂನಿಸಲಾಗುವದು ಎಂತ ಈ ಕೋರ್ಟಿ ನ REA 705/62ನೆ ಅರ್ಜಿ ಹುಕುಂ ಸ್ಪ ಕಾರ ಈ ನೋಟೀಸು ಮಾಡಿಸಿಯದೆ.

(Sd) B. Ramachandra Rao
M. A. B. L.
Pleader for Petitioner

ಪುತ್ತೂರು, ತಾ. 6 - 11 - 62

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಹೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:			ರೂ. ನ.ಪೈ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ	ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,,	,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳ ವರೆಗೆ	,,	,,	5 00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,,	,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,,	,,	5-50
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು	,,	,,	3-25

ನಿಮ್ಮ

ನಿವಾಸಿಕ ಉಳಿತಾಯವನ್ನು ವಾಸಿಕ ಉಳಿತಾಯವನ್ನು

ಹಣ ಡಿಪೋಸಿಟುಗಳಲ್ಲಿ ಕ್ಯಮುಟೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 365/62 O. S. 168/60

ಚಂದಯ್ಯ ಪಡಿವಾಳ —ಅರ್ಜಿದಾರ,

ಸೋಮಯ್ಯ ಸಪಲ್ಯ ಕೂಡಾ

—ಎದ್ರಿರು.

ಸದ್ರಿ ಎದ್ರಿ ಶೇಷಗಿರಿರಾವ್ ಜನಾರ್ಧನ ಯ್ಯನವರ ಮಗ. ಬೆಳ್ತಂಗಡಿ ತಾಲೂಕು ಲ್ಯಲಬಾಮ

—ಇವರಿಗೆ ತಿಳಿಸುವುದೇನೆಂದರೆ

ನಿಕ್ಕಿಗೆ ಜವಾಬ್ದಾರಿ ಇರುವ ಆಸ್ತಿ ಏಲಂ ಬಗ್ಗೆ ವಾಕಲು ಮಾಡಿದ ಈ ಅನುಲಬ್ಧಾರಿ ಮ ತ್ತು ಏಲಮಿಗೆ ನಿಲ್ಲುವರೆ ಪರ್ಮಿಶನ್ ಕೊ ಡಿಸ ಬೇಕೆಂತ ಬಗ್ಗೆರೆ ವಾಕಲು ಮಾಡಿದ REA 443/62ನೆ ಅರ್ಜಿ ಕೂಡಾ ತಾ 21—11—62ಕ್ಕೆ ಇರುವುದರಿಂದ ನಮಗೇ ನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉ ದಕರಿಸಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈ ರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್,
ಅರ್ಜಿದಾರನ ವಕೀಲ್

ಪುತ್ತೂರು, ತಾ. 1-11-62

ರಾಷ್ಟ್ರಕಲ್ಯಾಣ ಹೇತು

ಮದ್ಯಪಾನ ಪ್ರತಿಬಂಧ

ಇಂದು ಸಮಗ್ರ ಭಾರತದಲ್ಲಿ ಮದ್ಯಪಾನದ ಒಗ್ಗ ಕೋಲಾಹಲ ಆಗುತ್ತಾ ಇದೆ ಮಂತ್ರಿಗಳು ಮದ್ಯಪಾನ ನಿಷೇಧವು ದೇಶದ ಕಲ್ಯಾಣದ ನಾಂದಿಯೂಗಿದೆ ಎಂದು ಪೋಷಿಸುತ್ತಿದ್ದಾರೆ. ಮದ್ಯಪಾನವು ಮಾನಸಿಕ ಹಾಗೂ ಶಾರೀರಿಕ ಅಧೋಗತಿಯನ್ನೆಂಟುಮಾಡಿ ಜನತೆಯನ್ನು ಹಾಳು ಮಾಡುತ್ತಿದೆ ಇದಕ್ಕೆಂತ ಕೆಟ್ಟ ಆಸಹ್ಯ ಮೂದಕ ಪದಾರ್ಥ ಇನ್ನೊಂದಿಲ್ಲ ನಮ್ಮ ದೇಶದಲ್ಲಿ ಮದ್ಯಪಾನಕ್ಕೋಸ್ಕರ ನಮ್ಮ ಜನತೆ ಪಡುತ್ತಿರುವ ಕಷ್ಟ, ಮಾಡುತ್ತಿರುವ ವೆಚ್ಚ ಅಮಿತವಾಗಿದೆ.

ಇಂಗ್ಲೆಂಡಿನಲ್ಲಿದ್ದ ದುಷ್ಟಟಗಳನ್ನು, ಮೂದಕ ಪದಾರ್ಥಗಳನ್ನು ನಮ್ಮ ದೇಶದಲ್ಲಿ ಬಳಕೆಗೆ ತಂದು ಸಫಲರಾಗಿ ಜನತೆಯ ಆದಪತನಕ್ಕೆ ಕಾರಣೀಭೂತರಾದ ಸುಜ್ಞಾತ್ಮರು ನಮ್ಮ ಬ್ರಿಟಿಷ್ ಪ್ರಭುಗಳು ದುಷ್ಟಟಗಳು ಪ್ರಿಯವಾಗಿ ನಾವದರ ಬಳಕೆಗೆ ಬೀಳುವುದು ಬಹು ಸುಲಭ ನಮ್ಮ ದೇಶದ ಜನತೆ ಅಸಹಾಯವಾಗಿ ಮದ್ಯಪಾನವನ್ನು ಸ್ವೀಕರಿಸಿ ಅದರ ಬಲೆಗೆ ಬಿತ್ತು ಭಾರತೀಯರ ದೌರ್ಬಲ್ಯವನ್ನು ಚೆನ್ನಾಗಿ ಅರಿತ ಬ್ರಿಟಿಷರು ವಿವಿಧ ಮೂದಕ ಪದಾರ್ಥಗಳ ಪ್ರಚಾರವನ್ನು ಯಶಸ್ವಿಯಾಗಿ ಮಾಡಿದರು ನಮಗೆ ಸ್ವಾತಂತ್ರ್ಯ ಸಿಕ್ಕವಾಗ ದೇಶದಲ್ಲಿ ಜನತೆಯೂ ಸ್ವಚ್ಛಂದವಾಗಿ ಮದ್ಯ ತಯಾರಿಸಿ, ಸೇವಿಸುವಷ್ಟು ಮುಂದೆ ಬಂದಿತ್ತು ಬ್ರಿಟಿಷರ ಈ ಕುತ್ಸಿತ ಕಾರ್ಯವನ್ನು ಎತ್ತು ನಿಂದಿಸಿದರೂ ಅಷ್ಟೇ ಸರಿ ಸ್ವಾತಂತ್ರ್ಯ ಪ್ರಾಪ್ತವಾದೊಡನೆಯೇ ನಮ್ಮ ಸರಕಾರಕ್ಕೆ ಈ ಸಮಸ್ಯೆಯೂ ಒಟ್ಟಿಗೇ ಬಂದಿತು

ಮನುಷ್ಯನಲ್ಲಿ ದುರ್ಬಲತೆಗಳು ಇದ್ದೇ ಇವೆ ಆದರೆ ತನ್ನನ್ನು ಸರಿಪಡಿಸುವ ಕೆಲಸವನ್ನು ಮಾಡುವದು ಅತ್ಯಗತ್ಯ. ಜನತೆಯ ಪ್ರಗತಿಯನ್ನು ಮಾಡಬೇಕಾದ ಪ್ರಭುಗಳೇ, ಸರಕಾರವೇ ಇದನ್ನು ಪ್ರಚಾರ ಮಾಡುವುದೆಂದರೆ ಆದರಷ್ಟು ಹೀನಕಾರ್ಯವತೆತ್ತೊಂದಿಲ್ಲ ಬ್ರಿಟಿಷರು ಪ್ರಚಾರ ಮಾಡಿದ ಮದ್ಯಗಳಿಂದರೆ ಆಫೀಮು ಶರಾಬು, ಗಾಂಜಾ, ಮೊದಲಾದವುಗಳು ಇವೆಲ್ಲ ಒಂದು ರೀತಿಯ ಮೂದವನ್ನೂ ಅಪೂರ್ವ ಚೈತನ್ಯವನ್ನೂ ಕ್ಷಣ ಕಾಲಕ್ಕೆ ಒದಗಿಸುವ ಸುಲಭ ಆದರೆ ತ್ಯಾಜ್ಯ ವಸ್ತುಗಳು ನಮ್ಮ ಶರೀರದಲ್ಲಿ ಇವುಗಳ ಪ್ರವೇಶವಾದೊಡನೆ ಒಂದು ರೀತಿಯ ಉತ್ಸಾಹ ಬರುತ್ತದೆ ಈ ಉತ್ಸಾಹ್ಹ ನಮ್ಮಲ್ಲಿರುವ ವೀರ್ಯದ ವೆಚ್ಚವನ್ನು ಕ್ಷಣ ಮಾತ್ರದಲ್ಲಿ ಮಾಡುತ್ತದೆ. ಇದರಿಂದ ಮದ್ಯಪಾನಗಳು ನಮ್ಮ ವೀರ್ಯನಾಶಕ್ಕೆ ಕಾರಣೀಭೂತವಾಗಿವೆ ಎಂಬುದನ್ನು ವೈದ್ಯರು ಸಾರುತ್ತಿದ್ದಾರೆ ನಮ್ಮ ವೈದ್ಯಶಾಸ್ತ್ರವು 'ಬ್ರಹ್ಮಚರ್ಯವೇ ಜೀವನ, ವೀರ್ಯನಾಶವೇ ಮೃತ್ಯು' ಎಂದು ಹೇಳಿದೆ ಮದ್ಯೋನ್ಮತ್ತರಾದ ಜನರು ಮಾಡುತ್ತಿರುವ ಅನಾಚಾರ ಇಂದು ವರ್ಣನಾತೀತ

ನಮ್ಮವರು ಮೂದಕ ಪದಾರ್ಥಗಳ ಸೇವನೆಯಿಂದ ದುರ್ವ್ಯಸನಗಳಿಗೆ ತತ್ತಾಗುತ್ತಾರೆ ಭಾರತದಲ್ಲಿನ ಶೇಕಡಾ ಭಾರಷ್ಟು ಜನರ ಆಧಃಪತನ ಬರೀ ಮದ್ಯಪಾನದಿಂದ ಆಗುತ್ತಿದೆಯೆನ್ನುವಾಗ ಆದನ್ನು ನಿಷೇಧಿಸುವುದು ನಮ್ಮ ಸರ್ಕಾರದ ಆದ್ಯ ಕರ್ತವ್ಯ ಸ್ವಾತಂತ್ರ್ಯ ಪೂರ್ವದಲ್ಲೇ ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಮದ್ಯಪಾನ ನಿಷೇಧದ ಪ್ರಚಾರವನ್ನು ಚೆನ್ನಾಗಿಯೇ ಮಾಡಿದ್ದಾರೆ ಗಾಂಧೀಜಿಯವರು ತಮ್ಮ ರಚನಾತ್ಮಕ ಕಾರ್ಯಗಳಲ್ಲಿ ಮದ್ಯಪಾನ ನಿಷೇಧವನ್ನು ಸೇರಿಸಿಕೊಂಡು ಜನತೆಗೆ ಮದ್ಯಪಾನದಿಂದ ಆಗುವ ಹಾನಿಗಳನ್ನು ವಿವೇಚನಾತ್ಮಕವಾಗಿ ಹೇಳಿದ್ದಾರೆ ನಮ್ಮ ದೇಶದ ಅಸಂಖ್ಯಾತಜನರು ಇದರಿಂದಪಾರಾಗುವಂತೆ ಪ್ರಯತ್ನಿಸಿದುದು ಎಲ್ಲರೂ ಬಲ್ಲ ವಿಷಯವಾಗಿದೆ.

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಮದ್ಯಪಾನ ನಿಷೇಧದ ಬಗ್ಗೆ ಕಾನೂನುಗಳು ಭರದಿಂದ ಪಾಸಾದುವು ಕೇಂದ್ರ ಸರಕಾರದ ವತಿಯಿಂದಲೇ ಕಾನೂನುಗಳು ಪಾಸಾದುವು ಆದರೆ ಸಮಗ್ರ ಭಾರತದಲ್ಲಿ ಮನೆ ಮಾತಾಗಿರುವ ಈ ಮೂದಕ ಪದಾರ್ಥಗಳ ಸೇವನೆಯು, ಜನಸಂಖ್ಯೆ ಹಬ್ಬಿದಂತೆ ಮತ್ತಷ್ಟು ಹೆಚ್ಚಿತು ಈ ಮೂದಕ ಪದಾರ್ಥಗಳಲ್ಲಿ ಜನರನ್ನು ಆಕರ್ಷಿಸುವ ಅಪಾರ ಮೂಲ ವಿದ್ಯೆಯಿದೆಯೋ ಗೊತ್ತಿಲ್ಲ' ಮನೆಮೂರು ಹೆಂಡತಿ ಮಕ್ಕಳು–ಸಂಪತ್ತುಗಳ ಗೊಡವೆಯೇ ಇಲ್ಲದೆ ವಿದ್ಯಾವಂತ ಜನರೇ ಇಂದು ಇದರ ಬಲೆಗೆ ಅಧಿಕ ಸಂಖ್ಯೆಯಲ್ಲಿ ಬೀಳುತ್ತಿದ್ದಾರೆ ಕಾನೂನನ್ನು ಜನತೆಯು ವನಸ್ಸಿಗೆ ತಾ ಟಿಸಿ ಮದ್ಯಪಾನ ನಿಷೇಧ ಮಾಡಬೇಕು ಕೊಳಚನ್ನು ಇದ್ದಲ್ಲೇ ಇರಬಿಡಬಾರದು

ಸ್ಥೂಲವಾಗಿ ಹೇಳುವುದಿದ್ದರೆ ನಮ್ಮ ದೇಶದಲ್ಲೂ ಪ್ರಾಂತ್ಯಗಳಲ್ಲೂ ಮದ್ಯಪಾನ ನಿಷೇಧದ ಒಗ್ಗೆ ಸಾಕಷ್ಟು ಕಾರ್ಯಕ್ರಮಗಳು ಜ್ಯಾರಿಗೆ ಬಂದಿವೆ ಮೂದಕ ಪದಾರ್ಥಗಳ ತಯಾರಿ ಮಾಡುವವರನ್ನೇ ಕಠಿಣ ಶಿಕ್ಷೆಗೆ ಗುರಿಪಡಿಸಲಾಗಿದೆ ಸರಕಾರ ತನ್ನ ಸೂಕ್ಷ್ಮ ದೃಷ್ಟಿಯಿಂದ ಮದ್ಯ ಸೇವಿಗಳನ್ನು ನೇರವಾಗಿ ನಿಷೇಧಿಸುತ್ತಿದೆ ಕಾಶ್ಮೀರ, ಉತ್ತರ ಪ್ರದೇಶ, ಬಂಗಾಲ ರಾಜಸ್ಥಾನಗಳೇ ಮೊದಲಾದ ಉತ್ತರ ಭಾರತದ ಪ್ರಾಂತ್ಯಗಳಲ್ಲಿ ಪ್ರಾಂತ್ಯ ಸರಕಾರಗಳ ಸಕ್ರಿಯ ವಿಧಾನಗಳಿಂದ ಮದ್ಯಪಾನವು ಇಲ್ಲದಾಗುತ್ತಾ ಬರಹತ್ತಿದೆ. ಆ ಪ್ರಾಂತ್ಯಗಳ ಸರಕಾರಗಳು ಮದ್ಯಪಾನ ನಿಷೇಧದ ಬಗ್ಗೆ ಕೆಲವು ಸಮಿತಿಗಳನ್ನು ನೇಮಿಸಿ ವಿಚಾರ ವಿಮರ್ಶೆ ಮಾಡಿ ಜನತೆ ಈ ದಶ್ಚಟಕ್ಕೆ ಎಂದೆಂದೂ ಗುರಿಯಾಗದಂತೆ ಎಚ್ಚರಿಸುವುದರಲ್ಲಿ ಸಫಲವಾಗುತ್ತಲಿವೆ ಆದರೆ ದಕ್ಷಿಣದಲ್ಲಿ ಈ ಮದ್ಯಪಾನದ ಹಾನಿಯನ್ನು ಹೇಳಿ ಪ್ರಯೋಜನವಿಲ್ಲ ಮಹಾರಾಷ್ಟ್ರ ಗುಜರಾಂಧಗಳು ಮತ್ತು ಒರಿಸ್ಸಾಗಳಲ್ಲಿ ಮದ್ಯಪಾನ ನಿರೋಧದ ಬಗ್ಗೆ ಸಾಕಷ್ಟು ಸಫಲ ಕಾರ್ಯವಾದಂತೆ ತೋರುತ್ತಿಲ್ಲ ಕೇರಳ ಮೈಸೂರು, ಮದ್ರಾಸುಗಳಲ್ಲಿ ಇದರ ಹಾವಳಿ ಸಹನಾತೀತವಾಗಿದೆ ಸರಕಾರದ ಕಣ್ಣಿಗೆ, ಅಧಿಕಾರಿಗಳ ದೃಷ್ಟಿಗೆ ಮಣ್ಣೆರಚಿಯೋ ಲಂಚ ತೆತ್ತೋ ಅಥವಾ ಇನ್ನಾವ ರೀತಿಯಿಂದ

(ಇನೇ ಪುಟ ನೋಡಿರಿ)

ಭಾರತದ ಬಂದರುಗಳು

ಮೂರನೆಯ ಸಂಚವಾರ್ಷಿಕ ಯೋಜನೆಯಲ್ಲಿ ಹೊಸ ಬಂದರುಗಳನ್ನು ನಿರ್ಮಿಸದೆ ಮೊದಲೇ ಕೈಗೊಳ್ಳಲಾಗಿದ್ದ ಬಂದರ ಯೋಜನೆಗಳನ್ನು ಪೂರ್ತಿಗೊಳಿಸುವ ಕಾರ್ಯಕ್ರಮಗಳನ್ನು ಮಾತ್ರ ಮುಂದುವರಿಸುವ ಗುರಿಯಿದೆ ಆದರೂ ಇರುವ ಬಂದರಗಳನ್ನು ಆಧುನಿಕಗೊಳಿಸುವುದೂ ಯೋಜನೆಯ ಲಕ್ಷ್ಯಗಳಲ್ಲಿ ಒಂದು. ಇದು ಕಾರ್ಯಗತವಾದುನೆಂದರೆ, ಮೂರನೆಯ ಯೋಜನಾವಧಿಗೆ ಬೇಕಾದ ಜಲಸಂಪರ್ಕವು ಶೃಪ್ತಿಕರವಾಗುವುದು ಇಂದು ದೇಶದ ದೊಡ್ಡ ಬಂದರಗಳು ೬೯ ಮಿಲಿಯ ಟನ್ನುಗಳ ವ್ಯವಹಾರ ಮಾಡಲು ಸಮರ್ಥವಾಗಿವೆ.

ಮದ್ರಾಸ ಬಂದರದಲ್ಲಿ ಟಿಟನ್ ಆಗಿಯ. ಕ್ರೇನು ಮತ್ತು ೧೦ ಟನ್ ವಿದ್ಯುತ್ ಕ್ರೇನುಗಳು ಹಡಗುಗಳಿಗೆ ಸಾಮಾನು ಹೇರುವ ಮತ್ತು ಇಳಿಸುವ ಕಾರ್ಯದಲ್ಲಿ ವ್ಯಸ್ತವಾಗಿರುವುದನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು.

ಉಡುಪಿ ದಿ ಮುಂ ಕೋಟ್ಸ್ ನೆಲ್ಲಿ

O S No 401/1962

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ — — ಪಾದಿ

ಮತ್ತು

1 M ಕೊರಗಪ್ಪ, 2 M. ಕಣಿಂಜರ, ರಂಮು ಪೂಜಾರಿ ಮಗಂದಿರು, ಕೊಡಪೊರು ಗ್ರಾಮದ ಮಟ್ಟೆ — ಪ್ರತಿವಾದಿರು.

ಸದರಿ ಪ್ರತಿವಾದಿರಿಗೆ—

ಪ್ರತಿವಾದಿರು ಮೇಲಿ ಬೇಂಕಿಗೆ ತಾ 23-12-1959ರಲ್ಲಿ ಬರಕೊಟ್ಟ ಡಿಸಾಂಡ್ ನೋಟಿನ ಆಸಲು ಬಾಕಿ ಪಡ್ತಿ ಕೂಡಾ ರೂಪ್ಯಾ 1747—99ಕ್ಕೆ ಮೇಲಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾ ೦೧ನು 24—11—1962ಕ್ಕೆ ತಪ್ಪಿಗೆ ಇಟ್ಟಿದೆ ಆದಿವಸ ಸದರಿ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉನಪರಿಸಿದೆಯಿದ್ದೆ ಆವರ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಸೂಚಕ ಸದರಿ ಪ್ರತಿವಾದಿರಿಗೆ ತಿಳಿಯಪಡಿಸಿಕ್ಕಾಗಿದೆ.

M Damoder Kamath,
Advocate for Plff

ಉಡುಪಿ, ತಾರೀಕು 9—11—62

ಅತ್ಯುತ್ತಮ ಟಾನಿಕ್

ನಿಮ್ಮ ದೇಹ — ಮನಸ್ಸುಗಳಿಗೆ
ಆರೋಗ್ಯವನ್ನೂ ಬಲವನ್ನೂ, ನವಚೈತನ್ಯವನ್ನೂ
ತಂದು ಕೊಡಬಲ್ಲ ಏಕಮಾತ್ರ ಟಾನಿಕ್

ಉಳಿತಾಯ

ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು ಉಡುಪಿ)
ಆಡಳಿತ ಆಫೀಸು ಮಂಗಳೂರು

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ರೂ 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯೊರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮಗೆ ಗೊತ್ತಿದೆಯೆ?

ಧರಣಿ ಸತ್ಯಾಗ್ರಹದ ವ್ಯಾಪ್ತಿ

ಕೆಲದಿನಗಳ ಹಿಂದೆ ಆಕಾಶವಾಣಿ ಹಾಗೂ ಸಮಾಚಾರಸಚಿವ ಶ್ರೀ ಗೋಪಾಲ ರೆಡ್ಡಿಯವರಮನೆಯ ಮುಂದುಗಡೆ ಲೋಕಸಭಾಸದಸ್ಯಾವಿಮಾ ರಾಮೇಶ್ವರಾನಂದರು, ಧರಣಿ ಸತ್ಯಾಗ್ರಹವನ್ನು ನಡೆಸಿದ್ದರು! ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿರುವ ಹಿಂದಿಯು ರಾಜಕೀಯ ದುರುದ್ದೇಶಕ್ಕೊಳಪಟ್ಟು ವಿದ್ರೂಪಕ್ಕೊಳಗಾಗುವುದನ್ನು ತಪ್ಪಿಸಬೇಕೆಂದು ಅವರು ಸತ್ಯಾಗ್ರಹವನ್ನು ಕೈಗೊಂಡರು. ಈ ನಡುವೆ ರಾಜ್ಯಸಭೆಯಲ್ಲಿ ಪ್ರಧಾನಿ ಜವಾಹರಲಾಲ ನೆಹ್ರೂಜಿಯವರಿಗೂ ಇತರ ಪ್ರಮುಖ ಸದಸ್ಯರ ನಡುವೆ ತೀವ್ರ ಚರ್ಚೆ ನಡೆದುದರ ಪರಿಣಾಮವಾಗಿ ಒಂದು ಸಮಿತಿಯನ್ನು ರಚಿಸಿ ಅದರ ಒಳಿತು-ಕೆಡುಕುಗಳ ಕುರಿತು ವಿಮರ್ಶಿಸಲು ಸಾದರ್ಭವಿತ್ತಿರುವದರಿಂದ ಸ್ವಾಮೀಜಿಯವರು ತನ್ನ ಸತ್ಯಾಗ್ರಹವನ್ನು ನಿಲ್ಲಿಸಿದ್ದರು.

ಈ ಧರಣಿ ಸತ್ಯಾಗ್ರಹಕ್ಕೆ ತನ್ನದೇ ಆದ ಒಂದು ಇತಿಹಾಸವಿದೆ. ಸಾಧಾರಣವಾಗಿ, ಸತ್ಯಾಗ್ರಹವೆಂದರೆ ಗಾಂಧೀಜಿಯವರ ಹೆಸರು ಜ್ಞಾಪಕಕ್ಕೆ ಬರುವದು ಸ್ವಾಭಾವಿಕವಿದೆ. ಆದರೆ ಅವರು ನಾಡಿನ ನರ-ನಾಡಿಗಳಲ್ಲಿ ಹರಿಯುತ್ತಿರುವ ಸಂಪ್ರದಾಯ ಅಥವಾ ಸಂಸ್ಕೃತಿಗೆ ತೀರಾ ವಿರುದ್ಧವಾದ ಯಾವೊಂದು ಉಪಾಯವನ್ನೂ ಕಂಡುಹಿಡಿದಿರುವುದಿಲ್ಲವೆಂಬುದು ಜೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿರುವ ವಿಷಯವಿದೆ. ಅವರ ಮಾತಿನಲ್ಲೇ ಹೇಳುವದಾದರೆ ಅವರು 'ಸನಾತನ ಹಿಂದೂ' ಇದ್ದರು. ಹಾಗಿದ್ದುದರಿಂದ ಅವರು ಹಿಂದಿನ ಇತಿಹಾಸದ ಹಾಳೆಗಳನ್ನು ತಿರುವಿ ಹಾಕಿ ಅಲ್ಲಿ ಹುಡುಕಾಡಿದರು. ಅಲ್ಲಿ ಅವರಿಗೆ ಸತ್ಯಾಗ್ರಹದ 'ಅ' ಕಾರವು ಗೊತ್ತಾಯಿತು. ಆದರಿಂದ ನಂತರ ಅವರು ಸತ್ಯಾಗ್ರಹ ರೂಪಕ್ಕೆ ಹೊಸ ಹೊಸ ವಿಧವಾದ ಸ್ನಿಫ್ಟರು. ನಾಡಿನ ಸಂಸ್ಕೃತಿಗೆ ಸರಿಯಾಗಿ ಹೊಂದಿಕೊಂಡು ಹೋದರೇನೇ ವೈಯಕ್ತಿಕ ದುರ್ಗುಣಗಳನ್ನು ಬದಲಾಯಿಸಬಹುದೆಂಬುದು ಗಾಂಧೀಜಿಯವರ ಘನ ಅಭಿಪ್ರಾಯವಾಗಿತ್ತು.

ಧರಣಿ ಸತ್ಯಾಗ್ರಹವು ಋಣ ಒಲಿಸಲಿರುವ ಕೊನೆಯ ತೀವ್ರ ಉಪಾಯವೆಂದು ವಿವರಿಸಲಾಗಿಯಿದೆ. ಇದೂ ಒಂದು ರೀತಿಯ ಸಂದ್ಯಾಟ ಹಾಗೂ ಸೆಣಸಾಟವಿದೆ. ಅದಕ್ಕೆ ಬರೆದಿಡಲ್ಪಟ್ಟಿರುವ ನೀತಿ-ನಿಯಮಗಳೇನೂ ಇರುವದಿಲ್ಲವಾದರೂ ಅನುಸರಿಸಲ್ಪಡಬೇಕಾಗಿರುವ ನೀತಿ-ನಿಯಮಗಳು ಸ್ಪಷ್ಟ ಇವೆ. ಬಲಶಾಲಿಗಳು ಕೂಡಾ ಧರಣಿ ಸತ್ಯಾಗ್ರಹಕ್ಕೆ ಬಗ್ಗಿರುತ್ತಾರೆ.

ಕೊಟ್ಟ ವಾಕ್ಯಕ್ಕೆ ತಪ್ಪಿ ನಡೆದ ಋಣಸ್ಥನಿಂದ ಸಾಲದ ಹಣವನ್ನು ತಿರುಗಿ ಪಡೆಯಲಿಕ್ಕಾಗಿ ಈ ಉಪಾಯವನ್ನು ಹೂಡಲಾಗುತ್ತಿತ್ತು. ಆದರಿಂದ ಪೂರ್ಣ ಹಣ ಬಾರದಿದ್ದರೂ ಸಾಧಾರಣ ಮಟ್ಟಿಗೆ ಸಾಲ ವಸೂಲಾಗುತ್ತಿತ್ತು. ಸಾಲ ಕೊಟ್ಟವನು ಸಾಲ ತೆಗೆದುಕೊಂಡಿರುವವನ ಮನೆಯಲ್ಲೇ ಆಥವಾ ಮನೆಯ ಎದುರಿನಲ್ಲಾಗಲೀ, ಆಕ್ಕಪಕ್ಕದಲ್ಲಾಗಲೀ ಆಥವಾ ವಸೂಲಿಗೆ ಸಹಾಯಕವಾಗುವ ಇತರ ಸ್ಥಳಗಳಲ್ಲಿ ಡೇರೆ ಹಾಕುತ್ತಾನೆ. ಆಲ್ಲಿ ಅವನು ಅವನಿಯ ಮೇಲೆ ಅಂಗಾತವಾಗಿ ಮಲಗಿಕೊಂಡು ಸಾಲವನ್ನು ಹಿಂತಿರುಗಿಸದಿದ್ದಲ್ಲಿ ಕೊಲೆ ಮಾಡಿಕೊಳ್ಳುವೆನೆಂದೋ, ವಿಷ ಸೇವನೆ ಮಾಡಿಕೊಳ್ಳುವೆನೆಂದೋ ಬೆದರಿಸುತ್ತಾನೆ. ಸತ್ಯಾಗ್ರಹಿಯ ಮಾತಿಗೆ ಒಪ್ಪದೆ ಇದ್ದಲ್ಲಿ, ಅವನ್ನವನು ಧಿಕ್ಕರಿಸಿದಲ್ಲಿ ಆಗ ಆತ್ಮಹತ್ಯೆಯ ಹೆದರಿಕೆ ಹಾಕಲಾಗುತ್ತದೆ. ಸಾಲ ಕೊಟ್ಟವರು ಆದರಿಂದಲೂ ತೃಪ್ತಿಯಾಗದ ಇರುವದೂ ಉಂಟು. ಸಾಲಕೊಟ್ಟರುವವನು ನೇರ ಋಣಸ್ಥನ ಮನೆಗೆ ಹೋಗಿ ಅವನ ಹಾಸಿಗೆ [ಚಾಪೆ]ಯ ಮೇಲೆಯೇ ಸತ್ಯಾಗ್ರಹವನ್ನಾರಂಭಿಸುವದೂ ಉಂಟು ಆ ಸಮಯದಲ್ಲಿ ಅವನು ಸುಖ ಭೋಗಕ್ಕೆ ತರ್ಪಣ ಕೊಡ ಬೇಕಾಗುತ್ತದೆ. ಆದಕ್ಕಾಗಿ ಅವನು ಮುಂಜೆಯೇ ಪ್ರತಿಜ್ಞೆ ಮಾಡಬೇಕು.

ಧರಣಿ ಸತ್ಯಾಗ್ರಹವು ಋಣಸ್ಥ ಸಾಲಗಾರರ ನಡುವೆ ಮಾತ್ರ ನಡೆಯುತ್ತಿದ್ದುದಲ್ಲದೆ ರಾಜಕೀಯದಲ್ಲೂ ಕಾಲಿರಿಸಿದೆ. ೧೯೦೭ ಜರ್ಮನಿಯ ಚರಿತ್ರೆಯಲ್ಲೂ ಅದರ ಉಲ್ಲೇಖವಿದೆ. ಕೆಲವೊಮ್ಮೆ ಸೈನಿಕರಿಗೆ ಸಂಬಳ ಕೊಡಲು ರಾಜರು ಹಿಂದೆಗೆ ಬಿದ್ದಾಗ ಸೈನಿಕರು ಧರಣಿ ಸತ್ಯಾಗ್ರಹಕ್ಕೆ ಮೊರೆ ಹೋಗಿರುವರು. ಅವರ್ಯಾರೂ ಸತ್ಯಾಗ್ರಹ ಸೂತ್ರಗಳಿಗೆ ವಿರೋಧವಾಗಿ ವರ್ತಿಸುತ್ತಿದ್ದಿಲ್ಲ. ಆದಕ್ಕೆ ಸಂಪ್ರದಾಯವೇ ಅವರಿಗೆ ಅಡಿಪಾಯ ವಾಗಿತ್ತು.

ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ಅತೃಪ್ತ ಸೈನಿಕರ ಮೇಲೆ ಕ್ರಮತೆಗೆದುಕೊಳ್ಳುವದು ಸುಲಭ ಸಾಧ್ಯದ ಸಂಗತಿಯಲ್ಲ ಯಾಕೆಂದರೆ, ಕೇವಲ ಒಬ್ಬಬ್ಬ ಸೈನಿಕರು ಮಾತ್ರ ಸತ್ಯಾಗ್ರಹ ನಡೆಸದೆ ಉತ್ತಮ ಸಂಖ್ಯೆಯಲ್ಲಿ ಸತ್ಯಾಗ್ರಹ ನಡೆಸುತ್ತಿದ್ದರೆಲ್ಲದೆ ಅವರಿಗೆ ಸಂಗಡಿಗರ ಸಂಪೂರ್ಣ ಸಹಾಯ—ಬೆಂಬಲವಿರುತ್ತಿತ್ತು. ಕೊನೆಯಲ್ಲಿ ನಾಯಕನಿಗೂ ಏನಾದರೂ ಸಿಗುತ್ತಿತ್ತು ಆಗಲಾ ಅವನಿಗೆ ಪೂರ್ಣ ಬಾಕಿ ಹಣ ಹಾಗೂ ಇತರ ಸೌಲಭ್ಯ ಸಿಗುತ್ತಿತ್ತೆಂದು ಹೇಳಲಾಗುವದಿಲ್ಲ ಆ ನಡುವೆ ಏನಾದರೂ ಒಪ್ಪಂದವಾಗುತ್ತಿತ್ತು. ಬಾಕಿ ಹಣದ ಒಂದಂಶ ಆಗಲೇ ನಗದಿಯೂಗಿ ದೊರಕಿ ಉಳಿದುದು ಸಿಗಬಹುದೆಂಬ ಆಶೆ ಉಳಿಸಿಕೊಳ್ಳುವಂತಾಗುತ್ತಿತ್ತು. ಹಾಗಾಗಿ ಧರಣಿ ಸತ್ಯಾಗ್ರಹಕ್ಕೆ ಯಾವಾಗಲೂ ಯಶಸ್ಸು ಕೊಂಡಿರುತ್ತಿತ್ತು

ಹೀಗೆ ಈ ಧರಣಿ ಸತ್ಯಾಗ್ರಹ ಒಂದೆರಡು ಕಡೆಗಳಲ್ಲಷ್ಟೆ ವಿರಳವಾಗಿ ನಡೆಯುತ್ತಿದ್ದುದಲ್ಲದೆ ಇತರ ಸ್ಥಿತಿಗಳಲ್ಲಿ ಕೂಡಾ ನಡೆಯುತ್ತಿತ್ತು. ಆದರಲ್ಲೂ ದುರ್ಬಲರಿಗಂತೂ ಇದು ಅತ್ಯುತ್ತಮ ಸಾಧನ. ಆದರೆ ದುರ್ಬಲರಲ್ಲದೆ ಶಕ್ತಿವಂತರೂ ಕೂಡಾ 'ರಕ್ತಪಾತ ರಹಿತ ದ್ವಂದ್ವ' ಸತ್ಯಾಗ್ರಹಕ್ಕೇನೆ ಕೊನೆಯಲ್ಲಿ ಶರಣಾಗುತ್ತಿದ್ದರು.

ಕವಲು ದಾರಿ—ಕೆಂಪು ದೀಪ

ನ್ಯಾಯಕ್ಕಾಗಿ, ಸತ್ಯಕ್ಕಾಗಿ ಹೋರಾಟ!

—ಸುದಾಸ.

ಹತ್ತಾರು ಸಾವಿರ ಅಡಿಗಳ ಮೇಲೆ, ದಟ್ಟವಾಗಿ ಹೆಡಿರುವ ಮಂಜು, ಕೊರೆಯುವ ಚಳಿಯನ್ನು ಸಹಿಸಿಕೊಂಡು ಭಾರತೀಯ ಯೋಧರು ಹೋರಾಡುತ್ತಿದ್ದಾರೆ. ಭಾರತದ ರಕ್ಷಣೆಗಾಗಿ ಪಣತೊಟ್ಟು, ದಿಟ್ಟತನದಿಂದ ಚೀನದ ರಾಕ್ಷಸೀ ಶಕ್ತಿಯನ್ನೆದಿರುಸುತ್ತಿದ್ದಾರೆ.

ನ್ಯಾಯಕ್ಕಾಗಿ ಹೋರಾಟ—ಸತ್ಯಕ್ಕಾಗಿ ಹೋರಾಟ. ಭಾರತೀಯ ಸಂಸ್ಕೃತಿಯ ಹಿರಿಮೆ—ಅದು.

ಚೀನೀಯರೇ, ನಮ್ಮ ಗಡಿಯನ್ನು ಬಿಟ್ಟು ದೂರ ಸರಿಯಿರಿ. ವಿಶ್ವಾಚಿಗಳೇ ದೂರ ತೊಲಗಿರಿ! ಇದು ನಮ್ಮ ಯೋಧರ ಮಂತ್ರ ಘೋಷ.

ಇದು ಸಂಧಿಕಾಲ. ಭಾರತದ ಸತ್ವ ಪರೀಕ್ಷೆಯ ಸಂಧಿಕಾಲ.

ಸ್ವಾತಂತ್ರ್ಯ ಚಳವಳಿಯಂದು ಹುರಿದ

ರೈತನು ಗೇಣಿ ಸಲ್ಲಿಸದಿದ್ದಲ್ಲಿ ಜಮೀನು ದಾರನು ಅವನ ಮನೆಯ ಮುಂದುಗಡೆ ಸತ್ಯಾಗ್ರಹ ನಡೆಸುತ್ತಿದ್ದಲ್ಲಿ, ಕಂಗೆಟ್ಟು ಅಸಹಾಯಕ ಸ್ಥಿತಿಯಲ್ಲಿ ರೈತನಿದ್ದಾಗ ಭೂಮೂಲಿಕೆಯು ಎಲ್ಲವನ್ನೂ ಎಳೆದುಕೊಂಡು ಹೋದಾಗ ಅವನ ಮನೆಯ ಮುಂದುಗಡೆ ರೈತನು ಸತ್ಯಾಗ್ರಹ ನಡೆಸುತ್ತಿದ್ದನು. ಆದರಲ್ಲೂ ಅಂಗನೆಯರ ಅವನಿ ಸತ್ಯಾಗ್ರಹಕ್ಕೆ ಮಣಿಯದವರ್ಯಾರು? ಆಗ ಸ್ತ್ರೀ ಹತ್ಯೆಗೆ ಭಯಪಡದಲ್ಲಿ ಇನ್ನೊಂದಿದೆ ಬ್ರಾಹ್ಮಣಹತ್ಯೆ ಅದಕ್ಕೆಲ್ಲರೂ ಭಯಪಡುತ್ತಿದ್ದರು. ಹೆಚ್ಚಾಗಿ ಬ್ರಾಹ್ಮಣನು ಆದಾರಿಗೆ ಹೋಗುತ್ತಿದ್ದಿಲ್ಲ. ಯಾವ ಕಾರಣದಿಂದಲಾದರೂ ಬ್ರಾಹ್ಮಣನು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದಲ್ಲಿ ಅವನು ಉಪವಾಸವಿಂದಿರುತ್ತಾನೆ. ಬ್ರಾಹ್ಮಣನ ಕೂಲೆಯಾದಲ್ಲಿ ಪಾಪ ಸಿಗುತ್ತದೆಂದು ಬೆದರಿ, ಸತ್ಯಾಗ್ರಹಕ್ಕೆ ಸಂಧರ್ಭವನ್ನೇ ಆಗಿನವೇಯುತ್ತಿರಲಿಲ್ಲ. ಹಾಗಾಗಿ ಬ್ರಾಹ್ಮಣನು ಧರಣಿ-ಸತ್ಯಾಗ್ರಹ ಹೂಡುವದೆಂದರೆ ಅದು ಅತ್ಯಂತ ಕೊನೆಯ ಉಪಾಯವಾಗಿರುತ್ತಿತ್ತು. ಸುದೈವ ವರ್ತಮಾನ ಕಾಲದ ಸಂಧರ್ಭ ಅವರಿಗೆ ಲಭಿಸುತ್ತಿರಲಿಲ್ಲ. ತನ್ಮಧ್ಯೆ ಏನಾದರೂ ಒಪ್ಪಂದವಾಗುತ್ತಿತ್ತು.

ಆದರೆ ಸಮಯವೀಗ ಬದಲಾಗಿದೆ. ಯಾರೂ ಸತ್ತರೂ, ಬ್ರಾಹ್ಮಣ ಸತ್ತರೂ ಭೂಮಿಗೆ ಭಾರ ಕಮ್ಮಿಯಾಗುತ್ತದೆಂದು ಭಾವಿಸಿಕೊಂಡು ಅತ್ತ ಚಲಕ್ಷ್ಯ ತೋರಿಸಲಾಗುತ್ತಿದೆ. ಆದರೂ ಅದಕ್ಕೆ ಕಂಪು ದಾಯದ ಬೆಂಬಲ ಇಮವಮಂಬ, ಭಾರತೀಯರು ಇನ್ನೂ ಧರ್ಮಕ್ಕೆ ಗೌರವವನ್ನು ಕಲ್ಲಿಸುತ್ತಿರುವದರಿಂದ—ಧರ್ಮಬಾಹಿರರಾಗಿ ಧರ್ಮಕಾರಕರಾಗವಿರುವದರಿಂದ—ಸ್ವಲ್ಪ ಮಟ್ಟಿಗಾದರೂ ಸತ್ಯಾಗ್ರಹ ಪರಿಣಾಮ ಬೀರುವ ಸ್ಥಿತಿಯಲ್ಲಿದೆ ಆದುದರಿಂದಲೇ ಗಾಂಧೀಜಿ ಆ ವಿಧಿಯನ್ನು ಹಿಡಿದಿದ್ದರು.

(ಆಧಾರ: 'ದಿ ಹಿಂದೂ')

—ಶಿವಕಂಕರ್, ಮುದರಾಸು.

ದೇಶಪ್ರೇಮದ ಮಹಾಪೂರ,—ದೇಶದ ಮೂಲೆ ಮೂಲೆಯಿಂದ, ಹರಿಯತೊಡಗಿದೆ—ಉತ್ತರದೆಡೆಗೆ. ಕೋಟಿ ಕೋಟಿ ಭಾರತೀಯರು ಈ ಮಹಾ ಪ್ರವಾಹದಲ್ಲಿ ಧುಮುಕುತ್ತಲಿದ್ದಾರೆ. 'ನಾವೂ ಹೋರಾಡುತ್ತೇವೆ. ಭಾರತವನ್ನುರಕ್ಷಿಸಲು, ಸರ್ವತ್ಯಾಗವೂಡಿ ನಾವು ಹೋರಾತ-ತ್ತೇವೆ' ಎಂಬ ಪಾಂಚ ಜನ್ಯ ಮೊಳಗುತ್ತಿದೆ.

ಕೆಂಪು ಚೀನ—ದಾರಿದ್ರ್ಯದಲ್ಲಿ ನರಳುತ್ತಿರುವ ಕೆಂಪು ಚೀನ—ಆಧಿಕ ಜನಸಂಖ್ಯೆಯ ಭಾರವನ್ನು ಹೊರಲು ಅಸಮರ್ಥವಾಗಿರುವ ಕೆಂಪು ಚೀನ—ತನ್ನ ರಕ್ತ ದಾಹವನ್ನೆಡಗಿಸಲು ಭಾರತದತ್ತ ಧಾವಿಸುತ್ತಿದೆ.

ಆದು ಭಾರತವನ್ನು ಹೇಡಿಗಳ ನಾಡೆಂದು ತಿಳಿದಿದೆಯೆ? ಭಾರತೀಯರು ನಿರ್ವೀರ್ಯರೆಂದು ತಿಳಿದಿದೆಯೆ?

ಆದಕ್ಕೆ ಉತ್ತರವನ್ನು ನಾವು ಕೊಡಬೇಕಾಗಿದೆ. ನಲ್ವತ್ತೈದು ಕೋಟಿ ಭಾರತೀಯರು ಕೊಡಬೇಕಾಗಿದೆ.

ಅಂತಹ ಶುಭ ಸೂಚನೆ ಈಗಾಗಲೆ ಕಂಡು ಬರುತ್ತಿದೆ. ಮಹಾಪ್ರಾಣದ ಮಹಾಪೂರ ಹರಿಯತೊಡಗಿದೆ. ಸ್ವಯಂ ಪ್ರೇರಣೆಯಿಂದ, ನಿಸ್ವಾರ್ಥದಿಂದ, ಅನ್ನ, ಧನ, ವಸ್ತ್ರ, ರಕ್ತದ ಕಾಣಿಕೆಯನ್ನು ಒಪ್ಪಿಸುತ್ತಿದ್ದಾರೆ ಭಾರತೀಯರು—ದೇಶ ಕ್ಕಾಗಿ.

ಜಾತೀಯತೆಯ ಸದ್ಧಿಲ್ಲ ಬಡವ ಬಲ್ಲಿದನೆಂಬ ಬೇಧವಿಲ್ಲ. ಭಾಷಾ ವ್ಯೋಹವಿಲ್ಲ ಕಚ್ಚಾಟವಿಲ್ಲ—ಇನ್ನಿಲ್ಲವನ್ನೂ ಬೇಧಿಸಿಕೊಂಡು ಮಹಾ ಮಾನವನೊಬ್ಬ ಎದ್ದು ನಿಂತಿದ್ದಾನೆ—ಭಾರತದ ರಕ್ಷಣೆಗಾಗಿ.

ಹಿಂದೆ—

—ಎರಡು ಸಾವಿರ ವರ್ಷಗಳ ಹಿಂದೆ ಬುದ್ಧದೇವನ ಅಹಿಂಸಾ ಪರಮೋಧರ್ಮವನ್ನು ಸ್ವಾಗತಿಸಿದ ಚೀನವಿನು ಹಿಂಸಾ ಪರಮೋಧರ್ಮದ ಸಂದೇಶವನ್ನು ಪರಿಸಬಯಸುತ್ತಿದೆ! ವಿಶ್ವ ಮೈತ್ರಿಯನ್ನು ಗಳಿಸಿರುವ ಭಾರತವನ್ನು ಅಸೂಯೆಯು ಕೆದಿಯಿಂದ ಸುಡಲು ಬಯಸುತ್ತಿದೆ.

ಭಾರತೀಯ ಸಂಸ್ಕೃತಿಯಲ್ಲಡಗಿರುವ ದಿವ್ಯ ಜೀವನ ಶಕ್ತಿಯ ಅರಿವು ಚೀನಕ್ಕೆ ಇದ್ದಂತಿಲ್ಲ. ಮಮತಾಪಸ್ಪಿಗಳಾದ ಶಾಂತೋಧಾರೆಯೆಂದುಕೊಂಡ ಭಾರತ—ನೈತಿಕ ಬಲದ ವಜ್ರ ಕವಚತೊಟ್ಟಿದೆಯೆಂದು ಚೀನೀಯರಿನ್ನೂ ತಿಳಿದಿಲ್ಲ.

ವಿಶ್ವಶಾಂತಿಯ, ಮಹಾ ಯೂಗವನ್ನು ಭಾರತವು ತೈಕೊಂಡು ಹನ್ನೆರೆಡು ವರ್ಷಗಳನ್ನೆ ಕಳೆದಿವೆ. ಯೂಗವೆಂಪ ಬಳಿಕ ಆದಕ್ಕೆ ಆಷ್ಟ ಆತಂಕಗಳು ಬರುವವೂ ಸಹಜವು.

ಅಂತೆಯೇ ಚೀನೀ ರಕ್ಷಕರು ವಿಶ್ವರೊಪಿಗಳಾಗಿ ನುಂಗಿತ್ತಿರಲಿಕ್ಕಿರುತ್ತಿದ್ದಾರೆ. ಭಾರತದ ಅಪಪ್ರಚಾರವನ್ನು ನಾನಾ ರೀತಿಯಿಂದ ಮಾಡುತ್ತಲಿದ್ದಾರೆ

ವಿಶ್ವಶಾಂತಿಯ ಯಜ್ಞ ಆದ್ದಿ ಆತಂಕ

(ಆನೇ ಸುಬ ನೋಡಿ)

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೨	೧೫-೧೧-೧೯೬೨	೧೦

ಮೆನನ್‌ರ ನಿವೃತ್ತಿ

ಭಾರತದ ಕೇಂದ್ರ ಸಚಿವ ಸಂಪುಟದಲ್ಲಿ ನೊದಲು ಸಂರಕ್ಷಣಾ ಶಾಖೆಯನ್ನು ನಿರ್ವಹಿಸುತಿದ್ದ ಒಗಟಿನ ವ್ಯಕ್ತಿಯೆನಿಸಿಕೊಂಡಿದ್ದ ಕೃಷ್ಣ ಮೆನನ್ನರು ಸಂರಕ್ಷಣೋಪಕರಣಗಳ ಹೊಸ ವಿಭಾಗವೊಂದರ ಮಂತ್ರಿಯೂಗಿ ಉಳಿದುದು ಮತ್ತು ಕೊನೆಗೆ ಅವರು ಸಂಪುಟದಿಂದ ಹೊರಬಿದ್ದುದು ಅನಿರೀಕ್ಷಿತವೆಂಬಂತಿಲ್ಲವಾದರೂ ನಿರೀಕ್ಷಿತವೂ ಅಲ್ಲ. ಶ್ರೀ ಮೆನನ್ನರು ಭಾರತೀಯರಿಂದ ಮಾತ್ರವಲ್ಲ, ಇಡಿಯ ಜಗತ್ತಿನಿಂದಲೂ ಸಮಸ್ಯಾಪೂರ್ಣ ಮನುಷ್ಯರೆಂದು ಹೆಸರು ಪಡೆದವರು. ಏಳು ವರ್ಷಗಳಿಗೆ ಮೊದಲು ಕೇಂದ್ರ ಸಂಪುಟದಲ್ಲಿ ಸೇರಿಕೊಂಡ ಇವರು ೧೯೫೭ರ ವರೆಗೆ ಸಾಖಾರಹಿತ ಮಂತ್ರಿಯೂಗಿಯೇ ಉಳಿದಿದ್ದರೂ ಮುಂದೆ ಸಂರಕ್ಷಣೆಯಂಕಹ ಮಹತ್ವಪೂರ್ಣ ಶಾಖೆಯು ಇವರ ಕೈಗಳಿಗೆ ಬಂತು. ಒಂದು ರಾಷ್ಟ್ರದ ಸಂರಕ್ಷಣಾ ಖಾತೆಯು ಮಹತ್ವವೆನಿಸ್ಪು ಎಂಬುದು ನಮಗೀಗ ಸರಿಯೂಗಿ ಅರ್ಥವಾಗುತ್ತಿವೆ. ಪ್ರಧಾನಿ ನೆಹರು ರವರಿಗೆ ಬ್ರಹ್ಮಚಾರಿ ಮೆನನ್ನರು ಬೇಕಾಗಿತ್ತು; ಹಾಗಾಗಿ ಅವರು ನವದೆಹಲಿಯಲ್ಲಿ ನಿಂತರು. ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯಕ್ಕೆ ಮನ್ನಣೆ ನೀಡಬೇಕು ಎಂಬ ಸತ್ ಸಂಪ್ರದಾಯವನ್ನು ಉಳಿಸಿಕೊಂಡು ಮೆನನ್ ತಾವೇ ರಾಜನಾಮೆಯಿತ್ತಿದ್ದಾರೆ; ಅದಕ್ಕೆ ಅತಿ ದುಃಖದಿಂದ ಪ್ರಧಾನಿಯವರು ಒಪ್ಪಲೇಬೇಕಾಯಿತು. ಇಂದು ಮೆನನ್ ಸಂರಕ್ಷಣಾ ಮಂತ್ರಿಯೂಗಿ ಉಳಿದಿಸ್ಲಿ; ಸಾಮಾನ್ಯ ಸಂಸತ್ಸದಸ್ಯನಾಗಿ ಅಲ್ಲಿದ್ದಾರೆ.

'ಚೀನೀಯ ಆಕ್ರಮಣ'ದ ಪ್ರಸಂಗದಲ್ಲಿ ನಡೆದ ನೊದಲನೆಯ ಬುರಂತವೆಂದರೆ, ಕೃಷ್ಣ ಮೆನನ್ನರ ಪತನ. ಅವರು ಕಮ್ಯುನಿಜಂ ವಾದಿಗಳು ಎಂದು ಕಮ್ಯುನಿಸ್ಟೇತರರೆಲ್ಲರೂ ಬಹಿರಂಗವಾಗಿ ಹೇಳುವುದಕ್ಕೂ ಹಿಂಜರಿಯುವುದಿಲ್ಲ. ಸ್ವಯಂ ಕಾಂಗ್ರೆಸಿಗರೂ ಅಭಿಮಾನವಿಡವೆಯಿರುವ ಏಕಮೇವ ಮಹಾವ್ಯಕ್ತಿ ಮೆನನ್ ಅವರೆಂದು ಕಮ್ಯುನಿಸ್ಟರಾಗಿದ್ದರು, ಅಥವಾ ಅವರು ಯಾವ ರೀತಿಯಿಂದ ಕಮ್ಯುನಿಜಂಗೆ ಪ್ರೋತ್ಸಾಹ ನೀಡುತಿದ್ದರು ಎಂಬುದೆಲ್ಲ ತೀರ ಅಸ್ಪಷ್ಟ. ಆದರೆ, ಅವರನ್ನು ಕಮ್ಯುನಿಸ್ಟರು ಬೆಂಬಲಿಸುತ್ತಿದ್ದುದೇ ಪ್ರಬಲ ಕಾರಣವಿರಬೇಕು; ಮೇಲೆ ಅವರ ಹುಟ್ಟಾರು ಕಮ್ಯುನಿಜಂ ರಾಜ್ಯವೆನಿಸಿದ ಕೇರಳ ಈ ಎರಡು ಕಾರಣಗಳಿಂದ ಅವರ ಮೇಲಿನ ವಿಶ್ವಾಸ ಹಾರಿ ಹೋಗುತ್ತ ಬಂದಿತ್ತು. ಕಳೆದ ಸಾರ್ವತ್ರಿಕ ಚುನಾವಣೆಯು ನೇಳಿಯಲ್ಲಿ ಇದು ವಿಶ್ವರೂಪ ತಾಳಿತ್ತು. ಆದರೆ, ನೆಹರುರವರು ಮೆನನ್ನರನ್ನು ತನ್ನ ಅಭಿನ್ನ ಭಾಗನೆಂದು, ಅವರು ಸೋತರೆ, ತಾನು ಸೋತಂತೆ ಎಂದು ಮುಂತಾಗಿ ತಿಳಿಸಿ ಹೇಳಿದುದರಿಂದ ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿ ವೈ. ಬಿ. ಚವನರ ಪರಿಶ್ರಮದಿಂದ, ಕೊನೆಯ ದಾಗಿ ಕೂಲಿಗಾರಿ ಮತದಾರರ ಪ್ರಚಂಡ ಬೆಂಬಲದಿಂದ ಗೆದ್ದು ಬಂದರು. ನೆನೆಗೆದಿಗೆ ಬಿದ್ದಿಬ್ಬ ಭಾರತದ ಸಂರಕ್ಷಣಾ ನೀತಿಯು ಸಮರ್ಥನೆಗೊಂಡಿತೆಂದು ಆಗ ಕೆಲವರು ಊಹಿಸಿದ್ದರು. ಆದರೆ, ಉತ್ತರ ಮುಂಬಾಯಿ ಮತದಾರ ಕ್ಷೇತ್ರದಿಂದ ಅವರು ಸ್ಪರ್ಧಿಸಬಾರದು ಎಂಬ ವಿರೋಧವೂ ಮೊದ ಮೊದಲು ಕಾಂಗ್ರೆಸ್ಸಿನಲ್ಲಿತ್ತೆಂಬುದನ್ನು ನಾವು ಮರೆಯುವಂತಿಲ್ಲ. ಕಮ್ಯುನಿಸ್ಟ್‌ಪರರೆಂಬ ಮುಖಬಿಲ್ಲೆ ಅಂಟಿಸಿಕೊಂಡ ಮೆನನ್ ದೇಶದ ಎಲ್ಲರಿಂದಲೂ ಬೇಗೆಗೆ ಗುರಿಯಾದರು. ಗಂಡಾಂತರವು ಮನೆಬಾಗಿಲಿಗೆ ಬಂದಾಗ, ಸಂಶಯಗ್ರಸ್ತ ಕಾವಲಿಗೆನನ್ನು ವಿಶ್ವಾಸದಿಂದ ಕಾಣಬೇಕೆಂದರೆ ನಡೆದೀತೆ? ಮೆನನ್‌ರ ಖಾತೆ ಪರಿವರ್ತನೆ ಮಾಡಲಾಯಿತು; ಮುಳುಗುತ್ತಿರುವ ದೋಣಿ ಹುಲ್ಲುಗಡ್ಡಿಯು ಆಶ್ರಯದಲ್ಲಿ ಎಷ್ಟು ಹೊತ್ತು ನಿಂತೀತು? ಕೊನೆಗೂ ಅದು ಮುಳುಗಲೇ ಬೇಕಾಯ್ತು. ಇದು ಆಶ್ಚರ್ಯವಲ್ಲ. ಪ್ರಜಾಸ್ವಭುತ್ವದ ಯಶಸ್ಸಿಗೊಂದು ನಿದರ್ಶನ.

ಮೆನನ್ನರು ಮಂತ್ರಾಲಯದಲ್ಲಿರುವಾಗ, ನಮ್ಮ ಸೇನೆಯ ಮತ್ತು ಸೇನೋಪಕರಣಗಳ ಮಟ್ಟವು ಏರಿದೆಯೆಂಬುದು ನಿರ್ವಿವಾದ. ಆತ್ತ ಪಾಕಿಸ್ತಾನದ ಕಿರುಕುಳದಿಂದ ಸಂರಕ್ಷಣೋಪಕರಣಗಳಲ್ಲಿ ಹೆಚ್ಚಳವಾಗುವುದು ಅನಿವಾರ್ಯವಾಯಿತೆಂಬುದರಿಂದ ಹೀಗಾಯಿತೆಂದು ಹೇಳುವವರಿದ್ದಾರೆ ಸೇನೆಯು ಶಕ್ತಿಯು ಹೆಚ್ಚಿದುದು ದೃಢಶಾಲಿಯೆನಿಸಿದೆ ನಿಜ; ಆದರೆ, ಸೇನಾಧಿಕಾರಿಗಳಿಗೂ ಸಂರಕ್ಷಣಾ ಮಂತ್ರಿಗಳಿಗೂ ಆಗಾಗ ವಿರಸ ಒದಗುತಿತ್ತು ಎಂಬುದನ್ನು ನಾವು ಮರೆಯ ಬಾರದು. ಇದರ ಒಳಗಿರುವ ರಹಸ್ಯವೇನು ಎಂಬುದಿನ್ನೂ ರಹಸ್ಯವಾಗಿಯೇ ಉಳಿದಿದೆ. ವೈಕಮಹೋಸ ರೇಖೆಯನ್ನು ದಾಟಿ ಭಾರತದ ಮೇಲೆ ಆಕ್ರಮಣವನ್ನು ನಡಸಲು ಚೀನೀಯರು ಬಹು ಸಮಯದ ತಯಾರಿ ನಡೆಸಿದ್ದರೆಂದು ಹೇಳಿದ ನೆನನ್ನರು ಆ ಸಮಯದಲ್ಲಿ ನಾವು ಸುಮ್ಮನಿದ್ದುದು ಅನ್ಯಾಯವೆಂದು ಪಶ್ಚಾತ್ತಾಪಗಟ್ಟಿರಿ ಅದರಿಂದಲೇ ಸಂರಕ್ಷಣೆಯೂಗುವುದಿಲ್ಲ; ಅಂದರೆ, ತಮ್ಮ ಅಯಶಸ್ವಿತೆಯು ಕುರುಹು ಆದು ಎಂಬುದನ್ನೂ ತನ್ನ ಅಸಾಮರ್ಥ್ಯದಿಂದ ದೇಶ ಹಾಳಾಗಬಾರದೆಂದು ಜನತೆಯ ಅಭಿಪ್ರಾಯವನ್ನೂ ಮನ್ನಿಸಿದ ಮೆನನ್ ಅಭಿನಂದನಾರ್ಹರು. ಅವರ ಸೇವೆ ದೇಶಕ್ಕೆ ಇತರ ವಿಧಾನಗಳಿಂದ ಉಪಯುಕ್ತವೆನಿಸಬಹುದು. ಆಪ್ತಗಳನ್ನು ಹೊರುವಲ್ಲಿ ಅವರು ಹಿಂಸುಳಿಯಬಾರದು; ಅವರನ್ನು ಉಪಯೋಗಿಸುವಲ್ಲಿ ಸರಕಾರವಾದರೂ ಹಿಂಜರಿಯಲಾರದು.

ಆದರೆ, ಒಂದು ಮಾತು ಮಾತ್ರ ಸತ್ಯ. ಸದ್ಯ ನೆಹರು ನಂತರ ಯಾರು ಎಂಬ ಪ್ರಶ್ನೆ ಎದ್ದಾಗ, ನಾಲ್ಕೈದು ಹೆಸರುಗಳು ಮುಂದೆ ಬರುತಿದ್ದವು. ಆಗುಗಳಲ್ಲಿ ಮೆನನ್ನರದೂ ಒಂದು. ಇವರು ಮಂತ್ರಿ ಮಂಡಳಿಯಲ್ಲಿಯೇ ಬಲಪಕ್ಷವೊಂದನ್ನು ಕಟ್ಟುತಿದ್ದರೆಂದೂ ಕೆಲವದಂತಿ. ಅನಿರೀಕ್ಷಿತವಾಗಿ ಮೆನನ್ನರ ರಾಜಕೀಯವಾಗಿ ಪತಿತರಾದುದರಿಂದ, ಅವರಿಗಿನ್ನು ಈ ನಿಟ್ಟಿನ ಭವಿಷ್ಯವಿಲ್ಲವೆಂದು ಖಂಡಿತಕ್ಕೂ ಹೇಳಬಹುದು. ಸಯೇಜ್ ಕಾಲುವೆಯ ದುರ್ಧರ ಪ್ರಸಂಗದಿಂದ ಬ್ರಿಟನ್ನಿನ ಪ್ರಧಾನಿಯಾಗಿದ್ದ ಆಂತೋನಿ ಈಡನ್ನರೇ ಅಧಿಕಾರತ್ಯಾಗ ಮಾಡಬೇಕಾಗಿ ಬಂದುದನ್ನು ನಾವು ನೆನಪಿಸಿಕೊಂಡರೆ, ಅದರೆದುರು ಮೆನನ್ನರ ಸೋಲು ಗೌಣನೆಂದು ಹೇಳಲೇ ಬೇಕು. ಸಂಶಯಗ್ರಸ್ತ ವ್ಯಕ್ತಿಯನ್ನು ಹೊರಗಿಟ್ಟುದರಿಂದ ಜನರಲ್ಲಿ ಹೊಸ ಹುರುಪು ಮೂಡುವುದು ಸಹಜ. ಮುಂದೆ ಅವರ ರಕ್ಷಣಾ ಸ್ಥಾನವನ್ನು ಸೂರ್ತಿ ಮೂಡಲಿರುವ ಶ್ರೀ ಚವನರ ಬಿಸಿ ನೆತ್ತರಿನ ಕಾರ್ಯಕ್ರಮವೊಡನೆ ಈ ಹುರುಪು ಸೇರಿ ಬೆಂಕಿಗೆ ತುಪ್ಪದಂತೆ ಸಹಾಯ ಸಲ್ಲಿಸಿ ಆಕ್ರಮಣಕಾರರನ್ನು ಸದೆ ಬಡಿಯುವಂತಾಗಲಿ ಎಂದು ರಾಷ್ಟ್ರೀಯವಾದಿಗಳೆಲ್ಲರ ಹಾರೈಕೆ.

ಜಗತ್ತು ಭಾರತದ ಹಿಂದೆ

ಕೆಂಪು ಚೀನವು ಯೂವ ಉದ್ದೇಶವನ್ನು ಮುಂದಿಟ್ಟು ಯೂವ ಧೈರ್ಯದಿಂದ ಭಾರತ-ಚೀನಾಗಳ ಅಂತಾರಾಷ್ಟ್ರೀಯ ಗಡಿ ರೇಖೆಯನ್ನು ಅತಿಕ್ರಮಿಸಿ ಭಾಳಿಯನ್ನು ಪ್ರಾರಂಭಿಸಿದೆಯೆಂಬುದಿನ್ನೂ ಅವಿದಿತವಿದೆ. ಆದರೆ, ಅದು ಇರಿಸಿಕೊಂಡಿರಬಹುದಾದ ಉದ್ದೇಶವು ಪೂರೈಸುವ ಲಕ್ಷಣಗಳು ದಿನದಿಂದ ದಿನಕ್ಕೆ ದೂರವಾಗುತ್ತ ಬರುತ್ತಿವೆ, ಮೂಶ್ಚವಲ್ಲದೆ ಚೀನೀಯಂ ಧೈರ್ಯವಾದದೂ ಹದಗೆಟ್ಟಿದೆಯೆಂಬುದಕ್ಕೆ ಸದ್ಯದ ವರದಿಗಳೇ ಆಧಾರ. ಆಲ್ಲಿ ಇಲ್ಲಿ ಅಲ್ಪ ಮಟ್ಟಿದ ಚಕಮಕಿ ನಡೆದಿದ್ದರೂ ಚೀನೀಯರನ್ನು ಮತ್ತೂ ಮುಂದುವರಿಯುದಂತೆ ನಮ್ಮ ಸೇನೆಯು ಯಶಸ್ವೀ ಪ್ರಯತ್ನ ಮಾಡಿದೆ; ಮುಂದೆ ಕ್ಯಾದರೂ ತನ್ನ ಸಾಹಸವನ್ನದ. ತೋರಿಸಿಯೇ ತೋರುವುದು. 'ಪ್ರಾರಂಭದಲ್ಲಿ ನಾವು ಕೆಲವೊಂದು ಸೋಲುಗಳನ್ನು ಉಣ್ಣಬೇಕಾಗಿ ಬಂದರೂ ಅಂತಿಮ ವಿಜಯ ನಮ್ಮದೇ' ಎಂಬ ಪ್ರಧಾನಿ ನೆಹರುರವರ ಧೀರೋಕ್ತಿ ಅಕ್ಷರಶಃ ನಿಜ. ಹತ್ತಾರು ವರ್ಷಗಳ ತರಬೇತಿಯಿಂದ ನಿಷ್ಣಾತನೆನಿಸಿದ ಚೀನೀ ಪಡೆಗಳಿಗೆ ವನಾನುಷತ್ವವಿಲ್ಲ ಆದರೆ, ಶಾಂತಿ ರಾಷ್ಟ್ರಗಳ ಸಾಲಿನಲ್ಲಿ ಸೇರಿರುವ ಭಾರತವು ದುಡಕುವುದು ಸಾಧ್ಯವಿಲ್ಲ. ನಮ್ಮ ಪಶ್ಚಿಮದ ತಾಣ್ಯಗಳೆಲ್ಲವನ್ನೂ ಉಗ್ರಧಾಳಿಯಿಂದಲೂ ಬದುಕಿ ಉಳಿಯ ಎಂತೆ ಅವಶ್ಯಕ ಕ್ರಮಗಳನ್ನು ಕೈಗೊಂಡು ಮತ್ತೆ ಕಳೆದುಕೊಂಡವುಗಳನ್ನು ಮರಳಿ ಪಡೆಯುವಂತೆ ಮಾಡಬೇಕೆಂಬುದನ್ನು ನಾವು ನೆನಪಿಸಿದರೆ, ನಮ್ಮ ಸೇನೆಯ ಚಟುವಟಿಕೆಗಳು ಶೃಪ್ತಿಕರವಾಗಿವೆಯೆನ್ನಲಡ್ಡಿಯಿಲ್ಲ. ನಮ್ಮ ನ್ಯಾಯವರವಾದ ಹೋರಾಟದ ಹಿಂದೆ ಕಮ್ಯುನಿಸ್ಟ ರಾಷ್ಟ್ರಗಳು ಹಾಗೂ ಪಾಕಿಸ್ತಾನದಂತಹ ಒಂದೆರಡು ದೇಶಗಳನ್ನು ಬಿಟ್ಟು ಉಳಿದ ಸ್ವತಂತ್ರ ಜಗತ್ತಿನೆಲ್ಲ ರಾಷ್ಟ್ರಗಳ ಸಹಾಯವೂ ಸಹಾನುಭೂತಿಯೂ ಇದೆಯೆಂದು ಈಗ ವ್ಯಕ್ತವಾಗಿದೆ. ಕೆಂಪು ಚೀನೀಯರಿಂದ ಅಕ್ರಮಿತ ಭೂಭಾಗವನ್ನು ಪಡೆದುಕೊಳ್ಳುವುದಕ್ಕೆ ನಮಗೆ ಸೈನಿಕ ಮತ್ತು ನೈತಿಕ ಸಹಕಾರಗಳನ್ನು ನೀಡುವುದಕ್ಕೆ ಇವರೆಲ್ಲರೂ ಮುಂದೆ ಬಂದಿರುವುದರಿಂದಲೇ ನ್ಯಾಯ ಯಾರ ದ್ದೆಂಬುದು ವ್ಯಕ್ತವಾಗುವುದು. ಚೀನಾವು ವ್ಯಾರಂಭದಲ್ಲಿ ಹೀಗಾದೀತೆಂದು ಕನಸಿನಲ್ಲಿಯೂ ಊಹಿಸಿರದು. ಆದರೆ ಎಲ್ಲರ ನಿರೀಕ್ಷೆಗೂ ಮೀರಿ ದೇಶದ ಒಳಗೂ ಹೊರಗೂ ಚೀನೀಯ ನಗ್ನ ಆಕ್ರಮಣದ ಬಗ್ಗೆ ಪ್ರತಿಭಟನೆಯೇ ಕಂಡು ಬಂದಿರುವುದರಿಂದ ಆದು ಹತಾಶವಾಗಿದ್ದರೆ, ಆಶ್ಚರ್ಯವಿಲ್ಲ. ಕಮ್ಯುನಿಸ್ಟ ರಶ್ಯವಾದರೂ ಕಂಪೂರ್ಣವಾಗಿ ಚೀನೀಯ ಪಕ್ಷವನ್ನು ಸಮರ್ಥಿಸಿದಂತೆ ತೋರುವುದಿಲ್ಲ. ಹಾಗಾಗಿ ಚೌ ಎನ್ ಲಾಯ್ ಈ ಬಿಸಿ ತುಪ್ಪವನ್ನು ಬಾಯ್ಗೆ ಸುರಿಸಿಕೊಂಡವರಂತಿದ್ದಾರೆ. ಭಾರತೀಯ ಚೀನೀಯ ನೀತಿಯನ್ನು ಬದಲಾಯಿಸುವ ಅಭಿಪ್ರಾಯವೂ ಕೆಲವರಲ್ಲಿ ಹುಟ್ಟಿಕೊಂಡಿರಬಹುದು. ಪಂಚಶೀಲಗಳನ್ನು ಪಂಚಶೂಲಗಳಿಂದಲೇ ತಿವಿದ ಚೀನೀಯರ ಹಿಂದೆ ತಟ್ಟಿದ್ದರು ಕೂಡ ಇಲ್ಲ. ಹೀಗಿರುವ ಅಸಹಾಯಕ ಲಾಯ್ ಯವರ ಮುಂದಿನ ನೀತಿಯನ್ನು ಅವಲಂಬಿಸಿದೆ, ಈ ವಿವಾದ; ಅಲ್ಲ, ಆಕ್ರಮಣ.

ವಾರ್ತಾವೇದಿಕೆ

ಉಭಯ ಕಾಲದ ಧುರೀಣ ನೆಹರು

ಪ್ರಧಾನ ಮಂತ್ರಿ ನೆಹರುರವರೆಂದರೆ ಭಾರತದ ಜನತೆಗೆ ತಂಬ ಅಭಿಮಾನ. ಶಾಂತಿ ದೂತನೆಂದು ಅವರಿಗೆ ಸನ್ಮಾನ ಅಂತಹ ಶಾಂತಿ ದೂತನೀಗ ಕ್ರಾಂತಿಕಾರಿಗಳೆನಿಸಿದ ಚೀನೀಯರಿಂದ ನೇಶದ ಳಾ ಕೋಟಿ ಜನತೆಗೆ ಬಂದ ಸ್ವಾತಂತ್ರ್ಯದ ಆಹ್ವಾನವನ್ನು ಉತ್ತರಿಸ ಬೇಕಾಗಿ ಬಂದಿದೆ; ಎಂತಲೇ ಎಲ್ಲರ ಪರವಾಗಿ ಅವರು ಘೋಷಿಸಿದ್ದಾರೆ— 'ಚೀನಾದ ಆಹ್ವಾನವನ್ನು ನಾವು ಸ್ವೀಕರಿಸಿದ್ದೇವೆ! ಆ ರ ಜನ್ಮದಿನದ ದಂದು ರಾಜಕೀಯ ಸ್ಥಿತ್ಯಂತರಗಳು ಏನೆಂದು ಹೇಳುವಂತಿಲ್ಲ. ವಿದೇಶಗಳಲ್ಲಿ ಶಾಂತಿ—ಕ್ರಾಂತಿಗಳ ಕಾಲದಲ್ಲಿ ಬೇರೆ ಬೇರೆ ನಾಯಕತ್ವ ಅವಶ್ಯವೆನ್ನಿಸಿರುವುದು ಅನುಭವವಾದರೂ ನಮಗಂತಹ ಪ್ರಮೇಯ ಬಂದಿಲ್ಲ; ಏಕೆಂದರೆ, ನೆಹರು ಕ್ರಾಂತಿ ಸಂಘರ್ಷಗಳ ಕಾಲದಲ್ಲಿ ದೇಶದ ನಾಯಕತ್ವವನ್ನು ವಹಿಸಿದವರು; ಶಾಂತಿ ಕಾಲದಲ್ಲೂ ಅವರದು ಮೇಲುಗೈ. ಈ ಹಾರೈಕೆಯೊಡನೆ ಅವರಿಗೆ ದೇಶಕ್ಕೆ ದೇಶವೇ ಅವರನ್ನು ಅಭಿನಂದಿಸುತ್ತದೆ.

ಯಶಸ್ವೀ ಚವನ

ದ್ವಿಭಾಷಾ ರಾಜ್ಯವಾಗಿದ್ದ ಮುಂಬಯಿಯು ಏಕಭಾಷಾ ರಾಜ್ಯಗಳಾಗಿ ವಿಭಜನೆಗೊಂಡಾಗ ಮಹಾರಾಷ್ಟ್ರವನ್ನು ಮುನ್ನಡೆಸುವವರು ಯಾರು ಎಂಬ ಪ್ರಶ್ನೆ ಉದ್ಭವವಾಗಿತ್ತು; ಆಗ ಶ್ರೀ ಯಶವಂತರಾವ್ ಬಲವಂತ ರಾವ್ ಚವನರು ಮುಂದೆ ಬಂದರು. ದೇಶದ ವಿಶಾಲವಿಸ್ತೀರ್ಣತೆಯ ಸಮರ್ಥ ಮುಖ್ಯ ಮಂತ್ರಿಗಳಲ್ಲಿ ಇವರು ಅಗ್ರಗಣ್ಯರು. ಆಡಳಿತದಲ್ಲಿ ಬಲವನ್ನೂ ತಂದು ಯಶಸ್ವಿಗೊಳಿಸಿದ ಚವನರು ತಮ್ಮ ಹೆಸರನ್ನು ಸಾರ್ಥಕಪಡಿಸಿಕೊಂಡಿದ್ದಾರೆ.

(ಪುಟ ಹಿಂದಕ್ಕೆ)

ಅಲ್ಲಲ್ಲಿಯ ಸುದ್ದಿಸಾರ

ಕಾಲೇಜು ವಿದ್ಯಾರ್ಥಿಗಳ ಪ್ರತಿ ಭಟನೆ— ಉಡುಪಿಯ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳು ಇದೇ ತಾ. 8ರಂದು ಚೀನಾ ದುರಾಕ್ರಮಣದ ಪ್ರತಿ ಭಟನಾರ್ಥವಾಗಿ ಘೋಷಣೆಗಳೊಂದಿಗೆ ಪುರಮೆರವಣಿಗೆ ಮಾಡಿದರು ನಂತರ ರಥಬೀದಿಯಲ್ಲಿ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಎಚ್. ಸುಂದರ್ ರಾಮ್, ವಕೀಲ್ ಜಿ. ಸಿ. ರೇಗೊ ಮೊದಲಾದವರು ಚೀನೀ ದುರಾಕ್ರಮಣದ ಕುರಿತು ಮೂತನಾಡಿ ಜನತಾ ಕರ್ತವ್ಯವನ್ನು ವಿವರಿಸಿದರು. ಅಧ್ಯಕ್ಷ ಶ್ರೀ ಪೈಗಳು ಇಂದಿನ ತುರ್ತು ಪರಿಸ್ಥಿತಿಯಲ್ಲಿ ನಾವು ಮೂತನಾಡುವಾಗ ಜಾಗ್ರತೆಯಿಂದಿರಬೇಕೆಂದೂ, ಸರಕಾರವನ್ನು ಪ್ರೋತ್ಸಾಹಿಸುವುದನ್ನು ಬಿಟ್ಟು ಎಲ್ಲರೂ ಹಣ ಮತ್ತು ಚಿನ್ನವನ್ನು ರಕ್ಷಣಾ ನಿಧಿಗೆ ಉದಾರವಾಗಿ ಕೊಡಬೇಕೆಂದೂ ಹೇಳಿದರು. ಅಂತ್ಯದಲ್ಲಿ ಚೌ.-ಎನ್. ಲ್ಯಾಯವರ ಪ್ರತಿಮೆಯನ್ನು ಸುಡಲಾಯ್ತು.

ಕಥೋಲಿಕ್ ವಿದ್ಯಾರ್ಥಿ ಸಂಘದ ಸಭೆಯೊಂದು ಇದೇ ತಾ 7ರಂದು ಉಡುಪಿ ಡೋನ್ ಬೋಸ್ಕೊ ಹಾಲಿನಲ್ಲಿ ಶ್ರೀ ವಿಲಿಯಂ ಸಿಟೊ ಶಿರ್ವಾಡಿ, ಇವರ ಅಧ್ಯಕ್ಷತೆಯಲ್ಲಿ ಜರಗಿ ಚೀನೀ ದುರಾಕ್ರಮಣವನ್ನು ಖಂಡಿಸಿ ಸ್ವಾತಂತ್ರ್ಯ ರಕ್ಷಣೆಗಾಗಿ ಸರ್ವಸಹಕಾರವನ್ನು ಕೊಡಬೇಕೆಂದು ನಿರ್ಣಯಿಸಲಾಯ್ತು. ಶ್ರೀಗಳಾದ ವಿನ್ಸೆಂಟ್ ಕಸ್ತಲೀನೊ, ಜೆರೋಮ್ ಲೂವಿಸ್, ಮೊದಲಾದವರು ಚೈನಾದ ವಿಶ್ವಾಸಘಾತಕ ಧೋರಣೆಯನ್ನು ಖಂಡಿಸಿದರು.

ಶಿವ ಸಮೂಜ— ಇದರ ನವೀನ ಕಾ. ಆ. ಸಮಿತಿ ಸಭೆಯು ತಾ 4ರಂದು ಜರಗಿ ಸಮಿತಿಯ ಅಧಿಕಾರಿ ವ್ಯಾಪ್ತಿ ಪ್ರ. ಕಾ. ಯು. ಗೋಪಾಲಕೃಷ್ಣನವರಿಂದ ಹಳೆರಿಕಾರ್ಡ್ ಪರಿಶೀಲನೆಗೆ ಬಾರ್ಜ್ ಪಡಿಸುವಿಕೆ, ಉಡುಪಿ ಹಿರಿಯರ ಬಂಧು ದಿ| ಪಿ ರಾಮಚಂದ್ರ ರಾಯರ ಸ್ಮಾರಕಮಂದಿರ ಮತ್ತು ಚಿತ್ರ ಇಡುವ ವ್ಯವಸ್ಥೆ ಮೊದಲಾದ ಕುರಿತು ವಿಚಾರ ವಿನಿಮಯ ಮಾಡಿ ಮುಂದಿನ ಸಭೆಯನ್ನು ಇದೇ ತಾ. 18ಕ್ಕೆ ಜರಗಿಸಬೇಕೆಂದೂಯ್ತು.

ಮೂಲ್ಕಿಯಲ್ಲಿ ಚೈನಾ ದುರಾಕ್ರಮಣ ಖಂಡನೆಗಾಗಿ ಇದೇ ತಾ. 8ರಂದು ಪ್ರಚಂಡ ಸಾರ್ವಜನಿಕ ಸಭೆಯು ಗೃಹೈಸ್ಕೂಲಿನಮಬ್ಯಾಧ್ಯಾಪಕ ಬಿ.ಎ ಕ್ಷೇವಿಯರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು ಅಸೊಸಿಯೇಶನ್ ಶಾಲಾ, ಹೈಸ್ಕೂಲು ವಿದ್ಯಾರ್ಥಿ, ವಿದ್ಯಾರ್ಥಿನಿಯರ ಮೌಲುದ್ದಿದ ಮೆರವಣಿಗೆಯು ಘೋಷಣೆಗಳೊಂದಿಗೆ ನಡೆಯಿತು. ಗುಡ್ಡಪ್ಪ ಮೂಡಾಯಿಯವರು ಪ್ರಸ್ತಾವಿಕ ಭಾಷಣ ಮಾಡಿದ ನಂತರ ಶ್ರೀಗಳಾದ ಸಂಜೀವ ಸುವರ್ಣ, ಎಂ. ಲೋಬೋ ಪ್ರಭು, ಡಾ ಕೆ. ಬಾಬು ಶೆಟ್ಟಿ, ಕೆ.ರಾಮ ಭಟ್, ಎಂ ಎಸ್. ಪಾಡಿಲ್ ಇವರು ಚೈನಾದ ದಬ್ಬಾಳಿಕೆಯನ್ನು ಖಂಡಿಸಿ ದೇಶದ ಜನರಲ್ಲಾ ರಾಷ್ಟ್ರರಕ್ಷಣೆಗಾಗಿ ಒಗ್ಗಟ್ಟಾಗುವ ಅವಶ್ಯಕತೆಯನ್ನು ಜನತಾಕರ್ತವ್ಯವನ್ನೂ ವಿವರಿಸಿದರು. ಡಾ ಸಂಜೀವ ನಾಥ ಐಳ,ಎಂ. ಎಲ್. ಎ ಇವರು ಹಣ, ಆಭರಣ ಮತ್ತಿತರ ಸಹಾಯ ಕೊಟ್ಟವರ ಹೆಸರುಗಳನ್ನು ಓದಿ ಹೇಳಿದರು. ಅಧ್ಯಕ್ಷರ ಭಾಷಣಾ ನಂತರ ಎಂ ರತ್ನಾಕರ ರಾಯರು ವಂದನೆಗಳನ್ನು ಸಲ್ಲಿಸಿದರು.

ಮೂಲ್ಕಿ ವೆಂಕಟರಮಣ ದೇವಸ್ಥಾನದಿಂದ ರೂ. 5555, ಕು. ಉನ್ನೂ ೧ ಜತೆ ಕಿವಿಯ ಬೆಂಡೋಲೆ, ಕು| ಜಯಂತಿ ಅಮ್ಮಿನ್ಞಾಂ ೨ ಚೈನು, ಮಿಸೆಸ್ ಪದ್ಮಾವತಿ ಬಿ. ಶೆಟ್ಟಿ, ೧ ಚೈನು, ಎಂ. ಎಸ್. ಹವಿಡ್, ೧ ಉಂಗುರ, ಗವರ್ನ್‌ಮೆಂಟ್ ಹೈಸ್ಕೂಲ್ ಶಿಬಂದಿ ಮತ್ತು ವಿದ್ಯಾರ್ಥಿಗಳು ರೂ. 801, ಮೆಹಲಿನಾ ಗರ್ಲ್ಸ್ ಹೈಸ್ಕೂಲ್ ಶಿಬಂದಿ ಮತ್ತು ವಿದ್ಯಾರ್ಥಿನಿಯರುಗಳು ರೂ. 355, ವರ್ಕಿಂಗ್ ಸಂಘ ರೂ. 279= 75, ಮೂಲ್ಕಿ ಗಣೇಶ ಬೀಡಿ ಶಾಪಿಯ ಶಿಬಂದಿ ಮತ್ತು ಕೆಲಸಗಾರರು 806-75, ನಿವೇಕ ಬೀಡಿ ಪ್ರೊಪ್ರೈಟರ್ ಮತ್ತು ಕೆಲಸಗಾರರು ರೂ. 125, ಬ್ಯಾಂಕ್ ಆಫ್ ಬರೋಡಾ ಎಂಪ್ಲಾಯೀಸ್ ಮತ್ತು ಶಿಬಂದಿ ರೂ. 105, ಡಾ ಬಿ. ಸೀತಾರಾಮ, ಶೆಟ್ಟಿ ರೂ. 101, ಮತ್ತಿತರರು ನಿಧಿಗೆ ಉದಾರ ಸಹಾಯ ನೂಡಿರುವರು.

ಉಡುಪಿ ಬ್ಲಾಕ್ ಡೆವಲಪ್‌ಮೆಂಟ್— ಆಫೀಸಿನ ನೋನ್‌ಗಜೆಟೆಡ್ ನೌಕರರು ರಾಷ್ಟ್ರೀಯ ರಕ್ಷಣಾ ನಿಧಿಗೆ ತಮ್ಮ ಒಂದಿನದ ವೇತನವನ್ನರ್ಪಿಸಿ ಭಾರತ ಸರಕಾರಕ್ಕೆ ಬೆಂಬಲ ಸೂಚಿಸಿದ್ದಾರೆ.

ರಕ್ಷಣಾ ಸಮಿತಿ— ಇದೇ ತಾ. 8ರಂದು ಉಡುಪಿ ಬೋರ್ಡು ಹೈಸ್ಕೂಲಿನ ಜನತಾ ಭವನದಲ್ಲಿ ಶ್ರೀ ಟಿ ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯೊಂದರಲ್ಲಿ ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿಯೊಂದು ರಚಿಸಲ್ಪಟ್ಟಿತು. ಈ ಪ್ರಾತಿನಿಧಿಕ ಸಮಿತಿಗೆ ಶ್ರೀ ಟಿ. ಎ. ಪೈಯವರು ಅಧ್ಯಕ್ಷರಾಗಿಯೂ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ ಇವರು ಉಪಾಧ್ಯಕ್ಷರಾಗಿಯೂ ಮತ್ತಿತರರು ಸದಸ್ಯರಾಗಿಯೂ ಇರುವರು.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್ ಕಾರ್ಕಳ.

ರಿಜಿಸ್ಟರ್ಡ್ ಆಫೀಸು:

ವಿಜಯಾ ಬ್ಯಾಂಕ್ ಬಿಲ್ಡಿಂಗ್ ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3 ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಲ್ಲಿ ಚಿನ್ನಾಭರಣವ ಈಡಿನ ಮೇಲೆ ಸಾಲ ಪಡೆಕೊಂಡು ಕ್ಲಪ್ತ ಮಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲವನ್ನು ಬರವಾಡಿಕೆಯಿಳ್ಳುವರೇ ಆವರಿಗೆ ರಿಜಿಸ್ಟ್ರೀನೋಟೀಸು ಬಿಟ್ಟಿಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ಸಗಗಳನ್ನು ಇದೇ ಬರವ ತಾರೀಕು 4—12—1962ನೇ ಮಂಗಳವಾರ ಮಧ್ಯಾಹ್ನ ೧ಗಂಟೆ 4ಕ್ಕೆ ಸರಿಯಾಗಿ ಆಥವಾ ಬ್ಯಾಂಕಿಗೆ ಯಕ್ತಕಂಡ ಇತರ ಯಾವುದೇ ದಿನ ಗಳಲ್ಲಿ ಪುನಹ ನೋಟೀಸು ಕೊಡದೇನೆ ಬಹಿರಂಗವಾಗಿ ಏಲಂ ಮಾಡಲಾಗುವುದು ಏಲಂ ಮಿನಲ್ಲಿ ಹುಟ್ಟಬಂದ ಏಜೆಜು ಸಾಲದ ಮೊಬಲಗಿಗೆ ಕಡಿಮೆಯೊದಲ್ಲಿ ಸಂಬಂಧಪಟ್ಟವರೆ ದೇಪಜನಾಬ್ದಾರಿಯಿಂದ ಬ್ಯಾಂಕಿಗೆ ಬರ ಏಜೇಜನ್ನು ವಸೂಲು ಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸೋಣಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 30.9.1962ಕ್ಕೆ ಬರತಕ್ಕ ಮೊಬಲಗು.
611/60	ಕೆ. ಸಿ. ಕುಮಾರಯ್ಯ ಹೆಗ್ಡೆ, ಕೆ.ಸಿ. ಹಡ್ಲಯ್ಯ ಹೆಗ್ಡೆಯವರ ಮಗ, ವ್ಯಾಪಾರಿ, ಹಿರಿಯಂಗಡಿ, ಕಾರ್ಕಳ.	236=34
852/60	ಇಂದಿರ ಶೆಟ್ತಿ, ನಾರಾಯಣ ಶೆಟ್ಟಿಯವರ ಮಗಳು, ಬ್ಯಾಣಬೆಟ್ಟು ಅತ್ತೂರು ಗ್ರಾಮ, ಪೋಸ್ಟು ಅತ್ತೂರು.	115=46
914/60	ರಾಜ ಕೊರಗ, ಕಾಂತರ ಕೊರಗನವರ ಮಗ, ಪಂಚಾಯತು ಆಫೀಸು, ಕಾರ್ಕಳ.	42=67
925/60	ಬಾಬು ಶೆಟ್ಟಿ, ತನ್ಮಯ್ಯ ಶೆಟ್ಟರ ಮಗ, ಯೆರ್ಲಪ್ಪೆ ಮನೆ, ಸಾಣೂರು ಗ್ರಾಮ, ಸಾಣೂರು ಪೋಸ್ಟು.	46=31
1092/60	ಬೋಜಪ್ಪ ಹನ್ಮ ಆದಪ್ಪ ಹನ್ಮರ ಅಳಿಯ, ಆಯರೆಬೆಟ್ಟು ಮನೆ, ರೆಂಜಾಳ ಗ್ರಾಮ, ಪೋಸ್ಟು ರೆಂಜಾಳ.	43=22
1181/60	ಸಂಜೀವ ಶೆಟ್ಟಿ, ಕುಡ್ಡು ಶೆಟ್ಟಿಯವರ ಮಗ, ಶೆಟ್ಟಿಬೆಟ್ಟು ಪರಂಡಿ ಮನೆ, ಪಾಲಡ್ಕ ಗ್ರಾಮ ಬೇಲಾಡಿ ಪೋಸ್ಟು	96=69
155/61	ಜೋನ್ ಲೋಬೊ, ಇಗ್ನೇಷಿಯಸ್ ಲೋಬೋರ ಮಗ, ಸಂತೆಕಟ್ಟೆ, ಕಾರ್ಕಳ	80=90
244/61	ಬಿ ಆಂತೋನಿ ಬಾಬಿಯವರ ಮಗ, ಕೇರಿ ಮನೆ ಮೂಳಗ್ರಾಮ ನೆಲ್ಲಿತಾರ್ ಪೋಸ್ಟು.	36=64
280/61	ಕಿಟ್ಟು ಶೆಟ್ಟಿ, ಸಿದ್ದು ಶೆಟ್ಟರ ಅಳಿಯ, ಪಡುಮನೆ ನಿಟ್ಟೆ ಪೋಸ್ಟು.	183=23
316/61	ರಘುರಾಮ ಶೆಟ್ಟಿ, ಕುಸ್ಟ ಶೆಟ್ಟರ ಮಗ, ಕುದಾಲಬೆಟ್ಟು ಕಾಂತಾವರ ಗ್ರಾಮ, ಪೋಸ್ಟು ಕಾಂತಾವರ.	277=74
469/61	ಲೋಕಯ್ಯ ಶೆಟ್ಟಿ, ಬೊಗ್ಗು ಶೆಟ್ಟರ ಮಗ, ಕುಕ್ಕುಬೆಟ್ಟು ಮನೆ ಕುಕ್ಕುಂದೂರು ಗ್ರಾಮ, ಕುಕ್ಕುಂದೂರು ಪೋಸ್ಟು	200=74
478/61	ಕೆ. ದೇವಪ್ಪ, ಶಾಂತು ಪೂಜಾರಿಯವರ ಮಗ, ಗವರ್ನ್‌ಮೆಂಟು ಇಂಡಿಕ್ಟ್ರೀಸ್ ಡಿಪಾರ್ಟ್‌ಮೆಂಟು ಕಾರ್ಕಳ	75=38
479/61	ನಾರಾಯಣ ಶೆಟ್ಟಿ, ನಾಗಪ್ಪ ಶೆಟ್ಟರ ಮಗ, ಮೇಲ್ಮನೆ ಸಾಣೂರು ಗ್ರಾಮ, ಸಾಣೂರು ಪೋಸ್ಟು.	172=32
496/61	ಕೆ. ಶಿವಪ್ಪ ಪೆಡ್ಡೆ, ಮುತ್ತಯ್ಯ ಹೆಗ್ಡೆಯವರ ಮಗ, ಮಾಡಿಗುತ್ತು, ಕುಂಟಾಡಿ ಕಲ್ಯ ಗ್ರಾಮ ಕುಂಟಾಡಿ ಪೋಸ್ಟು	132=29
497/61	ಕೆ ಶಿವಪ್ಪ ಹೆಗ್ಡೆ, ಮುತ್ತಯ್ಯ ಹೆಗ್ಡೆಯವರ ಮಗ, ಮಾಡಿಗುತ್ತು. ಕುಂಟಾಡಿ ಕಲ್ಯ ಗ್ರಾಮ, ಕುಂಟಾಡಿ ಪೋಸ್ಟು.	91=18
509/61	ಕೆ. ಸಮಾನಂದ ಭಟ್ಟ, ಮುಕುಂದ ಭಟ್ಟರ ಮಗ, ಅನೆಕೆರೆ, ಕಾರ್ಕಳ	115=29
522/61	ಶೀನ ಪೂಜಾರಿ, ರಾಮ ಪೂಜಾರಿಯವರ ಮಗ, ಸೊವರಿನ್ ಸ್ಟೋರ್ಸ್, ಕಾರ್ಕಳ.	58=15
534/61	ಕೆ. ದೊಡ್ಡಣ್ಣ ಶೆಟ್ಟಿ, ಚಂದು ಶೆಟ್ಟರ ಮಗ, ಪರೇಲ, ಕೊರಂಗ್ರ ಪಾಡಿ ಪೋಸ್ಟು.	52=46
535/61	ಕೆ. ದೊಡ್ಡಣ್ಣ ಶೆಟ್ಟಿ, ಚಂದು ಶೆಟ್ಟರ ಮಗ, ಪರೇಲ, ಕೊರಂಗ್ರ ಪಾಡಿ ಪೋಸ್ಟು	57=05
562/61	ಪೂದ್ದು ಶೆಟ್ಟಿ, ಶೀನ ಶೆಟ್ಟರ ಅಳಿಯ, ಮುಟ್ಲೊಟ್ಟು, ಅತ್ತೂರು ನಿಟ್ಟೆ ಗ್ರಾಮ, ಅತ್ತೂರು ಪೋಸ್ಟು.	228=02

The Vijaya Bank, Ltd.,
KARKALA.
Dated: 12—11—1962

M. M. Bhandary,
Agent.

ಪರ್ಕಳ— ಯುವಕ ಮಂಡಳದ ಸದಸ್ಯರು ಮತ್ತು ಊರ ಮಹನೀಯರು ಒಂದು ಗೂಡಿ ಭಾರತ ರಕ್ಷಣಾನಿಧಿಗೆ ರೂ.114—37 ನಯೇ ಪೈಸೆಯನ್ನು ಪ್ರಥಮ ಹಂತವಾಗಿ ತಾ 5.11.62ರಂದು ಕೊಟ್ಟರುಬರಲ್ಲದೆ ಚೀನೀ ಆಕ್ರಮಣಕಾರರನ್ನು ಹಿಂದೋಡಿಸಲು ಭಾರತ ಸರಕಾರಕ್ಕೆ ಸರ್ವ ರೀತಿಯ ಬೆಂಬಲ ಸೂಚಿಸಿದ್ದಾರೆ.

ಹಂಗಾರಕಟ್ಟೆ— ಇದೇ ತಾ. 10ರಂದು ಮೈಸೂರು ರಾಜ್ಯದ ಮತ್ತು ಗ್ರಾಮೋದ್ಯೋಗಗಳ ಬೋರ್ಡಿನ ಅಧ್ಯಕ್ಷರಾದ ಶ್ರೀ ಎಚ್. ಸಿದ್ಧವೀರಪ್ಪ ಅವರ ಗೌರವಾರ್ಥವಾಗಿ ಹಂಗಾರಕಟ್ಟೆ ಸರ್ವೋದಯ ಇಂಡಸ್ಟ್ರಿಯಲ್ ಕೋಪರೇಟಿವ್ ಸೊಸೈಟಿಯ ಡೈರೆಕ್ಟರರು ಡಾ| ಟಿ ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದನ್ನೇ ಹಮ್ಮಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಸಿದ್ಧವೀರಪ್ಪನವರು ಬೋರ್ಡಿನ ಕಾರ್ಯಕಲಾಪಗಳನ್ನೂ, ಹೊಸ ಯೋಜನೆಯನ್ನೂ ವಿವರಿಸಿದರು. ಅಧ್ಯಕ್ಷ ಡಾ. ಪೈಗಳು ಪರಸ್ಪರ ಸಹಕಾರದಿಂದ ಗ್ರಾಮದ ಉತ್ಪಾದನಾ ಸಂಪತ್ತನ್ನು ಗ್ರಾಮಬಲಂಬನ ಶಕ್ತಿಯಿಂದ ಹೆಚ್ಚಿಸಿಕೊಳ್ಳುವುದೇ ಸರ್ವೋದಯದ ಸಂದೇಶವೆಂದೂ ಹಂಗಾರಕಟ್ಟೆಯು ತನ್ನ ಗತ ವೈಭವವನ್ನು ಪುನಹ ಪಡೆದು ಹಂಗಾರಕಟ್ಟೆಯೊಗಿ ಮೆರೆಯಲೆಂದು ಹಾರೈಸಿದರು. ಆರಂಭದಲ್ಲಿ ಶ್ರೀ ಬಿ. ವಿ. ಕೆದ್ಲಾಯರು ಸ್ವಾಗತಿಸಿದರಲ್ಲದೆ ಸೊಸೈಟಿ ಅಧ್ಯಕ್ಷ ಶ್ರೀ ಬಿ ಆನಂದರಾಮ ಉಡುಪರು ವರದಿ ಒಪ್ಪಿಸಿದರು. ಅಂತ್ಯದಲ್ಲಿ ಶ್ರೀ ಎ.ಎಸ್.ಪೆಬ್ಬರಿಯವಂದನೆಸಲ್ಲಿಸಿದರು.

ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ— ಸದಸ್ಯರ ವಾರ್ಷಿಕ ಮಹಾಧಿವೇಶನವೆ ತಾ. 9ರಂದು ಶ್ರೀ ಪಿ. ಹರಿದಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರೆಯಿತು. ಹಿಂದಿನ ವರ್ಷದ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಜೂರು ಮಾಡಿ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಆರಿಸಲಾಯಿತು. ಆನಂತರ, ಚೀನೀಯರ ನಗ್ನ ಆಕ್ರಮಣವನ್ನು ಪ್ರತಿಭಟಿಸಿ ದೇಶರಕ್ಷಾಗಿ ಪ್ರಾಣತೆತ್ತ ಯೋಧರ ಆತ್ಮಗಳಿಗೆ ಶಾಂತಿ ಸಿಗಲೆಂದೂ ನನ್ನು ವೀರ ಯೋಧರು ನೂತ್ಯಭೂಮಿಯ ರಕ್ಷಣೆಯಲ್ಲಿ ಯಶಸ್ವಿಯಾಗಲೆಂದೂ ಹಾರೈಸಿ ಆರ್ಥಿಕ ನೆರವನ್ನು ನೀಡುವ ಗೊತ್ತುವಳಿಯನ್ನು ಸ್ವೀಕರಿಸಲಾಯಿತು.

ಹಿರಿಯಡ್ಕ— ಇದೇ ತಾ. 18ರಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಉದ್ಘಾಟನೆ ಮತ್ತು ಕಟ್ಟಡದ ಶಂಕುಸ್ಥಾಪನಾ ಸಮಾರಂಭವನ್ನು ಡಾ| ಟಿ. ಎಂ. ಎ. ಪೈಯವರು ಶ್ರೀ ಎಸ್. ಡಿ. ಸಾಮ್ರಾಜ್ಯ, ಎಂ. ಎಲ್. ಎ. ಆವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು ತಾಲೂಕು ಬೋರ್ಡಿನ ಉಪಾಧ್ಯಕ್ಷೆ ಡಾ| ಕು ಸ್ವರ್ಣಾಚಾರ್ಯರು ಸ್ವಾಗತಿಸಿದರು. ಅಂತ್ಯದಲ್ಲಿ ಡಾ| ಚಂದಯ್ಯ ಹೆಗ್ಡೇರು ಧನ್ಯವಾದಗಳನ್ನಿತ್ತರು.

ಪಂಚಾಯತ ರಾಜ್ಯ ಸಮಿತಿ— ಸರಕಾರದಿಂದ ಏಯೋಜಿಸಲ್ಪಟ್ಟ ನ್ಯೂಸೂರಿನ ಪಂಚಾಯತ ರಾಜ್ಯ ಸಮಿತಿಯು ಇದೇ ತಾ. 19 ಮತ್ತು 20ರಲ್ಲಿ ನನ್ನು ಜಿಲ್ಲೆಯ ಸುಳ್ಯ, ಪುತ್ತೂರು, ಪಳಿಯಂಗಡಿ, ಕಿನ್ನಿಗೋಳಿ ಸಂಜಾಯತ್‌ಗಳನ್ನು ಸಂದರ್ಶಿಸಲಿರುವುದು ತಾ. 20ನೇ ಸಂಜೆ ಜಿಲ್ಲಾ ಬೋರ್ಡು ಸಭಾಸದನದಲ್ಲಿ ದೆವಲಪ್‌ಮೆಂಟ್ ಕೌನ್ಸಿಲಿನ ಸದಸ್ಯರಿಗೆ ಭೇಟಿ ಇದೆ.

(ಒಸೀ ಪುಟದಿಂದ)

ಯುದ್ಧಭೀತಿಯ ಗಂಭೀರ ಬಿಕ್ಕಟ್ಟಿನಲ್ಲಿ ಇಂದು ಹೊಸ ರಕ್ತದ ಮೂಗದರ್ಶನ ನಮ್ಮ ಸಂರಕ್ಷಣಾ ಶಾಪೆಗೆ ಬೇಕು; ಎಂತಲೇ ಮೆನಸ್ಸಿನಿಂದ ತೆರವಾದ ಆ ಮಹತ್ವದ ಸ್ಥಾನವನ್ನು ಅವರು ಏರಲಿದ್ದಾರೆ: ಚೀನೀಯರ ಅನ್ಯಾಯದ ಆಕ್ರಮಣವನ್ನು ತಡೆಗಟ್ಟುವಲ್ಲಿ ಇನ್ನು ಸಮರ್ಥರಾಗುತ್ತಾರೆಂಬ ವಿಶ್ವಾಸ ಎಲ್ಲಿದೆಯೂ ಹೆಚ್ಚಿದೆ; ಆಗ ಮುಂಬರ್ಜಿ ದೇಸಾಯಿಯವರ ಸ್ಥಾನವೂ ಸುಭದ್ರವಾಗುವುದು.

ಪೀಕಿಂಗಿನ ಉತ್ತರವೇನು?

ಯುದ್ಧಕ್ಕೆ ಮೊದಲು ತುತ್ತಾಗುವುದು ಸತ್ಯಾಂಶ. ಚೀನೀಯರು ಈಶಾನ್ಯ ಭಾರತದಲ್ಲಿ ತಮ್ಮ ಮುತ್ತಿಗೆಯನ್ನು ಒಂದು ದೊಡ್ಡ ಕುತಂತ್ರದಿಂದಲೇ ಆರಂಭಿಸಿದರು.

ಅವರ ಪ್ರಚಾರ ಕುತಂತ್ರ ಅವರ ಸೇನಾ ಕೂಚಿಗಿಂತ ಮುಂದೆ ಸಾಗಿತ್ತು. ತಮ್ಮ ದುರಾಕ್ರಮಣಕ್ಕೆಂತ ಎಷ್ಟೋ ಮುಂದೆ ಪ್ರಚಾರತಂತ್ರ ಹೋಗಿತ್ತು. ಭಾರತವೇ ಆಪರಾಧಿ ಎಂದು ಇಡೀ ವಿಶ್ವಕ್ಕೇ ಚೀನೀಯರು ಸ್ವಚಾರ ಮಾಡುತ್ತಿದ್ದರು.

ಚೀನೀಯರ ಈ ಉಪಾಯ ತತ್ಕಾಲಕ್ಕೆ ಯಶಸ್ವಿಯಾಯಿತೆನ್ನಬಹುದು. 1962 ಅಕ್ಟೋಬರ್ 2ರಂದು ಪ್ರಾತಃಕಾಲ 4-30 ಘಂಟೆಗೇ ಭಾರತದ ಪೂರ್ವ ಭಾಗದಲ್ಲಿ ಯುದ್ಧ ಕಾರ್ಯಾಚರಣೆಯ ಸುದ್ದಿಯನ್ನು ಬಿ. ಬಿ. ಸಿ. ರೇಡಿಯೋ ಬಿತ್ತರಿಸಿತು. ಈ ಸುದ್ದಿ ಪ್ರಸಾರವಾದ ಸುಮಾರು ಅರ್ಧ ಘಂಟೆಯ ನಂತರ, ಚೀನೀಯರು ಥಾಗ್ಲಾ ಪರ್ವತ ಪಂಕ್ತಿಗಳಿಂದ ಧಾಳಿ ಪ್ರಾರಂಭಿಸಿದರು.

ಭಾರತೀಯ ಸೇನಾಬಲಕ್ಕೆ ಇದರಿಂದ ವಿಸ್ಮಯ ಉಂಟಾದರೂ ಪೀಕಿಂಗ್‌ನಿಂದ ಯಾವ ಸಮಜಾಯಿಷಿಯೂ ಸಿಗಲಿಲ್ಲ.

ಇಡೊಂದು ಸ್ಪಷ್ಟವಾದ ಸುಳ್ಳು. ಮತ್ತೊಮ್ಮೆ ಆಲೋಚನೆ ಮಾಡಿದಾಗ ಅವರ ಕುತಂತ್ರ ಗುರಿ ತಪ್ಪಿತೆಂದು ಯಾರಿಗಾದರೂ ಗೊತ್ತಾಗುವುದು. ಆದರೆ ಪ್ರತಿಯೊಂದು ಸುಳ್ಳೂ ಅದು ಸಣ್ಣದೆ ಇರಲಿ, ದೊಡ್ಡದೇ ಇರಲಿ ಲಾಭವಾಯಿತಲ್ಲವೆಂದೇ ಚೀನೀಯರ ಎಣಿಕೆ. ಗಡಿ ವಿವಾದದಲ್ಲಿ ಅವರು ಅಸತ್ಯವನ್ನೇ ಇಟ್ಟಗೆ-ಗಾರೆಗಳನ್ನಾಗಿ ಬಳಸಿಕೊಂಡು ವಾದಸೌಧವನ್ನು ನಿರ್ಮಿಸಿಕೊಂಡಿರುವರು.

ಭಾರತವೇ ಆಕ್ರಮಣಕಾರಿ ಎಂಬ ನಂಬಿಕೆಯನ್ನು ಜಗತ್ತಿಗೆ ಮೂಡಿಸಲು ಚೀನೀಯರು ಹವಣಿಸಿದರು. ನಾವು ಧಾಳಿಗಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದುದಾಗಿ ಚೀನೀಯರು ಹೇಳಿರುವರು; ತಾವು ಪ್ರತಿರಕ್ಷಣೆಯನ್ನು ಮಾತ್ರ ಹೂಡಿರುವುದಾಗಿ ಕೃತಕನಯದಿಂದ ಘೋಷಿಸಿರುವರು. ಜನರು ಇದನ್ನೆಲ್ಲಾ ನಿಜವೆಂದು ನಂಬುವರೆಂದು ಚೀನಾ ಊಹಿಸುತ್ತಿದೆಯೇ? ಆದರೆ ಈ ವಿವಾದಗಳಿಗೆ ಸಂಬಂಧಪಟ್ಟ ಇದುವರೆಗಿನ ಘಟನೆಗಳು ಬೇರೆ ಕಥೆಯನ್ನೇ ನಿರೂಪಿಸುತ್ತಿವೆಯಲ್ಲಾ!

ಉದಾಹರಣೆಗೆ, ನಾವು ಆರಂಭದಲ್ಲಿ ಹಿಮ್ಮೆಟ್ಟಬೇಕಾದ್ದನ್ನು ತೆಗೆದುಕೊಳ್ಳಿ. ನಾವು ಯುದ್ಧಸಿದ್ಧತೆ ಮಾಡಿಕೊಂಡಿರಲಿಲ್ಲವೆಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ? ನಾವು, ಶಾಂತಿ ವಿಧಾನಗಳಿಗೆ ಎಷ್ಟರ ಮಟ್ಟಿಗೆ ನಿಷ್ಠರಾಗಿದ್ದೇವೆಂಬುನ್ನು ಅದು ಸ್ಪಷ್ಟವಾಗಿ ಸೂಚಿಸುತ್ತದ.

ಘರ್ಷಣೆಯನ್ನು ತಪ್ಪಿಸಲು ನಾವು ತುಂಬಾ ಹೆಣಗಿದೆವು. ಸಂಧಾನದ ಮೂಲಕವೇ ಎಲ್ಲಾ ವಿವಾದಗಳನ್ನು ಬಗೆಹರಿಸಿಕೊಳ್ಳೋಣವೆಂದು ಪದೇ ಪದೇ ಸ್ಪಷ್ಟಪಡಿಸಿದೆವು. ಶಾಂತಿ ಸಂಧಾನ, ನಮ್ಮ ಆಧ್ಯಾತ್ಮಿಕ ಮತ್ತು ಮಾನಸಿಕ ಸ್ಥಿತಿಗಳಿಗೆ ಒಗ್ಗಿ ಬಂದ ಆದರ್ಶ, ಇದನ್ನು ಒಪ್ಪಿಕೊಳ್ಳುವುದು ಪೀಕಿಂಗ್‌ನ ಜಾಯಮಾನಕ್ಕೆ ಸರಿಹೋಗದಿರಬಹುದು. ಆದರೆ; ಇಡೀ ಜಗತ್ತಿಗೇ ಇದು ಗೊತ್ತಿರುವ ವಿಷಯ, ನಮ್ಮ ಗಡಿ ಪ್ರದೇಶಗಳಲ್ಲಿ ಸಂಭವಿಸಿದ ಆಕಸ್ಮಿಕ ಧಾಳಿಗೆ ವಾಸ್ತವವಾದ ಕಾರಣಗಳೇನೆಂಬುದನ್ನು ಜಗತ್ತು ಸ್ಪಷ್ಟವಾಗಿ ತಿಳಿದಿದೆ

ಶಾಂತಿ ಮತ್ತು ಸ್ವಾತಂತ್ರ್ಯ ರಕ್ಷಣೆಗಾಗಿ ನಾವು ಪಣತೊಟ್ಟಿದ್ದೇವೆ ಚೀನೀಯರು, ಈಗ, ಏನೇ ಹೇಳಲಿಬ್ಬಿಸಿದರೂ ಸತ್ಯಾಂಶವನ್ನು ಅವರು ಅರಿಯಲಿಲ್ಲ, ನಮ್ಮ ಎಲ್ಲಾ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ನಾವು ವಿವಾದಗಳನ್ನು ಶಾಂತ ರೀತಿಯಿಂದ ಬಗೆಹರಿಸುವ ತತ್ವಗಳನ್ನೇ ಎತ್ತಿ ಹಿಡಿದಿದ್ದೇವೆ. ಇದು ಚೀನೀಯರಿಗೆ ತಿಳಿಯದ ವಿಷಯವೇನಲ್ಲ.

ಕೊರಿಯಾ ವಿಷಯದಲ್ಲಿ ಇದೇ ಮಾರ್ಗವನ್ನು ನಾವು ಅನುಸರಿಸಿದೆವು. ಇಂಡೋ-ಚೀನಾದ ಬಗೆಗೂ ಇದೇ ತತ್ವವನ್ನು ಇಟ್ಟುಕೊಂಡೆವು. ಕಾಂಗೋದಲ್ಲಿಯೂ ನಮ್ಮ ನಿಲುವು ಇದೇ ಆಗಿತ್ತು. ಇದು ಜಗತ್ತಿನಲ್ಲಿ ಎಲ್ಲರಿಗೂ ಗೊತ್ತು, ಚೀನೀಯರಿಗೂ ಗೊತ್ತು.

ವಿಶ್ವಶಾಂತಿ—ಸಾಧನೆಗಾಗಿ ನಾವು ಪಡುತ್ತಿರುವ ಪ್ರಯತ್ನಗಳಿಗೆ ವಿಶ್ವಸಂಸ್ಥೆಯ ಕಾರ್ಯಕ್ರಮ ಘಟನಾವಳಿಯೇ ಸಾಕ್ಷಿಯಾಗಿರುವುದಲ್ಲ! ಚೀನೆಯ ಬುದ್ಧಿಗೆ ಈ ಮೌಲ್ಯಗಳು ಮನಸ್ಸಿಗೆ ಹಿಡಿಯದ ವಿಷಯವಾಗಿರಬಹುದು, ಆದರೆ ವಿಶ್ವದ ಬಹುತೇಕ ರಾಷ್ಟ್ರಗಳು ಚೀನವನ್ನು ಸಂಶಯ ಮತ್ತು ಅಸಹನಂಬಿಕೆಯಿಂದ ನೋಡುತ್ತಿದ್ದಾಗ ನಾವು ಯಾವ ರೀತಿಯ ಸ್ನೇಹಪೂರ್ಣ ದೃಷ್ಟಿಯನ್ನು ಇಟ್ಟುಕೊಂಡಿದ್ದೇವೆಂಬುದನ್ನು ಚೀನ ಸುಲಭವಾಗಿ ಮರೆಯಬಲ್ಲುದೇ?

ಸಹಾಯ ನೀಡಿದ ಕೈಯನ್ನೇ ಕಚ್ಚುತ್ತಾರೆಯೇ? ಆದು ಅನಾಗರಿಕ ಕಾನೂನಿಗಿಂತಲೂ ಕೀಳಾದುದು. ಪೀಕಿಂಗಿನ ನಯವಾದ ಕುಯುಕ್ತಿಯು, ಇಂತಹ ವರ್ತನೆಗೆ ಕೆಲವು ಕುಂಟು ನೆಪಗಳನ್ನು ಮುಂದೊಡ್ಡಬಹುದು. ಸತ್ಯಾಂಶವನ್ನು ತಡೆಗಟ್ಟಬಹುದು. ಮಿಥ್ಯಾಪವಾದವನ್ನು ಹರಡಬಹುದು. ಇದರಿಂದ, ಚೀನೀಯರು ತಮ್ಮ ಆತ್ಮವಂಚನೆ ಮಾಡಿಕೊಳ್ಳುತ್ತಾರೆಯೆ ಹೊರತು ನಾವಲ್ಲ!

ಅಹೋ ರಾತ್ರಿ ಚೀನೀ ಪ್ರಚಾರಕರು ಕಟ್ಟುಕತೆಗಳನ್ನು ನೇಯುತ್ತಿರುವರು. ಗಡಿ ವಿವಾದದಲ್ಲಿ ಈ ರಾಷ್ಟ್ರ, ಆ ರಾಷ್ಟ್ರ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದೆಯೆಂದು ಸಾಧಿಸಲು ಶ್ರಮಿಸುತ್ತಿರುವರು. ಅಸತ್ಯವನ್ನೇ ಅಲಂಗಿಸಿರುವರು. ತಮ್ಮ ಕಿವಿಯಲ್ಲಿನ ಕೊಳೆಯನ್ನು ತೆಗೆದುಹಾಕಿ ಆಲಿಸಿದರೆ ವಾಸ್ತವಾಂಶ ಕಿವಿಗೆ ಬಿದ್ದೀತು.

ಭಾರತಕ್ಕೆ ಅವ್ಯಾಹತವಾಗಿ ಬರುತ್ತಿರುವ ಸಹಾನುಭೂತಿಯ ಹೊನಲು, ಚೀನೀಯರಿಗೆ ಕ್ಷೋಭೆ ತಂದೀತು; ದಿಗ್ಭ್ರಮೆಯಂಟುಮಾಡುವ ಪ್ರತಿಧ್ವನಿ ಕೇಳಿಸೀತು ವಿಶ್ವದ ಬಹುತೇಕ ರಾಷ್ಟ್ರಗಳು ಈ ದುರಾಕ್ರಮಣಕಾರರನ್ನು ಹಿಂದೋಡಿಸಲು ನೆರವು ಕೊಡಲು ಉತ್ಸಾಹದಿಂದ ಮುಂದೆ ಬಂದಿರುವುದು ಹೆಮ್ಮೆಯ ವಿಷಯ. ಚೀನೀಯರಿಗೆ ಆದು ಭಯಂಕರವನ್ನು ತಂದಿರಬೇಕು.

ಚೀನೀಯರು ಇನ್ನೂ ವಿಜಯದ ಭ್ರಮೆಯನ್ನೇ ಆರಾಧಿಸುತ್ತಿರಬಹುದು. ನಮ್ಮ ಪ್ರತಿರೋಧ ಶಕ್ತಿಯ ಬಗೆಗಿರುವ ಅವಾಸ್ತವ ತಿಳುವಳಿಕೆಯು ಅದಕ್ಕೆ ಎಡೆಗೊಟ್ಟಿದೆ. ನಮ್ಮ ಸ್ವಾತಂತ್ರ್ಯಕ್ಕಾಗಿ ನಾವು ಕೈಗೆತ್ತಿಕೊಂಡಿರುವ ದೃಢ ನಿರ್ಧಾರದ ಬಗೆಗೆ ಅವರು ಕುರುಡರಾಗಿರಬಹುದು. ಬಿಕ್ಕಟ್ಟಿನಗಳಿಗೆಯಲ್ಲಿ ನಮ್ಮಲ್ಲಿ ಮೂಡಿಬಂದ ಒಗ್ಗಟ್ಟಿನ ಬಗೆಗೂ ಅವರು ಪರಿಹಾಸ್ಯವೂ ಆಗಬಹುದು.

ಆದರೆ, ನಮ್ಮ ಗಡಿಯನ್ನು ಸಂರಕ್ಷಿಸುತ್ತಿರುವ ವೀರ ಯೋಧರ ಹಿಂದೆ ನಮ್ಮ ರಾಷ್ಟ್ರ ಹಿಂದೆಂದೂ ಇಲ್ಲದ ಸಿದ್ಧತೆ ನಡೆಸಿದೆ. ಅಪ್ರತಿಹತ ಶಸ್ತ್ರಾಸ್ತ್ರವನ್ನು ರೂಪಿಸುತ್ತಿದೆ.

ನಮ್ಮ ಎದುರಾಳಿಗೆ ಆ ಬಗ್ಗೆ ಊಹೆಯೆ ಇರಬಹುದು. ಆದೇ ಅವರಿಗೆ ಮೂಲವಾಗುವುದು. ಅದೇ ಬೇರೊಂದು ಕಥೆ.

(ಆಕಾಶವಾಣಿ ಸೌಜನ್ಯ)

ಸಾದರ ಸ್ವೀಕಾರ

ಸಂದರ್ಶನ — ದೀಪಾವಳಿ ಸಂಚಿಕೆ—ಬಿಜಾಪುರ. ಸಂಪಾದಕರು—ಬಿ. ಬಿ. ನಾಯಕ್ ಎಂ. ಎ. ಎಲ್. ಎಲ್. ಬಿ. ಬೆಲೆ. ೦—೪೦ ನ. ಪೈಸೆ

ಭವ್ಯವಾಣಿ—ದೀಪಾವಳಿ ವಿಶೇಷಾಂಕ, ಉಡುಪಿ. ಸಂಪಾದಕ—ಕೆ. ಎಲ್ ಭಟ್, ಬೆಲೆ. ೦—೬೦ ನ. ಪೈಸೆ.

ನೆಗುವ ನಂದ—ದೀಪಾವಳಿ ಸಂಚಿಕೆ, ಬೆಂಗಳೂರು ಸಂಪಾದಕರು ಮತ್ತು ಪ್ರಕಾಶಕರು—ವಿ. ರಂಗನಾಥ ರಾವ್, ಬೆಲೆ ರೂ. ೧.

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಜಳನೇ ವಾರ್ಷಿಕ ವರದಿ.

ಪ್ರಭಾತ—ದೀಪಾವಳಿ ಸಂಚಿಕೆ, ಮಂಗಳೂರು. ಸಂಪಾದಕ—ಕುದ್ಪಿ ವಾಸುದೇವ ಶೆಣೈ, ಬೆಲೆ: ಎರಡಾಣೆ

ದರ್ಶನ—ದೀಪಾವಳಿ ಸಂಚಿಕೆ, ಬೆಳಗಾವಿ. ಸಂಪಾದಕರು—ಎಮ್. ಬಿ. ದೇಸಾಯಿ ಬಿ. ಎ., ಬೆಲೆ: ೦-೫೦ ನ ಪೈ

ಸುಬೋಧ—ದೀಪಾವಳಿ ಸಂಚಿಕೆ, ಬೆಂಗಳೂರು ಸಂಪಾದಕ—ಯಂ. ರಾಮರಾವ್ ಬೆಲೆ: ೦_೬೦ ನ. ಪೈ

ಜನತಾ—ರಾಜ್ಯೋದಯ ವಿಶೇಷಾಂಕ ಹೊನ್ನಾವರ, ಸಂಪಾದಕರು—ಜಿ. ಆರ್. ಪಾಂಡೇಶ್ವರ, ಬೆಲೆ: ೦.೧೦ನ ಪೈ.

ಮೇಲಿನ ಎಲ್ಲಾ ವಿಶೇಷಾಂಕಗಳು. ವೈವಿಧ್ಯ ಪೂರ್ಣವಾಗಿದ್ದು ವಾಚಕೀಯವೂ ಸಂಗ್ರಾಹ್ಯವೂ ಆಗಿವೆ

ವರದಿಗಳು: ಸ್ವಾಮಿ ಶ್ರದ್ಧಾನಂದ ಸೇವಾಶ್ರಮ. ಮಂಗಳೂರು. ಇದರ ೪೧ ನೇ ವರ್ಷ ೬೩ಕ್ಕೆ ಅಂತ್ಯವಾಗುವ ವಾರ್ಷಿಕ ವರದಿ.

ನ್ಯಾಯಕ್ಕಾಗಿ, ಸತ್ಯಕ್ಕಾಗಿ ಹೋರಾಟ

(ಜನೇ ಸುಟದಿಂದ)

ಗೆಳೆದಗದ ರೀತಿ ನಡೆಯು ಬೇಕೆಂದು ನೆಹರೂ—ವೆನ್ ತೊಟ್ಟ ಹಂಬಲಕ್ಕೆ ಅವರ ಅವಿಶ್ರಾಂತಸಾಧನೆಗೆ ನಲ್ವತ್ತೈದು ಕೋಟಿ ಜನರ ಬೆಂಬಲವಿತ್ತೆ. ಈ ಯಜ್ಞ ಫಲಪ್ರದವಾಗಲು ಭಾರತೀಯ ಜನತೆ ನೆರವಾಗಲು ಧಾವಿಸುತ್ತಿದೆ

ಚೀನಿಯರೇ ತೊಲಗಿರಿ. ಭಾರತವನ್ನು ಬಿಟ್ಟು ದೂರ ತೊಲಗಿರಿ. ಭಾರತದ ಪವಿತ್ರತ್ಯಕ್ಕೆ ಕಳಂಕ ಹಚ್ಚ ಬೇಡಿ ಭಾರತದ ಶಾಂತಿ ಪ್ರಿಯತೆಯನ್ನು ಕೆಣಕ ಬೇಡಿರಿ. ಎಂಬ ಎಚ್ಚರಿಕೆಯ ವಾಣಿಗೆ ಚೀನೀಯರ ಎದೆ ನಡುಗ ಬೇಕು.

ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿರಿ ಎಂದಾಗ ಏನಾಯಿತು?

ಅಂದ ಮೇಲೆ ಚೀನಿಯರೇನು ಮಹಾ!

ಆಸಿಂನಾ ಚಳವಳಿ ಭಾರತಕ್ಕೆ ಸ್ವಾತಂತ್ರ್ಯ ದೊರೆತಿಸಿಕೊಟ್ಟಿತೆ. ಕೆಂಪು ಚೀನ ಬಯಸುತ್ತಿರುವುದು ಪ್ರಜಾಪ್ರಭುತ್ವ ಭಾರತನೊಡನೆ ಯುದ್ಧವನ್ನು. ಘೋರ ಯುದ್ಧವನ್ನು ಬಯಸಿಯೇ ಮುಂದಡಿಯಿಟ್ಟ ಚೀನಕ್ಕೆ ಉತ್ತರವನ್ನು ನಲ್ವತ್ತೈದು ಕೋಟಿ ಭಾರತೀಯರು ಸಮಯವರಿತು ಕೊಡಬಲ್ಲರೆಂದು ಚೀನ ತಿಳಿಯಲಿ ಭಾರತೀಯರು ಪ್ರಜಾಪ್ರಭುತ್ವದ ಪ್ರಜೆಯ ಕರ್ತವ್ಯವನ್ನು ಚೆನ್ನಾಗಿ ತಿಳಿದಿರುವರೆನ್ನುವದನ್ನು ಜಗತ್ತು ತಿಳಿಯಲಿ.

ಕರ್ತವ್ಯಬಿಡದೆಡೆಯು ಅಂಧಕಾರ ಕಳೆದಿದೆ. ಈ ಪಥದಲ್ಲಿ ನಾಡು ಸಾಗಬೇಕು; ದೇಶ ಸಾಗಬೇಕು.

CONTRIBUTE YOUR MITE TO OUR NATIONAL DEFENCE FUND

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

R. L. P. 191/62. O. S. 66/46.

ಬಿ. ಶೇಷಪ್ಪ — ಅರ್ಜಿದಾರ.

ಕೋತಪ್ಪ ರೈ ಕೂಡಾ — ಎದ್ರಿಲು.

1ನೇ ಎದ್ರಿ ಪರಮೇಶ್ವರಿ, ತಿಮ್ಮಪ್ಪ ರೈ ಗಳ ಮಗಳು, ಕಾಸರಗೋಡು ತಾಲೂಕು, ಮೊಗ್ರಾಲ್ ಪುತ್ತೂರು ಗ್ರಾಮ.

4ನೇ ಎದ್ರಿ ಕಮಲ, ಲಕ್ಷ್ಮಿ ಹೆಂಗಸಿನ ಮಗಳು, Abbas Manzil, Mori Road, Mahim, Bombay.

6ನೇ ಎದ್ರಿ ಲಲಿತ, ಮುತ್ತಮ್ಮನ ಮಗಳು, ಬಂಟ್ವಾಳ ತಾಲೂಕು ಕುರಿಯಾಳ ಗ್ರಾಮದ ಗುತ್ತು.

7ನೇ ಎದ್ರಿ ಬಾಲಕೃಷ್ಣ, ಮುತ್ತಮ್ಮನ ಮಗ, Abbas Manzil, Mori Road, Mahim Bombay.

8ನೇ ಎದ್ರಿ ಸೀತಾರಾಮ ರೈ, ಮುತ್ತಮ್ಮನ ಮಗ, Writer, ಪೆರಾಂ ಕೊಳ್ಳಿ ಎ ಸ್ಟೇಟ್, ಚಿತ್ತಳ್ಳಿ ಕೊಡಗು.

— ಇವರಿಗೆ ತಿಳಿಸುವುದೇನೆಂದರೆ:—

ಎದ್ರಿರ ಸ್ವಾಸ್ತಿ ನಿಲಮಿನ ಲಗ್ಗೆ ದಾಕಲು ಮಾಡಿದ ಈ ಅನುಲ್ಲಾರಿ ಮತ್ತು ಏಲಮಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕೆಂತ ವಸ್ಟೆರೆ ದಾಕಲು ಮಾಡಿದ R E.A. 412/62 ನೆ ಅರ್ಜಿ ಕೂಡಾ ತಾ. 31_11_62ಕ್ಕೆ ಇರುವುದರಿಂದ ನಿಮಗೇನಾದರೂ ಅಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯ ಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್,
ಅರ್ಜಿದಾರನ ವಕೀಲ್.

ಪುತ್ತೂರು, ತಾ. 4_11_62.

ಮದ್ಯಪಾನ ಪ್ರತಿಬಂಧ

(ಉನೇ ಪುಟದಿಂದ)

ಲೋ ವೋಸ ಮೊದುವುದರಲ್ಲಿ ಜನತೆ ಸ ಫಲವಾಗಿದೆ. ಹೀಗೆ ನಿರ್ಬಂಧನೆಯಿದ್ದರೂ ಮದ್ಯಪಾನವು ದೇಶದಲ್ಲೆಲ್ಲಾ ತಾಂಡವವಾಡುತ್ತಿದ್ದು ಅಸಂಖ್ಯಾತ ಸ್ತ್ರೀಪುರುಷರ ದೈಹಿಕ, ಮಾನಸಿಕ ಅಧೋಗತಿಗೆ ಕಾರಣೀಭೂತವಾಗಿದೆ.

ಜನಜೀವನವನ್ನೇ ಹಾಳುಮಾಡುವ ಇದರವಿರೋಧ ಆಗುವುದು. ಅತ್ಯಾವಶ್ಯ. ಸಮಗ್ರದೇಶದಲ್ಲಿ ಜ್ಯಾರಿಗೆ ಬಂದಿರುವ ಈ ಪಾನನಿರೋಧದ ಬಗ್ಗೆ ಫಲಾಫಲಗಳನ್ನು ತಿಳಿಯಲು ಇದ ಸೂಕ್ತಕಾಲವಾಗಿದೆ. ನಮ್ಮ ವೈಸೂರಿನಲ್ಲಿ ಪಾನನಿರೋಧದ ಬಗ್ಗೆ ಭರದಿಂದ ಪ್ರಯತ್ನಗಳಾಗುತ್ತಿವೆ ಯಾದರೂ ನಮ್ಮ ಅಧಿಕಾರಿ ವರ್ಗಕ್ಕೆ ಸೇರಿದವರೇ ಪಾನನಿರೋಧದ ಬಗೆಗೆ ಸಾಕಷ್ಟು ಉತ್ಸಾಹದಿಂದ ಕಾರ್ಯಮಾಡುತ್ತಿರುವಂತೆ ಕಾಣುವಂತೆ ಕೆಲವು ಅಧಿಕಾರಿಗಳು ಪಾನನಿರ್ಬಂಧ ನೀತಿಯ ಬಗೆಗೆ ವಿರೋಧಿಗಳಾಗಿರುವದನ್ನು ನಾವು ಸ್ಪಷ್ಟವಾಗಿ ಮನಗಾಣಬಹುದು ಜನರು ಕದ್ದು ಮದ್ಯ ತಯಾರಿಸುವಂತೆ ಕೆಲವೊಂದು ಅಧಿಕಾರಿ ವ ಶಿಬಂದಿ ವರ್ಗಗಳವರು ಕದ್ದು ಮದ್ಯಸೇವಿಸುವಂಥ ಉದಾಹರಣೆಗಳು ಸಾಕಷ್ಟು ನಮ್ಮ ಎದುರಿಗೆ ನಡೆಯುತ್ತಿವೆ ಆದರೆ ಎಂತಿದ್ದರೂ ಮದ್ಯಪಾನ ನಿರೋಧ ಆಗದೆ ದೇಶಕಲ್ಯಾಣವಿಲ್ಲ.

ಮದ್ಯಪಾನ ಅಪಶಾಬ್ದವನ್ನು ಓಡಿಸುವುದಕ್ಕೆ ಒಕ್ಕೊರಲಿನ, ಏಕ್ಯದ ಪ್ರಯತ್ನ ಆಗಲೇಬೇಕು. ಇತ್ತೀಚೆಗೆ ನಮ್ಮ ಅರ್ಥಮಂತ್ರಿ ಜತ್ತಿಯವರು ಪಾನಪ್ರತಿಬಂಧ ನೀತಿಯ ಪುನರ್ವಿಮರ್ಶೆ ಆಗಬೇಕೆಂದು ಹೇಳಿದ್ದಾರೆ ಅವರು ಪಾನಪ್ರತಿಬಂಧದ ಪುನರ್ವಿಮರ್ಶೆಯ ಕಾಲ ಬಂದಿರುವುದು ನಿಜ, ಈ ಬಗ್ಗೆ ತೀವ್ರ ನಿರ್ಣಯವಾಗಬೇಕಾಗಿರುವುದು ಸತ್ಯ. ಪಾನಪ್ರತಿಬಂಧದ ಬಗ್ಗೆ ಸ್ಪಷ್ಟ ಹಾಗೂ ಮುಕ್ತ ಮನಸ್ಸಿನ ಅಭಿಪ್ರಾಯ ಹೊಂದಿದ ಐದಾರು ವಿಶ್ವಾಸಾರ್ಹ ಜನರಿಂದ ಕೂಡಿದ ಸಮಿತಿಯೊಂದನ್ನು ನೇಮಿಸಿ, ಅದರಿಂದ ಬರುವ ಶಿಫಾರಸುಗಳ ಆಧಾರದ ಮೇಲೆ ಬೇಗನೆ ಕ್ರಮ ಕೈಗೊಳ್ಳಲಾಗುವದೆಂದು" ಹೇಳಿದ್ದಾರೆ. ಪಾನಪ್ರತಿಬಂಧ ಪ್ರಶ್ನೆಯು ಸಂಪೂರ್ಣವಾಗಿ ವಿಮರ್ಶಿಸಿದ ನಂತರ ಆ ಒಗ್ಗೆ ವಿಧಾನ ಸಭೆ ಹಾಗೂ, ವಿಧಾನ ಪರಿಷತ್ತುಗಳು ಚರ್ಚೆ ನಡೆದು, ಕೇಂದ್ರ ಸರಕಾರ ಹಾಗೂ ಯೋಜನಾ ಆಯೋಗಗಳೊಡನೆ ವಿಚಾರವಿನಿಮಯ ಮಾಡಿ ಮುಂದಿನ ಕ್ರಮಕೈಗೊಳ್ಳಲಾಗುವುದೆಂದು ಜತ್ತಿಯವರು ಹೇಳಿದ್ದಾರೆ

ಪಾನನಿರೋಧದ ಬಗ್ಗೆ— "ಪಾನನಿರೋಧ ನೀತಿಯು ವಿರುದ್ಧದ ಕೆಲಸದಲ್ಲಿ ನಿರತರಾಗಿರುವ ವಿಶಿಷ್ಟ ಹಿತಸಂಬಂಧಗಳೊಡನೆ ಸರಕಾರವು ಧೈರ್ಯದಿಂದ ಹೋರಾಡುವದೆಂದು" ಕೇಂದ್ರ ಗೃಹ ಶಾಖೆಯಲ್ಲಿ ಸಚಿವರಾದ ಶ್ರೀ ಬಿ ಎನ್. ದಾತಾರರು ಸ್ಪಷ್ಟವಾಗಿ ಹೇಳಿದ್ದಾರೆ ಆದುದರಿಂದ ಪಾನನಿರೋಧ ನೀತಿತಿಯನ್ನು ರಾಷ್ಟ್ರದ ನಿಜವಾದ ಕಲ್ಯಾಣದ ದೃಷ್ಟಿಯಿಂದ ನೋಡಬೇಕೇ ಹೊರತು ಕೇವಲ ತಾತ್ಕಾಲಿಕ ಲಾಭ ಹಾನಿಯ ದೃಷ್ಟಿಯಿಂದ ನೋಡಬಾರದು. ಈಗೀಗ ಮದ್ಯಪಾನಕ್ಕೆದ್ದ ಮರ್ಯಾದೆ ಕಡಮೆಯಾಗುತ್ತಿರುವುದು ಪಾನನಿರೋಧತೀಯ ಯಶಸ್ಸಿನ ಸಂಗತಿಯಾಗಿದೆ. ಆದರೂ ಕೆಲವರು ಮದ್ಯಪಾನ ನೀತಿಯು ವಿಫಲವಾಗಿದೆಯೆಂದು ಹೇಳುತ್ತಿದ್ದಾರೆ ಇದಕ್ಕೆ ಪ್ರಧಾನ ನ್ಯೂನತೆಗಳನ್ನು ತೋರಿದಲ್ಲಿ ತೊಡಗಿದ ಕೆಲವು ಹಿತಾಸಕ್ತಿಗಳು ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಹುಟ್ಟುಹಾಡಿರಬೇಕೆಂಬ ದೇ ಉತ್ತರ. ಆದರೆ ಪಾನನಿರೋಧ ನೀತಿಯಿಂದ ಕಳ್ಳಭಟ್ಟಿ ತಯಾರಿ ಹೆಚ್ಚಿದೆಯೆಂಬುದು ಎಲ್ಲರೂ ಒಪ್ಪಬಹುದಾದ ವಿಷಯ ಇದರ ಅರ್ಥ ಮದ್ಯಪಾನವು ಗೃಹ ಕೈಗಾರಿಕೆಯೆಂಬುದಲ್ಲ

ಇಂದು ಮದ್ಯಪಾನ ನೀತಿಯ ಬಗ್ಗೆ ಒಂದೇ ನೀತಿಯಿರುವುದು ಅತ್ಯಾವಶ್ಯ. ಕೇಂದ್ರ ಮತ್ತು ಪ್ರಾಂತ ಸರಕಾರಗಳು ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಜ್ಯಾರಿಗೆ ತರುವುದು ಅವಶ್ಯ. ನಮ್ಮ ಕೇಂದ್ರ ಸರಕಾರವು ಇನೇ ಯೋಜನೆಯೊಳಗೆ ಪಾನ ನಿರೋಧ ನೀತಿಯನ್ನು ಜ್ಯಾರಿಗೆ ಬಂದು ನಮಗ್ರ ಭಾರತದಲ್ಲಿ ಪಾನ ನಿಷೇಧವಾಗಬೇಕೆಂದು ಸಾರಿದೆ. ಈ ಪಾನ ನಿರೋಧ ನೀತಿಯನ್ನು ಜ್ಯಾರಿಗೆ ತರುವುದರಿಂದ ಉಂಟಾಗುವ ಕಂದಾಯ ನಷ್ಟದ ಅರ್ಧದಷ್ಟನ್ನು ತಾನೇ ಕೊಡುವುದಾಗಿ ಹೇಳಿದೆ. ಆದರೆ ಕೆಲವು ರಾಜ್ಯಗಳು ಪೂರ್ತಿ ನಷ್ಟ ತುಂಬಿ ಕೊಡುವದರ ಜತೆಗೆ ಪಾನನಿರೋಧ ಖಾತೆಗೆ ಸಂಬಂಧಿಸಿದ ಶಿಬ್ಬಂದಿಗಳ ವೆಚ್ಚವನ್ನು ಕೇಂದ್ರವೇ ವಹಿಸಬೇಕೆಂದು ಕೇಳಿವೆ. ಈ ರೀತಿಯ ತ್ಯಾಜ್ಯ ಬೇಡಿಕೆಗಳನ್ನು ಕಳುಹಿಸಿದ ರಾಜ್ಯಗಳಲ್ಲಿ ವೈಸೂರೂ ಒಂದಾಗಿದೆ. ಈ ವಿಷಯದಲ್ಲಿ ಮೂಕ್ಯ ಕೇಂದ್ರ ಆಲೋಚಿಸುತ್ತಿದೆ.

೧೯೬೦ರಲ್ಲಿ ಪಾನನಿರೋಧ ಕಾರ್ಯಚರಣೆ ಪಾಗೂ ನೀತಿಯಲ್ಲಿ ಸಮಾನತೆಯನ್ನು ಸಾಧಿಸಲು ಶ್ರೀ ಬಿ.ಎನ್. ದಾತಾರರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಸ್ಥಾಪಿಸಲಾಯಿತು ಇದರ ಪ್ರಥಮ ಸಭೆ ಆದೇ ವರ್ಷ ನಡೆಯಿತು. ಈ ವರ್ಷದಲ್ಲಿ ನಡೆದ ಎರಡನೆ ಜಾರಿಯ ಸಭೆಯಲ್ಲಿ ಎಲ್ಲಾ ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಿದ್ದು. ಪಿನೇ ಯೋಜನಾಂತ್ಯದೊಳಗೆ ಪಾನನಿರೋಧ ಜ್ಯಾರಿಗೆ ಬರಬೇಕೆಂದು ತೀರ್ಮಾನಿಸಿದ್ದಾರೆ

ಇಂದು ಪಾನನಿರೋಧ ನೀತಿಯನ್ನು ಸಮರ್ಥಿಸುವ ಅಭಿಪ್ರಾಯವನ್ನು ಸಾರ್ವಜನಿಕರಲ್ಲಿ ಉಂಟು ಮಾಡುವದು ಅಗತ್ಯ. ಆವರಿಗೆ ಮನವರಿಕೆಮಾಡಿ, ಈ ನೀತಿಯನ್ನು ಯಶಸ್ವಿಗೊಳಿಸಬೇಕು. ಈ ನೀತಿಯ ಒಗ್ಗೆ ವೈಜ್ಞಾನಿಕ ಪ್ರಚಾರವಾಗಬೇಕು. ರಾಜ್ಯ ಸರಕಾರಗಳು ಈ ರೀತಿಯ ಪ್ರಚಾರಕ್ಕೆ ಹಲವು ಕೇಂದ್ರಗಳನ್ನು ತೆರೆಯಬೇಕು. ಇದಕ್ಕೆ ಅಂತಲೂ ನಮ್ಮ ಜನತೆ ಇನ್ನಾದರೂ ಕಣ್ಣೆರೆದು ಪ್ರಾಮಾಣಿಕರಾಗಿ ಸರಕಾರದೊಡನೆ ಸಹಕರಿಸಬೇಕು. ಈ ಮದ್ಯಪಾನ ನಿಷೇಧದ ಬಗ್ಗೆ ಜನತೆ-ಸರಕಾರ ಎರಡೂ ಪರಸ್ಪರ ಸಹಕಾರದಿಂದ ಕೆಲಸ ಮಾಡಿದರೆ ಪೂರ್ಣ ರೂಪೇಣ ಸಫಲತೆಯನ್ನು ಪಡೆಯಬಹುದು. ಆದರೆ ಯಾವ ಕಾರಣದಿಂದಲೂ ಪ್ರತಿಬಂಧ ಕಾನೂನಿದೆಯನ್ನು ಹಿಂತೆಗೆದುಕೊಳ್ಳುವಲ್ಲಿ ಅರ್ಥವಿಲ್ಲ. ಅದನ್ನು ಸುವ್ಯವಸ್ಥಿತ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕು; ಪಾನಪ್ರತಿಬಂಧವನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸುವತ್ತ ನಮ್ಮ ಸರಕಾರದ ದೃಷ್ಟಿ ಕೇಂದ್ರೀಕೃತವಾಗಬೇಕು.

— —

ಜೆಂಗಲ್ಪೇಟೆಯಲ್ಲಿರುವ ಒಂದು ಉತ್ತಮ ಮನೆ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣ್ಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ 'ವಿಜಯ ಬೇಂಕ್' ಅತ್ಯತ್ತಮವೆಂದು ಪರಿಗಣಿಸಿರುವರು

ಪ್ರತಿಯೊಬ್ಬರೇವಣ್ಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರೆಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ — ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd 1931. — ಮಂಗಳೂರು—3
Phone No 240.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 411/62

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ — — ವಾದಿ.

ಮತ್ತು

ಬಿ. ಮೂಡನ ಕರ್ಕೇರಾ ಕೂಡಾ — ಪ್ರತಿವಾದಿರು.

ಇವರೊಳಗೆ

1ನೇ ಪ್ರತಿವಾದಿ—ಬಿ. ಮೂಡನ ಕರ್ಕೇರಾ—ಬಿ. ನಾರಾಯಣ ರಾಯರು ಅಳಿಯ—ಕೊಡವೊರು ಗ್ರಾಮದ ಮಲ್ಪೆ —ಇವರಿಗೆ.

ಪ್ರತಿವಾದಿಯು ವಾದಿ ಬೇಂಕಿಗೆ ತಾರೀಕು 9—9—59ರಲ್ಲಿ ರೂಪಾಯಿ 2000/-ಕ್ಕೆ ಬರೆಕೊಟ್ಟ ದಿನಾಂಕ್ ನೋಟು ಮೇರೆಗೆ ತೆರವಡೆದ ಪೌವರ್‌ಡ್ರಾಫ್ಟ್ ಮೇರೆಗೆ—ಪ್ರತಿವಾದಿರಿಂದ ವಾದಿಗೆ ಬರಾ ಅಸಲು ಬಡ್ಡಿ ಕೂಡಾ ರೂಪಾಯಿ 1406—68ಕ್ಕೆ ವಾದಿಯು ಪ್ರತಿವಾದಿರ ಮೇರೆ ಮೂಡಿದ ಸದರಿ ವ್ಯಾಜ್ಯವು ತಾರೀಕು 29—11—1962ಕ್ಕೆ ತನ್ನಿ ಬಗ್ಗೆ ಇಟ್ಟಿದೆ ಆ ದಿವ್ಸ ಸದರಿ 1ನೇ ಪ್ರತಿವಾದಿಯು ಸ್ವತಹಾ ಯೂ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಪಸರಿಸಬೇಯಿದ್ದೆ ಆತನ ಗೈರ್‌ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿಯಿದೆ.

M Damoder Kamath
Advocate for Plff.

ಉಡುಪಿ, ತಾರೀಕು 8—11—62.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O S No 391/1962.

ಶ್ರೀ ಕುಶ್ಮಾಂಡಿನಿ ದೇವರ ಭಂಡಾರಂ ಇದಂ ಟ್ರಸ್ಟಿ ಶ್ರೀ ಲಲಿತ ಕೀರ್ತಿಭಟ್ಟಾರಕಜೀಯು ಸ್ವಾಮೀರು —ವಾದಿರು

ಜಾಣ ಶೆಟ್ಟಿ ಸಹಾ — ಪ್ರತಿವಾದಿರು, 3, ಗುಮ್ಮಟ್ಟಕ್ಕೆ ಸರಸಮ್ಮನ ಮಗಳು ಬಿಲ್ಲಂಗಡಿ ತಾಲ್ಲೂ ಕಾವಳ ಮುಡೂರು ಗ್ರಾಮದ ಇಜ್ಜಿದೊಟ್ಟು ಎಂಬಲ್ಲಿರುವನವಳು—

3ನೇ ಪ್ರತಿವಾದಿಯಾದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ ನೀವು ಕೂಡಾ ವಾದಿರ ಸಳಗೆ ಮೂಲಗೇಣಿ ಹಕ್ಕನ್ನಿಂದ ಅನುಭವಿಸಿ ಬರುವ ಜಾರ್ಕಳ ಗ್ರಾಮದ ಅಸ್ತಿ ಜಾಟ್ಟುವಾದಿಗೆಲಿದಕ್ಕೆ ಮೂಲಗೇಣಿ ಗೇಣಿಬಡ್ಡಿ ರೂಪ್ಯಾ 695—20ಕ್ಕೆ ವಾದಿರು ದಾಕ್ಲು ಮಾಡಿದ ಸದ್ರಿ ದಾವೆಯು ತಾ. 17—11—61 ಕ್ಕೆ ನಿಮಗೆ ಅಪ್ಪಿರು ನೋಟೀಸಿನ ಬಗ್ಗೆ ಇಟ್ಟಿದೆ ಆಕ್ಷೇಪ ಇದ್ರೆ ಸದ್ರಿ ಕೋರ್ಟು ಮುಂದೆ ತಾ 17—11—62ಕ್ಕೆ ಬೆಳಿಗ್ಗೆ 10 ಗಂಟೆಗೆ ನೀವು ಹಾಜ್ರಾಗಿ ಉಪಸರಣೆ ಕೊಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಪನವಾಗುವದು ಎಂತ ಕೋರ್ಟು ಹ್ಕುಂ ಪ್ರಕಾರ ತಿಳಿಸಿಯದೆ

K. V Kamath
Advocate for Plaintiffs.

ಕಾರ್ಕಳ 7.11.62.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಪುಟ್ಟಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ಶಾಂತಿದೇವಿ

(೩ನೇ ಪುಟದಿಂದ)

ಹಾರಿ ಬಿಟ್ಟಳು! ಇನ್ನು ಈ ಕಥಾಮುಖ ಪರಿವರ್ತನೆಯೊಗುತ್ತದೆ. ಶಾಂತಿಯ ದುರಂತ ದೃಶ್ಯದೊಡನೆ, ಮುಗಿಯಬೇಕಾಗಿದ್ದ ಈ ಕಥೆ ಸುಖಾಂತವಾಗಿ ಮುಕ್ತಾಯವಾಗುವ ರೀತಿ ಓದುಗರನ್ನು ಮೆಚ್ಚಿಸುವಂತಿದೆ.

ಇತ್ತ ಮಿನಾಕ್ಷಿ ಒಂದು ಮಗುವನ್ನು ಹೆತ್ತು—«ಬಾಣಂತಿ ಸಂನ್ಣಿ" ಕಾಯಿಲೆಯಿಂದ ಹುಚ್ಚು ಹುಚ್ಚಾಗಿ ಮೂತನಾಡತೊಡಗಿದಳು. ಆಗ ಲಕ್ಷ್ಮಿಯ ಅತ್ತೆ—'ಇದು ಲಕ್ಷ್ಮಿಯ ಪಿಶಾಚಿ!' ಎಂದು ಬಗೆದಳು. ನುಬ್ಬ—'ಅಯ್ಯೋ! ಆ ಬಜಾರಿಣಿ ಲಕ್ಷ್ಮಿ ಸತ್ತ ಮೇಲೆ ಪಿಶಾಚಿಯಾಗಿಯೂ ಪೀಡಿಸುತ್ತಾಳಲ್ಲ!" ಎಂದು ಚಿಂತಿಸಿ, ಮೂರಿಯ ಗುಡಿಗೆ ಕರಿ ಕೋಳಿಗಳನ್ನು ಗುಟ್ಟಿನಲ್ಲಿ ಬಲಿ ಕೊಡುವ ವ್ಯವಸ್ಥೆ ಮಾಡಿದಳು. ಆದರೆ ಇದರಿಂದಲೂ ಮಿನಾಕ್ಷಿಯ ಹುಚ್ಚಾಟ ಕಡಿಮೆಯಾಗಲಿಲ್ಲ. ಕೊನೆಗೆ ಆಕೆಯ ಕುಂಡಲಿಯನ್ನು ನೋಡಿದ ಜ್ಯೋತಿಷಿಗಳು ಹೇಳಿದಂತೆ, ಮಿನಾಕ್ಷಿ, ನಾಲ್ಕು ತಿಂಗಳ ಬಳಿಕ ಸೌಖ್ಯ ಹೊಂದಿದಳು.

ಮಿನಾಕ್ಷಿಯ ಎರಡನೇ ಹೆರಿಗೆಯ ನೇಳಿಗೆ, ನಟೇಶನು—ಆ ಊರಿನ ವಿ.ಷನ್ ಆಸ್ಪತ್ರೆಯಿಂದ ಓರ್ವ ಅನುಭವೀ ನರ್ಸನ್ನು ಕರೆದು ತರುವ ಏರ್ಪಾಡು ಮಾಡಿದನು. ಸಮಯಕ್ಕೆ ಸರಿಯಾಗಿ ಒಬ್ಬ ತರುಣಿ ನರ್ಸ್ ಬಂದು, ಮಿನಾಕ್ಷಿಯ ಹೆರಿಗೆಯನ್ನು ಸುಖರೂಪವಾಗಿ ಮಾಡಿದಳು. ಮತ್ತೆ ಒಂದು ತಿಂಗಳ ವರೆಗೆ ಆ ದಾದಿ, ಆಗಾಗ ಬಂದು ಮಿನಾಕ್ಷಿಗೂ ಪುಗುವಿಗೂ ಸಲಹೆ ಸೂಚನೆಗಳನ್ನು ಕೊಡುತ್ತಿದ್ದಳು. ಕೊನೆಗೆ, ಆಕೆ, ಎಲ್ಲರನ್ನೂ ನಮಸ್ಕರಿಸಿ ಬೀಳ್ಕೊಂಡು, ಆಸ್ಪತ್ರೆಗೆ ವಾಪಸು ಆಗಲು ಸಿದ್ಧವಾಗಿ—ನಟೇಶನು ಆ ದಯಾಳುವಾದ ದಾದಿಗೆ ಹತ್ತು ರೂಪ್ಯಾಗಳ ನೋಟೊಂದನ್ನು ಕೃತಜ್ಞತೆಯಿಂದ ಕೊಡುತ್ತ—'ತಮ್ಮ ಸಹಕಾರಕ್ಕೆ ನಾನು ಎಷ್ಟು ಕೊಟ್ಟರೂ ಕಡಿಮೆಯೆ! ಆದರೆ ಈಗ ಹೆಚ್ಚು ಕೊಡಲಾರದ ಸ್ಥಿತಿಯಲ್ಲಿದ್ದೇನೆ! ಸ್ವೀಕರಿಸಬೇಕು!' ಎಂದು ಹೇಳುತ್ತ ನೋಟನ್ನು ಮುಂದೆ ಹಿಡಿದನು. ಆಗ ಆ ತರುಣಿ ನರ್ಸ್ ಮುಗುಳು ನಗುತ್ತ—'ನೋಡಿ, ನನಗೆ ಹೆಣದ ಆಗತ್ಯವಿಲ್ಲ! ಹಣಕಾಸ್ಯಗಿ ನಾನು ಈ ಸೇವೆ ಮಾಡಿದುದಲ್ಲ! ನಾನು ಕೇವಲ ಪ್ರೀತಿಗಾಗಿ ನನ್ನಿಂದಾದ ಸಹಕಾರ ನೀಡಿದ್ದೇನೆ! 'ಅಪ್ಪೆ!' ಎಂದಳು, ಮತ್ತು ಆ ಹಣವನ್ನು ಮುಟ್ಟಲೂ ಇಲ್ಲ. ಈಗ ನಟೇಶನಿಗೆ ಆ ಸುಂದರ ತರುಣಿ ನರ್ಸನ್ನು ನೋಡುವಾಗ, ತನ್ನ ಹೆಂಡತಿ ಲಕ್ಷ್ಮಿಯ ಪ್ರತಿಬಿಂಬವೇ ತನ್ನ ದುರಿಗಿರುವಂತೆ ಭಾಸವಾಯಿತು! ಆದರೂ, ಆತ, ಸಭ್ಯತೆಯ ದೃಷ್ಟಿಯಿಂದ ಮತ್ತೆ ಆಕೆಯನ್ನು ಮೂತನಾಡಿಸಲಿಲ್ಲ!

ದಯಾಮಯಿಯಾದ, ಹಣವನ್ನೂ ತೆಗೆದುಕೊಳ್ಳದ ಈ ನರ್ಸ್ ಯಾರು? ಎಂಬುದು, ಈ ಕೆಳಗಿನ ದೀರ್ಘ ಸಂಭಾಷಣೆಯ ಕೆಲವೇ ನಾಲುಗಳಿಂದ ತಿಳಿದು ಬರುವುದು.

ದಾದಿಯು ಆಸ್ಪತ್ರೆಗೆ ಮರಳುತ್ತಲೇ ಆಸ್ಪತ್ರೆಯ ಪಾದ್ರಿಗಳು ಕೇಳಿದರು—'ಶಾಂತಿದೇವಿ,ಮನೆಯಲ್ಲಿ ನಿನ್ನ ಗುರುತು ಸಿಕ್ಕಿತೇ?'

ಈ ಆಸ್ಪತ್ರೆಯ ಬಟ್ಟೆಗಳಿಂದಾಗಿ ಗುರುತು ಸಿಕ್ಕಲಿಲ್ಲ! ಆ ಮನೆಯ ಹೆಂಗಸರಿಗೆ ಅನುಮಾನವೂ ಬರಲಿಲ್ಲ! ಆದರೆ ಹಣ ಕೊಡಲು ಬಂದ ಆ ಮಿನಾಕ್ಷಿಯ ಗಂಡ ಅವರಿಗೆ ಮಾತ್ರ ನನ್ನ ವಿಷಯದಲ್ಲಿ ಅನುಮಾನ ಬಂದಿತು! ಆದರೆ ಆಗ ನಾನು ಮುಖ ತಿರುಗಿಸಿದೆ!' ಶಾಂತಿದೇವಿ ಉತ್ತರಿಸಿದಳು.

'ಶಾಂತಿ! ನಿನಗೆ ಮನಃಶಾಂತಿ ಇದೆಯೇ? ಅಥವಾ ನೀನು ಪುನಃ ನಿನ್ನ ಪತಿಯ ಜೊತೆಗೂಡಿ ಇರಲು ಅಪೇಕ್ಷಿಸುವಿಯಾ? ಹಾಗಿದ್ದರೆ, ನಾನೇ ಮೂತನಾಡಿ ನಿನ್ನ ಗಂಡನನ್ನು ಒಪ್ಪಿಸಬಲ್ಲೆ! ನಿನ್ನ ಮನದಿಚ್ಛೆಯೇನು?, ವಾದ್ರಿಗಳು ಕೇಳಿದರು.

'ಇಲ್ಲ ತಂದೆ! ಆ ಮುದ್ದು ಹುಡುಗಿ ಮಿನಾಕ್ಷಿ ತನ್ನ ಗಂಡನೊಡನೆ, ಸುಖವಾಗಿ ನಗುತ್ತ ನಲಿಯುತ್ತ ಇದ್ದಾಳೆ! ನಾನೇಕೆ ಅವರ ಸಂಸಾರವನ್ನು ನಿಸ್ಸಾರಗೊಳಿಸಲಿ? ಆ ದಿನ ನಾನು ಕೆರೆಗೆ ಹಾರಿದಾಗ ನೀವು ನನ್ನನ್ನು ಎಳೆದು ಹಾಕಿ ಬದುಕಿಸದಿರುತ್ತಿದ್ದರೆ ನಾನೂ ಸತ್ತು ಆಗಲೇ ಪಿಶಾಚಿಯೂಗುತ್ತಿದ್ದೆನೋ ಏನೋ! ನೀವು ಬದುಕಿಸಿ ನನ್ನನ್ನು ಈ ಸ್ಥಿತಿಗೆ ಮುಟ್ಟಿಸಿದ್ದೀರಿ! ನಾನು ಸಂತೋಷವಾಗಿಲ್ಲ! ಆದರೆ ನನಗೆ ಚಿತ್ರ ಶಾಂತಿ ಇದೆ! ಕಲ್ಯಾಣ ಕಾರ್ಯವಾದ ಈ ರೋಗಿಗಳ ಸೇವೆಯೇ ನನಗೆ ಆನಂದಕರವಾಗಿದೆ!, ಎಂದಳು ಸಾಧ್ವಿ ಶಾಂತಿದೇವಿ. ಆಗ ಪಾದ್ರಿಗಳು—'ಹಾಗಾದರೆ ನೀನು ಕ್ರೈಸ್ತಿಯನ್ ಧರ್ಮವನ್ನು ಸ್ವೀಕರಿಸ ಬಹುದಲ್ಲ?" ಎಂದರು.

ಶಾಂತಿದೇವಿಯು ಮುಗುಳು ನಗುತ್ತ 'ಇಲ್ಲ ತಂದೆ! ನಾನು ಈ ಧರ್ಮವನ್ನು ನನ್ನ ಧರ್ಮವನ್ನು ಬಿಟ್ಟರೆ ನಾನು ಪೂಜಿಸಿದ ಆಂಜನೇಯನು ಕೋಪಿಸುತ್ತಾನೆ" ಎಂದಳು.

ಕರೆಯಲ್ಲಿ ಹಾರಿದ ಶಾಂತಿದೇವಿ ನಾದ್ರಿಗಳ ಮೂಲಕ—ಬದುಕಿ, ನರ್ಸ್ ಶಿಕ್ಷಣವನ್ನು ಪಡೆದಳು. ಬಳಿಕ ತನ್ನ ಗಂಡನ ಎರಡನೆಯ ಹೆಂಡತಿ, ಮಿನಾಕ್ಷಿಯ ಹೆರಿಗೆಯನ್ನು ಪ್ರೇಮದಿಂದ ತೃಪ್ತಿಕರವಾಗಿ ಮಾಡಿಸಿ—ಮಿನಾಕ್ಷೀ ದಂಪತಿಗಳಿಗೆ ಹಾಗೂ ಅವರ ಮಕ್ಕಳಿಗೆ ಸುಖವನ್ನು ಕೋರಿ, ತನ್ನ ಗುರುತನ್ನೂ ಹೇಳದೆ, ಹಣವನ್ನೂ ಮುಟ್ಟದೆ, ಆಸ್ಪತ್ರೆಗೆ ಮರಳುವ ಈ ದೃಶ್ಯವನ್ನು ಶ್ರೀ ರಾಜಾಜಿಯವರು ಚಿತ್ರಿಸಿರುವುದನ್ನು ಓದುವಾಗ—ಈ ಶಾಂತಿದೇವಿ! ಎಂತಹ ತ್ಯಾಗಮಯಿ! ಎಂತಹ ಪ್ರೇಮೂರ್ದ್ರ ಹೃದಯಿ!' ಎಂಬ ಉದ್ಗಾರ ಮನದಲ್ಲಿ ಸಹಜವಾಗಿಯೇ ಮೂಡುವುದು!

ಶಾಂತಿದೇವಿ! ಎಂಬ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡ ಈ ತರುಣಿ, ಈ ಕಥೆಯ ಮೂಲಕ ಸ್ತ್ರೀ ಸಮಾಜಕ್ಕೆ ಆದರ್ಶಳಾಗಿದ್ದಾಳೆ! ಇಷ್ಟು ನೂತ್ಯವಲ್ಲ; ಸ್ತ್ರೀ ಮನುಯಿ ಮೂದ ಆಕೆ ಮತ್ತೊಂದು ಸಲ ನಟೇಶನಲ್ಲಿಗೆ ಹೋಗಿ ತನ್ನ ಗಂಡನ ಮಕ್ಕಳನ್ನು ನೋಡಿ, ಪ್ರೀತಿಸಿ ಮುದ್ದಿಸಿ ಹೂವು ಹಣ್ಣು-ಮಿಠಾಯಿಗಳನ್ನು ಆ ಮಕ್ಕಳಿಗೆ ಕೊಟ್ಟು ಮರಳುವ ಆಕೆಯು ಈ ಕಾರ್ಯದಿಂದ ಅವಳ ಪಾತ್ರ ಮತ್ತಷ್ಟು ಉಜ್ವಲವಾಗಿದೆ! ದೀಪಾವಳಿಗೆ, ನಟೇಶನಲ್ಲಿಗೆ ಹೋಗಿ, ಮಕ್ಕಳಿಗೆ, ಪಟಾಕಿ ಕೊಟ್ಟು, ಕಣುಲಿಗೆ ಹೂ ಮುಡಿಸಿ ಮುದ್ದಿಸಿ, ಯೂರೋಡನೆಯೂ ಮೂತನಾಡದೆ, ಮರಳಿದ ಶಾಂತಿದೇವಿಯು ಸಹೃದಯತೆಗೆ, ಮಿನಾಕ್ಷಿಯೂ, ಅವಳ ಅತ್ತೆಯೂ ಸಹಮುಗ್ಧರಾಗುತ್ತಾರೆ! 'ವೈರವನ್ನು ಪ್ರೇಮದಿಂದ ಗೆಲ್ಲಬೇಕು! ಪ್ರೇಮವೇ ಅಭಿವೃದ್ಧಿಗು ಸೋವಾನ!" ಎಂಬ ತತ್ವವನ್ನು ಈ ಕಥೆ ಎತ್ತಿ ಸಾರುತ್ತಿದೆ!

ಸಹಜವಾದ ಸುಂದರ ಸನ್ನಿವೇಶಗಳಿಂದ ಕೂಡಿರುವ ಈ ಕಥೆಯು ನಾಯಕಿ, ಶಾಂತಿದೇವಿಯು, ಶ್ರೀ ರಾಜಾಜಿಯವರ ಕಥೆಗಾರಿಕೆಯ ಮೂಲಕ, ಸಮಾಜಕ್ಕೆ—

«ಪ್ರೇಮಂ ಶಾಶ್ವತ ಸೌಖ್ಯಕಾರಕ
—ಸುಧಾಸ್ಯೋದಂ ಸದಾಸುಂದರಂ!—

—ಪ್ರೇಮಂ ನಿತ್ಯ ಮುದಾತ್ಮರೂಪದ ಮಹಾನಾಕಾರಭಾವಂದಿಟಂ ಕಾಮಂ ಸುಸ್ಥಿರಮಲ್ಲನಶ್ವರ ಗುಣಂ ಸಂಸಾರಭೋಗಾವಾ ಕುರಂ ಪ್ರೇಮಂ ತಾನ ಮರಾತ್ಮ ಜ್ಯೋತಿ ಸದನಂ ಶ್ರೀ ನೀಲಕಂಠೇಶ್ವರಂ!' ಎಂಬ ಪ್ರೇಮ ಸಂದೇಶವನ್ನು ಸಾರುತ್ತಿರುವಂತೆ ಭಾಸವಾಗುತ್ತದೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 380/62.

ಪಾಣಿಮಂಗಳೂರು ಶ್ರೀ ವೀರ ವಿಠಲ ವೆಂಕಟ್ರಮಣ ದೇವರು —ವಾದಿ.

ಸುಬ್ಬಯ್ಯ ಪೂಜಾರಿ—ಬಾಬು ಪೂಜಾರಿಯ ಅಳಿಯ—ಬಾಳ್ತಿಲ ಗ್ರಾಮದ ಯೆತ್ತಿ ಮೂರು ಬೈಲು — ಬಂಟ್ವಾಳ ತಾಲ್ಲೂ — P. O. ಬಾಳ್ತಿಲ —ಪ್ರತಿವಾದಿಗಳಿಗೆ.

ದಾವಾ ಗೇಣಿ ರೂ. 242 =90 nP. ಕೋರ್ಟು ಖರ್ಚು ವ ಬಡ್ಡಿಗೆ ಕೂಡಾ ವಾದಿ ನೂಡಿದವೇಲಿನ ದಾವೆಯು 27—11—62ಕ್ಕೆ ಇಟ್ಟಿರುವುದರಿಂದ ನಿಮ್ಮ ಅಕ್ಷೇಪಣೆಗಳಿದ್ರೆ ಇವು ಅದಿನ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಸಿದಿದ್ರೆ ನಿಮ್ಮನ್ನು ಶಿಸ್ಯಾಮಾಡಿ ತೀರ್ಪು ನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(Sd.) K. R. Shenoy
Advocate for Plaintiff.

ಪುತ್ತೂರು, 2.11.62.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ನೆಂಕಟ್ರಾವ್ ಎಲ್.ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ನೂಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತನು ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆರ್ಡಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ನುಸಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ನುಂಗಳೂರಿನಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕೊಆಪ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 425/62.

J. J. ಕುಂಞಾ —ವಾದಿ.

ಎಲಿಮಲೆ ಯೂನೆ ಸೂವಮ್ಮ ಕೂಡಾ —ಪ್ರತಿವಾದಿರು.

ಇನೇ ಪ್ರತಿವಾದಿ ಬಾಬು ಶೆಟ್ಟಿ, ಎಲಿಮಲೆ ಯೂನೆ ಸೂವಮ್ಮನ ಮಗ, ಬೆಳ್ಳಂಗಡಿ ತಾಲೂಕು ಕೂವೆಟ್ಟು ಗ್ರಾಮದ ಗುರುವಪ್ಪನ ಕೆರೆಯಲ್ಲಿ—

ಇವರಿಗೆ ತಿಳಿಸುವುದೇನೆಂದರೆ,

ಪ್ರತಿವಾದಿರು ಬರಕೊಟ್ಟ ಡಿ. ಪ್ರೊ. ನೋಟಿನ ಪ್ರಕಾರ ಬರಬೇಕಾದ ಹಣ ಸಲಿಗೆ ವಾದಿಯು ದಾಕಲು ನೂಡಿದ ಈ ದಾವೆಯು ತಾ. 21—11—62ಕ್ಕೆ ಇರುವುದರಿಂದ ನಿಮಗೇನಾದರೂ ಅಕ್ಷೇಪಣೆ ಇದ್ದಲ್ಲಿ ಆ ದಿನ ಸ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರೆಯಲ್ಲಿ ತೀರ್ಮಾನಿಸಲಾದೀತು.

ಬಿ. ಶಿವಾನಂದರಾವ್.
ವಾದಿಯ ವಕೀಲ್.

ಪುತ್ತೂರು, ತಾ. 24.10.62.

ಬೆಂಗಳೂರಲ್ಲಿ ಬೇಸ್ತು

(೨ನೇ ಸುಟದಿಂದ)

ಕೆರೆಯಲ್ಲಿ ಸತ್ತೋದ ಆಚಾರಿ ತಾನೆಂತ ಹೇಗೆ ನಂಬಿಕೇ ಹುಟ್ಸ್ಲಿದ್ದ! ರೈಲಿಗೆ ಕೊಡೋಕೂ ದುಡ್ಡಿಲ್ವಲ್ಲಾ!

ಹೋ. ಮೇ – ಹ್ಞಾಂ! ನಿನ್ನ ಹತ್ರ ಬೇರೆ ದುಡ್ಡೇ ಇಲ್ವೇ. ರೂಮಿನ್ ಬಾಡಿಗೇನೇ ದಿನಕ್ಕೆ ಹದಿನಾಲ್ಕು ರೂಪಾಯೂ ಗುತ್ತೆ. ಊಟ, ತಿಂಡಿ, ಕಾಫಿದ್ದು ಇಂರೂ ಆಗದೆ. ಆದಕ್ಕೇನ್ ಮಾಡ್ತಿಯೂ?

ಬಸವ— ಏನೂ! ಅವನ್ನ ವರದಾಚಾರಿ ಕೂಟ್ಟಲ್ವೇ? ನನ್ನಲ್ಲಿ ಹೇಳ್ತಿನೇ ಇದ್ದ ಕಡೇ ತನ್ಕನೂ, ನಾನೇ ಎಲ್ಲ ಕರ್ಚೂ ನೋಡ್ಕೊಳ್ತೇನೆ, ನೀನು ಪಾಕೇಟು ಬಿಜ್‌ಲೀಬೇಡಾಂತ.

ಹೋ. ಮೆ— ಹಾಗೆ ಹೇಳಿನೇ ನಿನ್ನ ಪಾಕೇಟೆನ್ನ ಎಗ್ಸಿದ. ಆ ಸತ್ತ ವರದಾಚಾರೀ. ಈಗ ನಿನ್ನ ಅವನ ವ್ಯವಹಾರ, ಸ್ನೇಹಾ ಏನಾದ್ರೂ ನೋಡ್ಕೊಳ್ಳಿ ನನ್ಮಕ್ಳಾ ಉರೂಗೆ ಏನು ಗತೀಂತ ಮೊದ್ಲು ಹೇಳಪ್ಪ.

ಬಸವ— (ಅಳುಮುಖದಿಂದ) ನಾನು ಹೆಳ್ಕಿಯೋನು ಸಾಮಿ. ಒಂದು ರಾತ್ರಿ ಸರಿಯಾಗಿ ಮಲಗಿಲ್ಲ ನನ್ಮಮ್ಮ ಕೋಣೇಲಿ. ಆಸ್ಟ್ಕೆಹದಿನಾಲ್ಕುರೂಪಾಯೀನೇ. ಆಕ್ಸಿ, ಬೇಳೆ ತಂದು ನಾನೇ ಅಡಿಗೆ ಮಾಡ್ಕೊಂಡಿದ್ರೆ ಒಂದು ರೂಪಾಯಿಲ್ಲಿ ನಮ್ಮೆಲ್ಲರ ಹೊಟ್ಟೇನೂ ತುಂಬ್ತಾ ಇತ್ತು. ನೀ ಪುಳ್ಳ ರೂ.ಯಂತ ಹೇಳ್ತೀರ್ಲಿ! ಯಾರಪ್ಪನ ಮನೇಗಂಟೂತ ನೆನಸಿಡ್ರೂ. ಮರ್ಯಾದಸ್ಥರು ಬರೋಹೋಟ್ಲೂಂತ ಬಾಯಲ್ಲಿ ಹೇಳ್ಕೊಂಡೂ, ಇಂತಾ ಸಿರ್ ಪ ಕಡೂ ಬೋಳೇ ಮಳ್ಕಳ್ನ ನಮಗೆ ಗಂಟುಹಾಕಿ ನಮ್ಮಂತಾ ಹಳ್ಳಿಯೋರ್ನ ದರೋಡೆ ಮಾಡ್ಸಿ ಈಗ ಮೇಲೆ ದುಡ್ದು ಕೇಳ್ತಿರಾ? ಆ ದರಿದ್ರ ಮುಂಡೇನೂ ಆ ಮುಂಡೇ ಗಂಡನೂ ಕೂಡ್ಕೊಂಡು ನನ್ನ ಕೊಂದೇ ಬಿಟ್ರಾಲ್ಲಾ! ನಿಮ್ಮಂತೋರು ಅವರಿಗೆ ಸಾಮೀಲಾಗಿದ್ದೀರಲ್ಲಾಂದೆ. ನನ್ಹತ್ರ ಒಂದು ಕಾಸೂ ಇಲ್ಲಲ್ಲ!

ಹೋ. ಮೇ— ನಮಗೆ ನಾಮ ಹಾಕೋದಕ್ಕೆ ನೋಡ್ತಿಯೂ. ಇದ್ರೆ ಮೇಲೆ ನನ್ಮನ್ನೆಗೆ ಬಾಯಿಗೆ ಬಂದಂತೆ ಬಯ್ತಾನೆ. ಕೋತಿ ತಾನು ಕೆಟ್ಟದ್ದಲ್ಲದೆ ತನ್ನ ಜಾತಿಯೋರನ್ನು ಕೆಡ್ಸಿತು ಎಂದ ಹಾಗೆ ನಮ್ಮನ್ನ ಮೋಸ ಮಾಡೋದಕ್ಕೆನೋಡ್ತಿಯೂ? ಈಗ ನಿನ್ನ ಕವಿಲಿರೋ ಒಂಟ ತೆಗೆಪಟ್ಟು ಹೊರಡು. ಏನ್ರೋ ನೋಡ್ತಿರಾ, ತೆಗೂರ್ರಿ ಆ ಒಂಟೇನ. (ಒಂಟ ಕತ್ತುಕೊಂಡು ಅವನನ್ನು ಹೊರಗೆ ಹಾಕುವರು)

ದೃಶ್ಯ ೧೦.

ಬಸವ— (ಬೀದಿಯಲ್ಲಿ ಸಿಕ್ಕಿದವರೊಡನೆ ಸಾಲ ಕೇಳ್ತಾನೆ) ಒಂದೈದು ರೂ ಪ್ಯಾ ಕೊಡಿ ಸ್ವಾಮಿ. ಹೋದ್ ಕೂಡ್ಲೆ ಕಳ್ಸಿ ಕೊಡ್ತೇನೆ ನಮ್ಮೂರಿನ ಸುಬ್ಬನ್ನ ನಂಬ್ಕೊಂಡು ಬಂದೆ. ಅಂವ ಸಿಕ್ಕಲಿಲ್ಲ. ಬಡ್ಡಿಗೆ ದರೋಡೆಕೋರ ಗಂಟು ಬಿದ್ದ. ಅವನ ಮನೆ ಹಾಳ್ಹಾಗ....

೧ನೇ ವ್ಯಕ್ತಿ— ನಿನ್ನಂತೋರು ದಿನಕ್ಕೆ ಹತ್ತಾರು ಜನ ಗಂಟು ಬೀಳ್ತಾರೆ. ಹೋಗಿ ಕಳ್ಸ್ತಾನಂತೆ ಬೇರೆ. ಅಲ್ಲ, ಒಳ್ಳೆ ಭೀಮಸೇನನಂತಿದ್ದಾನೆ. ದುಡಿಯೋಕ್ಕೇನೋ ನಿನಗೆ ಧಾಡೀ? ದರೋಡೆಕೋರನ್ಹಂಗೇ ಕಾಣ್ತಾನೆ ಬೇರೆ.

೨ನೇ ವ್ಯಕ್ತಿ— ನೀನ್ ಹೇಳೋದು ಸರೀನೇ. ಇವಕ್ಕೆಲ್ಲ ಬೇರೆ ಕಸಬೇ ಇಲ್ಲಾಂತ. ಈಗಂತೂ ಎಲ್ಲರಿಗೂ ಒಂದು ರೋಗಾನೇ ಆಗಿದೆ. ಪಂಜಾಬಿನ ನಿರಾಶ್ರಿತ್ರೂ, ಬಂಗಾಲದ ನಿರಾಶ್ರಿತ್ರೂ, ಮಳೆಗಾಲದಲ್ಲಿ ಕೊಚ್ಚಿಕೊಂಡ್ಹೋಗಿ ಹೋಯ್ತು ಬೇಸಿಗೆಯಲ್ಲಿ ಸುಟ್ಹೋಯ್ತೂ ಅಂತ ಗೋಗರೆದು ಪೋರೇ ಈ ಪಾಪಿ, ಸೂ .... ಮಕ್ಳಕೆಲ್ಸ ಬನ್ನಿ, ಬನ್ನಿ, ಹೋಗೋಣ– ನಮಗೇನೂ ಬೇರೆ ಕಸಬೂ, ಖರ್ಚು ಇಲ್ಲಾಂತ ತೀಕೊಂಡಿದ್ದಾರೆ.

೧ನೇ ವ್ಯಕ್ತಿ— ಸಾಲದ್ದಕ್ಕೆ ಈ ಬ್ರಾಂಬ್ರ ಪಿಂಡ ಬೇರೆ ಅಷ್ಟಗ್ರಹದ ಸುದ್ದಿ ಎತ್ತೀ ಎತ್ತೀ ಹೆದರ್ಸುತ್ತಾರೆ. ಅಲ್ಲ ಮೊನ್ನೆ ಆ ಆನಂದ ಭವನದಲ್ಲಿ ಒಬ್ಬ ಸಾಬ್ರೋನ್ನು ಇದೆ. ನಾನು ೨ ವರ್ಷದ ಕೆಳಗೆ ವೈಜಾರಲ್ಲಿ ಅವನನ್ನ ನೋಡಿದ್ದೆ. ಅವನೂ ಒಂದು ಜನಿವಾರ ಹಾಕ್ಕೊಂಡೂ ಮನೆ ಮನೇಗಳಲ್ಲೂ ಜನರಿಗೆ ಮಂಕು ಬೂದಿ ಹಚ್ಚಿ ದೋಮಂತ ಹವಣಾಂತ ಮಾಡ್ತಾ ಇರೋದು ನನ್ನ ಕಣ್ಣಿಂದ್ಲೇ ನೋಡಿದೆ. ನನ್ನ ನೋಡ್ದಿದ್ದೇ ಆ ಮನಗಾ ಬೆವರಿಕೊಂಡಿಬ್ಬಿದ್ದ. ಗಟ್ಟಿನಲ್ಲಿ ನನ್ನ ಮರ್ಯಾದೆ ಉಳ್ಸೀಂತ ಬೇಡ್ಕೊಂಡ. ಏನಾದ್ರೂ ಕೊಡ್ತೇನೆ ನನ್ನ ಮೊನಾ ಉಳ್ಸಿದ್ರೆ ಅಂದ

೨ನೇ ವ್ಯಕ್ತಿ— ಕೊಡ್ತಾನೆ ಕೈ! ಒಮ್ಮೆ ಪಾರಾಪ್ರೆ ನಾಕೂಂತ ನೋಡ್ತಾರೆ ಸೂಳೇ ಮಕ್ಕೂ.

೧ನೇ ವ್ಯಕ್ತಿ— ನಾನಾ ಬಿಡೋದ. ಬಾಳ ಸೆಣಸಾಟ ಮಾಡಿ ಒಂದ್ನೂರು ರೂಪಾಯಿ ಗಿಟ್ಸಿದೇ ಅನ್ನ.

ಬಸವ— ನಾನುತೊನೂ ಜಿಪ್ಪಿ, ನಿನ್ಮಂತೋನು ಅಲ್ಲಸ್ವಾಮಿ. ನಾನು ಹೆಳ್ಕಿಯೋನು.ಪ್ರಾಣೂಣಿಕತೇ, ಮರ್ಯಾದೇನೇ ನಮಗೆ ಎಲ್ಲಕ್ಕಿಂತ್ಲೂ ಪೆಟ್ಟು ನಿನ್ಮ ಋಣಸೂಇಟ್ಟಕೊಳ್ಳೋಪ್ಪಿನನ್ನು ಸರಕಾರಾನೂ ಮರಿಯೂಕಿಲ್ಲ. ಸದ್ಯ, ಈ ಮೂಯೂ, ಮೋಸ, ವಂಚ್ನೆ ಕಷ್ಟಾ ತುಂಬಿದ ಈ ಹೊಲ್ಸು ಪಟ್ಟಾದಿಂದ ಒಮ್ಮೆ ನಮ್ಮ ಹಳ್ಳಿ ಸೇರ್ಕೊಂಡೇಂದ್ರೆ ಇನ್ನು ಈ ಜನ್ಮದಲ್ಲೂ, ಮುಂದಿನ್ ಜನ್ಮಕ್ಕೂ ಬೇಡ ಈ ಪಟ್ಟದ್ ನಾವಾನಾ. ಇದ್ರೆ ಕೊಡಿ ಸ್ವಾಮಿ.

ಇಬ್ಬರೂ— ಹೋಗೋ. ಹೋಗೋ ಎಲ್ಲಾದ್ರೂ ಕೂಲಿ ಮಾಡ್ಕೊಂಡು ಸಂಪಾದ್ಸ್ಲೀ. (ಹೋಗುವರು)

ಬಸವ— (ಬೀದಿಯಲ್ಲಿ ಒಂದು ಕಡೆ ಕುಳಿತುಕೊಳ್ಳುತ್ತಾನೆ. ಅಳು ಬರುವಂತೆ ಮುಖ ಇರುತ್ತದೆ) ಹುಟ್ಟಿ ಮೂವತ್ತೆಂಟು ವರ್ಸ ಆತು. ಆಸವನೂನೆ ಏನೂಂತ ಗೊತ್ತಿಲ್ಲಿಲ್ಲ ಈ ಪಟಿಂಗರ ಪಟ್ಟಕ್ಕೆ ಬಂದು, ಮೊನ ಹೋಯ್ತು, ಮರ್ಯೋದೆ ಹೋಯ್ತು. ಇದ್ದ ಬೆದ್ದದ್ದೆಲ್ಲ ಹೋಯ್ತು. ತಿಳಿಯದೋರು ಬಂದ್ರೆ ಈ ಊರಿಗೆ, ಬ್ರಹ್ಮರಾಕ್ಷಸ್ರುಂಗೆ ಒಮ್ಮಗೇ ಕಬಳಿಸ್ಬಿಡ್ತಾರೆ, ಈ ಪಟ್ಟಿದ ಗೂಂಡಾಗ್ಳು. ನನ್ ತಿಮ್ಮಿ ಎಷ್ಟು ಬುದ್ಧಿವಾದಾ ಹೇಳಿದ್ದೂ! ನಾನೊಂದಾನ್ರೂ ಕಾಲಿಸಿನ್ನೆ? ಇನ್ನವಳಿಗೆ ಹೇಗೆ ಮುಖಾ ತೋರಿಸ್ಲಿ, ಆಯ್ಯೋ ಹೀಂಗೇ ಆದ್ರೆ ಮುಖಾ ತೋರ್ಸೋದೇ ನು, ಊಟಾನೂ ಇಲ್ದೆ ನನ್ನ ಹೆಣಾನೂ ನಾಯಿ ನರಿಗ ಹಾಲಾಗುತ್ತೋ ಏನೋ! ಭಗವಂತಾ, ತಿರುಪತಿ ತಿಮ್ಮಪ್ಪಾ, ಧರ್ಮಸ್ಥಳದ ಮಂಜಪ್ಪಾ, ನಿಮಗೆಲ್ಲ ಊರಿಗೆ ಹೋದ್ ಕೂಡ್ಲೆ ಕಾಣಿಕೆ ಕಳ್ಸ್ತೇನೆ. ನನ್ನ ಹೆಂಗಾದ್ರು ಊರ್ಗೆ. ಮುಟ್ಸಿಬಿಡಿ ಮರ್ಯಾದೆಯಿಂದ. (ಪತ್ರೆ ಕಡದು) ಆ ಕ್ಷೀರ ಸಾಗರ ಭಟ್ಟನ್ನು, ಆತನ ಹೆಂಗಸ್ರನ್ನೂ ಊರಿಂದ ಓಡ್ಸಿಬಿಟ್ಟೀಕು. ಎಂತ ದಿನಾ, ಎಂತ ಗಳಿಗೇ ಎನಂ ತಲೆಕಾಯ್ ಬರುಡೆ ಹೇಳೋದು ಪಾಪ್ರೇನೆ ಅವ್ರಿಗೆ. ಯಾವ್ದಕ್ಕೂ ಊರು ತಲಪೋ ಉಪಾಯಾನೋ.....ಹ್ಞಾ, ಅದ್ಯಾರು ಜೋಗ್ತಾ ಇರೂದು ನನ್ಮ ಜಮಿನ್ದಾರ ಮಗ ಇದ್ದಂಗಿವ್ದಾರೆ. ಕೂಗ್ತೇನೆ ಸಾಮಿ, ಶಿವಪ್ಪನೋರೇ, ಸಾಮಿ, ನಿಮ್ಮ ದಮ್ಮಯ್ಯ ನಿಲ್ಲಿ ಸ್ವಲ್ಪಂದ್ರೆ. (ಜಮೀನ್ದಾರರ ಮಗ ಸಿಕ್ಕಿದನು)

ಜ. ಮಗ— ಓಹೋ ಒಸವಣ್ಣ ಯೂ ಏಂಗ ಬಂದೆ? ಬರೋ ನೊಮ್ಮ ತಿಳ್ಸಬಾರ್ದಾಗಿತ್ತೆ? ಬಾ, ಬಾ, ನನ್ನ ಕೋಣೆಗೆ ಹೋಗೋಣ. ಯೇನು ಕತೆ, ಸುಬ್ಬ ಎಲ್ಲ?

ಬಸವ— ಸದ್ಯ ದೇವ್ರಿಗೆಲ್ಲ ಹರ್ಕೆ ಹೇಳಿಕೊಳ್ತಾ ಇದ್ದೆ; ದೇವ್ರಂಗೆ ನೀನ್ ಬಂದೆ. ಮೊದಲು ನನ್ನ ರೈಲಲ್ಲಿ ಟಿಕೇಟ್ ತೆಗೆದು ಕೂರ್ಸಿಬಿಡು.ಇನ್ನು ಜನ್ಮಜನ್ಮಕ್ಕೂ ಈ ಪಟ್ಟಾದಲ್ಲಿ ಕಾಲಿಡೋಲ್ಲ ನಮ್ಮ ಕುಲದೇವರಾಣೆ.

ಜ. ಮಗ— ಯೂಕೆ ಸುಬ್ಬ ಸಿಗಲಿಲ್ಲನೆ?

ಬಸವ— ಅವನ ಮೊತ್ ಕೇಳ್ಕೊಂಡು ಕೆಟ್ಟೆ. ಸುಬ್ಬನ ಬಡ್ಡಿಗೆ ಆ ಓಡಿಹೋದ ವರದಾಚಾರಿ, ಅರಸಿಕೆರೆಯಲ್ಲಿ ಸತ್ತಿನೆಲ್ಲ, ಅವನ ಪಿಶಾಚಿ ಗಂಟುಬಿತ್ತು ಒಂದು ಹೆಣ್ಣು ಪಿಶಾಚಿಯೊಡನೆ. ಸರಿ, ನನ್ನೆನ್ನು ಪೂರಾ ಬೋಳ್ಸಿ, ಮೇಲೆ ನನ್ನ ಮೂನಾನೂ ಕಳೆದು, ಅರ್ಧಜೀವಾ ಮಾಡಿ ಬಿಟ್ಟಿಟ್ಟು ಹೋದ್ರು.

ಜ. ಮಗ— ಸದ್ಯ ನನಗಾದ್ರೂ ಸಿಕ್ಕಿದಿಯಲ್ಲ ಮಾಂತಾಯೂ. ನಿನ್ ಗತಿಯೇ ನಾನ್ಗೆಟ್ಟಿಕಾಗಿತ್ತೋ! ಅಲ್ಲ ಇದೇನ್ ಲಕ್ಕೈಸುರ್‌ಬೇ. ನಾನ್ ಸಿಗದೇ ಇದ್ದಿದ್ರೆ ನನ್ನ ನೀರಿಲ್ಲೆ ನಾಯಬೇಕಪ್ಪೆ ಇಲ್ಲಿ. ಐದು ರೂಪಾಯಿ ಕೇಳ್ತಿಯೂ ಜನಯೂ ಪೈಸೆ ಕೊಡುವ ಪುಣ್ಯಾತ್ಮನೂ ಈ ಊರಲಿಲ್ಲ.

ಬಸವ— ನುತ್ತೆ ನಮ್ಮೂರಿನಂತೆ ಬದನ್ಜೇನಲ್ಲ ಇವ್ನಿಯೋರು. ಎಲ್ಲರೂ ಒಳ್ಳೆ ಬಟ್ಟೆ, ಬಂಗಾರ ಹಾಕ್ಕೊಂಡೇ ತಿರ್ಗಾತ್ತಾರೆ.

ಜ. ಮಗ— ಅವನ್ನೇನು ಕೇಳ್ತಿದ್ದೋ, ಶ್ರೀಮಂತ್ರೂ, ನಿನಗೆಲ್ಲಿ ಬೀದಿಯಲ್ಲಿ ಸಿಗ್ತಾರೆ. ಅವರು ಕಾರಲ್ಲೇ ತಿರುಗೋದು. ಬೀದಿಯಲ್ಲಿ ತಿರ್ಗುವವರೆಲ್ಲ ತಲೆಗೆಳೆದರೆ ಕಾಲಿಗಿಲ್ಲ ಕಾಲಿಗೆಳೆದರೆ ತಲೆಗಿಲ್ಲ ಎನ್ನುವ ವನದೇ. ಇಲ್ಲ ಜೀವನಾ ಬಾಳ್ಕಷ್ಟ. ಎಷ್ಟು. ದಡ್ಡಿದ್ರೂ ಹಣ ಎಲ್ಲಿ ಯಾವುದಕ್ಕೆ ಹೋಗುತ್ತೆ ಅನ್ನೋದೇ ಬಗೆ ಹೆಂಯೋಲ್ಲ. ಯಾವ ರೀತಿಯಿಂದಲೂ ಶ್ರೀಮಂತರಿಂದ ಸಹಾಯ ಪಡೆಯುವಂತೆಯೇ ಇಲ್ಲ ಅವರು ಕೈಗೆ ಸಿಕ್ಕಿದರೆ ತಾನೇ ಸಹಾಯ ಪಡೋದು. ಹೊರಗೆ ಕಾರಲ್ಲಿ ತಿರುಗುತ್ತಾರೆ. ಬಂಗಲೆಯೊಳಗಿದ್ದಾಗ ನಾಯಿಯನ್ನೂ ಫೊಕ್ರನನ್ನೂ ಕಾಪಲಿಟ್ಟಿಕೊಳ್ತಾರೆ. ಇಂಗೆ ಪಟ್ಟಣದ ಜನರ ಬವಣೆಗೆ ಮಿತಿಯೇ ಇರುವುದಿಲ್ಲ. ಇನ್ನು ನಿನಗೆ ಯಾವ ಮಹಾರಾಯುಜ ರೂ ಕೊಡುಬಲ್ಲಿ? ಬಾ, ಬಾ, ಇವತ್ತೊಂದು ದಿನ ಇದ್ದು ನಾಳೆ ಊರಿಗೆ ಹೋಗುವಿಯಂತೆ. ಹೇಗೂ ಬಂದೆ, ಸಿಕ್ಕೆ ಬಿದ್ದೆ, ಎಟು ತಿಂದೆ, ಎಲ್ಲಾ ಆಯ್ತು. ಇನ್ನು ಬದೇ ಇರುವೆ ಅಂದ ಮೇಲೆ ಎಷ್ಟು ನೋಡ್ಕೊಂಡೇ ಹೋಗು ಸುಬ್ಬ ನಿಗೂ ಕರೀ ಕಳ್ಸ್ತೀನೆ.

ಬಸವ— ಬೇಡಾ ಶಿವಪ್ಪ, ನನಗೆ ಇನ್ನು ಒಂದು ಘಳಿಗೇನೂ ಈ ಪಟ್ಟದಲ್ಲಿ ಇರೋ ಮನಸ್ಸಿಲ್ಲ ನಾನೇನಾದ್ರೂ ನಮ್ಮೂರ್ಲೇ ಹೋಗಿ ನೀರು ಕುಡಿಯೋದೆ.

ಜ. ಮಗ— ಖಾರಪ್ಪ ನನ್ ಜತೆಗೆ ಹೊಮ್ಲು. (ಹೋಗುವರು)

— ಮುಗಿದುದು —



ಅಮೇರಿಕನ್ ಸಿಸ್ಟೂಲ್ ಟೋಪಿಟೆಕ್ 6 ಗುಂಡು ಮತ್ತು 50 ಗುಂಡು ನಿಮಗೆ ಕೃಪ್ತಿಕರವಾಗದಿದ್ದಲ್ಲಿ ಹಣ ವಾಪಾಸು ಕೊಡಲಾಗುವುದು

ತುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನು ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಜೆಲೆ:6 ಗುಂಡಿನ ಪಿಸ್ತೂಲ್: ನಂ 333 ರೂ 8, ನಂ. 444 ರೂ. 10, ನಂ. 555 ರೂ. 15 ಸುತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15 ನಂ. 888 ರೂ 20 ಅದರೊಂದಿಗೆ 100 ಗುಂಡು ಧರ್ಮತ್ಗೆ. ಬೇರೆ 100 ಗುಂಡಿನ ಬೆಲೆ. ರೂ. 5. ಚೆರ್ಮದ ಹೋಲ್ಡರ್ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

REV ROGAS & CO., 23-A, Anand Nagar, BOMBAY-26

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

REGD. No. B. G. 176
LICENCE No. 31
Licensed to Post without Prepayment

ಕಮ್ಯುನಿಸ್ಟರು ದೇಶ ದ್ರೋಹಿಗಳೆ?

(೧ನೇ ಪುಟದಿಂದ)

ಗೆ ಸೇರಿದ ರಾಷ್ಟ್ರೀಯ ವಾದಿಗಳು. ಡಾ. ಗೋಪಾಲ, ರಣದಿವೆ, ಜ್ಯೋತಿಬಸು, ಸರ್ಜಿತ್ ಸಿಂಗ್ ಮತ್ತು ನಂಬೂದಿರಿಪಾಡರು ಎರಡನೇ ಗುಂಪಿನವರು. ರಣದಿವೆ-ಸರ್ಜಿತ್ ಸಿಂಗರಂತೂ ಚೈನಾದ ಆಕ್ರಮಣವನ್ನು ಸಂಪೂರ್ಣವಾಗಿ ಸಮರ್ಥಿಸುವವರು. ಅದಕ್ಕಾಗಿ ಅವರ ಈ ರಾಷ್ಟ್ರವಿರೋಧೀಕಾರ್ಯಕ್ಕಾಗಿ ಕಳೆದ ವಾರದಲ್ಲಿ ಬಂಧಿಸಲಾಗಿದೆ. ಕಮ್ಯುನಿಸ್ಟರ ಈ ದೇಶದ್ರೋಹೀ ಚಟುವಟಿಕೆಗಳ ಸರಿಯಾದ ಅರಿವು ನಮ್ಮ ಜನತೆಗೆ ಈ ಮೊದಲು ಆಗಿಲ್ಲ. ಈಗದು ಸ್ಪಷ್ಟವಾಗಿದೆ. ಇದರಿಂದಲೇ ಕಮ್ಯುನಿಸ್ಟ್ ಪಕ್ಷದಲ್ಲೇ ಒಡಕುಂಟಾಗಿ ಕಳೆದ ತಿಂಗಳಲ್ಲಿ ದೆಹಲಿಯಲ್ಲಿ ಸೇರಿದ ಅದರ ಸೆಕ್ರೆಟರಿಯೇಟ್ ಸಭೆಯಲ್ಲೆ ಜ್ಯೋತಿಬಸು, ಸರ್ಜಿತ್ ಸಿಂಗ್ ಮೊದಲಾದವರು ತಮ್ಮ ರಾಜಿನಾಮೆಯನ್ನು ಸಲ್ಲಿಸಿದ್ದಾರೆ. ನಂಬೂದಿರಿಪಾಡರು ಕಾರ್ಯದರ್ಶಿ ಪದವಿಯನ್ನು ತ್ಯಜಿಸುವ ಆಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ಕಮ್ಯುನಿಸ್ಟರುಇನ್ನೂ ತಮ್ಮ ಚೀನಾಪರ ನೀತಿಯನ್ನು ಬಿಟ್ಟಂತೆ ಕಾಣುವುದಿಲ್ಲ ಎಂಬುವುದು ಸ್ಪಷ್ಟವಾಗುತ್ತದೆ.

ಈ ವಿಷಮ ಪರಿಸ್ಥಿತಿಯಲ್ಲಿ ಇಷ್ಟೊಂದು ನಾಚಿಕೆಗೇಡಾಗುವ ವರ್ತನೆಯನ್ನು ಮಾಡುವವರು ನಮ್ಮ ಕಮ್ಯುನಿಸ್ಟರೆಂದು ಯಾರೂ ಬಗೆದುದಿಲ್ಲ. ಆದರೆ ಇತ್ತೀಚೆಗೆ ತಮ್ಮ ಧೋರಣೆಯನ್ನು ಬದಲಾಯಿಸದಿದ್ದರೆ ತಮಗೆ ಉಳಿಗಾಲವಿಲ್ಲವೆಂದು ಬಗೆದು ಚೀನಾವು ಭಾರತದಮೇಲೆಸಗ್ಗಆಕ್ರಮಣವನ್ನು ಮಾಡಿದೆಯೆಂದು ಕಮ್ಯುನಿಸ್ಟ್ ಪಕ್ಷ ಹೇಳುತ್ತಿದೆ. ಹೆಚ್ಚಿನ ಕಮ್ಯುನಿಸ್ಟ್ ಬಂಧುಗಳು ಮೌನವೃತವನ್ನು ತಳೆಯುತ್ತಿದ್ದಾರೆ. ಕತ್ತರಿಯಲ್ಲಿ ಸಿಕ್ಕಿದ ಅಡಕೆಯಂತಾಗಿದ್ದಾರೆ. ಸಾರ್ವಜನಿಕರೆದುರು ಮುಖವೆತ್ತಿ ಮಾತಾಡಲಾರದಾಗಿದ್ದಾರೆ. ಈಗ ಅವರಿಗೆ ಸರಕಾರವನ್ನು ಉಳಿದ ಪಕ್ಷಗಳನ್ನು ಟೀಕಿಸುವುದರ ಬದಲು ತಮ್ಮ ಮೂರ್ಖತೆಯನ್ನು ಕಾಪಾಡಿಕೊಳ್ಳುವುದು ಬಹುಕಷ್ಟವಾಗಿದೆ.

ಇಂತಹ ದೇಶದ್ರೋಹಿಗಳಾದ ಕಮ್ಯುನಿಸ್ಟರಿಗೆ ಒಂದು ಕಿವಿಮಾತು ಹೇಳಬೇಕಾಗಿದೆ ಈ ಕಮ್ಯುನಿಸ್ಟ್ ಬಂಧುಗಳು ನೊದಲು ತಮ್ಮ ಜನ್ಮ ಭೂಮಿಯು ಯಾವುದೆಂಬುದನ್ನು ಗುರುತಿಸಬೇಕು. ತಮ್ಮ ಚರ್ಮವನ್ನು ಹರಿದು ತಮ್ಮ ರಕ್ತವನ್ನು ಕಣ್ಣುಬಿಟ್ಟು ನೋಡಬೇಕು. ಅದು ಭಾರತದ ರಕ್ತವೇ ಯಾ ರಷ್ಯ ಅಥವಾ ಚೀನಾದಿಂದ ಬಂದುದೇ ಎಂಬುದನ್ನು ಸರಿಯಾಗಿ ಪರಿಕ್ಷಿಸಬೇಕು. ಬಳಿಕ ಮುಂದಿನದನ್ನು ಯೋಚಿಸಿಕೊಳ್ಳ ಬೇಕು.

ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ.]

ಪೂರ್ವರಾಗ— (ಜಾನಕೀತನಯರ ಕವಿತಾ ಸಂಕಲನ) ಪ್ರಕಾಶಕರು: ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿ ಪುರಂ, ಮೈಸೂರು ಪುಟಗಳು: ೭೩. ಬೆಲೆ: ರೂ. ೧—೦೦.

'ಪೂರ್ವಾನುರಾಗ'ದಲ್ಲಿರುವ ಜಾನಕೀತನಯರ ೩೪ ಕವನಗಳ ಸಂಗ್ರಹವಿದು. ಇಲ್ಲಿರುವ ಕವಿತೆಗಳು ನವ್ಯತೆಯ ಹಾದಿಯನ್ನು ಸ್ಪರ್ತಿಸಿವೆಯೂದರೂ ಅದೇ ಸರ್ವಸ್ವವೆಂದು ತಿಳಿದಿಲ್ಲ. ವ್ಯಾಸ, ಯತಿ, ಲಯಲಕ್ಷ್ಯವಾಗಿ ಓದುವುದಕ್ಕೂ ಹಾಡುವುದಕ್ಕೂ ಉಚಿತವಾದ ಭಾವಗೀತೆಗಳವು.

ಕವಿ ಪರರಿಗಾಗಿ ಮಾತ್ರ ಬರೆಯುವುದಲ್ಲ, ತನಗಾಗಿಯೂ ಬರೆಯುತ್ತಾನೆ; ಅದರಿಂದ ಆತ್ಮತೃಪ್ತಿ ಪಡೆಯುತ್ತಾನೆ. ಬಾಳ ಸವಿಯನ್ನು ತನಗೆ ಎಷ್ಟೊದೆದು ಎದೆಯ ಗೂಡಿನಲಿ ಕುಳಿತು ಕಾಯುತ್ತಿರುವ ಜಾತಕ ಹೊಂಗನಸು ಹೆಣಿಗೆಂದು ಅರಸುತ್ತ ಇದೆ (ಕವಿ ಜಾತಕ)ಈ ಹೊಂಗನಸು ಹನಿ ಲಭಿಸಿತೆಂದರೆ ಕವಿ ಜಾತಕ ತೃಪ್ತ. 'ಲೋಕಕೆಲ್ಲಕು ಬೇಡವಾಗಿಹೆ ಹಾಡನ್ನು ನಿಲ್ಲಿಸಿ ಬಾಳ್ವೆಯು ಬನ್ನದಿ ದನಿದಿಹ ಜೀವಿಗೆ ಪ್ರೀತಿಯು ಹದನವನು ತೋರಿಸುವಹಾಡು ಹಾಡು' (ನಾಕು ಹಾಡನು ನಿಲ್ಲಿಸು) ಎಂದು ಕವಿಗೆ ಹೇಳುತ್ತಾನೆ. ಇಂದಿನ ದಿನಗಳಲ್ಲಿ ಇದು ಅತ್ಯವಶ್ಯ 'ಎದೆಯೊಳಗನು ಕೆಲಕುವಂಥ ಅತ್ಯಪೂರ್ವ ಛಂದಕೆ! ಬಗೆಯೊಳಗನು ಬೆದಕುವಂಥ ಅನಾಮಧೇಯ ಗೀತಕೆ' ಮನನೋತು (ಮಂಜರದಗಿಳಿ) ಜೀವವಳೆಯ ಬಿಲ್ಲನೇರಿ ಮುಗಿಲಿನಾಚೆ ಚಿಗಿದು ನೀಲ ಪಟವನೊಡೆದು ನಡೆದು ಸಗ್ಗದೂರು ಸೇರಿತು ನಿಜ. ಆದರೆ, ಅದೇ ಜೀವಕ್ಕೆ 'ಎಂಥ ನೋಲಿನೊಲು ಎಂಥ ಅಳಲಿನಲು ಬಾಳುವಂಥ ಚಪಲ!' (ಜೇಡ-ಜೀವ)

ಲೋಕದ ಜನರ ನಡಾವಳಿಯಿಂದ ನೊಂದ ಕವಿಕೇಳುತ್ತಾರೆ 'ಮರಳು ಕಾಡಲಿ ಅತಿನ ಜೀವಿಕೆ ಪ್ರೀತಿರಕ್ಷೆಯು ಎಲ್ಲಿದೆ?' (ಪ್ರೀತಿ ರಕ್ಷೆಯು ಎಲ್ಲಿದೆ) ಕಾನೂನಿನ ನೊಗ ಹೆಗಲನೊತ್ತಿ ಎತ್ತಲರಿದು ತಲೆಯನ್ನು ಜಾಟಿಯೇಟು ಛಟ್ಟನೊದರಿ ಚಪ್ಪರಿಸಿದೆ, ಬೆನ್ನನು' (ಗಾಣ-ಎತ್ತು) ಎಂದಿದನ್ನು ಸಮರ್ಥಿಸಿದ್ದಾರೆ. ನೊಗನೇಣಿನ ಬಿಗಿ ಸಡಿಲುತ ಸನ್ಯಾಗದ ತಿರಿಕೆ' ಹೋಗಬೇಕಾದುದನ್ನು ತಿಳಿಸಿದ್ದಾರೆ. ಜಗತ್ತಿನ ದುಃಖದಿಂದ ಬೆಂಗೆಡದೆ ಅದನ್ನು 'ನಿನ್ನೆದೆಯ ಕುಹರದೊಳಗೆ ಹೊಳು, (ನುಂಗು ನಿನ್ನ ನೋವನು) ಏಕೆಂದರೆ ಸತ್ತ ಮನು ಸಂತಾನ ವರಸಿದೆ. ಬಾಳ್ವೆಗಾನೆಯೆ ಬೆಂಬಲಿ, (ಬಾಳ್ವೆಗಾನೆಯೆ ಜೆಂಬಲ) ಎಂದು ಆ ತಂದೆ ಯುಗ ಯುಗಕ್ಕೊಂದು ಹೊಸ ರೂಪಧರಿಸಿ ಶಾಂತಿಯನು ಹರಸಿ (ಅವತಾರ ದೀಕ್ಷೆ ಜೀವ ಸಾವು ನೋವುಗಳಲ್ಲಿ ಮುಳುಗೇಳುತಿರೆ ಹಿರಿಗೋಲಾಗಿ, ಬರುತ್ತಾನೆ. (ಅನ್ಯಕ್ತ.)

ಜೀವನದಲ್ಲಿ ನೊಂದ ಜೀವ ಸುತ್ತ ಮುತ್ತಲೆಲ್ಲ 'ನಿನ್ನ, ಅರಸುತ್ತಿದೆ. (ನಿನ್ನನರಸಿ) ಬೆಳಕನ್ನು ಬಯಸಿ ಜೀವಿಕವು ಕಳೆಯುತಿದೆ.

(ವಿಫಲ) ತಂಬೆಲರಾಗಿ, ಮಲ್ಲಿಗೆಯ ಹೂವಾಗಿ ಬೆಳಕು ತೋರುತ್ತದೆ. (ನೂರು ಚಿಂತೆಗಳಲ್ಲಿ) ಹೃದಯ ಮಂಟಪದಲ್ಲಿ ವಿಶ್ವಚೇತನವನ್ನಿರಿಸಿ ,ಮಣಿಯುತ್ತದೆ. (ದರ್ಶನ) ಸತ್ಯ, ಅಮೃತ ರಸವನ್ನು ಮಾಣ್ಣಾಗಿಹ ಈ ಗೃಹಕೆ ನವಚೇತನ ನೀಡು ಸುಖ ಶಾಂತಿಯನೀಡು ಎಂದು ಪ್ರಾರ್ಥಿಸುತ್ತದೆ. (ರಸಬಿಂದು).

ಇದೇ ಮಾದರಿಯ ಭಾವಗಳು ಇಲ್ಲಿನ ಕವಿತೆಗಳಲ್ಲಿ ವ್ಯಕ್ತವಾಗಿವೆ. ಗಾಂಧಿ, ಪರಿವ್ರಾಜಕ ಪ್ರೇಮ ಸ್ರವಣತಿ, ನನ್ನೆದೆಗೆ ಬರುವಾಗ, ಮೇಣಕೆ ವಿಶ್ವಾಮಿತ್ರ'ಗಳನ್ನು ಬಿಟ್ಟರೆ, ಉಳಿದೆಲ್ಲ ಗೀತೆಗಳಲ್ಲಿಯೂ ಹೃದಯದ ಮಿಡಿತವಿದೆ; ಭಾವಸ್ಪಂದನವಿದೆ ವ್ಯಂಜಕಾರ್ಥಕ್ಕೆ ಅಧ್ಯಾತ್ಮಿಕಾರ್ಥದ ಹೊಳಪು ಬರುತ್ತದೆ. ಮೇಲೆ ಹೇಳಿದವುಗಳು ತುಳು ವಾಚ್ಯಕ್ಕೆ ಇಳಿದಿವೆ; ಕೊನೆಯದು ಕಥನ ಗೀತ; ಉತ್ತಮವಿದೆ; ಇಂತಹ ಪಲವಾರು ಕೃತಿಗಳನ್ನು ಕವಿಗಳಿಂದ ಬಯಸಬಹುದು. ಸಂಗ್ರಹದ ಕೊನೆಯ 'ಬನ್ನಿ ನಮ್ಮಿ ನಾಡಿಗೆ' ಕನ್ನಡದ, ತಾಯ್ನುಡಿಯ ಶಕ್ತಿಸಳವನ್ನು ವ್ಯಕ್ತಗೊಡಿಸುವುದರೊಡನೆ ನಾಡಿನ ಸಿಚ್ಚೇತನಕ್ಕಾಗಿ 'ನಾಡಿದೇವತೆ ಮಲಗಿದೆ? ತಮನ ಮುಸುಕನು ತೆರೆಯದೆ? ಜಡತೆಯೀವತೆಕೆ ಕವಿದಿರ್ದ ನಿದ್ದೆಯನು ಕಳದೀಳದೆ?' ಎಂದು ದುಃಖಿಸಿ, 'ಇಂದೊ ನಾಳೆಯೊ ಸಿಂಹದಂದದಿ । ಗಗನದೆತ್ತರ ನೆಗೆವುದು; ಜಡತೆಯಿಂದೆಚ್ಚತ್ತ ಕೂಡಲೆ ವೀರ ಗರ್ಜನೆಗೆಯ್ವುನೆಂ'ದು ಆಶಾವಾದ ಪ್ರಕಟಿಸಿದ್ದಾರೆ.

ಕವಿ ಹೃದಯ, ಕವಿ ಭಾವನವನ್ನು ಅರಿತ ಜಾನಕೀತನಯರ ಈ 'ಪೂರ್ವರಾಗ' ಉತ್ತಮ ಭಾವ ಲಹರಿಯ ಪೂರ್ವರಾಗ. ಇದು ಮುಂದುನರಿದು, ರಾಗ ಸಾಗರದಿಂದ ಸೂರ್ಯ ಉದಿಸಿ ಬರಲಿ.

—ಗೋರಾ.

ಪಿಗ್ಮಿ ಪಿಗ್ಮಿ ಪಿಗ್ಮಿ ಪಿಗ್ಮಿ ಪಿಗ್ಮಿ ಪಿಗ್ಮಿ ಪಿಗ್ಮಿ ಪಿಗ್ಮಿ ಪಿಗ್ಮಿ

ಪಿಗ್ಮಿ

ಪಿಗ್ಮಿ

ದೈನಿಕ ಉಳಿತಾಯಗಾರರ ಸನ್ಮಿತ್ರ

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಭಿತಾಳ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳೂ ಚಿತ್ರಸಹಿತ ಉಪಯುಕ್ತ ಮಾಹಿತಿ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

NTRIBUTE
UR MITE
OUR
ATIONAL
EFENCE
UND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 11

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 22—11—1962 ಗುರುವಾರ

20ನ. ಪೈಸೆ
ನಾ. ಚಂದಾ ರೂ. 6–75
ಸಂಪುಟ ೪೨ ಸಂಚಿಕೆ ೧೧

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ಚೀನಾದ ಆಸುರೀ ಆಕ್ರಮಣದ
ಸಂಧಿಕಾಲದಲ್ಲಿ ನಾವೇನು ಮಾಡಬೇಕು?

ಇಂದು ನಮ್ಮ ಮನೆಗೆ ಧಾಳಿಯಾಗಿದೆ. ನಮ್ಮ ನೆಯನ್ನಾಕ್ರಮಿಸ ಬಂದ ಈ ಧಾಳಿಗಾರರನ್ನು ಮಣ್ಣು ಮುಕ್ಕಿಸಬೇಕು; ಸದೆ ಬಡಿಯಬೇಕು. ಯುದ್ಧವನ್ನೇ ತಮ್ಮ ಜೀವನದ ಪರಮ ಧ್ಯೇಯವಾಗಿರಿಸಿಕೊಂಡ ಆ ಕೆಂಪು ಚೀನಾಕ್ಕೆ ಬುದ್ಧಿ ಕಲಿಸಬೇಕು. ಆಕ್ರಮಣಕಾರೀ ದೇಶ ಜಗತ್ತಿಗೇ ಗಂಡಾಂತರಕಾರಿ. ಲೋಕದ ಶಾಂತಿಯನ್ನು ಕೆಡಿಸಿ ತನ್ನ ಸ್ವಾರ್ಥವನ್ನು ಪೂರೈಸಲು ಮಾಡುತ್ತಿರುವ ಅದರ ಕೃತ್ಯಕ್ಕೆ ಯೋಗ್ಯವಾದ ಶಾಸ್ತಿ ಮಾಡಬೇಕು. ಭಾರತದ ಶಾಂತಿ ಭದ್ರತೆ ಮತ್ತು ಸಮೃದ್ಧತೆಗಳನ್ನು ಛಿದ್ರ ಮಾಡ ಬಂದ ಕೆಂಪು ಚೀನಾದ ಈ ಆಸುರೀ ಆಕ್ರಮಣವನ್ನು ಎದುರಿಸಲು ಭಾರತ ತನ್ನ ಸಂಪೂರ್ಣ ಶಕ್ತಿ-ಯುಕ್ತಿಗಳನ್ನು ಉಪಯೋಗಿಸಬೇಕು. ನಮ್ಮ ಮನೆಯ ಮೇಲೆ—ನಮ್ಮ ತಾಯಿ ನೆಲದ ಮೇಲೆ ಆ ಕೆಂಪು ಚೀನಾದ—ಆ ಕಮ್ಯುನಿಸ್ಟರ—ಆ ಆಸುರಿಗಳ ದುರಾಕ್ರಮಣ! ಯುದ್ಧ! ಏನಿದು? ಶತಮಾನಗಳಿಂದ ಪಾರತಂತ್ರ್ಯದಲ್ಲಿ ನರಳಿ— ಬೇಸತ್ತು—ಕೊನೆಗೆ ಸಹಸ್ರಾರು ಹುತಾತ್ಮರ ಬಲಿದಾನದ ಫಲವಾಗಿ ಸಿಕ್ಕಿದ ಈ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಬಂದ ಈ ಚೀನಾ ರಕ್ಕಸರನ್ನು ಸದೆ ಬಡಿಯಲು ನಾವೆಲ್ಲ ನಮ್ಮ ಸರ್ವಸ್ವವನ್ನು ಒಟ್ಟುಗೂಡಿಸಿ ಪ್ರಕರಣ ಪೂರ್ವಕವಾಗಿ ರಾಷ್ಟ್ರೀಯ ಸಂಧಿಕಾಲದಲ್ಲಿ ಈ ಸಮಯದಲ್ಲಿ ನಮ್ಮ ಸ್ವಾತಂತ್ರ್ಯ, ಭದ್ರತೆ—ಧರ್ಮ—ಸಂಸ್ಕೃತಿಗಳ ರಕ್ಷಣೆಗೋಸ್ಕರ ಸೇವೆಮಾಡಲು-ಧೈರ್ಯದಿಂದ-ಉತ್ಸಾಹದಿಂದ, ಬದ್ಧ ಕಂಕಣರಾಗಬೇಕು.

ಅಹಿಂಸಾ ತತ್ವ

ನಮ್ಮ ರಕ್ಷಣೆ ಮಾಡಬೇಕಾದ ಈ ಸಂದರ್ಭದಲ್ಲಿ ವೈರಿಗಳ ಬಗ್ಗೆ ಕನಿಕರ ಪಡಬೇಕೆ? ಶಾಂತಿ ಕಾಲದಲ್ಲಿ ಅಶೋಕ ತನ್ನ ಅಸಾಮಾನ್ಯ ಪವಾಡ ಶಕ್ತಿಯಿಂದ ಅಹಿಂಸೆಯಿಂದ ರಾಜ್ಯವಾಳಿದ್ದನು. ಆದರೆ, ಕ್ರಾಂತಿಯ ಕಾಲದಲ್ಲಿ?

ರಾಷ್ಟ್ರದ ರಕ್ಷಣೆಗಾಗಿ— ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕಾಗಿ ಆನಿವಾರ್ಯ ಪ್ರಸಂಗ ಬಂದಾಗ ಯುದ್ಧ ಮಾಡಬೇಕು. ಇದು ಹಿಂಸೆಯಲ್ಲ, 'ಕರ್ತವ್ಯ'. ನುಸಿಗೆ ಬಂದ ಶತ್ರುಗಳನ್ನು ಸದೆಬಡಿದರೆ, ಆದು ಹಿಂಸೆಯಾಗದು. ಗೀತೆಯಲ್ಲೂ ಸ್ವಧರ್ಮ ರಕ್ಷಣೆಗೆ— ಸ್ವದೇಶ ರಕ್ಷಣೆಗೆ —ಆತ್ಮರಕ್ಷಣೆಗೆ ಯುದ್ಧ ಮಾಡುವುದು ಹಿಂಸೆಯೆನಿಸದು ಎಂದು ಹೇಳಿದೆ. ಹೀಗಿರುವಾಗ ನಾವಿಂದು ಯುದ್ಧಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಭರದಿಂದ ಮಾಡಬೇಕು. ವೈರಿಗಳನ್ನು ಸದೆಬಡಿಯಲು ಸಾಧ್ಯವಿಪ್ಪ ಉಪಾಯಗಳನ್ನು ಕೈಗೊಳ್ಳಲೇಬೇಕು. ರಾಜಾಜಿ ಗ,ಜೇಂದ್ರ ಪ್ರಸಾದ್, ಜೆ. ಪಿ., ಕೃಪಲಾನಿ, ವಿನೋಬಾ ಮೊದಲಾದವರೆಲ್ಲ "ಇಂದು ನಾವು ನಮ್ಮ ವೈರಿಗಳೊಡನೆ ಪ್ರಬಲ ಯುದ್ಧ ಮಾಡಿ ಅವರನ್ನು ಹೊಡೆದೋಡಿಸಿ ನಮ್ಮ ಸ್ವಾತಂತ್ರ್ಯ ಭದ್ರತೆಗಳನ್ನು ಕಾಪಾಡಿಕೊಳ್ಳಬೇಕು" ಎಂದು ಕಂಠೋಕ್ತವಾಗಿ ಹೇಳಿದ್ದಾರೆ, ನಮ್ಮ ಧರ್ಮ ಸಂಸ್ಥೆಗಳ ಅಧಿಪತಿಗಳೂ ಈ ಮಾತನ್ನು ಸಮರ್ಥಿಸಿದ್ದಾರೆ.

ಉತ್ತಮ ಸಂಘಟನೆ ಈಗ ಬೇಕು

ಈ ದುರ್ಧರ ಸನ್ನಿವೇಶದಲ್ಲಿ ನಮ್ಮ ಸರಕಾರವೇ ನಮ್ಮನ್ನು ಆಶಾದೀಪ. ಅದೇ ನಮ್ಮ ಬಾಳಿನಾಧಾರ. ಆದರ ದಕ್ಷ ಮಾರ್ಗದರ್ಶನದಲ್ಲೇ ನಾವು ನಾಗುವುದರಿಂದ ಅದರ ಪಾತ್ರ ಇಂದು ಅನರ್ಘ್ಯ. ನಮ್ಮ ದೇಶದಲ್ಲಿ ಸಮಸ್ಯೆಗಳಿಗೆ ಕಡಿಮೆಯಿಲ್ಲವಾದರೂ ಇಂದು ನಮ್ಮ ಸ್ವಾತಂತ್ರ್ಯಕ್ಕೇ ಕೊಡಲಿಯೇಟು ಕೊಡುತ್ತಿರುವ ಚೀನಾದ ಆಸುರೀ ಆಕ್ರಮಣವನ್ನು ಹೊಡೆದಿಕ್ಕಲು ಉತ್ತಮ ಸಂಘಟನೆ ಬೇಕು. ದಕ್ಷ ಹಾಗೂ ಯೋಗ್ಯ ಕೆಚ್ಚೆದೆಯ ಮುಂದಾಳುಗಳು ಬೇಕು ಪಕ್ಷ ಸಂಧ ಬೇಧ ಭಾವನೆಗಳಿಗೆ ಎಡೆಯನ್ನು ಕೊಡಬಾರದು, ರಾಷ್ಟ್ರದ ಅಮೂಲ್ಯವಾದ ಶಕ್ತಿಗಳನ್ನು ವಸ್ತುಗಳನ್ನು ಈಗ ಉಪಯೋಗಿಸಿಕೊಳ್ಳಬೇಕು. ಪಾಪ್ಪರ ಭಿನ್ನಾಭಿಪ್ರಾಯಗಳಿದ್ದರೂ ದೇಶ ರಕ್ಷಣೆಯ ಪುಣ್ಯ ಕಾರ್ಯದಲ್ಲಿ ಅವೆಲ್ಲವನ್ನು ಬದಿಗಿರಿಸಿ ಐಕ್ಯವಿಂದ ಬೆರೆತು ಕಲೆತು ಕೆಲಸ ಮಾಡಬೇಕು. ನಮ್ಮಲ್ಲಿರುವ ಆಪ್ಪ ಶಕ್ತಿಯುನ್ನಾದರೂ ಉತ್ತಮ ರೀತಿಯಲ್ಲಿ ಸಂಘಟಿಸಿದರೆ ಅದ್ಭುತ ಕಾರ್ಯ ಸಾಧಿಸಬಹುದು- ಸಂರಕ್ಷಣಾ ಮಂತ್ರಿ ಚವನ್ನರು ಸಂಘಟನಾಕಾರ್ಯದಲ್ಲಿ ನುರಿತವರು, ನಮ್ಮ ಮಾಜಿ ಸೇನಾಧಿಪತಿ ಜನರಲ್ ತಿಮ್ಮಯ್ಯನವರು ಸಂಘಟನಾ ಕಾರ್ಯಕ್ಕೆ ಹೆಸರಾದವರು. ಇವರ ಪ್ರಯತ್ನದಿಂದಲೇ ಕಾಶ್ಮೀರ ನಮ್ಮ ಪಾಲಿಗೆ ಒಂದಾದೆ. ಇಂದು ಇವರ ಚಾತುರ್ಯದ ಉಪಯೋಗವಾಗುತ್ತಿದೆ ನಮ್ಮ ಜಲ-ಭೂ-ವಿಮಾನ ಪಡೆಗಳು ಸರ್ವ ವಿಧದಿಂದಲೂ ಬಲಯುತವಾಗಿ ಸಿದ್ಧವಾಗಬೇಕು. ಪ್ರಾಂತ್ಯ-ಜಿಲ್ಲೆಗಳಲ್ಲಿ ಉತ್ತಮ ರೀತಿಯ ಸೇನೀಯ ಸಂಘಟನೆ ಆಗಬೇಕು. ಅದಕ್ಕಾಗಿ ಪ್ರಾಂತ್ಯ ಪ್ರಾಂತ್ಯಗಳಲ್ಲಿ ರಕ್ಷಣಾ ಶಾಖೆಯನ್ನು ತೆರೆದು ಅದು ಉತ್ತಮ ರೀತಿಯಿಂದ ತನ್ನ ಕಾರ್ಯ ಮಾಡುವಂತಾಗಬೇಕು. ನಮ್ಮ ಸೇನೆಯಲ್ಲಿ ಪೂರ್ತವಲ್ಲದೆ ಇತರ ವಿಚಾರಗಳಲ್ಲೂ ಇಂದು ಉತ್ತನು ಸಂಘಟನೆ ಬೇಕಾಗಿದೆ. ಇದಕ್ಕಾಗಿ ಜನತೆಯ ಪೂರ್ಣ ಸಹಕಾರ ಹಾಗೂ ದಕ್ಷ ನಾಯಕರ ವ್ಯಾಪಾರಿಕ ಪರಿಶ್ರಮದ ಆಗತ್ಯವಿದೆ

ಸೈನಿಕ ಶಿಕ್ಷಣ

ಹಲವು ವರ್ಷಗಳ ಹಿಂದೆ ನಮ್ಮ ಮಾಜಿದಂಡನಾಯಕ ಜ| ಕೆ. ಕಾರ್ಯಪ್ಪನವರು ಪ್ರತಿ ಹೈಸ್ಕೂಲು ಕಾಲೇಜುಗಳಲ್ಲಿ ಎ. ಸಿ. ಸಿ. ಎನ್. ಸಿ. ಸಿ.ಗಳು ಕಡ್ಡಾಯವಾಗಿ ಬೇಕೆಂಬುದನ್ನು ಒತ್ತಿ ಹೇಳಿದ್ದರು ಇಂಥ ಸಂಕಲ್ಪ ಪರಿಸ್ಥಿತಿಯಲ್ಲಿ, ಪ್ರತಿಯೋರ್ವ ಪ್ರಜೆಯೂ ಸೈನಿಕನಾಗಿ ತರಬೇತಿ ಹೊಂದಲು ಸೈನಿಕ ಶಿಕ್ಷಣ ಪಡೆಯ ಬೇಕು. ನಮ್ಮ ವಿಶ್ವ ವಿದ್ಯಾಲಯಗಳಲ್ಲಿ ಎನ್. ಸಿ. ಸಿ. ಕಡ್ಡಾಯವಾಗುವುದೆಂದು ಗೃಹಮಂತ್ರಿಗಳು ಸ್ಪಷ್ಟವಾಗಿ ಹೇಳಿದುದು ಸ್ವಾಗತಾರ್ಹ. ನಮ್ಮ ವಿದ್ಯಾರ್ಥಿಗಳು ಪೋರರು ಉತ್ಸಾಹದಿಂದ ಮುಂದೆ ಬಂದು ದೇಶ ಭಕ್ತಿಯಿಂದ ಪ್ರೇರಿತರಾಗಿ ಇಂಥ ತರಬೇತಿಯನ್ನು ಪಡೆಯುಬೇಕು.

ಪತ್ರಿಕೆಗಳ ಬರಹಗಾರರ ಕರ್ತವ್ಯ

ಜನಜಾಗೃತಿಯನ್ನುಂಟುಮಾಡುವ ರಾಷ್ಟ್ರೀಯ ಭಾವನೆಯನ್ನು ಪ್ರಜ್ವೋದಿಸುವ ಹಾಗೂ ವಸ್ತು ಸ್ಥಿತಿಯನ್ನು ಪ್ರಚಾರ ಮಾಡುವ ಮಹಾನ್ ಪಾತ್ರ ನಮ್ಮ ಪತ್ರಿಕೆಗಳದ್ದು. ಇಂದಿನ ಈ ಪರಿಸ್ಥಿತಿಯಲ್ಲಿ ಪತ್ರಿಕೆಗಳ ಮುಖ್ಯ ಉದ್ದೇಶ ಯುದ್ಧದ ಪೂರ್ಣ ವಿವರವನ್ನು ಕೆಲವೇ ಪುಟಗಳಲ್ಲಿ ಓದುಗರಿಗೆ ಆದಷ್ಟು ಕ್ಷಿಪ್ರವಾಗಿ ಮುಟ್ಟಿಸುವುದಾಗಿದೆ. ಆವರಲ್ಲಿ ರಾಷ್ಟ್ರ ಪ್ರೇಮವನ್ನು ಉಕ್ಕಿಸುವ ಕೆಲಸವನ್ನು ಪತ್ರಿಕೆಗಳು ಸುಲಭವಾಗಿ ಮತ್ತು ಸಫಲವಾಗಿ ಮಾಡಬಲ್ಲುವು. ಜನರಿಗೆ ತಮ್ಮ ತಮ್ಮ ಹೊಣೆಗಾರಿಕೆಯ ಅರಿವನ್ನು ಪತ್ರಿಕೆಗಳು ಮೂಡಬೇಕು. ನಮ್ಮ ಸಾಹಿತಿಗಳು ಭಾವೈಕ್ಯವನ್ನು ಉಂಟುಮಾಡುವಂಥ ಕೃತಿಗಳ ರಚನೆ ಮಾಡಬೇಕು. ಜನರ ಮನದಲ್ಲಿ ರಾಷ್ಟ್ರ ಭಕ್ತಿಯನ್ನು ಪುಟಿಸುವ ಕೃತಿರತ್ನಗಳು ನಮ್ಮ ಲೇಖಕರಿಂದ ಹೊರಬೀಳಬೇಕು. ಜನರ ಕರ್ತವ್ಯ— ಸರಕಾರದ ಹೊಣೆ – ದೇಶದಲ್ಲಿ ಇವೇ ಮೊದಲಾದವುಗಳನ್ನು ಹೃದಯಂಗಮವಾಗಿ ನಮ್ಮ ಲೇಖಕರು ಚಿತ್ರಿಸಿ ಜನತೆಗೆ ಕೊಡಬೇಕು. ಇದರಿಂದ ಭಾವೈಕ್ಯದೊಂದಿಗೆ ರಾಷ್ಟ್ರ ಭಕ್ತಿಯಿಂದ ನಮ್ಮ ಜನತೆ ದೇಶ ರಕ್ಷಣೋತ್ಸಾಹಿಗಳಾಗಿ ಏನನ್ನೂ ಮಾಡಲು ಸಿದ್ಧವಾಗುವುದರಲ್ಲಿ ಸಂಶಯವಿಲ್ಲ.

ಕಮ್ಯುನಿಸ್ಟೇತರ ದೃಷ್ಟಿ

ಚೀನದ ಈ ಆಸುರೀ ಆಕ್ರಮಣವನ್ನು ರಶ್ಯ— ಖಾಕಿಸ್ತಾನ— ಇಂಡೋನೇಶ್ಯ ಬರ್ಮಾ ಮುಂತಾದ ಕೆಲವೇದೇಶಗಳನ್ನು ಬಿಟ್ಟರೆ, ಉಳಿದ ಎಲ್ಲಾ ದೇಶಗಳು ಘಂಭೀರವಾಗಿ ಪ್ರಪ್ರವಾದ ಮಾತುಗಳಿಂದ ಟೀಕಿಸಿ ಇದೊಂದುವಿಜಗತ್ತಿನ ಶಾಂತಿ ಸಹಜೀವನ ತತ್ವಗಳಿಂದ ಬಾಳುತ್ತಿರುವ ರಾಷ್ಟ್ರಗಳಿಗೆ ಹಂಘಾತಾವ್ವಾನವೆಂದು ಸಾರಿವೆ. ನಮ್ಮ ಪ್ರಧಾನಿ ನೆಹರೂರವರು ಜಗತ್ತಿನ ೧೦೪ ರಾಷ್ಟ್ರಗಳಿಗೆ ಪ್ರಸ್ತುತ ಗಡಿ ವಿವಾದದ ಬಗ್ಗೆ ವಿವರವಾಗಿ ಕಾಗದ ಬರೆದಿದ್ದಾರೆ. ಅವುಗಳಲ್ಲಿ ೬೩ ರಾಷ್ಟ್ರಗಳ ಭಾರತದ ನಿಲುವಿನಯನ್ನು ಪೂರ್ಣ ಸಮರ್ಥಿಸಿ, ಪ್ರಶಂಸಿಸಿ ತಮ್ಮ ಸಹಾನುಭೂತಿಯನ್ನು ಸೂಚಿಸಿವೆ. ಹೆಚ್ಚಿನವುಗಳು ತಮ್ಮ ಪೂರ್ಣ ಸಹಾಯ ಕೊಡಲು ಒಪ್ಪಿಕೊಂಡಿವೆ. ಇಂದು ಕಮ್ಯುನಿಜಂನ ಭಯ ಅವೆಲ್ಲ ರಾಷ್ಟ್ರಗಳಿಗೆ ಇದೆ. ಚೀನಾ ಕೇವಲ ಭಾರತವನ್ನಷ್ಟೇ ಆಕ್ರಮಿಸಿ ಸುಮ್ಮಗೆ ಕೂತುಕೊಳ್ಳಲಾರದೆಂದು ಅವೆಲ್ಲ ಅರಿತಿವೆ. ಚೀನಾದ ಆಕ್ರಮಣದ ಮರು ದ್ದೇಶ ಬಹುಮಾನಾರ್ಥವಾಗಿದೆ. ಇದರಿಂದ ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಆಪಾಯವಿದೆ

(೧೨ನೇ ಪುಟ ನೋಡಿರಿ)

ಖೀರಾ
ನೀವು ತಾಳಿಕೆ–ಬಾಳಿಕೆಯನ್ನು–ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ಪೊಡ್ಡ ಕವಾಟುಗಳು, ಮೆಚ್ಚಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ನಮ್ಮ ನೂತನಾಗಿರುವ ಸಂಸ್ಥೆ—ಶಾಸ್ತ್ರಿ & ಕೋ, ಹಂಪನಕಟ್ಟೆ ಮಂಗಳೂರು 1
KHIRA

ಸುರಸ ಸುಂದರ ಕಥೆ

ಪತಿವ್ರತೆ ಅಹಲ್ಯೆ ಶಿಲೆಯಾದಳು

ಋಷಿ ಗೌತಮನ ಹೆಂಡತಿ ಅಹಲ್ಯೆಯ ಶತ್ರುಗಳ ಸಂಖ್ಯೆ ಅಪರಿಮಿತವಾಗಿತ್ತು; ಇದಕ್ಕೆ ಒಂದೇ ಒಂದು ಕಾರಣ ವೆಂದರೆ ಅವಳ ಅನುಪಮ ಸೌಂದರ್ಯ. ಇಂಥ ಸೌಂದರ್ಯವತಿ ನಾರಿಯನ್ನು ಬ್ರಹ್ಮ ಈ ಹಿಂದೆ ಸೃಷ್ಟಿಸಿರಲಿಲ್ಲ. ಇನ್ನು ಮುಂದೆಯೂ ಸೃಷ್ಟಿಸಲಾರ. ಸೌಂದರ್ಯ ಮತ್ತು ಶೋಭೆಯು ರಾತ್ರಿಯೇ ಆಗಿದ್ದ ಅಹಲ್ಯೆಗೆ ಸಮಾನರಾದ ಸುಂದರ ಸ್ತ್ರೀಯರು ಈ ರೀಳು ಲೋಕದಲ್ಲಿ ಯೂ ಇದ್ದಿರಲಿಲ್ಲ. ಸ್ವರ್ಗಸುಖವನ್ನೂ ಮರೆಸಿ ಬಿಡುವ ಅಹಲ್ಯೆಯ ರೂಪಕ್ಕೆ ಮರುಳಾಗದವರು ಯಾರೂ ಇರಲಿಲ್ಲ. ಇದರಿಂದಲೇ ಮೂರು ಲೋಕಗಳಲ್ಲಿ ಯೂ ಅಹಲ್ಯೆಯ ಸೌಂದರ್ಯದ ಬಗ್ಗೆ ಮತ್ಸರ ಎಂಬ ವಿಷಜ್ವಾಲೆ ಹಬ್ಬಿತ್ತು. ದೇವಾಂಗನೆಯರಿಗೆ, ಸುರಸುಂದರಿಯವರಿಗಂತೂ ಹೇಗಾದರೂ ಮಾಡಿ ಅಹಲ್ಯೆಯ ರೂಪವನ್ನು ಕೆಡಿಸದೆ, ಅದಕ್ಕೆ ಕುಂದು ತಾರದೆ ಒಂದು ಕ್ಷಣ ಕೂಡಾ ನಿದ್ರೆಯೇ ಬರುವಂತಿಲ್ಲ.

ಸ್ವತಃ ಇಂದ್ರನೇ ಒಂದು ದಿನ ದೇವಲೋಕದ ಅಪ್ಸರೆಯೊಂದಿಗೆ—"ನನ್ನ ಪ್ರಶಂಸೆಯ ನುಡಿಗಳು ಅಹಲ್ಯೆಗೆ ವಿಷಲತಾಗಿವೆ" ಎಂದು ನುಡಿದನು. ಇಂದ್ರನ ಈ ನುಡಿ ಆ ಸುರಸುಂದರಿಯರ ಈರ್ಷ್ಯೆಯನ್ನು ಮತ್ತಷ್ಟೂ ಹೆಚ್ಚಿಸಿತು ಅಹಲ್ಯೆಯ ಸೊನಭಂಗ ಮಾಡುವ ಅವರ ಸಂಕಲ್ಪ ಈಗ ಮತ್ತಷ್ಟು ದೃಢವಾಯಿತು. ಈ ಕಾರ್ಯಕ್ಕೆ ಸಮಸ್ತ ದೇವತೆಗಳ ಸಹಾಯದ ಧೈರ್ಯವನ್ನು ಪಡೆದರು. ಸ್ವತಃ ಇಂದ್ರನ ಮುಖಾಂತರವೇ ಅಹಲ್ಯೆಯ ಸೊನಭಂಗ ಮಾಡುವ ಪಣತೊಟ್ಟರು. ತಮ್ಮ ಕುಕೃತ್ಯಕ್ಕೆ ಮನ್ಮಥ ಹಾಗೂ ಚಂದ್ರರ ಸೂರ್ಣ ಸಹಕಾರ ದೊರಕಿಸಿ ಕೊಂಡರು.

ಒಂದು ದಿನ ಇಂದ್ರನು ತನ್ನ ಉದ್ಯಾನ ವನದಲ್ಲಿ ವಿಶ್ರಾಂತಿ ಪಡೆಯುತ್ತಿರಲು ಶಚೀದೇವಿಯ ಆಗಮನವನ್ನು ನಿರೀಕ್ಷಿಸುತ್ತಿದ್ದನು. ಅಕಸ್ಮಾತ್ತಾಗಿ ಚಂದ್ರ ದೇವನ ಆಗಮನವನ್ನು ಕಂಡು ದೇವೇಂದ್ರನು ಅವನನ್ನು ವಂದಿಸಿ ಉಪಚರಿಸಿದನು. ಇಂದ್ರನ ಮುಖವೇಕೋ ಮಲಿನವಾಗಿದ್ದುದನ್ನೂ, ಯಾವುದೋ ಒರಿದು ಚಿಂತೆ ಆಕ್ರಮಿಸಿದುದನ್ನೂ ಚಂದ್ರದೇವನು ತನ್ನ ಸಹಜ ದೃಷ್ಟಿಯಿಂದ ಅರಿತು ಕೊಂಡನು. ಇಂದ್ರನ ಚಿಂತೆ ಅಹಲ್ಯೆಯ ಬಗ್ಗೆ ಎಂದು ಅವನಿಗೆ ತಿಳಿದುಕೊಳ್ಳಲು ಹೆಚ್ಚು ಹೊತ್ತು ಕಗಲಲಿಲ್ಲ. ತನ್ನ ಮನ ಸ್ಸನ್ನೇ ಕಸಿದುಕೊಂಡ ಅಹಲ್ಯೆಯ ಧ್ಯಾನವೇ ಈಗ ತನ್ನದಾಗಿದೆ ಎಂಬುದನ್ನು ಇಂದ್ರನು ಒಪ್ಪಿಕೊಂಡನು. ಅಹಲ್ಯೆಯನ್ನು ಕಾಣಬೇಕೆಂಬ ತನ್ನ ಹಂಬಲವನ್ನು ಚಂದ್ರನಲ್ಲಿ ತೋಡಿಕೊಂಡನು.

ಇದೇ ಸಮಯಕ್ಕೆ ರತಿಪತಿಯೂದ ಮನ್ಮಥನೂ ಬಂದನು. ಅವನು ಇಂದ್ರನ ಚಿಂತೆಯ ವಿಚಾರವನ್ನರಿತು ಅವನನ್ನು ಸಂತೈಸುತ್ತಾ—"ತನ್ನ ಅನುಪಮ ಸೌಂದರ್ಯದ ಬಗ್ಗೆ ಅಪಾರ ವಿಶ್ವಾಸವಿರುವ ಅಹಲ್ಯೆಯು ಆ ತಪೋವನದಲ್ಲಿದ್ದು ಕಾನನದಲ್ಲಿ ಬಿದ್ದ ಬೆಳದಿಂಗಳಂತೆ ತನ್ನ ಸೌಂದರ್ಯದ ದುರುಪಯೋಗ ಮಾಡುತ್ತಿದ್ದಾಳೆ. ಅವಳ ಜೀವನದ ಪರಮ ಸುಖವೆಂದರೆ ನಿನ್ನನ್ನು ಆಲಿಂಗಿಸುವುದು" ಎಂದು ಉದ್ಗಾರವೆತ್ತಿದನು. ಇದನ್ನ ಕೇಳಿ ಇಂದ್ರನು ಹೇಗಾದರೂ ಅಹಲ್ಯೆಯನ್ನು ಕಾಣಬೇಕೆಂದು ನಿಶ್ಚೈಸಿದನು. ಚಂದ್ರನು ಈ ದೇವೇಂದ್ರ—ಅಹಲ್ಯೆಯರ ಮಧುರ ಮಿಲನದ ಯೋಜನೆಯನ್ನು ಮಾಡುವ ಕಾರ್ಯಭಾರವನ್ನು ವಹಿಸಿಕೊಂಡನು.

'ಕಾಮಕ್ಕೆ ಕಣ್ಣಿಲ್ಲ' ಎಂಬಂತೆ ಅಹಲ್ಯೆಯನ್ನಾಲಿಂಗಿಸಬೇಕೆಂಬ ಪರಮ ಲಾಲಸೆಯಿಂದ ಇಂದ್ರನು ಗೌತಮನ ವೇಷ ಧರಿಸಿ ಮೋಸದಲ್ಲಿ ತನ್ನ ಕಾರ್ಯ ಮೂಲಡಲು ಸಿದ್ಧನಾದನು. ಪದ್ಮಂತ್ರ ಕುಶನಾದ ಚಂದ್ರನು ಇದಕ್ಕೆ ಒಂದು ಒಳ್ಳೆಯ ಉಪಾಯ ಹೂಡಿದನು. ತಾನು ಒಂದು ಕೋಳಿಯಾಗಿ ಕೂಗಿಬಿಡುತ್ತೇನೆ. ಗೌತಮ ಋಷಿಯು ನಿದ್ರೆಯಿಂದೆದ್ದು ತನ್ನ ಪ್ರಾತರ್ವಿಧಿಗಳನ್ನು ಪೂರೈಸಲು ನದೀತಟಕ್ಕೆ ತೆರಳುವನು ನೀನಾಗ ಗೌತಮನ ವೇಷದಲ್ಲಿ ಒಳನುಗ್ಗಿ ಕಾರ್ಯ ಮಾಡು ಎಂದು ದೇವೇಂದ್ರನಿಗೆ ತನ್ನ ಉಪಾಯವನ್ನು ಸ್ಪಷ್ಟಪಡಿಸಿದನು. ಆದರೆ ದೂರದೃಷ್ಟಿಯವನಾದ ದೇವೇಂದ್ರನಿಗೆ ಹಾಗೆ ಮಾಡುವದರಿಂದ ಪರಿಣಾಮವೇನಾಗಬಹುದೆಂಬುದರ ಚಿಂತೆ ಹತ್ತಿತು. ಆದರೆ ಮನ್ಮಥ ಮತ್ತು ಚಂದ್ರರ ಧೈರ್ಯಪರ ಹಾಗೂ ವಿಶ್ವಾಸಗಳ ಮಾತುಗಳಿಂದ ಸಮೂಧಾನಪಟ್ಟುಕೊಂಡು ಸ್ವ ಕಾರ್ಯಕ್ಕೆ ಸನ್ನದ್ಧನಾದನು.

ಆದರ್ಶ ದಂಪತಿಗಳಾಗಿದ್ದ ಗೌತಮ ಮತ್ತು ಅಹಲ್ಯೆಯರ ಬಗ್ಗೆ ದೇವಾಂಗನೆಯರು ತಪ್ಪು ಕಲ್ಪನೆ ಮಾಡಿಕೊಂಡಿದ್ದರು. ತಪಸ್ವಿಗೆ ಯೋಗ್ಯ ಪತ್ನಿಯಾಗಿದ್ದ ಅಹಲ್ಯೆಯು ಪ್ರತಿ ದಿನ ಯಜ್ಞದ ಸಾಮಗ್ರಿಗಳನ್ನು ಒಟ್ಟು ಮಾಡುವುದು, ಬಂದ ಅತಿಥಿಗಳನ್ನು ಸತ್ಕರಿಸುವುದೇ ಮೊದಲಾದ ಆಶ್ರಮದ ಕರ್ಮಗಳಲ್ಲಿ ಮಗ್ನಳಾಗುತ್ತಿದ್ದಳು.

ವೈಶಾಖದ ಪ್ರಶಾಂತ ಸಮಯದ ಒಂದು ಮಧುಮಯ ಪ್ರಾತಃಕಾಲದಲ್ಲಿ ಗೌತಮನು ಪತ್ನಿಯೊಡನೆ—"ಪ್ರಿಯೆ, ನೀನು ನಿಜವಾಗಿ ದೇವಾಂಗನೆಯಾಗಬೇಕಿತ್ತು. ನಿನಗಿಲ್ಲಿ ಎಷ್ಟು ಕಷ್ಟವಾಗುತ್ತದೋ ಏನೋ" ಎಂದು ಹೇಳಿದನು.

ಋಷಿಯಾದ ಪತಿಯ ಸೇವೆಯೇ ತನ್ನ ಆದ್ಯ ಕರ್ತವ್ಯ ಎಂದು ಬಗೆದ ಅಹಲ್ಯೆಗೆ ಈ ಮಾತು ಕೇಳಿ ಅತೀವ ನೇದನೆಯಾಯಿತು. ತನ್ನ ಕಾರ್ಯದಲ್ಲಿ ವ ಸೇವೆಯಲ್ಲಿ ಏನಾದರೂ ತಪ್ಪಾಯಿತೇ ಎಂದು ಪತಿಯಲ್ಲಿ ಕೇಳಿಕೊಂಡಳು. ತನ್ನಿಂದ ಏನಾದರೂ ಪತಿದೇವರಿಗೆ ಅಸಂತೋಷವಾದ ಕೆಲಸವೇನಾದರೂ ಆಯಿತೇ ಎಂದು ಬೇಡಿಕೊಂಡಳು.

ತನ್ನ ಅನುಚಿತವಾದ ಪ್ರಶ್ನೆಗೆ ಗೌತಮ ಋಷಿಯು ಕ್ಷಮೆ ಯಾಚಿಸಿ ಅವಳ ಪಾವನ ಸಾನ್ನಿಧ್ಯದಿಂದ ತಾನು ಕೃತಾರ್ಥನಾದೆನೆಂದು ಹೇಳಿದನು. ತನ್ನ ತಪಸ್ಸಿನ ಎಲ್ಲಾ ಶ್ರೇಯಸ್ಸು ಅವಳಿಗೇ ಎಂದು ಮನ ಬಿಚ್ಚಿ ಹೇಳಿದನು. ಆದರೆ ಆ ದೇಕೋ ಋಷಿಯ ಮನಸ್ಸಿನಲ್ಲಿ ಒಂದು ಸಂಶಯವು ಉಂಟಾಯಿತು. ತನ್ನ ಈ ದಿವ್ಯ ಜೀವನ ಹೆಚ್ಚು ಸಮಯದ ತನಕ ಮುಂದುವರಿಯುವದಿಲ್ಲ ಎಂದು ತೋರಿತು. ಯಾವುದೋ ಒಂದು ಅಜ್ಞಾತ ಶಕ್ತಿಯು ನವಿನ್ಯ ಸೌಭಾಗ್ಯವನ್ನು ಕಸಿದು ಕೊಳ್ಳುತ್ತದೆ. ಆ ಶಕ್ತಿ ಯಾವುದು? ಅದರ ಅಸ್ತ್ರವೇನೆಂದು ನನಗೆ ಗೊತ್ತಿಲ್ಲ, ಬಹುಷಃ ತ್ರಿಮೂರ್ತಿಗಳ ಕುತಂತ್ರವಾಗಿರಬಹುದೇ? ಪ್ರಿಯೆ, ನಿನ್ನ ರೂಪಕ್ಕೆ ಮೂರೂ ಲೋಕಗಳೂ ಮರುಳಾಗಿವೆ" ಎಂದು ಋಷಿಯು ತನ್ನ ಪತ್ನಿಯ ಮುಂಗೂದಲುಗಳನ್ನು ನೇವರಿಸುತ್ತಾ ಹೇಳಿದನು.

"ಆಶುಭವನ್ನು ಚಿಂತಿಸಬಾರದೆಂದಿರುವಾಗ ನೀವೀರೀತಿಯ ಆಲೋಚನೆ ಮಾಡಬೇಡಿರಿ. ಯಜ್ಞಕ್ಕೆ ಸಮಯವಾಯಿತು ನಡೆಯಿರಿ" ಎಂದು ಅಹಲ್ಯೇ ಅರ್ಧ ದಲ್ಲೇ ಆ ವಿ ಚಾರವನ್ನು ಸಮಾಪ್ತಿಗೊಳಿಸಲು ಬಯಸಿದಳು. ಆದರೆ ಅಂದು ಏಕೋ ಆವರ ಎಡದ ಕಣ್ಣು ಹಾರತೊಡಗಿತು. ತನ್ನ ರೂಪದಿಂದ ಏನು ಅವಾಂತರವಾಗುವುದೋ ಎಂಬ ಶಂಕೆ ಅವಳಲ್ಲಿ ಬಲವಾಗಿ ಬಿಟ್ಟಿತು. ಏನೇ ಬಂದರೂ ಎಲ್ಲವನ್ನೂ ಸಹಿಸಿಕೊಳ್ಳುವ ನಿರ್ಧಾರ ಮಾಡಿಬಿಟ್ಟಳು.

ಈ ತರನ ಆಲೋಚನೆಯಿಂದ ತಾನು ಅಪವಿತ್ರಳಾಗಿದ್ದೇನೆಂದೂ, ಯಜ್ಞ ಕಾರ್ಯಕ್ಕೆ ಅಸಮರ್ಥಳೆಂದೂ ಪತಿಯಲ್ಲಿ ಭಿನ್ನವಿಸಿಕೊಂಡಳು. ತನಗೆ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲು ಪತಿಯಲ್ಲಿ ಅನುಮತಿ ಬೇಡಿದಳು. ಪತಿಯ ಸಹಾಯ ಪಡೆದು ತನ್ನ ಮಂಚದಲ್ಲಿ ಮಲಗಿ ಬಿಟ್ಟಳು.

ಆ ದಿನ ಗೌತಮ ಋಷಿಯ ತಪೋವನವು ವರ-ವಧುವಿನ ಮಿಲನದ ಸುಂದರ ದೃಶ್ಯವನ್ನು ನೆನಪಿಗೆ ತರುವಂತೆ ಸುಪ್ಪಗಳಿಂದಲೂ, ಎಳಬಳ್ಳಿಗಳಿಂದಲೂ ಶೋಭಾಯಮಾನವಾಗಿ ಕಂಗೊಳಿಸುತ್ತಿತ್ತು. ಈ ಮಧುರ ಸನ್ನಿವೇಶವು ಋಷಿಗಳ ಸಂಯಮವನ್ನು ಕೂಡಾ ತಪ್ಪಿಸುವಂತಿತ್ತು. ತಮ್ಮ ಸಂಗಡಿಗರೊಂದಿಗೆ ಕೂಡಿಕೊಂಡು ಪಕ್ಷಿಗಳು ಕೂಗುತ್ತಿದ್ದುವು. ಹೆಣ್ಣಿಗೆ ಗಂಡಿನ ಆಸೆಯನ್ನು ಉಂಟು ಮಾಡುವಂತೆ ತಪೋವನವು ಕಾಣುತ್ತಿತ್ತು.

ಅರ್ಧ ರಾತ್ರಿಯ ಸಮಯ. ಕೋಳಿಯೊಂದರ ಕ್ಕೋ, ಕ್ಕೋ, ಕೋ ಧ್ವನಿಯು ಬ್ರಹ್ಮಾಂಡವನ್ನೇ ಭೇದಿಸುವಂತಿತ್ತು. ಪ್ರಶಾಂತ ವಾತಾವರಣವನ್ನು ಅಲ್ಲೋಲ ಕಲ್ಲೋಲ ಮಾಡಿ ನಿಸ್ತೇಜನನ್ನಾಗಿ ಮಾಡಿತು. ಈ ಸಂದರ್ಭದಲ್ಲಿ ಗೌತಮನು ನಿದ್ರೆಯಿಂದ ಎಚ್ಚತ್ತು ತನ್ನ ಸಂಧ್ಯಾವಂದನಾದಿಗಳಿಗೆಂದು ನದಿಯತ್ತ ತೆರಳಿದನು. ಒಡನೆ ನಿದ್ರೆಯಿಂದೆದ್ದು ಕುಳಿತು ಇಷ್ಟು ಬೇಗ ರಾತ್ರಿ ಮುಗಿದುದರ ಬಗ್ಗೆ ಆಶ್ಚರ್ಯಚಕಿತಳಾದ ಪತ್ನಿಯನ್ನು ಮಲಗುವಂತೆ ಹೇಳಿದನು.

ಗೌತಮ ವೇಷಧಾರಿಯಾದ ಇಂದ್ರನು ಒಡನೆ ಗೌತಮ ಋಷಿಯ ಮನೆಯನ್ನು ನುಗ್ಗಿದನು ಮಂಚದ ಬಳಿಗೆ ಹೋಗಿ ನಿದ್ರೆ ಬೂಡುತ್ತಿದ್ದ ಅಹಲ್ಯೆಯನ್ನು ಬಿಗಿದಪ್ಪಿಕೊಂಡನು. ಅಹಲ್ಯೆಯು ಎಚ್ಚತ್ತು ಕಣ್ಣು ತೆರೆದು ನೋಡಿದಳು. ಪತಿಯನ್ನು ಕಂಡು—'ತಾವು ಹಿಂದಿರುಗಿದುದು ಬಹು ಒಳ್ಳೆಯದಾಯಿತು. ಇನ್ನೂ ಕೂಡಾ ರಾತ್ರಿ ತುಂಬಾ ಇದೆ'! ಎಂದು ಕಣ್ಣು ಮುಚ್ಚಿ ಸಂಪೂರ್ಣವಾಗಿ ತನ್ನನ್ನು ಪತಿಗೊಪ್ಪಿಸಿಕೊಂಡಳು.

ಗೌತಮನು ನಿತ್ಯಾನಾದಿಗಳಿಂದ ನಿವೃತ್ತನಾಗಿ, ಸೂರ್ಯನಿಗೆ ಅರ್ಘ್ಯ ಕೊಡುವ ಸಿದ್ಧತೆ ಮಾಡುತ್ತಿರುವಾಗ ಏನೋ ಯೋಚನೆ ಬಂದು ಅಲ್ಲಿಂದಲೇ ಹೊರಟು ಅಶ್ರಮಕ್ಕೆ ಮರಳಿದರು.

ಆಶ್ರಮ ತಲಪಿದ ಗೌತಮಋಷಿಗಾದ ಸ್ಥಿತಿ ಅವರ್ಣನೀಯ. ತನ್ನ ಧರ್ಮಪತ್ನಿಯೊದ ಅಹಲ್ಯೆಯು ದೇವೇಂದ್ರನೊಂದಿಗೆ ಮಲಗಿರುವುದನ್ನು ಕಂಡು ಸ್ತಂಭೀಭೂತನಾದನು. ಗೌತಮನನ್ನು ಕಂಡಾಗ ಇಂದ್ರನಿಗೂ ಭಯವಾಗದಿರಲಿಲ್ಲ. ತನ್ನ ಯಥಾರ್ಥ ವೇಷವನ್ನು ಪ್ರಕಟಿಸದೆ ಇರಲಾಗಲಿಲ್ಲ. ತನ್ನ ಹೇಯ ಕಾರ್ಯಕ್ಕೆ ನಾಚಿಕೆಪಟ್ಟು, ಋಷಿಯ ಪಾದಾರವಿಂದಗಳಿಗೆ ವಂದಿಸಿ ಮಗುವಿನಂತೆ ಕೂಗಿ ಕ್ಷಮೆಯನ್ನು ಬೇಡತೊಡಗಿದನು. ತನ್ನ ಶರೀರ ಸ್ಪರ್ಶ ಮಾಡಿದವನು ದೇವೇಂದ್ರನೆಂದು ತಿಳಿದೊಡನೆಯೇ ಅಹಲ್ಯೆಗೆ ಸಿಡಿಲು ಬಡಿದಂತಾಯಿತು. ಪಾಪಿಯಾದ ದೇವೇಂದ್ರನು ಬಳಿಯಲ್ಲೇ ನಿಂತಿರುವುದನ್ನು ಕಂಡ ಅವಳು ಅವನ ಮೇಲೆ ತಿರಸ್ಕಾರದ ದೃಷ್ಟಿ ಬೀರಿ, ತನ್ನ ಪತಿಯ ಪಾದಯುಗ್ಮಗಳ ಮೇಲೆ ಬಿದ್ದು ಆತ್ಮ ಕೊಂಡು ಕ್ಷಮಾಯಾಚನೆ ಮಾಡಿದಳು. ಆದರೆ ಹೇಯ ಕೃತ್ಯ ಮಾಡಿದ ಅವಳನ್ನು

(ಇನ್ನೂ ಸುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ದೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುವಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಲೇಖಾಂಕ ೧೦

ರಾಜಾಜಿಯವರ ಕಲಾಸಿದ್ಧಿ

ಬಿಕ್ಷುಕಿ ದೇವಯಾನಿ

ಶ್ರೀ ಕೆ. ಎನ್. ಭಟ್, ಶಿರಾಡಿಸಾಲು.

"ದೇವಯಾನಿ" ಎಂಬ ಶ್ರೀ ರಾಜಾಜಿಯವರ ಈ ಕಥೆಯು, ಹೆಸರಿನಿಂದ ವೇದ ಕಾಲದ "ಕಚ-ದೇವಯಾನಿ!" ಪ್ರಸಂಗದ ನೆನಪಾಗುತ್ತದೆ. ಆದರೆ, ಈ ಕಥಾನಾಯಕಿ ದೇವಯಾನಿ ಪೂರ್ತ. ಈ ಕಲಿಕಾಲದ ಓರ್ವ ತರುಣಿ. ಈಕೆ ವಿದ್ಯಾವಿಹೀನೆಯೂದರೂ, ಸತ್ ಸಂಸರ್ಗದಿಂದ ಕಾಡು ಮಲ್ಲಿಗೆಯಂತೆ, ಸೊಂಪಾಗಿ ಬಳೆದ, ಹಳ್ಳಿಯ ಸುಂದರಿ. ಈಕೆಯ ಸಂಘರ್ಷಣಾಮಯ ಜೀವನದ ಏಳಿತಗಳೇ ಈ ಕಥೆಯ ಜೀವಾಳ.

ನಮ್ಮ ದೇಶದ ನಗರಗಳಲ್ಲಿ, ವಿಶೇಷವಾಗಿ ಭಿಕ್ಷುಕರು ಕಂಡುಬರುತ್ತಾರೆ. ಆದರಲ್ಲೂ ಮಗುವನ್ನೆತ್ತಿಕೊಂಡು, ಅದನ್ನು ಮುಂದೆ ಮಾಡಿ ತೋರಿಸುತ್ತ, ದೀನರಾಗಿ ಭಿಕ್ಷೆ ಬೇಡುತ್ತಿರುವ ತರುಣಿಯರೂ ಕೂಡ ಕಡಿಮೆ ಇಲ್ಲ. ಈ ರೀತಿ ಭಿಕ್ಷಾವೃತ್ತಿಯನ್ನವಲಂಬಿಸಲು ಅನೇಕ ಕಾರಣಗಳಿರುತ್ತವೆ. ತರುಣಿ, ದೇವದಾಸಿಯು ಒಂದು ಮಗುವಿನ ತಾಯಿಯಾದ ಬಳಿಕ ಭಿಕ್ಷುಕಿಯಾಗುತ್ತಾಳೆ. ಶ್ರೀ ರಾಜಾಜಿಯವರ ಈ ಕಥೆಯಲ್ಲಿ, ವಿಶೇಷವಾಗಿ ಸ್ತ್ರೀಯರೇ ಕೆಲಸ ಮಾಡುವ ಕಾರ್ಖಾನೆಗಳಲ್ಲಿ ನಡೆಯುವ ವ್ಯಭಿಚಾರ ಹಾಗೂ ಅದರಿಂದ ಉಂಟಾಗುವ ಗರ್ಭಪಾತ, ಶಿಶುಹತ್ಯೆಯೇ ಮೊದಲಾದ ದುಷ್ಪರಿಣಾಮಗಳ ವಿಚಾರದಮೇಲೆ—ಸೂಕ್ಷ್ಮ ಆವಲೋಕನ ನಡೆದಿದೆ. ಈ ಕಾರಣಗಳಿಂದಲೇ ತರುಣಿಯರು ಭಿಕ್ಷುಕಿಯರಾಗಿ ಆಲೆದಾಡುವ ದೌರ್ಭಾಗ್ಯ, ನಮ್ಮ ದೇಶದ ಬೆನ್ನು ಹತ್ತಿದೆ! ಎಂಬ ವಿಚಾರವೂ ಇಲ್ಲಿ ವ್ಯಕ್ತವಾಗುವುದ.

ರಾಮನಾಥ ದಂಪತಿಗಳು, ಮದ್ರಾಸು ನಗರದ ಒಂದು ಪೇಟೆಯಲ್ಲಿ ಕಾರಿನಲ್ಲಿ ಕುಳಿತುಕೊಂಡೇ ಆಟದ ಸಾಮಾನುಗಳನ್ನು ಖರೀದಿ ಮಾಡತ್ತಿದ್ದರು. ಇತ್ತಲ್ಲಿ ಓರ್ವ ತರುಣಿ, ಕಂಕುಳಲ್ಲೊಂದು ಮಗುವನ್ನೆತ್ತಿಕೊಂಡು, ಅದನ್ನು ಮುಂದೆ ಮಾಡುತ್ತ ಕಾರಿನ ಬಳಿಗೆ ಬಂದು ಬಿಕ್ಷೆ ಯಾಚಿಸಿದಳು. ಈ ಭಿಕ್ಷುಕಿಯ ರೀತಿಯನ್ನು ಕಂಡ ಸೀತಾಲಕ್ಷ್ಮಿಗೆ ಅನುಕಂಪವಾಯಿತು. ಆಕೆ, ಭಿಕ್ಷುಕಿಯನ್ನು ಧಿಕ್ಕರಿಸಿ, 'ಹೋಗೆಂದರೂ, ಆ ಭಿಕ್ಷುಕಿ ಅವ್ಯಾ! ಈ ಮಗುವನ್ನು ನೋಡಿಯಾದರೂ ಏನಾದ್ರೂ ಕೊಡಿಯಮ್ಮಾ!' ಎಂದ, ಪದೇ ಪದೇ ಆಕ್ರಂತ ದೀನಳಾಗಿ ಬೇಡುತ್ತಿರುವಾಗಲೇ ಕಾರು ಚಲುಸತೊಡಗಿತು. ಭಿಕ್ಷುಕಿ, ಕಾರಿನ ಬಾಗಿಲನ್ನು ಹಿಡಿದುಕೊಂಡೇ ಸ್ವಲ್ಪ ದೂರ ಏನಾದರೂ ಸಿಕ್ಕೀತೆಂಬ ಆಸೆಯಿಂದ ಓಡಿದಳು ಆದರೆ, ಕೊನೆಗೂ ಕಾರು ಹೊರಟೇ ಹೋಯಿತು! ಕಾರು ಹೊರಡುವಾಗಿನ ಆ ಭಿಕ್ಷುಕಿಯ ದಯನೀಯ ಸ್ಥಿತಿಯನ್ನು ಕಂಡ ರಾಮನಾಥನಿಗೆ—'ಛೇ ಏನಾದರೂ ಕೊಡಬೇಕಿತ್ತು! ಪಾಪ!' ಎಂದನಿಸಿತು ಆ ಕ್ಷಣವೇ ಆಕೆಯನ್ನು ಎಲ್ಲಿಯೋ ನೋಡಿದ್ದ ನೆನಪೂ ಕೂಡ ರಾಮನಾಥನ ಮನದಲ್ಲಿ ಸುಳಿಯುತ್ತು. 'ಯಾರಿವಳು ಈ ಭಿಕ್ಷುಕಿ?' ಎಂಬ ರಾಮನಾಥನ ಯೋಚನೆ, ಭಿಕ್ಷುಕಿ ಬಗೆಹರಿಯಲಿಲ್ಲ. ಆದರೆ, ಸ್ವಲ್ಪ ಹೊತ್ತಿನ ಬಳಿಕ ಆ ಭಿಕ್ಷುಕಿ ಯಾರೆಂದು ನೆನಪಾಯಿತು. ಆಗ ರಾಮನಾಥನು—'ಆಕೆ, ಇನ್ನೊಂದು ಸಲ ಎಲ್ಲಿಯಾದರೂ ಕಾಣಸಿಕ್ಕಿದರೆ, ಆಕೆಗೆ ಒಂದು ರೂಪಾಯಿಯನ್ನಾದ್ರೂ ಕೊಡಬೇಕು" ಎಂದುಕೊಂಡನು.

ರಾಮನಾಥನು ಮತ್ತೊಂದು ದಿನ, ತನ್ನ ಪತ್ನಿ ಸೀತಾಲಕ್ಷ್ಮಿಯೊಡನೆ—'ನೋಡು! ಆ ಭಿಕ್ಷುಕಿ ಒಂದು ನಮಗೆ ಕಾಣಸಿಕ್ಕಿದಳಲ್ಲಾ ಆಕೆ ನಾವು ಹಿಂದೆ, ಸೇಲಂನಲ್ಲಿದ್ದಾಗ ನಮ್ಮ ಮನೆಯಲ್ಲಿ ಕಸ, ಮುಸುರೆ, ಮಾಡಿಕೊಂಡಿದ್ದಳು. ಒಳ್ಳೆಯ ಹುಡುಗಿ! ಏಕೆ ಭಿಕ್ಷೆ ಬೇಡುತ್ತಿದ್ದಾಳೋ? ಇಂತಹ ಹುಡುಗಿಯರು ಭಿಕ್ಷೆ ಬೇಡುವುದೆಂದರೆ, ನಮ್ಮ ದೇಶದ ದೌರ್ಭಾಗ್ಯವೇ ಸರಿ!' ಎಂದನು, ಅದಕ್ಕೆ ಆಕೆ—'ಅಲ್ಲಾ, ನಿನಗೆ ನಿಮ್ಮ ಸುನಿಯ ಚಿಂತೆಗಿಂತ ದೇಶದ ಚಿಂತೆಯೇ ಹೆಚ್ಚಾಗಿದೆ! ಆ ಸೇಲಮನ—ನಿಮ್ಮ ಆ ಒಳ್ಳೆಯ ಹುಡುಗಿ ಇಲ್ಲೇಕೆ ಬರುತ್ತಾಳೆ! ನಿನಗೇಕೆ ಆ ಹುಡುಗಿಯ ಯೋಚನೆ!' ನಿಷ್ಠುರವಾಗಿ ನುಡಿದಳು.

ಆದರೆ, ರಾಮನಾಥನ ಮನಸ್ಸು ಗೇಕೋ ಸಮಾಧಾನವಾಗಲಿಲ್ಲ! ಆಕೆ ಇನ್ನೊಂದು ಸಲ ಕಾಣಸಿಕ್ಕಿದಳೆ, ಕೈತುಂಬಾ ಭಿಕ್ಷೆ ನೀಡಿ, ಅವಳ ಸ್ಥಿತಿಗತಿಗಳನ್ನರಿತುಕೊಳ್ಳಬೇಕೆಂದು ಯೋಚಿಸುತ್ತಿದ್ದ ರಾಮನಾಥನ ಕಣ್ಣುಗಳು ಪೇಟೆಗೆ ಹೋದಾಗ—ಇತರ ಭಿಕ್ಷುಕಿಯರನ್ನು ನೋಡಿದಾಗ—'ಇತರ ಭಿಕ್ಷುಕಿಯರಲ್ಲಿ ಆ ಭಿಕ್ಷುಕಿ ಇರುವಳೇನೋ?' ಎಂದು ಹುಡುಕುತ್ತಿದ್ದವು! ಆದರೆ ಕೊನೆಗೂ ರಾಮನಾಥನ ಆಸೆ ಈಡೇರಲಿಲ್ಲ.

ದೇವಯಾನಿಯು ಹದಿನಾರರ ಸುಂದರಿ. ಆಕೆ ತನ್ನಣ್ಣ ಮತ್ತು ತಾಯಿಯೊಡನೆ, ಕೈಮಗ್ಗದ ವಸ್ತ್ರಗಳನ್ನು ತಯಾರು ಮಾಡುತ್ತ ಜೀವನ ನಡೆಸುತ್ತಿದ್ದಳು. ಸೇಲಂನಲ್ಲಿ ಆಗ ಕೈ ಮಗ್ಗಗಳು ವಿಶೇಷವಾಗಿದ್ದು ಜನರು ಸ್ವದೇಶೀ ವಸ್ತ್ರಗಳನ್ನೇ ಉಪಯೋಗಿಸುತ್ತಿದ್ದರು. ಆದರೆ—ಕಾಲಕ್ರಮೇಣ ಬಟ್ಟೆಯ ಮಿಲ್ಲುಗಳು ಪ್ರಾರಂಭವಾಗಿ ಕೈ ಮಗ್ಗಗಳು ಮೂಲೆ ಗುಂಪಾಗಲು, ದೇವಯಾನಿಯ ಅಣ್ಣನು ಚಿಂತೆಗೀಡಾದನು. ಕೊನೆಗೆ, ತಾಯಿ-ಮಗಳು ದೇವಯಾನಿ, ಬ್ರಾಹ್ಮಣರ ಮನೆಯಲ್ಲಿ ಕೆಲಸಕ್ಕೆ ಸೇರಿದರು. ದೇವಯಾನಿಯು ಅಣ್ಣನು ಮದ್ರಾಸಿಗೆ ಹೋಗಿ, ಒಂದು ಬಟ್ಟೆಯ ಗಿರಣಿಯಲ್ಲಿ ಕೆಲಸಕ್ಕೆ ಸೇರಿದನು. ತುಂಬು ಜವ್ವನೆ, ದೇವಯಾನಿ ಕೆಲಸಕ್ಕೆ ನಿಂತಲ್ಲೆಲ್ಲ, ಆಕೆಯ ಸೌಂದರ್ಯ ಅಲ್ಲಿಯು ಜವ್ವನಿಗರನ್ನು ಆಕರ್ಷಿಸುತ್ತಿತ್ತು ಅವರ ಆ ದೃಷ್ಟಿ ದೇವಯಾನಿಯಿಂದ ಸಹಿಸಲಾಗುತ್ತಿರಲಿಲ್ಲ! ಹೀಗಾಗಿ ದೇವಯಾನಿ, ನಿಂತಲ್ಲಿ ನಿಲ್ಲಲಾರದಾದಳು. ಸೇಲಂನಲ್ಲಿ ರಾಮನಾಥನ ಮನೆಯಲ್ಲಿ ಮಾತ್ರ ಆಕೆ ಹೆಚ್ಚು ಕಾಲ ಇದ್ದಳು ಆದರೆ ಅಲ್ಲಿಯೂ ಕೂಡ ಕೊನೆಗೆ, ಆ ಮನೆಯ ಅಡುಗೆಯವನು, ಪ್ರೀತಿಯಿಂದ ದೇವಯಾನಿಗೆ, ಊಟ ತಿಂಡಿಗಳನ್ನು ಕೊಡುತ್ತಿದ್ದವನು, ಒಂದು ದಿನ ವಿಶೇಷ ಪ್ರೀತಿಯನ್ನು ತೋರಿಸಿದನು! ಇದರಿಂದ ಆ ಸಹ್ಯಗೊಂಡ ದೇವಯಾನಿ, ಆ ಮನೆಯ ಕೆಲಸವನ್ನೇ ಬಿಟ್ಟಿದ್ದಳು

ಹೀಗೆ ಕೆಲಸ ಬಿಟ್ಟು ಹೊರಟ ದೇವಯಾನಿ ವದ್ರಾಸಿಗೆ ತಲುಪಿ, ಅಲ್ಲಿ ಹೆಚ್ಚು ಮಂದಿ ಹೆಂಗುಸರೇ ಕೆಲಸ ಮಾಡುತ್ತಿದ್ದ ಒಂದು ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದಳು. ಆದರೆ ಅಲ್ಲಿಯೂ ಆಕೆಗೆ ಹಿಂದಿನ ಅನುಭವವೇ ಆಗತೊಡಗಿತು. ಕಾರ್ಖಾನೆಯ ಮೇಸ್ತ್ರಿಗಳ ನಡೆ, ನುಡಿ ಮತ್ತು ರೀತಿಗಳನ್ನು ಕಂಡ ದೇವಯಾನಿ, ಆಶ್ಚರ್ಯದಿಂದ, ''ಇದೇನು ಹೀಗೆ?" ಎಂದು ತನ್ನ ಜೊತೆಗಾತಿಯಗೊಡನೆ ಕೇಳಿದಾಗ—ಆ ಹುಡುಗಿಯರು—'ಅಯ್ಯೋ! ನೀನಿಷ್ಟು ಸುಂದರಿಯಾಗಿದ್ದೂ ನಿನಗಿಷ್ಟೂ ತಿಳಿಯದಲ್ಲ? ನೀನು ಆ ಮೇಸ್ತ್ರಿಗಳನ್ನು ಆಗಾಗ ತೃಪ್ತಿಪಡಿಸುತ್ತ ನಗು ನಗುತ್ತ ಇದ್ದರೆ, ನಿನ್ನ ಸಂಬಳದಲ್ಲಿ ಸ್ವಲ್ಪವೂ ಕಡಿತವಾಗುವುದಿಲ್ಲ! ಇಲ್ಲದಿದ್ದರೆ, ನಿನ್ನ ಸಂಬಳವೂ ಕಡಿತವಾಗುತ್ತದೆ! ನಿನಗೆ ಶುಖವೂ ಸಿಕ್ಕುವುದಿಲ್ಲ! ಎಂದರು. ದೇವಯಾನಿಗೂ ಈ ಅನುಭವ ಅಷ್ಟರಲ್ಲೇ ಉಂಟಾಗಿತ್ತು. ಕೊನೆಗೆ ಆ ಪರಿಸ್ಥಿತಿಗೆ ಅಸಾಯಗಾನವೆ, ಲಂಟಿಕೊಂಡ ದೇವಯಾನಿ ಬಹು ಬೇಗನೆ ಆ ಮೇಸ್ತ್ರಿಗಳೊಡನೆ, ಸರಸವಾಡತೊಡಗಿದಳು.

ಕೆಲವು ಕಾಲ ಹೀಗೇ ಕಳೆಯಲು ದೇವಯಾನಿ ಗರ್ಭಿಣಿಯಾಗುತ್ತಾಳೆ. ಆಗಿನ ಆಕೆಯ ಮಾನಸಿಕ ಸ್ಥಿತಿ—ಭಯ ಸಂಕೋಚಗಳನ್ನು ಶ್ರೀ ರಾಜಾಜಿಯವರು, ಈ ಕಥೆಯಲ್ಲಿ ಸಹಜ ಸುಂದರವಾಗಿ ನಿರೂಪಿಸಿರುವರು. ಕೊನೆಗೆ—ದೇವಯಾನಿಯೊಡನೆ, ಕೆಲಸ ಮಾಡುತ್ತಿದ್ದ ಇತರ ತರುಣಿಯರು ಆಕೆಗೆ—'ನೋಡು! ದೇವಯಾನಿ! ನಿನಗೆ ಹುಟ್ಟುವ ಆ ಮಗುವಿನ ಕತ್ತು ಹಿಸುಕಿ ಹಾಕಬೇಡ! ಕೊಂದ ಆ ಪಾಪ ಎಂದಿಗೂ ಹೋಗದು! ನಮಗಾ ಆಗಾಗ ಹೀಗೇ ಆಗುತ್ತಿರುತ್ತದೆ ಆದರೆ, ಸ್ವಲ್ಪ ವೇದನೆಯು, ಕೆಲವು ತಿಂಗಳಾದೊಡನೆಯೂದರೆ, ಅದಕ್ಕೆ ಮದ್ದು ಕೊಡುವವರಿದ್ದಾರೆ! ಆ ಮದ್ದಿನಿಂದ ಬೇಕಾದ ಹಾಗೆ ಆಗುತ್ತದೆ! ನೀನು ಆ ಗಣೇಶ ಮಂದಿರದ ಹಿಂಬದಿಯ ಹೆಂಗುಸಿನ ಮನೆಗೆ ಹೋಗು! ಎಲ್ಲವೂ ಸರಿಯಾಗುವುದು!' ಎಂದು ಸಲಹೆ ನೀಡಿದರು.

ದೇವಯಾನಿ, ಅವರ ಸಲಹೆಯಂತೆ ನಡೆದಳು. ತನ್ನ ಇರ್ವಸ್ವದಂತಿದ್ದ, ತನ್ನ ಹೊಟ್ಟೆಯ ಮಗುವನ್ನು ಕೊಂಡ ಆಕೆ, ಕೆಲವು ಕಾಲ ಎಲ್ಲವನ್ನೂ ಮರೆತು ಆನಂದ ಭರಿತಳಾಗಿದ್ದಳು! ತಾಯ್ತನದ ನಿಜವಾದ ಆನಂದದ ಸವಿಯನ್ನು ಆಕೆ ಸವಿದಳು! ಆದರೆ, ಆಕೆಗೆ ಆಶ್ರಯ ಕೊಟ್ಟ ಆ ಮನೆಯ ಹೆಂಗಸು ಸ್ವಾರ್ಥಿಯೂರುವುದನ್ನರಿತ ದೇವಯಾನಿಗೆ, ಮತ್ತೆ ಬಹು ದುಃಖವಾಯಿತು! ಒಂದೆರಡು ತಿಂಗಳು ಕಳೆಯುತ್ತಲೇ ಆ ಹೆಂಗಸು, ದೇವಯಾನಿಯನ್ನು ಪರಪುರುಷರ ಸಂತೋಷಕ್ಕಾಗಿ ಉಪಯೋಗಿಸಿ, ತಾನು ಹಣ ಸಂಪಾದನೆ ಮಾಡಲು ಮನಸ್ಸು ಮಾಡಿದಳು. ಈ ಕಸುಬಿಗಾಗಿಯೇ ಆಕೆ, ವ್ಯಭಿಚಾರೀ ತರುಣಿಯರ ಹೆರಿಗೆ ಮಾಡಿಸುತ್ತಿದ್ದಳು. ಈ ವೃತ್ತಿಗಿಳಿಯಲು ನಿರಾಕರಿಸಿದ ದೇವಯಾನಿಗೆ ಮತ್ತೆ ಭಿಕ್ಷಾವೃತ್ತಿಯ ಹೊರತು ಬೇರೆ ದಿಯೇ ಇಲ್ಲದಂತಾಯಿತು! ಈ ಭಿಕ್ಷಾಟಕೆಯೇ ರಾಮನಾಥನನ್ನಲ್ಲಿ ಮರುಕ ಹುಟ್ಟಿಸಿದ ದೇವಯಾನಿಯಾಗಿದ್ದಳು

ಜೀವನದಲ್ಲಿ— ಜಾಗೃತಾವಸ್ಥೆಯಲ್ಲಿ ಈಡೇರದ ಮನದ ಆಸೆ ಸ್ವಪ್ನದಲ್ಲಾದರೂ ಈಡೇರುವುದಿಷ್ಟೆ. ರಾಮನಾಥನಿಗೂ ಅಂತೆಯೇ ಆಯಿತು.

ರಾಮನಾಥನು, ಆ ದಿನ ರಾತ್ರೆ, ಕನಸಿನಲ್ಲಿ ಮತ್ತೆ ದೇವಯಾನಿಯನ್ನು ಕಾಣುತ್ತಾನೆ. ಆಗ ಹರ್ಷಿತನಾಗಿ ತನ್ನ ಕಾ

(ಕನೇ ಪುಟ ನೋಡಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ದೇವಣಾತಿ ಬಡ್ಡಿ ದರಗಳು:

ಕಾಯಂ ದೇವಣಾತಿಗಳು:		ರೂ. ನ ಪೈ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5 00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ದೇವಣಾತಿಗಳು	,, ,,	3-25

ನಿಮ್ಮ

ದಿನನಿತ್ಯದ ಉಳಿತಾಯವನ್ನು ಮಾಸಿಕ ಉಳಿತಾಯವನ್ನು

ಪಿಗ್ಮಿ ಡಿಪೋಸಿಟುಗಳಲ್ಲಿ ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಸಮಸ್ಯೆಗಳ ತವರೂರು

ಈಶಾನ್ಯ ಭಾರತದ ತ್ರಿಪುರಾ

ತ್ರಿಪುರ ಎದುರಿಸಬೇಕಾಗಿರುವ ಸಮಸ್ಯೆಗಳನ್ನು ಬಾಹ್ಯ ಹಾಗೂ ಆಂತರಿಕ ವೆಂದು ವಿಂಗಡಿಸಬಹುದು. ಈ ಗಡಿ ಪ್ರದೇಶದ ವಿಸ್ತೀರ್ಣವು ೪,೫೧೬ ಚದರ ಮೈಲು. ಈ ಪ್ರದೇಶವು ಪಾಕಿಸ್ತಾನದಿಂದ ಸುತ್ತುವರಿಯಲ್ಪಟ್ಟಿದ್ದು ಭಾರತದಿಂದ ಪ್ರತ್ಯೇಕಿಸಲ್ಪಟ್ಟಿರುವಂತೆ ಇದೆ. ಅಸ್ಸಾಮಿನ ಕಾಚಾರ್ ಜಿಲ್ಲೆಯು ಮಾತ್ರ ಉತ್ತರ ತುದಿಯಲ್ಲಿ ತಾಗಿಕೊಂಡಿದೆ. ಇದರ ಹತ್ತಿರ ರೇಖಾ ಮೈಲು ಸೀಮಾ ಪ್ರದೇಶವು ಪಾಕಿಸ್ತಾನಕ್ಕೆ ತಾಗಿಕೊಂಡಿದೆ. ಬಾಹ್ಯ ಸಮಸ್ಯೆಗೆ ಈ ವಿಷಯವು ಇನ್ನಷ್ಟು ತೊಡಕನ್ನು ಹೆಚ್ಚಿಸಿದೆ.

ನಿಜವಾಗಿ, ತ್ರಿಪುರದೊಳಗೆ ದೇಶಾಂತರಿಗಳ ಒಳ-ಪ್ರವಾಹವು ಬರಲಾರಂಭಿಸಿದ್ದು ಡಾಕ್ಕಾ ಜಿಲ್ಲೆಯಲ್ಲಿರುವ ರಾಯಪುರದಲ್ಲಿ ನಡೆದ ಮತೀಯ ಜಗಳದ ಮೂರಾಮಾರಿಯ ಪರಿಣಾಮವಾಗಿ. ೧೯೫೪ರಲ್ಲಿ ಈ ದುರ್ಘಟನೆ ನಡೆದದ್ದು. ಆದೂ ಅಲ್ಲದೆ ೧೯೫೬ರಲ್ಲಿ ಘಟಿಸಿದ ದುರ್ಘಟನೆ ದವಖಾಲಿಯ ನರಹತ್ಯೆಯ ಕಾರಣದಿಂದಾಗಿ ದೇಶಾಂತರಿಗಳ, ದಿಕ್ಕೆಟ್ಟವರ ಭೀಕರ ಪ್ರವಾಹವೇ ಹರಿದು ಬಂತು. ಪಾಕಿಸ್ತಾನ ನಿರ್ಮಾಣದ ನಂತರ ಪ್ರವಾಹ ನಿಪುಣತೆ ಹೆಚ್ಚಾಗುತ್ತಿದೆ. ಯಾಗೆ ಒಳ ಪ್ರವೇಶಿಸಿರುವವರ ಸಂಖ್ಯೆ ಈ ಐದೂವರೆ ಲಕ್ಷಕ್ಕಿಂತಲೂ ಅಧಿಕವಿದೆ.

ಆದಾಗ್ಯೂ, ಆ ರೀತಿ ನಿರಾಶ್ರಿತರಾಗಿ ಬಂದಿರುವ ಜನರು ತ್ರಿಪುರ ಪ್ರದೇಶದ ಸಮಸ್ಯೆಗೆ ಮೂಲ ಕಾರಣರಿರುವದಿಲ್ಲ. ಕೇಂದ್ರ ಸರಕಾರದ ಗೃಹ ಖಾತೆಯು ಅವರ ಸಮಸ್ಯೆಯ ಪರಿಹಾರಕ್ಕಾಗಿ ಅಲ್ಲಿಯ ಮುಖ್ಯಾಧಿಕಾರಿಯ ಮೂಲಕ ವಸತಿ ಸೌಕರ್ಯ ಕಾರ್ಯವನ್ನು ಮಾಡುತ್ತಿದೆ. ಈ ಗಾಗಲೇ ೮೨,೦೦೦ ಕುಟುಂಬಗಳಲ್ಲಿ ೭೦,೦೦೦ಕ್ಕಿಂತಲೂ ಹೆಚ್ಚಿನ ಕುಟುಂಬಗಳಿಗೆ ವಸತಿ ಗೃಹವನ್ನು ನಿರ್ಮಿಸಲಾಗಿಯಿದೆ. ಅವರು ಸರಕಾರೀ ನಿರ್ಮಿತ ನಿವಾಸ ಸ್ಥಾನಗಳಲ್ಲಾಗಲೀ ತಮಗೆ ಮನಸ್ಸುಬಂದಿರುವ ಸ್ಥಳಗಳಲ್ಲಿ ವಾಸಿಸಾಡುತ್ತಿದ್ದಾರೆ. ಆದುದರಿಂದ ಇವರಿಂದ ಸರಕಾರಕ್ಕೆ ಯಾವ ರೀತಿಯು ಗೊಂದಲವೂ ಉಂಟಾಗಿರುವುದಿಲ್ಲ. ನಿಜವಾಗಿ, ಸರಕಾರಕ್ಕೆ ತಲೆನೋವುಂಟುಮಾಡುತ್ತಿರುವವರು ಆಕ್ರಮ ರೀತಿಯಲ್ಲಿ, ಕಾಯಿದೆಗೆ ವಿರೋಧವಾಗಿ ನಿರಂತರ ದೇಶಾಂತರ ಬರುತ್ತಿರುವ ಮಹಮ್ಮದೀಯರ ಗುಂಪುಗಳು ಹೀಗೆ ಬಂದಿರುವವರ ಸಂಖ್ಯೆ ೫೦,೦೦೦ಕ್ಕೆ ಮಿಕ್ಕಿ ಇದೆ. ಎನ್ನಲಾಗುತ್ತಿದೆ. ಸರಕಾರೇತರ ವಲಯಗಳ ಅಭಿಪ್ರಾಯದಂತೆ ಈ ಸಂಖ್ಯೆ ಅದಕ್ಕಿಂತಲೂ ಅದೆಷ್ಟೋ ಪಾಲು ಅಧಿಕವಾಗಿ ಇದೆ.

ಅಕ್ರಮವಾಗಿ ಬಂದು ತುಂಬಿರುವ ದೇಶಾಂತರಿಗಳು ಈ ಪ್ರದೇಶದ ದುರ್ಬಲ ಪರಿಸ್ಥಿತಿ ಇನ್ನೂ ಹದಗೆಡುವಂತೆ ಹೊಣೆಯೂಗುತ್ತಾರಲ್ಲದೆ, ರಕ್ಷಣಾ ದೃಷ್ಟಿಯಲ್ಲಿ ಪ್ರಬಲ ಸಮಸ್ಯೆಯನ್ನೇ ಉಂಟು ಮಾಡುತ್ತಾರೆ. ಗಡಿಯಲ್ಲಿ ಕೆಲವು ಸ್ಥಳಗಳನ್ನು 'ವಾನಗ್ರಸ್ಥ' ಎಂದು ಬಿಡಲಾಗಿಯಿದೆ. ೧೫ ಖಲರಲ್ಲಿ ನಡೆದ ನೆಹ್ರೂ-ನೂನ್ ಒಪ್ಪಂದದಲ್ಲಿ ಆ ಸ್ಥಳಗಳ ಕುರಿತು ಮಾತುಕತೆ ನಡೆದಿದೆ. ಆಕ್ರಮ ವಾಸಿ ಮುಸ್ಲಿಮರ ಸಂಖ್ಯೆಯ ಹೊಸ ವರದಿಯನ್ನು ತ್ರಿಪುರ ಆಡಳಿತ ಕೇಂದ್ರವು ಒಪ್ಪಿಸಬೇಕೆಂದು ಆಂದು ನಿಶ್ಚಯಿಸಲಾಗಿತ್ತು. ಆದರೆ, ಇತ್ತೀಚೆಗಿನ ತನಕವೂ ಆಡಳಿತ ಕೇಂದ್ರವು ಆ ಕುರಿತು ಆದೇನನ್ನೂ ಸಿದ್ಧಗೊಳಿಸಿರುವುದಿಲ್ಲ. ಪ್ರವಾಹದ ಪ್ರಮಾಣವನ್ನು ಕಂಡು ಇದೀಗ ದಿಗ್ಭ್ರಮೆಗೊಂಡಿರುವ ಆಡಳಿತ ಕೇಂದ್ರವು ಅವರನ್ನು ಹೊರಗೆ ಕಳುಹಿಸಬೇಕೆಂದು ಯೋಚನೆ ಮಾಡುತ್ತಿದೆ. ಹಿಂದಿನಿಂದಲೂ ಅಲ್ಲೇ ಇದ್ದ ಮಹಮ್ಮದೀಯರು ಯಾರು, ಅಕ್ರಮವಾಗಿ ಬೀಡು ಬಿಟ್ಟಿರುವ ಪಾಕಿಸ್ತಾನಿಗಳ್ಯಾರು ಎಂಬುದರ ಪೂರ್ಣ ತನಿಖೆಗೆ ಅವರು ಆರಂಭಿಸಿದರು ಹಾಗೆ ಬಂದಿದ್ದ ಕೆಲ ಮುಸ್ಲಿಮರನ್ನು ಹಿಂದಕ್ಕೆ ಕಳುಹಿಸಲಾಯಿತು. ಕೆಲವೇ ದಿವಸಗಳಲ್ಲಿ ೩,೫೦೦ ಮಹಮ್ಮದೀಯರು ತ್ರಿಪುರದಿಂದ ಪಾಕಿಸ್ತಾನಕ್ಕೆ ಪುನಃ ಹೋಗಬೇಕಾಯಿತು. ಈ ಕ್ರಮವು ಪಾಕಿಸ್ತಾನಿ ಅಧಿಕಾರಿಗಳ ಕಣ್ಣಿಗೆ ರಿಯಿಸಿತು. ಅವರು ಒಡನೆಹಿಂದೂಸ್ಥಾನದಲ್ಲಿರುವ ಮಹಮ್ಮದೀಯರ ಜೀವಕ್ಕೆ ಅಪಾಯಬಂಡೊದಗಿದೆ ಎಂಬ ಕೂಗನ್ನೆಬ್ಬಿಸಿದರು. ಆವರು ಬಹಳ ಉಪಾಯದಿಂದ ಪತ್ರಿಕೆಗಳನ್ನು ತಮ್ಮ ಪಕ್ಷಕ್ಕೆಒಲಿಸಿಕೊಂಡರು. ಸಮಾಚಾರ ಪತ್ರಿಕೆಗಳು ಒಡನೆ ಮುಸ್ಲಿಮರನ್ನು ಹಿಂದೂ ದೇಶದಿಂದ ಹೊಡೆಬೋಡಿಸ ತ್ತಿದ್ದಾರೆಂಬ (ಸುಳ್ಳು) ವರ್ತಮಾನವನ್ನು ದಪ್ಪಕ್ಷರಗಳಲ್ಲಿ ಪ್ರಕಟಿಸಿದುವು. ಹೀಗೆ ಪಾಕಿಸ್ತಾನಿಗಳ ಅಭಿಪ್ರಾಯವು ತಮಗೆ ಸಾಧ್ಯವಾಗಿರುವಂತೆ ಸರಕಾರವು ಕ್ರಮ ಕೈಗೊಂಡಿತು.

ಒಡನೆ ಅದಕ್ಕೆ ಪ್ರತಿಕ್ರಿಯೆಯು ಪೂರ್ವ ಪಾಕಿಸ್ತಾನದಲ್ಲಿ ಪ್ರಕಟವಾಯಿತು. ಅದನ್ನು ಕಂಡು ಶ್ರೀಯುತ ನೆಹ್ರೂಜೀಯವರು ಅಕ್ರಮವಾಸಿಗಳನ್ನು ಹೊರಕಳುಹಿಸುವ ಕಾರ್ಯವನ್ನು ನಿಲ್ಲಿಸಲು ಆಜ್ಞೆ ಇತ್ತರು.

ಅದೇ ಸಮಯದಲ್ಲಿ, ಆ ಪ್ರಾಂತ್ಯದಲ್ಲಿ ಸ್ವಲ್ಪ ಮಟ್ಟಿಗೆ ಕಾಲಿಟ್ಟಿರುವ ಕಮ್ಯೂನಿಸ್ಟ್ ಪಕ್ಷವು ಈ ಕ್ರಿಯೆ-ಪ್ರತಿಕ್ರಿಯೆಗಳಿಂದ ಪೂರ್ಣ ಲಾಭವನ್ನು ಪಡೆದುಕೊಂಡಿತು. ಅವರು ಆಗಲೇ ಬಹಿರಂಗವಾಗಿ ಮುಸ್ಲಿಮರನ್ನು ಮುಂದಿಟ್ಟುಕೊಂಡು ಗಲಾಟೆಗಾರಂಭಿಸಿದರು; ಅಕ್ರಮವಾಸಿಗಳ ಪರವಾಗಿ ವಾದ ಹೂಡಲಾರಂಭಿಸಿದರು. ಅವರ ಪರವಾಗಿ ಎಲ್ಲಾ ರೀತಿಯ ಪ್ರಚಾರಕಾರ್ಯಕ್ರಮಾರಂಭಿಸಿದರು. ತಮ್ಮ ಪಕ್ಷದತ್ತ ಅವರನ್ನೊಲಿಸಿಕೊಳ್ಳಲು ಏನೆಲ್ಲಾ ನಡೆಸಲು ಸಾಧ್ಯವೋ ಅದನ್ನೆಲ್ಲಾ ಅವರು ಮಾಡಿದರು. ಇದರಿಂದ ಆಡಳಿತ ಯಂತ್ರಕ್ಕೆ ಬಹಳ ಕಷ್ಟವಾಯಿತು, ಅದು ಇಕ್ಕಟ್ಟಿಗೊಳಗಾಯಿತು. ಅಲ್ಲಿಯ ಪ್ರಾದೇಶಿಕ ಸಮಿತಿಯ ಸಂಖ್ಯೆ ಮುವ್ವತ್ತು. ಅದರಲ್ಲಿ ಹದಿಮೂರು ಸದಸ್ಯರು ಕಮ್ಯೂನಿಸ್ಟ್ ಪಕ್ಷದವರಿದ್ದಾರೆ. ಹಾಗೆಯೇ ಲೋಕ ಸಭೆಯ ಎರಡು ಸ್ಥಾನಗಳನ್ನು ಅವರು ಗಿಟ್ಟಿಸಿಕೊಂಡಿದ್ದಾರೆ. ಅವರ ಗೆಲುವಿನ ರಹಸ್ಯ ಅಕ್ರಮವಾಸಿ ಮಹಮ್ಮದೀಯರ ಮತವೇ ಇದೆ. ಅವರೆಲ್ಲರ ಹೆಸರುಗಳನ್ನು ಮತದಾನ ಪಟ್ಟಿಯಲ್ಲಿ ಸೇರಿಸಿ ಮತಗಳನ್ನು ಅವರು ಹೂಡೆದುಕೊಂಡರು. ಕಳೆದ ಅಕ್ಟೋಬರಿನ ಪ್ರಥಮ ವಾರದಲ್ಲಿ ಕಮ್ಯೂನಿಸ್ಟರ ನಾಯಕ ಶ್ರೀ ಭೂಪೇಶ ಗುಪ್ತರವರು ತ್ರಿಪುರಕ್ಕೆ ಹೋಗಿದ್ದರು. ಸಾರ್ವಜನಿಕ ಸಭೆಗಳಲ್ಲಿ ಭಾಷಣವಿತ್ತಾಗಲೆಲ್ಲಾ ಅವರು ಭಾರತೀಯ ಸೈನ್ಯದ ಮೇಲೆ ಪಾಕಿಸ್ತಾನಿ ಪಡೆಯು ನಿರಂತರ ಗುಂಡು ಹೊಡೆಯುತ್ತಿರುವ ಹಾಗೂ ಎಲ್ಲೆಯಲ್ಲಿ ಸೈನಿಕರ ಶೇಖರಣೆಮಾಡುತ್ತಿರುವ ಕುರಿತು ಒಂದಕ್ಷರವನ್ನೂ ಆಡಿರುವದಿಲ್ಲ. ಅಷ್ಟು ಮಾತ್ರವಲ್ಲ, ಭಾರತೀಯ ಪ್ರದೇಶದೊಳಗೆ ಅಕ್ರಮವಾಗಿ ಎಡೆಬಿಡದೆ ಹರಿದು ಬರುತ್ತಿರುವ ಮುಸ್ಲಿಮರ ಪ್ರವಾಹದ ಕುರಿತು ಅದ್ಯಾವ ಶಬ್ದವೂ ಅವರ ಬಾಯಿಯಿಂದ ಹೊರ ಬಂದಿರುವದಿಲ್ಲ ಅಕ್ರಮವಾಸದ ಕುರಿತು ಟೀಕಿಸುವ ಮಾತಂತಿರಲಿ. ಇದು ಕಮ್ಯೂನಿಸ್ಟರ ನಿಜವಾದ ಬಣ್ಣವಿದೆ.

ಈ ರೀತಿಯಲ್ಲಿ ನಿರಂತರ ಪ್ರವಾಹ ಇಷ್ಟು ವರ್ಷಗಳಿಂದ ಬರುತ್ತಿದೆಯೂದರೂ ಅದನ್ನು ತಡೆಗಟ್ಟಲು ಅದ್ಯಾವ ರೀತಿಯ ಸೂಕ್ತ ಕ್ರಮವನ್ನು ಕೈಗೊಂಡಿಲ್ಲವೆಂಬ ಸ್ಪಷ್ಟ ಕಟು ಸಂಗತಿಯು ಅಲ್ಲಿ ಅಡಿಯಿಡುವ ಅಧ್ಯಾಪ ಅಪರಿಚಿತನಿಗೂ ಅರಿವಾಗದಿರಲಿಕ್ಕಿಲ್ಲ. ಗಡಿಯಲ್ಲಿರುವ ಕಾವಲುಗಾರರು ಬಹಳ ಜಾಗ್ರತೆಯಿಂದಲೇ ಇರುವರಾದರೂ ಅವರೂ ಕಂಠಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದಾರೆ. ಅಕ್ರಮವಾಸಿಗಳ ಬೆನ್ನಟ್ಟುತ್ತಾ ಹೋಗುವಾಗ ಈಗ ಪಾಕಿಸ್ತಾನವೆಂದು ರಚಿಸಲಾಗಿರುವ ಭೂಪ್ರದೇಶದ ಮೇಲೆ ಅವರ ಒಂದು ಬೆರಳು ಹೋದರೂ ಸಾಕು. ಅವರನ್ನಾಗಲೇ ಬಂಧಿಸಿ ನರಕ ಸದೃಶ ನ್ಯಾಯಾಲಯವೆಂಬ ರಂಗಕ್ಕೊಯ್ಯಲಾಗುತ್ತದೆ. ಅದನ್ನು ಮುಗಿಸಿ ಇತ್ತ ಬಂದೊಡನೆ ಅವರ ನೆಮ್ಮದಿಯ ಸರಕಾರದ ನ್ಯಾಯಾಲಯದಲ್ಲಿ ಮುಖ ತೋರಿಸಬೇಕು. ಆದರೆ ಪಾಕಿಸ್ತಾನಿಗಳ ವಾಡು ಹೀಗಿರುವದಿಲ್ಲ. ಗಡಿಯನ್ನು ತಿಕ್ಕಿ ಮಿಸಿ ಇತ್ತ ಬಂದು ಹೋದುದಕ್ಕಾಗಿಯೇ ಆಕ್ರಮಣಕ್ಕಾಗಿಯೇ, ಅವರಿಗೆ ಬಹುಮಾನ, ಭಡ್ತಿಗಳು ಲಭಿಸುತ್ತವೆ. ಈ ರೀತಿ ಅವರಿಗೆ ಅತಿ ಪ್ರೋತ್ಸಾಹ ಕೊಡಲಾಗುತ್ತಿದೆ. ತ್ರಿಪುರದ ಜವಾಬ್ದಾರಿಯುತ ವಲಯಗಳಿಂದ ಬರುತ್ತಿರುವ ಅಭಿಪ್ರಾಯವು ಒಂದೇ ವಿಧ ಇದೆ:

ಪಾಕಿಸ್ತಾನದತ್ತ ಧಾರಕವು ತೀರಾ ಸುತ್ತಿರುವ ತೃಪ್ತೀಕರಣ ನೀತಿಗೆ ಒಂದು ಸಾಂಕೇತಿಕ ಉದಾಹರಣೆ ಈ ರೀತಿ ಇದೆ: ಚಿತ್ತಗಾಂಗಿನಿಂದ ಶಿಲ್ಲಾಂಗಿಗೆ (ಶ್ರೀಹಟ್ಟ) ಹೋಗುವ ಉಗಿಬಂಡಿಗೆ ಭಾರತದ ಗಾಲ್ಸಾ ಭಾಗಲ್ಪುರದ ಮೂಲಕ ಹೋಗಲು ದಾರಿ ಬಿಟ್ಟುಕೊಟ್ಟಿರುವದೇ ಆ ಉದಾಹರಣೆ ಇದೆ. ಅದು ಮಾತ್ರವಲ್ಲ, ನೆಹ್ರೂ-ನೂನ್ ಮಾತುಕತೆಯ ಪ್ರಕಾರ ತ್ರಿಪುರದ ಈ ಭಾಗಪ್ರದೇಶವು ಪಾಕಿಸ್ತಾನಕ್ಕೆ ಸೇರಬೇಕಾಗುತ್ತದೆ. ಆದನ್ನು ಉಚಿತ ಕಾಣಿಕೆಯನ್ನಾಗಿ ಕೊಡಲಾಗಿದೆ ಅದಕ್ಕೆ ಪ್ರತಿಯಾಗಿ ಅದೇನನ್ನೂ ನಮ್ಮ ಸರಕಾರ ಕೇಳಿರುವದಿಲ್ಲ.

ಕರ್ಣಫುಲಿ ಆಣೆಕಟ್ಟು ನಿರ್ಮಿಸುವಾಗ ಕೆಲ ಮಹಮ್ಮದೀಯರು ನಿರಾಶ್ರಿತರಾಗಬೇಕಾಯಿತು. ಪಾಕಿಸ್ತಾನವೇ ಅನಂತಿಗೆಯುಕ್ತ ಆಶ್ರಯವೀಯಬೇಕಾಗಿತ್ತು. ಅಲ್ಲಿ ಮಾತ್ರ ಹಾಗೆ ಘಟಿಸಲಿಲ್ಲ. ಅವರು ಇತ್ತ ಬಂದು ತಂಗಿದರು. ಕೇವಲ ಪ್ರತಿಭಟನಾ ಪತ್ರಗಳನ್ನು ಕಳುಹಿಸುವದರಲ್ಲೇ ನಮ್ಮ ಸರಕಾರ ಸುಮ್ಮಗಾಯಿತು. ಅಣ್ಯಾವ ಗುರಿಯನ್ನೂ ಮುಟ್ಟಲಿಲ್ಲ. ಅದೇ ವಿಧದಲ್ಲಿ, ಪಾಕಿಸ್ತಾನಿ ಸರಕಾರವು ಮತ್ತೊಂದು ಕುಟಿಲೋಪಾಯವನ್ನು ಅನುಸರಿಸುತ್ತಿದೆ. ತ್ರಿಪುರದ ಸೀಮೆಯ ಉದ್ದಕ್ಕೂ ಬಹಳಷ್ಟು 'ವಾನಗ್ರಸ್ಥ' ಭೂಪ್ರದೇಶವಿದೆ. ಆ ಪ್ರದೇಶಗಳಲ್ಲಿ ಮುಸ್ಲಿಮರನ್ನು ವಾಸಿಸಲು ಪಾಕಿಸ್ತಾನಿ ಸರಕಾರವು ಬಲಾತ್ಕಾರಿಸುತ್ತಿದೆ. ತಂಗುವವರಿಗೆ ಬಹಳ ಪ್ರೋತ್ಸಾಹವನ್ನೀಯಲಾಗುತ್ತಿದೆ. ಜೇರೆ ಹೊಡೆಯುವ ಪ್ರತೀಯೊಂದು ಕುಟುಂಬಕ್ಕೂ—ಇಂತಿಷ್ಟು ಜಮೀನನ್ನು ಕೊಡಲಾಗುತ್ತಿದೆ. ಅಷ್ಟು ವಿಶಾಲ ಎಲ್ಲೆಯನ್ನು ಕಾಯುವದು ಕಷ್ಟವೇನೋ ನಿಜ. ಆದರೂ, ಈ ಅಪರಿಮಿತ ಪ್ರವಾಹವನ್ನು ಪ್ರತಿಭಟಿಸಲು ಸಾಧ್ಯವಿದೆ. ಪ್ರಾದೇಶಿಕ ಆಡಳಿತ ಯಂತ್ರ ಕೈಗೊಂಡ ದೃಢ ಧೋರಣೆ ಆದಕ್ಕೆ ತಕ್ಕುದಾಗಿತ್ತು. ಕೇಂದ್ರ ಸರಕಾರವು ಆಡಕ್ಕೂ ಆಡ್ಡಿಯನ್ನುಂಟು ಮಾಡಿದೆ. ಹೀಗಾಗಿ ಆಕ್ರಮಣಕಾರರ ಮನಸೇಚ್ಛೆ ಪ್ರವಾಹಕ್ಕೆ ಅದ್ಯಾವ ವಿಧದ ತಡೆಯೂ ಈಗ ಇರುವದಿಲ್ಲ.

ತ್ರಿಪುರದಿಂದ ೨೦,೦೦೦ ಪಾಕಿಸ್ತಾನಿಗಳು ಕಳೆದ ಜನವರಿಯ ನಂತರ ನೆಲೆಯಿಂದ ಹೋಗಿರುವರೆಂದು ಹೇಳಲಾಗುತ್ತಿದೆ. ಅಕ್ರಮ ವಾಸಿಗಳಿಗೆ ಆಶ್ರಯವೀಯುತ್ತಿದ್ದ ದುಷ್ಟ—ಪ್ರಯತ್ನಕ್ಕಿಗಳಿಗೆ ಸರಕಾರದ ಉಗ್ರ ನೀತಿಯಿಂದ ಸ್ವಲ್ಪ ಮಟ್ಟಿಗೆ ಬಸಿತಾಗಿಳ್ಳು. ಅವರು ಆಶ್ರಯ ಕೊಡ

(ನೇ ಪುಟದಿಂದ)

ಬಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ ಜೀವನದ ಭದ್ರತೆಗೂ ಉಳಿತಾಯವು ಅತ್ಯವಶ್ಯ.

ಉಳಿತಾಯ ಮಾಡಿರಿ!
ಒಂದು ಸೇವಿಂಗ್ಸ್ ಖಾತೆ ತೆರೆಯಿರಿ!

ಕೊಪ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಭಾರತೀಯರೇ ಎದ್ದೇಳಿರಿ

ಗುರಿಮುಟ್ಟುವತನಕ ವಿಶ್ರಮಿಸದಿರಿ

ಪ್ರಪಂಚದಲ್ಲಿ ದೊಡ್ಡ ಭೂಖಂಡ ಏಶ್ಯ ಏಶ್ಯದ ಅತಿ ದೊಡ್ಡ ರಾಷ್ಟ್ರ ಸೋವಿಯತ್. ಅದನ್ನು ಬಿಟ್ಟರೆ, ಮತ್ತೆ ನಿಲ್ಲುವುವು, ಚೀನಾ ಮತ್ತು ಭಾರತಗಳು.

ರಶ್ಯದ ಬಹುಭಾಗ ಏಶ್ಯದಲ್ಲಿಯೇ ಇರುವುದಾದರೂ ಅದು ಯುರೋಪಿಗೂ ಹರಡಿದೆ. ಯುರೇಷಿಯಾದ ಒಂದು ಪ್ರಬಲ ಶಕ್ತಿ ಅದು. ಈಗಾಗಲೇ ರಶ್ಯ ಜಗತ್ತಿನ ಮುಂದುವರಿದ, ಮಹಾ ರಾಷ್ಟ್ರಗಳ ಸಾಲಿಗೆ ಸೇರಿದೆ.

ಜನ ಸಂಖ್ಯೆಯಲ್ಲೂ ವಿಸ್ತಾರದಲ್ಲೂ ದೊಡ್ಡದಾದುವು ಚೀನಾ—ಭಾರತಗಳು. ಚೀನಾವು ರಾಜ್ಯ ಕ್ರಾಂತಿಯ ದಾರಿಯನ್ನು ತುಳಿದು, ಕಮ್ಯುನಿಸ್ಟ್ ತತ್ವಗಳನ್ನು ನೆಮ್ಮಿ ಸ್ವತಂತ್ರವೆನಿಸಿತು. ಹಳದಿಯಾಗಿದ್ದ ತನ್ನ ನರ ಮುಖಕ್ಕೆ ಕೆಂಪು ಬಳಿದುಕೊಂಡಿತು ಕಮ್ಯುನಿಜಂನ ದಾರಿಯಲ್ಲೇ ಮುಂದುವರಿಯುತ್ತೇನೆಂದು ಹೇಳಿಕೊಂಡಿತು.

ಆದರೆ, ಕಮ್ಯುನಿಜಂನ ಮಾತೃಭೂಮಿ ಚೀನಾವಲ್ಲ; ಸೋವಿಯತ್. ಸತ್ಯ ಹೇಳುವುದಾದರೆ, ಸೋವಿಯತ್ ಮತ್ತು ಚೀನಾಗಳ ಕಮ್ಯುನಿಜಂಗಳಲ್ಲಿ ಉತ್ತರ-ದಕ್ಷಿಣ ಧ್ರುವಗಳಷ್ಟು ಅಂತರವಿದೆ. ಈ ಕಾರಣದಿಂದಲೇ ಅವುಗಳು ಒಂದೇ ಮುಖ ಬಿಲ್ಲೆಯನ್ನು ಹೊತ್ತಿದ್ದರೂ ಮುಖ ನೂತ್ರ ಪೂರ್ವ-ಪಶ್ಚಿಮವಾಗಿದೆ.

ಏಶ್ಯನ್ ನಾಯಕತನಕ್ಕೆಂದು ತೀರಿಸಿನ ಸ್ಪರ್ಧೆ ನಡೆಯುತ್ತಿರುವುದರ ಹೆಗ್ಗುರುತು ಭಾರತದ ಸೀಮೆಯ ಮೇಲೆ ಚೀನೀಯರ ಆಕ್ರಮಣ—ದುರಾಕ್ರಮಣ! ಶಾಂತಿಯಿಂದ, ಅಹಿಂಸೆಯಿಂದ ಸ್ವತಂತ್ರರಾದ ಭಾರತೀಯರು ಹದಿನೈದೇ ವರ್ಷಗಳಲ್ಲಿ ದೇಶವನ್ನು ಕಾಡುತಿದ್ದ ಹಲವಾರು ಸಮಸ್ಯೆಗಳನ್ನು ನಿಟ್ಟಿತನದಿಂದ ಎದುರಿಸುತ್ತ ಸಂಯುದ್ಧಿಯ ಪಥದಲ್ಲಿ ಧಾವಿಸುತ್ತಿದ್ದಾರೆ. ಚೀನಾವಾದರೂ ಕಮ್ಯುನಿಜಂ ನೊಗಕ್ಕೆ ಹೆಗಲು ಕೊಟ್ಟು ಸೋಲುಂಡಿದೆ. ಭಾರತದಲ್ಲಿ ಸಂತುಷ್ಟಿ, ಮುಖ್ಯವಾಗಿ ಆಹಾರ-ಔದ್ಯಮಿಕ ಕ್ಷೇತ್ರದಲ್ಲಿ, ಕಂಡು ಬಂದರೆ, ಅಲ್ಲಿ ಅಸಂತುಷ್ಟಿ ತಾಂಡವವಾಡುತ್ತಿದೆ. ಭಾರತವು ಸಂಯುದ್ಧಿಗೊಳ್ಳುತ್ತ ಬರುತ್ತಿದೆ, ವಿಶ್ವದ ರಾಜಕಾರಣದಲ್ಲೇ ಅಗ್ರಗಣ್ಯ ಸ್ಥಾನ ಗಳಿಸಿದೆ; ಏಶ್ಯನ್ ನಾಯಕತನವನ್ನು ವಹಿಸುವಷ್ಟು ಮುಂದುವರಿದಿದೆ. ಆದರೆ, ಚೀನಾದ ಗತಿ! ಮುಖಕ್ಕೆ ಕೆಂಪು ಬಳಿದುಕೊಂಡದ್ದೇ ಬಂತು; ಜತೆಗೆ, ಮೇಲೆ ಈಗ ಮಸಿ ಬಳಿಯುವ ಬೇಕಾಗಿ ಬಂದಿದೆ. ತನ್ನ ಜನತೆಗೆ ಆಹಾರವೊದಗಿಸಲು ಚೀನಾದ ಯೋಜನೆಗಳು ಅಸಫಲವಾಗಿವೆ. ಉದ್ಯಮಗಳು ಕೆಟ್ಟು ಹೋಗಿವೆ, ದಿನದಿಂದ ದಿನಕ್ಕೆ ಅಶಾಂತಿ—ಅಸಂತೋಷಗಳು ಅಲ್ಲಿ ಹೆಚ್ಚುತ್ತಿವೆ; ಇನ್ನೊಂದು ಆಂತರಿಕ ಕ್ರಾಂತಿಯೂ ನಡೆಯಬಹುದಾದ ಗಂಡಾಂತರದ ಪರಿಸ್ಥಿತಿ ಉಕ್ಕಿದೆ.

ಭಾರತದ ಭಾರತೀಯರ ಸರ್ವಾಂಗೀಣ ಅಭಿವೃದ್ಧಿಯನ್ನು ಕಂಡು ಕರುಬಿದ ಚೀನೀಯ ರಾಜಕಾರಣಿಗಳು ಭಾರತದ ಮೇಲೆ ಅಪಪ್ರಚಾರವೈದ್ಯು ತನ್ಮೂಲಕ ರಲ್ಲಿ ಭಾರತೀಯರ ಬಗೆಗೆ ದುರ್ಭಾವನೆ ಹುಟ್ಟುವಂತೆ ಪ್ರಚೋದನೆ ನೀಡಿದರು; ಇಲ್ಲದ ಸೀಮೆ ವಿವಾದವನ್ನು ಇದೆಯೆಂದು ಸೃಷ್ಟಿಸಿದರು. ತಮ್ಮ ಪೂರ್ವಾಧಿಕಾರಿಗಳು ಒಪ್ಪಿದ್ದ ಮೆಕ್ಮಹೋನ್ ರೇಖೆಯ ಅಸ್ತಿತ್ವವನ್ನೇ ನಿರಾಕರಿಸಿದರು. ಭಾಯಿ-ಭಾಯಿಯೆಂದು ಸರ್ವ ಮತ್ಸರವನ್ನು ಪ್ರದರ್ಶಿಸಿದರು. ವಿಶ್ವನ್ ನಾಯಕತನ ತಮಗೆ ಸಿಗಬೇಕು; ಅದಕ್ಕಾಗಿ ಭಾರತದ ಸನ್ಮಿತ್ರಯನ್ನು ಹಾಳು ಮಾಡಿ, ಅದನ್ನೂ ಕಮ್ಯುನಿಸ್ಟ್ ರಾಷ್ಟ್ರವನ್ನಾಗಿ ಮಾಡಬೇಕು ಎಂದು ಹಂಚು ಹಾಕಿದರು.

ಭಾರತವು ದೊಡ್ಡ ರಾಷ್ಟ್ರ. ತನ್ನದಾದ ಗೊಮ್ಮೆಯ ವಿನೋಚನೆಯನ್ನು ಅದು ಮಾಡಿಕೊಳ್ಳುತ್ತಿತ್ತು. ಇದರಿಂದ ನೇಪಾಲ್-ಭೂತಾನ್ ರಾಷ್ಟ್ರಗಳು ಭಾರತದ ಬಗ್ಗೆ ಸಹಾನುಭೂತಿ ತೋರಿಸಲಾರವು. ಇನ್ನು, ಕಾಶ್ಮೀರದ ಸಮಸ್ಯೆಯ ಮೇಲೆ ಪಾಕಿಸ್ತಾನಕ್ಕೆ ನೆರವಿತ್ತವರು ಕೆಲವರು. ಅವರಿಗೂ ಭಾರತದ ಮೇಲೆ ಅಶಕ್ತಿಯಿರಲಾರದು. ಏಕೆಂದರೆ, ಜಾಗತಿಕ ರಾಜಕಾರಣದಲ್ಲಿ ಭಾರತಕ್ಕೆ ಸಹಾನುಭೂತಿ ಪ್ರದರ್ಶಕರು ಯಾರೂ ಇಲ್ಲ. ಪಾಕಿಸ್ತಾನ, ನೇಪಾಲಗಳನ್ನು ಸ್ನೇಹ ಬಲೆಯಲ್ಲಿ ಸಿಕ್ಕಿಸುವ ಸಂಚು ಯಶಸ್ವಿಯಾಗಿದೆ. ಭಾರತವೊಂದು ತಿಮ್ಮಂಗಾತರೆ ಮತ್ತೆ ಚೀನಾದಿಂದ ಹಿಡಿದು ಪಾಕಿಸ್ತಾನದ ವರೆಗಿನ ಆಗ್ನೇಯ ಏಷ್ಯಾ ತನ್ನ ಏಕ ಮುಷ್ಟಿಯಲ್ಲಿ! ಇದು ಚೀನಾದ ಕನಸು, ಎಟಕದ ಮಿಥ್ಯೆಗೆಯ ಕಂಪು!

ಆದರೆ, ಚೀನಾದ ಮಲ್ಲಿಗೆಯು ಅರಳಲಿಲ್ಲ. ಅದು ಕೇವಲ ಮುಗಿಲಮಲ್ಲಿಗೆಯಾಯ್ತು. ಆನಭಿವೃದ್ಧರಾಷ್ಟ್ರಗಳನ್ನು ಕಮ್ಯುನಿಷ್ಟೇತರ ವಿಧಾನದಲ್ಲೂ ಅಭಿವೃದ್ಧಿಗೊಳಿಸಲು ಸಾಧ್ಯವಿದೆಯೆಂಬುದನ್ನು ಭಾರತ ತೋರಿಸಿಕೊಡುವಲ್ಲಿ ಅದು ಎದುರಿಸಬೇಕಾಗುವ ನೂರಾರು ಅಡ್ಡಿ ಆಡಚಣೆಗಳಲ್ಲಿ ಚೀನೀಯ ಆಕ್ರಮಣವೂ ಒಂದು ಎಂಬುದನ್ನು ಜಗತ್ತಿಗೆ ಜಗತ್ತೇ ಅರಿತುಕೊಂಡಿದೆ. ಚೀನಾದ ಆಕ್ರಮಣದ ಹಿಂದಿರುವ ತಿಮಿಂಗಿಲ ತನವನ್ನು, ಸಾಮ್ರಾಜ್ಯವಾದದ ಗೂಢಾರ್ಥವನ್ನು ಅದು ತಿಳಿದಿದೆ ಎಂತಲೇ ಭಾರತದ ನೆರವಿಗೆ ಎಲ್ಲರೂ ಮುಂದೆ ಬಂದಿದ್ದಾರೆ.

ದೇಶದ ಜನತೆ ಜಾಗ್ರತವಾಗಿದೆ. ಗಳಿಸಿದ ಸ್ವಾತಂತ್ರ್ಯವನ್ನು ಉಳಿಸುವುದು ಕಠಿನವೆಂಬುದನ್ನು ಅದು ಅರಿತಿದೆ. ಅದಕ್ಕಾಗಿ ಹಸಿಯೂಗಿ, ಹಳ್ಳವಾಗಿ ಹೊಳೆಯುಗಿ ತನ್ನ ಶಕ್ತಿ ಸರ್ವಸ್ವವನ್ನು ಹರಿಯುವ ದೃಢ ಸಂಕಲ್ಪ ಮಾಡಿದೆ. ಚೀನೀಯರ ಕೆಂಪು ತನವನ್ನು ಕಮ್ಯುನಿಸ್ಟರ ತಂಟೆಕೋರತನವನ್ನು, ಪುಂಡಾಟಿಕೆಯನ್ನು ಮೆಟ್ಟಲು, ಮೆಟ್ಟಿ ಒದರ ಮೇಲೆ ನಿಲ್ಲಲು ನಾವಿ ಭೀಷ್ಮ ಪ್ರತಿಜ್ಞೆ ಮಾಡಿದ್ದೇವೆ. ಕ್ಷತ್ರಿಯ ವೀರರೆಲ್ಲರನ್ನೂ ಒಂದಲ್ಲ, ಹದಿನಾರು ಬಾರಿ ಹೇಳಿ ಹೆಸರಿಲ್ಲದಂತೆ ಎತ್ತಾಕಿಯಾಗಿ ಗೆದ್ದ ಚಿರಂಜೀವಿ ಪರಶು-ರಾಮನ ಶೌರ್ಯ ನಮ್ಮಲ್ಲಿ ಇನ್ನೂ ಉಳಿದಿದೆಯೆಂಬುದನ್ನು ಚೀನೀಯ ಆಕ್ರಮಣಕಾರಿಗಳಿಗೆ ತೋರಿಸಿಕೊಡವ, ಮಾತೃ ಭೂಮಿಯ ರಕ್ಷಣೆಗೆ ಬದ್ಧಕಟಿಬದ್ಧರಾಗುವ ಕಾಲವಿದೆಂದು ನಮ್ಮ ಜನತೆ ಅರಿತಿದೆ.

ಇದುವರೆಗೆ ಚೀನಾ ಆಕ್ರಮಣ ವಾಡಿದರೂ ಅದು ಗಡಿ ತಂಟೆಯಾಗಿಯೇ ಉಳಿದಿದೆ; ಅದರಿ, ಇಂತಹ ಪರಿಸ್ಥಿತಿಯು ಹೆಚ್ಚು ಕಾಲ ಮುಂದುವರಿಯಲಾರದು. ಅನ್ಯಾಯವನ್ನು, ಅಧಾರ್ಮಿಕತೆಯನ್ನು, ಪ್ರತಿಭಟಿಸಲು ಯುದ್ಧವನ್ನೇ ಆರಿಸಿಕೊಳ್ಳಬೇಕಾದ ದಿನವೂ ಬರಬಹುದು. ಆದರಿಂದ ನಾವು ಮತ್ತಷ್ಟು ತ್ಯಾಗಕ್ಕೆ ಸೇವೆಗೆ ಸಿದ್ಧರಾಗಬೇಕು.

ನಮಗೆ ಕೆಲವೊಮ್ಮೆ ಸೋಲು ಸಂಭವಿಸಿಬಹುದು; ಸಿಜ ಇತ್ಸರಿಂದ ಧೈರ್ಯಗೆಡಬೇಕಾಗಿಲ್ಲ. ರಾಜಕೀಯ ರಣ ನೀತಿಯಲ್ಲಿ ಸೋಲು-ಗೆಲುಗಳು ಕ್ಷಣಿಕ. ಭವಿಷ್ಯತ್ತನ್ನು ಹೇಳುವಂತಿಲ್ಲ. ಆದರೆ, 'ಸತ್ಯಮೇವ ಜಯತೇ ನಾನೃತಂ, ಎಂಬ ಉಪನಿಷದುಕ್ತಿಯನ್ನು ನಂಬಿ ಬಂದವರು ನಾವು. ಸೂರ್ಯನ ಬೆಳಕು ನೆದುರು ಕತ್ತಲೆ ನಿಲ್ಲಲಾರದು. ದುರಾಕ್ರಮಣಗೈದು ಚೀನೀಯರು ಹಿಮ್ಮೆಟ್ಟುವ ದಿನವೊಂದಿದೆ; ಅದಿನ ತುಸು ದೂರವಿರಬಹುದು.

ಜಾಗತಿಕ ವಾತಾವರಣವನ್ನು ಪ್ರತಿಕ್ರಿಯೆಯನ್ನು ಅನುಲಕ್ಷಿಸಿ ನಾವು ಮುಂದುವರಿಯಬೇಕು. ರಶ್ಯ—ಚೀನಾಗಳ ಸಂಬಂಧ ನೆಟ್ಟಗಿಲ್ಲವಾದರೂ ಅದು ಹೇಗೆ ನಿಲ್ಲಬಹುದೆಂದು ಈಗಲೇ ಹೇಳುವುದು ಸಾಧ್ಯವಿಲ್ಲ. ಯುದ್ಧದ ಘೋಷಣೆ ಮಾಡುವುದು ಸುಲಭ; ಆದರೆ, ಅದನ್ನು ಅಷ್ಟು ಲಘುವಾಗಿ ಪರಿಗಣಿಸಬಾರದು. ಸಂದರ್ಭ-ಅವಕಾಶಗಳನ್ನು ಕಂಡು ಮುಂದಿನ ಕಾರ್ಯಕ್ರಮ ಕೈಗೊಳ್ಳಬೇಕಾಗುತ್ತದೆ.

ಅಹಿಂಸೆಯನ್ನೂ ಸೌಹಾರ್ದತೆಯನ್ನೂ ಮುಂದಿಟ್ಟ ನಾವು ಆಕ್ರಮಣವನ್ನು ಪೂರ್ಣ ಶಕ್ತಿಯಿಂದ ಎದುರಿಸುತ್ತೇವೆ ಹಿಂಸೆಯ ಮಾರ್ಗವನ್ನು ಅನಿವಾರ್ಯ ಮತ್ತು ಅತ್ಯಾವಶ್ಯಕ ಸಂದರ್ಭಗಳಲ್ಲಿ ಮಾತ್ರ ಅನುಸರಿಸುತ್ತೇವೆ. ಉಭಯ ರಾಷ್ಟ್ರಗಳ ಸ್ನೇಹಿತರು ಮುಂದೆ ಬಂದು ಚೀನಾದ ಮನವನ್ನು ಒಲಿಸಿ ಒಡಂಬಡಿಕೆಯನ್ನು ಮಾಡುವುದಾದರೆ, ಆಕ್ರಮಣವನ್ನು ಹಿಂದೆಗೆಯುವಲ್ಲಿ ಯಶಸ್ವಿಯಾಗುವುದಾದರೆ, ಯುದ್ಧ ಭೂಮಿ ಎನ್ನುವ ಕಲುಂಕವನ್ನು ತಪ್ಪಿಸಿದಂತಾಗುತ್ತದೆ. ಅದರ ಆಶೆ ಇಲ್ಲವಾದಂತೂ ರಶ್ಯದ ನಿಲುಮೆಯನ್ನು ಸ್ಪಷ್ಟವಾಗಿ ಕಂಡುಕೊಂಡು ಮುಂದಿನ ಕ್ರಮವನ್ನು ನಿರ್ಧರಿಸಬೇಕಾಗುತ್ತದೆ.

ಸೋಲು ಗೆಲುವಿನ ಮೂಲ. ಅಧಿಕ ಸಂಖ್ಯಾಕರೂ ಅಧಿಕ ಸಿದ್ಧರೂ ಆದ ಚೀನೀಯೋಧರು ಪ್ರಾರಂಭದಲ್ಲಿ ಜಯಗಳಿಸುತ್ತಿದ್ದಾದರೂ ಭಾರತೀಯ ವೀರ ಯೋಧರು ಅವರನ್ನು ಎಟ್ಟುವ ಪ್ರತಿಜ್ಞೆ ಮಾಡಿದ್ದಾರೆ; ಇಳಾ ಕೋಟಿ ಭಾರತೀಯರ ಮತ್ತು ಸ್ವತಂತ್ರ ಜಗತ್ತಿನ ಎರಡುನೂರು ಕೋಟಿ ಪ್ರಜೆಗಳ ಸಂಪೂರ್ಣ ಸಹಕಾರ ಅವರಿಗಿದೆ. ಸತ್ಯಕ್ಕೆ ಚ್ಯುತಿಯಿಲ್ಲ, ಅದು ನಿತ್ಯವೆಂಬುದನ್ನು ಇಂದಿನ ವೈಜ್ಞಾನಿಕ ಯುಗದಲ್ಲಿ ಮತ್ತೊಮ್ಮೆ ಜಗತ್ತಿಗೆ ತೋರಿಸುವ ಅವಕಾಶ ನಮಗೂದಗಿದೆ

ಭಾರತೀಯರೇ, ಎದ್ದೇಳಿರಿ. ಗುರಿಮುಟ್ಟುವ ತನಕ ವಿಶ್ರಮಿಸದಿರಿ—ನಂಬ ವೀರೇಕವಾಣಿ ಕ್ಷಣಕ್ಷಣಕ್ಕೂ ಭೂಮಿ ಆಕಾಶ ಪಾತಾಳಗಳಲ್ಲಿ ಪ್ರತಿಧ್ವನಿಸುತ್ತಿದೆ. ಪ್ರತಿ ನಾಗರಿಕನಾಡಿನಾಡಿಯಲ್ಲಿಯುತ್ಸಾಹವನ್ನು ಮೂಡಿಸುತ್ತದೆ.

ಭಾರತೀಯರೇ, ಎದ್ದೇಳಿರಿ. ಗುರಿಮುಟ್ಟುವ ತನಕ ವಿಶ್ರಮಿಸದಿರಿ.

—ಗೋರಾ.

Notice.

In the Court of the Munsiff of Kasaragod.

O. S. No. 143/1962.

Between:—

M. H. Abdulla Beary ... Plaintiff.

and

Kinnu Shetty ... Defendant.

To,

Sri. Kinnu Shetty, nephew of Malandoora Kanthu Shetty, Ichlangod village, Kasaragod Taluk.

Please take notice that the above suit stands posted to 24—11—1962 for your appearance.

Sd/- O. Vijayan,
Advocate for plaintiff.

Kasaragod, 17—11—1962.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಸರಿಗಣಿಸಿರುವರು. ಪ್ರತಿಯೊಬ್ಬ ರೇವಣಾತಿಗಾರರಿಗೆ ಇಲ್ಲಿ ನೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸವಿಾಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240.

— ಮಂಗಳೂರು—3

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕೆಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪	ಉಡುಪಿ ೨೨-೧೧-೧೯೬೨	ವಾರ ೧೧

ನುಂದೆ ನಡೆಯುವ

ದೇಶದ ಸಂರಕ್ಷಣೆಯ ಸಮಸ್ಯೆಯು ಚೀನೀಯ ಆಕ್ರಮಣದಿಂದ ದಿನದಿಂದ ದಿನಕ್ಕೆ ಜಟಿಲವಾಗುತ್ತ ಬರುತ್ತಿದೆ. ಭಾರತದ ದೃಷ್ಟಿಯಲ್ಲಿ ಇದುವರೆಗೆ ಶತ್ರುಗಳದೇ ಮೇಲುಗೈಯಾಗಿದೆಯೆಂಬುದು ಸರ್ವಶ್ರುತ. ಇದನ್ನು ಮನಗಂಡ ದೇಶದ ವಿವಿಧ ನಾಯಕರು ವಿವಿಧ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಿದ್ದಾರೆ. ಭಾರತವು ತನ್ನ ತಾಟಸ್ಥ್ಯ ನೀತಿಯನ್ನು ಬಿಟ್ಟು ಕೊಡಬೇಕು; ಈ ಪರಿಯ ನೀತಿಗೆ ಆರ್ಥವೇ ಇಲ್ಲವೆಂದು ಹಿರಿಯ ಮುತ್ಸದ್ದಿ ರಾಜಾಜಿಯವರು ಹೇಳುತ್ತಾರೆ. ಭಾರತದ ವಿದೇಶ ನೀತಿಯು ವಿಫಲಗೊಂಡಿದೆ, ಆದುದರಿಂದ ಅದನ್ನು ಪುನರ್ ಪರಿಶೀಲಿಸುವ ಆವಶ್ಯಕತೆ ತಲೆದೋರಿದೆಯೆಂದು ಮತ್ತು ಕೆಲವರೆನ್ನುತ್ತಾರೆ. ದೇಶದ ಪ್ರಜಲಿತ ಪರಿಸ್ಥಿತಿಯನ್ನು ವಿವೇಚಿಸುವಾಗ, ಇಂತಹ ವಾದಗಳಲ್ಲಿ ಯಥಾರ್ಥತೆಯಿದೆಯೆಂದು ಭಾಸವಾಗಲಾರದು. ಆದರೆ, ತನ್ನ ನೀತಿಯನ್ನು ಬದಲಿಸುವಲ್ಲಿ ತೀರ ವಿವೇಕವನ್ನು ಪ್ರದರ್ಶಿಸಬೇಕೆಂಬುದನ್ನು ಮರೆಯಬಾರದು. ಕಾಂಗ್ರೆಸ್ ಪಕ್ಷದ ಮತ್ತು ಇತರ ವಿರೋಧಿ ಪಕ್ಷಗಳ ಕೆಲವು ಸದಸ್ಯರು ರಾಷ್ಟ್ರೀಯ ಐಕ್ಯವನ್ನು ಪ್ರತಿಬಿಂಬಿಸುವ ಮತ್ತು ಅದನ್ನು ಬೆಳೆಸುವ ಮಹಾ ಸಾಹಸಕಾರ್ಯವನ್ನು ಕೈಗೊಳ್ಳುವ ಸಲಹೆ ನೀಡಿದ್ದಾರೆ. ಇದನ್ನು ಎಲ್ಲರೂ ಒಪ್ಪುತ್ತಾರೆ.

ಭಾರತೀಯ ವಿದೇಶೀನೀತಿಯು ಪಂಚಶೀಲದ ತಳಹದಿಯಲ್ಲಿ ರೂಪಿತವಾಗಿದೆ; ಅದು ವಿಫಲವಾದುದು ಕೇವಲ ಚೀನಾದ ವಿಷಯದಲ್ಲಿ ಮಾತ್ರ. ಇದಕ್ಕೆ ಭಾರತದ ನೀತಿಗಿಂತಲೂ ಚೀನಿಯರ ದುರ್ನೀತಿಯೇ ಹೊಣೆ ಎಂಬುದನ್ನು ಇನ್ನೂ ಸಂಪೂರ್ಣವಾಗಿ ಪ್ರಕಟಿಸಿಲ್ಲ ಆದುದರಿಂದಲೇ ಭಾರತವಿಂದು ವಿದೇಶಗಳಿಂದ, ಮಿತ್ರ ರಾಷ್ಟ್ರಗಳಿಂದ ಆವಶ್ಯಕ ಸಾಮಗ್ರಿಗಳನ್ನು ಪಡೆದು ಮಾಡುತ್ತಿದೆಯೇ ಹೊರತು ಪುಕ್ಕಟೆಯಾಗಿ ಪಡೆಯುತ್ತಿಲ್ಲ. ಶಸ್ತ್ರಾಸ್ತ್ರ ಆಕ್ರಮಣವನ್ನು ಎದುರಿಸಲು ಮತ್ತು ಅದನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲು ತಮ್ಮ ಸಮಗ್ರತೆಯನ್ನು ಉಳಿಸಿಕೊಳ್ಳಲು ಭಾರತಕ್ಕೆ ಅಂತಹ ಉಪಕರಣಗಳೂ ಮತ್ತಿತರ ವಿಧದ ನೆರವೂ ಹೆಚ್ಚು ಅಗತ್ಯವಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ನಾವು ಸೂಕ್ತ ವ್ಯವಸ್ಥೆಯನ್ನು ಕೈಗೊಳ್ಳುತ್ತಲಿದ್ದೇವೆ. ಇಂತಹ ಪ್ರಯತ್ನ ಯಶಸ್ವಿಯಾಗುವುದು ಖಂಡಿತ. ಶತ್ರುವು ಮನೆ ಬಾಗಿಲನ್ನು ಮುರಿದು ಒಳ ಮನೆಯನ್ನು ಹೊಗ್ಗುವಂತಹ ಗಂಡಾಂತರ ಸ್ಥಿತಿಯಲ್ಲಿರುವಾಗ, ಬಹಳ ಮುಂಜಾಗ್ರತೆಯನ್ನು ಮಾಡಬೇಕಾಗುತ್ತದೆ. ಮುಖ್ಯವಾಗಿ, ನೇಫಾ ಪ್ರದೇಶದ ವಾಲೊಂಗ್ ನಮ್ಮ ಕೈಬಿಟ್ಟುಹೋದದ್ದು, ಚುಶೂಲು ರುದ್ರ ರಣರಂಗವಾಗಿ ಪರಿಣಮಿಸಿದುದು. ಚುಶೂಲಿನ ಸುತ್ತಮುತ್ತ ತೀವ್ರವಾದ ಹೋರಾಟ ನಡೆಯುತ್ತಿದೆ; ಅದೂ ಒಂದು ವೇಳೆ ನಮ್ಮ ಕೈತಪ್ಪಿ ಹೋಗಲೂ ಬಹುದು. ಆದರೆ, ನಮ್ಮ ಪ್ರಧಾನಿಗಳು ಹೇಳುವಂತೆ ಒಂದೊಂದು ಸೋಲು ನಮ್ಮಲ್ಲಿ ಆಧ್ಯೇರ್ಯವನ್ನು ಹುಟ್ಟಿಸುವ ಬದಲು, ನಾಡಿನ ಸಮಗ್ರತೆಗಾಗಿ ಹೋರಾಟವನ್ನು ಮುಂದುವರಿಸುವ, ಜಯ ಲಭಿಸುವ ವರೆಗೆ ಹೋರಾಡುವ ದೃಢ ನಿಶ್ಚಯತೆಯನ್ನು ಮತ್ತಷ್ಟು ದೃಢಗೊಳಿಸಬೇಕು. ಮೈಕಕೋಹನ ರೇಖೆಯು ಚೀನಾ-ಭೂತಗಳ ಅಂತಾರಾಷ್ಟ್ರೀಯ ಗಡಿ; ಅದು ತ್ರಿಕಾಲಾಬಾಧಿತ. ಆದರೆ, ಕೆಂಪು ಚೀನೀಯರು ಸಾಮ್ರಾಜ್ಯವಾದ ಪ್ರೇರಿತರಾಗಿ, ದುರ್ದೈವೆನಿಸಿದ ಹಿಮೂಲಯವನ್ನೂ ಬೇಧಿಸಿ ಮೆಂದಿ ಬಂದಿದ್ದಾರೆ. ಅವರು ಈ ಒಂದು ತಿಂಗಳಲ್ಲಿ ಮುಂದುವರಿದ ವೇಗವು ಅಲ್ಪ ಮೆಂಬಂತೆ ಕಂಡುಬರಬಹುದು; ಇದಕ್ಕೆ ನಮ್ಮ ಸಂರಕ್ಷಣಾ ದಳದವರ ಅನುಪಮ ಸಾಹಸವೇ ಕಾರಣವೆಂದು ಹೇಳಬೇಕು. ದೇಶದ ರಕ್ಷಣೆಯ ಕಾರ್ಯದಲ್ಲಿ ಅವಶ್ಯವಾದ ನೆರವನ್ನು ನಮ್ಮ ಮಿತ್ರ ರಾಷ್ಟ್ರಗಳಿಂದ ಪಡೆದುಕೊಳ್ಳಲು ನಾವು ಹಿಂಜರಿಯುವುದಿಲ್ಲ ಎಂದ ಪ್ರಧಾನಿಯವರ ಮಾತು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ಈ ನೀತಿಯ ಸಹಾಯವನ್ನು ಪಡೆಯುವ ಸಂಬಂಧದಲ್ಲಿ ಮಾತುಕತೆಗಳು ನಡೆದಿವೆಯೆಂದೂ ತಿಳಿಯುತ್ತದೆ. ಬ್ರಿಟನ್ನಿನಿಂದ ನಮಗೆ ಬೇಕಾದ ಸರ್ವ ವಿಧದ ಸಹಾಯವನ್ನೂ ನಾವು ಪಡೆಯಬಹುದು; ಅಮೆರಿಕೆಯಾದರೂ ಇದೇ ರೀತಿಯಲ್ಲಿ ಮುಂದೆ ಬರಬಹುದು. ಹಾಗೆಯೇ ಉಳಿದ ಕೆಲವೊಂದು ಮಿತ್ರರೂ ನಮಗೆ ಸಹಾಯ ನೀಡುವ ನಿರೀಕ್ಷೆಯಿದೆ.

ಆದರೆ, ನಾವಿಲ್ಲಿ ಒಂದು ಮಾತನ್ನು ನೆನಪಿಟ್ಟುಕೊಳ್ಳಬೇಕು. ವಿದೇಶಗಳಿಂದ ಶತ್ರುವಿನ ಆಕ್ರಮಣವನ್ನೆದುರಿಸಲು ಸಹಾಯ ಪಡೆಯಬಹುದಾದರೂ ಇದರಿಂದ ಜಾಗತಿಕ ವಾತಾವರಣವು ಹೇಗೆ ನಿಂತೀತು ಎಂಬುದನ್ನು ಕೂಲಂಕುಷವಾಗಿ ವಿವೇಚಿಸಿಕೊಳ್ಳಬೇಕು. ಸೋವಿಯತ್ತು ರಶ್ಯವು ತನ್ನ ನಿಲುವೆಯೇನೆಂಬುದನ್ನು ಇನ್ನೂ ಸ್ಪಷ್ಟವಾಗಿ ಪ್ರಕಟಿಸಿಲ್ಲ ಆದುದರಿಂದಲೇ ಭಾರತವಿಂದು ವಿದೇಶಗಳಿಂದ, ಮಿತ್ರ ರಾಷ್ಟ್ರಗಳಿಂದ ಆವಶ್ಯಕ ಸಾಮಗ್ರಿಗಳನ್ನು ಪಡೆದು ಮಾಡುತ್ತಿದೆಯೇ ಹೊರತು ಪುಕ್ಕಟೆಯಾಗಿ ಪಡೆಯುತ್ತಿಲ್ಲ. ಶಸ್ತ್ರಾಸ್ತ್ರ ಆಕ್ರಮಣವನ್ನು ಎದುರಿಸಲು ಮತ್ತು ಅದನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲು ತಮ್ಮ ಸಮಗ್ರತೆಯನ್ನು ಉಳಿಸಿಕೊಳ್ಳಲು ಭಾರತಕ್ಕೆ ಅಂತಹ ಉಪಕರಣಗಳೂ ಮತ್ತಿತರ ವಿಧದ ನೆರವೂ ಹೆಚ್ಚು ಅಗತ್ಯವಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ನಾವು ಸೂಕ್ತ ವ್ಯವಸ್ಥೆಯನ್ನು ಕೈಗೊಳ್ಳುತ್ತಲಿದ್ದೇವೆ. ಇಂತಹ ಪ್ರಯತ್ನ ಯಶಸ್ವಿಯಾಗುವುದು ಖಂಡಿತ. ಶತ್ರುವು ಮನೆ ಬಾಗಿಲನ್ನು ಮುರಿದು ಒಳ ಮನೆಯನ್ನು ಹೊಗ್ಗುವಂತಹ ಗಂಡಾಂತರ ಸ್ಥಿತಿಯಲ್ಲಿರುವಾಗ, ಬಹಳ ಮುಂಜಾಗ್ರತೆಯನ್ನು ಮಾಡಬೇಕಾಗುತ್ತದೆ. ಮುಖ್ಯವಾಗಿ, ನೇಫಾ ಪ್ರದೇಶದ ವಾಲೊಂಗ್ ನಮ್ಮ ಕೈಬಿಟ್ಟುಹೋದದ್ದು, ಅಸ್ಸಾಮಿನ ಎಣ್ಣೆಯ ಬಾವಿಗಳಿಗೆ ಭಯತಟ್ಟಿದೆ. ಚುಶೂಲ್ ಕೂಡ ಗಂಡಾಂತರದ ಹೆಂತದಲ್ಲಿದೆಯೆಂಬುದರಿಂದ ಚೀನೀಯರು ಗುಡ್ಡಗಳನ್ನು ಇಳಿದು ಕಾಡು ಭೂಮಿಗೆ ಬಂದಿರುವರೆಂದು ತಿಳಿಯಬಹುದು; ಮತ್ತೆ ಬಯಲು ನಾಡಿಗೆ ಬರುವುದಕ್ಕೂ ಅವರು ಹಿಂದೆ ಮುಂದೆ ನೋಡಲಾರರು. ಸಮುದ್ರದ ಅಲೆಗಳಂತೆ ನುಗ್ಗಿ ಬರುತ್ತಿರುವ, ಶೆಲ್, ಟ್ಯಾಂಕರ್, ಫಿರಂಗಿ ಮೊದಲಾದ ಪುಗಳನ್ನು ಉಪಯೋಗಿಸಿ ವಂದುವರಿದು ಬರುತ್ತಿರುವ ಚೀನೀಯ ಸಾಮ್ರಾಜ್ಯವಾದಿಗಳ ಅಧಿಕ ಸಂಖ್ಯಾಕ ಸೇನೆಯನ್ನು ನಾಶ ಮಾಡುವುದು, ಹಿಮ್ಮೆಟ್ಟಿಸುವುದು ದಿಟ್ಟತನದ ಕಾರ್ಯ. ಆತ್ಮ ರಕ್ಷಣೆಗಾಗಿ, ಇಂತಹ ದಿಟ್ಟತನವನ್ನು ನಾವಿಂದು ತೋರಿಸಲೇ ಬೇಕಾಗಿದೆ. ನಮ್ಮ ಸರ್ವ ಶಕ್ತಿಯನ್ನೂ ಸಂಚಯಿಸಿಕೊಂಡು, ಮಿತ್ರರಿಂದ ನೆರವನ್ನೂ ಪಡೆದು ಶತ್ರುಗಳನ್ನು ದಮನ ಮಾಡುವ ವರೆಗೆ ನಾವು ವಿಶ್ರಮಿಸಬಾರದು; ವಿಶ್ರಮಿಸುವುದಿಲ್ಲ. ಸತ್ಯ, ಧರ್ಮದ ದಾರಿಯಲ್ಲಿ ನಡೆಯುತ್ತಿರುವ ಭಾರತಕ್ಕೆ ಈ ಆಕ್ರಮಣಕಾರರನ್ನು ಹಿಡೆಗಟ್ಟಲು ಪ್ರಾರಂಭದಲ್ಲಿ ಕಷ್ಟವೆನಿಸಿದರೂ ಇನ್ನು ಕೆಲವೇ ದಿನಗಳಲ್ಲಿ ನಮ್ಮ ಪಡೆಗಳು ಈ ದಿಸೆಯಲ್ಲಿ ಮುಂದಡಿಯಿಡುವ ಶುಭವರ್ತಮಾನ ಬರಲು ಪ್ರಾರಂಭವಾಗಲಿಯೇ ಎಂದು ಧೈರ್ಯವಾಗಿ ಹೇಳಬಹುದು.

ದ್ವಿತೀಯ ವ್ಯೂಹ

ಪ್ರತ್ಯಕ್ಷವಾಗಿ ಸೇನೆಯಲ್ಲಿ ಸೇರಿದ ದಳವು ಸಂರಕ್ಷಣೆಯ ಪ್ರಥಮ ವ್ಯೂಹವೆಂದೂ ಅಪ್ರತ್ಯಕ್ಷವಾದ ಸೈನಿಕ ತರಬೇತಿ ಹೊಂದಿದ ದಳವು ದ್ವಿತೀಯ ವ್ಯೂಹವೆಂದೂ ಕರೆಯಲ್ಪಡುತ್ತದೆ. ಚೀನಾದ ಆಕ್ರಮಣದಿಂದ ನಮ್ಮ ಸಂರಕ್ಷಣೆಯ ಬಗ್ಗೆ ನಾವೀಗ ಹೆಚ್ಚು ಲಕ್ಷ್ಯ ಕೊರೆಯುವ ಸಮಯ ಬಂದಿದೆ. ನಮ್ಮ ದೇಶದಲ್ಲಿ ಈಗಾಗಲೇ ಕಾಲೇಜುಗಳಲ್ಲಿ ಎನ್. ಸಿ. ಸಿ. ಮತ್ತು ಹೈಸ್ಕೂಲುಗಳಲ್ಲಿ ಎ. ಸಿ. ಸಿ ದಳಗಳು ಇವೆ. ಅಲ್ಲಲ್ಲಿ ಲೋಕಸೇನಾ ತರಬೇತಿ ಶಿಬಿರಗಳು ನಡೆಯುತ್ತಿವೆ. ಈ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಸೈನಿಕ ಶಿಕ್ಷಣವನ್ನು ಅನಿವಾರ್ಯಗೊಳಿಸಿ, ಸಂರಕ್ಷಣೆಯ ಎರಡನೆಯ ವ್ಯೂಹವನ್ನು ಬಲಪಡಿಸಬೇಕೆಂಬ ಅಭಿಪ್ರಾಯ ಜನನಾಯಕರಲ್ಲಿ ಮೂಡಿದೆ. ಪ್ರಧಾನಿ ನೆಹರು ಕೂಡ ಇದನ್ನು ಒಪ್ಪಿದ್ದಾರೆ ಇಂದು ೪-೫ ಲಕ್ಷ ತರುಣರು ಎನ್. ಸಿ. ಸಿ. ಯಲ್ಲಿ ಸೇರಿಕೊಂಡಿದ್ದಾರೆ ಇನ್ನು ದೃಢಕಾಯರಾದವರೆಲ್ಲರಿಗೂ ಇದನ್ನು ಅನ್ವಯಿಸಿದರೆ, ಆಗ ಈ ಸಂಖ್ಯೆ ೭ ಲಕ್ಷವದಷ್ಟಾಗುವುದು. ಸರ್ವಸಾಮಾನ್ಯವಾಗಿ ಹೆಚ್ಚಿನ ದೇಶಗಳಲ್ಲಿ ಈ ಪರಿಯ ಏರ್ಪಾಡುಗಳಿವೆ; ಇಲ್ಲವೇ ಸ್ವಯಂ ಪ್ರೇರಣೆಯಿಂದಲೇ ತರುಣರು ಅಧಿಕ ಸಂಖ್ಯೆಯಲ್ಲಿ ಇದನ್ನು ಸೇರಿಕೊಳ್ಳುತ್ತಾರೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಮ್ಮಲ್ಲಿ ನೀಡಲಾಗುತ್ತಿರುವ ಇಂತಹ ತರಬೇತಿಯು ಇನ್ನೂ ಬಾಲ್ಯಾವಸ್ಥೆಯಲ್ಲೇ ಇದೆ ಎನ್ನಬೇಕು. ವಿದೇಶೀ ಆಕ್ರಮಣವನ್ನು ಎದುರಿಸುವಲ್ಲಿ ಗ್ರಾಮಗ್ರಾಮವೂ ಸಂರಕ್ಷಣಾವ್ಯೂಹವಾಗಬೇಕಾದ ಅಗತ್ಯವೆದ್ದು ಬರಬಹುದಾದುದರಿಂದ, ಇಂತಹ ಯೋಜನೆಗಳು ಯಶಸ್ವಿಯಾಗಿ ಕಾರ್ಯಕ್ಕೆ ತರಲ್ಪಡಬೇಕು; ಮಾತ್ರವಲ್ಲ, ನಮ್ಮ ತರುಣರಿಗೆ ನೀಡಿದ, ಮತ್ತು ನೀಡಬಹುದಾದ ಈ ತರಬೇತಿಯಿಂದ ದೇಶಕ್ಕೆ ಲಾಭವಾಗುವುದು ಇಂತಹ ಲಾಭ ತರಲು ನಮ್ಮ ಗುರುಜನಾಂಗ ಹಿಂದೆ ನೋಡದು.

ವಾರ್ತಾವೇದಿಕೆ

ಜವಾಹರಲಾಲ

ಜವಾಹರಲಾಲ ನೆಹರುರವರಿಂದು ದೊಡ್ಡ ಅಗ್ನಿಪರೀಕ್ಷೆಗೆ ಗುರಿಯಾಗಿದ್ದಾರೆ. ಇಡಿಯ ಜಗತ್ತು ಇಂದು ಅವರ ಬಾಯಿಯಿಂದ ಏನು ಬರುತ್ತಿದೆಯೆಂದು ನೋಡುತ್ತದೆ. ನಾವಿಂದು ಸೋಲುಣ್ಣಬೇಕಾಗಿ ಬಂದರೂ, ಹೋರಾಟವು ಅದೆಷ್ಟೇ ತೀವ್ರವಾಗಿದ್ದರೂ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿಯೇ ಬಿಡುತ್ತೇನೆ ಎಂದ ಅವರ ಗಂಭೀರ ಸಿಂಹ ಧ್ವನಿ ಅಖಂಡ ಕೋಟಿ ಭಾರತೀಯರದು. ಭಾರತವು ರಣಕಣವಾಗಿರಬಾರದು ಎಂಬ ಪದುದ್ದೇಶದಿಂದ, ನೆಹರೂ ಇಂದು ವಿಲಕ್ಷಣ ಸಮಸ್ಯೆಗಳನ್ನು ಕಾಣುತಿದ್ದಾರೆ. ಆದರೆ, ಎಂತಹ ಜಟಿಲ ಸಮಸ್ಯೆಯೇ ಬರಲಿ, ಅವನ್ನು ಸರಳವಾಗಿ ಬಿಡಿಸುವ ಒಂದು ಅಪೂರ್ವ ಶಕ್ತಿ-ತಂತ್ರ-ನೈಪುಣ್ಯಗಳಲ್ಲಿವೆ. ಆ ಶಕ್ತಿಯು ಇದು ವರೆಗೂ ಜಯ ಗಳಿಸಿದೆ. ಚೀನೀಯ ಆಕ್ರಮಣವನ್ನು ಹಿಮ್ಮೆಟ್ಟಿಸುವಲ್ಲಿಯೂ ಆಶಕ್ತಿಯೋಚಿಸುತ್ತಿದೆ; ಪದ್ಯದಲ್ಲಿಯೇ ಆದರ ಪ್ರಭಾವವನ್ನು ನಾವು ಕಾಣಲಿದ್ದೇವೆ.

ಯಶವಂತ ಚವನ

ಮೊನ್ನೆಸ್ಸರ ಉತ್ತರಾಧಿಕಾರಿಯಾಗಿ ಬಂದ ವೈ. ಬಿ. ಚವನರು ಯಶವಂತರು. ಮುಂಬಯಿ - ಮಹಾರಾಷ್ಟ್ರಗಳಂತಹ ದೊಡ್ಡ ರಾಜ್ಯವೊಂದರ ಮುಖ್ಯ ಮಂತ್ರಿಯಾದ ಇವರ ಹೆಸರಿಂದು ಜಗಜ್ಜನಿತವಾಗಿದೆ. ಸಂರಕ್ಷಣಾ ಮಂತ್ರಿಯೆನಿಸಿದ ಚವನರು ನೆಹರೂರ ಸಂಪುಟದ ಕೆಲವೇ ಮಂದಿ ಎಳೆಯರಲ್ಲಿ ಒಬ್ಬರೆನ್ನಬಹುದು. ಇವರ ನೇಮಕವು ಎಲ್ಲೆಡೆಯಿಂದಲೂ ಪ್ರಶಂಸಿಸಲ್ಪಟ್ಟಿದೆ. ಮೆಂಚೆಸ್ಟರ್ ಗಾರ್ಡಿಯನ್‌ನಂತಹ ಪತ್ರಿಕೆ ಕೂಡಾ ಇದನ್ನು ಸಂತೋಷದಿಂದ ಕಂಡಿವೆ ಸ್ವಾತಂತ್ರ್ಯರಕ್ಷಣೆಯ ಪವಿತ್ರ ಕಾರ್ಯವು ಚವನರ ಕೈಗೆ ಬಂದ ನಂತರ ಅದರ ಕಸುವು ಹೆಚ್ಚುವುದೆಂದು ಖಂಡಿತಕ್ಕೂ ಹೇಳಬಹುದು. ಭಂಡವಾಳಗಾರರೂ ಮಜೂರರೂ ಒಂದಾಗಿ ಬಾಳುವಂತೆ ಮಾಡಿದ ಚವನರು ಆಯಲುಯುಕ್ಕೆ ಯೂವ ಪ್ರಾಶಸ್ತಯೂರಿಸುವರು? ಎಂದೆಲ್ಲರೂ ಕುತೂಹಲತಾಳಿದ್ದಾರೆ.

ಥಾಪರ್—ಚೌಧುರಿ

ನೆಲ ಸೇನೆಯ ಮಹಾದಂಡನಾಯಕ ಥಾಪರ್‌ರವರು ಆನಾರೋಗ್ಯದ ನಿಮಿತ್ತ ದೀರ್ಘ ಕಾಲದ ರಜೆಯಲ್ಲಿ ಹೋದರು. ಅವರ ಸ್ಥಾನದಲ್ಲಿ ಶ್ರೀ ಚೌಧುರಿಯವರು ನಿಯುಕ್ತರಾಗಿದ್ದಾರೆ. ಹೈದರಾಬಾದಿನ ನೈಜಾಮರಾಡಿದ ಆಟವನ್ನು ಏಕಕ್ಷಣದಲ್ಲಿ ಬಯಲಿಗೆ ಹಚ್ಚಿದ ಆದನ್ನು ನಿಲ್ಲಿಸಿದ ಕೀರ್ತಿ ಅವರದು. ಅದೇ ಚೌಧುರಿ ಇಂದು ಸಂಘಿಗ್ಧ ಸರಿಸ್ಥಿತಿಯಲ್ಲಿ ಅಧಿಕಾರ ಪಡೆದಿದ್ದಾರೆ. ಕಾರ್ಯಸ್ಫ—ತಿಮ್ಮಯ್ಯನವರು ಹಾಕಿಕೊಟ್ಟ ಸತ್ಯನೂರ್ಗದಲ್ಲಿ ಮುಂದುವರಿದು ಶ್ರೀ ಚೌಧುರಿ ಯಶಸ್ಸು ಪಡೆಯು

(೭ನೇ ಪುಟ ನೋಡಿರಿ)

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಮಹಿಳಾ ಸಮಾಜದ ಆದರ್ಶ— ಉಡುಪಿ ಮಹಿಳಾ ಸಮಾಜದವರು ಮುಖ್ಯವಾಗಿ, ಶ್ರೀಮತಿಯವರಾದ ಮನೋರಮಾ ಆಚಾರ್ಯ, ಲೀಲಾವತಿ ಎಂ. ಪೈ, ಅನುಸೂಯ ಬಿ ಶೆಟ್ಟಿ, ಜಲಜಮ್ಮ ಇವರ ಪರಿಶ್ರಮದಿಂದ ರಾ. ರೆಡ್‌ಕ್ರಾಸ್ ನಿಧಿಗೆ ಸಂಗ್ರಹಿಸಲಾದ ಸುಮಾರು 175 ಪವನುಗಳಷ್ಟು (ರೂ. 15000) ಚಿನ್ನವನ್ನು ಇದೇ ತಾ. 16ರಂದು ಉಡುಪಿ ಮಹಿಳಾ ಸಮಾಜದ ಕಟ್ಟಡದಲ್ಲಿ ಏರ್ಪಡಿಸಲಾದ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಶ್ರೀ ಸಿ ಜೆ. ಪದ್ಮನಾಭ ಅವರಿಗೆ ಒಪ್ಪಿಸಲಾಯಿತು. ಶ್ರೀಮತಿ ಜಲಜಮ್ಮ ನವರು ಸ್ವಾಗತಿಸಿದರು, ಶ್ರೀಮತಿ ಅನುಸೂಯ ಬಿ. ಶೆಟ್ಟಿಯವರು ವರದಿಯನ್ನೊಪ್ಪಿಸುತ್ತಾ ಮಹಿಳೆಯರೇ ಸಂಗ್ರಹಿಸಿದ ಈ ದೊಡ್ಡ ನಿಧಿಗೆ ಸಹೋದರಿಯರು ಸ್ವಇಚ್ಛೋದಾರದಿಂದ ಬಂಗಾರ ದಾನ ನೂಡಿರುವರೆಂದೂ, ಭಾರತ ಮಹಿಳೆಯರು ಹಿಂದಿನಿಂದಲೂ ರಾ. ರೆಡ್‌ಕ್ರಾಸ್ ಕಾರ್ಯದಲ್ಲಿಯೂ ದೇಶಪ್ರೇಮದಲ್ಲಿಯೂ ಹಿಂದುಳಿದಿಲ್ಲವೆಂದೂ ಹೇಳಿದರು. ಶ್ರೀಗಳಾದ ಎಸ್. ಡಿ ಪೆಜತ್ತಾಯ, ರಾಜಶೇಖರಯ್ಯನವರೂ ಮಹಿಳಾ ಸಮಾಜದ ಆದರ್ಶವನ್ನು ಶ್ಲಾಘಿಸಿದರು. ಜಿಲ್ಲಾಧಿಕಾರಿಗಳು ಚಿನ್ನವನ್ನು ಸ್ವೀಕರಿಸುತ್ತ ಅತ್ಯಧಿಕ ಚಿನ್ನ ಸಂಗ್ರಹಿಸಿದ ಮಹಿಳಾ ಸಮಾಜಕ್ಕೆ ಕೃತಜ್ಞತೆ ಸೂಚಿಸಿದರು. ಕೊನೆಗೆ ಶ್ರೀಮತಿ ಪತ್ಮಲಾ ರಾಯರು ಆಭಾರ ಮನ್ನಣೆಗೈದರು.

ಉಡುಪಿ ನಗರ ಸಭಾಧ್ಯಕ್ಷರ ಆಯ್ಕೆ— ಇದೇ ತಾ. 15ನೇ ಬೆಳಿಗ್ಗೆ ಉಡುಪಿ ನಗರ ಸಭಾಧ್ಯಕ್ಷರ ಚುನಾವಣೆಯು ಕುಂದಾಪುರದ ಜಾ॥ ಕಮಿಷನರ್ ಶ್ರೀ ಟಿ. ಜಿ. ಬಂಗೇರ ಅವರ ನೇತೃತ್ವದಲ್ಲಿ ಜರಗಿತು. ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ವಕೀಲ ಶ್ರೀ ರಂಗನಾಥ ಶೆಣೈ, ಸ್ವತಂತ್ರ ಗುಂಪಿನ ಶ್ರೀ ಎನ್. ಸೀತಾರಾಮ್ ಕಾಮತ್, ಇವರೊಳಗೆ ಚುನಾವಣೆ ನಡೆದು ಅನುಕ್ರಮವಾಗಿ 11 ಮತ್ತು 7 ಮತಗಳು ದೊರಕಿ ಶ್ರೀ ರಂಗನಾಥ ಶೆಣೈಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಹೊಸ ಅಧ್ಯಕ್ಷರನ್ನು ಅಭಿನಂದಿಸಿ ಶ್ರೀಗಳಾದ ಎನ್. ಸೀತಾರಾಮ್ ಕಾಮತ್, ಮಾಜಿ ನಗರ ಸಭಾಪತಿ ಕೆ. ಕೆ. ಪೈ, ಓ ನೈಕ್ಕಾ, ಎ ಅಪ್ಪಾಜಿ ರಾವ್, ಆರ್. ಪಾಂಗಣ್ಣಯ, ಎಂ ವಿಠಲ ಶೆಟ್ಟಿ, ಟಿ. ದೇವದಾಸ ಪೈ ಮೊದಲಾದವರು ಮಾತನಾಡಿದರು. ಮುನ್ಸಿಪಲ್ ಕಮಿಶನರ್ ಶ್ರೀ ಜೋಶ್ವಾ, ಆ॥ ಕಮಿಶನರ್ ಟಿ. ಬಿ. ಬಂಗೇರ ಇವರು ಮಾತನಾಡಿದ ಬಳಿಕ ನೂತನ ನಗರ ಸಭಾಧಿಪತಿ ಶ್ರೀ ರಂಗನಾಥ ಶೆಣೈಯವರು ಕೃತಜ್ಞತೆಯನ್ನು ಸೂಚಿಸಿ ಸರ್ವರ ಸಹಕಾರ ಕೋರಿದರು ಆಖ್ಖದ ಚೀನಾದ ದುರಾಕ್ರಮಣವನ್ನು ಹಿಮ್ಮೆಟ್ಟಿಸುವ ನಮ್ಮ ಸರಕಾರದ ನಿಲುಮೆಗೆ ಬೆಂಬಲ ಕೊಡಬೇಕೆನ್ನುವ ಸಾಮಾನ್ಯ ನೆಯನ್ನು ಮಂಡಿಸಲಾಗಿ ಅದು ಸರ್ವಾನುಮತದಿಂದ ಪೂರ್ಣವಾಯಿತು.

ಮಂಗಳೂರು ನಗರ ಸಭಾಧ್ಯಕ್ಷರ ಆಯ್ಕೆ— ಇದೇ ತಾ 14ರಂದು ಮಂಗಳೂರು ನಗರ ಸಭೆಯ ಅಧ್ಯಕ್ಷರಾಗಿ ಜಿಲ್ಲೆಯ ಹಿರಿಯ ಪ್ರತಿಭಾಶಾಲಿ ವಕೀಲರೂ, ಜಿಲ್ಲಾ ಸ್ಕೌಟ್ ಕಮಿಶನರೂ, ಲಯನ್ಸ್ ಕ್ಲಬ್ಬಿನ ಅಧ್ಯಕ್ಷರೂ ಆಗಿದ್ದು ವಿವಿಧ ಸಾರ್ವಜನಿಕ ರಂಗಗಳಲ್ಲಿ ದುಡಿದು ಅನುಭವಶಾಲಿಗಳೂ ಆದ ಜಿ. ಸೋಮಶೇಖರ ರಾಯರು ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ. ಎಕ್ಸ್ ಒಫೀಶಿಯೋ ಚೆಯರ್‌ಮೆನ್, ಆ॥ ಕಮಿಶನರ್ ಶ್ರೀ ಎಫ್. ಎಂ ಮಿನೇಜಸ್ ಇವರ ನೇತೃತ್ವದಲ್ಲಿ ಚುನಾವಣೆ ನಡೆಯಿತು. ಹೊಸ ಅಧ್ಯಕ್ಷರಿಗೆ ಅಭಿನಂದನೆಗಳನ್ನು ಸಲ್ಲಿಸಿ ಶ್ರೀಗಳಾದ ಕೆ. ವಿಶ್ವನಾಥ ಕಾಮತ್, ಎ. ಶಾಂತಾರಾಂ ಪೈ, ವಿ. ಎಫ್. ರೊಡ್ರಿಗ್ಸ್, ಕೆ. ಜಿ. ಪಟಿಕ್ಕರ್, ಎಸ್. ಎಂ. ಶೆಣೈ, ಎ. ಆನಂದ ಶೆಟ್ಟಿ, ರಾಮರಾಜ ಕಣಿ, ಶ್ರೀಮತಿ ಮೀನಾ ಟಾಯಸ್, ಶ್ರೀಮತಿ ಲೀಲಾಬಾಯಿ ಬಾಳಿಗ ಮೊದಲಾದವರು ಮಾತನಾಡಿದರು. ಶ್ರೀ ಸೋಮಶೇಖರರಾಯರು ಕೃತಜ್ಞತೆಗಳನ್ನು ಸಲ್ಲಿಸಿ ಸರ್ವರ ಸಹಕಾರ ಕೋರಿದರು.

ದಿ| ಎ. ಬಿ ಶೆಟ್ಟರ ಅಗಲಿದ ಜನ್ಮದಿನಾಚರಣೆಯು— ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಪೆಂಕಜ್ಜ ಪೂಂಜ ಸಭಾಸದನದಲ್ಲಿ ನೂತನ ನಗರ ಸಭಾಪತಿ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಪಿ ಎಸ್. ತಿಮ್ಮಪ್ಪ ಶೆಟ್ಟರು ಸ್ವಾಗತಿಸಿದ ಬಳಿಕ ಶ್ರೀಗಳಾದ ಎಂ. ಎಸ್. ಮೂಧವರಾವ್, ಡಾ| ಕೊಯಿರೋ, ಡಾ| ಕೆ ಪಿ. ಗಣೇಶನ್, ಶ್ರೀ ಎಸ್. ರಮಾನಂದ ಹೆಗ್ಡೆ ಮೊದಲಾದವರು ದಿವಂಗತ ಶೆಟ್ಟರ ವ್ಯಾಸಂಗ, ವಾಚಿನಾಭಿರುಚಿ, ಸರಳ ಜೀವನ, ಆದರ್ಶ ವ್ಯಕ್ತಿತ್ವ, ವೈದ್ಯಕೀಯ ವಿಭಾಗದಲ್ಲಿ ಸಲ್ಲಿಸಿದ ಸೇವೆ, ಗಳಿಸಿದ ಜನಸ್ತ್ರೀಯತೆ, ಮೂಡಿದ ಜನತಾ ಸೇವೆ ಮೊದಲಾದುವನ್ನು ವಿವರಿಸಿ ಭಾಷಣ ಮಾಡಿದರು ಅಧ್ಯಕ್ಷರು ದಿವಂಗತರ ಹಿರಿಯ ಗುಣಗಳನ್ನು ವಿವರಿಸಿ ತಮಗೆ ಅವರ ಮೇಲಿದ್ದ ವಿಶೇಷ ಪ್ರೀತಿ ರಾಗಾಗಿ ಮತೆಯನ್ನು ಶ್ರುತಪಡಿಸಿದರು.

ಶ್ರೀ ಸಿ ಎಸ್. ತಿಮ್ಮಪ್ಪ ಶೆಟ್ಟಿರ ಸೂಚನೆಯಂತೆ ಚೀನಾ ಆಕ್ರಮಣದ ವಿರುದ್ಧ ಹೋರಾಟದ ಪ್ರತಿಜ್ಞೆಯನ್ನು ಸ್ವೀಕರಿಸಿದ ಬಳಿಕ ಶ್ರೀ ಕೆ ಲಕ್ಷ್ಮೀನಾರಾಯಣ ರೈಗಳು ವಂದನೆಯನ್ನರ್ಪಿಸಿದರು.

ರೋಟರಿಸಭೆಯಲ್ಲಿ ಡಾ| ಮಂಜುನಾಥ ರೈಯವರು— ಮೂರು ನಾಲ್ಕು ತಿಂಗಳ ಕಾಲ ವಿದೇಶ ಪ್ರವಾಸ ಕೈಗೊಂಡು, ಮೋಸ್ಕೋದಲ್ಲಿ ಜರಗಿದ ಜಾಗತಿಕ ಕ್ಯಾನ್ಸರ್ ಸಮ್ಮೇಲನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿ ಹಿಂತಿರುಗಿ ಬಂದಿರುವ ಪ್ರಸಿದ್ಧ ಕ್ಯಾನ್ಸರ್ ತಜ್ಞರಾದ ಡಾ| ಕೆ. ಮಂಜುನಾಥ ರೈಯವರು ಇದೇ ತಾ. 15ರಂದು ಮಂಗಳೂರು ರೋಟರೀ ಕ್ಲಬ್ಬಿನ ಸಭೆಯಲ್ಲಿ ಭಾಷಣ ಮಾಡುತ್ತಾ ೀಸುವುರು ೬ ಸಾವಿರ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದೆ, ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ಆದ್ಯತ ರೀತಿಯ ಕಾರ್ಯ ನೂಡಿತ್ತೆಂದೂ ಕ್ಯಾನ್ಸರ್ ರೋಗದ ಅತ್ಯಾಧುನಿಕ ಚಿಕಿತ್ಸಾ ವಿಧಾನಗಳನ್ನು ತಿಳಿಯುವುದರ ಕೊಂದಿಗೆ ಉಕ್ಕಿನ ಪರದೆಯ ಹಿಂದಿರುವ ರಾಷ್ಟ್ರದ ಜನಜೀವನವನ್ನು ಅವಲೋಕಿಸುವ ಆವಕಾಶ ಸಿಕ್ಕಿತೆಂದೂ, ರಷ್ಯವು ಎಲ್ಲಾ ವಿಭಾಗಗಳಲ್ಲಿಯೂ ಸಾಧಿಸಿರುವ ಪ್ರಗತಿ ಆತ್ಮ ದೃತವಾದದ್ದೆಂದೂ, 560 ಎಕ್ರೆ ವಿಶಾಲ ಪ್ರದೇಶದಲ್ಲಿ ನಿರ್ಮಾಣವಾಗಿರುವ ಅತ್ಯಾಧುನಿಕ ಆಸ್ಪತ್ರೆ ಪ್ರದರ್ಶನಾಲಯ ಇದಕ್ಕೆ ಸಾಕ್ಷಿ ಎಂದು ಅವರೆ ಅಲ್ಲಿಯ ಜನತೆಯಲ್ಲಿ ಅನಂದೋತ್ಸಾಹ ಇಲ್ಲವೆಂದೂ, ಅಲ್ಲಿ ಅವರವರ ಇಚ್ಛೆಯಂತೆ ಕಾರ್ಖ ಮಾಡುವ ಸ್ವಾತಂತ್ರ್ಯವಿಲ್ಲವೆಂದೂ ನೋಸ್ಕೋವಂತಹ ಮಹಾ ಪಟ್ಟಣಗಳಿಂದ ಹೊಗೆ ರಕ್ಷಸರು ಪ್ರಚಾರ ಮಾಡುವಂತಹ ಅಭಿವೃದ್ಧಿ, ಯೂ ಸಾಕಾರ್ಯಗಳು ಜನತೆಗಿಲ್ಲವೆಂದೂ ಹೇಳಿದರು

ಪಶ್ಚಿಮ ಜರ್ಮನಿಯು ಎಲ್ಲಾ ಕೇಂದ್ರಗಳಲ್ಲಿಯೂ ಕೌತುಕರ ಪ್ರಗತಿ ಸಾಧಿಸಿರುವುದೆಂದೂ ಅಲ್ಲಿ ಅಭಿವೃದ್ಧಿ ಕಾರ್ಯಗಳಿಗೂ, ಸಂಶೋಧನೆಗಳಿಗೂ ವಿಪುಲ ಹಣ ವೆಚ್ಚ ವಾಗುತ್ತದೆಂದೂ ಹೇಳಿ ತಾವು ಸಂದರ್ಶಿಸಿದ ಬೇರೆ ಬೇರೆ ನಗರಗಳಲ್ಲಿನ ಅನುಭವಗಳನ್ನು ವಿವರಿಸಿದರು. ಆರಂಭದಲ್ಲಿ ಶ್ರೀ ಯು. ಆರ್ ಮಲ್ಯರು ರೋಟೇ ಪೌಂಡೇಶನ್ ವಿಷಯ ಕುರಿತು ಮಾತನಾಡಿದರು ಡಾ. ಎ. ವಿ. ಬೈಲೂರರು ಸ್ವಾಗತಭಾಷಣ ಮಾಡಿದರು. ಅಂತ್ಯದಲ್ಲಿ ಡಾ. ಕೆ. ಪಿ. ಗಣೇಶನ್‌ರವರು ಧನ್ಯವಾದಗಳನ್ನರ್ಪಿಸಿದರು.

ಸಸ್ತಹೀರಕಾಗಿ ವಿದೇಶಪ್ರವಾಸ ಕೈಗೊಂಡಿದ್ದ ಡಾ| ರೈಗಳು ತಾ. 8ರಂದು ಮದ್ರಾಸಿಗೆ ಆಗಮಿಸಿ ತಾ 14ರಂದು ಮಂಗಳೂರಿಗೆ ಬಂದಿದ್ದರು. ಮಂಗಳೂರಲ್ಲಿ ಒಂದು ವಾರ ವಿದ್ದು ತಾ.21ರಂದು ಮದ್ರಾಸಿಗೆ ತೆರಳಿದರು

ರಕ್ಷಣಾ ದಿನ ಚರಣೆ— ಉಡುಪಿ ಮೊದರ್ನ್, ಹಾ. ಎ. ಬಾಲಿಯಲ್ಲಿ ಇದೇ ತಾ. 14ರಂದು ನೆಹರೂ ಜಯಂತಿ, ರಕ್ಷಣಾ ದಿನಾಚರಣೆಯು ಮೆನೆಜರ್, ಕೆ. ಜನಾರ್ದ್ಧಾ ನಾಯಕರ ಅಧ್ಯಕ್ಷತೆಯಲ್ಲಿ ಜರಗಿ, ಭಾಷಣಗಳಾಗಿ, ಮಕ್ಕಳಿಂದ ವಂತಿಗೆಯಾದ ರೂ 106.20ನ್ನೂ ಅಧ್ಯಾಪಕರ ಒಂದು ದಿನದ ವೇತನವೆಂಬು ರೂ. 49.03ನ್ನೂ ಒಟ್ಟು ರೂಪಾ 155.23ನ್ನೂ ರಕ್ಷಣಾ ನಿಧಿಗೆ ಕಳುಹಿಸಲಾಯಿತು.

ಉಡುಪಿ ಹರಿಜನ ಹುಡುಗಿಯರ ಬೋರ್ಡಿಂಗ್— ಇದನ್ನು ಇತ್ತೀಚಿಗೆ ಮುಚ್ಚಲಾಗಿದೆಯೆಂದೂ ಸಂಬಂಧಪಟ್ಟವರು ಇನ್ನಾದರೂ ಈ ಬಗ್ಗೆ ಶೀಘ್ರ ವ್ಯವಸ್ಥೆ ಕೈಕೊಳ್ಳ ಬೇಕೆಂದೂ ಮುನ್ಸಿಪಲ್ ಕೌನ್ಸಿಲರ್ ಯ ಗೋವಿಂದಾಲಕೃಷ್ಣಸವರು ಬರೆಯುತ್ತಾರೆ

ಶ್ರೀ ಎ ಬಿ. ಶೆಟ್ಟಿಯವರು ನಿಧನ ದಿಂದ ಮರಳಿದರು— ಕೆನರಾ ಬ್ಯಾಂಕ್ ಲಿಮಿಟೆಡ್‌ನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ. ರಾಮೋದರ ಶೆಟ್ಟಿಯವರು ತಮ್ಮ ರಕ್ಷ್ಯಾ, ಮತ್ತಿತರ ಪೂರ್ವ ಯುರೋಪ್ ರಾಷ್ಟ್ರಗಳ ಪ್ರವಾಸ ಮುಗಿಸಿ ಇದೇ ತಾ 13ರಂದು ಬೆಂಗಳೂರಿಗೆ ಹಿಂದಿರುಗಿ ಬಂದಿರುವರು.

72 ತಾಸಿನ ಸೈಕಲ್ ವಿಕ್ರಮ— ವನ್ನು ಪ್ರದರ್ಶಿಸಿದ ಪೆರ್ಡೂರು ಸುಂದರ ಶೆಟ್ಟರವರಿಗೆ ಉಡುಪಿ ವಿಕ್ಟೋರಿಯಾ ಜ್ಯುಬಿಲೀ ಕ್ಲಬ್ಬಿನ ವರಾದರವಲ್ಲಿ ನೆಗರ ಸಭಾಪತಿ ಶ್ರೀ ಪಿ ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ತಾ. 18ನೇ ಸಂಜೆ ಗೌರವ ಸನ್ಮಾನ ಜರಗಿತು.

ಜೀವನಿಮಾ ಕಾರ್ಪೊರೇಶನ್‌ನಲ್ಲಿ— ಉಡುಪಿ ಡಿವಿಜನ್ ಆಫೀಸಿನ ಸುಪರಿಂಟೆಂಡೆಂಟರಾಗಿದ್ದ ಶ್ರೀ ಎಸ್.ವಿ.ರಾಮದಾಸರಿಗೆ ವೆಲ್ಲೂರಿಗೆ ವರ್ಗವಾದ್ದರಿಂದ ಅವರನ್ನು ಬೀಳ್ಕೊಡುವ ಸಮಾರಂಭವು ಇದೇ ತಾ. 15ರಂದು ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ ಆರ್ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಹಲವರಿಂದ ಶ್ರೀ ರಾಮದಾಸರ ಗುಣಕಥನಗಳಾದವು.

ನಿಧನ— ಉಡುಪಿಯ ಹಿರಿಯ ದಸ್ತಾವೇಜು ಬರಹಗಾರರಾದ ಶ್ರೀ ಪರೀಕ ಕೃಷ್ಣಯ್ಯ ಹೆಗ್ಡೆಯವರು ಅಲ್ಪಾವಧಿಯ ಅಸ್ವಸ್ಥತೆಯಿಂದ ಇದೇ ತಾ 16ರಂದು ದೈವಾಧೀನರಾದರು ದಿನನಿತ್ಯವೂ ತಮ್ಮ ಉದ್ಯೋಗದ ಬಲ್ಲಿ ದೀರ್ಘ ಕಾಲದ ಅನುಭವಿಕರೂ ಸತತ ಪರಿಶ್ರಮಿಗಳೂ, ನಿರ್ಭೀತ ನುನೋತ್ಸಾಹಿಯ ವರೂ ಆಗಿದ್ದು ಜನಪ್ರಿಯರಾಗಿದ್ದರು. ಇವರ ಅಂತಿಮ ಕ್ರಿಯೆಯಲ್ಲಿ ಜಾ-, ಪರಿಚಾತಿಯ ಗಣ್ಯರನೇಕರು ಭಾಗವಹಿಸಿದ್ದರು

ಉಡುಪಿ ಸರಕಾರಿ ಆಸ್ಪತ್ರೆಯಲ್ಲಿ— ಇದೇ ತಾ. 14ರಂದು ಶ್ರೀಮತಿ ಎಲ್. ಎಂ. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಮಕ್ಕಳ ದಿನಾಚರಣೆಯು ಜರಗಿತು ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಡಾ| ಚಿಂಗಲ್‌ರಾಯ ಗೌರರು ಸಿಹಿ ತಿಂಡಿ ನಿತರಣೆ ಮಾಡಿದ ಬಳಿಕ ಸಭೆ ಜರಗಿತು ಶ್ರೀ ಡಿ. ಎಲ್. ನಾಗೆಯವರು ಸ್ವಾಗತಿಸಿದರು. ಆಸ್ಪತ್ರೆಯರು ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿ ಮುಂದಿನ ಜನಾಂಗವಾದ ಮಕ್ಕಳ ಭವಿಷ್ಯವನ್ನು ರೂಪಿಸುವುದು ನಮ್ಮ ಕರ್ತವ್ಯವೆಂದೂ ಇದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನೆಹರೂರವರಿಗೆ ಸಂಪೂರ್ಣ ಬೆಂಬಲ ಕೊಡುವುದು ನಮ್ಮ ಹೊಣೆ ಎಂದೂ ಹೇಳಿದರು. ಈ ಕಾರ್ಯಕ್ರಮದ ಮುಖ್ಯ ಯೋಜಕರಾದ ಮಿಡಿಕಲ್ ಆಫೀಸರ್, ಡಾ. ಎಂ. ಸದಾನಂದ ಶೆಟ್ಟರು ಧನ್ಯವಾದ ಸಮರ್ಪಣೆಗೈದರು. ಕೊನೆಗೆ ಶ್ರೀಮತಿ ಪತ್ಮಲಾ ರಾಯರು ಆಭಾರ ಮನ್ನಣೆಗೈದರು.

ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರು— ತಾ. 15ರಿಂದ 18ರ ವರೆಗೆ ರಾಷ್ಟ್ರೀಯ ರಕ್ಷಣಾ ನಿಧಿಗೆ ಧನ ಸಂಗ್ರಹಿಸುವ ಪ್ರಚಾರ ಪ್ರವಾಸಕೈಗೊಂಡು ದ ಕ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಂಚರಿಸಿ ಸಭೆ, ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತೀರ್ಥಳ 18ರಂದು ಬೆಂಗಳೂರಿಗೆ ತೆರಳಿದರು.

(ಒನೇ ಪುಟದಿಂದ)

ತ್ತಾರೆ. ದಬ್ಬಾಳಿಕೆಗಾರರನ್ನು ಸಂಪೂರ್ಣ ಹಿಮ್ಮೆಟ್ಟಿಸುವ ಮಹಾ ಕಾರ್ಯದಲ್ಲಿನ ಯಶಾಪಯಶಗಳು ಆಗ ಕೋಟಿ ಭಾರತೀಯ ಯಶ-ಅಪಯಶವೆಂಬುದನ್ನು ಚಾಣಾಧುರಿಯವರು ಅರಿತೇ ತನ್ನ ಹೊಸ ಪುಟ್ಟಿಗೆ ಬಂದಿದ್ದಾರೆ.

ಕೆನ್ನೆಥ್ ಗಾಲ್‌ಬ್ರೈಥ್— ನವದೆಹಲಿಯಲ್ಲಿರುವ ಅಮೇರಿಕನ್ ರಾಯಭಾರಿ ಪ್ರೊ| ಗಾಲ್‌ಬ್ರೈಥ್ ಭಾರತದ ವಿಷಯದಲ್ಲಿ ಕಾಳಜಿ ವಹಿಸುತ್ತಿರುವವರು. ಗೋವಾ ವಿಮೋಚನೆಯನ್ನು ಅವರಾಧನೆಯಾ ಡಣಾ ಡಂಗಿ ಹೇಳುತ್ತಿದ್ದ ಅಮೆರಿಕನ್ ರಾಷ್ಟ್ರನಾಯಕರ ಮನಸ್ಸಿನಲ್ಲಿ ಕಲಂಕವನ್ನು ಸ್ಥಾಪನಾದರೂ ತೊಳೆದವರೆಂದರೆ, ಗಾಲ್‌ಬ್ರೈಥ್ ದೀರ್ಘದೇಹಿಯೆನಿಸಿದ ಇವರ ಬದ್ಧಿಶಕ್ತಿಯೂ ದೀರ್ಘ. ಭಾರತಕ್ಕೆ ಚೀನೀಯ ಆಕ್ರಮಣವನ್ನು ಎದುರಿಸಲು ಅಮೆರಿಕೆಯೆಶಸ್ತ್ರಾಸ್ತ್ರಗಳನ್ನು ಕೊಡತೊಡುವುದನ್ನು ಬಲವಾಗಿ ವಿರೋಧಿಸುತ್ತಿರುವ ಪಾಕಿಸ್ತಾನಕ್ಕೆ ಅವರು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ ಭಾರತವಿದ್ದರೆ ತಾನೇ ಪಾಕಿಸ್ತಾನವೆ ಅಸ್ತಿತ್ವ? ಆನ್ಯೇಯ ವಿಶ್ಯಾದ ನಾಯಕ ಭಾರತತ್ವ ಕಮ್ಯುನಿಷ್ಟ್ ಪಾದಲಿಕತನಾಯಿತೆಂದರೆ, ಪಾಕಿಸ್ತಾನದ ತಿರು ಬೊಬ್ಬೆ ಕೇಳಲು ಅವಕಾಶವೆಲ್ಲಿ? ಎಂತಲೇ ಭಾರತರಕ್ಷಣೆಗೆ ಮೂತ್ರವಲ್ಲ, ಪಾಕ್ ರಕ್ಷಣೆಗೂ ಈ ಸಹಾಯವೆಂದಿದ್ದಾರೆ ಅವರು.

ಚೌ ಎನ್‌ಲಾಯ್— ಅಸತ್ಯವನ್ನಾಡುವವನ್ನು ಅನ್ಯಾಯವನ್ನಾಚರಿಸುವವನನು ತನ್ನ ಕೃತಿಯನ್ನು ಸಮರ್ಥಿಸಲು ತುಂಬ ಮಾತಾಡಬೇಕಾಗುತ್ತದೆ. ಇಂದು ಪೀಕಿಂಗ್ ವಿದೇಶಾಂಗ ಸ್ಥಿತಿಯಲುಂಟಾಗಿರುವುದು ಉಜ್ವಲ ನಿದರ್ಶನದಂತಿದೆ. ಭಾರತದೊಳಗೆ ಚೀನೀಯರು ನೊಡನೆ ಹೋರಾಡಲು ಬೆಂಬಲವಿಲ್ಲವೆಂಬುದೂ ಅದರ ಪ್ರಚಾರವೆ ವೈಖರಿ. ಪ್ರತಿ ಭಾರತೀಯನೂ ಕೆಂಪು ಚೀನೀಯರನ್ನು ಹೊಡೆದಟ್ಟಿಸದೆ ನುಮ್ಮನಿರೆನೆಂಬ ಪ್ರತಿಜ್ಞೆಗೆಯ್ದುದು ಲೋಕಕ್ಕೆ ಗೊತ್ತಿದೆ; ಆದರೆ ಪೀಕಿಂಗ್ ಇನ್ನೂ ಆದನ್ನು ಅರಿತುಕೊಂಡಿಲ್ಲ. ಲಾರ್ಯಯವರು ಸಂಧಾನದ ಸೂತ್ರಗಳನ್ನು ಎಡಗೈಯಲ್ಲಿ ನವದೆಹಲಿಗೆ ಕಳಿಸುತ್ತಾ ರಿ ಬಲಗೈಯಲ್ಲಿ ನೇಫಾ — ಲಡಖ್ ಗಳ ಮೇಲೆ ಗುಂಡಿನ ಸೇನೆಯನ್ನೂ ರವಾನಿಸುತ್ತಿರುವ ಇಂತಹ ಮಾತಿಲ್ಲದ, ಸತ್ಯವಿಲ್ಲದ ಲಾರ್ಯ ಒಂದು ಪಾಠವನ್ನು ನೆನೆಪಿಡಬೇಕು; ಭಾರತೀಯರು ನ್ಯಾಯನಿಷ್ಠರು. ಅವರು ಪ್ರಾರಂಭದಲ್ಲಿ ಹಿನ್ನಡೆಯ ಬೇಕಾಗಿ ಬಂದರೂ ಅಂತಿಮವಾಗಿ ರಕ್ಷಸ.

ಸ್ಟೇಟ್ ಬೇಂಕ್ ಆಫ್ ಇಂಡಿಯಾದ ಚೆಕ್ ಮೂಲಕ ಇದೇ ತಾ. 16ರಂದು ಆರೋಗ್ಯ ಮಂತ್ರಿ ಡಾ. ಕೆ. ನಾಗಪ್ಪ ಆಳ್ವರಿಗೆ ಒಪ್ಪಿಸಿರುವರು.

ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರು— ತಾ. 15ರಿಂದ 18ರ ವರೆಗೆ ರಾಷ್ಟ್ರೀಯ ರಕ್ಷಣಾ ನಿಧಿಗೆ ಧನ ಸಂಗ್ರಹಿಸುವ ಪ್ರಚಾರ ಪ್ರವಾಸಕೈಗೊಂಡು ದ ಕ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಂಚರಿಸಿ ಸಭೆ, ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತೀರ್ಥಳ 18ರಂದು ಬೆಂಗಳೂರಿಗೆ ತೆರಳಿದರು.

ನೀತಿಕತೆ

"ಭಕ್ತಿಯಿಂದ ಮುಕ್ತಿ"

ಒಂದೂರು. ಅಲ್ಲೊಬ್ಬ ಬಡ ಬ್ರಾಹ್ಮಣನಿದ್ದನು. ಅದೇ ಊರಿನಲ್ಲಿಯೇ ಮತ್ತೊಬ್ಬ ಧನಿಕನಿದ್ದನು. ಬಡ ಬ್ರಾಹ್ಮಣನು ಪ್ರತಿನಿತ್ಯವು ದೇವರ ಭಜನೆ ಮಾಡಿ ಭಿಕ್ಷೆಯನ್ನು ಬೇಡಿ ಬಂದಿರುವ ಭಿಕ್ಷೆಯಿಂದ ಇಬ್ಬರು ಅತಿಥಿಗಳಿಗೆ ಊಟ ಹಾಕಿ ಉಳಿದದ್ದನ್ನು ತಾನು ಊಟ ಮಾಡಿ ತೃಪ್ತಿಪಡುತ್ತಿದ್ದನು. ಇದು ಅವನ ಪ್ರತಿ ನಿತ್ಯಕ್ರಮವಾಗಿತ್ತು.

ಹೀಗಿರುವಾಗ ಒಂದು ದಿನ ಕೈಲಾಸದಲ್ಲಿ ಪಾರ್ವತಿ ಪರಮೇಶ್ವರರಿಗೆ ಸುಮ್ಮನೆ ಕುಳಿತಿರಲು ಬೇಜಾರಾಗಿ ಭೂಲೋಕವನ್ನಾದರೂ ಸುತ್ತಿಕೊಂಡು ಬರೋಣವೆಂದು ಮೂರು ವೇಶದಿಂದ ಬಡ ಬ್ರಾಹ್ಮಣನಿದ್ದ ಊರಿಗೆ ಬಂದರು. ಮೊದಲು ಧನಿಕನ ಮನೆಯ ಮುಂದೆ ಹೋಗಿ ನಿಂತು 'ಸ್ವಾಮಿ, ಕುಡಿಯಲು ಸ್ವಲ್ಪ ನೀರು ಕೊಡಿ' ಎಂಬುದಾಗಿ ಧನಿಕನ ಹತ್ತಿರ ಕೇಳಿದರು. ಧನಿಕನು ಒಳಗಿದ್ದ ಅಡಿಗೆಯವನನ್ನು ಕರೆದು ನೀರು ತರಲು ಹೇಳಿದನು. ಆದರೆ ಒಳಗೆ ನೀರನ್ನು ತರಲು ಹೋದ ಆಳು ಎಷ್ಟು ಹೊತ್ತಾದರೂ ಮರಳಿ ಬಾರದಿದ್ದರಿಂದ ಪಾರ್ವತಿಗೆ ಬೇಸರವಾಗಿ ಮುಂದಕ್ಕೆ ಹೊರಟಳು. ಆಗ ಈಶ್ವರನು "ಧನಿಕನಿಗೆ ಒಳ್ಳೆಯದಾಗಲಿ' ಎಂದು ಆಶೀರ್ವದಿಸಿ ಹೊರಟನು. ಆ ಆಶೀರ್ವಾದವನ್ನು ಕೇಳಿದ ಪಾರ್ವತಿಯು ಪತಿಯನ್ನು ಕುರಿತು "ಆ ತನಿಗೆ ಏತಕ್ಕಾಗಿ ಒಳ್ಳೆಯದಾಗಲಿ ಎಂದು ಆಶೀರ್ವದಿಸಿದಿರಿ?" ಎಂದು ಕೇಳಿದಳು.

ಅದಕ್ಕೆ ಈಶ್ವರನು ನಸುನಕ್ಕು ಕಾರಣವಿದೆ ಎಂಬುದಾಗಿ ಉತ್ತರಿಸಿ ಮುಂದೆ ಪ್ರಯಾಣ ಮಾಡಿ ಆ ಬಡ ಬ್ರಾಹ್ಮಣನ ಮನೆಗೆ ಬಂದರು. ಆ ಸಮಯಕ್ಕೆ ಸರಿಯಾಗಿ ಬಡ ಬ್ರಾಹ್ಮಣನು ಇವರನ್ನು ಎದುರುಗೊಂಡು ಒಳಕ್ಕೆ ಕರೆದುಕೊಂಡು ಹೋಗಿ ಊಟ ಉಪಚಾರಾದಿಗಳಿಂದ ಸಂತೃಪ್ತಿಗೊಳಿಸಿ ಕಳಿಸಿ ಕೊಟ್ಟನು. ಈ ಅತಿಥಿ ಸತ್ಕಾರವನ್ನು ಕಂಡು ಪಾರ್ವತಿಯು ಬಹಳ ಸಂತೋಷಗೊಂಡಳು. ಆಗ ಈಶ್ವರನು "ಬಡ ಬ್ರಾಹ್ಮಣನಿಗೆ ಇನ್ನೂ ಕನಿಷ್ಠವಾಗಲಿ' ಎಂದು ಆಶೀರ್ವದಿಸಿದನು. ಆ ಆಶೀರ್ವಾದವನ್ನು ಕೇಳಿದ ಪಾರ್ವತಿಯು ಬಹಳ ಕೋಪಗೊಂಡು ಈಶ್ವರನಲ್ಲಿ "ನನಗೆ ಸತ್ಕರಿಸಿದ ಬಡ ಬ್ರಾಹ್ಮಣನಿಗೆ ಈ ರೀತಿಯಲ್ಲಿ ಆಶೀರ್ವದಿಸಲು ಕಾರಣವೇನೆಂದು" ಕೇಳಿದಳು. ಅದಕ್ಕೆ ಈಶ್ವರನು ಉಉತ್ತರವಾಗಿ ಮುಂದೆ ಏನಾಗುತ್ತೆ ಎಂಬುದಾಗಿ ಎದಿರುನೋಡು ಎಂಬುದಾಗಿ ಹೇಳಿ ಪಾರ್ವತಿಯನ್ನು ಸಮಾಧಾನಪಡಿಸಿ ಪಾರ್ವತೀ ಪರಮೇಶ್ವರರು ಕೈಲಾಸಕ್ಕೆ ಪ್ರಯಾಣ ಬೆಳೆಸಿದರು.

ಇಲ್ಲಿ ಬಡ ಬ್ರಾಹ್ಮಣನು ಬಹಳ ಕಷ್ಟದಿಂದ ಅತಿಥಿ-ಸತ್ಕಾರಗಳನ್ನು ಮಾಡತ್ತಿದ್ದನು. ಧನಿಕನಿಗೆ ಮಾತ್ರ ಇನ್ನೂ ಐಶ್ವರ್ಯ ಅಭಿವೃದ್ಧಿಯಾಗುತ್ತಾ ಬಂದು ಸುಖದಲ್ಲಿದ್ದನು. ಆದರೆ..... ಬಡ ಬ್ರಾಹ್ಮಣನು ಮಾತ್ರ ಪರಮಾತ್ಮನನ್ನು ಎಡೆಬಿಡದೆ ಭಕ್ತಿಯಿಂದ ಪೂಜಿಸುತ್ತಲಿದ್ದನು. ಕಾಲ ಕ್ರಮೇಣದಲ್ಲಿ ಧನಿಕನ ಸಕಲ ಐಶ್ವರ್ಯವು ಸರ್ವನಾಶವಾಗಿ ಭಿಕ್ಷೆ ಬೇಡುವ ಸ್ಥಿತಿಗೆ ಬಂದನು. ಇತ್ತ ಬಡ ಬ್ರಾಹ್ಮಣನ ಕಷ್ಟಗಳೆಲ್ಲಾ ನೀಗಿ ಕೊನೆಯಲ್ಲಿ ಐಶ್ವರ್ಯವಂತನಾಗಿ ಪ್ರತಿಯೊಬ್ಬರಿಗೂ ಬೇಕಾದವನಾಗಿ ದೇವರಲ್ಲಿ ನಂಬಿಕೆಯನ್ನು ಮತ್ತು ದಾನಧರ್ಮಗಳನ್ನು ಬಿಡದೆ ಮಾಡುತ್ತಲಿದ್ದನು. ಆದ್ದರಿಂದ ಕೊನೆಯಲ್ಲಿ ಬಡ ಬ್ರಾಹ್ಮಣನಿಗೆ 'ಮುಕ್ತಿ' ದೊರೆಯಿತು. ಆದ್ದರಿಂದ "ಭಕ್ತಿಯಿಂದ ಮುಕ್ತಿ" ದೊರೆಯುತ್ತೆ ಎಂಬುದನ್ನು ನಿರಿಯಬಾರದು.

ಶೃ. ನ. ಅ., ಶೃಂಗೇರಿ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

ಪದ್ಮ-ರಂಗು— ಬರೆದವರು: ಶೇಷು ನಾರಾಯಣ. ಪ್ರಕಾಶಕರು: ಮನೋಹರ ಗ್ರಂಥಮಾಲಾ, ಧಾರವಾಡ. ಪುಟಗಳು: ೧೪೧. ಬೆಲೆ: ಸಾಮಾ ಪ್ರತಿ ರೂ. ೨= ೦೦, ಕ್ಯಾಲಿಕೊ ಪ್ರತಿ ರೂ. ೩= ೦೦.

ಕಥೆಗಳ ಸೃಷ್ಟಿಯೆಂದಾಯಿತೆಂದು ನಿರ್ದುಷ್ಟವಾಗಿ ಹೇಳುವುದು ಅಸಾಧ್ಯವಾದರೂ ಆದು ಬಹು ಹಿಂದೆಯೇ ಬಳಕೆಯಲ್ಲಿತ್ತೆಂದು ಹೇಳಬಹುದು. ಆಂತೆಯೇ ನಮ್ಮ ನಾಡಿನ ಅನಕ್ಷರಸ್ಥ ಜನ ಸಮುದಾಯದಲ್ಲಿ ಹಲವಾರು ಕತೆಗಳು ಮನೆ ಮಾತಾಗಿವೆ. ಜನಪದ ಗೀತೆಗಳಂತೆಯೇ ಇವೂ ಅಜ್ಞಾತವಾಗಿಯೇ ಉಳಿದಿವೆ. ಇಂತಹ ಒಂದು ಕತೆಯನ್ನು ಸಾಹಿತ್ಯ ಕೃತಿಯೊಂದಿಸಿ ಕನ್ನಡಿಗರಿಗೆ ನೀಡಿದ್ದಾರೆ, ಶೇಷು ನಾರಾಯಣರು. ವ.ಲೆನಾಡಿನಲ್ಲಿ ಪ್ರಚಲಿತವಿರುವ ಈ ಕತೆಯು ಸರ್ಪಲೋಕದ ಸುಂದರ ಚಿತ್ರವನ್ನು ನೆಮಗೆ ಎತ್ತಿ ತೋರಿಸುತ್ತದೆ.

ನೂತನವನ ಉದರದಲ್ಲಿ ಉರಗವೊಂದು ಜನಿಸಿ, ಅದು ಬೆಳೆದು ದೊಡ್ಡದಾಗಿ, ತನ್ನ ಹೆತ್ತ ತಾಯಿಯ ಮೇಲೆ ಇಡುವ ಅಮಿತ ಪ್ರೇಮವನ್ನೂ ಮೂನೆವರಿಂದ ಹಿಡಿದು ಪಶು-ಪಕ್ಷಿಗಳ ವರೆಗೆ ಒಂದೇ ಅನುರಾಗಾತ್ಮಕವಾದ ಹೃದಯವಿದೆಯೆಂಬುದನ್ನೂ ಈ 'ಪದ್ಮ-ರಂಗು' ಪ್ರತಿಪಾದಿಸುತ್ತದೆ. ಕೆರಿದಾದ ಆಜ್ಞಾತ ಕಥಾವಸ್ತುವನ್ನು ಹಿರಿದಾಗಿಸಿ, ಅದನ್ನು ಮನನಂಬುಗುವಂತೆ ಹೃದಯಂಗಮವಾಗಿ ಬರಹ ರೂಪಕ್ಕೆಳಿಸಿದ ಶೇಷು ನಾರಾಯಣರ ಭಾಷೆ ಸರಳವಾಗಿದೆ; ಶೈಲಿ ಸುಗಮವಾಗಿ, ಉತ್ತಮವಾಗಿದೆ. ಕಥೆಯ ಓಟವು ನಿಲ್ಲದೆ ಮುಂದುವರಿಯುತ್ತದೆ; ಕುತೂಹಲ ಕೆರಳಿಸುತ್ತದೆ. ಎರಡು ತಾಸುಗಳ ಮನೋರಂಜನೆ ಸೂತ್ರವಲ್ಲ, ಓದಿದ ನಂತರವೂ ಆ ದರ ಮಧುರ ಸ್ಮೃತಿ ಅಚ್ಚಳಿಯದೆ ನಿಲ್ಲುತ್ತದೆ. ನವ್ಯ ಕಥಾ ಸಾಹಿತ್ಯವು ಮೆಟ್ಟುತ್ತಿರುವ ದಾರಿಯು ಅತ್ಯಪ್ತಿಕರವಿರುವ ಈ ದಿನಗಳಲ್ಲಿ 'ಪದ್ಮ—ರಂಗು' ವಿನಂತಹ ದಂತ ಕತೆಗಳು ಹೊಸ ದಾರಿದೀಪದಂತಾಗಿ ನವ್ಯ ಸಾಹಿತ್ಯವನ್ನು ತುಂಬ ಬಲ್ಲವು. ಶೇಷುನಾರಾಯಣರು ಈ ದೀಪ ದೋರುವಲ್ಲಿ ಇನ್ನೂ ನುಂದುವರಿಯುವರೆಂದು ಆಶಿಸ ಬಹುದು.

ಇಲ್ಲಿ ಒಂದು ಸಮಸ್ಯೆ ನವ್ಮನ್ನು ಕಾಡುತ್ತದೆ. ಇಂದಿನ ವೈಜ್ಞಾನಿಕ ದೃಷ್ಟಿಯ ದಿನಗಳಲ್ಲಿ ಇಂತಹ ದಂತ ಕತೆಗಳ ಸ್ಥಾನವೆಷ್ಟಕ್ಕೆ? ಸತ್ಯತೆಗೆ ಬೆಲೆಯೆನ್ನು? "ಸತ್ಯಾಸತ್ಯಗಳ ವಿವೇಚನೆ ಮಾಡುವುದೇ ಸಾಹಿತ್ಯದ ಧರ್ಮವಲ್ಲ; ವಸ್ತುವನ್ನು ಕಲಾಪೂರ್ಣವಾಗಿ ಬೆಳೆಸಿ ಸಹೃದಯರ ಮನ ಮುಟ್ಟಿಸುವುದು ರಸಿಕ ಜನರ ತಲೆದೂಗಿಸುವುದು ಅದರ ಉದ್ದೇಶ". ಇದನ್ನು ಒಪ್ಪಲೇಬೇಕು. ಹಾಗಾದಲ್ಲಿ ಇದರ ಯಶಸ್ವಿತೆಗೆ 'ಪದ್ಮ-ರಂಗು' ಒಂದು ಜ್ವಲಂತ ನಿದರ್ಶನ.

ವಾಸನದತ್ತೆ: ಬರೆದವರು: ಕೆನ್ನಮೂಲ್ಕಿ ರಾಮಭಟ್ಟ ವಿದ್ವಾನ್. ಪ್ರಕಾಶಕರು: ಸಿಗಂವಸ್ಥಳ: ಮುಲ್ಕಿ ಪ್ರಿಂಟಿಂಗ್ ಪ್ರೆಸ್, ಮುಲ್ಕಿ (ದ. ಕ.) ಪುಟಗಳು ೫೭ ಬೆಲೆ: ರೂ. ೦= ೭೫

ಸಂಸ್ಕೃತದ ವಿಖ್ಯಾತಕವಿ ಭಾಸನ 'ಸ್ವಪ್ನವಾಸವ ದತ್ತ'ದ ಕಥಾರೂಪವಿದು. ವತ್ಸದೇಶದ ರಾಜ ಉದಯನನು ತನ್ನ ಪ್ರೇಯಸಿ ಮಾಹಾಸೇನನ ಮಗಳು ವಾಸವದತ್ತೆಯಿಂದ ಬೇರೆಯಾಗಿ, ವಿರಹಜನ್ಯ ಪರಿತಾಪದಿಂದ ಬೆಂಡಾದ ಬಳಿಕ, ಮಗಧ ರಾಜ ದರ್ಶಕನ ಮಗಳು ಪದ್ಮಾವತಿಯನ್ನು ವಿವಾಹವಾದನು. ವ.ಎಂದೆ ಸತ್ತು ಹೋಗಿದ್ದಳೆಂದು ಊಹಿಸಿದ್ದ ವಾಸವದತ್ತೆಯು ಮರಳಿ ಉದಯನನೆಸೆನ್ನು ಕೂಡಿದಳು.ಉತ್ಕೃಷ್ಟವಾದ ಭಾಸನ ನಾಟಕದ ಕಥೆಯಿದಾದುದರಿಂದ, ಇಲ್ಲಿ ಬರುವ ಪ್ರತಿ ಘಟನೆಯಲ್ಲೂ ನಾಟಕೀಯತೆ ಇದ್ದೇ ಇದೆ. ಮೂಲನಲ್ಲಿನ ಕಥೆಯನ್ನು ಆಯ್ದು ಅದನ್ನು ಸಂಸ್ಕೃತವರಿಯದ ಕನ್ನಡಿಗರಿಗೆ ತಿಳಿಗನ್ನಡದಲ್ಲಿ ತಿಳಿಯುವಂತೆ ಮೂಡಿದ ಲೇಖಕರ ಪ್ರಯತ್ನ ಸ್ತುತ್ಯನಾದುದು. ಸಂಸ್ಕೃತದ ಜಟಿಲ ಸಮಸ್ತಪದ ಸುಂಜವಾಗಲೀ ಕ್ಲಿಷ್ಟ ಶಬ್ದಗಳಾಗಲೀ ಇದರಲ್ಲಿಲ್ಲ; ಎಲ್ಲರೂ ಕೊಂಡು ಓದಬಹುದಾದ ಪುಸ್ತಕವಿದು.

ಬಾಲರಶ್ಮಿ— (ಪ್ರಥಮ ಪುಸ್ತಕ) ಪ್ರಕಾಶಕರು: ಕೆ. ಮುಖ್ಯಪ್ರಾಣ ಉಪಾಧ್ಯಾಯ, ಅಂಬಲಪಾಡಿ, ಉಡುಪಿ, ಪುಟಗಳು: ೩೨. ಬೆಲೆ: ರೂ. ೦= ೪೦. (ಮೂರು ಪ್ರತಿಗಳಿಗೆ ನೂರು ಪೈಸೆ.)

ಪ್ರಾಥಮಿಕ ಶಾಲಾ ಅಧ್ಯಾಪಕರಾಗಿದ್ದು ಶಾಲಾ ಮಕ್ಕಳ ಉಪಯೋಗಕ್ಕೂ ಜ್ಞಾನ ಸಂವರ್ಧನೆಗೂ ನೆರವಾಗುವ ಕೃತಿಗಳಿಂದ ಹೆಸರು ಪಡೆದ ಉಪಾಧ್ಯಾಯರು ಕೆಲಕಾಲ ಅಜ್ಞಾತವಾಸದಲ್ಲಿ ಉಳಿದಿದ್ದರೂ ಮರಳಿ ಆ ಕ್ಷೇತ್ರದಲ್ಲಿ ಕಾಲಿಟ್ಟದ್ದು ಅಭಿನಂದನಾರ್ಹ ವಿದು ಆರು ವರ್ಷದ ಮಕ್ಕಳಿಗೆ ಉಪಯುಕ್ತವಾಗುವಂತೆ, ಅವರ ಉಚ್ಚಾರವನ್ನು ಸರಿ ಪಡಿಸುವ, ಅಕ್ಷರ ಜ್ಞಾನವನ್ನು ವೃದ್ಧಿಗೊಳಿಸುವ, ರಾಗ, ಕವಿತೆ, ನಟನೆ, ಸಂಭಾಷಣೆ ಭಾಷಾ ಶಕ್ತಿಯನ್ನು ಹೆಚ್ಚಿಸುವ, ಪಾಠಗಳು ಜಾಲ ಶಕ್ತಿಯಲ್ಲಿನೆ. ಕವಿ ಶಿಷ್ಯರ ಶಿಸ್ಯರಂತೆ ಉಪಾಧ್ಯಾಯರ 'ಗೋವಿನ ಕತೆ' ಮೊದಲಾದ ಕೃತಿಗಳಂತೆಯೇ ಇದನ್ನೂ ಪ್ರಾಥಮಿಕ ಶಾಲಾ ಶಿಕ್ಷಕರು ಸ್ವಾಗತಿಸಬೇಕು; ನಾಡಿನ ಮಕ್ಕಳ ಮಟ್ಟವನ್ನು ಎತ್ತರಿಸಲು ಇದರ ಸಹಾಯವನ್ನು ಅವಶ್ಯ ಪಡೆಯಬೇಕು.

—ಗೋರಾ.

ಆಸ್ಥಮಾ ರೋಗಿಗಳೆ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕಬೂತಿಯನ್ನು ತಾ.11-12-62ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಆಸ್ತಮಾ, ನೆಗಡಿ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayurvedashram, P. O. Chitrakot U. P.

ವಿಖ್ಯಾತ ಗ್ರಂಥ ಕರ್ತರಾದ

ಶ್ರೀ ಎ. ಎಸ್. ಪಂಚಾಕ್ಷರೇಶ ಅಯ್ಯರ್

ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ., ಎಫ್. ಆರ್. ಎಸ್. ಎಲ್.

ಇವರು ಇಂಗ್ಲೀಷಿನಲ್ಲಿ ಬರೆದ—

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕಥೆಗಳು

ಚಿಕ್ಕ ಚೊಕ್ಕ ೧೫೨— ಕಥೆಗಳು ಬೆಲೆ ರೂ. 1—12—0

ಅನುವಾದಕರು: ವಿ| ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್)

ಕಲಂ ಇಂಚಿಗೆ ರೂ. 2-50

ಅನಿಯಮಿತ (ಕೆಜುವಲ್)

ಕಲಂ ಇಂಚಿಗೆ ರೂ. 3-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಭಿಕ್ಷುಕಿ ದೇವಯಾನಿ

(೩ನೇ ಪುಟದಿಂದ)

ರಿನಲ್ಲೀ ಆಕೆಯನ್ನು ಕೂರಿಸಿ ಮನೆಗೆ ಕರೆದುಕೊಂಡು ಬರುತ್ತಾನೆ. ಮತ್ತು ತನ್ನ ಹೆಂಡತಿಯೊಡನೆ—'ಈಕೆಯನ್ನು ನಾವು ಮನೆಗೆಲಸಕ್ಕೆ ಇಟ್ಟುಕೊಳ್ಳೋಣ! ಮೊದಲೂ ಈಕೆ ನಮ್ಮಲ್ಲೀ ಇದ್ದಳು! ಪಾಪ! ಭಿಕ್ಷುಕಿಯಾಗಿದ್ದಾಳೆ' ಎಂದು ಕೇಳುತ್ತಿರಲು, ಆಗ ಸೀತಾಲಕ್ಷ್ಮಿಯು— 'ಚೆಚೆ, ಆ ಕುಲಟೆ ಬಜಾರಿಯನ್ನು ಮನೆಯಲ್ಲಿ ಇಟ್ಟುಕೊಳ್ಳುವುದೇ? ಥೂ... ನಿಮಗೇಕೆ ಈ ಬುದ್ಧಿ ಬಂತು!' ಎನ್ನುತ್ತ ದೇವಯಾನಿಯನ್ನು ಬೈದು, ಹೊರಗೆ ನೂಕಿ ಬಿಟ್ಟಳು! ಆಗ—ಅಕೆ, ಬಿಕ್ಕಿ ಬಿಕ್ಕಿ ಅಳುತ್ತ 'ಅಮ್ಮಾ! ನನ್ನನ್ನು ಹೊರಗೆ ಹಾಕಬೇಡಿ! ನಾನು ಕಳ್ಳತನ ಮಾಡುವುದಿಲ್ಲ! ಹೇಳಿದ ಹಾಗೆ ಕೇಳುತ್ತೇನೆ!' ಎಂದು ಬೇಡತೊಡಗಿದಳು! ಈ ಪರಿಸ್ಥಿತಿಯನ್ನು ಕಂಡ ರಾಮನಾಥನಿಗೆ ಬಹು ಮರುಕವಾಗಲು ಒಡನೆಯೇ ಆತನಿಗೆ ಎಚ್ಚರವಾಯಿತು! ಎಚ್ಚರಿಗೊಂಡು ನೋಡುತ್ತಾನೆ! ಮಗುವೊಂದು ದುಂಬದ ಮೇಲೆ ಎದುಕುಳಿತು ಅಳುತ್ತಿದೆ! ಆಗ ಇದೆಲ್ಲವೂ ಕನಸು! ಅಲ್ಲವೆ ಸೀತಾಲಕ್ಷ್ಮಿಗೆ ಇಷ್ಟು ಕರೋರಳಾಗಲಾರಳು!" ಎಂದು ರಾಮನಾಥನಿಗೆ ಅರಿವಾಯಿತು! ಹೀಗೆ ಕಥೆ ಮುಗಿಯುತ್ತದೆ

ತರುಣಿಯರು ಕೆಲಸ ಮಾಡುವ ಕಾರ್ಖಾನೆಗಳಲ್ಲಿ ಶ್ರೀ ರಾಜಾಜಿಯವರು ನಿರೂಪಿಸಿದ ದೇವಯಾನಿಯಂತಹ ಸದ್ಗುಣ ಸಂಪನ್ನೆಯಂತಹ ಹುಡುಗಿಯರೂ ಸಹ ಸಹವಾಸ ದೋಷ ಹಾಗೂ ಸಫಲ ಜೀವನ ನಡೆಸುವ ಹೆಗಲುಗನಸುಗಳಿಂದ ಹೇಗೆ ಅಪಪತನ ಹೊಂದಬಹುದು? ಎಂಬ ದೃಷ್ಟಾಂತ ಈ ಕಥೆಯ ಮೂಲಕ ಬಹಳ ಚೆನ್ನಾಗಿ ವ್ಯಕ್ತವಾಗುತ್ತಿದೆ "ತುಪ್ಪದ ಮಡಕೆಯ ಮೇಲೆ ಕುಳಿತಿರುವ ಇಲಿಯನ್ನು ಹೊಡೆದೋಡಿಸಿದರೆ, ಮಡಕೆ ಒಡೆದು ಹೋಗುವುದು! ಹೊಡೆದೋಡಿಸದಿದ್ದರೆ, ಇಲಿಯು ತುಪ್ಪಕ್ಕೆ ಬಾಯಿಕ್ಕಿವುದು!" ಎಂಬಂತಹ ಜಟಿಲವಾದ ಸಮಸ್ಯೆಗೆ ಗುರಿಯಾದ ದೇವಯಾನಿ ಕೊನೆಗೂ ಆ ಸಮಸ್ಯೆಯನ್ನು ಬಿಡಿಸಲಾರದೆ ಬೀದಿಯ ಭಿಕಾರಿಯಾಗಿಬಿಡಳು! ಆದರೆ, ಆಕೆಯ ಪಾತ್ರ ಹಾಗೂ ಚಿತ್ರ ಚಿತ್ರಣದ ಮೂಲಕ ಶ್ರೀ ರಾಜಾಜಿಯವರು ಮಡಕೆಯನ್ನು ಇಲಿಗೆ ನಿಲುಕದಂತೆ, ಎಚ್ಚರಿಕೆಯಿಂದ ಇರಿಸುವುದೇ ಈ ಸಮಸ್ಯೆಗೆ ಪರಿಹಾರ"ವೆಂಬಂತೆ ಸಮಾಜದ ಮುಂದೆ ಒಂದು ನೀತಿ ಪಾಠವನ್ನು ತೆರೆದಿಟ್ಟಿರುವರು!

ಈಶಾನ್ಯ ಭಾರತದ ತ್ರಿಪುರಾ

(೪ನೇ ಪುಟದಿಂದ)

ಲು ಹಿಂಜರಿದರು. ಆದರೆ ಇಂಕಹ ಆದ್ಯಾವ ಕ್ರಮಕ್ಕೆಗೊಂಡರೂ ಅಪ್ಪೇನೂ ಪ್ರಯೋಜನವಾಗಲಕ್ಕಿಲ್ಲವೆಂದೂ, ಆದರ ಬದಲಿಗೆ, ಪೂರ್ಣ ಗಡಿ ಪ್ರದೇಶದ ರಕ್ಷಣಾ—ವ್ಯವಸ್ಥೆಯನ್ನು ಬಲಪಡಿಸಬೇಕೆಂಬುದೇ ಅಲ್ಲಿಯ ಆಡಳಿತ ಮಂಡಳಿಯ ಅಭಿಪ್ರಾಯವಿದೆ ತ್ರಿಪುರ—ಪಾಕಿಸ್ತಾನ ನಡುವಣ ಸಮಸ್ಯೆಗಳ ಪರಿಹಾರವಾದರೂ ಗಡಿ ರಕ್ಷಣೆ ಸುವ್ಯವಸ್ಥೆಗೊಳಪಡದಿದ್ದಲ್ಲಿ ಅದೇನೂ ಪ್ರಯೋಜನವಾಗಲಿಕ್ಕಿಲ್ಲ. ಇಲ್ಲಿಯ ಕೆಳ್ಳಿಗಳಲ್ಲಿ ಬಂದು ಬೀಡು ಬಿಡುವ ವಾಕಿಸ್ತಾನಿಗಳನ್ನು ತಡೆಗಟ್ಟಲು ಎಲ್ಲಾ ಗ್ರಾಮಗಳಲ್ಲೂ ಉತ್ತಮ ದೃಢ ಆಡಳಿತ ವ್ಯವಸ್ಥೆ ಇರಲೇಬೇಕು. ಕೆಲ ಉಗ್ರ ರಾಷ್ಟ್ರೀಯ ಮುಖಂಡರು ಒಂದು ಸಲಹೆಯನ್ನು ಕೊಡುತ್ತಾರೆ ಅಲ್ಲೇ ಇರುವ ಭಾರತೀಯ ಪಲ್ಲಿಗರಿಗೆ ಶಸ್ತ್ರ ತರಬೇತಿಯನ್ನು ಕೊಡಬೇಕೆಂಬುದೇ ಆ ಸೂಚನೆ ಇದೆ. ಕಮ್ಮನ್ನು ಆಡ್ಡಗಟ್ಟುವರೆಂಬ ಭೀತಿ ಇದ್ದಲ್ಲಿ ಅಕ್ರಮವಾಗಿ ಪ್ರವೇಶಿಸುವವರಿಗೆ ಧೈರ್ಯ ಬರುವದಿಲ್ಲ.

ತ್ರಿಪುರದ ಆಂತರಿಕ ಸಮಸ್ಯೆಯೆಂದರೆ ಅಲ್ಲಿ ಸಂಪರ್ಕ ವ್ಯವಸ್ಥೆಯೊಗಲೀ, ಸರಿಯಾದ ರಸ್ತೆಗಳಾಗಲೀ ಇರುವದಿಲ್ಲ. ಪ್ರದೆ ಶದೊಳಗೆಲ್ಲೂ ರೋಡ್-ಮಾರ್ಗ ಇರುವದಿಲ್ಲ. ಅಸ್ಸಾಮಿನೊಂದಿಗೆ ಉಗಿಬಂಡಿ ಸಂಪರ್ಕಕ್ಕೆ ಬೇಕಾಗುವ ರಸ್ತೆ ಇನ್ನೂ ಪೂರ್ಣವಾಗಿರುವದಿಲ್ಲ. ಅದು ಪೂರ್ಣವಾದಾಗ ಆತಿ ಉತ್ತರದ ಭಾಗಕ್ಕೆ(ಧರ್ಮನಗರ) ಅಸ್ಸಾಮಿನ ಕಲ್ಯಾಲಿ ಘಾಟಿಸೊಂದಿಗೆ ಸಂಪರ್ಕ ಉಂಟಾಗುತ್ತದೆ. ಜನಸಂಖ್ಯೆಯಲ್ಲಿ ವಿರುದ್ಧರಾಗಿ ಬಿಟ್ಟಿರುವದರಿಂದ ಕೈಸಿಗೆ ನೆಲವೇ ಸಿಗುವದಿಲ್ಲ ಈ ಎಲ್ಲಾ ಕಾರಣಗಳಿಂದಾಗಿ ಈ ಪ್ರದೇಶದಲ್ಲಿ ಕೊರತೆಯು ತವರೂರಾಗಿದೆ. ಸಿಮೆಂಟು, ಇದ್ದಲು, ಉಪ್ಪು ಮುಂತಾದ ಉಪಯೋಗಿ ವಸ್ತುಗಳು ಇಲ್ಲಿಗೆ ಭಾರತದ ಇತರ ಪ್ರಾಂತ್ಯಗಳಿಂದ ಬರಬೇಕಾಗಿ ಇರುವದರಿಂದ ಅವುಗಳ ಬೆಲೆ ಅತಿ ವಿಪರೀತ ಅಧಿಕವಾಗಿರುತ್ತದೆ. ಇನ್ನೆಲ್ಲವೂ ಈ ಗಡಿ ಪ್ರದೇಶ ಎದುರಿಸಬೇಕಾಗಿರುವ ಸಮಸ್ಯೆಗಳವೆ ಅಲ್ಲಿಯ ಸರಕಾರ ಇದು ವರೆಗೂ ಪೂರ್ಣ ಅರ್ಥಿಕ ಪರೀಕ್ಷೆಯನ್ನು ಮಾಡಿರುವದಿಲ್ಲ.

ಪರಿಸ್ಥಿತಿ ಹೀಗಿರುವದರಿಂದ ಕೆಲ ಜನರು ಅಲ್ಲಿ ಒಂದು ವ್ಯಾಂತ್ಯ ಸರಕಾರ ಇರಬೇಕೆಂದು ಕೇಳಿಕೊಂಡಿದ್ದಾರೆ. ಆಗ ಅವರ ಸಮಸ್ಯೆಯನ್ನು ಅವರೇ ನೇರ ಎದುರಿಸಬಹುದೆಂಬುದು ಅವರ ಆಶಯ.

—ಶಿವಶಂಕರ ಮದ್ರಾಸು

ನಿನ್ನ ಸೇವೆಗೆ ಎನ್ನ ಜೀವದಾನ

ಏಳಿ, ಎಚ್ಚರವಾಗಿ ಎದ್ದು ಬನ್ನಿ!
ವೀರ ಹೆಜ್ಜೆಯನ್ನಿಟ್ಟು ಮುಂದೆ ಬನ್ನಿ!
ತಾಯ್ನೆಲದ ಆಕ್ರಮಣವನೆದುರಿಸುವೆಡಲ್ಲಿ-
ಹಿಗ್ಗಿ ನಡೆ, ನುಗ್ಗಿ ನಡೆ ಧೀರತನದಲ್ಲಿ!

ನಾಲ್ಕತ್ತ ಮೂಕೋಟಿ ಜನರು ಹಿಗ್ಗಿ-
ಕತ್ತುನಾಕಕೆ ಕತ್ತಿ ಹಿರಿದು ನುಗ್ಗಿ!
ಜಯಘೋಷರ ಭೈರಿ ರೋಷವ ದಹಿಸಿ ನೀನು-
ತೆರೆದುಬಿಡು ಮುಚ್ಚಿರುವ ಸೂರನೆಯಕಣ್ಣು!

ಹುಟ್ಟಿನಲಿ ಹೊಂದಿರುವ ದುಷ್ಪಬುದ್ಧಿಗಳನ್ನು
ತಿದ್ದಿಪೊಡೆ ಶಾಂತಿ ಸುಂಕ್ರದ ಚಾರಿಸಾಕೇ?
ಕಸಿಕಟ್ಟಿ ಜೊತೆ ಬೇವು ಮಾವು ಆಗುವುದೆಂತು
ಕೋಣ ಬುದ್ಧಿಗೆ ಕೋಲು ಬೇಕೆ ಬೇಕು!

ಸ್ವಾಭಿಮಾನ ಸ್ವದೇಶವಾಭಿಮಾನಕೆ ಕುಂದು
ಬಂತೇ? ಸಿಂಹಗರ್ಜನೆ ಮಾಡು ಕೆರಳಿನಿಂದು-
ಬಾಯಾತೆರೆ, ಹಲ್ಲು ಕಡಿ, ಬಿಗಿದು ಮುಷ್ಠಿಯ ಮುಂದೆ,
ನೆಗೆದುಬಿಡು, ವೈರಿ ಬಸಿರನು ಬಗಿವನೆಂದು!

ಭಾರತಾಂಬೆಯ ಉದರದಿಂದ ಬಂದಿಳ ನಾವು
ತೊಟ್ಟಿಲೆಯನು ಸಹಿತ ಪಡಸತೊಟ್ಟು—
ನೂತ್ಯ ಭೂಮಿಯ ಮೇಲೆ ಪರಕೀಯು
ತ್ಸಿತವನು,
ಕಿತ್ತುಕಡಿಸೆವು ಎಂದು ಸೊಂಟಕಟ್ಟು!
ತಾಯ್ನೆಲದ ಬಂಧನಕೆ ಬರುವ
ವೈರಿಯ ಕಂಡು

ಮೈಯ್ಯಿ ರಕ್ತವ ಕುದಿಯುತ್ತಿರಲಿ ಇನ್ನ!
ಆಡಿಯ ಮುಂದಿಡು ಮಡಿದರೂ ವೀರ
ಸ್ವರ್ಗವಿದೆ!
ಜಯಿಸಿ ವೈರಿಯ ಮುಗಿಸಿದಾಗ ಧನ್ಯ!

ಮೂತ ನಿನ್ನಾದುರದಲಿ ಎನಿತೋ ಸೀರರು ಜನಿಸಿ
ಜೀವತ್ತಿ ಹರಿತ್ತಿ ರಕ್ಷಿಸಲು ಇನ್ನ!
ಇದೊ ಪಾಣಿಕೊಟ್ಟು ಕೈತಟ್ಟಿ ಬೇಳುವೆ ತಾಯಿ
ನಿನ್ನ ಸೇವೆಗೆ ಎನ್ನ ಜೀವದಾನ!

—ಕೆ. ಜೆ. ಕೆಟ್ಟಿ, ಕಡಂದಲೆ

(ಭಾರತವ ನೆಲವನ್ನು ಚೀನೀಯರು ಆಕ್ರಮಿಸಿದಾಗ ಸ್ಫೂರ್ತಿಗೆತ್ತು ಬರೆದುದು)

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಮಂಗಲಾ	(ಎಸ್. ದಸ್ತಗೀರ್)	1 50
ಮೂಢಮೂಕ	(ಡಾ| ಎಂ. ಆರ್. ರಾಜಾರಾಮ ರಾವ್)	3 00
ಕಾವ್ಯ ಮಿಮಾಂಸೆ	(ಪ್ರೊ.ಶಂಕರ ಮೊಕಾಶಿ)	1 00
ಯಕ್ಷಯಕ್ಷಿ	(ಅಂಬಿಕಾತನಯದತ್ತ)	1 50
ಈ ಟುವಿ ಈ ಬಾಳು	(ಹಾ ಮೆಂ.ರಾಮಸ್ವಾಮಿ)	1 50
ವೃಗಜಲ	(ಶ್ರೀ ವೆರ್ವಾಜೆ ಸದಾಶಿವ ಭಟ್ಟ)	1 75
ಯಾರು ಲಕ್ಷಿಸುವರು?	(ಲೀಲಾ ಕಾರಂತ & ಶಿವರಾಮ ಕಾರಂತ)	6 00
ಪದ್ಮನಿಧಿಯ ನಾವಿಕ	(ಶಿವಾನಂದ ಜೋಶಿ)	1 50
ಆಶ್ರಮವಾಸಿ	(ಬಸವರಾಜ ಕಟ್ಟೀಮನಿ)	1 50
ಬಿರುದಿನ ಕುದುರೆಯ ಹಿಂದೆ	(ಮಲ್ಲಾರಿ)	2 00
ಕನ್ನಡದ ನೆಲೆ	(ಶಂ. ಬಾ. ಜೋಶಿ)	3 00
ಕನ್ನುಡಿಯ ಹುಟ್ಟು	(ಶಂ. ಬಾ. ಜೋಶಿ)	3 00
ಜೀವದಾನ	(ನಾರಾಯಣ ಹುಲಗಿ)	1 00
ಬಂಗಾರದ ಹೆಣ್ಣು	(ಎಸ್. ದಸ್ತಗೀರ್)	0 87
ರಾಧಾರಾಣಿ	(ಮಲ್ಲಾರಿ)	0 37
ಯಮದೂತ	(ರಾ. ಮೊ. ವಿಶ್ವಾಮಿತ್ರ)	1 25
ದೇವರ ಸಾಮ್ರಾಜ್ಯ	(ಕೆ. ಶ್ರೀ ಕಂಠ)	2 00
ನಿರ್ದೋಷಿ	(ಆರ್. ಜಿ. ಕುಮಟಿ)	2 00
ಭಾರತದ ರಾಜ್ಯ ಘಟನೆಯ ಕರಡು	(ನಾಡಿಗೇರ ಶಿವರಾಯ)	1 50
ಗಾಂಧಿ ದರ್ಶನ		1 00
ಅನ್ನಪೂರ್ಣ	(ನಿರಂಜನ)	1 00
ಕನಕ ಮಹಿಮೋದರ್ಶ	(ಭೀಮಾಜಾರ್ಜವಡವಿ)	1 00
ವಿಧಿ ವಿಲಾಸ	(ಕಪಸ್ವಿನಿ)	3 00
ಹೇನುಂತ	(ಸ್ರಿಯದರ್ಶಿ)	4 00
ಅಕಾಂಕ್ಷೆ	(ನವಗಿರಿನೆಂದ)	1 50
ಬಾಣ ಭಟ್ಟನ ಆತ್ಮಕಥೆ	(ಎಸ್. ವಿ. ಕೃಷ್ಣ ಮೂರ್ತಿ)	3 50
ಹಕ್ಕು ಹೆಡೆಯ ಹಾವು	(ದು. ನಿಂ. ಬೆಳಗಲಿ)	1 50
ಶಕುಂತಲಾ	(ನಾ. ಸೀ. ಫಡಕೆ)	2 75
ಬೆಳ್ಳಿ ಮೂಡದ ಮುಂಜಾವು	(ಮೇಘ ರಾಜ)	1 25
ಉದರದ ಆರೋಗ್ಯ ವ.ತ್ತು ಸ್ನಾಯುಬಲ	(ಸ್ವಾಮಿ ವಿವಾನಂದ)	2 00
ಬ್ರಹ್ಮ ಚರ್ಯವೇ ಜೀವನ	(,,)	3 00
ಶುಲಭ ಪ್ರಶ್ನೆ ಪದ್ಧತಿ	(ಕೇರವ ಶರ್ಮ ಗಲಿಗೆಲಿ)	1 50
ಹೊ. ಕ ಸಾಹಿತ್ಯ ಶೈಲಿ	(ಬಿ ಎಸ್.ತ್ರಿವೇದಿ)	1 25
ನಮ್ಮ ನೂತನ ರಾಜ್ಯ ಘಟನೆ	(ಎಸ್. ಎಸ್. ರಾವ್)	0 50
ಸಿಟ್ಯಾಕೊ ರಾಯ ನನಸಾಯಿಲ	(ದು. ನಿಂ. ಬೆಳಗಲಿ)	1 00
ಸಾಹಿತ್ಯ ಸಮೀಕ್ಷೆ	(ರಾ.ಯ.ಧಾರವಾಡಕರ್)	1 50
ಅವಳ ಜವಳ ಸೋದರರು	(ರಮೇಶ)	1 25
ಭವ್ಯ ವಿಜ್ಞಾನಿಗಳ ಕಥೆಗಳು	(ಎಂ. ಎಸ್. ಎಸ್. ರಾವ್)	1 75
ಸಜೀವಿಗಳ ಸಮಸ್ಯೆ	(,,)	1 50
ಕನ್ನಡದ ಸಾಹಿತ್ಯ ಸಮ್ಮೇಲನದ ಕಥೆ	(ಘಾಣೇಕರ)	1 50
ರೂವಾ	(ಸರೋಜಿನಿ ಮಹಿಷಿ)	1 00
ಪ್ರವಾದಿಯ ತೋಟ	(ದೇವದತ್ತ)	1 25
ಭಾರತೀಯ ಸಂಸ್ಕೃತಿಯ ಹಿರಿಮೆ	(ಧಾ. ಮೆ. ದೇಶಪಾಂಡೆ)	2 00
ಧಾರವಾಡದಲ್ಲಿ ರಾಜಕೀಯ ಹಕ್ಕೆಗಳು	(ಎಸ್. ರಾಜಗೋಪಾಲ ರಾವ್)	0 62
ವೃಂದ	(ಸಿ. ವೆಂಕೋಬಚಾರ್)	1 50
ಪಾಪಪಣ್ಯ	(ಈಶ್ವರಚಂದ್ರ ಚಿಂತಾಮಣಿ)	1 50
ಅಣಿಕಲ್ಲು ಭಾಗ—೧	(ಸಿಸು)	0 75
,, ೨	(,,)	0 75
ಪೆದ್ದಂಕತೆಗಳು	(ವಿ. ಜೆ. ಭಟ್ಟ)	1 00
ನಾವು ನಮ್ಮವರು	(ಸಿಸು) ಕಥಾಸಂಕಲನ	1 50
,,	(ಕವಿತಾಸಂಕಲನ)	1 50
ಅವಳು ಹುಚ್ಚು	(ಕೆ. ರಾಮಕೃಷ್ಣ ಸೆಟ್ಟಿ)	0 87
ಸಂಸಿಗೆ ಬಂಲಿತು	(ಪಂಜರಾಜ ಆರಸು)	1 25
ಮೌನ ಸಂಧಾನ	(ಗಿರೀಶ ಕುಲಕರ್ಣಿ)	1 50
ಹುಚ್ಚರ ರಾಜ್ಯ	(ಶಿವಕುಮಾರ)	0 75
ಪುಟ್ಟ ಮಲ್ಲಿಗೆ	(ಗೊ.ರೂ.ರು)	1 20
ಸನ್ಯಾಸಿ ದಿಬ್ಬ	(ಸಿಂಪಿ ಲಿಂಗಣ್ಣ)	0 75
ನರ ಭಕ್ಷಿಗಳು	(ಜೆ. ಎಚ್ ವೀಟ್ಸ್ಲೆನ್)	0 80
ಅವಳೇ ನನ್ನ ಪ್ರೇಯಸಿ	(K. L. ಅಣ್ಣಿಗೇರಿ)	0 75
ವೈತ್ಯ ಮಂಧಪ	(,,)	0 75

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಡತನ ನೀಗಿಸುವಲ್ಲಿ

ನಮ್ಮ ಜನತೆಯ ಮಹತ್ವದ ಪಾತ್ರ

ಬಡತನ, ನಿರಕ್ಷರತೆ ಮತ್ತು ಕಾಯಿಲೆ ಇವು ಇಂದು ನಮ್ಮ ದೇಶವನ್ನು ಆಳುತ್ತಿವೆಯೆಂದರೆ ತಪ್ಪಾಗದು. ಇವುಗಳೊಡನೆ ಬೆಳೆಯುತ್ತಿರುವುದು ನಿರುದ್ಯೋಗ ಸಮಸ್ಯೆ. ಆದರೆ ಇವೆಲ್ಲಕ್ಕೂ ಕಾರಣ ನಮ್ಮ ರಾಜಕೀಯ, ನಮ್ಮ ಮಂತ್ರಿಗಳು, ನಮ್ಮ ಕುರುಡ ವಿಜ್ಞಾನ ಎಂದರೆ ತಿರುಳಿಲ್ಲದ ಮಾತಾಗುವುದು. ಸಮಾಜವನ್ನು ಕಟ್ಟಬಲ್ಲ ವ್ಯಕ್ತಿಯೇ ಎಲ್ಲಕ್ಕೂ ಕಾರಣ ಇಂದು, ಎಲ್ಲೆಡೆಯಲ್ಲಿಯೂ ದೇಶದ ಆರ್ಥಿಕ ಪರಿಸ್ಥಿತಿ ಕೆಟ್ಟಿರೆ ದೂರುವುದು ರಾಜಕೀಯ ರಂಗವನ್ನು, ರಾಜಕೀಯ ಧುರೀಣರನ್ನು.

ನಮ್ಮ ಜನತೆಯಲ್ಲಿ ಪರಸ್ಪರ ಸಹಾಯ, ಅನ್ಯೋನ್ಯ ಪ್ರೀತಿ, ನಿರ್ಮಲ ಸಹಜತೆ ಇಲ್ಲದೆ ಇದ್ದರೆ ಯಾವ ಸಮಾಜವು ಬದುಕಬಹುದು? ಯಾವ ದೇಶ ಬೆಳೆಯಬಹುದು? ಜನತೆ ಏನು ಮಾಡಬೇಕಾಗಿದೆ? ಸರಕಾರದ ಆಜ್ಞೆ ಇನ್ನು ಎಲ್ಲಿ ನಿಂತಿದೆ? ಈ ಜನತೆಯು, ಹೊರಿಸುತ್ತಿರುವ ತೆರಿಗೆಯನ್ನು ಕೊಡದಿರುವುದೇ? ಅಲ್ಲದೆ ವಿದ್ಯುತ್ ಸರಬರಾಜು ಬಿಲ್ ಕೊಡದಿರುವುದೇ ಎಂಬ ಪ್ರಶ್ನೆಗಳು ಏಳಬಹುದು. ಆದರೆ ಇವೆಲ್ಲವೂ ಯೋಗ್ಯ ರೀತಿಯಲ್ಲಿ ನಡೆದಿರಬಹುದು ಆದರೆ ನಮ್ಮ ಜನತೆ ಯಾ ನಾವು ಮಾಡುತ್ತಿರುವ ಸಣ್ಣ ಸಣ್ಣ ಅಪರಾಧಗಳೇ ಇಂದು ನಮ್ಮ ಇಡೀ ದೇಶವನ್ನೇ ಆಳುತ್ತವೆ.

ಸಣ್ಣ ಸಣ್ಣ ಉದಾಹರಣೆಗಳಿಂದ ನಮಗಿದು ಮಂದಟ್ಟಾಗಬಹುದು. ಚುನಾವಣೆ ವಿಷಯವನ್ನು ತೆಗೆದುಕೊಳ್ಳೋಣ. ಇಂದು ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧವಾದನು ಆವನ ಯೋಗ್ಯತೆ, ಸಾಮರ್ಥ್ಯವನ್ನು ಹೊದಲಾಗಿ 'ಪೆಟ್ರೋಲ್' ಖರ್ಚಿನಿಂದ ಆಳೆಯುತ್ತಾನೆ. ಎಷ್ಟು ಕಾರು ವಾಹನಗಳನ್ನು ಚುನಾವಣಾ ಪ್ರಚಾರಕ್ಕೆ ಉಪಯೋಗಿಸಬಹುದು? ಎಷ್ಟು ಪೆಟ್ರೋಲ್ ಬೇಕಾದೀತು ಎಂದು ಅವನ ಸಮಸ್ಯೆ. ಸರಿ, ಇದಕ್ಕೆ ಯೋಗ್ಯವಾಗಿ ಸಿಗುವುದು ಶ್ರೀಮಂತ ವ್ಯಕ್ತಿಗಳು. ಬಡತನವನ್ನು ಕೇವಲ ಓದಿ ತಿಳಿದವರು ಹೊರತು ಏನೆಂದು ಅರಿಯದವರು. ಅರಿಯುವುದಾದರೂ ಹೇಗೆ? ಚುನಾವಣಾ ಪ್ರಚಾರಕ್ಕೆ ಕಾರೇ ಸಾಧನ ಎನ್ನುವವರು, ಇಂದು ಸಾರಿಗೆ ಸಂಪರ್ಕದ ಬೆಳವಣಿಗೆಯನ್ನೇ ಕಾಣದವನ ನಮ್ಮ ಹಳ್ಳಿಗಳು ಈ ಮಹನೀಯರ ವಿಷಯ ಏನು ತಿಳಿಯಬಲ್ಲವು? ಹಾಗಿರಲಿ, ತುಂಬಾ ಪ್ರಯೂಣ ಮಾಡಿದರೆ, ದೇಶದ ಎಲ್ಲಾ ಪೇಟೆ ಪಟ್ಟಣ ಒಲೆದರೆ ಜನರೊಡನೆ ಬೆರೆತರೆ ಆನುಭವ ಜಾಸ್ತಿಯಾಗುತ್ತದೆ ಎಂದು ಹೇಳುತ್ತಾರೆ. ಸರಿ, ರೈಲಿನಲ್ಲಿ 1 ಕ್ಲಾಸ್ ಕೋಣೆಯಲ್ಲಿಯೋ, ರಿಡಿಯೋಗಳಿಂದ ಸುಸಜ್ಜಿತವಾದ ಕಾರ್‌ಗಳಲ್ಲಿಯೋ? ವಿಮಾನಗಳಲ್ಲಿಯೇ ಪ್ರಯಾಣ ಮಾಡಿ 'Air conditioned rooms'ಗಳಲ್ಲಿ ವಸತಿಮಾಡಿರುವ ಶ್ರೀಮಂತ ಮಹನೀಯರಿಗೆ ಜನರ ಸಂಕಷ್ಟದ ಪರಿವೆ ಆದರೂ ಏನಿದೆ? ಇವರಿಗೆ ಜೀವನದಲ್ಲಿ ಬಡಜನರೊಡನೆ ಬೆರೆಯುವ ಸಂದರ್ಭವಾದರೂ ಏಲ್ಲಿವೆ?

ನಮ್ಮ ದೇಶವು ಹಳ್ಳಿಗಳಿಂದ ಕೂಡಿ ಕೃಷಿ ಪ್ರಧಾನವಾಗಿದೆ. ರೈತನು ದೇಶದ ಬೆನ್ನೆಲುಬು ಆಗಿದ್ದಾನೆ. ಆದರೆ ರೈತನ ಉತ್ಪತಿ ಆಗುತ್ತಿರುವುದು ಎಷ್ಟಕ್ಕೂ ಸಾಲದು. ಇಂದಿನ ಶ್ರೀಮಂತ ಜನತೆಯು ತನ್ನ ವಿಲಾಸನುಯ ಜೀವನವನ್ನು ಕಡಿಮೆ ಮಾಡಿದರೆ—ಬಡ ಜನತೆಯು ಊರ್ಜಿತವಾಗಲು ಸಾಧ್ಯವಿದೆ. ನಾವು ಕಣ್ಣಿದ್ದು ಕುರುಡರಂತೆ, ಕಿವಿ ಇದ್ದು ಕಿವುಡರಂತೆ, ಕಾಲಿದ್ದು ಕುಂಟರಂತೆ ವರ್ತಿಸುತ್ತಿದ್ದೇನೆ. ಹಣದ ಬೆಲೆಯು ಏರಿಳಿಕೆಗೆ ಹೆದರಿ ಐಶ್ವರ್ಯವನ್ನು ಚಿನ್ನದ ರೂಪದಲ್ಲಿ ಮಣ್ಣಿನ ಡಿಯಲ್ಲಿಯೋ, ಕೋಣೆಯ ಮೂಲೆಗಳಲ್ಲಿಯೋ ಶೇಖರಿಸಿಡುತ್ತೇನೆ. ದೇಶದ ಆರ್ಥಿಕ ಪರಿಸ್ಥಿತಿಯನ್ನೇ ಸ್ನಿಗ್ಧಗೊಳಿಸುತ್ತೇವೆ. ಇದರಿಂದ ಜನರಿಗೆ ಯಾವ ರೀತಿಯ ದೃಢತೆ, ಭದ್ರತೆ ಎಂದು ಗೊತ್ತಾಗುವುದಿಲ್ಲ. ಮನುಷ್ಯ ಜೀವನವು ಯಾಂತ್ರಿಕದಿಂದ ರಚಿತವಾದದ್ದು, ಲೋಹಗಳಿಂದಲ್ಲ; ಅದು ನೀರಮೇಲಿನ ಗುಳ್ಳೆಯಂತೆ. ಅಂತಿರುವಾಗ ಇದು ಯಾವ ರೀತಿಯ ಕುರುಡು ಮುಂದಾಲೋಚನೆ! ಲಕ್ಷಗಟ್ಟಲೆ ವ್ಯಯಮಾಡಿ 'ಕಾಂಕ್ರೀಟ್ ಬಿಲ್ಡಿಂಗ್'ನ ಮನೆ ಕಟ್ಟುತ್ತೇನೆ. ವಿದ್ಯುತ್ತಿನಿಂದ ಅಲಂಕರಿಸುತ್ತೇನೆ. ಕೇವಲ ಐದು ಜನವಿರುವ ಒಂದು ಕುಟುಂಬವು ಆದರಲ್ಲಿ ವಾಸಿಸುವುದು. ಇಂತಹ ಒಂದೊಂದು ಮನೆಯನ್ನು ಕಟ್ಟಲು ಆಗುತ್ತಿರುವ ಖರ್ಚಿಯಲ್ಲಿ ಒಂದು ಹಳ್ಳಿಯ ವಸತಿ ಬೇಡಿಕೆಯನ್ನೇ ಪೂರೈಸಬಹುದು. ಹೀಗಿರುವಾಗ ನನ್ನ ಮುಂದು ನರಿದ ಅಲ್ಪ ಜನತೆಯು ಏಕೆ ಅಗಾಧ ಮನಸ್ಸು ತೋರಿಸಬಾರದು? ತನ್ನತನವನ್ನೆ ಬಿಟ್ಟು ಏಕೆ ಎಲ್ಲರೂ ನಮ್ಮವರೇ ಎಂಬ ಭಾವನೆಯನ್ನು ಬೆಳೆಸಬಾರದು?

ಧಾರ್ಮಿಕ ವಿಷಯಗಳನ್ನು ತಕ್ಕೊಂಡರೆ ಅಲ್ಲಿ ತುಂಬಾ ಸುಧಾರಣೆಯೂಗಲೂ ಸಾಧ್ಯವಿದೆ. ಮಾನವ ಜೀವನದ ಪ್ರತಿಯೊಂದು ವಿಷಯಗಳಲ್ಲೂ ಪ್ರಗತಿಯಾಗುತ್ತಿದೆ. ವಿಜ್ಞಾನ ಯುಗ ಬೆಳೆಯುತ್ತಿದೆ. ಇಂತಹ ಕಾಲದಲ್ಲಿ ದೇವಸ್ಥಾನಗಳಲ್ಲಿ ಎಣ್ಣೆಯ ದೀಪದ ಬದಲು ವಿದ್ಯುತ್‌ದೀಪ ಹತ್ತಿಸಿದರೆ, ಕಲ್ಲಿನ ಗುಡಿಗಳ ಬದಲು ಈಗಿನ ಶಿಲ್ಪಕಲೆ ಉಪಯೋಗಿಸಿದರೆ, ಕಲ್ಲಿನ ಮೂರ್ತಿಯ ಬದಲು ಲೋಹದ ಮೂರ್ತಿಯನ್ನು ಪ್ರತಿಷ್ಠೆ ಮಾಡಿದರೆ ಧಾರ್ಮಿಕ ಪರಿಶುದ್ಧತೆ ಮಾಯವಾಯಿತು ಎಂದು ಹೇಳುತ್ತಾರೆ. ಇದು ಶುದ್ಧತಪ್ಪು. ದೇವರು ಮಾನವನನ್ನು ಕಲ್ಲಾಗಿ ನಿರ್ಮಿಸಲಿಲ್ಲ. ಅವನು ಪ್ರತಿಕ್ಷಣ ಬೆಳೆಯುತ್ತಿದ್ದಾನೆ. ಆವನ ಜ್ಞಾನ ಶಕ್ತಿಯು ಹೊಸತನ್ನು ನೋಡಲು ಆತುರ ಪಡುತ್ತದೆ; ಇದ್ದದ್ದರಲ್ಲಿ ಹೊಸತನ್ನು ಕಾಣಲು ಆಶೆ ಪಡುತ್ತದೆ. ಆಂತಿರುವಾಗ ಧಾರ್ಮಿಕ ವಿಷಯಗಳಲ್ಲಿ ವಾತಾವರಣಕ್ಕೆ ತಕ್ಕಂತೆ ಬದಲಾಗುವುದರಲ್ಲಿ ತಪ್ಪೇನು? ಧಾರ್ಮಿಕ ಪರಿಶುದ್ಧತೆಗೆ ಬೇಕಾದುದು ಆತ್ಮಿಕ ಪರಿಶುದ್ಧತೆ. ಹೃದಯ ಮತ್ತು ಜ್ಞಾನದ ಸಹಜ ಬೆಳವಣಿಗೆ; ಇದು ಮಾತ್ರ ಲೋಪನಾಗದಂತೆ ನೋಡಬೇಕು. ಆದರೆ ಬಹಳ ಆಶ್ಚರ್ಯದ ಇನ್ನೊಂದು ವಿಷಯ, ಧಾರ್ಮಿಕ ವಿಷಯಗಳಿಗೆ ಕಣ್ಣುಮುಚ್ಚಿ ವ್ಯಯ ವ್ಯಯಮಾಡುವುದು. ಲಕ್ಷಗಟ್ಟಲೆ ಖರ್ಚುವಾಡಿ ಬೃಹತ್ ಆಕಾರದ ಸೌಧ ಸ್ಥಾನಗಳನ್ನು, ಮರಗಳನ್ನು ಕಟ್ಟುತ್ತೇವೆ. ಮಣಗಟ್ಟಲೆ ಚಿನ್ನ ವೈಡೂರ್ಯಗಳನ್ನು ಇದರ ರಚನೆಗೋ ಅಲಂಕಾರಕ್ಕೋ ಉಪಯೋಗಿಸುತ್ತೇವೆ. ಇವುಗಳ ಉದಯೋಗ ಮತ್ತು ಪ್ರದರ್ಶನ ವಾರಕ್ಕೊಮ್ಮೆಯೋ ಯಾ ತಿಂಗಳಿಗೊಮ್ಮೆಯೋ ಯಾ ವರ್ಷಕ್ಕೊಮ್ಮೆಯೋ ಪೂಜಾ ವೇಳೆಗಳಲ್ಲಿ ಮಾತ್ರ ಆಗುತ್ತದೆ. ಆರ್ಚಕರು ಆರಬ್ಬಕ್ಕೆ ಯಜ್ಞರುವಾಗ, ಆರೆ ಹೊಟ್ಟೆಯಲ್ಲಿಗುವಾಗ ದೇವರು ತನ್ನೊಡನೆ ಏಕೆ ಚಿನ್ನ ವೈಡೂರ್ಯ ಹಣ ಸಂಪತ್ತನ್ನು ಇರಬಯಸುತ್ತಾರೆ? ಈ ಬೃಹತ್ ಆಕಾರದ ದೇವಸ್ಥಾನಗಳು ವರ್ಷವಿಡೀ ಖಾಲಿಯಾಗಿರುವುದಕ್ಕಿಂತ ಅವನ್ನು ದೇಶೋದ್ಧಾರದ ಕಡೆಗೆ ಏಕೆ ಉಪಯೋಗಿಸಬಾರದು? ಶಾಲೆ ಸಂಘಗಳನ್ನು ಅವುಗಳಲ್ಲಿ ಯೂಕೆ ನಡೆಸಬಾರದು? ದೇವರೇನು ತನ್ನ ಮಕ್ಕಳು ತನ್ನೆದುರು ನಲಿದಾಡುವುದು ಬೇಡವೆನ್ನಬಲ್ಲನೆ? ಅಲ್ಲದೆ ತಾನೊಬ್ಬನೇ ನಿರ್ಜನ ಪ್ರದೇಶದಲ್ಲಿರಬೇಕೆಂದು ಬಯಸಬಹುದೇ?

ಇಂದು ರಾಷ್ಟ್ರೀಯ ಏಕೀಕರಣವು ಎಲ್ಲೆಡೆಯಲ್ಲಿಯೂ ಎದ್ದಿರುವ ಪ್ರಶ್ನೆ. ಅಲ್ಲದೆ ಪ್ರತಿ ದಿನದ ಸಮಸ್ಯೆ. ಜಾತಿ, ರಾಜಕೀಯ, ಭಾಷೆ, ಮೊದಲಾದವುಗಳು ಏಕೀಕರಣದ ಸಮಸ್ಯೆಗಳು. ಹಿಂದಿ ರಾಷ್ಟ್ರ ಭಾಷೆಯಾಗಬೇಕೆಂಬ ವಿಷಯ ಒಪ್ಪತಕ್ಕದ್ದೆ. ಆದರೆ ಇಂಗ್ಲಿಷನ್ನು ಕೊಡಲೇ ಹೊರಗಟ್ಟಬೇಕೆಂಬುದು ಹುಚ್ಚುಕಲ್ಪನೆ ಮಾತು. ನಾವು ಇಂದು ವಿಜ್ಞಾನದಲ್ಲಿ ಇತರ ಆಚಾರ ವಿಚಾರಂದಲ್ಲಿ ಪಶ್ಚಿಮ ನ್ನು ಹೊಂದಿಕೊಂಡಿದ್ದೇವೆ, ಉದ್ವಿಮೆಗಳು, ನೈದ್ಯಕೀಯ ಸಲಕರಣೆಗಳು, ಇನ್ನಿತರ ತಾಂತ್ರಿಕ ವಿಜ್ಞಾನದ ಬಳಕವನ್ನು ನಾವು ಪರಕೀಯರಿಂದ ಬೇಡುತ್ತೇವೆ. ಇಂತಹ ಕಾಲದಲ್ಲಿ ಬೇಗನೆ ಇಂಗ್ಲೀಷನ್ನು ಓಡಿಸಿ ಎಂದರೆ ಈ ಮಾತಿನ ಅರ್ಥವೇನು? ಬದಲು ಹಿಂದಿಯನ್ನು ಬೆಳೆಶಾಲೇ ಕಾಲೇಜುಗಳಲ್ಲಿ ಪಾಠಯವಾಗಿ ಹಿಂದಿಯನ್ನು ಬಳಸಿ ಎಂದರೆ ತುಂಬಾ ಒಳಿತು ಅಲ್ಲವೆ ರಾಷ್ಟ್ರದ ಹೆಸರಿಗಾಗಿ ಜಗಳಕಾಯುತ್ತಿದ್ದೇನೆ; ರಾಜ್ಯದ ಹೆಸರೇನಾದರೇನಾಯ್ತು. ಕೇರಳದ ಹೆಸರು ಬದಲಾಗುವುದೇ? ನಾವೆಷ್ಟಿದ್ದರೇನು? ಭಾರತೀಯರಲ್ಲವೆ? ಹಿಂದೀಯರಲ್ಲವೆ?

ಜನತೆಯು ಇಂದು ತನ್ನನ್ನು ತಾನು ತಿಳಿಯಬೇಕು ಜನರು ಅನ್ಯೋನ್ಯತೆಯಿಂದಿರಬೇಕು. ತನ್ನಿಂದಾದಷ್ಟು ಸಹಾಯ ಮಾಡಿ ಸಮಾಜದ ಉದ್ಧಾರ ಮಾಡಬೇಕು ಲಕ್ಷ್ಮಿಯು ತನ್ನ ದೇವತೆಯೆಂದು ತಿಳಿಯು ಬಾರದು, ಎಲ್ಲರ ದೇವಿ ಏ ಎಂದು ತಿಳಿಯಬೇಕು ಇದರ ಸಂತಾಂಶವೇ ದೇಶೋದ್ಧಾರ.

—ಶ್ರೀ ಕೆ.ಆರ್. ಜೋಂಟ್ರಾಬಿ ಎ,

ಉಡ್ಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ

O. S. No 436/1962.

ಕಾವೇರಮ್ಮ — ವಾದಿಳು.

ಮತ್ತು

ರಾಮಯ್ಯ ಯಾನೆ ಅನಂತರಾಮು ಕೇಳುಡಿ— ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿ ರಾಮಯ್ಯ ಯಾನೆ ಅನಂತರಾಮು ಕೇಳುಡಿ— ಶೇಷ ಕೇಳುಡರ ಮಗ— ಉಡ್ಪಿ ತಾಲ್ಲೂ ತೆಂಕನಿಡಿಯೂರು ಗ್ರಾಮದಲ್ಲಿರುವನ. ಇವರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ: —

ಪ್ರತಿವಾದಿಯಂದ ವಾದಿಳಿಗೆ ಬಹಾ ಶಾವಕಾರಿ ಮತ್ತು ಪ್ಲನ ಸಂಚಿರಗಳ ಅಪರಾತರ್ ಮತ್ತು ಬಡ್ಡಿ ವಗೈರೆ ಕೇಳಿ ವಾದಿಳು ಮಾಡಿದ ಮೇಲಿನ ಪಾವೆಯು ಪ್ರತಿವಾದಿಯ ಅಚ್ಚೆರು ನೋಟಿಸಿನ ಲಗ್ಗೆ ತಾ. 11—12—62 ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪಿಸಿಗೆ ಇಹೋಗಾಗಿಯೆಂದೆ. ಪ್ರತಿವಾದಿಯು ಸದ್ರಿ ದಿವಸ ಹಗಲು ಹತ್ತು ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಉದಪರಿಸದಿದ್ದಲ್ಲಿ ಸದ್ರಿ ದಾವೆ ಪ್ರತಿವಾದಿಯ ಗೈರುಹಾಜ್ರಿಯಲ್ಲಿ ತೀರ್ಮಾನಿಸಲ್ಪಡುತ್ತದೆ ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗುತ್ತದೆ.

P N. Krishnamoorthy Rao,
Advocate for Plaintiff.
Udipi, Dated 16—11—62.



ಆಮೇರಿಕನ್ ಪಿಸ್ತೂಲ್ ಆಟೋ
ಮೆಟಿಕ್ 6 ಗುಂಡು ಮತ್ತು 50
ಗುಂಡು ನಿಮಗೆ ಕೃಪ್ತಿಕರವಾಗದಿದ್ದಲ್ಲಿ
ಹಣ ವಾಪಾಸು ಕೊಡಲಾಗುವುದು.

ಶುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ವರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ 2

REY ROGAS & CO., 23-A, Anand Nagar, BOMBAY-26

ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಕವಲು ದಾರಿ—ಕೆಂಪು ದೀಪ

ಹೆಜ್ಜೆ ಹೆಜ್ಜೆ ನೀಡು ಮುಂದೆ

—ಸುದಾಸ.

ನೆನಪು ಕಣ್ಮುಂದೆ ಸುಳಿಯುತ್ತಿದೆ—ದಾಸ್ಯ ಶೃಂಖಲೆಯನ್ನು ಕಿತ್ತೊಗೆಯಲು ಭಾರತೀಯರು ಹೋರಾಡಿದ ಸ್ವಾತಂತ್ರ್ಯ ಸಂಗ್ರಾಮದ ಸವಿನೆನಪು; ಯುವ ಜನರ ಕೆನ್ನೀರು ಧೋ, ಇದೋ, ಎಂದು ದೇಶದ ತುಂಬ ಹರಿದ ಬಿಸಿಯುಸಿರಿನ ನೆನಪು.

ದೇಶದ ಎಲ್ಲೆಡೆಗಳಿಂದ ಭಾರತೀಯರ ರೆಗೆ ಓಗೊಟ್ಟುನಿಂತ ಸಮರ ಮಲ್ಲರ ಪವಿತ್ರ ಸ್ಮರಣೆ ಈ ಸಂಧಿಕಾಲದಲ್ಲಿ ಹೇಗೆ ಆಳದೀತು? ಅಸ್ತ್ರವಿಲ್ಲದ ಹೋರಾಟ ಒಂದೆಡೆ ಅಸ್ತ್ರ ಸಹಿತ ಹೋರಾಟ ಇನ್ನೊಂದೆಡೆ. ಒಂದು ತೀವ್ರಗಾಮಿ ಪಕ್ಷ ಇನ್ನೊಂದು ಮಂದಗಾಮಿ ಪಕ್ಷ. ಒಂದು ಹಿಂಸೆ. ಇನ್ನೊಂದು ಅಹಿಂಸೆ. ಎರಡರ ರಕ್ಷಣೆಗೂ ನೈತಿಕ ಬಲ ಸ್ವಯಂಸಿದ್ಧ.

ರಾಣಿ ಲಕ್ಷ್ಮೀಬಾಯಿ, ತಾಂತ್ಯಾಟೋಪಿ, ಟಿಪ್ಪುಸುಲ್ತಾನ್, ಬಾಲಗಂಗಾಧರ ತಿಲಕ್, ವೀರಸಾವರ್ಕರ್, ಭಗತ್‌ಸಿಂಗ್ ಅಲೂರ ವೆಂಕಟರಾಯರು, ಶಿವರಾಮ ಕಾರಂತರು, ಲಾಲಾಲಜಪತ್‌ರಾಯ್, ರಾಜೇಂದ್ರ ಪ್ರಸಾದ್, ಕರ್ನಾಡು ಸದಾಶಿವರಾಯರು, ರಂ. ರಾ. ದಿವಾಕರರು, ನೆಹರೂ ಕುಟುಂಬ, ಸರದಾರ್ ವಲ್ಲಭ ಭಾಯಿ ಪಟೇಲ್, ವೀರನಾರಿಮಣಿ, ಒಬ್ಬರೇ, ಇಬ್ಬರೆ, ಈ ಹೋರಾಟದಲ್ಲಿ ಭಾಗವಹಿಸಿದವರು?

ಇನ್ನು ಬಾಪೂಜಿ ಮತ್ತು ನೇತಾಜಿ? ಉತ್ತರ—ದಕ್ಷಿಣ. ದಾರಿ ಒಂದೆ. ಗುರಿ ಒಂದೆ.

ತುತ್ತನ್ನ ಸಿಗಲಿ, ಒಣ ರೊಟ್ಟಿ ಸಿಗಲಿ, ಅಂಬಲಿಯ ನೀರಾದರೂ ಸರಿಯೆ, ನಮಗೆ ಸ್ವಾತಂತ್ರ್ಯವೇ ಬೇಕು, ಎಂಬ ಘೋಷಣೆ, ಆ ಕಹಳೆಯ ಕೂಗಿಗೆ ಎಚ್ಚತ್ತ ಭಾರತ....

—ಜಗತ್ತಿನ ಇತಿಹಾಸದಲ್ಲಿ ಅಪೂರ್ವ ಸ್ಥಾನವನ್ನು ಗಳಿಸಿಕೊಂಡಿತು ಭಾರತೀಯರು ಕುರಿಗಳಲ್ಲ—ಸಿಂಹಗಳು ಎನ್ನುವದನ್ನು ಸಾಧಿಸಿ ತೋರಿಸಿತು.

ದೀಪಾವಳಿ ಪ್ರತಿ ವರ್ಷ ಬರುತ್ತದೆ. ನರಕಾಸುರ ವಧೆ ವರ್ಷ ವರ್ಷ ನಡೆಯುತ್ತದೆ. ಈ ಬಾರಿಯ ದೀಪಾವಳಿ ಎಂದಿನಂತಲ್ಲ. ಅದಕ್ಕೊಂದು ವಿಶೇಷ ಸೊಬಗಿದೆ. ನಮ್ಮ ಆಳಿಯ ದೇವರುಗಳು ಈ ಬಾರಿ ಮೂವೀನ ಮನೆಯತ್ತ ಸಾಗಿದ್ದಾರೆ! ಸಿಡಿಮದ್ದು, ಪಟಾಕಿಗಳ ಸದ್ದು ಕೇಳಿಸತ್ತಿರುವದು ಪೂರ್ವಾಲಯ ಪರ್ವತಶ್ರೇಣಿಯಿಂದ, ಎಂತಲೇ ಈ ಬಾರಿಯ ದೀಪಾವಳಿಗೆ ಅಪೂರ್ವ ನೋಟವಿದೆ.

ಆಲ್ಲಿ – ನೇಪಾರಂಗವು ಮತ್ತೊಂದು ಮಹಾಭಾರತಕ್ಕೆ ಎಡೆಮಾಡಿಕೊಟ್ಟಿದೆ. ಮತ್ತೊಂದು ಮಹಾಭಾರತ?

ಕೌರವ ಪಾಂಡವರೊಳಗೆ ಮತ್ತೆ ಸಮರ. ಇನ್ನೊಂದು ಭಗವದ್ಗೀತೆಯ ಸೃಷ್ಟಿ? ಈ ಮಹಾ ಭಾರತದಲ್ಲಿ ಕೃಷ್ಣೇವ್ ಅವರ ಪಾತ್ರವೇನು? ಎನ್ನುವದು ಅಸ್ಪಷ್ಟವಾಗಿದ್ದರೂ, ಶಕುನಿಯ ಪಟ್ಟವನ್ನು ಆಯೂಬ್‌ಖಾನರಿಗೆ ಒಪ್ಪಿಸಿಕೊಡಲಾಗಿದೆ.

ಕೃಷ್ಣಮೆನನ್ನರನ್ನು ಕೃಷ್ಣನೆಂದೇ ಇಟ್ಟುಕೊಳ್ಳಬಹುದು. ಅರ್ಜುನ ನೆಹರು. ಭೀಮ ಯಾರು ಎನ್ನುತ್ತಿರೇನು? ನಾವು-ನೀವು-ನಲ್ವತ್ತೈದು ಕೋಟಿ ಭಾರತೀಯರು.

ನಾವು ನಲ್ವತ್ತೈದು ಕೋಟಿ ಭಾರತೀಯರು—

—ಹಿಂದುಗಳಿರಲಿ, ಮುಸ್ಲಿಮರಿರಲಿ, ಸಿಖ್ಖರೋ, ಕ್ರೈಸ್ತರೋ, ಪಂಜಾಬಿನರೊ, ಗುಜರಾತಿನರೋ, ಯಾರೇ ಇರಲಿ—ನಾವು ಭಾರತೀಯರು—

—ಭಾರತದ ರಕ್ಷಣೆಗಾಗಿ ಹೋರಾಡುತ್ತೇವೆ; ಪಣತೊಟ್ಟು ಹೋರಾಡುತ್ತೇವೆ. ತಮ್ಮ ಬದುಕನ್ನು ಸಮರ್ಪಿಸಿ, ಸ್ವಾತಂತ್ರ್ಯ ಸಮರ ಮಲ್ಲರು ಗಳಿಸಿದ ಸ್ವಾತಂತ್ರ್ಯ ರಕ್ಷಣೆಗಾಗಿ ನೂಡಿ ಮಡಿಯುತ್ತೇವೆ.

ಅದೋ ಆಲ್ಲ! ಹಿಮಾಲಯ ಪರ್ವತ ಶ್ರೇಣಿಯಲ್ಲಿ ನಮ್ಮವರು ಹೋರಾಡುತ್ತಿದ್ದಾರೆ ಬೆಳ್ಳೆನೆಯ ಪರ್ವತ, ನಮ್ಮ ವೀರರ ರಕ್ತದಿಂದ ಕೆಂಪೇರತೊಡಗಿದೆ. ಚಳಿಯೇನು, ಮಳೆಯೇನು, ಎಂಬ ಅರಿವಿಲ್ಲದೆ ನಮ್ಮ ಯೋಧರು ಹೋರಾಟ ನಡೆಸಿದ್ದಾರೆ. ಶತ್ರುಗಳನ್ನು—ದುರಾಕ್ರಮಣಕಾರೀ ಚೀನೀಯರನ್ನು ಹೊಡೆದೋಡಿಸಲು ಗಂಡೆದೆಯಿಂದ ನಿಂತಿದ್ದಾರೆ.

ಇದೀಗ ಅಂತಹ ಸಮಯ—ರಕ್ತಾಂಜಲಿಯಿಂದ ಭಾರತೀಯ ಚರಣಗಳನ್ನು ತೊಳೆಯುವ ಸಮಯ ಬಂದಿದೆ ಆ ವೀರ ಯೋಧರ ಜೊತೆಗೆ ಕೋಟಿ ಕೋಟಿ ಜನರು ಕೂಡ ಬೇಕಾಗಿದೆ. ಚೀನೀಯರೇ ತೊಲಗಿರಿ ಹಿಂದೆ, ಎಂಬ ಘೋಷ ಕೋಟಿ ಕಂಠಗಳಿಂದ ಹೊರಡಬೇಕಾಗಿದೆ.

ಅಂತೆಯೆ—

ನಿನ್ನ ಬಳಿ ಏನಿದೆಯೋ ಅದನ್ನು—ಎಲ್ಲವನ್ನೂ ಭಾರತದ ರಕ್ಷಣೆಗಾಗಿ ಒಪ್ಪಿಸು—ಒಲವಿನ ಕಣ್ಣಿಡಿಗ.

ದೇಶಪ್ರೇಮದ ವ್ಯಾಖ್ಯಾನ ಬೇಡ. ಮುಂದೇನು ಎಂಬ ಕಾತರ ಬೇಡ. ನಿನ್ನನ್ನನ್ನ ಸಂಕುಚಿತಬುದ್ಧಿಯ ಬಗ್ಗೆ ಕನ್ನಡದ ಕಲಿಗಳು ಏನನ್ನೂ ಅನ್ನದ ರೀತಿ —

—ಒಪ್ಪಿಸಿಬಿಡು ಎಲ್ಲವನ್ನೂ, ಹೆಣ, ಬೆಳ್ಳಿ, ಬಂಗಾರ, ಆಹಾರ, ಬಟ್ಟೆ—ಏನು ಸಾಧ್ಯವೊ ಅವೆಲ್ಲವನ್ನೂ—ಎಲ್ಲವನ್ನೂ ಒಪ್ಪಿಸು. ರಕ್ತದಾನ ಮಾಡು; ಕೊಡು ರಕ್ತ ತರ್ಪಣವನ್ನು ಭಾರತದ ರಕ್ಷಣೆಗಾಗಿ ಮುಂದೆ ಬಾ ನೀನು, ತಲೆ ಎತ್ತಿ ಎದೆಯು ಬ್ಬಿಸಿ ನಡೆ ನೀನು ಮುಂದೆ.

ಭಾರತಿಯೆದೋ ಕರೆಯುತ್ತಿದ್ದಾಳೆ. ಉತ್ತರದ ಗಡಿ ರಕ್ಷಣೆಗಾಗಿ ನಿನ್ನನ್ನು ನನ್ನನ್ನು ಕರೆಯುತ್ತಿದ್ದಾಳೆ. ತಪಸ್ವಿಗಳ ತಪೋಸ್ಥಳವಾದಿಂದ ಪುನೀತಗೊಂಡ ಪರ್ವತಶ್ರೇಣಿ, ಭೂದಾಂ ಹಕ್ಕೊಳಗಾಗಿರುವ ಚೀನೀಯರ ಪದಸ್ಪರ್ಶದಿಂದ ಮಲಿನಗೊಳ್ಳದಿರಲೆಂದು ಕರೆಯುತ್ತಿದ್ದಾಳೆ, ತಾಯಿ ಭಾರತಿ ತಾಯಿಯು ಕರೆಯುತ್ತಿದ್ದಾಳೆ, ನಿರರ್ಥಕ ಕೂಗನ್ನೆ ಲಾರೆ. ನೀನು ಎಂಬ ಭರವಸೆಯಿರಲಿ? ತಾಯಿ ಭಾರತಿ ಕನ್ನಡದ ಕಲಿಗಳನ್ನೂ ನೀರೀಕ್ಷಿಸುತ್ತಿದ್ದಾಳೆ, ಆ ನಿರೀಕ್ಷೆಪೊಳ್ಳಾಗದಂತೆ ನೀನು—ನೀನು ಕರ್ತವ್ಯ ದೀಕ್ಷೆ ತೊಟ್ಟು ವಿಶ್ವ ದ್ರೋಹಿಗಳನ್ನೆನ್ನು ಎದುರಿಸೋಣ! ವಿಶ್ವಶಾಂತಿಯನ್ನು ಬಯಸುವ ಭಾರತವನ್ನು ಕೆಣಕುತ್ತಿರುವ ನೀಚರನ್ನು ಭುಜಕ್ಕೆ ಭುಜಕೊಟ್ಟು ಕೆಡವಲು, ಬರುವೆಯೊನೀನು?

ಪತಿವ್ರತೆ ಅಹಲ್ಯೆ ಶಿಲೆಯಾದಳು

(೨ನೇ ಪುಟದಿಂದ)

ಋಷಿ ಹೇಗೆ ಕ್ಷಮಿಸಿಯಾನು?

ಕ್ರೋಧಾವಿಷ್ಟನಾದ ಋಷಿಯು ತನ್ನ ಕಾಲಿನಿಂದಲೇ ಹೆಂಡತಿಯನ್ನು ಒದೆದು ತಿರಸ್ಕರಿಸಿ ಬಿಟ್ಟನು ಮತ್ತು ಅವಳೊಡನೆ— ''ಚಾರಿತ್ರ್ಯ ಹೀನಳಾದ ನಿನ್ನ ಮುಖ ನೋಡಬಾರದು. ತನ್ನ ತಪ್ಪನ್ನು ತಿಳಿದು-ಕೊಳ್ಳುವ ಸಾಮರ್ಥ್ಯವೂ ಈಗ ನಿನ್ನಲ್ಲಿ ಇಲ್ಲವಾಗಿದೆ' ಎಂದನು-

ಇಂದ್ರನನ್ನು ಕಂಡಾಗಲಂತೂ ಋಷಿಯ ಕ್ರೋಧ ಮತ್ತಷ್ಟು ಹೆಚ್ಚಾಯಿತು. ಅವನಿಗೆ ಕೂಡಲೇ ಅವನ ಶರೀರವು ''ಸಾವಿರ ತುಂಡುಗಳಾಗಿ ಭೂಮಿಗೆ ಬೀಳಲಿ'' ಎಂಬ ಶಾಪವನ್ನು ಕೊಟ್ಟನು. ದೇವೇಂದ್ರನ ಶರೀರ ಹಾಗೆಯೇ ಸಾವಿರ ಪಾಲಾಗಿ ಭೂಮಿಗೆ ಬಿತ್ತು. ತದನಂತರ ಅಹಲ್ಯೆಯೊಡನೆ—''ನಿನ್ನೆಯ ದಿನ ಕಂಡ ಅಪಶಕುನ ಸತ್ಯವಾಗಿದೆ. ನಿನ್ನನ್ನು ಬಿಡಲೇ ಬೇಕಾಗುತ್ತದೆ. ನಮ್ಮ ವಿದಾಯವನ್ನು ಇಂದು ಬೆಳಿಗ್ಗೆ ತಪೋವನವೇ ಬಯಸಿದೆ. ಇದೆಲ್ಲಾ ದೇವಾಂಗನೆಯರ ಕುತಂತ್ರ ಎಂದು ನನಗೆ ತಿಳಿದಿದ್ದರೂ, ನಿನ್ನ ಈ ಕೃತ್ಯಕ್ಕೆ ನೀನು ದಂಡವನ್ನು ಅನುಭವಿಸಲೇ ಬೇಕು!...' ಎಂದನು.

ಪರಿಶುದ್ಧ ಮನಸ್ಕಳಾಗಿ ಪತಿಯನ್ನೇ ದೇವರೆಂದು ನಂಬಿದ ಅಹಲ್ಯೆಗಾಗ ಪೇಪದನೆ ವರ್ಣಿಸಲಸದಳವಾಗಿದೆ. ತನ್ನ ನಿರ್ದೋಷಿತ್ವವನ್ನು ಅವಳು ಎಷ್ಟೂ ಹೇಳಿಕೊಂಡರೂ, ತನ್ನನ್ನು ಕ್ಷಮಿಸಬೇಕೆಂದೂ ಪ್ರಾರ್ಥಿಸಿಕೊಂಡರೂ, ಅವೆಲ್ಲ ನೀರಿನ ಮೇಲೆ ಬರೆದಿದ ಹೋಮದಂತೆ ವ್ಯರ್ಥವಾದುವು ಅವಳ ದುಃಖಕ್ಕೆ ಪಾರವೇ ಯಿಲ್ಲದಂಯಿತು. ಪುಟ್ಟ ಶಿಶುವಿನಂತೆ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಳು.

ಋಷಿಯ ಮನಸ್ಸನ್ನು ಕರಗದಿರಲಿಲ್ಲ. ತನಗೆ ಬರುತ್ತಿದ್ದ ದುಃಖವನ್ನು ಬಿಗಿಹಿಡಿದು ತಪ್ಪ ಮಾಡಿತ್ತಿದ್ದಕ್ಕೆ ಅನುರೂಪವಾದ ಚರ್ಯೆಯನ್ನೇ ಅವನು ಅನುಸರಿಸಿದನು. ಅವನು ಅಹಲ್ಯೆಯೊಡನೆ— ''ಆದ್ಯಪ್ಪವು ಹಾಳಾದಾಗ ಕೂಗಿಪ್ರಯೋಜನವಿಲ್ಲ. ತನ್ನ ಎಲ್ಲಾ ರಚನಾ ಕೌಶಲವನ್ನು ಸಯೋಗಿಸಿ ಬ್ರಹ್ಮನಿನ್ನನ್ನು ಬಹು ರೂಪನಾಯನ್ನಾಗಿ ಸೃಷ್ಟಿಸಿದ. ಅಂತಹ ಶರೀರವನ್ನೇ ಭ್ರಷ್ಟವನ್ನಾಗಿ ಮಾಡಿದ ನೀನು ಸರ್ವಥಾ ತ್ಯಾಜ್ಯಳು-ನಿನ್ನ ಈಕುಕೃತ್ಯಕ್ಕೆ ಪತನಕ್ಕೆ ಇಗೋ ಶಾಪ ಕೊಡುತ್ತಿದ್ದೇನೆ. ನೀನು ಶಿಲೆಯಾಗಿ ಹೋಗು. ಇದರಿಂದಲಾದರೂ ಇನ್ನು ಮುಂದೆ ನೀನಾವ ದುಷ್ಕರ್ಮಗಳನ್ನು ಹಾಳುಮಾಡದಿರು ಮಂತಾಗಲಿ. ಈ ಭೀಕರ ಶಾಪಕ್ಕೆ ಗೌತಮನ ಮನಸ್ಸು ನುಮ್ಮಲುಮರುಗಿತು. ಅದಕ್ಕೆ ಪುನಃ ಪರಿಹಾರವನ್ನು ಪೇಳುತ್ತಾ—ಎಂದು ಭಗವಾನ್ ರಾಮಚಂದ್ರನು ತನ್ನ ಪಾದ ಸ್ಪರ್ಶವನ್ನುಮಾಡುವನೋ ಅಂದೇ ನಿನಗೆ ಮುಕ್ತಿ ಎಂದು ಹೇಳಿ ಶಿಲೆಯಾಗಿ ಮಾರ್ಪಟ್ಟ ತನ್ನ ಪತ್ನಿಯನ್ನು ಪ್ರಕೃತಿದೇವಿಗೊಪ್ಪಿಸಿ ತಾನು ಕಮಂಡಲು ಹಿಡಿದುಕೊಂಡು ತಪಸ್ಸಿಗೆ ದುರ್ಗಮವಾಲುವ ಪ್ರಶಾಂತ ಪ್ರದೇಶಕ್ಕೆ ತೆರಳಿದನು.

ಶ್ರೀ ಬಿ.ನಾರಾಯಣ ಜೋಗಿತ್ತಾಯ



REGD. No. B. G. 176
LICENCE No. 31
Licensed to Post without Prepayment

ಸಹಾಯಕ ಸೇನಾದಳಗಳ ಪಾತ್ರ

ಯುದ್ಧ ಹಾಗೂ ಶಾಂತಿ ಸಮಯಗಳಲ್ಲಿ ನಮ್ಮ ರಾಷ್ಟ್ರೀಯ ಯೋಜನೆಯ ನಿರ್ಮಾಣ ಕಾರ್ಯದಲ್ಲಿ ಸಹಾಯಕ ಸೇನಾ ದಳಗಳು ವಹಿಸುವ ಪಾತ್ರವನ್ನು "ಜರ್ನಲ್ ಆಫ್ ದಿ ಯುನೈಟೆಡ್ ಸರ್ವಿಸಸ್ ಇನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ" ಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಪತ್ರಿಕೆಯ ಏರ್ ಡಿವಿಜನ್‌ದ ಸಮರ್ಣ ಪದಕ ಪ್ರತಿಬಂಧ ಸ್ಪರ್ಧೆಯಲ್ಲಿ ಬಹುಮಾನಗಳಿಸಿದ ಬ್ರಿಗೇಡಿಯರ್ ಆರ್ ಸಾಹ್ನಿ ಅವರೇ ಲೇಖನಗಳನ್ನು ಬರೆದವರು.

ಚೀನಾದ ಆಕ್ರಮಣ ಹಾಗೂ ಭಾರತದ ಸುರಕ್ಷತೆಗೆ ಪಾಕಿಸ್ತಾನದಿಂದಿರುವ ಬೆದರಿಕೆಗಳ ಸಂದರ್ಭದಲ್ಲಿ ಲೇಖಕರು ಆಪತ್ ಸಮಯಗಳಲ್ಲಿ ಸಿದ್ಧವಾಗಿರುವಂತೆ ಸಹಾಯಕ ಸೇನೆಗಳನ್ನು ತರಬೇತು ಮಾಡುವ ಅವಶ್ಯಕತೆಯನ್ನು ಒತ್ತಿ ಸೂಚಿಸಿದ್ದಾರೆ ಶ್ರೀಯುತರು ತಮ್ಮ ಲೇಖನದಲ್ಲಿ ಮೂರು ಅಂಶಗಳನ್ನು ಸೂಚಿಸಿದ್ದಾರೆ ಇವಾವುವೆಂದರೆ ಆಪತ್ ಸಮಯಗಳಲ್ಲಿ ಸಹಾಯಕ ಸೇನೆಗಳು, (1) ದೇಶದ ಆಂತರಿಕ ಭದ್ರತೆಯ ಮತ್ತು ರಕ್ಷಕ ಸೈನ್ಯಗಳ (ಗ್ಯಾರಿಸನ್) ಕೆಲಸ ಕಾರ್ಯಗಳನ್ನು ವಹಿಸಿಕೊಳ್ಳುವುದು; (2) ಯುದ್ಧ ನಡೆಸಲು ಅಗತ್ಯವಾದ ಸೇವೆಗಳನ್ನು ದಕ್ಷತೆಯಿಂದ ನಡೆಸಿಕೊಂಡು ಬರುವುದ; ಮತ್ತು (3) ಮುಖ್ಯವಾಗಿ ಸಾರಿಗೆ ಕ್ಷೇತ್ರದಲ್ಲಿ ಹೆಚ್ಚಾಗಿ ತಾಂತ್ರಿಕ ಯೂನಿಟ್‌ಗಳನ್ನು ಒದಗಿಸಿ ಕೊಡುವುದು ಈ ಮೂರು ಅಂಶಗಳನ್ನೂ ಕಾರ್ಯರೂಪಕ್ಕೆ ತಂದಾಗ, ಸಶಸ್ತ್ರ ದಳಗಳು ಆಕ್ರಮಣಕಾರರನ್ನು ಓಡಿಸಿ, ದೇಶವನ್ನು ರಕ್ಷಿಸಲು ಸಾಧ್ಯವಾಗುತ್ತದೆ.

ಈ ಕಾರಣದಿಂದಾಗಿ ಸಹಾಯಕ ಸೇನಾ ದಳಗಳನ್ನು ಸೇರುವುದು ದೇಶಾಭಿಮಾನವುಳ್ಳ ಪ್ರತಿಯೋರ್ವ ಯುವಕ ಯುವತಿಯ ಮುಖ್ಯ ಕರ್ತವ್ಯವಾಗಿರುತ್ತದೆ, ಯುವಕ ಯುವತಿಯರು ತಮ್ಮ ಬಿಡುವಿನ ಸಮಯದಲ್ಲಿ ಸೇನಾ ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಯುವಕ ಯುವತಿಯರು ತಮ್ಮ ಅನುದಿನದ ವೃತ್ತಿಗಳಲ್ಲಿಯೇ ತೊಡಗಿದ್ದು ಸಮಯ ಬಂದಾಗ ಮಾತ್ರ ಶಸ್ತ್ರ ಹಿಡಿಯಬೇಕಾಗುತ್ತದೆ. ಈಚಿನ ವರ್ಷಗಳಲ್ಲಿ ಸಹಾಯಕ ಸೇನಾ ದಳಗಳಿಗೆ ಉತ್ತೇಜನ ದಾಯಕ ಬೆಂಬಲ ದೊರೆತಿದೆ. ಪ್ರಾದೇಶಿಕ ಸೇನೆ, ಸಹಾಯಕವಾಯು ಸೇನೆ, ರಾಷ್ಟ್ರೀಯ ಸೈನಿಕ ವಿದ್ಯಾರ್ಥಿದಳ ಮತ್ತು ಸಹಾಯಕ ಸೈನಿಕ ವಿದ್ಯಾರ್ಥಿ ದಳಗಳು ಗಳಿಸಿರುವ ಗಣನೀಯ ಪ್ರಗತಿಯೇ ಇದಕ್ಕೊಂದು ನಿದರ್ಶನವಾಗಿದೆ ಈ ದಳಗಳಲ್ಲಿ ತರಬೇತಿ ಪಡೆದವರು ರಾಷ್ಟ್ರದ ಗೌರವ ಪ್ರತಿಷ್ಠೆಗಳಿಗೆ ಅರ್ಹರಾಗುವರೆಂಬ ವಿಷಯದಲ್ಲಿ ಸಂಶಯವೇ ಇಲ್ಲ

ಈ ದಳಗಳು ಯುದ್ಧ ಕಾಲದಲ್ಲಿ ವಹಿಸುವ ಪಾತ್ರವನ್ನು ಬ್ರಿಗೇಡಿಯರ್ ಸಾಹ್ನಿಯವರು ಮುಖ್ಯವಾಗಿ ಪ್ರಸ್ತಾಪಿಸಿಲ್ಲ ಶಾಂತಿ ಸಮಯದಲ್ಲಿ ಈ ಸಹಾಯಕ ಸೇನೆಗಳನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕೆಂಬುದು ಅತಿ ಮುಖ್ಯವಾದ ವಿಷಯವೆಂದು ಅವರು ಅಭಿಪ್ರಾಯಪಡುತ್ತಾರೆ ಸಾರ್ವಜನಿಕರಲ್ಲಿ ನೈತಿಕ ಮಟ್ಟ ಮತ್ತು ಶಿಸ್ತನ್ನು ಬೆಳೆಸಿಕೊಂಡು ಬರಲು ಹಾಗೂ ಪ್ರವಾಹ ಮತ್ತಿತರ ಪ್ರಾಕೃತಿಕ ಆಪತ್ತುಗಳು, ಮುಷ್ಕರ, ಬೀಗ ಮುದ್ರೆ ಮುಂತಾದ ಪ್ರಸಂಗಗಳಲ್ಲಿ ಈ ಸಹಾಯಕ ಸೇನಾ ದಳಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂಬುದನ್ನೂ ಅವರು ಲೇಖನದಲ್ಲಿ ತಿಳಿಸಿದ್ದಾರೆ. ಸಹಾಯಕ ಸೇನಾ ದಳಗಳಿಗೆ ಸೇರಿದ ಯುವಕ ಯುವತಿಯರು ರಾಷ್ಟ್ರೀಯ ಏಕಾತ್ಮತೆ ಸಾಧನೆಯ ದೂತರಾಗಿರುವರು- ಏಕೆಂದರೆ ದೇಶದ ವಿವಿಧ ಭಾಗಗಳಿಂದ ಬಂದ ಇವರುಗಳು ಒಂದು ಕುಟುಂಬದಂತೆ ಬಾಳಿ ಬದುಕುವ ಪಾಠವನ್ನು ಈ ಸೇನಾ ದಳಗಳಲ್ಲಿ ಕಲಿತಿರುತ್ತಾರೆ. ತರಬೇತಿ ಸಮಯದಲ್ಲಿ ಬೆಳೆಸಿಕೊಂಡ ರಾಷ್ಟ್ರೀಯ ಐಕ್ಯಮತ್ಯದ ಮನೋಭಾವವನ್ನೇ ಅವರು ತಮ್ಮ ಮನೆಗಳಲ್ಲಿಯೂ ಸಾಮುದಾಯಿಕ ಪ್ರಾದೇಶಿಕ ಆಧಾರದ ಮೇಲೆ ರಚಿತವಾದ ಸಹಾಯಕ ಸೇನೆಗಳು ಅಯಾ ಪ್ರದೇಶಗಳ ಪ್ರಜೆಗಳೊಂದಿಗೆ ನಿಕಟ ಸಂಬಂಧಪಡೆದಿರಬೇಕೆಂದೂ ಲೇಖನವು ಸೂಚಿಸುತ್ತದೆ. ಅದರಲ್ಲಿಯೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ಅತ್ಯಗತ್ಯವಾಗಿರುತ್ತದೆ

ಚೀನಾದ ಆಸುರೀ ಆಕ್ರಮಣದ ಸಂಧಿಕಾಲದಲ್ಲಿ ನಾವೇನು ಮಾಡಬೇಕು?

(ನಿನ್ನೆ ಮುಟ್ಟಿದಿಂದ)

ಆದರೆ ರಷ್ಯಾ ಮಾತ್ರ ಅಂಕಿಸ್ತಾನ—ಬ್ರಹ್ಮ ದೇಶಗಳಂತೆ ತಟಸ್ಥ ಧೋರಣೆ ವಹಿಸಿದಂತೆ ಕಾಣುವುದಿಲ್ಲ. ಚೀನಾವನ್ನು ತನ್ನ ಬಂಧು ರಾಷ್ಟ್ರವೆಂದು ಹೇಳಿ ಅದಕ್ಕೇ ಬೆಂಬಲ ಕೊಡಬಹುದೆಂದು ವೀಕ್ಷಕರ ಅಭಿಪ್ರಾಯ ಈಗೀಗ ಸತ್ಯವಾಗುತ್ತ ಬರುತ್ತಿದೆ ಆದರೂ ನಮ್ಮ ಮೇನನ್ನರು ವಿವಾದದ ಗ್ರಸ್ತ ವ್ಯಕ್ತಿಯೊಡಂತೆ ಅವರೆಡರ ಸಂಬಂಧ-ಮೈತ್ರಿಗಳ ಬಗ್ಗೆ ಏನೆಂದು ಸರಿಯಾಗಿ ಹೇಳಬರುವಂತಿಲ್ಲ.

ಪಾಕಿಸ್ತಾನದ ದ್ರೋಹ

ನೆರೆಯ ರಾಷ್ಟ್ರ ಪಾಕಿಸ್ತಾನ ಚೀನಾವನ್ನು ತನ್ನ ಮೈರಿಯೆಂದು ಬಗೆದು ತಿಳಿಯುವುದರ ಬದಲು ಅದರ ಮಿತ್ರನೆನಿಸುವ ಪ್ರಯತ್ನ ಮಾಡುತ್ತಿರುವುದು ನಿಜಕ್ಕೂ ಆಶ್ಚರ್ಯವೆ ಆಪರಾಧ.ಆದರೆ ಆಮೇರಿಕ—ಇಂಗ್ಲೆಂಡುಗಳ ಬೆದರಿಕೆಗೋ—ಸಲಹೆಗೋ ಬಗ್ಗಿ ಅದೀಗ ತಟಸ್ಥವಾಗಿಯೂ ಇರದಂತೆ ಆಗಿದೆ. ಆದಕ್ಕೆ ಸರಿಯೊಗಿ ಚೀನೀಯರು ಪಾಕ್ ಆಕ್ರಮಿತ ಕಾಶ್ಮೀರವನ್ನು ಪ್ರದೇಶಿಸಿದರೆಂಬ ಸದ್ದಿಯೂ ಬಂದಿದೆ. ಇನ್ನು ಅದು ಸುಮ್ಮಗಿರುವಂತಿಲ್ಲ. ವೈಯಕ್ತಿಕ ಭಿನ್ನಾಭಿಪ್ರಾಯಗಳೇನೇ ಇದ್ದರೂ ಇಬ್ಬರಿಗೂ ವೈರಿಗಳಾದ ಚೀನೀಯರನ್ನು ಹಿಡೆನೋಡಿಸುವುದರಲ್ಲಿ ಪಾಕಿಸ್ತಾನ ಸಹಾಯ ಮಾಡುವುದು ನ್ಯಾಯಪೂರ್ಣ.

ಸ್ವಾವಲಂಬಿಗಳಾಗಬೇಕು

ಇಂಥ ಪರಿಸ್ಥಿತಿಯಲ್ಲಿ ನಮ್ಮ ದೇಶ ಪ್ರತಿಯೊಂದು ವಿಷಯದಲ್ಲಿ ಸ್ವಾವಲಂಬಿಯಾಗದಿದ್ದರೆ ಬಹುದೊಡ್ಡ ಸಾಲದ ಹೊರೆ ಮುಂದ ನಮ್ಮನ್ನು ಯುದ್ಧದಂತೆಯೆ ಪೀಡಿಸುವುದರಲ್ಲಿ ಸಂಶಯವಿಲ್ಲ ನಮ ಆಹಾರಧಾನ್ಯಗಳಲ್ಲಿ—ಪೇಟೆ ಸಾಮಾನುಗಳಲ್ಲಿ ನಾವು ಪೂರ್ಣ ಹತೋಟಿಯಲ್ಲಿರಬೇಕು. ನಮಗೆ ಬೇಕಾದ ಯುದ್ಧ ಸಾಮಗ್ರಿಗಳನ್ನು ಉತ್ಪಾದಿಸುವ ಮುಖ್ಯಕಾರ್ಯವನ್ನು ನಮ್ಮ ಯಂತ್ರಗಳು ಭರದಿಂದ ಮಾಡಿ ಸ್ವಾವಲಂಬನವನ್ನು ಸಾಧಿಸಬೇಕು ಆದುದರಿಂದ ಪ್ರತಿಯೊಬ್ಬ ಭಾರತದ ಪ್ರಜೆಯೂ ಪರಿಶ್ರಮ ಪಟುವಾಗಬೇಕು

ತ್ಯಾಗ-ಬಲಿದಾನಗಳೇ ಈಗಬೇಕು

ಇಂಥ ವಿಷಮ ಸಂದರ್ಭದಲ್ಲಿ ಪ್ರತಿಯೊಬ್ಬ ಭಾರತೀಯನೂ ದೇಶಕ್ಕೋಸ್ಕರ ಎಲ್ಲ ವಿಧದತ್ಯಾಗ ಮಾಡಿ ತನ್ನ ಋಣವನ್ನು ಕೊಡಾ ರಾಷ್ಟ್ರ ರಕ್ಷಣೆಯ ಪವಿತ್ರ ಕಾರ್ಯಕ್ಕೆ ಅರ್ಪಿಸಿ ಕೃತ ಕೃತ್ಯ ನಾಗ ಬೇಕು ನಮ್ಮ ಪಣ—ನಮ್ಮ ಕನಕ ನಮ್ಮ ಧರಣ ಇವೆಲ್ಲ ದೇಶಪ್ರೇಮದ ಮುಂದೆ—ಸ್ವಾತಂತ್ರ್ಯ ರಕ್ಷಣೆಯ ಮುಂದೆ ಅಲ್ಪವೇ ಸರಿ. ಪ್ರತಿಯೊಬ್ಬ ಪ್ರಜೆಯೂ ಇಂದು ನಮ್ಮ ಗಡಿಯಲ್ಲಾಗುತ್ತಿರುವ ಪರಿಸ್ಥಿತಿಯನ್ನು ದಿನ ದಿನಕ್ಕೆ ತಿಳಿದು ತನ್ನ ಹೊಣೆಗಾರಿಕೆಯನ್ನರಿತು ರಾಷ್ಟ್ರ ಭಕ್ತಿಯಿಂದ ಪ್ರೇರಿತನಾಗಿ ತ್ಯಾಗಕ್ಕೆ ಸಿದ್ಧನಾಗ ಬೇಕು ತನ್ನ ಖರ್ಚುಗಳನ್ನು ಮಿತಗೊಳಿಸಿ, ದೇಶದ ಇಂದಿನ ಪರಿಸ್ಥಿತಿಗೆ ಸಹಾಯವಾಗುವಂತೆ ತನ್ನ ಪಾಲಿನ ಆರ್ಥಿಕ ಸಹಾಯವನ್ನು ಮುಕ್ತ ಹೃದಯದಿಂದ ಈಯಬೇಕು ತನ್ನ ಆತ್ಮಬಲ, ಮಾನಸಿಕ ಸ್ಥೈರ್ಯಗಳನ್ನು ಬಲಪಡಿಸಿ ಸ್ವಾತಂತ್ರ್ಯ ರಕ್ಷಣೆಯ ಈ ಪವಿತ್ರ ಕಾರ್ಯದಲ್ಲಿ ಕರ್ತವ್ಯವನ್ನು ದಕ್ಷತೆಯಿಂದ, ನಿಃಸ್ವಾರ್ಥದಿಂದ ಮಾಡಬೇಕು.

ಅಂತಿಮ ಜಯ ನಮ್ಮದೇ

ಇಂದು ಚೀನಾ ಲಡಾಕ್—ನೇಫಾಗಳನ್ನು ಪ್ರವೇಶಿಸಿ ಭೀಕರ ಕಾಳಗ ಕೊಡುತ್ತಿದೆ ನಮ್ಮ ತಯಾರಿ ಇನ್ನೂ ಬರದಿಂದ ಸಾಗುತ್ತಿದೆ. ಪ್ರಾರಂಭದಲ್ಲಿ ಕೆಲವೊಂದು ಸೋಲುಗಳ ನಂತರವಾದರೂ ಅಂತಿಮ ಜಯ ನಮಗೆ ಸಿಗುವುದರಲ್ಲಿ ಸಂಶಯವಿಲ್ಲ. ಇದಕ್ಕಾಗಿ ಪ್ರತಿ ಭಾರತೀಯನೂ ವೈರಿಯ ಉಚ್ಚಾಟನೆ ಮಾಡಿ ತನ್ನ ಮಾತೃಭೂಮಿಯ ರಕ್ಷಣೆಗೋಸ್ಕರ ತ್ರಿಕರಣಪೂರ್ವಕವಾಗಿ ತನು-ಮನ-ಧನಗಳನ್ನು ಅರ್ಪಿಸುವ ಮಹಾ ಪ್ರತಿಜ್ಞೆ ಮಾಡಬೇಕು.

ರಾಮೋತನಯ

ಪಿಗ್ಮಿ
ಪಿಗ್ಮಿ
ಪಿಗ್ಮಿ
ಪಿಗ್ಮಿ
ಪಿಗ್ಮಿ
ಪಿಗ್ಮಿ
ಪಿಗ್ಮಿ

ದೈನಿಕ
ಉಳಿತಾಯಗಾರರ
ಸನ್ಮಿತ್ರ

ದಿನಕ್ಕೆ 25 ನ. ಪೈಸೆ
7 ವರುಷಗಳಲ್ಲಿ
ರೂ 700-00

ಸಿಂಡಿಕೇಟ್ ಬ್ಯಾಂಕ್

ದಿ ಕೆನೆರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.

Edited Printed & Published by K. H. Shetty, at the Navayuga Press, Udipi, S. India.

NTRIBUTE
IUR MITE
OUR
ATIONAL
EFENCE
IND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 12

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 29—11—1962 ಗುರುವಾರ

20ನ ಪೈಸೆ
ವಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೧೨

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ನಮ್ಮೊಡನೆ ಜಗತ್ತೂ ಹೇಳುತ್ತದೆ

ಚೀನೀಯರು ನೇಯ್ದ ಮಾಯದ ಬಲೆ

ಇಂದು ಜಗತ್ತಿನ ದೃಷ್ಟಿ ಭಾರತದ ಮೇಲಿರುವುದು ಸ್ವಾಭಾವಿಕವಾಗಿದೆ. ನಮ್ಮ ಸ್ವಾತಂತ್ರ್ಯವನ್ನು ಕಬಳಿಸ ಬಂದ ಆ ಚೀನೀ ಆಕ್ರಮಣಕಾರರನ್ನು ಹೊರ ದಬ್ಬುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪಂಚಶೀಲ—ಶಾಂತಿ ಮಂತ್ರಗಳಿಗೆ ಜನಕ ನೆನಿಸಿಕೊಂಡ ಭಾರತ ಈಗ ಏನು ಮಾಡುತ್ತದೆಂದು ನೋಡಬೇಕೆನ್ನುವ ದೇಶಗಳು ತುಂಬಾ ಇವೆ ಇಂದು ಭಾರತಕ್ಕೆ ಬಹು ಕಠಿಣ ಪರಿಸ್ಥಿತಿ ಬಂದೊದಗಿದೆ. ಜಗತ್ತಿನಲ್ಲಿ ಮಿತ್ರರಾರು? ಶತ್ರುಗಳಾರು? ಎಂಬುದನ್ನು ನಿರ್ಧರಿಸಿ—ವ್ಯವಹರಿಸುವ ಘಟ್ಟ ಇಂದು ಅದು ಯೋಚನಾಹರವಶವಾಗಿದೆ. ಶಾಂತಿಯೇ ನಮ್ಮ ಧ್ಯೇಯ—ಯುದ್ಧವೆಂದಿಗೂ ಸಲ್ಲದು. ಅಹಿಂಸೆಯೇ ನಮ್ಮ ತತ್ವ ಎಂಬುವುಗಳು ನಮ್ಮ ಪರಮ ಆದರ್ಶಗಳು. ಆದರೂ ನಮ್ಮ ಸ್ವಾಭಿಮಾನ, ಸ್ವಾತಂತ್ರ್ಯಗಳಿಗೆ ಧಕ್ಕೆ ಬರುವಾಗ ಭಾರತವೆಂದಿಗೂ ಸುಮ್ಮಗಿರಲಾರದೆಂದು ಪರದೇಶಗಳು ತಿಳಿದಿರಬೇಕು. ನಮ್ಮದು ತಾಟಸ್ಥ್ಯ ಧೋರಣೆಯಾಗಿದ್ದರೂ ವೈರಿಗೇ ನಮ್ಮ ದೇಶದ ಮೇಲೆ ಏರಿ ಬರುವಷ್ಟು ಸ್ವಾತಂತ್ರ್ಯವನ್ನು ಎಷ್ಟು ಮಾತ್ರಕ್ಕೂ ಕೊಡಲಾರೆವು. 'ಯಾವ ಸಮಸ್ಯೆಗೂ ಭಾರತವು ಶಾಂತಿಯುತ ಪರಿಹಾರವನ್ನೇ ಬಯಸುವುದು' ಎಂದು ಜಗತ್ತು ತಿಳಿದಿದ್ದರೂ ಇಂದು ಆ ಕೆಂಪು ಚೀನಾದ—ಆ ಆಕ್ರಮಣಶಾಲಿ ಚೀನಿಯರ—ಅಸುರೀ ಆಕ್ರಮಣವಾಗುವ ಈ ಸಂಧಿಕಾಲದಲ್ಲಿ ಯೂ, ಶಾಂತಿ, ಪಂಚಶೀಲಗಳಿಗೆ ಕೊಡಲಿಯೇಟನ್ನಿತ್ತ ಆ ಚೀನಾದೊಂದಿಗೆ ಎಂದಿಗೂ ಶಾಂತಿ—ಸಂಧಾನ ಮಾಡಲು ಸಾಧ್ಯವಿಲ್ಲ. ಹಾಗಾದರೆ ಭಾರತವು ಯುದ್ಧವನ್ನೇ ಬಯಸುತ್ತಿದೆಯೇ? ಇಲ್ಲ; ಅದಕ್ಕೆ ಬೇಕಾದುದು ಯುದ್ಧವಲ್ಲ! ಮತ್ತೇ ತನ್ನ ದೇಶದ ರಕ್ಷಣೆ ಮಾಡುವುದಷ್ಟೇ ದೇಶಕಾಗಿದೆ. ಅದಕ್ಕಾಗಿ—ತನ್ನ ಸ್ವಾತಂತ್ರ್ಯ ರಕ್ಷಣೆಗಾಗಿ ಏನೆಲ್ಲ ಮಾಡಬೇಕೋ ಅದನ್ನೆಲ್ಲಾ ಭಾರತ ಖಂಡಿತವಾಗಿಯೂ ಮಾಡುತ್ತದೆ.

ಅಮೇರಿಕ—ರಷ್ಯಾ

ಈ ತನಕ ಜಗತ್ತಿನ ಸ್ಥಿತಿಯೊಂದು ದೇಶವು ತಮ್ಮ ಸಮಸ್ಯೆಗಳಿಗಾಗಲೀ ಜಗತ್ತಿನ ಸಮಸ್ಯೆಗಳಿಗಾಗಲೀ ಭಾರತದ ಪ್ರತಿಕ್ರಿಯೆ ಏನೆಂದು ತಿಳಿದುಕೊಳ್ಳಲು ಹಾತೊರೆಯುತ್ತಿದ್ದರೆ ಇಂದು ಅವೆಲ್ಲ ಭಾರತದತ್ತ ನೋಡುತ್ತಿವೆ. ಮೊದಲು ಭಾರತ ಜಗತ್ತಿನ ಇಬ್ಬಣಗಳಿಗೂ ಬೇಕಾದ ಪ್ರಿಯ ರಾಷ್ಟ್ರವಾಗಿತ್ತು. ರಷ್ಯಾವು ಭಾರತವು ತನ್ನ ಮಿತ್ರ ರಾಷ್ಟ್ರವೆಂದೂ, ಅಮೇರಿಕವು ಭಾರತ ತನ್ನ ಸ್ನೇಹಿತ ರಾಷ್ಟ್ರವೆಂದೂ ಸ್ಪರ್ಧೆ ಮಾಡುತ್ತಿದ್ದುವು. ಆದರೆ ಇಂದು....? ಭಾರತದ ಮೇಲೆ ಕಮ್ಯುನಿಸ್ಟರ ಆಕ್ರಮಣವಾಗಿದೆ. ಈ ನಗ್ನ ಆಕ್ರಮಣವನ್ನು ಅಮೇರಿಕ ಉಗ್ರವಾಗಿ ಖಂಡಿಸಿದರೆ ರಷ್ಯಾಕ್ಕೆ ಯಾಕೆ ತನ್ನ ಮಿತ್ರನ ಮೇಲೆ ಕರುಣೆ ಉಂಟಾಗಲಿಲ್ಲ. ಅದಕ್ಕೆ ಭಾರತವು ಮಿತ್ರ ರಾಷ್ಟ್ರವಾದರೆ ಚೈನಾ ಬುಬಂಧು ರಾಷ್ಟ್ರವಾಗಿದೆ. ಮಿತ್ರರಿಗಿಂತ ಬಂಧುಗಳಿಗೇ ಸಹಾಯ ಮಾಡುವುದು ಈಗ ರಷ್ಯದ ಧೋರಣೆಯೂಡಂತಿದೆ.ಹಾಗಾದರೆರಷ್ಯವು ಭಾರತದ ಶತ್ರುವನ್ನು ಅಮೇರಿಕ ಭಾರತದ ಪರಮ ಮಿತ್ರನೆಂದು ಹೇಳಲೇ? ಹೇಗೆ? ಶಸ್ತ್ರಾಸ್ತ್ರ ಕೊಟ್ಟರೆಂದು ತಿಳಿದು ಮಿತ್ರರೆಂದು ನಿರ್ಧರಿಸುವುದೇ? ಅದು ಭಾರತದ ಮಿತ್ರ ರಾಷ್ಟ್ರವಾಗಿದ್ದರೆ ಭಾರತೀಯ ಭೂ ಭಾಗದಲ್ಲಿ ಸ್ವಾತಂತ್ರ್ಯ ಸಿಕ್ಕಿದ ನಂತರವೂ ದರ್ಪದಿಂದ ರಾಜ್ಯಭಾರ ಮಾಡುತ್ತಿದ್ದ ಪೋರ್ಚುಗೀಸರಿಂದ ಗೋವಾನನ್ನು ವಶಪಡಿಸಿಕೊಂಡಾಗ ಅದು ಹೇಳಿದುನೇನು? ಅಡ್ಲಾಯ್ ಸ್ಟೀವನ್‌ಸನ್ನರು ಅಮೆರಿಕದ ಖಾಯಂಪ್ರತಿನಿಧಿಯಾಗಿ ಭಾರತವನ್ನೆಷ್ಟೊಂದುಟೀಕೆಮಾಡಿಲ್ಲ! ಭಾರತವು ಶಪ್ಪು ಮಾಡಿದೆಯೆಂದುಅಮೇರಿಕಾಧ್ಯಕ್ಷರೇ ಹೇಳಿದ್ದಾರೆ. ಆದರೆ ಇಂದು 'ಭಾರತದ ಮೇಲೆ ಕಮ್ಯುನಿಸ್ಟರ ಆಕ್ರಮಣವನ್ನೆಂದಿಗೂ ಅದು ಸಹಿಸುವಂತಿಲ್ಲ. ಈ ಸಂದರ್ಭದಲ್ಲಿ ಭಾರತಕ್ಕೆ ಯಾವುದೆಲ್ಲ ಸಹಾಯ ಬೇಕೋ ಅವೆಲ್ಲವನ್ನೂ ನೀವು ಕೊಡಲು ಸಿದ್ಧರಿದ್ದೀರೆ' ಎಂದು ಕಂಠೋಕ್ತವಾಗಿ ಸಾರಿದ್ದಾರೆ ಇದಕ್ಕೆ ಕಾರಣವೇನೆಂದು ವಿಚಾರಿಸಬೇಕು. ಅಮೇರಿಕಾ ಈವರೆಗೂ ಭಾರತವು ತನ್ನ ಮಿತ್ರ ರಾಷ್ಟ್ರವೆಂದು ಬಗೆದು ಇಂದು ಶಸ್ತ್ರಾಸ್ತ್ರ ಕೊಡುತ್ತಿಲ್ಲ. ಅದಕ್ಕೂ ಒಂದು ಸ್ವಾರ್ಥಪೂರ್ಣ ಅಭಿಲಾಷೆಯಿದ್ದೇ ಇದೆ. ಭಾರತವು ಕಮ್ಯುನಿಸ್ಟರ ವಶವಾದರೆ ಮುಂದೆ ಆಸ್ಯಾದಕ್ಷಿ, ಆನಂತರ ಜಗತ್ತಿನಲ್ಲಿ ಕಮ್ಯುನಿಜಮ್ ಹೆಬ್ಬಿಬಿಡುತ್ತದೆ ಎಂಬ ಭಯ ಅದಕ್ಕಿದೆ. ಆದುದರಿಂದಲೇ ಅದು ಚೀನಾವನ್ನು ಹೊರದಬ್ಬಲು ಭಾರತವು ಕೇಳಿದ ಎಲ್ಲಾ ನೆರವು ಕೊಡಲು ಸಿದ್ಧವಿದೆ.

ರಷ್ಯಾಕ್ಕೆ ಈಗ ಸಂದಿಗ್ಧ ಪರಿಸ್ಥಿತಿ ಬಂದೊದಗಿದೆ, ಆದರ ಆಂತರಂಗದಲ್ಲಿ ಭಾರತ ಮೂಡಿದುದು ಸರಿಯೆಂದು ಇದ್ದರೂ ಬಂಧುವನ್ನೆಂಕು ಸಂತೈಸೀತು? ಗೋವಾ ವಿಮೋಚನೆಯ ಸಂದರ್ಭದಲ್ಲಿ ಭಾರತಕ್ಕೆ ಪೂರ್ಣ ಬೆಂಬಲವನ್ನು ಬಯಸಿದ್ದರೂ ಇಂದು ಅದೇಕೆ ಭಾರತದ ಮೇಲಿನ ಆಕ್ರಮಣಕ್ಕೆ ತೀವ್ರ ಪ್ರತಿಕ್ರಿಯೆ ತೋರಿಸುತ್ತಿಲ್ಲ? ಸರ್ವಾಧಿಕಾರದಿಂದ ಮಿಡೋನನ್ಯತ್ವಂತಾದ ಕಮ್ಯುನಿಸ್ಟರನ್ನು ನಂಬಲಾದೀತೆ? ಚೀನೀಯರ ಉದ್ದೇಶ ಸಾಮ್ರಾಜ್ಯ ವಿಸ್ತರಣ ತಾನೇ! ಹಾಗಿರುವಾಗ ತನ್ನ ಬಂಧು ಈ ಕಾರ್ಯ ಮಾಡುತ್ತಿರುವಾಗ ರಶ್ಯ ಹೇಗೆ ಸುಮ್ಮನೆ ಕುಳಿತು ಕೊಳ್ಳುವುದೆ? ಹೂವಿನ ಬದಲು ಹೂವಿನ ಒಂದಸಳನ್ನಾದರೂ ಹಾಕಿ ಅದು ಈ ಪೂಜೆಗೆ ಪ್ರತ್ಯಕ್ಷವಾಗಿ ಯೂ ಪರೋಕ್ಷವಾಗಿ ಸಲ್ಲಿಸದೆ ಇರಲಾರದು! ಆದರೆ ರಶ್ಯದ ಚಾಣಕ್ಯರಾದ ಕ್ರುಶ್ಚೇವರಿಗೆ ಪುನಃ ಒಂದುವಿಶ್ವಯುದ್ಧವಾಗಬಹುದೇಎಂಬ ಹೆದರಿಕೆ ಪಿಡಿದಂತೆ ತೋರುತ್ತದೆ. ಯೂಕೆಂದರೆ ಕೆಲವು ದಿನಗಳ ಹಿಂದೆ ಅದು ಚೈನಾಕ್ಕೆ ಯುದ್ಧ ನಿಲ್ಲಿಸುವಂತೆಯೂ ತಮ್ಮಿಂದ ಹೆಚ್ಚಿನ ಸಹಾಯ ಸಿಗುವುದು ಅಸಾಧ್ಯವೆಂದೂ ತಿಳಿಸಿತ್ತಾದರೆಂದು ವರ್ತಮಾನವಿದೆ. ಆದರೆ ಇದನ್ನು ನಂಬುವುದು ಸಾಧ್ಯವೆ? ಪಾಶ್ಚಾತ್ಯ ರಾಷ್ಟ್ರಗಳಿಂದ ಧಾರಾಳವಾಗಿ ಬರ್ಮಾದ ಅಧ್ಯಕ್ಷರು ಅದರ ಅಧ್ಯಕ್ಷರೆಂದು ಎಲ್ಲ ಮೂಲಗಳಿಂದ ತಿಳಿದು ಬಂದಿದೆ. ಭಾರತದ ಮೇಲೆ ಚೀನವು ನಗ್ನ ಆಕ್ರಮಣವನ್ನು ಮಾಡುವುದರ ಬಗೆಗೆ ವಿಚಾರ—ವಿಮರ್ಶೆಮಾಡಿ ಒಂದು ನಿರ್ಧಾರಕ್ಕೆ ಬರುವುದೇ ಸನ್ಮೋಲನದ ಉದ್ದೇಶ.

ತಟಸ್ಥ ರಾಷ್ಟ್ರಗಳು

ಭಾರತವು ಜಗತ್ತಿನ ಎಲ್ಲಾ ರಾಷ್ಟ್ರಗಳೊಂದಿಗೆಮಿತ್ರತ್ವಬೆಳೆಸಿ ಕೊಳ್ಳುವ ಯತ್ನವನ್ನು ಮಾಡುತ್ತ ಬಂದಿದ್ದರೂ ಭಾರತಕ್ಕೆ ಇಂದು ಬಂದಿರುವ ಭೀಕರ ಸಂಧಿಗ್ಧ ಪರಿಸ್ಥಿತಿಯಲ್ಲಿ ತಟಸ್ಥವಾಗಿರುವ ರಾಷ್ಟ್ರಗಳೆಂದರೆ ಐರ್ಲಾಂಡ್, ಬರ್ಮಾ, ಜಪಾ

(ಉಳಿದ ಪುಟ ನೋಡಿರಿ)

ಭದ್ರತೆ
ಬಾಳಿಕೆಗಾಗಿ
ಖೀರಾ

ಇದೀಗ ರಾಷ್ಟ್ರ ರಕ್ಷಣೆ, ಭದ್ರತೆಗಾಗಿ ಹೋರಾಡುವ ಕಾಲವಲ್ಲವೆ?
ನಿಮ್ಮ ಮನೆಯ ಸುರಕ್ಷಿತತೆ, ಭದ್ರತೆಗಳಿಗಾಗಿ ಖೀರಾ—
ಫರ್ನಿಚರುಗಳನ್ನು ಆರಿಸುವುದು ಉಚಿತವಲ್ಲವೆ?
ಮನೆ, ಮಠ, ಆಫೀಸು, ಆಸ್ಪತ್ರೆ, ಶಾಲೆ ಕಾಲೇಜುಗಳಿಗೆ ಆತ್ಯಾವಶ್ಯಕವಾದ
ಯಾವತ್ತೂ ಉಕ್ಕಿನ ಫರ್ನಿಚರುಗಳಿಗೆ ವಿಚಾರಿಸಿರಿ ಯೂ ಸಂದರ್ಶಿಸಿರಿ!

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು— 1.

"ಗೌರಿ ಹಬ್ಬದ ರಿಸ್ಟ್ ವಾಚ್"

ಲೇಖಕ: ಸಿ. ಜಿ. ಪರಮೇಶ್ವರಪ್ಪ, ಚಿತ್ರದುರ್ಗ.

— ಪಾತ್ರವರ್ಗ —

ಚಂದ್ರು

ಗೌರಿ — ಚಂದ್ರುವಿನ ಹೆಂಡತಿ.

ಗಂಗಮ್ಮ — ಪಕ್ಕದ ಮನೆಯವಳು.

ಪೋಸ್ಟ್ ಮ್ಯಾನ್.

(ಒಂದು ಮನೆಯ ದೃಶ್ಯ. ತೆರೆ ಸರಿದ ನಂತರ ಪೋಸ್ಟ್‌ಮ್ಯಾನ್ ಪ್ರವೇಶ)

ಪೋಸ್ಟ್‌ಮ್ಯಾನ್—ಮನೆಯಲ್ಲಿ ಯಾರಿದ್ದಿರಮ್ಮಾ, ಟೆಲಿಗ್ರಾಂ ಬಂದಿದೆ.

ಗೌರಿ— (ಪ್ರವೇಶ) ಓ! ಪೋಸ್ಟ್ ಮ್ಯಾನ್!

ಪೊ. ಮ್ಯಾ— ಟೆಲಿಗ್ರಾಂ ಬಂದಿದೆಯಮ್ಮಾ.

ಗೌರಿ— ಟೆಲಿಗ್ರಾಂ! ಗೌರಿ ಹಬ್ಬದ ದಿನ ಟೆಲಿಗ್ರಾಂ ಅಂದರೇನು?! ಯಾವ ಊರಿನಿಂದ ಬಂದಿದೆ.

ಪೊ. ಮ್ಯಾ— ಬೆಂಗಳೂರಿನಿಂದ.

ಗೌರಿ— ಅಯ್ಯೋ, ನಮ್ಮಣ್ಣನಿಗೆ ಏನಾಗಿದೆಯೋ ಏನೋ. ಒಳ್ಳೆ ಹಬ್ಬದ ದಿನವೇ ಈ ಪ್ರಾರಬ್ಧ ಗಂಟುಬೀಳುತ್ತವೆಯಲ್ಲಾ. ಅವರು ಬೇರೆ ತರಕಾರಿ ತರಲು ಮೂರ್ಕೆಟ್‌ಗೆ ಹೋಗಿದ್ದಾರೆ

ಪೊ. ಮ್ಯಾ— ಈ ರಾಗದಕ್ಕೆ ರುಜು ಹಾಕಮ್ಮಾ.

ಗೌರಿ— ಯಾವ ನಂಬರಿಗೆ.

ಪೊ. ಮ್ಯಾ—ಹತ್ತನೆಯ ನಂಬರಿಗೆ. (ರುಜು ಹಾಕಿಕೊಟ್ಟು ಟೆಲಿಗ್ರಾಂ ಕವರನ್ನು ತೆಗೆದು ಕೊಳ್ಳುವಳು). ಬರುತ್ತೇನಮ್ಮಾ.

ಗೌರಿ— ಹೋಗಿ ಬರಪ್ಪ. ಇಂತ ಟೆಲಿಗ್ರಾಂ ಮಾತ್ರ ತರಬೇಡ.

(ಪೋಸ್ಟ್‌ಮ್ಯಾನ ನಗುತ್ತಾ ನಿರ್ಗಮಿಸುವನು, ಟೆಲಿಗ್ರಾಂ ಒಡೆಯುವಳು) ಅಯ್ಯೋ ನನ್ನ ಕರ್ಮವೇ. ಹಾಳಾದ್ದು ಇಂಗ್ಲಿಷಿನಲ್ಲಿದೆ. ನನಗೆ ಮೊದಲೇ ಇಂಗ್ಲಿಷ್ ಬರೊಲ್ಲ. ಅವರು ಬರುವುದು ಎಷ್ಟು ಹೊತ್ತಾಗುತ್ತೆ ಏನೋ. ಈ ಟೆಲಿಗ್ರಾಂ ವಿಷಯ ಕೆಟ್ಟದ್ದೋ ಒಳ್ಳೆಯದೋ ಅದೇ ಮರತೇ ಹೋಯಿತಲ್ಲಾ. ಪಕ್ಕದ ಮನೆ ಗಂಗಮ್ಮನ ಹತ್ತಿರ ಹೋಗ್ತೆ ತಿಳಿಯುತ್ತೆ.ಆಕೆಗೆ ಹೇಗಿದ್ದರೂ ಇಂಗ್ಲಿಷ್ ಬರುತ್ತೆ. (ಗಂಗಮ್ಮ ಒಂದು ಕಪ್ ಹಿಡಿದು ಪ್ರವೇಶ) ಅಪೇ ನನ್ನನಿಸಿದವರು ಬಂದೇ ಬಿಟ್ಟರಲ್ಲ.

ಗಂಗಮ್ಮ— ಏನು ಗೌರಮ್ಮ.

ಗೌರಿ— ಟೆಲಿಗ್ರಾಂ ಬಂದಿದೆರೇ.

ಗಂಗಮ್ಮ— ಯಾವ ಊರಿಂದಮ್ಮಾ

ಗೌರಿ— ಬೆಂಗಳೂರಿನಿಂದ, ಸ್ವಲ್ಪ ಓದಿ ವಿಷಯವೇನು ಹೇಳುತ್ತೀರಾ ಗಂಗಮ್ಮ.

ಗಂಗಮ್ಮ— ಅದಕ್ಕೇನು. (ಗೌರಿ ಟೆಲಿಗ್ರಾಂನ್ನು ಕೊಡುವಳು ತೆಗೆದುಕೊಂಡು ಓದಿ) ಇಂಗ್ಲಿಷ್‌ನಲ್ಲಿಯೇ ಹೇಳಲೇ?

ಗೌರಿ— ನನಗೆ ಇಂಗ್ಲಿಷ್ ಬಂದಿದ್ದರೇ ನಿಮಗ್ಯಾಕೆ ಕೇಳುತ್ತಿದ್ದೆ. ನೀವೇ ಓದಿಕೊಂಡು ಕನ್ನಡದಲ್ಲಿಯೇ ಹೇಳಿ ಬಿಡಿ.

ಗಂಗಮ್ಮ— ಗೌರಿ ಹಬ್ಬದ ಶುಭಾಶಯಗಳನ್ನು ತಿಳಿಸಿದ್ದಾರೆ. ನೀವು ಕಳಿಸಿದ ಪಾರ್ಸೆಲ್ ಮುಟ್ಟಿದೆಯಂತೆ.

ಗೌರಿ— ಪಾರ್ಸಲ್! ನಾವು ಯಾರಿಗೆ ಕಳಿಸಿದ್ದೆವು?

ಗಂಗಮ್ಮ— ನಿಮ್ಮ ಯಜಮಾನರು ಯಾರಿಗೆ ಕಳಿಸಿರಬೇಕು.

ಗೌರಿ— ಏನೋ, ಬಂದ ಮೇಲೆ ವಿಚಾರಿಸಿದರಾಯಿತು.

ಗಂಗಮ್ಮ— ಗೌರಮ್ಮ, ಸ್ವಲ್ಪ ತುಪ್ಪ ವಿದ್ದರೆ ಕೊಡಿ. ನೋಮವಾರ ತೆಗೆದುಕೊಂಡು ಮೇಲೆ ತಂದು ಕೊಡುತ್ತೇನೆ. ಬೇಗರು ಬಂದಿದ್ದಾರೆ.

ಗೌರಿ— ಅದಕ್ಕೇನು ಹೇಗೆದುಕೊಂಡು ಹೋಗಿ. ಎಂತವರಿಗಾದರೂ ಎಡವಟ್ಟು ಬರುತ್ತೆ. (ಕಪ್‌ನ್ನಾ ತೆಗೆದುಕೊಂಡು ಹೋಗಿ ತುಪ್ಪವನ್ನು ತಂದು ಕೊಡುವಳು)

ಗಂಗಮ್ಮ— ಬರುತ್ತೇನಮ್ಮಾ.

ಗೌರಿ— ಈ ಟೆಲಿಗ್ರಾಂ ಕಳಿಸಿದವರು ಯಾರು ಅಂತಾ ಗೊತ್ತೇಯಾಗಲಿಲ್ಲ. ಈ ರಾಗದದಲ್ಲಿಹೆಸರು ಏನಾದರೂಇದೆಯೇ?

ಗಂಗಮ್ಮ— (ನೋಡಿ) ರವೂನಂ ತೆಮ್ಮಾ

ಗೌರಿ— ರವೂ!

ಗಂಗಮ್ಮ— ಬರುತ್ತೇನಮ್ಮಾ (ನಿರ್ಗಮಿಸುವಳು)

ಗೌರಿ — ರವೂ! ರವೂ!! ಯಾರಿವಳು ರವೂ!ಅವರಿಗೆ ನಾನೊಬ್ಬಳೇ ಅಂತಾ ಇದ್ದೀ. ಅಲ್ಲಾ ಗಂಡಸರ ನಡೆತೇನೇ ನಂಬುವುದಕ್ಕಾಗುವುದಿಲ್ಲವಲ್ಲ. ಗೌರಿ ಹಬ್ಬಕ್ಕೆ ಪಾರಸಲ್ ಬೇರೆ ಕಳಿಸಿದ್ದಾರೆ. ಅದಕ್ಕೆ ಈ ತಿಂಗಳ ಸಂಬಳದಲ್ಲಿ ಮೂವತ್ತು ರೂಪಾಯಿ ಕಡಮೆಯಾಗುತ್ತು. ಈಗ ಗೊತ್ತಾಯಿತು ಇವರ ಬಂಡವಾಳ. ಬರಲೀ ಬರಲೀ ಮನೆಗೆ. ಗೌರಿ ಹಬ್ಬದ ದಿನವೇ ಗಲಾಟೆಯಾಗಲೀ. ಅಲ್ಲಾ ನನಗೆ ಹಬ್ಬಕ್ಕೆ ಸೀರೆ ಕೊಡಿಸಿ ಎಂದರೆ ರಾಗ ಎಳೆಯುತ್ತಾರೆ. ಅವಳಿಗೆ ಮೂವತ್ತು ರೂಪಾಯಿ ಬಟ್ಟೆ ಕಳಿಸಿದ್ದಾರೆ. ಒಂದು ವರ್ಷವಾಯ್ತು ಒಂದು ರಿಸ್ಟ್ ವಾಚ್ ತಂದು ಕೊಡೀ ಎಂದು.ಆ ಹಬ್ಬಕ್ಕೆತರುತ್ತೀನೆ.ಈ ಹಬ್ಬಕ್ಕೆ ತರುತ್ತೀನೆ ಹೇಳುತ್ತಾರೆ. ಈ ಗೌರಿ ಹಬ್ಬಕ್ಕೂ ತರುತ್ತಾರೋ ಇಲ್ಲವೋ ನೋಡಬೇಕು. ಅಗೋ ಬರುತ್ತಾ ಇದ್ದಾರೆ. ಧೀರಾಧಿಧೀರರು. (ಚಂದ್ರು ತರಕಾರಿ ಚೀಲ ಹಿಡಿದು ಪ್ರವೇಶ)

ಚಂದ್ರು— ಗೌರಿ ಗೌರಿ, ಓ! ಇಲ್ಲಿಯೇ ಇದ್ದಿಯೂ.

ಗೌರಿ— ಇಲ್ಲದೆ ಇದ್ರೆ ಸಾಯಬೇಕಾ ನಿತ್ತೀನು.

ಚಂದ್ರು— ಇದೇನು ಗೌರಿ, ಒಳ್ಳೆ ಗೌರಿ ಹಬ್ಬ ದಿನಾ ಗೌರಿ ಸಿಟ್ಟಾದರೆ ಹೇಗೆ.

ಗೌರಿ— ಗೌರಿ ಸಿಟ್ಟಾದರೆ ಪರಮೇಶ್ವರ ಇದ್ದಾನಲ್ಲ ಸವರಿಧಾನ ಕೇಳುವುದಕ್ಕೆ.

ಚಂದ್ರು— ಅದು ಸರಿಯನ್ನು. ನಾನು ಸವರೂಧಾನ ಹೇಳದಿದ್ದರೆ ಇನ್ನಾರು ಹೇಳಬೇಕು ಯಾಕೆ ಸಿಟ್ಟಾಗಿದ್ದಿಯೂ ಗೌರಿ. ಏನು ಸವರಾಜರ ಹೇಳಬಾರದೇ.

ಗೌರಿ— ಈ ತಿಂಗಳ ಸಂಬಳದಲ್ಲಿ ಮೂವತ್ತು ರೂಪಾಯಿ ಯಾಕೆ ಕಡಮೆ ಯಾಕಾಗಿತ್ತು ಅಂತಾ ಈಗ ಗೊತ್ತಾಯಿತು.

ಚಂದ್ರು— ಏನು ಗೊತ್ತಾಯಿತು ಬದನೆಕಾಯಿ.

ಗೌರಿ— (ಕಾಗದ ಕೊಡುತ್ತಾ) ಈ ಟೆಲಿಗ್ರಾಂ ಓದಿ. ಎಲ್ಲಾ ಗೊತ್ತಾಗುತ್ತೆ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಯಾರಿಗೂ ಗೊತ್ತಾಗುವುದಿಲ್ಲಾನೆಂದು ತಿಳಿದುಕೊಂಡಿರೇನು?

ಚಂದ್ರು— (ತೆಗೆದುಕೊಂಡು ಓದಿ) ಗೌರಿ ಗಣೇಶ ಹಬ್ಬದ ಶುಭಾಶಯಗಳನ್ನು ತಿಳಿಸಿದ್ದಾರೆ. ಪಾರಸಲ್ ಮುಟ್ಟಿತು ಅಂತ ಕಾಣುತ್ತೆ.

ಗೌರಿ— ಅವಳಾರು ನಿಮಗೆ ಕಳಿಸುವುದಕ್ಕೆ.

ಚಂದ್ರು— ಇದೇನೇ ಗೌರಿ, ಹಿಂಗೆ ಮಾತನಾಡುತ್ತಿದ್ದೀಯೂ?

ಗೌರಿ— ಮತ್ತಿಂಗೆ ಮಾತನಾಡಬೇಕ್ರೇ. ಇಲ್ಲಿ ಉನೆ ಇದ್ದರೂ ಮತ್ತೇಕೆ ರಮೆಯ ಸಹವಾಸ ಅಂತಾ.

ಚಂದ್ರು — ಯಾವ ರವೂ ನೇ. ನನಗೊಂದೂ ಅರ್ಥವೇ ಆಗುತ್ತಿಲ್ಲ.

ಗೌರಿ— ಟೆಲಿಗ್ರಾಂನಲ್ಲಿ ಹೆಸರು ಯಾರದು ಇದೆ ನೋಡಿ.

ಚಂದ್ರು— (ಟೆಲಿಗ್ರಾಂ ನೋಡಿ) ರವೂ! (ನಗುತ್ತಾ) ಉ ರವೂನೇ!! ಅಷ್ಟು ಗೊತ್ತಾಗಲಿಲ್ಲವೇನೇ.

ಗೌರಿ— ಏನು?

ಚಂದ್ರು— ಇವರು ಯಾರು ಅಂತಾ.

ಗೌರಿ— ಅವಳು ನನ್ನ ಸವತಿ ಅಂತಾ ಗೊತ್ತಾಯಿತು ನೋಡಿ.

ಚಂದ್ರು— ಸವತಿನೂ ಅಲ್ಲಾ ಸಾವತ್ತಿ ಕಾಯಿನೂ ಅಲ್ಲಾ. ಅವಳು ಯಾರ ಹೆಂಡ್ತಿನೋ. ನೀನು ಇಲ್ಲಿ ಇರುವಾಗ ನುತ್ತೆ.

ಗೌರಿ— ಸಾಕ್ರೇ. ನಿಮ್ಮ ಸಿಹಿ ಮಾತುಗಳು. ನನಗೆ ಗೌರಿ ಹಬ್ಬಕ್ಕೆ ಸೀರೆ ತಂದು ಕೊಡಿ ಎಂದರೆ ಉದಯರಾಗ ಹಾಡಿದಿರಿ. ಅವಳಿಗೆ ಮೂವತ್ತು ರೂಪಾಯಿ ಬಟ್ಟೆ ಕಳಿಸಿದ್ದಿರಲ್ಲಾ. ಕಟ್ಟಿಕೊಂಡವಳನ್ನು ಮರೆತು ಇಟ್ಟುಕೊಂಡವಳಿಗೆ ಕಳಿಸಿದ್ದಿರಲ್ಲಾ. ಈಗಿನ ಕಾಲನೇ ತಲೆ ಕೆಳಗಾಗಿದೆ ಅಂತಾ ಕಾಣುತ್ತೆ.

ಚಂದ್ರು— ನೋಡು ಗೌರಿ, ಹಬ್ಬದ ದಿನ ಜಗಳವಾತಬಾರದೂ ಅಂತಾ ಏಷ್ಟು ಹೇಳಿದರೂ ಮತ್ತೆ ಕೋಪ ಬರುವಂತೆ ಮಾಡುತ್ತಿದ್ದಿಯಲ್ಲಾ.

ಗೌರಿ— ನಿಮ್ಮೊಬ್ಬರಿಗೆ ಯಲ್ಲರೀ ಕೋಪಬರುವುದು. ಹೆಂಗಸರು ಮುನಿದರೆ .....

ಚಂದ್ರು— ಮುನಿದರೆ.....

ಗೌರಿ— ಮುನಿದರೆ ಮಾರಿ ಇಲ್ಲದಿದ್ದರೆ ನಾರಿ.

ಚಂದ್ರು (ಸವೂಧಾನದಿಂದ) ಜಗಳ ಏತಕ್ಕೆ ಗೌರಿ. ರವೂ ಯಾರು ಅಂತಾ ಹೇಳುತ್ತೇನೆ.

ಗೌರಿ— ಹಾಗೆ ಬನ್ನಿ ದಾರಿಗೆ.

ಚಂದ್ರು— ನಿಮ್ಮಣ್ಣ ಅತ್ತಿಗೆ ಹೆಸರು ಕಣೇ.

ಗೌರಿ— ಸಾಕು ಸುಮ್ಮನೆ ಇರಿ ಆಂ ಫ್ರೈ. ಅಣ್ಣಾ ಅತ್ತಿಗೆಯಂತೆ ಅಣ್ಣಾ ಅತ್ತಿಗೆ! ಸುಳ್ಳು ಹೇಳದರೂ ನಾಲ್ಕು ಜನ ನಂಬಬೇಕ್ರೇ. ನಾನೇನು ಕತ್ತೆಹಾಲು ಕುಡಿದಿಲ್ಲರೀ.

ಚಂದ್ರು— ಹೇಳಿವ ತನಕ ಸವೂಧಾನವಿಲ್ಲ ನೋಡು. ಒಳ್ಳೆ ಮರದಕೆರೆಯ

(ಇನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಪ್ರಕಾರದ ಸೌಜನ್ಯದ ಸೇವೆ.

ದಿ. ಪೂಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ಪುತ್ತೂರು ಡಿ. ಮುನ್ಸಿಫ್ ಕೋರ್ಟ್‌ನಲ್ಲಿ

S. C. 329/1962.

ಶಂಕ್ರನಾರಾಯಣ ಮಯ್ಯ — ವಾದಿ.

ಸುನಂದಾ ದೇವಿ ಕೊಡಾ — ಪ್ರತಿವಾದಿರು.

1ನೇ ಪ್ರತಿವಾದಿ ಸುನಂದಾ ದೇವಿ, ಅನಂತರಾಜ ಅರಿಗರ ವಿಧವೆ (ಮೈನರ್ 6ನೇ ಪ್ರತಿವಾದಿ ಪ್ರಮೋದಿನ ಗಾರ್ಡಿಯನ್‌ಣಿ ಸಹಾ) ಬೆಳ್ತಂಗಡಿ ತಾಲ್ಲೂ ಕೊಕ್ಕಟ್ಟು ಗ್ರಾಮದ ಮುಂಡೂರು ಚಂದ್ರರಾಜ ಸೇಮಿಶರ ಮನೆಯಲ್ಲಿರುವವಳು.

ಸದ್ರಿ ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲಿನ ದಾವೆಯ 1ನೇ ಪ್ರತಿವಾದಿಗಂಡ, 6ನೇ ಪ್ರತಿವಾದಿಯ ತಂದೆ ಹಾಲಿ ಮೃತಪಟ್ಟ ಅನಂತರಾಜ ಅರಿಗರು, ವಾದಿಗೆ ತಾ 2-1-1960ರಲ್ಲಿ ರೂಪಾಯಿ 275-00 ಕ್ಕೆ ಬರೆಕೊಟ್ಟ ನಿ. ಪ್ರೊ. ನೋಟಿನ ಅಸ್ಸಲು ಬಿಡ್ಡಿ ಐವೇಜನ್ನು ಬರೆಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 4—12—1962ಕ್ಕೆ ಇಟ್ಟಿರುವುದರಿಂದ, ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಪಾಸ್ಸಾಗಿ ನಿಮ್ಮ ಉಪಾಧರಣೆಯನ್ನು ದಾಖಲು ಮಾಡಕ್ಕಿದ್ದು, ತಪ್ಪಿದ್ರೆ ನಿಮ್ಮ ಗೈರುಹಾಜರಿಯಂದ ಸದ್ರಿ ದಾವೆಯನ್ನು ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲ್ಪಡುವುದು.

[ಕೋರ್ಟು ಹ್ಕುಂ ಪ್ರಕಾರ]

S. Soorappaya,
Vakil for plaintiff.

ಪುತ್ತೂರು, 13—11—1962.

ಲೇಖಾಂಕ ೧೧

ರಾಜಾಜಿಯವರ ಕಲಾಸಿದ್ಧಿ

ಚುನಾವಣೆ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ಚುನಾವಣೆಯ ಕಾಲವೆಂದರೆ, ಒಂದು ನದಿಯ ಮಹಾ ಪ್ರವಾಹ ಕಾಲ! ಅಥವಾ ಅಗ್ನಿಯ ದಹನ ಕಾಲವೆಂದು ಹೇಳಬಹುದು, ಏಕೆಂದರೆ, ಬೇಸಿಗೆಯ ಕಾಲದಲ್ಲಿ ಬಹು ಶಾಂತವಾಗಿ ಪ್ರವಹಿಸುವ ನದಿ, ಮಳೆಗಾಲದಲ್ಲಿ ಮಹಾ ಪ್ರವಾಹ ದೊಡನೆ ಪ್ರವಹಿಸುವಾಗ, ಕಸ, ಕಡ್ಡಿ—ಮರ-ಗಿಡ ಹೀಗೆ ಎಲ್ಲವನ್ನೂ ವಿವೇಚನೆ ವಿಲ್ಲದೆ ತನ್ನ ಪ್ರವಾಹದ ಮೂಲಕ ಕೂಚ್ಚಿಕೊಂಡು ಹೋಗುವುದು. ಚಿಕ್ಕದಾದ ಮಿಣುಕು ದೀಪದ ಅಗ್ನಿಯೂ ಕೂಡ ತನಗೆ ಅವಕಾಶ ಸಿಕ್ಕಿದರೆ, ಗಾಳಿಯು ನೆರವಿನಿಂದ ಭಯಂಕರವಾದ ಕೆನ್ನಾಲಗೆಗಳನ್ನು ಚಾಚಿ, ವಿವೇಚನೆಯಿಲ್ಲದೆ ಸಿಕ್ಕಿದುದೆಲ್ಲವನ್ನೂ ದಹಿಸಿಬಿಡುತ್ತದೆ. ಆದರೆ, ನದಿ ಮತ್ತು ಅಗ್ನಿಯ ಈ ಭೀಕರ ರೂಪ ಪ್ರದರ್ಶನದ ಹಿಂದೆ ಕಳೆದು ಹೋದೊಡನೆ, ಅವು ಪುನಃ ತಮ್ಮ ನಿಜ ಸ್ವರೂಪಕ್ಕೆ ಬಂದಿಳಿಯುತ್ತವೆ! ಹೀಗೆಯೇ ಚುನಾವಣೆಯ ಕಾಲದಲ್ಲಿ, ಜಾತಿ, ಮತ, ಭೇದಗಳು ಮುಚ್ಚಿ ಹೋಗುತ್ತವೆ ಹುರಿಯಾಳುಗಳ ಯೋಗ್ಯತೆಯನ್ನು ಜನತೆಗೆ ತೋರಿಸಿಕೊಡಲು, ಸತ್ಯ-ಅಸತ್ಯ, ಎಲ್ಲವೂ ಒಟ್ಟಿಗೇ ಉಸಯೋಗಿಸಲ್ಪಡುತ್ತದೆ! ಜನತೆಗೆ ದೊರಕಿಸಿಕೊಡಲಾರದು, ಜನರು ಕಲ್ಪಿಸಲೂ ಸಾಧ್ಯವಿಲ್ಲದ, ಆಗದ-ಹೋಗದ ಆಶ್ವಾಸನೆಗಳನ್ನಿತ್ತು, ಹುರಿಯಾಳುಗಳು "ಮತ" (ಓಟು) ಗಳ ಸಂಗ್ರಹ ಮಾಡಲು ಪ್ರಯತ್ನಿಸುತ್ತಾರೆ! ರಾತ್ರೆ ಹಗಲೆಂಬ ಭೇದವಿಲ್ಲದೆ, ಹಳ್ಳಿ-ಹೊಲಗೇರಿಯೆಂಬ ತಾರತಮ್ಯವಿಲ್ಲದೆ, ಪ್ರಚಾರಕರು, ಹುರಿಯಾಳುಗಳ ಓಡಾಟ ಕೇವಲ ಮತ ದಾನದ ಬೇಡಿಕೆಗಾಗಿ ನಡೆಯುತ್ತದೆ! ಹೃದಯ ಬಡಿತ ರೈತನೊಬ್ಬನನ್ನೂ ಸಹ ಈ ಕಾಲದಲ್ಲಿ ದೊಡ್ಡ ದೊಡ್ಡ ಮಂತ್ರಿಗಳೂ ಸಹ ಪ್ರೀತಿಯಿಂದ ಮಾತನಾಡಿಸುತ್ತಾರೆ! ಕೈಕುಲುಕುತ್ತಾರೆ! ಇಷ್ಟು ಮಾತ್ರವಲ್ಲ; ತಮ್ಮ ಕಾರಿನಲ್ಲಿ ಬೇಕಾದರೆ ತಮ್ಮ ಪಕ್ಕದಲ್ಲೇ ಕುಳಿತುಕೊಳ್ಳಿಸಿ, ಮುಗುಳು ನಗುತ್ತಾರೆ! ಹೀಗಾದ ಕಾಲದಲ್ಲಿ ಬಡವ-ಬಲ್ಲಿದ, ಹರಿಯವ-ಕಿರಿಯವ, ಶೂದ್ರ-ಬ್ರಾಹ್ಮಣ—ಎಂಬ ಯಾವ ಭೇದಭಾವವೂ ಇಲ್ಲದೆ, ಅನಾಯಾಸವಾಗಿ ಭಾವೈಕ್ಯವಾದಂತೆ ತೋರುವುದಿಲ್ಲವೇ? ಆದರೆ, ಚುನಾವಣೆ ಕಳೆದ ಬಳಿಕ, ಬೇಸಿಗೆ ಕಾಲದ ನದಿಯಂತೆ, ಮನೆಯ ಮಿಣುಕು ದೀಪದಂತೆ, ಎಲ್ಲವೂ ತನ್ನ ಮೊದಲಿನ ನಿಜ ಸ್ವರೂಪಕ್ಕೆ ಬರುತ್ತದೆ. ಈಗ, ಬಡವ, ಬಡವನೆ! ಮಂತ್ರಿ ಮಂತ್ರಿಯೆ! ಈಗ ಆ ಬಡ ರೈತನು ಮಂತ್ರಿಗಳನ್ನು ನೋಡಬೇಕಾಗಿದ್ದರೂ ಬಹು ಕಷ್ಟಪಡಬೇಕಾದೀತು! ಇಂತಹ ಕಾಲವನ್ನು ಮಹಾ ಪ್ರವಾಹ ಕಾಲವೆನ್ನದೆ ಮತ್ತೇನು ಹೇಳಲಾದೀತು? ಇದು ಮಹಾ ಚುನಾವಣೆಯ ವಿಚಾರವಾದರೆ, ಮಾನ್ಯ ರಾಜಾಜಿಯವರು ಒಂದು ಚಿಕ್ಕ ಮುನ್ಸಿಪಲ್ ಚುನಾವಣೆಯಲ್ಲಿ ನಡೆದ ಘಟನೆಗಳನ್ನು ಇದಕ್ಕೆದ್ದಂತೆ, ತಮ್ಮ "ಚುನಾವಣೆ" ಎಂಬ ಕಥೆಯಲ್ಲಿ ಚಿತ್ರಿಸಿರುವುದನ್ನು ಓದಿ ನೋಡಿದಾಗ —'ಮುನಿಸಿಪಲ್ ಚುನಾವಣೆಯಲ್ಲಿಯೇ ಹೀಗೆಲ್ಲ ನಡೆದು ಹೋದರೆ, ಇನ್ನು ದೊಡ್ಡ ಚುನಾವಣೆಯಲ್ಲಿ ಏನೆಲ್ಲ ನಡೆಯಬಹುದು!" ಎಂಬ ವಿಚಾರ ತರಂಗ—ಶ್ರೀ ರಾಜಾಜಿಯವರ ಕಥನಕಲಾ ಮಹತ್ವದಿಂದ, ಮಾಚಕರಲ್ಲಿ ಸಹಜವಾಗಿಯೇ ಉದ್ಭವಿಸುವುದು.

ಜೇಮ್ಸ್ ಪೇಟೆಯು, ಒಂದು ಭಾಗದಲ್ಲಿ ಹರಿಜನರೇ ನಿಶ್ಚಿತವಾಗಿ ಕೂಲಿ ಮಾಡಿಕೊಂಡು ಜೀವಿಸುತ್ತಿದ್ದರು. ಇವರಲ್ಲಿ ಶ್ರೀರಂಗನೆಂಬ ಹರಿಜನ ಯುವಕನೊಬ್ಬನು, ಕಾಫೀ ತೋಟದ ಯುರೋಪಿಯನರಿಗೂ ಕೂಲಿಯವರಿಗೂ ಬೇಕಾದ ನಾಮಸೂಗಳನ್ನು ತಂದು ಕೊಡುತ್ತ ವ್ಯಾಪಾರ ಮಾಡುತ್ತಿದ್ದನು. ಶ್ರೀರಂಗನ ಗುಣ, ನಡತೆ, ನುಡಿತ ವಿಶ್ವಾಸದಿಂದಾಗಿ, ಎಲ್ಲರೂ ಅವನನ್ನು ಮೆಚ್ಚಿದ್ದರು. ವ್ಯಾಪಾರದಿಂದ ಶ್ರೀರಂಗನು ನಾಲ್ಕು ಕಾಸು ಸಂಪಾದಿಸಿದ್ದನು. ಶ್ರೀರಂಗನ ಹೆಸರು ಅವನ ಗುಣ-ನಡತೆಗಳಿಂದಾಗಿ ಕೊಟ್ಟೂರಿನ ಕಲೆಕ್ಟರರಿಗೂ ಸಹ ತಿಳಿದಿತ್ತು.

ಇದೇ ಕಾಲದಲ್ಲಿ ಆಲ್ಲಿಯ ಮುನಿಸಿಪಲ್ ವೋರ್ಡಿನಲ್ಲಿ ಹರಿಜನ ಮೆಂಬರನ ಒಂದು ಸ್ಥಾನ ಖಾಲಿಯಾಗಿತ್ತು. ಎಲ್ಲರೂ ಸೇರಿ ಯೋಚಿಸಿ, ಯುರೋಪಿಯನ್ ಕ್ಲಬ್ಬಿನ ಜವಾನನಿಗೇ ಆ ಸ್ಥಾನವನ್ನು ಕೊಡುವುದೆಂದು ನಿರ್ಧರಿಸಿದ್ದರೂ, ಕೊನೆಗೆ ಆ ಮೆಂಬರಿಕೆಯ ಸ್ಥಾನಕ್ಕೆ ಶ್ರೀರಂಗನನ್ನೇ ನಿಲ್ಲಿಸಲಾಯಿತು. ಈಗ ಶ್ರೀರಂಗನು ಸಾರ್ವಜನಿಕರ ದೃಷ್ಟಿಯಲ್ಲಿ ದೊಡ್ಡ ಮನುಷ್ಯನಂತೆ ತೋರಿದನು. ದೊಡ್ಡ ದೊಡ್ಡ ಅಧಿಕಾರಿಗಳೂ ಆತನ ಕೈ ಕುಲುಕತೊಡಗಿದರು. ಇದರಿಂದಾಗಿ ಆತನ ವ್ಯಾಪಾರ ಧಂಧೆಗೆ ಧಕ್ಕೆಯೂಗತೊಡಗಿತು. ದೊಡ್ಡವರ ಸಹವಾಸದಿಂದ ಬಡವರು ಮತ್ತೂ ಬಡವರಾಗುವಂತೆ, ಶ್ರೀರಂಗನ ಸಾಂಪತ್ತಿಕ ಸ್ಥಿತಿ ಕ್ಷೀಣವಾಗತೊಡಗಿತು.

ಶ್ರೀರಂಗನು ಮುನ್ಸಿಪಲ್ ಮೆಂಬರನಾಗುವುದಕ್ಕೂ, ಬೋರ್ಡಿನ ಚೇರ್‌ಮೇನರು ಆಕಸ್ಮಿಕವಾಗಿ ತೀರಿಹೋಗಿ, ಚೇರ್‌ಮೇನರ ಚುನಾವಣೆಗೆ ಸಿದ್ಧತೆ ಯಾದುದಕ್ಕೂ ಸರಿಸರಿಯಾಗಿತ್ತು.

ಹೊಸ ಚೇರ್‌ಮೇನರ ಸ್ಥಾನಕ್ಕೆ ನೂಲಿನ ವ್ಯಾಪಾರಿ ಧನಪಾಲ ಸೆಟ್ಟರು ಹಾಗೂ ವಕೀಲ ರಾಮಸ್ವಾಮಿ ಮೊದಲಿಯರರು, ಇವರಿಬ್ಬರೂ ಉಮೇದ್ವಾರರಾಗಿ ನಿಂತ ಕಾರಣ ಬಿರುಸಿನ ಸ್ಪರ್ಧೆಗೆ ಆರಂಭವಾಯಿತು. ಎರಡು ಕಡೆಗಳಿಂದಲೂ ಓಟಿಗಾಗಿ ಪ್ರಚಾರ ನಡೆಯತೊಡಗಿತು. ಆಗ ಎಲ್ಲಿ ನೋಡಿದರೂ ಈ ಚುನಾವಣೆಯ ಸುದ್ದಿಯೇ ತುಂಬಿ ಹೋಗಿದ್ದಿತು. ವಕೀಲ್ ರಾಮಸ್ವಾಮಿ ಮೊದಲಿಯಾರ್ ಮಿತ್ರರು ಮತ್ತು ಅವರ ಪಾರ್ಟಿಯವರು—"ನೀವು ಹೀಗಿದ್ದರೆ ನಡೆಯಲಾರದು— ನೋಡಿ! ಧನಪಾಲ ಸೆಟ್ಟು "ಒಂದೊಂದು ಓಟಿಗೆ ಒಂದೊಂದು ನಾಣಿರ ರೂಪ್ಯಾ ಖರ್ಚಾದರೂ ಈ ಸಲ ಬಿಡಲಾರ!" ಎಂದು ಪಣ ತೊಟ್ಟಿದ್ದಾರಂತೆ! ನೀವು 'ನವ.ಗೆ ಆ ಜನ್ಯಾಯದ ಲಂಚದ ದಾರಿ ಬೇಡ!" ಎಂದು ಸುಮ್ಮನೆ ಕುಳಿತರೆ, ನಮ್ಮ ಮೂಸ ಉಳಿಯುವುದಿಲ್ಲ! ಇಷ್ಟೆ' ಎಂದು ಮುಂತಾಗಿ ಹೇಳ ತೊಡಗಿದವು ಧನಪಾಲ ಸೆಟ್ಟರಿಗೂ ಸಹಾ ಅವರ ಮಿತ್ರರು ಮತ್ತು ಪಾರ್ಟಿಯವರ—'ನೋಡಲಿಯರರು ಈ ಸಲ ಎಷ್ಟಕ್ಕೂ ಬಿಡಲಾರರು! ಅದರಿಂದ ನೀವು ಬಹಳ ಪ್ರಯತ್ನ ಮಾಡಬೇಕು!' ಎಂದು ಸುಮಂತಾಗಿ ಹೇಳುತ್ತಾ ಆ ಈರ್ವರು ಉಮೇದ್ವಾರರಲ್ಲೂ ಉತ್ಸಾಹವನ್ನು ತುಂಬತೊಡಗಿದರು. ಶ್ರೀರಂಗನ ಚುನಾವಣೆಯು—ಚುನಾವಣಾ ಕಾಲದ ಮಂತ್ರಾಲೋಚನೆಯ ರೀತಿ ಇಣುಕು, ಮಾತುಕತೆಗಳನ್ನು ಈ ಕಥೆಯಲ್ಲಿ ಬಹಳ ಚೆನ್ನಾಗಿ ಚಿತ್ರಿಸಿರುವರು

ಮುನಿಸಿಪಲ್ ಮೆಂಬರರಿಂದ ಮಾತ್ರವೇ ಚೇರ್‌ಮೇನರ ಚುನಾವಣೆಗೆ ಮತದಾನ ನಡೆಯುವುದಾಗಿತ್ತು. ಸೋಮವಾರ ಚುನಾವಣೆ ಎಂದಾಗ, ಆದಿತ್ಯವಾರ, ಹಗಲು-ರಾತ್ರೆ-ಎಂಬ ಭೇದವಿಲ್ಲದೆ, ಮೆಂಬರರ ಮನೆಗಳಿಗೆ, ಮೋಟಾರು ಕಾರುಗಳ ಓಡಾಟ ಮಾತುಗಳ ಸುರಿಮಳೆ! ಹಣದ ಝಣ್ ಝಣಾಟ! ಎಲ್ಲವೂ ಪ್ರಾರಂಭವಾಗಿ ಹೋಗಿತ್ತು. ಒಂದು ಕಡೆ, ಮೊದಲಿಯಾರರು, ಮತ್ತೊಂದು ಕಡೆ ಸೆಟ್ಟರು—ಇನ್ನಿಲ್ಲದ ಮತ ನನಗೇ ಕೊಡಿ" ಎನ್ನುತ್ತ ಮೆಂಬರರಿಗೆ, ಕೈತುಂಬ-ಹಣ ಕೊಡತೊಡಗಿದರು. ಒಟ್ಟು 35 ಮಂದಿ ಮೆಂಬರರಲ್ಲಿ 17 ಮಂದಿ ಮೊದಲಿಯಾರರ ಕಡೆಗೆ ಇದ್ದಾರೆ! ಎಂಬುದು ರಾತ್ರೆಯೇ ತಿಳಿದು-ತು! ಆದರೆ ಮೊದಲಿಯಾರರು ಗೆಲ್ಲಬೇಕಾದರೆ, ಇನ್ನು ಒಂದು ಓಟು ಬೇಕಾಗಿತ್ತು. ಇದಕ್ಕಾಗಿ ಅವರು ತಾವಪತ್ತೆಯಾಗಿದ್ದ ಶ್ರೀರಂಗನನ್ನು ಹಿಡುಕಾಡತೊಡಗಿದರು. ಇತ್ತ ಧನಪಾಲ ಸೆಟ್ಟರಿಗೂ ಒಂದು ಮತ ಕಡಿಮೆಯಾಗಿತ್ತು. ಆದಕ್ಕಾಗಿ ಅವರು ಶ್ರೀರಂಗನನ್ನು ಎಲ್ಲಿಯಾದರೂ ಮೊದಲಿಯಾರರ ಕಡೆಗೆ ತಿರುಗಿ ಬಿಟ್ಟುಬಿಡೆಂದು, ತೋಟಕ್ಕೆ ಕೂಡಿ ಕಾವಲಿರಿಸಿದ್ದರು! ಅಂತೂ, ಇಬ್ಬರಿಗೂ ಬೇಕಾಗಿದ್ದುದು ಒಂದೊಂದೇ ಮತ!

ಶ್ರೀರಂಗನನ್ನು ಹುಡುಕುವುದಕ್ಕಾಗಿ ಮೊದಲಿಯಾರರ, ಐದು ನೂರು ರೂ ವ್ಯಾಗಳ ಫ್ಲೈಲಿಯೊಂದಿಗೆ, ಅನಗಣ್ಣ, ಆ ಊರಿನ ಪೂರ್ವದಾನಾಗಿದ್ದ ಮುನಿಸ್ವಾಮಿಯಯ್ಯಂಗೆ, ತಪ್ಪಲ್ಲಿಕಾರ್ಕನ್ನ ಕಳುಹಿಸಿದರು. ಅನಿವೇನ್ವೆಷನಾಗಿ ಐದು ನೂರು ರೂಪ್ಯಾಗಳನ್ನು ಸಡೆದ ಮುನಿಸ್ವಾಮಿಯಯ್ಯ, ಶ್ರೀರಂಗನು ಸೆಟ್ಟರ ಕೋಣೆಯಲ್ಲಿ ಬಂಧಿತನಾಗಿರುವುದನ್ನು ತಿಳಿಸಿದನು, ಮತ್ತು ಅತನನ್ನು ಬಿಡಿಸಿ ತರಲು ಒಂದು ಉಪಾಯ ಹೂಡಿದನು.

(ಗಾನೇ ಮುಂ ನೋಡಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ರೇವಣಾತಿ ಬಡ್ಡಿ ದರಗಳು:

ಕಾಯಂ ರೇವಣಾತಿಗಳು:		ರೂ. ನ ಪೈ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5 00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5 50
ಸೇವಿಂಗ್ಸ್ ಬೇಂಕ್ ರೇವಣಾತಿಗಳು	,, ,,	3-25

ನಿಮ್ಮ

ದಿನನಿತ್ಯದ ಉಳಿತಾಯವನ್ನು | ಮಾಸಿಕ ಉಳಿತಾಯವನ್ನು

ಹನಿ ಡಿವೋಸಿಟುಗಳಲ್ಲಿ | ಕ್ಯುಮುಲೇಟಿವ್ ಡಿವೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಪುತ್ತೂರು ಡಿ ಮು. ಕೋರ್ಟಿನಲ್ಲಿ

O S. No 448/1962.

ಲಿಮೋರಿ ಸಂಸ್ಥ —ಪಾದಿ.

ಬೇವಸಾಕ ಯಾನೆ ಸುಬ್ರಾಯ ಅಂಬ್ಯಾಡತ್ತಾಯ ಕೊಡಾ —ಪ್ರತಿವಾದಿರು.

1 ಪುಂಡರೀಕ ಅಂಬ್ಯಾಡತ್ತಾಯ.

3. ರಮೇಶ ಅಂಬ್ಯಾಡತ್ತಾಯ, ತಂದೆ ವಾಸು ಅಂಬ್ಯಾಡತ್ತಾಯರ ಮಕ್ಕಳು, ಬಿಳ್ತಂಗಡಿ ತಾಲ್ಲು ವಾರೆಂಕಿ ಗ್ರಾಮದ ಅಂಬ್ಯಾಡ ಎಂಬಲ್ಲಿ. ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ —

ವಾದಿಯು ಅಡವು ದಸ್ತಾವೇಜು ಪ್ರಕಾರ ನಿಮ್ಮಿಂದ ಬರತಕ್ಕ ಅಸಲು ಮತ್ತು ಬಡ್ಡಿಗಳನ್ನು ಬರ ಮಾಡುವರೆ ಮಾಡಿದ ನೋಟ್ಸಿಂದ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 15-12-62ಕ್ಕೆ ಇಟ್ಟಿರುವುದರಿಂದ ಆದ್ದ ರಿಂದ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದಲ್ಲಿ ಸದ್ರಿ ದಿನ್ನ ಪುತ್ತೂರು ಕೋರ್ಟು ಮುಂದೆ ನೀವು ಸ್ವತಃ ವ ಪಕೀಲರ ದ್ವಾರಾ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(Sd.) C. S. Shastry,
Vakil for Plaintiff.

ಪುತ್ತೂರು ತಾ. 19 11 62.

ಮೌನಂ ಸಂಮತಿ ಲಕ್ಷಣಂ

೪

'ಏ ಏನೇಽಽ ಹೌದೇಽಽ ಎಲ್ಲಿದ್ದೆ' 'ಸ್ವಲ್ಪ ಬಾಗಿಲು ತೆಗೀ ಎಂದ್ರೆ'

'ಓ ಬಂದೆ. ನನಗೆ ಕೇಳಿಸಲೇ ಇಲ್ಲ ನಿನ್ನ ಕೂಗು. ನಾನು ಹಿತ್ತಲ ಕಡೆ ಯಲ್ಲಿದೆ.'

'ಕೇಳಿಸುವುದು ಹೇಗೆ? ಇಂದು ನನ್ನ ಬಡತನವನ್ನು ನೀಗಿಸುವ ಕಾಲ ಬಂದೊದಗಿದೆ.'

'ಅದೇನು ಮಹ ! ನನ್ನೊಡವೆ ಹೇಳ ಬಾರದೆ? .... 'ಇಗೋ ಕೇಳು! ನೊನ್ನೆ ವೇಸರಿನಲ್ಲಿ' ·ವಾಂಟೆಡ್ ಎಂದು ಕೆಳಗೆ 'ಕ್ಲಾರ್ಕ್' ಬೇಕಾಗಿದ್ದಾರೆ ಎಂದು ಬರೆದಿತ್ತಲ್ಲಾ ಆದಕ್ಕೆ ಅರ್ಜಿ ಹಾಕಿದೆ. ಇದೋ ನೋಡು ಉತ್ತರ,ನನ್ನನ್ನು ಬೇಂಕಿನ ಗುಮಾಸ್ತನಾಗಿ ಮಾಡಿದ್ದಾರೆ.''

'ಹೇ ದೇವಾ! ದೀನದಯಾಳನೆ! ಆದಿರಲಿ ನಿಮಗೆ ಸಿಗುವ ಮಾಸಿಕ ವೇತನ ಕಾಣಿಸಿದ್ದರೇನು?'

'ಅದೇನು ಮಹಾ! ನೂರು ರೂಪಾಯಿಗಳು"

'ಅಯ್ಯೋ! ನನಗೆ ಚಿನ್ನದ ಸರ ಮಾಡಿಸಲು ಸಾಧ್ಯವಾಗದಂತಹ ಈ ಸಂಬಳ ಯಾವುದಕ್ಕೂ ಸಾಲದು ಒಂದು ಕಾಫಿ ಬೀಜದ ಸರ ಮಾಡಿಸಬೇಕೆಂದಿದ್ದೆ. ಆದರೆ ಇದು—ನನ್ನ ಆಶೆಗೆ ಭಂಗ"

'ಏನು, ನಿನಗಷ್ಟು ಜೇರ ನನ್ನ ಆರ್ಥಾಂಗಿಯಾಗ್ಲಿಲ್ಲವೇ? ನನ್ನ ಪ್ರಿಯತಮೆಗೆ ಏನಾದರೂ ಮಾಡಿಸಿ ಕೊಡುವೆ"

೦ ೦ ೦

ಶ್ಯಾಮರಾಯನ ಮನೆಯು ಚಿಕ್ಕದಾಗಿ ಚೊಕ್ಕಟವಾಗಿತ್ತು. ಗಂಡ ಹೆಂಡತಿಯರು ಅನೋನ್ಯ ಪ್ರೀತಿಯಿಂದಿದ್ದರು. ತನ್ನ ಪತ್ನಿಯ ಮಂಜುಪಲೋಚನದಿಂದ ತನ್ನ ಕಷ್ಟವೆಲ್ಲ ಪರಿಹಾರವಾಗುವುದೆಂದು ಶ್ಯಾಮರಾಯನ ಆಸೆ ಅವನ ಪತ್ನಿ ಸುಮತಿ ಆದರಂತೆ ವರ್ತಿಸುತ್ತಿದ್ದಳು ಶ್ಯಾಮರಾಯನು ಬಿ. ಎ ವರೆಗೆ ಓದಿದರೂ ಕೂಡ ಅವನಿಗೆ ಸಿಕ್ಕಿದ ಕೆಲಸವು ಅವನ ಆದೃಷ್ಟಕ್ಕೆ ಸರಿಯೂರಿತ್ತೆನ್ನಬಹುದು. ಹೇಗೂ ವಿಧಿ ಲಿಖಿತವನ್ನು ಮೀರಲು ಮಾನವನಿಂದ ಅಸಾಧ್ಯವೆಂದು ತಿಳಿದ ಅತನು ತನ್ನ ಆಫೀಸಿನತ್ತ ತೆರಳಲನುವಾದನು. ೯॥ ಗಂಟೆಗೆ ಆಫೀಸಿಗೆ ಹೊರಟರೆ ಪುನಃ ಬರುವುದು ಕೆಲಸ ಮುಗಿದ ನಂತರ ಆಷ್ಟರ ತನಕ ಶ್ಯಾಮರಾಯನಿಗೆ ತನ್ನ ಪ್ರೇಯಸಿ ಸುಮತಿಯ ಮುಖ ಕಮಲವನ್ನು ನೋಡಲಿಲ್ಲವೆಲ್ಲಾ ಎಂದು ಬೇಸರ! ಸುಮತಿಯು ಜೀವನಕ್ಕೆ ತಕ್ಕಂತೆ ಸುಂದರಿಯೂ ಆಗಿದ್ದಳು. ಗುಣನಡತೆಯಂತೂ ಕೇಳುವುದು ಅನಗತ್ಯ. ಸಾಕಾಗದಿದ್ದುದಕ್ಕೆ ತಾನು ಮುಗಿಸಿದ ಎಸ್. ಎಸ್ ಎಲ್.ಸಿ. ಪರೀಕ್ಷೆಯ ಪ್ರಭಾವ. ಗಂಡನು ಆಫೀಸಿನತ್ತ ಹೊರಟಾಗ ಇನಿಯನಿಗೆ ತಂಬಾ ಬೇಸರ. ಬೇಸರವನ್ನು ಕಳೆಯಲೋಸುಗ ಕಾದಂಬರಿಗಳನ್ನು ಓದಿ ಮುಗಿಸುತ್ತಿದ್ದಳು. ಮದುವೆಯಾಗಿ ಮೂರು ವರ್ಷಗಳು ಉರುಳಿದ್ದುವು. ಆದರೆ ತನಗೆ ಕುಡಿಯೊಡಯಲಿಲ್ಲ ಎನ್ನುವ ಚಿಂತೆಗೆ ಎಡೆಯೂಗದಂತೆ ಈಗ ಸುಮತಿಯು ಏಳು ತಿಂಗಳ ಬಸುರಿಯಾಗಿದ್ದಳು. ಈಗಂತೂ ಆವಳ ಮುಖದ ವರ್ಚಸ್ಸಿನಲ್ಲಿ ಆವಳು ಬಡತನದ ಕನ್ಯೆಯಲ್ಲ ಎಂದು ಹೇಳಬಹುದಿತ್ತು.

ಒಂದು ಸುಮುಹೂರ್ತದಲ್ಲಿ ಸುಮತಿಯು ಹಡೆದಳು. ಈ ವಾರ್ತೆಯು ಶ್ಯಾಮರಾಯನಿಗೆ ತಲುಪಿತು. 'ಮಗಳು' ಹುಟ್ಟಿದಳಲ್ಲಾ ಎಂದು ಸ್ವಲ್ಪವ್ಯಥನವಾಯಿತು ಚಿಂತೆಯಿಲ್ಲ! ಮೊದಲು ಕನ್ಯಾದಾನ ಮಾಡಬೇಕಂಬುದು ಹಿರಿಯರ ನುಡಿಯಿದೆ. ಅಂತೂ ಮಗ.ವನ್ನು ನೋಡುವ ಆತುರದಿಂದ ಒಳಮನೆ ಹೊಕ್ಕಿತು.

ಮಗುವಿನಲ್ಲಿ ತಂದೆ ತಾಯಿಯರ ಸೂರ್ಣ ಛಾಯೆ ಮೂಡಿರುವುದನ್ನು ನೋಡಿ ಶ್ಯಾಮರಾಯರು ಸಂತಸದ ಕಡಲಿನಲ್ಲಿ ತೇಲಾಡಿದರು! 'ತನ್ನ ಮನಸ್ವಿನಂತೆ ಮಗು ಇದೆ' ಎಂದು.

ಶ್ಯಾಮರಾಯರಿಗೆ ಈಗ ಖರ್ಚಿನ ಮೇಲೆ ಖರ್ಚು ಮಗುವು ದಿನೇದಿನೇ ಬೆಳೆಯಿತು, ಹತ್ತು ಹೆಜ್ಜೆಗೆ ಇಪ್ಪತ್ತು ಸಲ ಮುಗ್ಗರಿಸಿ ಬೀಳುತ್ತಿತ್ತು. 'ಅಮ್ಮಾ' .. 'ಅಪ್ಪ" "ಊ" ಎನ್ನುವ ತೊದಲ್ನುಡಿಯನ್ನಾಡಿ ತಂದೆ ತಾಯಿಯರ ಮನೋಲ್ಲಾಸಕ್ಕೆ ಎಡೆ ಮಾಡಿಕೊಡುತ್ತಿತ್ತು. ಇಂತಹ ಮುದ್ದು ಕುವರಿಯ ಸೇವೆಯಲ್ಲಿಯೇ ಶ್ಯಾಮರಾಯನು ನಿರತನಾದ. 'ಮೂಲತಿ' ಎನ್ನುವ ತನ್ನ ತಾಯಿಯ ಹೆಸರನ್ನೇ ಮಗುವಿಗೆ ಶ್ಯಾಮರಾಯರು ಇಟ್ಟರು. ಮೂಲತಿಯು ತಾಯಿ ತನ್ನ ಮುದ್ದು ಕುವರಿಗೆ ಶಿಕ್ಷಣಕೊಡಲು ಮಗು ಬಹು ತೀವ್ರವಾಗಿ ವಿದ್ಯೆ ಕಲಿಯತೊಡಗಿತು ಮನೆಯ ವಿದ್ಯೆಯಿಂದ ಮೂಲತಿಗೆ ಶಾಲೆಯಲ್ಲಿನ ಐದನೆ ತರಗತಿಗೆ ಪ್ರವೇಶ ದೊರೆಯಿತು

ಈಗ ಸುಮತಿಯು ಗರ್ಭಿಣಿಯಾಗಿದ್ದಳು. ಸುಮತಿಯು ಈ ಸಾರಿ ಹಡೆದ್ದದ್ದು ಹೆಣ್ಣೆಂದು ಕೇಳಿದ ಶ್ಯಾಮರಾಯನು ವ್ಯಸನಕ್ಕೀಡಾದರೂ ದೇವರ ಕರುಣೆಯಿಂದ ಸುಮ್ಮನಾದನು ಈ ನಡುವಿಗೆ 'ವಿದ್ಯಾವತಿ' ಎಂದು ಹೆಸರಿಟ್ಟನು. ವಿದ್ಯಾವತಿಯು ಆಜೆ ಈಜೆ ಓಡಿಯಾಡಲು ಪ್ರಾರಂಭಿಸಿದಾಗ, ಮೂಲತಿಯು ಹೈಸ್ಕೂಲಿನ ಒಂಭತ್ತನೆಯ ಇಯತ್ತೆಯಲ್ಲಿ ಕಲಿಯುತ್ತಿದ್ದಳು. ಬಹಳ ಚುರುಕಾದ ಹುಡುಗಿ ಆದ್ದರಿಂದ ಉಪಾಧ್ಯಾಯರು ಆಕೆಯನ್ನು ಬಹಳ ಮೆಚ್ಚಿದ್ದರು.

ಆ ಊರಿನ ಹೈಸ್ಕೂಲಿನ ಪಕ್ಕದಲ್ಲಿ ಒಂದು ಕಾಲೇಜು ಇದ್ದಿತ್ತು ಮೂಢವನು ಆ ಕಾಲೇಜಿಗೆ ಬರುತ್ತಿದ್ದನು ತನಗೆ ಊಟದ ಮುಯಾವುದಾಗಬಹುದೆಂದು ವಿಚಾರ ಮಾಡಿದನು. ಶ್ಯಾಮರಾಯರ ಬಳಿಗೂ ಬಂದ್ದ ಸಾಧ್ಯವಿಲ್ಲವೆಂದರೂ, ಮೂಢವನ ಒತ್ತಾಯಕ್ಕಾಗಿ ಶ್ಯಾಮರಾಯರು ಒಪ್ಪಿದರು. ಮೂಢವನು ತೆನ್ನ ಸಾಮಾನನ್ನು ತಂದು, ಅವರ ಉಪ್ಪರಿಗೆಯ ಮೇಲೆ ತನಗಾಗಿ ಕೋರಿಸಿದ್ದ ರೂಮಿನಲ್ಲಿಟ್ಟು ವಾಸಿಸತೊಡಗಿದನು. ಆತನಿಗೆ ಕಾದಂಬರಿ ಓದುವ ದೆಂದರೆ ತುಂಬಾ ಹುಚ್ಚು. ಕತೆ, ಕಾದಂಬರಿ ಪುಸ್ತಕಗಳು, ಆತನ ನೇಜಿನ ಪೇಲೆ ಹೊರಳಾಡುತ್ತಿದ್ದುವು ಈತ ಒಂದು ದಿನ ಕಾಲೇಜಿಗೆ ಹೋಬಾಗ ಸುಮತಿಯನ್ನು—ಇವನ ರೂಮಿಗೆ ಬೀಗ ಹಾಕಿರುವುದನ್ನು ನೋಡಿ ಒಳ ಹೊಕ್ಕರು ಅಲ್ಲಿರುವ ಕಾದಂಬರಿಗಳನ್ನು ಕಂಡು ಹರ್ಷಗೊಂಡಳು. ಮೂಢವನು ಸುನಃ ಮನೆಗೆ ಬಂದಾಗ ಅವನ ಪರವಾನಿಗೆ ಪಡೆದು—ಪುಸ್ತಕಗಳನ್ನು ಪಡೆದುಕೊಂಡು ಓದಿದಳು. ಮೂಢವನು ಆಗಾಗ ವಿದ್ಯಾರ್ಥಿಗಳ ಅಂಗಡಿಯಿಂದ ತಂದ ಸಿಹಿ ತಿಂಡಿಗಳನ್ನು ಕೊಡುತ್ತಿದ್ದ.

ವಿನ್ಯಾ—ಮೂಢವರ್ಲ್ಲಿ ಸಲಗೆ ಬೆಳೆ

(ಇನೇ ಪುಟ ನೋಡಿ)

ಕ್ಷಯರೋಗಕ್ಕೆ ಗೃಹಚಿಕಿತ್ಸೆ

ಸಾಮಾನ್ಯವಾಗಿ ತಿಳಿಯುವಂತೆ ಕ್ಷಯರೋಗಿಯೊಬ್ಬನು ಅಂತಹ ಅವಾಯಕಾರಿ ಜನವೇನಲ್ಲ ಅವನ ಸಂಪರ್ಕ ಬೆಳೆಸುವವರ ಸೋಂಕಣಿಗೆ ಅವನ ಎಂಜಲೇ ಹೆಚ್ಚಾಗಿ ಸಾಮಾನ್ಯ ಕಾರಣವಾಗಿದೆ ಗೃಹಚಿಕಿತ್ಸೆಯನ್ನು ಸುಭದ್ರವಾಗಿ ಮಾಡಬೇಕಾದರೆ, ಕ್ಷಯರೋಗಿಗಳ ಎಂಜಲನ್ನು ಸರಿಯಾಗಿ ಸಂಗ್ರಹಿಸಬೇಕು ಮತ್ತು ವಿಸರ್ಜಿಸಬೇಕು. ರೋಗಿಯು ಮಾಡಬೇಕಾದುದೇನೆಂದರೆ.—

1. ಕೆಮ್ಮುವಾಗ ಬಾಯಿಯನ್ನು ವಸ್ತ್ರದಿಂದ ಮರೆಮಾಡಿಕೊಳ್ಳಬೇಕು.
2. ಎಂಜಲನ್ನು ಮುಚ್ಚಳದ ಪಾತ್ರೆಯಲ್ಲಿ ಅಥವಾ ಪೀಕದಾನಿಯಲ್ಲಿ ಸಂಗ್ರಹಿಸಬೇಕು
3. ಎಂಜಲನ್ನು ವಿಸರ್ಜಿಸುವ ಅಥವಾ ಸುಡುವ ಮೊದಲು ಅದನ್ನು ಹತ್ತು ನಿಮಿಷಗಳ ತನಕ ಕುದಿಸಬೇಕು.

ಈ ಸೂಚನೆಗಳನ್ನು ಭಾರತದಲ್ಲಿರುವ ಎಲ್ಲಾ ಮನೆಗಳ ಅವಗಾಹನೆಗೆ ತರಬೇಕಾಗಿದೆ ಇದಕ್ಕೆ ವ್ಯಾಪಕವಾದ ಆರೋಗ್ಯ ವಿದ್ಯಾ ಪ್ರಸಾರ ಆಗತ್ಯವಾಗಿದೆ ಟಿಬಿ ಮೊಹರು ಮಾರಾಟ ಚಳವಳಿಯು ಅಂತಹ ವಿದ್ಯಾಪ್ರಸಾರದಲ್ಲಿ ಒಂದು ಭಾಗವಾಗಿದೆ.



ಟಿ ಬಿ ಮೊಹರುಗಳನ್ನು ಪಡಕೊಳ್ಳಿರಿ ಮತ್ತು ಅದರ ವಿರುದ್ಧ ಹೋರಾಡಲು ಸಹಾಯಮಾಡಿರಿ.

ಒಂದು ಟಿಬಿ ಮೊಹರಿನ ಬೆಲೆ ಬರೇ ಹತ್ತು ನಯೇಪೈಸೆ ಮಾತ್ರ.

ಟಿಬಿ ಮೊಹರುಗಳು ಸಿಗುವ ಸ್ಥಳ:— **ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಸರಕಾರಿ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು, ಮತ್ತು ಅದರ ವಿವಿಧ ವಿಜಿಸ್ಸಿಗಳಲ್ಲಿ.**

ಭಾರತದಲ್ಲಿ ಹದಿಮೂರನೇ ಟಿಬಿ ಮೊಹರು ಮಾರಾಟ ಚಳವಳ

(ನ್ಯೂಡಿಲ್ಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ನಡೆಸಲ್ಪಡುವಂತಾದ್ದು.)

ಈ ಸ್ಥಳ ದಾನ ಮಾಡಿದವರು: **M/s. W. H Brady & Co., Ltd, Bombay.**

ಕಬ್ಬಿನ ಹಾಲಿನ ಸರಸ

ಆಳುವುದಕ್ಕೂ ಅನುಮತಿ ಸಿಗದು!

ನೆರೆಮನೆಗೆ ಬಿದ್ದ ಬೆಂಕಿ ತನ್ನ ಮನೆಗೂ ಬೀಳುವ ಸಂಭವವಿದೆಯೆಂದು ತಿಳಿಯುವರು ವಿವೇಕಿಗಳು. ಈ ಭಯದಿಂದಲೇ ಅಲ್ಲಿ ಬಿದ್ದ ಬೆಂಕಿಯನ್ನು ನಂದಿಸುವಲ್ಲಿ ತುಂಬು ಆಸಕ್ತಿಯನ್ನು ಜನರು ತೋರಿಸುತ್ತಾರೆ. ಕೂಗಿ, ಬೊಬ್ಬೆ ಹೊಡೆದು ಅತ್ತಿತ್ತ ದವರನ್ನು ಒಟ್ಟು ಗೂಡಿಸುವಲ್ಲಿ ಸಹಾಯ ಮಾಡುತ್ತಾರೆ. ಬೆಂಕಿ ಆರಿಸುವ ಎಲ್ಲ ಪ್ರಯತ್ನಗಳಲ್ಲಿಯೂ ಅವರು ಮುಂದಾಳಾಗುತ್ತಾರೆ. ನೆರೆಮನೆಯನ್ನು ಅಗ್ನಿಯಿಂದ ಸಂಪೂರ್ಣ ವಿಮೋಚನೆಗೊಳಿಸಿದನಂತರವೇ ಅವರ ಹೃದಯ ತುಸು ಹಗುರಾಗುತ್ತದೆ. ನಿಜವಾದ ನೆರೆಹೊರೆಯವನೆಂದರೆ, ಈ ಮಾದರಿಯ ಗುಣವಿದ್ದವನು. ಒಂದು ವೇಳೆ ತನಗಾಗದವನ ಮನೆ ಸುಡತ್ತಿರುವುದಾದರೂ ಅದನ್ನು ಕಂಡೂ ಕಂಡೂ ಸುಮ್ಮನುಳಿಯುವನಲ್ಲ ತನ್ನ ಮುಂದೆ ಸಾಯತ್ತಿರುವವನನ್ನು ಕಂಡು ಮುಗುಳ್ನಗುವ ಮಹಾಮೂರ್ಖನಂತೆ! ತನಗೂ ಮೃತ್ಯುವಿದೆಯೆಂಬುದನ್ನು ಸಂಪೂರ್ಣವಾಗಿ ಮರತು ಬಿಟ್ಟ ಪರಮ ಅಜ್ಞಾನಿಯಂತೆ.

ನಮ್ಮ ದೇಶದ ಮೇಲೆ ಕಮ್ಯುನಿಸ್ಟ್ ಚೀನಾ ಆಕ್ರಮಣ ಮಾಡಿದೆ ಇದನ್ನು ಅನ್ಯಾಯವೆಂದು ವಿವೇಕಿಗಳೆಲ್ಲರೂ ಒಪ್ಪುತ್ತಾರೆ ಮೈಕಏಹಾನ ರೇಖೆಯೇ ನೇಫಾದಲ್ಲಿ ನಮ್ಮ ಗಡಿ—ಹಿಮಾಲಯವೇ ನೈಸರ್ಗಿಕ ಗೋಡೆಯೆಂಬುದು ಇಂದು ನಿನ್ನೆಯ ಮಾತಲ್ಲ; ಬಹು ಹಿಂದಿನದು ವಿವಾದಗಳು ಅವೇನೇ ಇರಲಿ, ಚೀನಾವು ಶಾಂತಿಯನ್ನು ಬಯಸುತ್ತಿದೆಯೆಂಬಾದರೆ, ಅದು ಧಾಳಿ ನಡೆಸಬೇಕಾಗಿಯೇ ಇರಲಿಲ್ಲ. ಸಾಮ್ರಾಜ್ಯ ಲಾಲಸೆಯಿಂದ, ತನ್ನ ಶಕ್ತಿ ಸುದರ್ಶನಾಭಿಲಾಷೆಯಿಂದ ಜಗಲಿಗೆ ಕೈ ಹಾಕಿ ಬೆನ್ನಿಗೆ ಇರಿಯುವ ವಿಶ್ವಾಸ ಘಾತವನ್ನು ಅದು ಭಾರತೀಯರಿಗೆ ಮಾಡಿತು. ತನ್ನ ಮುಖಕ್ಕೆ ಲೋಕದಲ್ಲೆಲ್ಲ ಮಂಗಳಾರತಿಯಾಗುತ್ತಿರುವುದನ್ನು ಕಂಡು, ವಿಕ್ಷಿಪ್ತ ನಗುವನ್ನು ನಕ್ಕು ಮತ್ತದನ್ನು ಆಡಗಿಸಲು ಸಮರ ವಿರಾಮದ ಏಕ ಪಕ್ಷೀಯ ನಿಲುಮೆಯನ್ನು ಮುಂದೂಡಿ, ಹಿಂದಿನಿಂದ ತನ್ನ ಧ್ಯೇಯ ಸಾಧನೆಯ ಮಾರ್ಗವನ್ನು ಹಸನುಗೊಳಿಸುತ್ತಿದೆ. ಇದಕ್ಕಾಗಿ ಯೂರ ಯೂರ ಹಂಚಿಕೆ ಹೂಡಬಹುದೋ ಏನೆಲ್ಲವನ್ನೂ ಅದು ಮಾಡುತ್ತಿದೆ; ಅದರಲ್ಲಿ ಅದು ಯಶಸ್ವಿಯಾಗುವುದೂ ಸಾಧ್ಯವಿದೆ.

ಸಹೋದರರ ಪ್ರೇಮವನ್ನು ತೋರಿಸಿದ್ದ ಚೀನ ತನಗೆ ದ್ರೋಹ ಮಾಡಬಹುದೆಂದು ನಾವುಗನಸಿನಲ್ಲೂ ಭಾವಿಸಿರಲಿಲ್ಲ. ಶಾಂತಿ ಮಂತ್ರದ ಹಿಂದೆ ಆಶಾಂತಿಯ ಕುಹಕದ ವಿಶ್ವರೂಪವಿದೆಯೆಂಬುದರ ಭ್ರಾಂತಿಯೂ ನಮಗಾ ಲಿಲ್ಲ. ಅಂತೂ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಯಿತು; ಮನೆಗೆ ಮನಕ್ಕೆ ಬೆಂಕಿ ಬಿತ್ತು; ನಮ್ಮಲ್ಲಿ ಸಂಗ್ರಹವಿದ್ದ ನೀರು ಸಾಲದ ಹೋದುದರಿಂದ ಅದನ್ನು ಹಿಮ್ಮೆಟ್ಟಿಸಲು ನಾವು ತುಸು ಮಟ್ಟಿಗೆ ಅಸಮರ್ಥರಾದೆವು; ಅಥವಾ, ಬೆಂಕಿಯ ಪ್ರಮಾಣವೂ ಪರ್ವತದಷ್ಟಿತ್ತು; ನಮ್ಮ ನೀರು ತೃಣವಾಗಿತ್ತು, ಒಟ್ಟಿಗೊಳ್ಳೋಣ. ಆದರೆ, ನಮ್ಮ ಮಿತ್ರರನ್ನು ಕೂಗಿ ನಮ್ಮ ಸಹಾಯಕ್ಕೆ ಕರೆಯುವುದು ತಪ್ಪೆ? ಆಗರು ಬಂದು ಬಿದ್ದ ಬೆಂಕಿಯನ್ನು ನಂದಿಸುವ ಪ್ರಯತ್ನ ಮಾಡುವುದು ಆಪಾದನೆಯೆ? ಎಲ್ಲರೂ ಹೇಳುತ್ತಾರೆ, ಅದು ನ್ಯಾಯ; ಅಕ್ಷರಶಃ ಇಲ್ಲವಾದರೆ ಊರಿಗೆ ಊರೇ ಸುಟ್ಟು ಬೂದಿಯಾಯಿತು ಎಂದು ಆದರೆ, ನಮ್ಮ ನೆರೆಮನೆಯವ, ಇದಕ್ಕೆ ಅಸಹನೆ ತೋರಿಸಿದನೆಂದರೆ, ಅದರಿಂದ ಯಾರ ರಹಸ್ಯ ಸ್ಫೋಟವಾದಂತಾಯಿತು?

ಎಲ್ಲರೂ ಹೇಳ ತ್ತಾರೆ, ಭಾರತದ ಮೇಲೆ ಚೀನಾ ಧಾಳಿ ಮಾಡಿದೆ; ಪರಿಸ್ಥಿತಿ ಉಲ್ಬಣವೆನಿಸಿದೆ. ಆದರೆ, ನಮ್ಮ ನೆರೆಯ ಪಾಕಿಸ್ತಾನ ಹೇಳುತ್ತದೆ—ಗಡಿಯಲ್ಲಿ ದುರ್ಘಟನೆಯೇನೂ ಹೇಳಿಕೊಳ್ಳುವಂತೆ ನಡೆದಿಲ್ಲ. ಭಾರತ ತನ್ನ ಪ್ರತ್ಯಕ್ಷ ಮಿತ್ರರ ಶಕ್ತಿಯನ್ನು ಸೆಳೆದುಕೊಳ್ಳಲು ತಂತ್ರಹೂಡುತ್ತಿದೆಯೆಂದು. ಬೆಂಕಿಯಂತಿಲ್ಲ ಪಂಪ್ ಸೆಟ್ ಬಂದರೆ ಬರೇ ಗುಲ್ಲು, ನಿದ್ದೆಗೇಡು ಎಂದ ನೆರೆಮನೆಯವನಂತೆ, ಭಾರತದ ಸೈನ್ಯ ಸಂಗ್ರಹದಿಂದ, ಯುದ್ಧ ಖಿದ್ಧತೆಯಿಂದ ತನಗೆ ಗಂಡಾಂತರವೆಂದು ಬೊಬ್ಬಿರಿಯುತ್ತಿದೆ! ಇಷ್ಟಾದ ಮೇಲೆ ತಾನು ಕಮ್ಯುನಿಸ್ಟ್ ರಾಷ್ಟ್ರಗಳ ಸ್ನೇಹ ಸಂಪಾದಿಸುವೆನೆಂದು ಬೆದರಿಸುತ್ತಿದೆ! ಅಮೆರಿಕೆ ಬಹು ಹಿಂದೆಯೇ ಭಾರತದೊಡನೆ ಒಪ್ಪಂದ ಮಾಡಿಕೊಂಡು ತನ್ನನ್ನು ವಂಚಿಸಿದೆಯಂದು. ಮುಂತಾಗಿ ಪ್ರಲಾಪಿಸತ್ತಿದೆ ಇದು ಸಂಶಯ ಚಿತ್ತನ ಬುದ್ಧಿ ಭ್ರಮಣೆಯ ಉದ್ಗಾರಗಳಿಗಿಂತ ಎಷ್ಟು ಮಾತ್ರಕ್ಕೂ ಮೇಲ್ಮಟ್ಟದವಲ್ಲವೆಂಬುದು ಜಗಜ್ಜಾಹೀರಾಗಿದೆ.

ಪಾಕ್ ಅಧ್ಯಕ್ಷ ಅಯ್ಯೂಬಖಾನ ಮತ್ತು ವಿದೇಶ ಮಂತ್ರಿ ಮಹಮ್ಮದಾಲಿಗಳ ನಾಯಕತ್ವದಲ್ಲಿ ಪಾಕಿಸ್ತಾನವು ನೆರೆಮನೆಯು ಸುಟ್ಟರೆ, ಕರುಕಟ್ಟಲು ಹಟ್ಟಿ ದೊರೆಯಿತ- ಎಂಬ ವಿಪರೀತ ಭಾವನೆಯನ್ನು ಇಟ್ಟುಕೊಂಡಿದೆ ಆಯೂಬರು ಕರೆದ ರಹಸ್ಯ ಪಾರ್ಲಿಮೆಂಟಿನಲ್ಲಿ ಗುಡುಗಿದ್ದ ಗುಟ್ಟುದರೂ ಇದಕ್ಕಿಂತ ಬೇರೆಯಲ್ಲ ಘೋರತದ ವಿಶ್ವಮಾನ್ಯತೆಯನ್ನು ಕಂಡು ಕರುಬಿ ಹೊಟ್ಟೆ ಹೊಸೆದುಕೊಳ್ಳುತ್ತಿರುವ ತಾಯೂಬರು ತನ್ನ ಸಂಪೂರ್ಣ ಬುದ್ಧಿಮತ್ತೆಯನ್ನು ಭಾರತ ದ್ವೇಷ ತತ್ವದತ್ತ ಹರಿಯ ಬಿಟ್ಟಿದ್ದಾರೆ ಇದಕ್ಕಾಗಿಯೇ ಪೀಕಿಂಗಿಗೆ ತನ್ನ ವಿದೇಶ ಮಂತ್ರಿ ಮಹಮ್ಮದಾಲಿಯವರನ್ನು ಕಳಿಸಲು ಈ ಪರಿಸ್ಥಿತಿಯಲ್ಲೂ ಸಿದ್ಧರಾಗಿದ್ದಾರೆ. ಕಾಶ್ಮೀರವಾದವನ್ನು ಮತ್ತೆ ಮತ್ತೆ ಎಬ್ಬಿಸಿ ಕೆರುಕುಳ ನೀಡುವ ಪ್ರಯತ್ನ ಮಾಡುತಿದ್ದಾರೆ.

ಕೆಲವು ದಿನಗಳಿಗೆ ಮೊದಲು ಒಂದು ಸುದ್ದಿ ಸುತ್ತಿ ಬಂದಿತು. ಕೆಂಪು ಚೀನಾದ ಸೇನೆಯು ಆಜಾದ ಕಾಶ್ಮೀರವನ್ನೂ ಹೊಕ್ಕುವುದು ಎಂದು. ಪಾಕ್ ಸರಕಾರವು ಈ ವರದಿಯನ್ನು ನಿರಾಕರಿಸಿತು ನಿಜ. ಆದರೆ, ಮಹಮ್ಮದಾಲಿ ಪೀಕಿಂಗ್ ಯಾತ್ರೆಗೂ ಈ ಸುದ್ದಿಗೂ ಸಂಬಂಧವಿಲ್ಲದಿರಬಹುದೆ? ಆಜಾದ ಕಾಶ್ಮೀರದಲ್ಲಿ ಚೀನೀಯ ಪಡೆಗಳು ಕೂಡಿ ಅತ್ತ ಪಾಕಿಸ್ತಾನದ ಮೂಲಕವೂ ಗಡಿ ವಿವಾದವನ್ನು ಸ್ಫುಟಲಿಸುವ ಪ್ರಯತ್ನ ನಡೆಸುತ್ತಿವೆಯೆ? ಕಾಶ್ಮೀರದ ಬಗ್ಗೆ ಬಡಿದಾಡುವ ಪಾಕಿಸ್ತಾನಕ್ಕೆ ಕೆಲವೊಂದು ನಿರ್ದೇಶನಗಳನ್ನು ನೀಡುವುದಕ್ಕಾಗಿಯೇ ತಿವರನ್ನು ತನ್ನಲ್ಲಿಗೆ ಕರೆಸಿದೆಯೆ? ಇದ್ದರೂ ಇರಬಹುದು. ರಾಜಕಾರಣದಲ್ಲಿ ಏನಾಗುತ್ತಿತ್ತು ಎಂಬುದು ತಿಳಿಯದಿರುವಾಗ, ಏನಾಗುವುದೆಂಬುದು ಹೇಗೆ ಗೊತ್ತಾಗಬೇಕು?

ಪಾಕಿಸ್ತಾನದ ದಾರಿಯಲ್ಲೇ ನಡೆದಂತಿದೆ ತಪ್ಪಲ ರಾಜ್ಯ ನೇಪಾಲ. ಇವೆರಡೂ ಚೀನಾದ ಬಲೆಯಲ್ಲಿ ಬೀಳುವಂತಿವೆ; ಬಿದ್ದಿವೆಯೆಂದರೂ ತಪ್ಪಲ್ಲ ಪ್ರತಿ ಸಾರ್ವಭೌಮ ರಾಷ್ಟ್ರಕ್ಕೂ ತನಗೆ ಉಚಿತವೆನಿಸಿದ ನೀತಿಯನ್ನು ಅನುಸರಿಸುವ ಅಧಿಕಾರವಿದೆ; ಸ್ವಾತಂತ್ರ್ಯವಿದೆ ಆದರೆ, ಇಂದಿನ ಅಂತಾರಾಷ್ಟ್ರೀಯ ವಲಯದಲ್ಲಿ ಸ್ವಾತಂತ್ರ್ಯವೆಂದರೆ ಸ್ವೇಚ್ಛೆಯಲ್ಲ. ಚೀನಾದ ಬಾಲ ಬಡಕರಾಗಿ ಇಂದು ಪಾಕಿಸ್ತಾನ ಹೋಗಿ ಒಹುದು; ನೇಪಾಲವೂ ಆದಷ್ಟೇ ಹಿಡಿಯ ಬಹುದು. ಆದರೆ, ಇದರಿಂದ ಆ ವ್ಯಕ್ತಿಗಳಿಗೂ ನಾಶ ಖಂಡಿತವೆಂಬುದಕ್ಕೆ ಇತಿಹಾಸವೇ ಸಾಕ್ಷಿ. ಪೃಥ್ವಿರಾಜನ ಮೇಲಿದ್ದ ಪಗೆತನವನ್ನು ತೀರಿಸಲು ಗೋರಿಯನ್ನು ಕರೆವ ಜಯಚಂದನ ಗತಿಯೇ ನಾಯಿತು? ಕಮ್ಯೂನಿಜ್ಯ ತಂತ್ರವನ್ನು ಬೆಳೆಸಲು ಇಂಗ್ಲೆಂಡಿನ ಬಲ ಬಳಸಿದ ಮುಗಲರು ಕಾಲಾನಂತರದ ಹಿಂದೂ ಅರಸರೇ ನಾಡಿದ್ದು—ಇತಿಹಾಸವು ಕರೆಸಿದ ಪಾಠಗಳನ್ನು ಮರೆತು ಕೂಡ್ಯುವುದೆಂದರೆ, ಕೈಕಾಲುಗಳು ಸರಿಯಿದ್ದೂ ನಡೆಯಲಿಚ್ಛಿಸದ ಮಂಕು ಹೆಳವನಂತೆ.

ಚೀನಾದ ಇಂದಿನ, ಧಾಳಿ ಭಾಂತ ಮೇಲೆ ಮಾತ್ರ ಆದುದಲ್ಲ. ಅದು ವಿಶ್ವ ಶಾಂತಿಗೇ ಆದ ಧಾಳಿ ಅದಕ್ಕೂ ಹೆಚ್ಚಾಗಿ ಅಗ್ನೇಯ ಆಸ್ಯಾಕ್ಕಾದ ಆಕ್ರಮಣ. ಭಾರತವನ್ನು ನುಂಗಿದರೆ, ಮತ್ತೆ ಯಾರನ್ನೂ ನುಂಗುವುದೂ ಕಠಿನವಲ್ಲ. ಆದಕ್ಕಾಗಿ ಚೀನಾದ ಹೌ ಹೂಡಿದ ಈ ಲಾಯಕ್ಕಾದ ಬಲೆಗೆ ಬಿದ್ದವರುಚ್ಚಿತಮ್ಮ ಕೈಕಾಲುಗಳನ್ನು ಕಟ್ಟಿಕೊಂಡು ತಾವೇ ಬಂಧಿತರಾದಂತೆ. ಪಾಕಿಸ್ತಾನವು ಇಂದು ತನ್ನ ಸ್ವಾರ್ಥಸಾಧನೆಗಾಗಿ ಚೀನಾಕ್ಕೆ ಕೈಕೊಡಬಹುದು, ಅದನ್ನು ಸಮರ್ಥಿಸಬಹುದು, ಆ

(ಉಳಿದ ಮುಂದಿನ ಸಂಚಿಕೆಯಲ್ಲಿ)

ಹರ್ಷದ ಸುಗ್ಗಿಯೊಂದಿಗೆ
ಆರಂಭ—ಆ ಪುಸ್ತಕ

ಅದೇ ಕೆನರಾ ಬ್ಯಾಂಕಿನ ಸೇವಿಂಗ್ಸ್ ಖಾತೆಯ

ಪಾಸ್ ಬುಕ್

ನಿಮ್ಮ ಹಣವು ಕೆನರಾ ಬ್ಯಾಂಕಿನಲ್ಲಿ ಬೇಗನೆ
ಬೆಳೆಯುವುದಲ್ಲದೆ ನರ್ಷಕ್ಕೆ ಶೇಕಡ

3

ಬಡ್ಡಿಯನ್ನೂ ಸಂಪಾದಿಸುವುದು

ಮೈಸೂರು ರಾಜ್ಯದಲ್ಲಿ ಅತ್ಯಂತ ದೊಡ್ಡದಾದ ಕೆನರಾ ಬ್ಯಾಂಕಿನಲ್ಲಿ ನಿಮ್ಮ ಹಣವನ್ನು ಕೂಡಿಟ್ಟಲ್ಲಿ ನಿಮಗೆ ಸಂಪೂರ್ಣ ಭದ್ರತೆ ಲಭಿಸುವುದು

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ. 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸು: ಮಂಗಳೂರು
ಆಡಳಿತ ಕಛೇರಿ: ಬೆಂಗಳೂರು

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪೩	ಉಡುಪಿ ೫-೧೧-೧೯೬೨	ವಾರ ೧೪

ಗತ್ತುಗಾರಿಕೆಯ ಕುತಂತ್ರ

ಭಾರತದ ಮೇಲೆ ದುರಾಕ್ರಮಣವನ್ನು ಮಾಡಲು ಗಡಿ ವಿವಾದವನ್ನು ಮುಂದಿಟ್ಟು ಚೀನಾದ ಅಮಾನುಷ ವರ್ತನೆಯನ್ನು ಜಗತ್ತಿಗೆ ಜಗತ್ತೇ ಪ್ರತಿಭಟಿಸಿದೆಯೆಂಬುದು ಇಷ್ಟರಲ್ಲೇ ಪ್ರಕಟವಾಗಿದೆ. ಭಾರತವು ಆತ್ಮರಕ್ಷಣೆಗಾಗಿ ತನ್ನ ಬಲವನ್ನು ಕೇಂದ್ರೀಕರಿಸಿರುವುದು ಮಾತ್ರವಲ್ಲದೆ, ತನ್ನ ಮಿತ್ರ ರಾಷ್ಟ್ರಗಳಿಂದ ಲಭ್ಯವಿದ್ದ ಸಹಾಯವನ್ನು ಕೂಡಿಸಲು ಸರ್ವ ಪ್ರಯತ್ನ ಮಾಡಿದೆ; ಆದರಲ್ಲಿ ಯಶವನ್ನೂ ಪಡೆಯುತ್ತಿದೆ. ಆದರೆ, ಕಳೆದ ವಾರ ಚೀನಾವು ಏಕಪಕ್ಷೀಯವಾಗಿ ಸಮರ ವಿರಾಮ ಘೋಷಣೆಯನ್ನು ಮಾಡಿ ಒಂದು ಹೊಸ ಗತ್ತುಗಾರಿಕೆಯನ್ನು ಪ್ರದರ್ಶಿಸಿದೆ. ಇದರ ಅಂತರ್ಯವೇನು ಎಂಬುದರ ಬಗೆಗೆ ಕೂಲಂಕಷ ವಿವರಗಳು ತಿಳಿದು ಬಂದಿಲ್ಲ; ಬರುವ ಸಲ್ಲಕ್ಷಣಗಳೂ ಗೋಚರಿಸುತ್ತಿಲ್ಲ. ದಶಂಬರ ಒಂದನೆ ತಾರೀಕಿನಿಂದ ತನ್ನ ಸೇನೆಯು ಹಿಂದೆ ಸರಿಯಲು ತೊಡಗಿ ಮೈಕನೋಹನ ರೇಖೆಗಿಂತಲೂ ಹಿಂದೆ ಸರಿಯುವುದೆಂದೂ ಆದರೆ, ತನ್ನ ವಶದಲ್ಲಿದ್ದ ಪ್ರದೇಶದಲ್ಲಿ ನಾಗರಿಕ ಸೌಲಭ್ಯಗಳನ್ನು ಸುರಕ್ಷೆಯ ಬಗ್ಗೆ ಇಷ್ಟುವೆಸೆಂದೂ ಇದರಿಂದ ಆತನು ಸೀಮಾ ವಿವಾದ ಪರಿಹಾರಕ್ಕೆ ಆಫ್ರೋ-ಏಶ್ಯ ದೇಶಗಳು ಮುಂದಿಟ್ಟ ಮೂರು ಸೂತ್ರಗಳು ಕಾರ್ಯಗತಗೊಳ್ಳಲು ಅನುಕೂಲವಾತಾವರಣ ನಿರ್ಮಿತವಾಗುವುದೆಂದೂ ಚೀನಾ ಹೇಳುತ್ತದೆ. ಭಾರತ ಸರಕಾರವು ತೀರ ಅಸ್ಪಷ್ಟವಿರುವ ಈ ಸೂಚನೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಕೇಳಿದೆಯೆಂದು ಗೊತ್ತಾಗಿದೆ.

ಒಂದೇ ಸವನೆ ಮುಂದುವರಿಯುತ್ತ ಬಂದ ಚೀನೀಯರು ಅನಿರೀಕ್ಷಿತವಾಗಿ ಯುದ್ಧ ವಿರಾಮಕ್ಕೆ ಮುಂದಾದುದನ್ನು ಕಂಡು ಪ್ರತಿಯೊಬ್ಬರೂ ವಿಸ್ಮಯ ಪಡುವುದು ಸ್ವಾಭಾವಿಕವೇ. ಅವರು ಇಟ್ಟ ಪದನ್ಯಾಸದ ಬಗ್ಗೆ ಸಂಶಯ ಚಿತ್ತರಾಗುವುದೂ ಅಸಹಜವಲ್ಲ. ಚೀನೀಯರು ಭಾರತವನ್ನು ಆಕ್ರಮಿಸುವ ಇರಾದೆಯಿಂದಿಲ್ಲವಾದರೆ, ಅವರು ಮಾಡಿದ ಧಾಳಿಯ ಉದ್ದೇಶವಾದರೂ ಏನಾಗಿತ್ತು? ಕೇವಲ ತನ್ನ ಸೈನಿಕ ಶಕ್ತಿ ಪ್ರದರ್ಶನ ಮಾತ್ರವೇ? ಎಂದಿಗೂ ಇರಲಾರದು. ವಿಶ್ವದಲ್ಲಿ ಶಕ್ತಿವಂತ ರಾಷ್ಟ್ರ ತಾನು ಎಂಬುದನ್ನು ಲೋಕಕ್ಕೆ ಜಾಹೀರು ಮಾಡುವುದು ಈ ಧಾಳಿಯ ಒಂದು ಉದ್ದೇಶವಾಗಿರ ಬಹುದು. ದಲಾಯ್‌ಲಾಮೊರಿಗೆ ನಾವು ಆಶ್ರಯ ನೀಡಿದ್ದುದನ್ನು ಪ್ರತಿಭಟಿಸುವುದು ಮತ್ತೊಂದು ಕಾರಣವಿರಬಹುದು ಮುಖ್ಯವಾದ ಉದ್ದೇಶವೆಂದರೆ ಭಾರತವನ್ನು ಕಟಕಟೆಗೆ ಸಿಕ್ಕಿಸಿ ಅದನ್ನು ಕಮ್ಯುನಿಸಂ ಪ್ರಪಂಚಕ್ಕೆ ಸೇರಿಸುವ ಮಹಾಭಿಲಾಷೆ ಅದಕ್ಕೆ ಇದ್ದೇ ಇರಬೇಕು. ಆತ್ಮಸೋವಿಯತ್ತು ರಶ್ಯದ ಸಂಬಂಧ ಹಾಸಿಗೆಯಿಳಿತ್ತ ಬಂದಂತೆ ರಶ್ಯಕ್ಕೆ ಇದಿರಾಗಿ ತಾನೂ ಮಹಾ ಸಾಮ್ರಾಜ್ಯವನ್ನ ಕಟ್ಟಬೇಕು ಎನ್ನುವ ಸುಂದರ ಸ್ವಪ್ನವನ್ನಾದು ಕಾಣುತ್ತಿರಬಹುದು. ಏಕೆಂದರೆ, ಭಾರತವೊಂದು ತನ್ನ ಬಲಿಗೆ ಬಿದ್ದರೆ, ಉಳಿದ ಏಶ್ಯನ್ ರಾಷ್ಟ್ರಗಳುಅದಕ್ಕೆ ತೃಣಸಮಾನನೇಸಾಸಾಮ್ರಾಜ್ಯ ಶಾಹಿ ಪ್ರವೃತ್ತಿಯಿಂದ ಹೊಡಿದ ಈ ಧಾಳಿಯನ್ನು ಅದು ಸದ್ಯ ನಿಲ್ಲಿಸಿರುವುದು ಸಂತೋಷಕರವಾದರೂ ಇಂತಹ ಸ್ಥಿತಿ ಬಹುಸಮಯ ಮುಂದು ವರಿಯಲಾರದೆಂದೇ ತೋರುತ್ತದೆ.

ಇಂದು ಚೀನವು ಯುದ್ಧ ವಿರಾಮವನ್ನು ಘೋಷಿಸಿರುವುದಕ್ಕೆ ಹಲವು ಕಾರಣಗಳಿರಬೇಕು. ಭಾರತದೊಳಗಿರುವ ಕಮ್ಯುನಿಸ್ಟರ ದೇಶದ್ರೋಹದ ರಹಸ್ಯವು ಸ್ಫೋಟಗೊಂಡುದರಿಂದ, ಚೀನೀಯರ ಹರವಾಗಿ ಇಳಿದ ಪ್ರಚಾರ ಕಾರ್ಯಕ್ಕೆ ತಡೆ ಬಿದ್ದಂತು ಮತ್ತು ದೇಶಕ್ಕೆ ದೇಶವೇ ಒಂದಾಗಿ ಈ ಅನ್ಯಾಯದ ಆಕ್ರಮಣವನ್ನು ವಿರೋಧಿಸಲು ಮುಂದೆ ಬಂದುದು, ಇದಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಜಿಸಲು ದೃಢ ಸಂಕಲ್ಪ ಮಾಡಿರುವುದು ಇವುಗಳಲ್ಲಿ ಆಗ್ರಗಣ್ಯ ದೇಶದ ನಾಗರಿಕರ ವಿಶ್ವಾಸವನ್ನೂ ಬಲವನ್ನೂ ಪಡೆಯಲು ಇಂದಿನ ಗಂಭೀರ ಪರಿಸ್ಥಿತಿಯಲ್ಲಿ ನೆಹರೂರವರು ಕೃಷ್ಣಮೆನನ್ನರನ್ನು ಬಿಟ್ಟುಕೊಟ್ಟುದು ಮತ್ತು ದಂಡನಾಯಕ ಥಾಪರರಿಗೆ ದೀರ್ಘಕಾಲದ ರಜೆಯನ್ನು ಇತ್ತುದು ಚೀನೀಯರ ಮೇಲೆ ಮಹಾಪರಿಣಾಮ ಮಾಡಿರಬಹುದು. ಸಂರಕ್ಷಣಾ ನಿಧಿಗೆ, ಸಂರಕ್ಷಣಾ ಬಾಂಡು ಮತ್ತು ಬಂಗಾರದ ಬಾಂಡುಗಳಿಗೆ ದೇಶದ ನಾಗರಿಕರಿಂದ ಬಂದ ಅನುಕೂಲ ಪ್ರತಿಕ್ರಿಯೆಗಳು ಚೀನಾದ ಹೇಡಿಸೆನೆಗೆ ಸ್ಥೈರ್ಯ ತಿಂಬಹುದು. ಸಾಳಿಯುತೀತ ರಾಷ್ಟ್ರಾವೆನಿಸಿದ ಭಾರತವು ಮಿತ್ರ ರಾಷ್ಟ್ರಗಳಿಂದ ಧಾರಾಳ ಪ್ರವಾಹಣದಲ್ಲಿ ಸಂರಕ್ಷಣಾ ಸಲಕರಣೆಗಳನ್ನು ಕೊಂಡುಕೊಳ್ಳುತ್ತಿರುವುದು. ಮತ್ತು ಜಗತ್ತಿನ ಪ್ರಮುಖ ಹಾಗೂ ಹೆಚ್ಚಿನ ರಾಷ್ಟ್ರಗಳ ನೈತಿಕ ಹಾಗೂ ಸೈನಿಕ ಬೆಂಬಲವು ಭಾರತಕ್ಕಿರುವುದು ಇನ್ನೊಂದು ಕಾರಣವಿರಬಹುದು. ಇಷ್ಟು ಸೂಕ್ಷ್ಮವಲ್ಲನೆ ಚೀನೀಯರಿಂದು ನೇಫಾದಲ್ಲಿ ಮುನ್ನುಗ್ಗಿದ್ದಾರೆ. ಅವರ ಪದೆಯಲ್ಲಿನ ನಾವುನೋಪುಗಳು ವಿಪರೀತವಾಗಿತ್ತು. ಹಾಗಾಗಿ ಮುಂದುವರಿಯಲು ಅವಶ್ಯಕ ಸೂರೈಕೆಯ ವಾರ್ಗವು ದೂರ ಸೂತ್ರವಲ್ಲಿ, ಅಧಿಕ ಪ್ರಯಾಸನಮಯವೂ ಆಗಿ ಪರಿಣಮಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಪೆಟ್ರೋಲಿನ ಸೂರೈಕೆಯು ಚೀನಾಕ್ಕೆ ಅವಶ್ಯವಾಗಿದೆ. ರಶ್ಯದಿಂದ ಅದು ದೊರೆಯುತಿತ್ತು. ಆದರೆ ಸದ್ಯ ರಶ್ಯನ್ ಸ್ಥಾನಿ ಕ್ರುಶ್ಚೇವರು ಯುದ್ಧವನ್ನು ಬಯಸುವುದಿಲ್ಲವೆಂಬುದಕ್ಕೆಕ್ಯೂಬಾದಿಂದ ಅವರು ಹಿಂಜರಿದುದೇ ಸಾಕ್ಷಿ. ಅತ್ತ ಭಾರತದ ಮಿತ್ರನಾಗಿದ್ದು ಅದರ ಅಭಿವೃದ್ಧಿಗೆ ನೆರವಾದ ರಶ್ಯ ಚೀನಾದ ಆಕ್ರಮಣದ ಮೇಲೆ ಪ್ರತ್ಯಕ್ಷ ಪ್ರತಿಕ್ರಿಯೆ ಹೊರಡಿಸಿಲ್ಲವಾದರೂ ಅದು ಯಾವ ನಿಲುವಿನಲ್ಲಿಯನ್ನು ತಾಳಿದೆಯೆಂದು ಗೊತ್ತಿಲ್ಲವಾದರೂ ಚೀನಕ್ಕೆ ಪೆಟ್ರೋಲಿಯಂ ಸೂರೆಯೈಗೆ ಒಪ್ಪದಿರುವುದೂ ಅಸಂಭವನೀಯವಲ್ಲ; ಆಫ್ರೋ ಚೀನವನ್ನು ಮುಂದುವರಿಯದಂತೆ ಕೇಳಿಕೊಂಡಿರಲೂ ಬಹುದು. ತಾನು ಇತ್ತ ವಚನದಂತೆ ಭಾರತಕ್ಕೆ ರಶ್ಯವು ಮಿಗ್ ವಿಮಾನಗಳನ್ನು ಕೊಡುವುದಕ್ಕೂ, ವಿಮಾನ ಜಾಲನೆಯಲ್ಲಿ ಭಾರತೀಯರಿಗೆ ತರಬೇತಿ ನೀಡುವುದಕ್ಕೂ ಅದು ಒಪ್ಪಿರುವುದರಿಂದ ಹೀಗೆ ತಿಳಿಯಲು ಅವಕಾಶ ವಿದೆ.

ಆದರೆ, ಒಂದು ಸೂತನ್ನು ನಾವು ನೆನಪಿನಲ್ಲಿಟ್ಟುಕೊಳ್ಳ ಬೇಕು. ಸಾಮ್ರಾಜ್ಯಲಾಲಸಿ ಚೀನಾದ ಈ ಏಕ ಪಕ್ಷೀಯ ವರ್ತನೆಯು ತಂತ್ರಮಯವೆನ್ನುವುದೇ ಹೆಚ್ಚು ಸಮಂಜಸ. ಮಿತ್ರ ಹಸ್ತವನ್ನಿತ್ತಅದು ಹಸ್ತಭಕ್ಷಣಕ್ಕೆ ತೊಡಗಿರುವಾಗ, ಅದರ ಯಾವ ವಾಹನನ್ನೇ ಆಗಲೀ ಕೃತಿಯನ್ನೇ ಆಗಲಿ ನಂಬಿ ಕುಳಿತಿರುವುದು ಸಾಧ್ಯವಿಲ್ಲ. ಚೀನಕ್ಕಿಂದು ಬೇಕಾಗಿರುವುದು ಎಣ್ಣೆ; ಅಸಾಮಿದ ಎಣ್ಣೆಬಾವಿಗಳಿಂದ ಅದರ ಸೇನೆ ಹೆಚ್ಚು ದೂರದಲ್ಲಿಲ್ಲ.ಸಮರ ವಿರಾಮದ ಮುಖವಾಡ ಧರಿಸಿ, ಅದರ ಹಿಂದೆ ಈ ಭಾಗಿಗಳ ಪ್ರದೇಶವನ್ನು ನುಂಗುವ ಮಹಾಸಾಹಸಕ್ಕೆ ತಕ್ಕಷ್ಟು ಸಿದ್ಧತೆಯನ್ನು ಅದು ಮಾಡುತ್ತಿರಬಹುದು. ಮತ್ತೆ ಅದು ವಾಯುವೇಗವನ್ನು ಹೊಂದುವುದೂ ಅಸಾಧ್ಯವಲ್ಲ. ಪಾಕ್—ನೇಪಾಲ ಸರಕಾರಗಳ ನಡುವೆ ಅದು ನಡೆಸುವ ವ್ಯವಹಾರವೂ ಭಾರತಕ್ಕೆ ಕ್ಷೇಮಕರವಾಗದು ಆದುದರಿಂದ ಭಾರತವಿಂದು ಬಹಳ ಜಾಗರೂಕತೆಯಿಂದಿರ ಬೇಕಾಗುತ್ತದೆ. ಅಮೆರಿಕ ಮತ್ತು ಬ್ರಿಟನ್ನುಗಳ ತಜ್ಞರು ನಮ್ಮ ಗಡಿ ಪ್ರದೇಶದ ಪರಿಶೀಲನೆ ಮಾಡಿದ್ದಾರೆ. ಕಮ್ಯೂನಿಸ್ಟರಮುಂದಿನ ಆಕ್ರಮಣವನ್ನು ಎದುರಿಸಲು ಮತ್ತು ಈ ಭಾಗಗಳೇ ಅವರು ತಳವೂರಿದ ಪ್ರದೇಶದಿಂದ ಅವರನ್ನು ಓಡಿಸಲು ನಾವು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಏಕೆಂದರೆ, ಹೆಚ್ಚು ಸಮಯ ಸಂದಿಗ್ಧ ಪರಿಸ್ಥಿತಿಯನ್ನು ಇರಗೊಡುವುದು ಭಾರತಕ್ಕೆ ನಷ್ಟ ಮತ್ತು ಅಪಾಯಕಾರಿ. ದೇಶ ಮತ್ತು ಸ್ವಾತಂತ್ರ್ಯ ರಕ್ಷಣೆಯು ಪ್ರತಿ ಕಾರ್ಯದಲ್ಲೂ ನಮ್ಮ ಸರಕಾರವಿಂದು ಎಚ್ಚರಿಕೆ ವಹಿಸುತ್ತಿದೆ; ನಾಗರಿಕ ಜನರಾಂಗ ಸರಕಾರಕ್ಕೆ ಬೆಂಗೋಲಾಗಿ ನಿಲ್ಲುತ್ತದೆ. ಚೀನೀಯ ಆಕ್ರಮಣಕಾರರನ್ನು ಜವರ ನಾಡಿಗೆ ಓಟ್ಟುವಲ್ಲಿ ಸತ್ಯ ಪಕ್ಷದ ಭಾರತವು ಖಂಡಿತಕ್ಕೂ ವಿಜಯವಾಗುವುದು; ಇದಕ್ಕಾಗಿ ನಾವು ನಮ್ಮ ಜೀವನವನ್ನೇ ಮುಡುಪಿಡಬೇಕು; ಹೋರಾಡಬೇಕು. ತಾಯ್ನಾಡಿನ ರಕ್ಷಣೆಯು ಮಹಾಕಾರ್ಯದಲ್ಲಿ ನಾವು ವ್ಯಸ್ತರಾಗಬೇಕು.

ಸಂಧಾನದ ಸೂತ್ರಗಳು

ತಾತ್ಕಾಲಿಕ 'ಶಾಂತ' ಪರಿಸ್ಥಿತಿಯಲ್ಲಿರುವ ಚೀನಾ—ಭಾರತ ಸೀಮಾ ವಿವಾದವನ್ನು ಶಾಂತ ರೀತಿಯಿಂದ ಬಗೆ ಹರಿಸಬೇಕೆಂದು ಭಾರತವು ಹಿಂದಿನಿಂದಲೂ ಹೇಳುತ್ತ ಬಂದಿತ್ತು. ಚೀನಾವು ಇದನ್ನು ಒಪ್ಪಿಕೊಳ್ಳುತ್ತ ಅನಿರೀಕ್ಷಿತವಾಗಿ ಧಾಳಿಗೆ ಆರಂಭ ಮಾಡಿತು. ಈಗ ತನ್ನ ಕುತಂತ್ರದಿಂದ ಸಮಂ ವಿರಾಮವನ್ನು ಘೋಷಿಸಿ, ಶಾಂತಿಯಿಂದಲೇ ಸಮಸ್ಯೆಯನ್ನು ಬಗೆಹರಿಸಲು ಸುಗಮವಾಗುವಂತೆ ತಾನು ಕೈಗೊಳಿಸಿದ್ದೇನೆಂದು ತೋರಿಸುತ್ತಿದೆ. ಭಾರತದ ಮೇಲಾದ ಧಾಳಿಯು ಆಫ್ರೋ-ಏಶ್ಯಾ ರಾಷ್ಟ್ರಗಳ ಮೈತ್ರಿಗೂ ಬೆಳವಣಿಗೆಗೂ ಮಾರಕವೆಂಬುದರಿಂದ, ಇವು ಚೀನಾ ಮತ್ತು ಭಾರತಕ್ಕಗಳಿಗೆ ಶಾಂತಿ ನಿಯೋಗವೊಂದನ್ನು ಕಳಿಸಬೇಕು ಎಂದು ಘಾನಾದ ಅಧ್ಯಕ್ಷ ನುಕ್ರುಮಾಹ್ ಸೂಚನೆ ಯಾವ ಬಣಗಳಿಗೂ ಸೇರದೆ ಇರುವ ಇಂತಹ ರಾಷ್ಟ್ರಗಳು ತಾತ್ಕಾಲಿಕ ನಿಂತಿರುವ ಧಾಳಿಯನ್ನು ಶಾಶ್ವತವಾಗಿ ನಿಲ್ಲಿಸುವಂತೆ ಪ್ರಯತ್ನ ನಡೆಸುವುದಾದರೆ, ತನ್ನ ಗೌರವಕ್ಕೆ, ಸ್ವಾತಂತ್ರ್ಯಕ್ಕೆ ಧಕ್ಕೆ ತಗಲುವುದಿಲ್ಲವಾದರೆ, ಭಾರತವು ಚೀನಾದೊಡನೆ ವ್ಯವಸರಿಯಲು ಸಿದ್ಧವಿದೆ. ಆದರೆ, ಇಂತಹ ಮಾತುಕತೆಗಳು ತೊಡಗ ಬೇಕಾದರೆ, ಮಾಡಿದ ಆಕ್ರಮಣವನ್ನು ಚೀನಾವು ಹಿಂದೆಗೆದು ಕೊಳ್ಳಬೇಕು; ನಮ್ಮ ಮನೆಯೆಲ್ಲಿ ಬೈಠಾಯನ್ನು ಇರಿಸಿಕೊಂಡು, ಆ ತನ ಸಜ್ಜನಿಕೆಯ ಮಾತುಗಳನ್ನು ವಿಚಾರಿಸುವುದು ಕೇವಲ ಮರುಳುತನ. ಆದುದರಿಂದ ಆಫ್ರೋ-ಏಶ್ಯಾ ರಾಷ್ಟ್ರಗಳ ಯಾವ ಶಾಂತಿಯ ಕಾರ್ಯಕ್ರಮಗಳನ್ನೂ ಭಾರತವು ಬೆಂಬಲಿಸುವುದಾದರೂ ತನಗೆ ಅಗೌರವ ಕರವೆನಿಸುವುದಕ್ಕೆಎಂದಿಗೂ ಮಣಿಯಲಾರದು. ನುಶ್ಕ್ರುಮಾಹ್ ಇತ್ತ ನಿಯೋಗ ಕಳಿಸುವ ಇಲ್ಲವೇ ಸಿಂಹಳದ ಸಿರಿಮಾವೋ ಭಂಡಾರ ನಾಯಿಕೆ ಹೇಳಿದ ಆಫ್ರೋ-ಏಶ್ಯಾ ರಾಷ್ಟ್ರ ಸಮ್ಮೇಳನ ಸೇರಿಸುವ ಸೂಚನೆಯ ಹಿಂದೆ ಸತ್ಯವನ್ನು ಪ್ರತಿಪಾದಿಸುವ ದೃಢ ಲಕ್ಷ್ಯವೂ ಇಸೆಯೆಂದು ಭಾವಿಸುತ್ತೇನೆ. ಇದಿಲ್ಲವಾದರೆ, ಅಂತಹ ಸಲಹೆಗಳನ್ನು ಕೃತಿಗಿಳಿಸಿದರೆ ಯಾವ ಪ್ರಯೋಜನವೂ ದೊರೆಯಲಾರದು.

ವದಂತಿಗಳನ್ನು ಕೇಳಬೇಡಿರಿ!
ವದಂತಿಗಳನ್ನು ಹರಡಬೇಡಿರಿ!

ವಿನಂತಿ

ನಾವು ಈ ಮೊದಲು ಮಾಡಿಕೊಂಡ ವಿನಂತಿಯಂತೆ ಹಲವು ಚಂದಾದಾರರು ತಮ್ಮ ಚಂದಾಹಣವನ್ನು ಕಳಿಸಿ ಕೊಟ್ಟಿದ್ದಾರೆ. ಅವರೆಲ್ಲರಿಗೂ ನಾವು ಕೃತಜ್ಞರು. ಇನ್ನೂ ಚಂದಾಕಣ ಕಳಿಸದಿರುವ ಚಂದಾದಾರರು ಈ ವಿನಂತಿಯನ್ನಾದರೂ ಮನ್ನಿಸಿ ತಮ್ಮ ಚಂದಾಹಣವನ್ನು ದಯಮಾಡಿ ಕಳಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕಳಿಸುವ ವಿ. ಪಿ. ಪಿ. ಯನ್ನಾದರೂ ಅನ್ಯಥಾ ಭಾವಿಸದೆ ಸ್ವೀಕರಿಸುವಂತೆ ವಿನಂತಿಸುತ್ತೇನೆ.

ಚಂದಾಹಣವನ್ನು ಸಿಂಡಿಕೇಟ್ ಬೇಂಕಿನ ಯಾವದೇ ಶಾಯೆಯಲ್ಲಿ 'ನವಯುಗ'ದ ಖಾತೆಗೆ ನಾವತಿ ಮಾಡಬಹುದು. ಆದರೆ ಹಾಗೆ ನಾವತಿ ಮಾಡುವಾಗ ಚಂದಾದಾರರು ದಯಮಾಡಿ ತಮ್ಮ ಚಂದಾ ನಂಬ್ರವನ್ನೂ ಹೆಸರು ವಿಳಾಸವನ್ನೂ ಸರಿಯಾಗಿ ತಿಳಿಸುವಂತೆ ಅಪೇಕ್ಷಿಸುತ್ತೇನೆ.

—ನೆನೇಜರ್, ನವಯುಗ.

ಅಲ್ಲಲ್ಲಿಯ ಸುದ್ದಿಸಾರ

ಪುರಸಭಾಧಿಕೃತಿಗಳಿಗೆ ಕತ್ತಾರ್—

ಉಡುಪಿ ನಗರ ಸಭೆಗೆ ನೂತನ ಸಭಾಧಿಪತಿಗಳಾಗಿ ಆರಿಸಲ್ಪಟ್ಟಿರುವ ಶ್ರೀ ಪರ್ಕಳ ರಂಗನಾಥ ಶೆಣೈಯವರನ್ನು ಸತ್ಕರಿಸುವ ಸಮಾರಂಭವೊಂದು ಇದೇ ತಾ ೨೭ರಂದು ಉಡುಪಿಯ ಶ್ರೀ ಕೃಷ್ಣಾಪುರ ಮಠದ ಪಕ್ಕದ ಪ್ರಾಂಗಣದಲ್ಲಿ ಮಾಜಿ ನಗರ ಸಭಾಪತಿ ಶ್ರೀ ಕ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಈ ಸತ್ಕಾರ ಕೂಟವನ್ನು ಏರ್ಪಡಿಸಿದ ಭಕ್ತ ಮಾಣಿ' ಸಂಪಾದಕರಾದ ಶ್ರೀ ಕೆ. ಎಲ್ ಭಟ್ಟರು ಸ್ವಾಗತಿಸಿ ಸಮಾರಂಭದ ವಿಶಿಷ್ಟತೆಯನ್ನು ವಿವರಿಸಿದರು. ಶ್ರೀ ಕೃಷ್ಣಾಪುರ ಮಠದ ಶ್ರೀಮತ್ ವಿದ್ಯಾರತ್ನ ತೀರ್ಥರ ಶ್ರೀಪಾದಂಗಳವರು ನೂತನ ನಗರ ಸಭಾಪತಿಗಳಿಗೆ ಆಶೀರ್ವಚನಗಳಿತ್ತು ತುಳಸೀಮಾಲೆ ಮಾಲೆಯೊಂದನ್ನು ಅನುಗ್ರಹಿಸಿದರು ಡಾ| ಟಿ ಎಂ ಎ ಪೈಯವರು ಭಾಷಣ ಮಾಡುತ್ತಾ ಜನಸೇವೆ ಮಾಡಿ ಈಗಾಗಲೇ ಜನಪ್ರಿಯರಾಗಿರುವ ಶ್ರೀ ರೆಡ್ಡಿಯವರು ತಮ್ಮ ಸ್ಥಾನವನ್ನು ಹೂಜೆಯನ್ನು ಜನಬೆಂಬಲದಿಂದ ಯಶಸ್ವಿಯಾಗಿ ನೆರವೇರಿಸುವರೆಂದೂ ನಗರ ಸಂದರ್ಶನ ನಗರ ವಿಸ್ತರಣೆಯ ಆವಶ್ಯಕತೆಯನ್ನೂ ವಿವರಿಸಿದರು ಶ್ರೀ ಬನ್ನಂಜೆ ಗೋವಿಂದಾಚಾರ್ಯರು, ಶ್ರೀ ಎ ಜೆ ಆಲ್ಬೆಯವರೂ, ಶ್ರೀ ರೆಡ್ಡಿಯವರಿಗೆ ಶುಭ ಕೋರಿ ಮಾತನಾಡಿದ ಬಳಿಕ ಶ್ರೀ ರೆಡ್ಡಿಯವರು ಉತ್ತರಿಸುತ್ತಾ ಶಭಯಷ್ಟಿ ವೃತ್ತಪತ್ರದ ಅಭಿವೃದ್ಧಿಯ ಸಲಹೆ ಸೂಚನೆಗಳನ್ನೆಗ್ಗಮನವಪಲ್ಲಿಟ್ಟುಕೊಂಡು ಪ್ರಾಮಾಣಿಕತೆಯಿಂದ ತಮ್ಮ ಕರ್ತವ್ಯನಿರ್ವಹಿಸುವೆನೆಂದರು ಅಧ್ಯಕ್ಷ ಶ್ರೀ ಕ. ಕೆ ಪೈಗಳು ಮಾತನಾಡುತ್ತ ಉಡುಪಿ ಕ್ಷೇತ್ರ ಕೃಷಿತ್ತ, ಆಸ್ಪೆ ಮರೆಗಳವರಿಂದ ನಗರ ಸಭೆಗೆ ದೊರಕುವ ಸಹಕಾರ, ಅರ್ಧದಲ್ಲಿ ಉಳಿದಿರುವ ಟೌನ್ ಪ್ಲಾನಿಂಗ್ ಕಾರ್ಯವನ್ನು ನಿರ್ವಹಿಸುವ ಅವಶ್ಯಕತೆ, ತಮ್ಮ ಕಾಲದಲ್ಲಾದ ನಾನಾ ಯೋಜನಾ ಪ್ರಯತ್ನ, ನೀರು ಸರಬರಾಯಿ ಯೋಜನೆಗೆ ಫ್ಲೈಪ್ರ ಕಾರ್ಯಕ್ರಮ ಇತ್ಯಾದಿಗಳನ್ನು ವಿವರಿಸಿ ಸಿಂಡಿಕೇಟ್ ಬ್ಯಾಂಕಿನವರು ಬೇಕಾದ ಆರ್ಥಿಕ ಸಹಾಯವನ್ನೀಯಲು ಸದಾ ಸಿದ್ಧರಿರುವರೆಂದು ತಿಳಿಸಿದರು ಶ್ರೀ ಎ ಸೂರ್ಯನಾರಾಯಣ ರಾಷ್ಟ್ರೀಯ ರಕ್ಷಣಾನಿಧಿಗೆ ಸಹಾಯ ಕೋರಿದ ನೇತೆ ಶ್ರೀ ಎನ್ ನಾರಾಯಣ ಬಲ್ಲಾಳರು ಕೃತಜ್ಞತೆಗಳನ್ನರ್ಪಿಸಿದರು

ಡಾ ವಿರಲ ಭಂಡಾರಿಯವರ ನಿಧನ—

ಕಾಸರಗೋಡಿನಲ್ಲಿ ಸುಮಾರು ೫೦ ವರ್ಷಗಳಿಂದ ಪ್ರಸಿದ್ಧ ಡಾಕ್ಟರರಾಗಿ ಜನಾನುರಾಗಿಗಳಿಸಿದ್ದ ಡಾ| ಪಿ ವಿರಲ ಭಂಡಾರಿಯವರು ಉಡುಪಿಯಲ್ಲಿ ತಮ್ಮ ಆಳಿಯ ಡಾ| ಬಿ ಬಾಲಕೃಷ್ಣ ಶೆಟ್ಟರ ನಿವಾಸದಲ್ಲಿ ತಾ ೨೩ನೇ ಮಧ್ಯರಾತ್ರಿ ಹೃದಯ ಸ್ತಂಭನದಿಂದ ೬೬ನೇ ವರ್ಷದಲ್ಲಿ ನಿಧನರಾದೆವರು ಕ್ಷಾಪಕರಾದ ಡಾ| ಭಂಡಾರಿಯವರು ಕಾಸರಗೋಡಿನಲ್ಲಿ ದಕ್ಷ ಡಾಕ್ಟರರಾಗಿದ್ದರೆಲ್ಲದೆ ಅಲ್ಲಿಯ ಸಂಚಾಯತ್ ಅಧ್ಯಕ್ಷರಾಗಿಯೂ, ದಕ್ಷ ಜಿಲ್ಲಾ ಬೋರ್ಡು ಮೆಂಬರರಾಗಿಯೂ ಸಾರ್ವಜನಿಕ ಸೇವೆ ಸಲ್ಲಿಸಿರುವರು ಉದಾರಿಗಳಾದ ಡಾ| ಭಂಡಾರಿಯವರು ಬಡವರ ಬಂಧುಗಳಾಗಿದ್ದರು, ಲಲಿತ ಸಾಹಿತ್ಯ, ಸಂಗೀತ ಕಲೆಗಳ ಅಭಿಮಾನಿಗಳಾಗಿದ್ದರು ಕಲಾವಂತರಿಗೆ ಸದಾ ಸಹಕಾರಿಗಳಾಗಿ ನೆರವು ನೀಡುತ್ತಿದ್ದರು

ಶ್ರೀ ಬಿ ಎಂ ಕರಿಯಪ್ಪನವರ ಸಂದರ್ಶನ—

ಕೃಷಿಯೋಗ ಸಾಧೋಪಕರಣಾಂತರಾಷ್ಟ್ರೀಯ ಯೂನಿಯನ್ನಿನ ಈಸ್ಟರ್ನ್ ರೀಜನಲ್ ಕಮಿಟಿಯ ಕಾರ್ಯದರ್ಶಿ ಮತ್ತು ಕೊಣಾಜೆಯಿಂದಿಗಾದ ಶ್ರೀ ಬಿ ಎಂ ಕರಿಯಪ್ಪನವರು ಅವರ ಸಮಿತಿಯ ಸಭೆಗಾಗಿ ನ್ಯೂದೆಲ್ಲಿಯಿಂದ ಇದೇ ೨೮ ೧೯೬೨ ಬುಧವಾರ ಸಂಜೆ ೬ ೩೦ಕ್ಕೆ ಉಡುಪಿಗೆ ಆಗಮಿಸಿದ್ದರು ಅವರು ಇದೇ ೨೯ ೧೯೬೨ ಗುರುವಾರ ಬೆಳಿಗ್ಗೆ ೧೦ ೩೦ಕ್ಕೆ ಕೃಷ್ಣಾಪುರ ಮಠದ ಪಕ್ಕದ ಪ್ರಾಂಗಣದಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು ಈ ಸಭೆಯಲ್ಲಿ ಪೌರ್ವಾತ್ಯ ದೇಶಗಳ ವಿವಿಧ ರಾಷ್ಟ್ರಗಳಲ್ಲಿ ಕೃಷಿಯೋಗದ ಸಮಸ್ಯೆ ಮತ್ತು ಕೃಷಿಯ ರೋಗ ನಿರೋಧಕಾರ್ಯಗಳ ಕುರಿತು ವಿಚಾರ ವಿನಿಮಯ ನಡೆಯಿತು

ಶ್ರೀ ಕರಿಯಪ್ಪನವರು ಭಾರತದ ಕೃಷಿಯೋಗ ಸಮಿತಿಯ ಸೆಕ್ರೆಟರಿಯೇಟ್ ನಲ್ಲಿ ಸೆ ೧೯೦೬೦ರಿಂದ ಅಕ್ಟೋಬರ್ ೧೯೬೨ರ ವರೆಗಿನ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಗಳನ್ನು ಈ ಸಭೆಗೆ ಒಪ್ಪಿಸಿದರು ಈ ಸಭೆಯಲ್ಲಿ ಆಸ್ಟ್ರೇಲಿಯಾ, ಸಿಲೋನ್, ಫಾರ್ಮೊಂಗ್, ಜಪಾನ್, ಮಲಯಾ, ಪಿಲಿಪ್ಪೈನ್ಸ್, ಥೈಲ್ಯಾಂಡ್, ಮತ್ತು ಕೆನಡದ ಕೃಷಿನಿಧಿಗಳು ಭಾಗವಹಿಸಿದ್ದಾರೆ

ದೈವಜ್ಞ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವ—

ಮಂಗಳೂರಿನಲ್ಲಿ ಇದೇ ತಾ ೧೮ರಂದು ಸಿ ಆರ್ ಪ್ರಭುಮಂತ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಚೀನೀ ದುರಾಕ್ರಮಣವನ್ನು ಪ್ರತಿಭಟಿಸಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣ ಸಂಗ್ರಹಿಸಿ ಕಳುಹಿಸಿಕೆ ಬೇಕೆಂದಾಯ್ತು. ಸಂಘದ ಅಧ್ಯಕ್ಷ ಶ್ರೀ ಎಸ್ ಎಲ್ ಶೇಟರು ಸಂಘಕ್ಕೆ ಕಟ್ಟಡ ನಿರ್ಮಿಸಲು ಸುಮಾರು ಹತ್ತು ಸಾವಿರ ರೂ ಬಿಲಿ ಬಾಳುವ ಸ್ಥಳಕೊಡುವ ವಾಗ್ದಾನ ನೀಡಿದರು. ಸಭಾಧ್ಯಕ್ಷರ ಭಾಷಣವಾದ ಮೇಲೆ ಕಾರ್ಯಕಾರಿ ಸಮಿತಿಗೆ ಎಸ್ ಎಲ್ ಶೇಟರು ಅಧ್ಯಕ್ಷ, ಎನ್ ಸಂಜೀವ ಶೇಟರು ಉಪಾಧ್ಯಕ್ಷ, ಎಚ್ ಸುಬ್ಬರಾವ್ ಕಾರ್ಯದರ್ಶಿ, ಬಿ ನಾರಾಯಣ ರಾವ್ ಉಪ ಕಾರ್ಯದರ್ಶಿ, ಎನ್. ಲಕ್ಷ್ಮೀನಾರಾಯಣ ಶೆಟ್ಟಿ ಕೋಶಾಧಿಕಾರಿ ಆಗಿಯೂ ಮತ್ತಿತರರು ಸದಸ್ಯರಾಗಿಯೂ ಆರಿಸಲ್ಪಟ್ಟರು

ಉಚಿತ ವೈದ್ಯಕೀಯ ಸೇವೆ—

ಚೀನಾ ದುರಾಕ್ರಮಣದ ವಿರುದ್ಧ ಹೋರಾಡುವ ಉಡುಪಿ ತಾಲೂಕಿನ ಸೈನಿಕ ಕುಟುಂಬಿಕರಿಗೆ ಎಕ್ಸ್ ರೇ ಮತ್ತು ಇತರ ಸರ್ವ ಸಹಿತ ಉಚಿತ ವೈದ್ಯಕೀಯ ಸೇವೆ ಸಲ್ಲಿಸಲು ಉಡುಪಿಯ ಡಾ| ಬಿ ಬಿ ಶೆಟ್ಟರು ಮುಂದೆ ಬಂದಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸುತ್ತಾರೆ

ರಕ್ಷಣಾ ನಿಧಿಗೆ ದೇಣಿಗೆ—

ಉಡುಪಿ ಕೃಷ್ಣಾಪುರಮಠದ ಶ್ರೀ ಮದ್ವಿದ್ಯಾರತ್ನತೀರ್ಥ ಶ್ರೀಪಾದಂಗಳವರು ರೂ 1000ವನ್ನೂ, ಕೆಂಜೆ ಪಾದಿರಿಂಜ ಮಠದ ಶ್ರೀಮದ ವಿಶ್ವೇಶತೀರ್ಥ ಶ್ರೀಪಾದಂಗಳವರು ರೂ 1000ನ್ನೂ ಕೊಟ್ಟಿರುವರು.

ಉಡುಪಿ ಶ್ರೀಕೃಷ್ಣ ಮಠದಿಂದ ರಕ್ಷಣಾ ನಿಧಿಗಾಗಿ 500 ತೊಟ್ಟಿ ಚಿನ್ನವನ್ನು ಬಂಗಾರದ ಜೋಡಂಗಳಲ್ಲಿ ವಿನಿಯೋಗಿಸಿಕೊಂಡು ಅಷ್ಟ ಮಠದ ಶ್ರೀಪಾದಂಗಳವರು ನಿರ್ಣಯಿಸಿದ್ದಾರೆ

ಶ್ರೀ ಭಲಿಯೂರು ಶ್ರೀಗಳವರು ರೂ. 600ರಷ್ಟು ಬೆಲೆ ಬಾಳುವ ಚಿನ್ನದ ತುಳಸೀ ಮಣಿಸರವನ್ನು ನಿಧಿಗೆ ಕೊಟ್ಟಿರುವರು

ಉಡುಪಿ ಟೋಟರಿ ಕ್ಲಬ್‌ನ ಅಶ್ರಯದಲ್ಲಿ

ಇದೇ ತಾ ೨೦ರಂದು ಮಣಿಪಾಲದಲ್ಲಿ ಜರಗಿದ ಸಮಿತಿಯ ವಿವಿಧ ಸಂತ ಸಮಿತಿಗಳ ವ್ಯಕ್ತಿಗಳಿಂದ ಸಂಗ್ರಹಿಸಿದ ರೂ 15 500ಕ್ಕೂ ಮಿಕ್ಕಿದ ನಿಧಿಯನ್ನು ವಿವಿಧ ಸಭಾಧ್ಯಕ್ಷ ಶ್ರೀ ಬಿ ವೈಕುಂಠ ಒಣಿಗರ ಮುಖಾಂತರ ರಾ ರಕ್ಷಣಾ ನಿಧಿಗೆ ಒಪ್ಪಿಸಲಾಯಿತು ಆರಂಭದಲ್ಲಿ ಶ್ರೀ ಟಿ ರಘೋತ್ತಮ ಶೆಣೈಯವರು ಪ್ರಾರ್ಥನೆ ಹಾಡಿದರು ಶ್ರೀ ಟಿ ರಘೋತ್ತಮ ಶೆಣೈಯವರು ಪೀಠಿಕೆಯಲ್ಲಿ ಬ್ಯಾಂಕಿನವರು ಸ್ಪತಿಂಗಳೂ 5 ಲಕ್ಷ ರೂಗಳಂತೆ ರಕ್ಷಣಾ ಬೋಂಡಿನಲ್ಲಿ ವಿನಿಯೋಗಿಸಲು ನಿರ್ಧರಿಸಿರುವುದನ್ನು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು

ಗಣೇಶ ಬೀಡಿಯವರ ದೇಣಿಗೆ—

ಮೈಸೂರಿನ ಗಣೇಶ ಬೀಡಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ವತಿಯಿಂದ ರಕ್ಷಣಾ ನಿಧಿಗೆ ಈಗಾಗಲೇ ಒಂದು ಲಕ್ಷ ರೂಪಾಯಿಗಳನ್ನು ಸಲ್ಲಿಸಿದ್ದಾರೆ ಅಲ್ಲದೆ ಗಣೇಶ ಬೀಡಿಯ ವಿವಿಧ ಕಾರ್ಖಾನೆಗಳ ಕಾರ್ಮಿಕರು ರೂ 28,054—91ಗಳನ್ನು ನೀಡಿದ್ದಾರೆ

ಕಾರ್ಕಳ— ತಾ 11—11—62ರಂದು ಲಘು ಮೆಜೆಸ್ಟಿ ಶ್ರೀ ಎಲ್ ಎಸ್. ಪೈ ಸರ ಅಧ್ಯಕ್ಷತೆಯಲ್ಲಿ ಕಾರ್ಕಳ ಟೌನ್ ಆಫೀಸರ ಆಫೀಸಿನಲ್ಲಿ ವಿಷಯ ವಿಜಯದ ತರುವಾಯ ಮುಕ್ತಾಯ ಸಮಾರಂಭ ಹಾಗೂ ಸಾರಿಹತ್ತು ಜರಗಿತು ಶ್ರೀ ಟಿ ಪಿ ಎನ್ ನಂದಿಯವರಿಂದ ಪಡಿಸಲು ಭಾಷಣ ಶ್ರೀ ಎ ಎಸ್ ಕಿದಿಯೂರರಿಂದ ಸ್ವಾಗತ ಭಾಷಣವಾದ ಬಳಿಕ ಅಧ್ಯಕ್ಷರು ವಿಷಯ ವಿಜಯದ ಕರ್ತವ್ಯವನ್ನು ವಿವರಿಸಿ ಸಲಹೆಗಳನ್ನಿತ್ತರು ಶ್ರೀ ವಿ ಎಸ್ ಕಿದಿಯೂರರ ಕೃತಜ್ಞತಾ ನಿಧಿಗೆ ಸಹಾಯದ ಭರವಸೆಯಿತ್ತರು

ಪಡುತೋನ್ಸೆ—

ಸ್ಥಳೀಯ ಜೆ ಡಿ ಎಲಿಮೆಂಟರಿ ಹಿಂದುಸ್ತಾನೀ ಶಾಲೆಯ ವರ್ಧಂತ್ಯುತ್ಸವವು ತಾ 14ರಂದು ಡಾ| ಬಿ ಬಿ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಟಿ ಎಸ್ ಸೀತೇಷನ್ ಸಾಹೇಬರು ಸ್ವಾಗತಿಸಿದ ಬಳಿಕ ವರದಿವಾಚನ, ಸಭಿಕರ ಭಾಷಣಗಳಾದುವು ಎತ್ತಿಕೋಟ್ ಪಿ ಶಿವಾಜಿಪಟ್ಟರು ಬಹುಮಾನ ವಿತರಣೆ ಮಾಡಿದಬಳಿಕ ಅಧ್ಯಕ್ಷರ ಭಾಷಣ, ಮೂರೆಂಜಲ್ಯಂಕಾರ್ಕ್ಕಳ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು

ಬೆಳಿಗ್ಗೆ ಮಕ್ಕಳ ದಿನ ಆಚರಣೆಯ ಶ್ರೀ ಟಿ ಗೋವಿಂದ ಉಡುಪರ ಅಧ್ಯಕ್ಷತೆಯಲ್ಲಿ ನೆರವೇರಿತು

ಕೋಟ ಶಿವರಾಮ ಕಾರಂತರಿಗೆ ಸನ್ಮಾನ—

ಪೆರ್ಡೂರಿನ ಕಲಾ ಸೇವಾ ಮಂಡಲಿಯು ಆಯೋಜಿಸಿದ್ದ ತುಂಬಿದ ಸಾರ್ವಜನಿಕ ಸಭೆಯಲ್ಲಿ ಮಾನಪತ್ರ ಮತ್ತು ಧನಥೈಲಿಯೊಂದನ್ನು ಸಮರ್ಪಿಸಿ ತಾ 26 ರಂದು ಶ್ರೀ ಎ ಜೆ ಆಲ್ಬೆಯವರ ಅಧ್ಯಕ್ಷತೆಯಲ್ಲಿ ಸತ್ಕರಿಸಲು ಒಂದಿನ ವಿವಿಧ ಸಂಘ ಸಂಸ್ಥೆಗಳು ಕಾರಂತರಿಗೆ ಡಾ ರಾಮರ್ಪಣೆ ಮಾಡಿದ ತರುಣ್ಯ, ಶ್ರೀ ಕೆ ವಿ ಕೆ ಉಪಾಧ್ಯಾಯರು ಸ್ವಾಗತಿಸಿದರು ಎಂಟಿಲೆಯ ಅಧ್ಯಕ್ಷ ಡಾ| ಎಂ ಆರ್ ಹೆಗ್ಡೆ ಅವರು ಪತ್ರಪತ್ರವನ್ನು ಓದಿ ಆಡಳಿತ ಸಮಿತಿಯ ಸೆಕ್ರೆಟರಿಯವರು ಶ್ರೀ ಎ ಉಪಾಧ್ಯಾಯರೆಲ್ಲಿಯವರು ಸಂದೇಶ ಮಾಡಿದ ಪಂಡಿತರು ಶ್ರೀ ಕಾರಂತರು ಪ್ರತಿಕ್ರಿಯೆಯಲ್ಲಿ ಧನ್ಯವಾದ ಪ್ರಕಟಿಸಿದರು ಪ್ರಕೃತಿವಿಜ್ಞಾನವನ್ನು ಸೇವೆಯ ರೂಪದಲ್ಲಿ ಆರಂಭಿಸಿದರೂ ನಂತರ ಅದು ತನಗಿನ್ನಿಲ್ಲದಂತೆ ಅಲಂಕಾರದ ಹಿತ್ತಲಿಗೆ ಪ್ರವೇಶ ಪಡೆದುಕೊಂಡ ಬಗೆಯನ್ನು ವಿವರಿಸಿದರು ಸಂಜೆ ಕಾರಂತರಿಗೆ ಸಾರ್ವಜನಿಕ ಸನ್ಮಾನ ಸಮಾರಂಭ ಜರಗಿತು ಶ್ರೀ ಟಿ ಗೋವಿಂದ ಉಡುಪರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು ಶ್ರೀ ಟಿ ಪಿ ಕಲ್ಯಾಣಿಯವರು ಪಂಡಿತಸಂಗೌರವ್ಯರಿ

ಕಾಸರಗೋಡು ಮುನ್ಸೀಫ್ ಕೋರ್ಟ್‌ನಲ್ಲಿ

O P No 57/1962

ರಂಗಯ್ಯ ಬರ್ವತ್ತಾಯ ಕೂಡಾ 5 ಜನರು— ಅರ್ಜಿದಾರರು

ಮತ್ತು

B ಸೀತಾರಾಮ ಬರ್ವತ್ತಾಯ — ರೆಸ್‌ಪಾಂಡೆಂಟ

1ನೇ ಅರ್ಜಿದಾರನ ಮಗ ಮತ್ತು 2ರಿಂದ 5ನೇ ಅರ್ಜಿದಾರರ ಮತ್ತು ರೆಸ್ ಪೊಂಡೆಂಟನ ಸಹೋದರ ಮೃತ ಸದ್ರಿ B, ಕೇಶನ ಬರ್ವತ್ತಾಯರಿಗೆ ಅರ್ಜಿಯಲ್ಲಿ ಕಾಣಿಸಿದ ರೀತಿ ಬರತಕ್ಕ ರೂಪ್ಯಾ 500/ ವಸೂಲಿ ಕುರಿತು 2ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶ್ಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಈ ಅರ್ಜಿ ತಾ. 17—11—1962 ರಲ್ಲು ತನ್ನಿಗೆ ಇಟ್ಟ ಸಂಗ್ತಿ ಈ ಮೂಲಕ ತಿಳಿಸೋಡ್ಗುಗುತ್ತದೆ

K Ganesh Rao,
ಅರ್ಜಿದಾರರ ವಕೀಲ್

ಕಾಸರಗೋಡು, ತಾ 26.11.62

In the Court of District Munsif, Kundapur

O P 2/1962

1) Savitri alias Sumati Bai
2) Pandurangi
3) Vidya
4) Bhavani alias Sudevi Amma

} Petitioners

vs

Nil — Respondents

In the matter of succession certificate to the estate of S Nityanand Acharya deceased

Please take notice that the above application for grant of succession certificate to the estate of deceased S Nityanand Acharya son of S Ramanath Acharya, is posted at 11 A M on 19 12-62

By order of Court

K Narayana Kamath,
Advocate for Petitioners.

Coondapur 26—11—62

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟ್‌ನಲ್ಲಿ

O S No 133/1961

ನಾರ್ಣಪ್ಪ ವೆಂಕಪ್ಪ ಪೂಜಾರಿ ಎಂಬವರ ಸಂತತಿ ವೆಂಕ್ಟಪ್ಪ ಸಮಾ — ಪ್ರತಿವಾದಿ

2ನೇ ಪ್ರತಿವಾದಿ ಶ್ರೀಮತಿ ನೆಳಿಂಜಮ್ಮಿ ಸಾಂತ ಹೆಂಡ್ತಿನವರು ಪ್ರಾಯ, 29ಲ Shradhanand Road Ram Baug, Vile Parle East Bombay ಎಂಬಲ್ಲಿರುವವರು

2ನೇ ಪ್ರತಿವಾದಿಯಾದ ನಮಗೆ ಈ ಮೂಲಕ ತಿಳಿಸ ಸಲೆಸಂದ್ರೆ—

ಇವರಿಗೆ 1ನೇ ಪ್ರತಿವಾದಿಯು ತಾ. 8—7—1950ರಲ್ಲು ರಿಜಿಸ್ಟ್ರಾಯಿತಿ ರೂಪ್ಯ 2000 00ಕ್ಕೆ ಬರಕೊಟ್ಟ ತೀರ್ಪಿನಮತೆ ದಸ್ತಾವೆ ಚಿನ ಆಕಲು, ಜಕಬ್ಬಿ ಕೂಡಾ ರೂ 2383—45ನ್ನು ಬರಸುವಂತೆ ಕೋರ್ಟ್ಗುವರೆ ವಾದಿ ಪು ಕಾಕ್ಷೆ ಮೂರಿದ ಸದ್ರಿ ಡಿಕ್ರಿಯಾಜೆಯಂ ತಾ 19—12—1961ಕ್ಕೆ ನಮಗೆ ಆಜ್ಞೆಯಿರೆ ನೋಟೀಸಿ ಇಟ್ಟಿದೆ ಆಜ್ಞೆಯಾಯಿದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ವೇಳ್ಕಂತೆ ಕೋರ್ಟ್ ಮುಂದೆ ನೀವು ಹಾಜ್ರಾಗಿ ಉದಾಯಪಡೆ ಕೊಡತಕ್ಕದ್ದು ತಪ್ಪಿದ್ರೆ ನಿಮ್ಮ ವೈರ್ಹಾಜ್ರಿಯಲ್ಲಿ ವಾಜಿ ತೀರ್ಮಾನವಾಗ್ವುದು ಎಂತ ಕೋರ್ಟ್ ಹುಕುಂ ಪ್ರಕಾರ ತಿಳಿಸಿಯಜೆ.

K. V. Kamath,
Advocate to Plaintiff,

Karkala, 25—11—62

ಒಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ ಜೀವನದ ಬದ್ರತೆಗೂ ಉಳಿತಾಯವು ಅತ್ಯಾವಶ್ಯ

ಉಳಿತಾಯ ಮಾಡಿರಿ!
ಒಂದು ಸೇವಿಂಗ್ಸ್ ಖಾತೆ ತೆರೆಯಿರಿ

ಕೊಪ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು ಉಡುಪಿ)

ಆದಳಿತ ಆಫೀಸು ಮಂಗಳೂರು

ಚೀನೀಯರು ನೇಯ್ದ ಮಾಯೆಯ ಬಲೆ

(ನಿನ್ನೆ ಮುಟದಿಂದ)

ನ್, ಘಾನ, ಇಂಡೋನೇಶ್ಯ ನೇಪಾಲ ಮತ್ತು ತೋರಿಕೆಗೆ ಮಾತ್ರ ರಷ್ಯಾ ಗಳು. ಇವುಗಳಲ್ಲಿ ಕೆಲವು ರಾಷ್ಟ್ರಗಳು ಭಾರತದ ಬಗ್ಗೆ ಮತ್ಸರ, ದ್ವೇಷಗಳ ಜ್ವಾಲೆಯನ್ನು ಕಾರಲು ಇದು ಸೂಕ್ತ ಸಮಯವೆಂದು ಹೊಂಚು ಹಾಕುತ್ತಿವೆ. ಅವುಗಳಲ್ಲಿ ಅಗ್ರಗಣ್ಯ ಸ್ಥಾನ 'ನಮ್ಮ ನೆರೆಯ ಭಾತೃ ರಾಷ್ಟ್ರ' ಪಾಕಿಸ್ತಾನಕ್ಕೆ. ಬರ್ಮಾ ಮಾತ್ರ ತನ್ನ ಗುಟ್ಟೇನೆಂಬುದನ್ನು ಹೇಳುತ್ತಿಲ್ಲ. ಇಂಡೋನೇಶಿಯೂ ಭಾರತ—ಚೀನಾಗಳೆರಡರ ಸ್ನೇಹ ಉಳಿಸುವ ಯತ್ನದಲ್ಲಿದೆ. ಈ ಎಲ್ಲಾ ತಟಸ್ಥ ರಾಷ್ಟ್ರಗಳು ಭಾರತವೀಗ ಏನು ಮಾಡುವುದು ಎಂದು ಪರೀಕ್ಷೆ ಮಾಡುತ್ತಿವೆ.

ಪಾಕಿಸ್ತಾನದ ಅಸುರೀ ವರ್ತನೆ

ನಮ್ಮ ನೆರೆಯ ರಾಷ್ಟ್ರ ಪಾಕಿಸ್ತಾನ ಪಡುತ್ತಿರುವ ಸಂತೋಷದಸ್ಯ ಈ ಜಗತ್ತಿನ ಯಾವ ರಾಷ್ಟ್ರವೂ ಪಡಲಾರದು. ಭಾರತದ ಮೇಲೆ ದ್ವೇಷ ಸಾಧಿಸಬೇಕೆಂಬ ಅದರ ದುರಾಲೋಚನೆ ಪರಾಕಾಷ್ಠೆಯನ್ನು ಮೀರಿದೆ. ಇಲ್ಲವಾದರೆ ಭಾರತವನ್ನು ಕಬಳಿಸುವ ಪ್ರಯತ್ನದಲ್ಲಿರುವ ಸಂದರ್ಭದಲ್ಲಿ ಆದು ಚೀನಾದೊಡನೆ ಮೈತ್ರಿಬೆಳೆಸುವ ಪ್ರಯತ್ನ ಮಾಡುತ್ತಿರುವುದು ಹಾವಿನೊಡನೆ ಸೆಣಸಾಡಿದಂತೆ. ಭಾರತವನ್ನು ಮೊದಲು ನಂಬಿಸಿ ಮತ್ತೆ ಬೆನ್ನಿನಿಂದ ಇರಿದ ಚೀನಾದ ದುಷ್ಟ ವರ್ತನೆಯಿಂದ ಪಾಕಿಸ್ತಾನವು ಪಾಠ ಕಲಿಯದೆ ಹೋದರೆ, ಅದು ಮೂರ್ಖತನದ್ದೆನಿಸುವುದು. ಇತ್ತೀಚೆಗೆ ಪಾಕಿಸ್ತಾನದಲ್ಲಾದ ರಹಸ್ಯಾ ದ್ಘಾರ್ಣಿಮೆಂಟರಿ ಅಧಿವೇಶನದಲ್ಲಿ ಅಧ್ಯಕ್ಷ ಅಯೂಬರು ಅಮೇರಿಕಾ ಭಾರತಕ್ಕೆ ಕೊಟ್ಟ ಸಹಾಯವನ್ನು ಕರೋರವಾಗಿ ಟೀಕಿಸಿ ಹೀಗಾದರೆ ಅದು ಚೈನಾ-ರಷ್ಯಾಗಳೆತ್ತ ನೋಡ ಬೇಕಾದೀತೆಂದು ಸಹಾ ಗುಡುಗಿದ್ದಾರೆ. ಅಮೇರಿಕಾವನ್ನು ಧಿಕ್ಕರಿಸಿ ನೆಹರೂರವರ ಪ್ರತಿಮೆಯನ್ನು ದಹಿಸುವ ಇಷ್ಟೋ ಹರತಾಳಗಳು ಪಾಕಿಸ್ತಾನದಲ್ಲಿ ಆಗಿವೆ. ಬಹುಶಃ ಇಂದು ಭಾರತದ ಮೇಲೆ ಆಕ್ರಮಣ ಮಾಡಿದ ಚೀನಾಕ್ಕೂ ಆದರಷ್ಟು ಸಂತೋಷವಾಗಲಾರದು. ಕಾಶ್ಮೀರ ಸಮಸ್ಯೆ ಪರಿಹಾರವಾಗದಿದ್ದರೆ ಸಂಘರ್ಷಣಾಗದಿರಲಾರದು ಎಂಬುದನ್ನು ಒತ್ತಿ ಹೇಳಿದ ಅಯೂಬರಿಗೆ, ವಿವೇಕ ದೂರದೃಷ್ಟಿಗಳು ಇಲ್ಲವೆಂಬುದು ಸ್ಪಷ್ಟವಾಗುತ್ತಿದೆ. ಭಾರತದ ಮಿತ್ರರು ಆದರೆ ಶತ್ರುಗಳು ಮತ್ತು ಭಾರತದ ಶತ್ರುಗಳು ಆದರೆ ಮಿತ್ರರುಗಳಾಗಿದ್ದಾರೆ. ಇಂತಹ ಕುತ್ಸಿತ ಮನೋವೃತ್ತಿಯ ಪಾಕಿಸ್ತಾನದ ಈ ಅಸುರೀ ವರ್ತನೆ ಕಳವಳಕ್ಕೆ ಕಾರಣವಾಗಿದೆ.

ಅನೀರೀಕ್ಷಿತ ಯುದ್ಧ ವಿರಾಮ

'ಕಮ್ಯುನಿಸ್ಟ್'ರನ್ನೇ ನಂಬಬಾರದು ಅನರಲ್ಲಾ ಆ ಕೆಂಪು ಚೀನಾದ ಕಮ್ಯುನಿಸ್ಟರನ್ನು ಲವಲೇಶದಷ್ಟೂ ನಂಬಬಾರದು. ಕಳೆದ ತಾರೀಕು ೨೦ನೇ ಮಂಗಳವಾರ ಮಧ್ಯೆ ರಾತ್ರಿಯಿಂದ ಯುದ್ಧ ವಿರಾಮ ಸಾರಲಾಗಿದೆಯೆಂದು ಹೇಳಿ, ಶಾಂತಿ-ಸಂಧಾನದ ನೆಪಗು ಇಂತಿ, ಜಗತ್ತಿನ ಜನರ ಕಣ್ಣಿಗೆ ಮಣ್ಣೆರೆಚಲು ತಾನೇ ಶಾಂತಿಯ ಪ್ರವರ್ತಕನೋ ಎಂಬಂತೆ ತನ್ನ ಕಪಟ—ಅನ್ಯಾಯ—ವಂಚನೆಗಳಿಂದ ಕೂಡಿದ ಮೂರು ಸೂತ್ರಗಳನ್ನು ಮುಂದಿರಿಸಿ ಮಾತುಕತೆಗೆ ಭಾರತವು ಈ ಯುದ್ಧ ವಿರಾಮ ಕಾಲದಲ್ಲಿ ಬರಬೇಕೆಂದು ಕರೆದಿದೆ. ಚೀನಾದ ಈ ಅನಿರೀಕ್ಷಿತ ವರ್ತನೆಯಿಂದ ಕುಂಬಾ ಗಲಿಬಿಲಿಯುಂಟಾಗಿದೆ. ಆದರೆ ಒಮ್ಮೆ ವಂಚಿತರಾದ ಭಾರತೀಯರು ಇನ್ನು ಚೀನಾದ ಮೋಸಕ್ಕೆ ಬೀಳುವಂತಿಲ್ಲ. ಚೀನಾ ಘೋರಿ ಮಹಮ್ಮದನಂತೆ ಪುನಃ ಆಕ್ರಮಣ ಮಾಡಲು ತಯ್ಯಾರಿ ಮಾಡಲೇ ಈ ಸೋಗು ಮಾಡಿದ್ದು. ಅದರ ಸೈನ್ಯ ಸರಬರಾಜು ಆಗಲು ಇನ್ನು ಕೆಲವು ದಿನಗಳಾದರೂ ಬೇಕು. ಈ ಬಿಕ್ಕಟ್ಟಿನ ಕಾಲದಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳ ಗಮನ ನೆಹರೂರವರ ಕಡೆ ಹರಿದಿದೆ. ನೆಹರೂರವರು ಸಪ್ತಂಬರ ೮ರಂದು ಆವರಿದ್ದಲ್ಲಿಗೆ ಹಿಂದೆ ಸರಿಯದೆ ಮಾತುಕತೆಯ ಪ್ರಶ್ನೆಯೇ ಇಲ್ಲವೆಂಬುಗನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಬರ್ಟ್ರಂಡ್ ರಸ್ಸೆಲ್ಲರಂತೆ ವಿಶ್ವಶಾಂತಿಗೋಸ್ಕರ ವೈಯಕ್ತಿಕ ವಿಚಾರಗಳನ್ನು ಬದಿಗಿರಿಸಿ ಚೀನಾದ ಶಾಂತಿ ಸೂಚನೆಗಳನ್ನು ಒಪ್ಪಿ ಭಾರತವು ಸಂಧಾನಕ್ಕೆ ಒಪ್ಪಬೇಕೆನ್ನುವ ರಾಷ್ಟ್ರಗಳೂ ಇಲ್ಲವೆನ್ನುವಂತಿಲ್ಲ. ಇದರ ಪ್ರತಿಕ್ರಿಯೆಯನ್ನು ಇನ್ನು ಕಾಣಬೇಕಾಗಿದೆ. ಎಂತಿದ್ದರೂ ಭಾರತವು ಚೀನೀಯರನ್ನು ಗಡಿ ಪ್ರದೇಶದಿಂದ ಹೊರ ಗಟ್ಟುವ ತನಕ ಸುಮ್ಮಗಿರಲಾರದು.

ಭಾರತಕ್ಕೆ ನೆರವು

ಭಾರತಕ್ಕೆ ಇಂದು ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮೊದಲಾದ ರಾಷ್ಟ್ರಗಳಿಂದ ವಿಪುಲವಾಗಿ ಅವಶ್ಯಕವಾದ ಸಹಾಯ ಬರುತ್ತಿದೆ ಈ ಸಂದರ್ಭದಲ್ಲಿ ಭಾರತವು ಈ ಮಿತ್ರ ರಾಷ್ಟ್ರಗಳನ್ನು ಸ್ಮರಿಸಿದಷ್ಟು ಸಾಲದು. ಜಗತ್ತಿನ ಎಲ್ಲಾ ರಾಷ್ಟ್ರಗಳು (ಕಮ್ಯುನಿಸ್ಟ್ ವಿರೋಧಿ) ಭಾರತವನ್ನು ಬೆಂಬಲಿಸಿ ಇಂದು ಒಂದಲ್ಲ ಒಂದು ರೀತಿಯಿಂದ ಸಹಾಯ ಮಾಡುತ್ತಿವೆ. ಆಸ್ಟ್ರೇಲಿಯಾದಿಂದ ಉಣ್ಣೆ ಹಾಗು ಇತರ ಆಸ್ತ್ರಗಳ ಸಹಾಯ ಸಿಕ್ಕಿರುವುದಾಗಿ ತಿಳಿದು ಬಂದಿದೆ. ಹೆಚ್ಚಿನ ರಾಷ್ಟ್ರಗಳು ಭಾರತದ ರಕ್ಷಣಾ ನಿಧಿಗೆ ಯಥಾಶಕ್ತಿ ದಾನ ನೀಡಿ ಭಾರತದ ಕೃತಜ್ಞತೆಗೆ ಪಾತ್ರವಾಗಿವೆ. ಹೀಗೆ ಭಾರತವು ಜಗತ್ತಿನ ರಾಷ್ಟ್ರಗಳಿಂದ, ಸೈನಿಕ, ನೈಸಿಕ ಹಾಗೂ ಸಾರ್ವತ್ರಿಕ ಬೆಂಬಲ ಪಡೆದು ಚೀನೀ ರಕ್ಕಸನನ್ನು ಸದೆಬಡಿಯಲು ಪೂರ್ಣವಾಗಿ ಸನುರ್ಧ ಹಾಗೂ ಭದ್ರ ಸಿದ್ಧತೆ ಮಾಡುತ್ತಿದೆ.

ಭಾರತ ಮಾತೆಯ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಾಗ ನಾವು ಸಹಿಸೆವು. ನಮ್ಮ ತನು-ಮನ-ಧನಗಳು ಆಕೆಯ ರಕ್ಷಣೆಗೆ ಮುಡಿಪು. ಚೀನೀಯ ರಕ್ಕಸರನ್ನು ಹೊರಗಟ್ಟಿದೆ ನಮ್ಮ ಯೆಜ್ಞಕ್ಕೆ ಬಿಡುವಿಲ್ಲ. ಈ ಯಜ್ಞಕ್ಕೆ ನವ್ಯ ಸರ್ವಸ್ವವೂ ಅರ್ಪಿತ.

—ಶ್ರೀ ರಾಮತನಯ.

ಅಳುವುದಕ್ಕೂ ಅನುಮತಿ ಸಿಗದು

(ಜನೇ ಮುಟದಿಂದ)

ದಕೆ, ಇಂತಹ ಅಪರಾಧಗಳಾಗಿ ಆದಕ್ಕೆ ಕಣ್ಣೀರು ಸುರಿಸುವ ಅವಕಾಶ ಪ್ರಾಪ್ತವಾದಾಗ ಅಷ್ಟು ಮಾಡುವ ಅಧಿಕಾರವೂ ಉಳಿಯಲಿಕ್ಕಿಲ್ಲ. ಕರುಕಟ್ಟಲು ನೆರೆ ಮನೆ ಬಯಸುವವನ ಮನೆಯೇ ಸುಟ್ಟು ಭಸ್ಮವಾದೀತು.

ಹಾವಿನೊಡನೆ—ಕಟ್ಟಿನ ಹಾವಿನೊಡನೆ ಸರಸ ಎಂದಿಗೂ ಸಲ್ಲದು, ಆದರ ವಿಷ ತೀಕ್ಷ್ಣವಾದುದು. ಸ್ವರ್ಶ ಸಾವಿಗೆ ಹೇತುವಾದುದು ಅದನ್ನು ಸುಮ್ಮನಿರಲೂ ಬಿಡಬಾರದು. ಸಿಕ್ಕ ದೊಣ್ಣೆ ಕಲ್ಲುಗಳಿಂದ ಗುದ್ದಿ ಕೊಂದು ಬಿಡಬೇಕಲ್ಲದೆ ಆದನ್ನು ಎತ್ತಲು ಮನ ಮಾಡುವುದಲ್ಲ. ನಮ್ಮ ಸುತ್ತಲಿನಲ್ಲಿ ಇದರ ವಿಷಜಾಲಯು ಹರಡಿರುವಾಗ, ನಾವಾದರೂ ಶುದ್ಧವಾಯುವನ್ನು ಸೇವಿಸಬೇಕ; ನಮ್ಮ ಭದ್ರತೆಯನ್ನು ನಾವು ಮಾಡಿಕೊಳ್ಳಬೇಕು. ಮಾತೃಭೂಮಿಯ ನೇಲಿನ ಪರಕೀಯರ ವಿಷವಾದವನ್ನು ಕಿತ್ತು ಹಾಕಬೇಕು. ಮಾತೃಭೂರಕ್ಷಣೆಯಲ್ಲಿ ಮುಂದಾಗಿ ಬೇಕು.

—ಗೋರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ

ರಿಜಿಸ್ಟರ್ಡ್ ಆಫೀಸು

ವಿಜಯ ಬ್ಯಾಂಕ್ ಬಿಲ್ಡಿಂಗ್ ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3 ದ. ಕ

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣದ ಈಡಿನ ಮೇಲೆ ಸಾಲ ಪಡೆಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲವನ್ನು ಬರಪಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಾ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 12—12—1962ನೇ ಬುಧವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಅಥವಾ ಬ್ಯಾಂಕಿಗೆ ಯಾವ ಕಾಂಡ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನಿಂದಲಿ ಹುಟ್ಟಿ ಬಂದ ಏಜೀಜು ಸಾಲದ ಮೊಬಲಗಿಗೆ ಕಡಿಮೆ ಯಾಡಲ್ಲಿ ಸಂಬಂಧಪಟ್ಟವರ ದೇಪ ಜವಾಬ್ದಾರಿಯಿಂದ ಬ್ಯಾಂಕಿಗೆ ಬಹ ಏಜೀಜನ್ನು ವಸೂಲು ಮಾಡಲಾಗುತ್ತದೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 30-9-62ಕ್ಕೆ ಬರತಕ್ಕ ಮೊಬಲಗು
77/60	ದಯಾನಂದ ಶೆಟ್ಟಿ ಕೃಷ್ಣಯ ಶೆಟ್ರ ಮಗ, ಹೆರೂರು ಗ್ರಾಮ ಪೋಸ್ಟ್ ಬ್ರಹ್ಮಾವರ.	100=00
747/60	ವಿರಲ ಶೆಟ್ಟಿ ಸೂರಪ್ಪ ಶೆಟ್ರ ಅಳಿಯ, ಹನೆಹಳ್ಳಿ ಗ್ರಾಮದ ಭಂಡಿಮಟ್ಟಿ, ಪೋಸ್ಟ್ ಬಾಕೂರು.	109=65
391/61	ಬೋಲು ಮರಕಾಲ ಕೊರಗ ಮರಿಹಾಲರ ಮಗ, ನಡೂರು ಗ್ರಾಮ ಪೋಸ್ಟ್ ಹನೆಹಳ್ಳಿ.	173=50
311/61	ಬಿ. ಕೃಷ್ಣಯ್ಯ ಶೆಟ್ಟಿ ಗಣಪಯ್ಯ ಶೆಟ್ರ ಅಳಿಯ, ಪಡುಬೈಕಾಡಿ ಗ್ರಾಮದ ಬಡಾಮನೆ, ಪೋಸ್ಟ್ ಬ್ರಹ್ಮಾವರ.	53=20
371/61	ನಾರಾಯಣ ಶೆಟ್ಟಿ ಹಿರಿಯಣ್ಣ ಶೆಟ್ರ ಅಳಿಯ, ಬೆಕ್ಕಾಡಿ ಗ್ರಾಮದ ಬಡಾಮನೆ, ಪೋಸ್ಟ್ ಬೆಕ್ಕಾಡಿ.	116=40
466/61	ಕೃಷ್ಣಯ್ಯ ಹೆಗ್ಡೆ ಹಿರಿಯಣ್ಣ ಶೆಟ್ರ ಮಗ, ನಾಲ್ಕೂರು ಗ್ರಾಮದ ಬೊಂಬಾಳೆ ಕೊಡಗೇರ ಮನೆ, ಪೋಸ್ಟ್ ನಾಲ್ಕೂರು	207=10
528/61	ಚಂದ್ರಶೇಖರ ಶೆಟ್ಟಿ ಶಿವರಾಮ ಶೆಟ್ರ ಮಗ, ಕಂಡಾರು ಗ್ರಾಮ ಪೋಸ್ಟ್ ಬಿಲ್ಲಾಡಿ.	552=15
542/61	ಮಹಾಬಲ ಶೆಟ್ಟಿ ರಂಗಯ್ಯ ಶೆಟ್ರ ಮಗ, ಶಿರೂರು ಗ್ರಾಮದ ಕಳಮನೆ ಪೋಸ್ಟ್ ಮಂದರ್ತಿ.	291=70
548/61	ಭುಜಂಗ ಶೆಟ್ಟಿ ಶೀನಪ್ಪ ಶೆಟ್ರ ಮಗ, ಹೊರಳಾಳಿ ನಡುಬೆಟ್ಟು ಕುದಿಗ್ರಾಮ, ಪೋಸ್ಟ್ ಕೊಳ್ಕಬೆ.	70=00
551/61	ಹಾರಾಡಿ ರಂಗಯ್ಯ ಶೆಟ್ಟಿ ಸೂರಣ್ಣ ಶೆಟ್ರ ಅಳಿಯ ಹಾರಾಡಿ ಗ್ರಾಮ ಪೋಸ್ಟ್ ಸಾಲಿಕೇರಿ.	830=40
603/61	ಕಿದಿಯೂರು ಮಹಾಬಲ ಶೆಟ್ಟಿ ಅಣ್ಣಯ್ಯ ಶೆಟ್ರ ಅಳಿಯ ಲೇಂಡ್ ಲೋರ್ಡ್ ಕುದಿಗ್ರಾಮದ ಹಳ್ಳಿ ನಂಬ್ರ ೫೫, ಪೋಸ್ಟ್ ಕೊಳ್ಕಬೆ	123=50
635/61	ಶಂಕರ ಹೆಗ್ಡೆ ಅಂಕಯ್ಯ ಹೆಗ್ಡೆಯ ಅಳಿಯ, ಕಂದಾಡಿ ಸಳ್ತು ಮನೆ ಪೋಸ್ಟ್ ಬ್ರಹ್ಮಾವರ.	257=15
680/61	ಚಂದ್ರಶೇಖರ ಶೆಟ್ಟಿ ಗರಿಯಣ್ಣ ಶೆಟ್ರ ಅಳಿಯ, ಶಿರಿಯೂರ್ ಗ್ರಾಮ, ಪೋಸ್ಟ್ ಸಾಯಿಬರ ಕಟ್ಟೆ.	222=90
712/61	ಕೆ. ಕೃಷ್ಣಯ ಶೆಟ್ಟಿ ನರಸಿಂಪ ಶೆಟ್ರ ಮಗ, ಕಚ್ಚೂರುಗ್ರಾಮ ಪೋಸ್ಟ್ ಹೆಬ್ರಿ.	195=00
748/61	ಬಸವ ಆಚ್ಚಾಸ್ಪರಿ ಮಗ, ಫಯರ್ ಸರ್ವಿಸ್ ಆಫೀಸಿನ ಹತ್ತಿರ ಪೋಸ್ಟ್ ಉಡುಪಿ.	297=85
763/61	ಎಚ್. ಭುಜಂಗ ಶೆಟ್ಟಿ ಎಸ್. ರಾಮಣ್ಣ ಶೆಟ್ರ ಮಗ, ಕಂಟ್ರಾಕ್ಟರ್ ಕೊಳಕೆಬೈಲ್ (Shiriyar) ಶಿರಿಯೂರ್ ಗ್ರಾಮ ಪೋಸ್ಟ್ ಸಾಯಿಬರ ಕಟ್ಟೆ	571=75
761/61	ಬಿ. ವೀರಭದ್ರ ನಾಯ್ಕ ಶಿವನಾಯ್ಕರ ಮಗ, ಹಂದಾಡಿ ಗ್ರಾಮ. ಪೋಸ್ಟ್ ಬ್ರಹ್ಮಾವರ	246=85
832/61	ಶೀನಪ್ಪ ಶೆಟ್ಟಿ ಗೋವಿಂದ ಹೆಗ್ಡೆಯ ಅಳಿಯ, ಕಂಬಳ ಗದ್ದೆಮನೆ, ಬನ್ನಾಡಿ ಗ್ರಾಮ ಪೋಸ್ಟ್ ಬನ್ನಾಡಿ	102=75

Office of
THE VIJAYA BANK LTD.,
BRAHMAVARA
Dated: 24—11—1962.

ಕೆ. ವಿಶ್ವನಾಥ ರೈ
Agent.

ಮೌನಂ ಸಂಮತಿ ಲಕ್ಷಣಂ

(೪ನೇ ಪುಟದಿಂದ)

ಯಿತು. 'ಮೂದಣ್ಣ ಮೂದಣ್ಣ' ಎಂದು ವಿದ್ಯಾವತಿ ಆವನು ಕಾಲೇಜಿಗೆ ಹೋಗುವಾಗ ಕೊಗುವಳು. ಮೂಲತಿಗೆ ಅವನನ್ನು ಕಂಡರೆ ತುಂಬಾ ನಾಚಿಕೆ. ಸುಮತಿಯು ತಂದ ಕಾದಂಬರಿಗಳನ್ನು ಮೂಲತಿಯು ಒಳಮನೆಯಲ್ಲಿಯೇ ಓದುತ್ತಿದ್ದಳು. ಮಾಧವನಿಗೆ ನೋ ದಿನೇದಿನೇ ಮೂಲತಿಯ ಮೇಲೆ ಪ್ರೇಮವು ಬಲಿಯುತ್ತಿದ್ದಿತು. ಒಂದು ದಿನ ಸುಮತಿಯನ್ನು ನೆರೆಮನೆಗೆ ಹೋದ ಸುದ್ದಿಯನ್ನು ತಿಳಿದ ಮಾಧವನು ಒಂದು ಕತೆ ಪುಸ್ತಕವನ್ನು ವಿದ್ಯಾವತಿಯೊಡನೆ, ಆಕೆಯು ಅಕ್ಕನಿಗೆ ಕೊಡುವಂತೆ ಹೇಳಿ ಕಳುಹಿಸಿದನು. ವಿದ್ಯಾವತಿಯು ಅದನ್ನು ತಂದು ಮೂಲತಿಗಿತ್ತಳು.

ಮೂಲತಿಯು ಬಿಡಿಸಿ ಓದುವಾಗ ಅದರ ಮಧ್ಯದಲ್ಲಿ ಒಂದು ಕಾಗದ ಸಿಕ್ಕಿತು. 'ಪ್ರಿಯ ಪ್ರೇಯಸಿ, ಮೂಲತಿಗೆ, ನಿನ್ನ ಪ್ರೀತಿಗೆ ಪಾತ್ರನಾದ ಮಾಧವನ ಅಶೀರ್ವಾದ. ಈ ಪತ್ರ ಬರೆಯುವರೆ ಕಾರಣ ನಿನ್ನ ಮೇಲೆ ನಾನು ಮೋಹಿತನಾಗಿದ್ದೇನೆ. ಇದು ಯಾರಿಂದಲೂ ಕಡಿಯಲು ಸಾಧ್ಯವಾಗದು. ತಿಳಿದಿರಲಿ.

....ಇತಿ ನಿನ್ನವ....
ಮಾಧವ,

ಮೂಲತಿಯ ಮನಸ್ಸು 'ಹೂಂ' ಎಂದರೂ ತನ್ನ ತಂದೆ ತಾಯಿಯವರ ಬಗೆಗೆ ಹೆದರಿದಳು. ಆದರೂ ಈಗಿನ ಸಮಯಕ್ಕನುಗುಣವಾಗಿ ವರ್ತಿಸಬೇಕೆಂದು ತಿಳಿದು ಉತ್ತರ ಬರೆದಳು.

'ನಿಮ್ಮ ಪತ್ರಕ್ಕೆ ಸದಾ ಋಣಿ'... ನಿಮ್ಮಂತೆ ನಾನು ××× ಮೂಲತಿ' ಕತೆಯ ಪುಸ್ತಕ ಕೂಡಲೇ ಮಾಧವನ ಕೈ ಸೇರಿತು. ಮಧ್ಯರಲ್ಲಿ ಮೂಲತಿಯ ಕಾಗದವು ಸಿಕ್ಕಿತು. ಹತ್ತಾರು ಬಾರಿ ಓದಿದ. 'ಒಪ್ಪಿಗೆ' ಇದ್ದೇ ಇದೆಯೆಂಬ ಸಂತೋಷದಿಂದ ರಾತ್ರಿ ನಿದ್ರೆಯೇ ಬರಲಿಲ್ಲ. ಸುಮತಿಯಮ್ಮ ನೆರಮನೆಯಿಂದ ಬಂದರು. ಮಾಧವನಿಗೆ ಕುಡಿಯಲು ಒಂದು ಲೋಟ ಕಾಫಿ ತಂದಿತ್ತಳು. ಸುಮತಿಯು ತನ್ನ ಮನೆಯಳಿಯನು ಇವನಾಗ ಬಹುದಿತ್ತು ಎಂದು ಮನಸ್ಸಿನಲ್ಲಿಯೇ ಮಂಡಿಗೆ ತಿಂದಳು. ಅಂತೆಯೇ ಮಾಧವನು ಸುಂದರ ಸ್ವರೂಪನಾಗಿದ್ದನು.

ಇಂದು ನೂಲತಿಗೆ ನವ ಯೌವನ ತುಂಬಿತ್ತು. ಹರೆಯ ತುಂಬಿದ್ದ ಆವಳಿಗೆ ಮದುವೆಯು ಆಗ ಬೇಕಷ್ಟೆ! ಮದುವೆ ಪ್ರಶ್ನೆ ತಂದೆ ಶ್ಯಾಮ ರಾಯರ ಮುಂದೆ ನಿಂತಿತು. ಇವಾ! ದೈವ ಲೀಲೆಯಲ್ಲವೇ! ನಾನೆಣಿಸಿದಂತೆ ಮಾತ್ರ ನಡೆಯಲು ನಾ ಧ್ಯನೇ? ತಂದೆಯು ಜಾತಕ ತಂದು ರಾಶಿ ಹಾಕಿದ. ಜೋಯಿಸರ ಮನೆಗೆ ನಡೆದು, ನಡೆದು ಅವನ ಕಾಲು ಸವೆಯ ತೊಡಗಿತು. ಯಾವುದನ್ನು ನೋಡಿದರೂ ತಾಳೆ ಬರುವುದಿಲ್ಲ.

ಒಮ್ಮೆ ಸುಮತಿಯಮ್ಮ ತಮ್ಮ ಪತಿಯನ್ನು ಎಚ್ಚರಿಸಿದರು, "ಮೂಲತಿಯನ್ನು ಮಾಧವನಿಗೆ ಏಕೆ ನೋಡ ಬಾರದು? ಎಂದರು. "ಅಯ್ಯೋ!" "ಪ್ರಾರಬ್ಧವೇ ನೀನು ಈ ಮಾತನ್ನು ನೊದಲೆ ಎಚ್ಚರಿಕೆ ಬಾರದಿತ್ತೆ? ನಾನು ಇಸ್ಟು ಕಷ್ಟ ಪಡ ಬೇಕಿತ್ತೇ?" ಎಂದು ನುಡಿದರು. ಶ್ಯಾಮ ರಾಯರು ಉಸ್ಪಾರಿಗೆಯಸ್ಟೇರಿ 'ಮಾಧವ-ಮಾಧವ' ಎಂದು ಕೂಗಿದರು.

ಮಾಧವನ ಎದೆಯು ಬಿರಿಯುವಂತಿತ್ತು. ಹೆದರಿ 'ಆ' ಎಂದು ಬಾಗಿಲು ತೆರೆದು ನಿಂತುಕೊಂಡ. 'ಮೂಗೂ ನಿನಗೆ ನನ್ನ ಮಗಳು ಮೂಲತಿಯನ್ನು ಕೊಡ ಬೇಕೆಂದು ನಿಶ್ಚಯ ಮಾಡಿದ್ದೇನೆ. ನಿನಗೆ ಸರಿಯಾದ ಜೋಡಿ ಎಂತ ನಾವು ತಿಳಿದಿದ್ದೇವೆ. ಹೇಗೆ? ನೀನು ಒಪ್ಪುವಿಳಾನೆ?" ಎಂದರು.

ನಾಚಿಕೆಯಿಂದ ಸುಮ್ಮನಿನ್ದ ಮಾಧವ 'ಮೌನಂ ಸಮ್ಮತಿ ಲಕ್ಷಣಂ' ಎಂದು ತಿಳಿದು ಶ್ಯಾಮ ರಾಯನು ತನ್ನ ಮಗಳೊಡನೆ ಈ ವಿಷಯ ಪ್ರಸ್ತಾಪಿಸಿದನು ಒಪ್ಪಿ ಇರುವಳೆ? ಮುದುವೆಯ ಸಿದ್ಧತೆ ಭರದಿಂದ ಸಾಗಿತು. ಮಾಧವನ ತಂದೆ ತಾಯಿ, ಬಳಗದವರು ನೆರೆದಿದ್ದರು. ಇಬ್ಬರ ಕೊರಳಲ್ಲೂ ತಾವೇ ಇನ್ನು ಮುಂದೆ 'ಸತಿ ಪತಿ'ಯರು ಎಂದು ಸೂಚಿಸುವ ಮಂಗಳ ಹಾರವು ಬಿದ್ದುತ್ತು. ಮಾಧವನು ಸಂತಸದಿಂದ ಮೂಲತಿಯ ಬಲಗೈಯನ್ನು ಹಿಡಿದು ನಕ್ಕನು.

—ಎಚ್. ಮಂಜುನಾಥ ಅಡಿಗ

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಕಾಪು

ರಿಜಿಸ್ಟೆರ್ಡ್ ಆಫೀಸು

ವಿಜಯ ಬ್ಯಾಂಕ್ ಬಿಲ್ಡಿಂಗ್ ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-೩ ದ. ಕ

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಲ್ಲಿ ಚಿನ್ನಾಭರಣವ ಈಡಿನ ಮೇಲೆ ಸಾಲ ಪಡೆಕೊಂಡು ಕ್ಲಪ್ತ ಸಾಮಿನವೆಗೆ ಅಸಲು ಬಡ್ಡಿ ಚುಕ್ತೆ ಕೊಡದೆ ಬಾಕಿ ಪೂರಿ ಕೊಂಡಿರುವುದರಿಂದಲೂ, ಸದ್ರಿ ಸಾಲವನ್ನು ಬರಪೂರಿಕೊಳ್ಳುವರೆ ಆವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯುಪುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 11—12—1962ನೇ ಮಂಗಳವಾರ ಮಧ್ಯಾಹ್ನ ಗಂಟೆ 4ಕ್ಕೆ ಸರಿಯಾಗಿ ಆಧವಾ ಬ್ಯಾಂಕಿನೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಸುನಪ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮೂಡಲಾಗುವುದು. ಏಲಂನಿನ್ದಲ್ಲಿ ಮುಟ್ಟಿ ಬಂದ ಏಮೇಜು ಸಾಲದ ಮೊಬಲಗಿಗೆ ಕಡಿಮೆ ಯಾದಲ್ಲಿ ಸಂಬಂಧಪಟ್ಟವರ ದೇಪ ಜವಾಬ್ದಾರಿಯಿಂದ ಬ್ಯಾಂಕಿಗೆ ಬರ ಏಮೇಜನ್ನು ವಸೂಲು ಮಾಡಲಾಗುತ್ತಿರುವುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 30.9.62ಕ್ಕೆ ಬರಬೇಕ್ಕ ಮೊಬಲು
357/60	ಸಂಜೀವ ಬಿ. ಕರ್ಕೇರ, ಬಾಲು ಮರಕಾಲರ ಮಗ, ನಕ್ರಮನೆ, ಪಡುಗ್ರಾಮ ಕಾಸು ಪೋಸ್ಟು	15=40
958/60	ಅಬ್ದುಲ್ ಗನಿ ಸಾಹೇಬ, ಕಾಜಿ ಮೊಹಮ್ಮದ್ ಸಾಹೇಬರ ಮಗ ಮಲ್ಲಾರು ಗ್ರಾಮ ಮಲ್ಲಾರು ಪೋಸ್ಟು	59=24
12/61	ಶೀನ ಪೆಂಡನ್, ಗುಡ್ಡೆ ಮರಕಾಲರ ಮಗ, ಮೂಳೂರು ಗ್ರಾಮ ಉಚ್ಚಿಲ ಪೋಸ್ಟು	315=85
207/61	ಐತ ಪೂಜಾರಿ, ಬಾಬು ಪೂಜಾರಿಯವರ ಆಳಿಯ ಮಣಜರು ಮನೆ ಮಲ್ಲಾರು ಗ್ರಾಮ ಮಲ್ಲಾರು ಪೋಸ್ಟು	90/90
216/61	ಶೇಕ್ ಯಸುಫ್ ಮೈದಿನ್ ಸಾಹೇಬ, ಪೈದಿನ್ ಸಾಹೇಬರ ಮಗ, ಕೊಂಬಗುದ್ದೆ ಮಲ್ಲಾರು ಗ್ರಾಮ, ಮಲ್ಲಾರು ಪೋಸ್ಟು	459=00
311/61	ಅಬ್ದುಲ್ ಗನಿ, ಕಾಜಿಜಸನ್ ಸಾಹೇಬರ ಮಗ ಮಲ್ಲಾರು ಗ್ರಾಮ ಮಲ್ಲಾರು ಪೋಸ್ಟು	115=55
418/61	ಬಾಲು ಪೂಜಾರಿ, ಕೊರಗ ಪೂಜಾರಿಯ ಅಳಿಯ ಸ್ವಪಿಲ ತೋಟ, ಪಡುಗ್ರಾಮ ಕಾಪು ಪೋಸ್ಟು	62=95
456/61	ಪೊಯನ್ಮಾರ್ ಅಬ್ದುಸ್, ಹರೂನ್ ಸಹೇಬರ ಮಗ ಮಲ್ಲಾರು ಗ್ರಾಮ ಮಲ್ಲಾರು ಪೋಸ್ಟು	40=00
480/61	ಕೆ. ಹಸನ್ ಮೈದಿನ್, ಮೈದಿನ್ ಬ್ಯಾರಿಯವರ ಮಗ ಮೂಳೂರು ಗ್ರಾಮ ಉಚ್ಚಿಲ ಪೋಸ್ಟು	201=00
484/61	ನಾರಾಯಣ ದೇವಾಡಿಗ, ಕೂಕ್ರ ದೇವಾಡಿಗರ ಮಗ ಮಲ್ಲಾರು ಗ್ರಾಮ ಮಲ್ಲಾರು ಪೋಸ್ಟು	80=00
574/61	ಕೆ. ಹಸನ್ ಮೈದಿನ್, ಮೈದಿನ್ ಬ್ಯಾರಿಯವರ ಮಗ ಮೂಳೂರು ಗ್ರಾಮ ಉಚ್ಚಿಲ ಪೋಸ್ಟು	36=05
583/61	ಯಮ್. ಶೇಕಬ್ಬ ಪ್ಯಾರಿ, ಹಾಜಿ ಬ್ಯಾರಿಯವರ ಮಗ ಕಳತ್ತೂರು ಗ್ರಾಮ ಸುಂಕಲಕಾಡು ಪೋಸ್ಟು	47=45
625/61	ನಾರಾಯಣ ದೇವಾಡಿಗ, ಕೂಕ್ರ ದೇವಾಡಿಗರ ಮಗ ಮಲ್ಲಾರು ಗ್ರಾಮ ಮಲ್ಲಾರು ಪೋಸ್ಟು	96=75
744/61	ಕಿಟ್ಟಣ್ಣ ಹೆಗ್ಡೆ, ಕುದ್ದು ಹೆಗ್ಡೆಯವರ ಆಳಿಯ ಮೂಳೂರು ಗ್ರಾಮ ನಾನಾ ಸಸಿಕ ಗುತ್ತು ಉಚ್ಚಿಲ ಪೋಸ್ಟು	129=60
758/61	ಯಮ್. ಸುಂದರ ಹೆಗ್ಡೆ, ಮಹಾಬಲ ಹೆಗ್ಡೆಯವರ ಮಗ ಮೂಳೂರು ಗ್ರಾಮ ಉಚ್ಚಿಲ ಪೋಸ್ಟು	87=07

THE VIJAYA BANK LTD.,
KAUP.
Dated: 20—11—1962.

B. Bhaskara Shetty
Agent.

ಜಯವಾಗಲಿ ಭಾರತಕೆ!

೧

ಸೇರಿರಿ ಬನ್ನಿರಿ ಧಾರತ ಮೂತೆಯ
ರಕ್ಷಣೆ ಮಾಡಿರಿ ಬಾಂಧವರೆ
ಉದಾರ ಹೃದಯದಿ ಕೂಡಿಸಿ ನಿಧಿಯನು
ಮೂತೆಯ ಕಷ್ಟವ ತೊಲಗಿಸಿರಿ

೨

ಮೂತೆಯ ಸಿರಸಿಗೆ ಆಘಾತವಾಗಿದೆ
ಮಾಡಿರಿ ಶುಶ್ರೂಷೆ ಉಪಚಾರ
ಚೀನಿ ಜೋರರ ಹಿಡಿಯಿರಿ ಕೊಲ್ಲಿರಿ
ಮೂತೆಯ ಋಣವನು ತೀರಿಸಿರಿ

೩

ತಂದರು ನಮ್ಮಯ ದೇಶಕೆ ಚೀನಿಯ
ರಾಕ್ಷಸ ಜನರು ಬರಗಾಲ
ನಮ್ಮೊಳ ತೊಡಕನು ನೋಡುತ ಕೂತರೆ
ಬರುವುದು ಖಂಡಿತ ನಮಗೇ ಕಡೆಗಾಲ

೪

ಹೋಯಿತು ನಮ್ಮ ದೇಶದ ಜನರ
ಮೌಲ್ಯದ ಸೊತ್ತು ಬಂಗಾರ
ಸೋತರೆ ದೊರೆಯದು ಕೂತರೆ
ಬಾರದು
ಹೊಡೆಯಿರಿ ಚೈನಕ್ಕೆ ಧಿಕ್ಕಾರ,
ಭಾರತ ಮೂತೆಗೆ ಜಯಕಾರ

ಡಾ| ಯು. ಚಂದ್ರಶೇಖರ,
ಕುಡುಮಲ್ಲಿಗೆ.

ಭಾರತದ ಸೋದರರೇ ಎಚ್ಚರಾಗಿ!

೧

ರಣಕಹಳೆ ಮೊಳಗುತಿವೆ! ರಣರಂಗ ಕರೆ
ಯುತಿದೆ!
ಭಾರತದ ಸೋದರರೆ ಎಚ್ಚರಾಗಿ!
ಭಾರತೆಯ ಶಿರದಲ್ಲಿ ಜ್ವಾತಿಯುದೊ ಉರಿ
ಯುತಿದೆ
ನಂದಿಸಲು ಎದ್ದೇಳಿ ಸಿದ್ಧರಾಗಿ!

೨

ಕಾಲ್ಕೆರೆದು ಸವರಿವಸು ಕೈಗೊಂಡ ಚೀನ
ಯರ
ಕಳುಹಿಸುವ ಕಾಲವರ ಮನೆಗೆ ಬೇಗ!
ಹಿಂದಿ ಚೀನೀ ಭಾಯಿ ಭಾಯೆಂದು ದುರು
ಳಿರಾ
ನೇಪದಲಿ ಕೈಗೆ ಕೈಯಾಯಿತೀಗ!

೩

ಪಕ್ಷ ಭೇದವ ಮರೆತು ಒಂದಾಗಿ, ಉರಿ
ಯಾಗಿ,
ಚೀನಿಯರ ಸದೆ ಬಡಿಯ ಬನ್ನಿರೆಲ್ಲ!
ಕೆಚ್ಚೆದೆಯ ಧೀರರೇ ತನುಮನದ ಮಮತೆಯಾಗಿ
ತಾಯ್ನೆಲಕೆ ಹೋರಾಡ ಬನ್ನಿರೆಲ್ಲ!

೪

ಗೋನುವಾದೆ ವ್ಯಾಲ್ಡೊನನು ಬೇಟೆಯೂ
ಡಲು ಬನ್ನಿ!
ಕೆಚ್ಚೆದೆಯ ಶೂರರೇ ಸಾಗಿ ಬನ್ನಿ!
ಕಿಡಿಗೆ ಕಿಡಿ! ಉರಿಗೆ ಉರಿ! ಯೋಧರೇ
ಓ ಎನ್ನಿ
ಕಿಚ್ಚಾಗಿ ಬೆಳಕಾಗಿ ಬೆಳಗಿ ಬನ್ನಿ!

ಯು. ನಾರಾಯಣ ಸೇರಿಗಾರ,
ಉಡುಪಿ.

ಚುನಾವಣೆ

(೩ನೇ ಪುಟದಿಂದ)

ಒಡನೆಯೇ ಮುನಿಸ್ವಾಮಿಯು ತನ್ನ ತಾಯಿಯೊಡನೆ, ಆದರ ರಹಸ್ಯವನ್ನು ತಿಳಿಸಿ, ಧನಪಾಲ ಸೆಟ್ಟಿಯಲ್ಲಿಗೆ ಹೋಗಿ ಕಣ್ಣೀರು ಸುರಿಸುತ್ತ—'ಸ್ವಾಮಿ! ಶ್ರೀರಂಗನ ತಾಯಿ, ಮುದುಕಿಗೆ ವಿಶೇಷ ಕಾಯಿಲೆ! ಆಕೆ ಇನ್ನು ಉಳಿಯುವಂತಿಲ್ಲ! ಕೊನೆಯ ಬಾರಿ ತಾಯಿಯ ಮುಖ ನೋಡಲು ಒಂದು ಸಲ ಶ್ರೀರಂಗನನ್ನು ಕಳುಹಿಸಿ!' ಎಂದು ವ್ಯಾಧಿಸಿದನು.

ಸೆಟ್ಟರು, ಇದರಲ್ಲೇನೋ ಚುನಾವಣೆಯ ಮೋಸದ ತಂತ್ರವಿರಬಹುದೋ? ಎಂದು ಯೋಚಿಸಿ, ತನ್ನ ಕಾರಿನಲ್ಲಿ ಶ್ರೀರಂಗನನ್ನು ತನ್ನ ಕ್ಲಾರ್ಕ್ ಅಯ್ಯರೊಡನೆ, 'ಎಚ್ಚರಿಕೆ!' ಎಂದು ಹೇಳಿ ಕಳುಹಿಸಿಕೊಟ್ಟರು. ಕಾರು ಮುನಿಸ್ವಾಮಿಯಲ್ಲಿಗೆ ಹೋಗಿ ತಲುಪಿದಾಗ—ಅವನ ಮನೆಯ ಒಳಗಿನಿಂದ "ಆಳುವಿನ" ಧ್ವನಿ ಕೇಳಿ ಬರುತ್ತಿತ್ತು. ಶ್ರೀರಂಗನು ಕಾರಿನಿಂದಿಳಿದು ಒಳಗೆ ಹೋದ ಕೂಡಲೇ "ಗೋಳೋ" ಎಂದು ಎಲ್ಲರೂ ಅಳತೊಡಗಿದ್ದರು.

ಗಾಬರಿಯಿಂದ ಒಳಗೆ ಹೋದ ಶ್ರೀರಂಗನು, ತನ್ನ ಮುದಿ ತಾಯಿಯನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು! ಆಕೆ—ನಗುತ್ತ—ಮೆಲ್ಲಗೆ—'ರಂಗಾ! ನನಗೇನೂ ಕಾಯಿಲೆ ಆಗಿಲ್ಲ ಕಣೋ! ನೀನು ಮೊದಲಿಯಾರರಿಂದ ಒಂದು ಸಾವಿರ ರೂಪಾಯಿ ಪಡೆದು ಅವರಿಗೇ ಓಟು ಕೊಡು! ಮುನಿ ಸ್ವಾಮಿಗೂ 500 ಸಿಕ್ಕೆಡೆ! ಆ ಮೇಲೆ ಸುಖವಾಗಿ ಜೀವನ ನಡೆಸಬಹುದು!' ಎಂದಳು.

ಇತ್ತ ಹೊರಗೆ ನಿಂತಿದ್ದ ಸೆಟ್ಟರ ಕ್ಲಾರ್ಕರು—ಒಬ್ಬ ಹುಡುಗನೆ ಓಡಿ ನ—'ಇಲ್ಲಿ ಏನಾಗಿದೆಯಪ್ಪ?' ಎಂದು ಕೇಳಿದಾಗ, ಆ ಹುಡುಗ 'ಗೊತ್ತಿಲ್ಲೇ ಸ್ವಾಮಿ! ಶ್ರೀರಂಗನ ತಾಯಿ ಸಿಡುಬಿನ ಕಾಯಿಲೆಯಿಂದ ತೀರಿ ಕೊಂಡಳು!' ಎಂದನು. ಇದನ್ನು ಕೇಳಿದ ಅಯ್ಯರರು, ನಿಜವೆಂದು ನಂಬಿ—'ಇದು ಹೊಲಗೇರಿ! ಅಲ್ಲದೆ ಈ ಎಂಟು ಜಾಡ್ಯ! ಇನ್ನು ಇಲ್ಲಿರಬಾರದು!' ಎಂದು ಬಗೆದು ಅಲ್ಲಿಂದ ಹೊರಟು ಹೋದರು.

ಶ್ರೀರಂಗನು ಮೊದಲಿಯಾರರಲ್ಲಿಗೆ ತಲ್ಪಟ್ಟನ ಮತ್ತು. ಮೊದಲಿಯಾರುದು, ಅವನ ಮುಂದೆ, ಒಂದು ಸಾವಿರ ರೂಪಾಯಿ ಗಳನ್ನಿಟ್ಟು — ಪರಿಸ್ಥಿತಿಯನ್ನು ವಿವರಿಸಿ 'ಓಟು ಕೊಟ್ಟು ಮೂನ ಉಳಿಸಬೇಕೆಂದು ಕೇಳಿಕೊಂಡರು. ಅಲ್ಲಿದ್ದವರೆಲ್ಲರೂ ಶ್ರೀರಂಗನಿಗೆ ಒತ್ತಾಯಪೂರ್ವಕ ಹೇಳಿದರು. ಆದರೆ, ಒಂದು ಶಬ್ದವನ್ನೂ ಉಚ್ಚರಿಸದಿದ್ದ ಶ್ರೀರಂಗನು ಅಲ್ಲಿಂದ ಒಂದೇ ನೆಗೆತ ಕೈ ಹಾರಿ ಆ ಕತ್ತಲಿನಲ್ಲಿ ಓಡಿ ಹೋದನು. ಹಣದ ಚೀಲವನ್ನು ಅವನು ಕಣ್ಣೆತ್ತಿಯೂ ನೋಡಲಿಲ್ಲ. ಆದನ್ನು ಮಟ್ಟಲೂ ಇಲ್ಲ! ಹೀಗೆ ಹೋದ ಶ್ರೀರಂಗನು ಎಲ್ಲಿಗೆ ಹೋದನೆಂದೇ ಗೊತ್ತಾಗಲಿಲ್ಲ.

ಮರುದಿನ ಚುನಾವಣೆ ನಡೆಯಿತು. ಮತಗಣನೆಯೂದ ಬಳಿಕ 'ಧನಪಾಲ ಸೆಟ್ಟರು ಬಹುಮತಗಳಿಂದ ಆಯ್ಕೆಗೊಂಡ ವರ್ತಮಾನ ತಿಳಿದು ಅವರ ಪಾರ್ಟಿಯವರೆಲ್ಲರೂ ಹರ್ಷಭರಿತರಾದರು. ಆದರೆ, ಮೊದಲಿಯಾರರು ಸೋತುಹೋಗಿದ್ದರೂ ಅವರಿಗೆ ಒಂದು ಸಂತೋಷ ಕಾದಿತ್ತು. ಆದೇನೆಂದರೆ, ಹೆಣದ ರಾತಿಯನ್ನು ತಿರಸ್ಕರಿಸಿ ಹೋದ ಶ್ರೀರಂಗನು, ಯಾರಿಗೂ ಮತದಾನ ಮಾಡಲಿಲ್ಲವೆಂಬುದೇ ಆಗಿತ್ತು! ವಕೀಲ್ ರಾಮಸ್ವಾಮಿ ಮೊದಲಿಯಾರರು—'ಶ್ರೀರಂಗನ ಹೊರತು ನಿಮ್ಮ ಕೈವರೆಲ್ಲರೂ ಮೂರ್ಖರು! ಪಂಚಕರು! ಸಾವಿರಗಟ್ಲೆ ಹಣ ಪಡೆದು ಸಹ ಮೋಸ ಮಾಡಿದರಲ್ಲಾ!' ಎಂದರು.

ಹೊಲೆಯನಾದರೂ ಶ್ರೀರಂಗನ ಪಾತ್ರ—ತ್ಯಾಗದಿಂದ ಕೂಡಿರುವ. ಶ್ರೀ ರಾಜಾಜಿಯವರ ಈ ಕಥೆ ಚುನಾವಣಾ ಕಾಲದ ನಿಜವಾದ ಘಟನೆಗಳಿಂದ ಕೂಡಿದ್ದು, ಒಂದು ಘಟನಾತ್ಮಕ ಕಲಾಪೂರ್ಣ ಚಿತ್ರಣವಾಗಿದೆ! ಚುನಾವಣಾ ಕಾಲದ ಇಂದಿನ ಪರಿಸ್ಥಿತಿಯಲ್ಲಿ, ಚುನಾವಣಾ ಪ್ರಚಾರಕ ಹಾಗೂ ಉಮೇದ್ವಾರರಿಗೆ. ಈ ಕಥೆಯಿಂದ ಏನಾದರೊಂದು ಪ್ರಯೋಜನ ಸಿಕ್ಕಬಹುದೆಂಬುದರಲ್ಲಿ ಸಂದೇಹ ವೇನೂ ಇಲ್ಲ!

ಕನಲು ದಾರಿ—ಕೆಂಪು ದೀಪ

ಎಚ್ಚೆತ್ತ ಭಾರತ

—ಸುದಾಸ.

ಕದೀಮರ ಕಾಳ ಸಂತೆಯ ಬಗ್ಗೆ ಸರಕಾರ ಎಚ್ಚರಿಕೆ ಇತ್ತಿದೆ. ಧಾರಣೆಯ ವಿರಿಕೆ ಕುರಿತು ಸೂಕ್ತ ಕ್ರಮವನ್ನು ಕೈಕೊಂಡಿದೆ. ಕದೀಮರ ಕಾಳಸಂತೆ ತೆರೆಯಲ್ಪಡುವಂತಿಲ್ಲ. ಅವರ ಭಾಗ್ಯಚಕ್ರ ಕೈಕೊಟ್ಟಿತೇ ಎಂಬುದೊಂದು ಪ್ರಶ್ನೆ.

ಭಾರತದ ಮೇಲೆ ಎರಡನೆಯ ಮಹಾಯುದ್ಧ ಎಂತಹ ವರ್ಚಸ್ಸನ್ನು ಬೀರಿದೆ, ಎಂಬುದು, ಎಲ್ಲರಿಗೆ ತಿಳಿದ ವಿಷಯ.ಒಂದೆಡೆ ಜನ ಅನ್ನಕ್ಕಾಗಿ, ಬಟ್ಟೆಗಾಗಿ, ಇನ್ನಿತರ ಉಪಕರಣಗಳಿಗಾಗಿ ಬಾಯ್ದೆರೆದು ಕುಳಿತಿತ್ತು. ಇನ್ನೊಂದೆಡೆ ಈ ಕದೀಮರು ಹಣಕ್ಕಾಗಿ ಬಾಯ್ಬಿಡುತ್ತಿದ್ದರು. ಭಾಗ್ಯಲಕ್ಷ್ಮಿ ಕದೀಮರ ಮನೆ ಬಾಗಿಲಿಗೆ ಓಡೋಡಿ ಬಂದಳು. ಕಾಳಸಂತೆಯ ಹಣದಿಂದ ಮನೆಯ ಮಹಡಿಗಳು ಒಂದರ ಮೇಲೊಂದು ಏರಿ ನಿಂತವು. ಜನರ ಸ್ಥಿತಿ ಆದಕ್ಕೆ ವಿರುದ್ಧವಾಗಿ ಕೆಳಗಿಳಿಯ ತೊಡಗಿತು. ಎಲ್ಲಕ್ಕೂ ಬಾಯ್ಬಿಡ ತೊಡಗಿದರು. ಏನೂ ಮಾಡುವ ಹಾಗಿರಲಿಲ್ಲ. ಸರಕಾರ, ಎಂದ ಮೇಲೆ, ಜನರೇನು ಮಾಡಿಯಾರು?

ಅದಕ್ಕೆಂದೇ ವಿಶೇಷಾಧಿಕಾರಿಗಳನ್ನು ಇರಿಸಲಾಗಿತ್ತು ನಿಜ. ಆದರೆ ಅವರ ಪ್ರಾಮಾಣಿಕ ತನದ ಬಗ್ಗೆ ಜನತೆಯಲ್ಲಿ ವಿಶ್ವಾಸವುಳಿದಿರಲಿಲ್ಲ. ಮಾಮೂಲಿಗೆ ಕೈಯೊಡ್ಡುವ ಅಧಿಕಾರಿಗಳು ಪ್ರಾಮಾಣಿಕತನವನ್ನು ಉಳಿಸಿಕೊಂಡಾರೆ? ಎನ್ನುವ ಪ್ರಶ್ನೆಗೆ ಆಧಾರ ಸಹಿತ ಉತ್ತರಗಳು ಸಿಗುತ್ತಿದ್ದ ಸಮಯ—

—ಇದೀಗ ಕಳೆದು ಹೋಗಿದೆ. ಭಾರತ ಎಚ್ಚತ್ತಿದೆ. ಎಚ್ಚತ್ತ ಭಾರತದ ಪ್ರಜೆ, ಪ್ರಜಾಪ್ರಭುತ್ವ ಸರಕಾರದಲ್ಲಿ, ಪ್ರಜೆಯ ಕರ್ತವ್ಯನೇನು ಎಂಬುದನ್ನು, ಅರಿತು ಕೊಂಡಿದೆ.

ಎಂತಲೇ—

ಇನ್ನು ಈ ಕದೀಮರ ಆಟ ನಡೆಯುವಂತಿಲ್ಲ. ಇನ್ನು ಕಾಳಸಂತೆಗೆ ಅವಕಾಶ ಸಿಗುವಂತಿಲ್ಲ. ಬೆಲೆ ಏರಿಕೆಗಾಗಿ ಅವರು ಕಾದು ಕುಳಿತಿದ್ದರೆ, ಹಿಂದೆ ಸರಿವಂತೆಯೆ ಸುಪ್ತತ್ವಗೆ ಜನ್ನು ಅಲಂಕರಿಸಿಕೊಂಡಂತೆ, ಈಗಲೂ ಅವಕಾಶ ಸಿಕ್ಕಿತು ಎಂದು, ಹದ್ದು ನೋಟದಿಂದ ಇಣಿಕಿ ನೋಡುತ್ತಿದ್ದರೆ, ಅದು ವಿಫಲ ಬಯಕೆ. ನಿಶ್ಚಯ ನಾಂದಿಯಲ್ಲೇ ಆ ಬಯಕೆ ನಾಶಗೊಳ್ಳುತ್ತದೆ ಎಂಬುದನ್ನು ಅವರು ಕಂಡುಕೊಳ್ಳಬೇಕಾಗುತ್ತದೆ.

ಸರ್ವಸ್ವ ದಾನದ ಮಹಾ ಕಾರ್ಯ ಒಂಬೆಡೆ ನಡೆಯುತ್ತಲಿದೆ. ಚೀನೀಯರ ಆಕ್ರಮಣವನ್ನು ಪ್ರತಿಭಟಿಸಲು ತಮ್ಮ ದೆಲ್ಲವನ್ನೂ ಒಪ್ಪಿಸಿ ಬಿಡುತ್ತೇವೆಂಬ ದೀಕ್ಷೆ ತೊಟ್ಟಿದ್ದಾರೆ ಜನರು. ದೇವಾಲಯಗಳ ಭಂಡಾರದಿಂದ, ಶ್ರೀಮಂತ ದಾಸಿಗಳ ಬೊಕ್ಕಸದಿಂದ, ಬಡವರ ದುಡಿಮೆಯಿಂದ ದಾನದ ಕಾರ್ಯ ನಡೆಯುತ್ತಿದೆ. ದೇಶವೇ ಹೆಮ್ಮೆ ಪಡುವಂತೆ ಏನೂ ಅರಿಯದ ಮಕ್ಕಳು ಈ ಕಾರ್ಯದಿತ್ತ ಸಾಗಿ ಬಂದಿದ್ದಾರೆ. ಭಾರತ ರಕ್ಷಣೆಗಾಗಿ ಪ್ರತಿ ವ್ಯಕ್ತಿ ಅಸಕ್ತಿ ವಹಿಸಿರುವದು, ಭಾರತದ ಗಾಢ ಪ್ರೇಮಕ್ಕೆ ಸಾಕ್ಷಿ.

ಗಾಯಗೊಂಡ ಸೈನಿಕರಿಗೆ ಶುಶ್ರೂಷೆ ನಡೆಸಲು ದಾದಿಯರು ಮುಂದೆ ಬರಲು ಇಚ್ಛಿಸುತ್ತಿದ್ದಾರೆ. ಸೈನ್ಯ ಬಲವನ್ನು ಹೆಚ್ಚಿಸಲು ದೇಶದ ಯುವಕರು ಉತ್ಸಾಹ ತೋರುತ್ತಿದ್ದಾರೆ. ಪ್ರೌಢಾಸ್ಪಾಹದ ನುಡಿಗಳಿಂದ ವೃದ್ಧರು, ಯುವಕರ ಸ್ಫೂರ್ತಿಯನ್ನು ನೂರ್ಮಡಿ ಹೆಚ್ಚಿಸತೊಡಗಿದ್ದಾರೆ.

ಈ ದಿಶೆಯಲ್ಲಿ ಯಾವ ವ್ಯಕ್ತಿಯೂ ಹಿಂದೆ ಸರಿಯಲು ಬಯಸುವದಿಲ್ಲ. ಶ್ರಮಜೀವಿಗಳು ಹಗಲಿರುಳೆನ್ನದೆ ದುಡಿದು ದೇಶದ ಸಂರಕ್ಷಣೆ ನೂಡಲು ಸಿದ್ಧರೇ. ಮಹಾರ್ಥಿಪತಿಗಳೇ ಆಗಲಿ, ಬೀದಿಯ ಭಿಕ್ಷಾರಿಗಳೇ ಆಗಲಿ, ತ್ಯಾಗವೊಂದನ್ನೇ ಕಣ್ಮುಂದೆ ಇರಿಸಿಕೊಂಡಿದ್ದಾರೆ.

ಇನ್ನೊಂದೆಡೆ—

—ಶೇಖರಣೆಯು ಪವಿತ್ರ ಕಾರ್ಯ ನಡೆಯುತ್ತಿದೆ. ಕಾಳಸಂತೆಯ ಕದೀಮರು ಕನಸು ಕಾಣತೊಡಗಿದ್ದಾರೆ. ನೂರಕ್ಕೆ ಸಾವಿರ ಗಳಿಸುವ ಕನಸು, ಅವರು ಕಾಣುತ್ತಿದ್ದಾರೆ. ಆದರೆ ಅದು, ಭಾರೀ ಕೆಟ್ಟ ಕನಸು.

ಎಚ್ಚತ್ತ ಭಾರತ— ಈ ದೇಶದ್ರೋಹಿಗಳ ಹೇಯ ಕೆಲಸವನ್ನು ಬಯಲಿಗೆಳೆಯುವದೆಂಬುದನ್ನು ಅವರೆನ್ನೂ ಅರಿತುಕೊಂಡಂತಿಲ್ಲ. ಸರಕಾರದ ಕಾನೂನನ್ನು ಬೆಲೆ ಏರದಂತೆ ತಡೆಹಿಡಿವ ಕಾನೂನನ್ನು ಕಾರ್ಯಾಚರಣೆಯಲ್ಲಿ ತರುವ ಹೊಣೆಯನ್ನು ಪ್ರತಿಯೊಬ್ಬ ವ್ಯಕ್ತಿ ಹೊತ್ತಿದ್ದಾನೆನ್ನುವದನ್ನು ಅವರು ತಿಳಿದಂತಿಲ್ಲ.

ನನಗೆ ವಿಶ್ವಾಸವಿದೆ—ದೇಶವನ್ನು ರಕ್ಷಿಸಲು ಮುಂದೊತ್ತಿ ಬರುವ ಬಾಹುಗಳು, ದೇಶದೊಳಗಿನ ಈ ದ್ರೋಹಿಗುಳಿಗೂ ತಮ್ಮ ಶಕ್ತಿಯ ಅರಿವನ್ನು ನೂಡಿಕೊಡುತ್ತವೆ—ಎಂಬ ವಿಶ್ವಾಸ—ನನಗಿದೆ.

ಎಂತಲೇ—

—ಈ ಕದೀಮರಿಗೆ ಇನ್ನು ಅವಕಾಶವಿಲ್ಲ. ಕಾನೂನನ್ನು ಉಲ್ಲಂಘಿಸುವ ಗೊಡವೆಗೆ ಅವರು ಹೋಗದೆ, ಕೂಡಿಟ್ಟ ಧನವು ದೇಶದ ಅಭ್ಯುದಯಕ್ಕಾಗಿ ಒಪ್ಪಿಸುವದು ಕರ್ತವ್ಯದ ದೃಷ್ಟಿಯಿಂದಲೂ ಕ್ಷೇಮ. ಜನತೆಯು ಪ್ರೀತಿ ವಿಶ್ವಾಸಗಳನ್ನೂ ಅವರು ಉಳಿಸಿಕೊಳ್ಳಬಲ್ಲರು, ಎಂಬುದನ್ನು ಪ್ರತ್ಯೇಕ ಹೇಳಬೇಕೇ?

ಉಡುಪಿ ಸಬ್ ಜಡ್ಜರ ಕೋರ್ಟಿನಲ್ಲಿ
A. S. No. 59/1962
ಗಿರಿಯಂಮ ಪೂಜಾರ್ತಿ ಕೂಡಾ
—ಅಪ್ಪೆಲ್ಲಾಂಟರು
ಮತ್ತು
ಸುಂದರಿ ಪೂಜಾರ್ತಿ ಕೂಡಾ
—ಎದ್ರುದಾರರು
ಇವರೊಳಗೆ
6ನೆ ಯೆದ್ರಿ-ದೇವಪ್ಪ ಪೂಜಾರಿ-ಕೊರಾತಿ ಹೆಂಗ್ಸಿನ ಮಗ ಕಾರ್ಕಳ ತಾಲೂಕು—ಮರ್ಣಗ್ರಾಮ—ಇವರಿಗೆ ಈ ಮೂಲಕ ತಿಳಿಸುವದೇನೆಂದರೆ—
ಮೇಲ್ಕಂಡ ಅಪ್ಪೆಲ್ಲಾಂಟರು ಕಾರ್ಕಳ ದಿ. ಮು. ಕೋರ್ಟಿನ R I A. 604/1959 ನೇ ತೀರ್ಪಿನ ಮೇಲೆದಾಖ್ಲು ಮಾಡಿದ ಮೇಲ್ಕಂಡ ಅಪ್ಪೀಲು. ತಾ. 10—12—1962ಕ್ಕೆ ಇಡೋಣಾಗಿಯಿದೆ. ಆ ಕಾರಣ—6ನೆ ಯೆದ್ರಿಗೆ ಅಕ್ಷೇಪಣೆ ಹೇಳತಕ್ಕದ್ದು ಇದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಬೆಳಿಗ್ಗೆ 10 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದುಯಂತ ತಿಳಿಸೋಣಾಗಿಯಿದೆ.
H. P. Aithal
Advocate for Appellants
ಉಡುಪಿ, 21—11—1962

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ
ಸಾವಿರಾರು ತೇವಣತಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಜೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ತೇವಣತಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿಜಯ ಜೇಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್:— ವಿಜಯ ಜೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. Phone No. 240. — ಮಂಗಳೂರು—3

ನವಯುಗ'ಕ್ಕೆ
ಚಂದಾದಾರರಾಗಿ—
ಪ್ರೋತ್ಸಾಹಿಸಿರಿ

"ಗೌರಿ ಹಬ್ಬದ ರಿಸ್ಟ್‌ವಾಚ್"

(ಏನೇ ಹುಟದಿಂದ)

ಬ್ಲಿರುವ ಕಪ್ಪೆ ಹಿಡಿದಂತೆ ಬಡಿದುಕೊಳ್ಳುತ್ತೀಯಲ್ಲ. ನಿಮ್ಮಣ್ಣನ ಹೆಸರೇನೇ.

ಗೌರಿ— ರಮೇಶಾ

ಚಂದ್ರು— ನಿಮ್ಮ ಅತ್ತಿಗೆ ಹೆಸರು?

ಗೌರಿ— ವೂಲತೀ

ಚಂದ್ರು— ಅವರಿಬ್ಬರ ಹೆಸರಿನ ಮೊದಲಕ್ಷರ ಕೂಡಿಸಿದರೆ ಏನಾಗುತ್ತೆ ಹೇಳು.

ಗೌರಿ— ರಮೇಶಾ ವೂಲತೀ. ರವೂ. ರವೂ ಎಂಬ ಹೆಸರೇನೋ ಆಗುತ್ತೆರೀ. ಆದರೆ....

ಚಂದ್ರು—ಏನು ಆದರೆ ಅಂತಾ ಬ್ರೇಕ್ ಹಾಕುತ್ತಿದ್ದಿಯಲ್ಲಾ.

ಗೌರಿ— ಅವರ ಹೆಸರೇ ಅಂತಾ ಯಾವ ಗ್ಯಾರಂಟೀ

ಚಂದ್ರು— ಬೆಂಗಳೂರಿನಿಂದ ಬಂದಿಲ್ಲ ನೆನೇ ಟಲಿಗ್ರಾಂ.

ಗೌರಿ— ನನ್ನ ಸವತಿ ಬೆಂಗಳೂರಿನಲ್ಲಿಯೇ ಯಾಕೆರೆ ಬಾರದು. ಇರಲೀ ಇರಲೀ ನಮ್ಮಣ್ಣನಿಗೆ ನಾಳೆ ಕಾಗದ ಬರೆದು ತಿಳಿದು ಕೂಳ್ಳುತ್ತೇನೆ ಆಲ್ಲಿ ವರೆಗೂ ನನಗೆ ಸಮಾಧಾನವಿಲ್ಲಾ.

ಚಂದ್ರು— ಹಾಗೆ ಮಾಡು ಗೌರಿ

ಗೌರಿ— ಏನಾದರೂ ನನ್ನ ಮನಸ್ಸಿಗೆ ನೆಮ್ಮದಿ ಇಲ್ಲರೀ.

ಚಂದ್ರು— ಅನುಮಾನಂ ಪೆದ್ದ ರೋಗಂ. ಪಾಪ! ಗೌರಿಹಬ್ಬದ ದಿನ ಗೌರಿಗೆ ದುಃಖ

ಗೌರಿ— ನಮ್ಮ ಸಂಕಟ ನಿಮಗೆ ಹೇಗೆ ಗೊತ್ತಾಗುತ್ತೆ. ನೀವೆಲ್ಲ ಕಲ್ಲು ಹೃದಯದವರು. 'ಕರುಣೆಯೇ ಕುಟುಂಬದ ಕಣ್ಣು' ಅಂತಾ ಬಂದಿರುವ ಸಿನಿಮಾ ನೋಡಿ ಗೊತ್ತಾಗುತ್ತೆ. ಈ ಗಲಾಟೆಯನ್ನಿ ಮರೆತೇ ಹೋಯಿತಲ್ಲಾ.

ಚಂದ್ರು— ಏನೇ ಅದು.

ಗೌರಿ— ಗೌರಿ ಹಬ್ಬದ ದಿವಸ ರಿಸ್ಟ್ ವಾಚ್ ತರುತ್ತೇನೆ ಅಂದಿದ್ರಲ್ಲಾ

ಚಂದ್ರು— ತರಲಿಲ್ಲದಿದ್ದರೇ ಆಗುತ್ತದೆಯೇನೇ. ಈಗಿನ ಕಾಲದಲ್ಲಿ ಸಾಲಗಾರರ ಕಾಟ ಬೇಕಾದರೂ ತಡೆಯ ಬಹುದು. ಆದರೆ ಹೆಂಗಸರ ಕಾಟ ತಡೆಯುವುದಕ್ಕಾಗುವುದಿಲ್ಲ.

ಗೌ—ರಿ ಹೌದ್ರೀ. ಆ ಪರಮೇಶ್ವರ ಗೌರಿ ಕಾಟ ತಡೆಯಲಾರದೆ ಗೌರಿನೇ ತಲೆ ಮೇಲೆಕೂರಿಸಿಕೊಂಡ.

ಚಂದ್ರು— ಹಾಗಾದರೇ ನಾನು ಸಹ ತಲೆ ಮೇಲೆ ಕೂರಿಸಿಕೊಳ್ಳ ಬೇಕೇನು?

ಗೌರಿ— ತಲೆ ಮೇಲೆ ಇಲ್ಲದಿದ್ದರೂ ಪಕ್ಕದಲ್ಲಾದರೂ ಕೂರಿಸಿಕೊಳ್ಳಿ. ಎಲ್ಲಿ ಮತ್ತೆ ರಿಸ್ಟ್‌ವಾಚ್.

ಚಂದ್ರು— ತೋರಿಸುವ ತನಕ ಪುರುಸೊತ್ತಿಲ್ಲವಲ್ಲ.

ಗೌರಿ— ಪೋಸ್ಟ್‌ಮ್ಯಾನ್ ಮತ್ತೆ ಬಂದನಲ್ಲಾ.

ಚಂದ್ರು— ಕಾಗದ ಬಂದಿರ ಬೇಕು. (ಪೋಸ್ಟ್‌ಮ್ಯಾನ್ ಪ್ರವೇಶ)

ಪೊ. ಮ್ಯಾ —ಕಾಗದ ಬಂದಿದೆಸಾರ್

ಚಂದ್ರು— ಯಾವ ಊರಿನಿಂದಾ.

ಪೊ ಮ್ಯಾ— ಬೆಂಗಳೂರಿನಿಂದ

ಗೌರಿ— ಬೆಂಗಳೂರು!! (ಕಾಗದ ಚಂದ್ರುವಿನ ಕೈಯಲ್ಲಿ ಪೋಸ್ಟ್‌ಮ್ಯಾನ್ ಕೊಡುವನು) ಬೆಳಿಗ್ಗೆ ಬಂದವನೂ ಇವನೆ.

ಪೊ. ಮ್ಯಾ — ಈ ಹಳ್ಳಿ ಪೋಸ್ಟ್ ಮ್ಯಾನ್‌ಗಳೆಲ್ಲಾ ಹೀಗೇನೇ. ಟಿಪ್ಸಿಗ್ರಾಂ ಕೊಡಬೇಕು. ಕಾಗದ ಕೊಡಬೇಕು. ಎಲ್ಲಾ ಕೆಲಸನೂ ನಾನೇ ಮಾಡಬೇಕು.

ಗೌರಿ— ಪಾಪ! ಎಲ್ಲಾ ಕೆಲಸನೂ ಇವನೊಬ್ಬನೇ ಮಾಡಬೇಕೇ.

ಪೊ. ಮ್ಯಾ.— ತಿಲ್ಲದಿದ್ದರೆ ಆಗುತ್ತದೇನಮ್ಮಾ. ಬರುತ್ತೇನೆ ಸ್ವಾಮಿ.

ಗೌರಿ— ರೀ ಅವನಿಗೆ ಇಪ್ಪತ್ತೈದು ಪೈಸಾ ಕೊಡಿ.

ಚಂದ್ರು— ಏನು! ಇಪ್ಪತ್ತೈದು ಪೈಸಾ.

ಗೌರಿ— ಹಬ್ಬದ ಇನಾಮು ಅಂತಾ ಕೊಡಿ

ಚಂದ್ರು— ಪೋಸ್ಟ್ ಮ್ಯಾನ್ ಒಳ್ಳೆ ನಶೀಬು ಮಾಡಿದ್ದಾನೆ. (ಕೊಡುವನು) ;

ಪೊ. ಮ್ಯಾ— (ತೆಗೆದುಕೊಂಡು) ನಾನು ಬರುತ್ತೇನೆ ರಾಯರೇ (ನಿರ್ಗಮನ)

ಗೌರಿ— ಎಲ್ರೀ ರಿಸ್ಟ್ ವಾಚ್.

ಚಂದ್ರು— ಗೌರಿ ಹಬ್ಬದ ರಿಸ್ಟ್ ವಾಚ್ ತಾನೇ.

ಗೌರಿ— ಹೂಂನ್ರೀ ಒಳ್ಳೆ ಹಬ್ಬದ ದಿನವೇ ನರಿಯಂಗೆ ತಂದಿರಲ್ಲಾ. ಕಾಗದ ಯಾವ ಊರಿನದು?

ಚಂದ್ರು— ನೋಡುತ್ತೇನೆ ನಿಲ್ಲು. (ಕಾಗದ ಒಡೆದು, ಓದಿ, ನಗುವನು)

ಗೌರಿ— ಯಾಕ್ರೀ ನಗುತ್ತೀರಾ?

ಚಂದ್ರು— ನಿನ್ನ ಆನುಮಾನ ಸತ್ಯಲ್ಲಾ.

ಗೌರಿ— ಯಾವ ಅನುಮಾನರೀ.

ಚಂದ್ರು— ರಮೂ

ಗೌರಿ— ಮತ್ತೆ ಕಾಗದ ಒಡೆದಿದ್ದಾ ಕೇನು. ಮತ್ತೇನು ಬೇಕಂತೆ ಆ ಕೋಡಂಗಿಗೇ.

ಚಂದ್ರು— ನಿನ್ನೇ ಓದಿ ಕಲಿಸಿಕೊಡು. (ಕೊಡುವನು)

ಗೌರಿ—(ತೆಗೆದುಕೊಂಡು ಓದಿದವಳು) ನನ್ನ ಸಂಚು ಪೆದ್ದಾಗಿದೆ. ತಂಗಿಗೆ ಗೌರಿ ಹಬ್ಬದ ಅಡಿವಾಣಿಗಳು ಸಹಿತವಾಗಳಿಸ್ಬಿರೂ ಇರೋಕ್ಕೆ, ಪಪ್ಪಸು ಹಾಗೂ ಮನೆಯನ್ನ ಸಂಬಂಧ ಪಟ್ಟವರೆಲ್ಲಾ ಮಾಡುವ ಮಕ್ಕಳನ್ನು ಪೆಟ್ಟುಬಾರಿಲಿ ಅಂತಾ ಆ ಗೌರಿ ದೇವರಲ್ಲಿ ಪ್ರಾರ್ಥಿಸಿಕೊಳ್ತೇನೆ. ಇಂತಿ ನಿಮ್ಮವಳೆ.

ಚಂದ್ರು— ನೋಡಿ ಹೇಗಿದೆ, ನಿಮ್ಮ ಅಣ್ಣ ಅಂತಾ

ಗೌರಿ— ನೋಡ್ತಾ ಯಿರೀ ನನ್ನ ಸವತಿನೂ ಇಲ್ಲಾ ಸಾವತೆಕಾಯಿನೂ ಇಲ್ಲಾ ಅಂತಾ ನನಗೆ ಗೊತ್ತು.

ಚಂದ್ರು— ನಿನ್ನ?

ಗೌರಿ— ನೀವ್ಹ ಈ ವೀಕ ಮಾಡುವುದಿಲ್ಲಾ ಅಂತಾ

ಚಂದ್ರು—ಈ ಕಾಗದ ಬರೆದಿಟ್ಟಿದ್ದರೆ ಗೊತ್ತಾಗುತ್ತಿತ್ತು ನನ್ನ ಬೆಳೆ ಕಾಲ.

ಗೌರಿ— ಎಲ್ಲಿ ರಿಸ್ಟ್‌ವಾಚ್ ಕೊಡಿ. (ಜೇಬಿನಿಂದ ತೆಗೆದು ಕೊಡುವನು) ಬಹಳ ಚೆನ್ನಾಗಿದೆರೀ. ಹಾಗೇ ನಿನ್ನ ಜನ್ಮತ ಹಬ್ಬದಿಂದ ಅಚೀವ್‌ಡ ಪಡೆದೆ. 'ಗೌರಿ ಹಬ್ಬದ ರಿಸ್ಟ್ ವಾಚ್' ಅಂತಾ ನೆನಪು ಇಟ್ಟುಕೊಂತೆ ನನ್ನ ಕೈಗೆ ಕಟ್ಟಿ.

ಚಂದ್ರು— (ಕೈಗೆ ಕಟ್ಟಿ) ರಿಸ್ಟ್ ವಾಚ್ ಒಂದೇಯಲ್ಲಾ ನನ್ನ ನೆನಪು ಇರಲೀ.

(ಗೌರಿ ನಗುವಳು ತೆರೆಸರಿಯುವುದು)

ಸೂಚನೆ: ಈ ನಾಟಕವನ್ನು ಆಫೀಸಿಯಸ್ ಇಚ್ಛೆಪಟ್ಟವರು ಲೇಖಕರಾದ ಸಿ. ಜಿ. ಪರಮೇಶ್ವರಯ್ಯ S/o ಸಿ. ಗುರುವಾಚಯ್ಯ, ಅಂಡ್ ಸನ್ಸ್, ಜವಳಿ ವ್ಯಾಪಾರಿಗಳು, ಸರತೆ ಪೇಟೆ ಚಿತ್ರದುರ್ಗ (ಮೈಸೂರು ಸ್ಟೇಟ್) ಇವರಿಗೆ ಬರೆದು ಅನುಮತಿ ಪಡೆಯಬೇಕು)


ಅನುಭವ
ಒಂದು
ಅತಿ ಉತ್ತಮ
ಶಿಕ್ಷಕ
ಸೇನಾಪಾಲನ ಹಂಪೆ ತೀರಿಹೋಗುವ ಸಮಯ ಬಲ್ಲಹಲವು ಸಾಲಗಳನ್ನು ಮಾಡಿಬಿಟ್ಟಿದ್ದ. ಆ ಸಾಲಗಳನ್ನು ಸಲ್ಲಿಸಲೋಸ್ಕರ ಗೋಪಾಲಕನ ಮನೆಯನ್ನು ಹೂಕವೇಶಾಯಿತು.
ಅವನಿಗೆ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ
ಅವನಿಗೆ ಒಂದು ಆಫೀಸಿನಲ್ಲಿ ಕೆಲಸ ಸಿಕ್ಕಿತು. ಅವನು ಅಲ್ಲಿ ತನ್ನ ಬುದ್ಧಿಶಕ್ತಿಯ ಶಕ್ತಿಯಿಂದ ಒಂದು ಉತ್ತಮ ಸ್ಥಾನವನ್ನು ಪಡೆದ.
ಒಂದು ದಿನ ಅವನು ತನಗೆ ತಾನೇ ಹೀಗೆ ಹೇಳಿಕೊಂಡ:
"ನನಗೇನು ಸಂಭವಿಸಿದರೂ ನನ್ನ ಮನಸ್ಸಿನ ಭಾವಸ್ಥಿತಿಗೆ ಹಾನಿಯಾಗುವುದಿಲ್ಲ."
ತನ್ನ ಮನಸ್ಸಿನ ಸ್ಥಿರವಾದ ಭಾವಕ್ಕೆ ಸಲ್ಲಿಸಲು ಅವನೊಂದು ಸ್ಮಾರಕವನ್ನು ನಿರ್ಮಿಸಿದ.
ತನ್ನ ಮನಸ್ಸಿನ ಸ್ಥಿರವಾದ ಭಾವಕ್ಕೆ ಸಲ್ಲಿಸಲು ಪ್ರವೀಣನೆಂತ ನನಸೇನಪಾಲನಿಗೆ ಮೆಚ್ಚುಗೆಯ ಪತ್ರವನ್ನು ಬರೆದು ಸಂತೋಷಪಟ್ಟ ಭಾವವಿಲ್ಲ. ಜೀವವಿಮೆಯಿಂದ ಹೊಸ ಹುರುಪಿನ ಕಾರ್ಯದಲ್ಲಿ ಸಹಕರಿಸಿತು.
ಜೀವ ನಿಮೆಗಿಂತ ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ

ಪುತ್ತೂರು ಡಿ. ಮುನ್ಸಿ. ಕೋರ್ಟಿನಲ್ಲಿ

R. E. P. 169/62 S. C. 236/61

ಬ್ರಹ್ಮಯ್ಯ ಮಲ್ಲ —ಅರ್ಜಿದಾರ

ಶ್ರೀದೇವಿ ಅಮ್ಮ ನಡಿಬೆಟ್ಟು ದೊಡ್ಡಕ್ಕ ಯಾನೆ ಜೇಜಮ್ಮನ ಮಗಳು. ಬೆಳ್ತಂಗಡಿ ತಾಲೂಕು ವೇಣೂರು ಗ್ರಾಮದ ದೇವಸ್ಥಾನದ ಬಳಿ —ಎದ್ರಿ

—ಎದ್ರಿಗೆ ತಿಳಿಸುವುದೇನೆಂದರೆ.

ಎದ್ರಿಯ ಸ್ಥಿರಾಸ್ತಿಯನ್ನು ಜಪ್ತಿ ಮಾಡುವ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಈ ಅಮಲ್ದಾರಿಯು ತಾ. 8—12—62ಕ್ಕೆ ಇಗುವುದರಿಂದ ಏನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್,
ಅರ್ಜಿದಾರನ ವಕೀಲ್

ಪುತ್ತೂರು, ತಾ 18—11—62

REGD. No. B. G. 176
LICENCE No. 31
Licensed to Post without Prepayment

ಸುದ್ದಿಯ ಹಿನ್ನೆಲೆ.

ಸೌಜನ್ಯತೀಲ ಗುಣಗಳೇ ಇಲ್ಲದ

ಪೆಕಿಂಗ್ ಸರಕಾರ

ನಮ್ಮ ದೇಶದಲ್ಲಿರುವ ರಾಯಭಾರಿ ಕಚೇರಿ ಸಿಬ್ಬಂದಿಯ ಮೇಲೆ ನಾನಾ ರೀತಿಯ ನಿರ್ಬಂಧಗಳನ್ನು ಸರ್ಕಾರ ಹಾಕಿದೆಯೆಂದೂ ಇದರಿಂದ ಚೀನಿ ಸರ್ಕಾರದ ಪ್ರತಿನಿಧಿಗಳು ಕೆಲಸ ನಡೆಸುವುದೇ ಕಷ್ಟವಾಗಿದೆಯೆಂದೂ ಪೆಕಿಂಗ್ ಸರ್ಕಾರ ಬೊಬ್ಬೆ ಇಡುತ್ತಿದೆ.

ಅದರ ಈ ಬೊಬ್ಬೆ ಆರ್ಥವಿಲ್ಲದ್ದು ಎಂದು ಎಲ್ಲರಿಗೂ ತಿಳಿದಿದೆ. ಚೀನಾದ ರಾಯಭಾರಿ ಕಚೇರಿ ಸಿಬ್ಬಂದಿಯ ಮೇಲೆ ಯಾವುದೇ ರೀತಿಯ ನಿರ್ಬಂಧಗಳನ್ನು ನಾವು ಹಾಕಿಲ್ಲವೆಂದೇ ಹೇಳಬಹುದು. ಚೀನಾದಲ್ಲಿ ನಮ್ಮ ರಾಯಭಾರಿ ಪ್ರತಿನಿಧಿಗಳು ಅನುಭವಿಸುತ್ತಿರುವ ನಿರ್ಬಂಧಗಳಿಗೆ ಇಲ್ಲಿಯ ನಿರ್ಬಂಧಗಳನ್ನು ಹೋಲಿಸಿದರೆ ಸತ್ಯ ಸಂಗತಿ ತಾನೇ ತಾನಾಗಿ ತಿಳಿಯುತ್ತದೆ.

ಚೀನೀ ಅಡಳಿತಗಾರರ ವಿಚಾರ ದೃಷ್ಟಿಯೇ ಹೀಗೆ. ಚೀನಾದಲ್ಲಿ ನಮ್ಮ ರಾಯಭಾರ ಕಚೇರಿ ಸಿಬ್ಬಂದಿಯವರು ಅನುಭವಿಸುತ್ತಿರುವ ನಾನಾ ನಿರ್ಬಂಧಗಳ ಬಗ್ಗೆ ನಾವು ಪ್ರತಿಭಟನೆ ಸಲ್ಲಿಸಿದರೆ ಅದಕ್ಕೆ ಸಮರ್ಪಕ ಉತ್ತರ ನೀಡುವ ಆಸಕ್ತಿ ಅವರಿಗಿಲ್ಲ. ಅದರೆ ಅಲ್ಲಿ ನಮ್ಮ ಪ್ರತಿನಿಧಿಗಳ ಮೇಲೆ ಹಾಕಿರುವ ನಿರ್ಬಂಧಗಳ ರೀತಿಯಲ್ಲಿ ನಾವೂ ಅಲ್ಪ ಸ್ವಲ್ಪ ನಿರ್ಬಂಧಗಳನ್ನು ಹಾಕಲು ಉದ್ದೇಶಿಸಿದರೂ ಸರಿಯೇ ಅದನ್ನೇ ದೊಡ್ಡದು ಮಾಡಿ ಬೊಬ್ಬೆ ಹಾಕುತ್ತಾರೆ. ತಮ್ಮ ಮೇಲೆ ಗದಾ ಪ್ರಹಾರವೇ ನಡೆಯುತ್ತಿದೆ ಎನ್ನುವ ಹಾಗೆ ಕೂಗು ಹಾಕುತ್ತಾರೆ.

ಪ್ರಜಾಪ್ರಭುತ್ವವಿರುವ ಭಾರತದಲ್ಲಿ ವಿದೇಶಿ ರಾಯಭಾರಿ ಕಚೇರಿಗಳಿಗೆ ಸೇರಿದವರ ಮೇಲೆ ಯಾವುದೇ ರೀತಿಯ ನಿರ್ಬಂಧಗಳಿರುವುದಿಲ್ಲ. ಅವರು ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶವಿರುತ್ತದೆ. ರಾಯಭಾರಿ ಕಚೇರಿಗಳ ಸಿಬ್ಬಂದಿ ವರ್ಗದವರನ್ನು ಗೌರವದಿಂದ ಕಾಣುವುದು ನಮ್ಮ ಕರ್ತವ್ಯವೆಂದೇ ನಾವು ಭಾವಿಸುತ್ತೇವೆ.

ಆದರೆ ಚೀನಾದಲ್ಲಿ ಇದು ಸಾಧ್ಯವಾಗಿದೆಯೇ? ಕಳೆದ 12 ವರ್ಷಗಳಲ್ಲಿ ಅಲ್ಲಿ ಯಾವ ರಾಯಭಾರಿ ಕಚೇರಿ ವರ್ಗ ತಾನೇ ನಿರಾತಂಕವಾಗಿ ಕೆಲಸ ಮಾಡಿದೆ? ಇತರರ ಮಾತು ಹಾಗಿರಲಿ, ಸೋವಿಯತ್ ರಷ್ಯಾ ಮತ್ತು ಪೂರ್ವ ಯುರೋಪ್ ರಾಷ್ಟ್ರಗಳ ರಾಯಭಾರಿ ಕಚೇರಿಗಳ ಬಗ್ಗೆಯೂ ಸಂಶಯದ ದೃಷ್ಟಿಯಿಂದಲೇ ಚೀನೇಯರು ನೋಡುತ್ತಾ ಬಂದಿದ್ದಾರೆ; ಒಬ್ಬರ ಬಗ್ಗೆ ಹೆಚ್ಚಿನ ಸಂಶಯವಿರಬಹುದು, ಇನ್ನೊಬ್ಬರ ಬಗ್ಗೆ ಕಡಿಮೆ ಇರಬಹುದು ಅಷ್ಟೆ.

ಮಂಚೂರಿಯದಿಂದ ಪ್ರಕಟವಾಗುತ್ತಿದ್ದ ರಷ್ಯನ್ ಭಾಷೆಯ ಪತ್ರಿಕೆಯೊಂದನ್ನು ನಿಲ್ಲಿಸಬೇಕೆಂದು ಮೊನ್ನೆ ಮೊನ್ನೆ ಚೀನಿ ಸರ್ಕಾರ ಆಜ್ಞೆ ಮಾಡಿತು. ಅದು ವಿದೇಶಿ ಪ್ರಕಟಣೆಯೊಂದು ಈ ಕ್ರಮಕ್ಕೆ ಕಾರಣ ಕೊಡಲಾಯಿತು.

ಟಬೆಟ್ಟಿನಲ್ಲಿ ದಂಗೆ ನಡೆದ ಸಮಯದಿಂದಲೂ ಟಿಬೆಟ್ಟಿನಲ್ಲಿರುವ ಭಾರತೀಯ ಪ್ರತಿನಿಧಿ-ಕಚೇರಿಗಳ ಮೇಲೆ ನಾನಾ ರೀತಿಯ ನಿರ್ಬಂಧಗಳನ್ನು ಚೀನೇಯರು ಹೇರುತ್ತಲೇ ಇದ್ದಾರೆ ಮತ್ತು ಎಷ್ಟೋ ಸಂದರ್ಭಗಳಲ್ಲಿ ಅವರು ಸಾಮಾನ್ಯ ಸೌಜನ್ಯವನ್ನೂ ತೋರಿಸಿಲ್ಲ. ಪೆಕಿಂಗ್ ಮತ್ತು ಚೀನಾದ ಇತರ ನಗರಗಳಲ್ಲಿರುವ ನಮ್ಮ ಪ್ರತಿನಿಧಿ ಕಚೇರಿಗಳ ಕಥೆಯೂ ಇಷ್ಟೆ. ಈ ಕಚೇರಿಗಳ ಸಿಬ್ಬಂದಿ ವರ್ಗದ ಚಲನವಲನಗಳು ಸಹ ಕಷ್ಟವಾಗಿವೆ.

ಕಳೆದ ತಿಂಗಳ ಒಂಭತ್ತನೆಯ ತಾರೀಕಿನಿಂದ ಲ್ಹಾಸಾದಲ್ಲಿರುವ ನಮ್ಮ ಕಾನ್ಸುಲೇಟ್ ಜನರಲ್ ಕಚೇರಿಗೂ ದೆಹಲಿಗೂ ನೇರವಾಗಿ ಟೆಲಿಗ್ರಾಫ್ ಸಂಪರ್ಕವೇ ಕಡಿದು ಹೋಗಿದೆ. ಅಷ್ಟೇ ಅಲ್ಲ ನಮ್ಮ ಈ ಪ್ರತಿನಿಧಿ ಕಚೇರಿಗೆ ಬೇಕಾಗುವ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಸಹ ಕಷ್ಟವಾಗಿವೆ ಹೊರಗಿನವರಾರೂ ಈ ನಮ್ಮ ಕಚೇರಿಯ ಆವರಣವನ್ನು ಪ್ರವೇಶಿಸುವುದಕ್ಕೆ ಅವಕಾಶವಿಲ್ಲ. ಆಷ್ಟೇ ಅಲ್ಲ ನಮ್ಮ ಕಾನ್ಸುಲೇಟ್-ಜನರಲ್‌ರವರಿಗೆ ಇದ್ದ ಟೆಲಿಫೋನ್ ಸಂಪರ್ಕವನ್ನು ಕಡಿದು ಹಾಕಲಾಗಿದೆ ಮತ್ತು, ಈ ಕಚೇರಿಯ ಸಿಬ್ಬಂದಿ ವರ್ಗದ ಮೇಲೆ ಇನ್ನೂ ಹೆಚ್ಚಿನ ನಿರ್ಬಂಧಗಳನ್ನು ಹಾಕಲಾಗಿದೆ.

ಪೆಕಿಂಗ್‌ನಲ್ಲಿ ನಮ್ಮ ರಾಯಭಾರಿ ಕಚೇರಿಯ ಮುಂದೆ ಪೋಲೀಸ್ ಪಹರೆ ಹಾಕಲಾಗಿದೆ. ಕಚೇರಿಯ ಸಿಬ್ಬಂದಿ ವರ್ಗದ ಚಲನವಲನಗಳ ಮೇಲೆ ತುಂಬಾ ಕಟ್ಟುನಿಟ್ಟಾದ ನಿರ್ಬಂಧಗಳಿವೆ. ಎಷ್ಟೋ ಸಂದರ್ಭಗಳಲ್ಲಿ ಭಾರತೀಯ, ರಾಯಭಾರ ವರ್ಗದವರನ್ನು ತುಂಬಾ ಅವಮಾನಕರ ರೀತಿಯಲ್ಲಿ ಕಾಣಲಾಗಿದೆ. ಒಬ್ಬರನ್ನೊಮ್ಮೆ ಲೈಲು ಡಬ್ಬಿಯಿಂದ ಹೊರಗೆಳೆದು ಹೊಡೆಯಲಾಯಿತು. ಸರ್ಕಾರ ಈ ಪ್ರಸಂಗದ ಬಗ್ಗೆ ಪ್ರತಿಭಟನೆ ಸಲ್ಲಿಸಿದಾಗ ಈ ಪ್ರಸಂಗದಲ್ಲಿ ತನ್ನ ಹೊಣೆ ಏನೇನೂ ಇಲ್ಲವೆಂದೂ ಚೀನಿ ಸರ್ಕಾರ ತಿಳಿಸಿತು. ಕ್ಷಮಾಪಣೆ ಕೇಳುವ ಒಂದು ಸೌಜನ್ಯ ಕೂಡ ಅವರ ಪಾಲಿಗೆ ಇರಲಿಲ್ಲ.

ಪೆಕಿಂಗ್‌ನಲ್ಲಿರುವ ನಮ್ಮ ರಾಯಭಾರಿ ಕಚೇರಿಯ ಜನ ನೆಗರದ ಹೊರಗೆ ಕಾಲಿಡಬೇಕಾದರೂ ಅನುಮತಿ ಕೇಳಬೇಕು. ಪಾಸ್ ಪಡೆಯಬೇಕು. ವಿದೇಶಿ ರಾಯಭಾರಿ ಕಚೇರಿಯ ಜನರನ್ನು ಚೀನಿ ಸರ್ಕಾರ ಕಾಣುತ್ತಿರುವ ರೀತಿ ಹೀಗಿದೆ ಹೆಜ್ಜೆ ಹೆಜ್ಜೆಗೂ ಸಂಶಯದೃಷ್ಟಿ. ಜೊತೆಗೆ ದುರಭಿಮಾನ, ದುರಹಂಕಾರ. ವಿದೇಶೀಯರನ್ನು ತಿರಸ್ಕಾರದಿಂದ ನೋಡುವುದೇ ಅವರ ಸ್ವಭಾವ. ಅವರ ದೃಷ್ಟಿಯಲ್ಲಿ ವಿದೇಶೀಯರು ಅನಾಗರಿಕರು, ಯಾವುದೇ ಕೆಳವರ್ಗಕ್ಕೆ ಸೇರಿದ ಮೂನವ ವ್ಯಾಣಿಗಳು.

ಭಾರತದಲ್ಲಿ ವಿದೇಶೀ ರಾಯಭಾರ ವರ್ಗಗಳನ್ನು ಯಾವ ರೀತಿಯಲ್ಲೂ ದೆಯೆಂದ ನೋಡಿಕೊಳ್ಳಲಾಗುತ್ತಿದೆಯೆಂಬುದು ಜಗತ್ತಿಗೇ ಗೊತ್ತಿದೆ ಭಾರತದಲ್ಲಿ70ಕ್ಕೂ ಹೆಚ್ಚು ವಿದೇಶಿ ರಾಯಭಾರಿ ಕಚೇರಿಗಳಿವೆ, ಈ ಕಚೇರಿಗಳಿಗೆ ಸೇರಿದ ಜನರ ಸಂಖ್ಯೆಯೇ ಸಾಕಷ್ಟು ದೊಡ್ಡದಿದೆ. ನಮ್ಮ ಮೇಲೆ ನಿರ್ಬಂಧಗಳಿವೆ ಎಂದು ಇವರು ಯಾರೂ ದೂರುತ್ತಿಲ್ಲ. ತಾಂತ್ರಿಕ ಸೌಲಭ್ಯಗಳನ್ನು ಒದಗಿಸುವಾಗ ಅವರ ಬೇಡಿಕೆಗಳಿಗೇ ಮೊದಲ ಗಮನ ಕೊಡಲಾಗುತ್ತದೆ. ಇವರ ವಿಚಾರದಲ್ಲಿ ನಾವು ಅಷ್ಟು ಸೌಜನ್ಯದಿಂದ ವರ್ತಿಸಿಕೊಳ್ಳುತ್ತಿದ್ದೇವೆ. ಇದು ನಾಗರಿಕ ಜನ ವರ್ತಿಸಿಕೊಳ್ಳುವ ರೀತಿಯೂಗಿದೆ. ನಾವು ಈ ವರ್ಗಕ್ಕೆ ಸೇರಿದವರು. ನಾವು ಬೇರೆಯವರ ಮೇಲೆ ಆ ಕ್ರಮಣ ನಡೆಸುವುದಿಲ್ಲ. ಯುದ್ಧಗಳನ್ನು ಆರಂಭಿಸುವುದಿಲ್ಲ.

ಚೀನಾದಲ್ಲಿ ನಮ್ಮ ರಾಯಭಾರಿ ಕಚೇರಿಗಳಿಗೆ ಇರುವ ಸ್ವಾತಂತ್ರ್ಯ ಹಾಗೂ ಸೌಲಭ್ಯಗಳಿಗಿಂತ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಸೌಲಭ್ಯಗಳು ಭಾರತದಲ್ಲಿ ಚೀನೇ ರಾಯಭಾರಿ ಕಚೇರಿ ವರ್ಗದವರಿಗೆ ಈಗಲೂ ಸಹ ಇರುವುದಾಗಿ ಹೇಳಬಹುದು.

ಆದರೆ ಚೀನೇಯರು ಮಾತ್ರ ತಮ್ಮ ವರ್ತನೆಯನ್ನು ತಿದ್ದಿಕೊಳ್ಳಬೇಕಾದ ಅಗತ್ಯವಿದೆ; ಅದನ್ನು ತಿದ್ದಿಕೊಳ್ಳದೆ ಹೆಚ್ಚು ನಿರೀಕ್ಷೆಸುವುದು ಇನ್ನು ಮುಂದೆಯೂ ಸಾಧ್ಯವೆಂದರೆ ಮಾತ್ರ ಕಷ್ಟ. ಅದು ಸಾಧ್ಯವಾಗದು.

(ಆಕಾಶವಾಣಿಯ ವಾರ್ತಾವಿಭಾಗದ ಕೃಪೆ)

ಪ್ರಸಿದ್ಧ ಮನಶ್ಶಾಸ್ತ್ರಜ್ಞ ವ್ಯಾಕ್‌ಡೂಗಲ್ ಹೇಳಿರುವಂತೆ ಮಾನವನ ಸಹಜಗುಣಗಳಲ್ಲಿ ಸಂಗ್ರಹ ಪ್ರವೃತ್ತಿ ಉಳಿತಾಯ ಭಾವನೆಯೂ ಒಂದು. ಮಾನವನ ಜೀವನದ ಹೋರಾಟಕ್ಕೆ, ವಿಜಯಕ್ಕೆ ಬೇಕಾದ ಎಲ್ಲಾ ಶಕ್ತಿ ಲವಕ್ಕತೆಗಳನ್ನು ಪರಮಾತ್ಮನು ಬಾಲ್ಯದಲ್ಲಿಯೇ ಬೀಜರೂಪದಲ್ಲಿ ಒದಗಿಸುವನು. ಅಂತೆಯೇ ಸಂಗ್ರಹ ಪ್ರವೃತ್ತಿಯು ಕೂಡಾ. ಇದನ್ನು ಚಿಕ್ಕ ಮಕ್ಕಳಲ್ಲಿ ನಾವು ಧಾರಾಳವಾಗಿ ಕಾಣಬಹುದು. ಪುಟ್ಟ ಬಾಲಕರು ತಮ್ಮ ಕುತೂಹಲ ವನ್ನು ಕೆರಳಿಸುವ ವಸ್ತುಗಳನ್ನು ಅಸ್ಥೆಯಿಂದ ಸಂಗ್ರಹಿಸುತ್ತಿರುವುದನ್ನು ನೋಡಿದವರಾರು?

ಈ ಸಂಗ್ರಹಬುದ್ಧಿಯು ಅಭಿವೃದ್ಧಿಯೂ ಆಗಬಹುದು; ಉಂಟಿತಗೊಳ್ಳಲೂ ಬಹುದು. ಅದು ಸಂದರ್ಭ ಮತ್ತು ಅವಕಾಶಗಳನ್ನಾಧರಿಸಿದೆ. ಯಾವುದೇ ಒಂದು ಕ್ರಿಯೆ ಮತ್ತೆ ಮತ್ತೆ ಆವರ್ತನಗೊಂಡಲ್ಲಿ ಅದು ಬಲಿತ ಅಭ್ಯಾಸವಾಗಿ ಮೂಡಿಬರುವುದು— ಕುಶಲ ಕಲಾವಿದನ ಕೈಬೆರಳುಗಳು ಅವನಿಗೆ ತಿಳಿಯದೆಯೇ ಮುಂದು ಮುಂದಕ್ಕೆ ಚಲಿಸುವಂತೆ ಕೂಡಿಬರುವ ಗುಣವೂ ಹಾಗೆಯೇ—

ಉಳಿತಾಯದ ಪ್ರವೃತ್ತಿ ಬಲಿತು
ಸ್ಥಿರ ಅಭ್ಯಾಸವಾಗಲು; ಸುಲಭ ಸಾಧ್ಯವಾಗಲು:

-ಪಿಗ್ಮಿ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ.
ಸ್ಥಾಪನೆ: ೧೯೨೬.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ತಿರ್ಜಾ ಇಲ್ಲದೆ ನವಯುಗದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

Edited Printed & Published by K. H. Shetty, at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಾತಿನಿಧಿಕ ಕಥಾಸಂಕಲನ
ಮಧುವನ
'ಕೆರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd 1931 ಸ್ಥಾಪನೆ
Regd No B G 176
Vol 42 No 5

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, **4—10—1962** ಗುರುವಾರ

13 ನ. ಪೈಸೆ
ವಾ. ಚಂದಾ ರೂ ೮-75
ಸಂಪುಟ ೪೨ ಸಂಚಿಕೆ ೫

ಮಿತ ದರದಲ್ಲಿ
ಕ್ಲಿಪ್ತ ಸಮಯದಲ್ಲಿ
ಉತ್ತಮ ತರದಲ್ಲಿ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ
ನವಯುಗ ಪ್ರೆಸ್,
ಉಡುಪಿ

ಹಿಂದುಳಿದಿರುವಿಕೆಗೆ
ಬಡತನವೇ ಮುಖ್ಯ ಕಾರಣ

ಸರ್ವರಿಗೂ ಸರ್ವ ಸಾರ್ವಜನಿಕ ಕ್ಷೇತ್ರಗಳಲ್ಲಿ ಸಮಾನತೆಯನ್ನು ಪ್ರದಾನ ಮಾಡಿರುವ ಭಾರತೀಯ ಸಂವಿಧಾನದಲ್ಲಿ ಒಂದು ಕುಂಟು ಪಂಕ್ತಿಯೂ ಇದೆ. ಅದರ ೧೫(೪)ನೆ ಕಲಮಿನಲ್ಲಿ ಹಿಂದುಳಿದ ವರ್ಗಗಳನ್ನು ಮುಂದೆ ತರುವುದರ ಸಲುವಾಗಿ ಅವರಿಗೆ ಕೆಲವೊಂದು ಅವಕಾಶಗಳನ್ನು ಕಲ್ಪಿಸಿಕೊಡುವ ಅಧಿಕಾರವು ರಾಜ್ಯ ಸರಕಾರಕ್ಕಿದೆ. ಇದರ ಆಧಾರದಿಂದ ಪ್ರತಿ ರಾಜ್ಯ ಸರಕಾರವೂ ಹಿಂದುಳಿದವರು ಯಾರು ಎಂಬುದನ್ನು ನಿರ್ಧರಿಸಿ, ಅವರ ಹಿತರಕ್ಷಣೆಗಾಗಿ ವಿಶೇಷ ಅವಕಾಶ ನೀಡುವ ಆಜ್ಞೆಯನ್ನು ಹೊಡುತ್ತಿದೆ ಅಂತೆಯೇ ನಮ್ಮ ರಾಜ್ಯ ಸರಕಾರವೂ ಅಂತಹದೊಂದು ವಿಧಾನವನ್ನು ಮಾಡಬೇಕೆಂದು ಈಗ್ಗೆ ಕೆಲವು ವರ್ಷಗಳಿಂದ ಪ್ರಯತ್ನಿಸುತ್ತಿದೆ ಆದರೆ, ದುರ್ದೈವ ವಶದಿಂದ, ಈ ಸಂಬಂಧದಲ್ಲಿ ಸರಕಾರವು ೧೯೫೮ರಿಂದಲೂ ಹೊರಡಿಸುತ್ತ ಬಂದಿರುವ ಆಜ್ಞೆಯನ್ನು ನ್ಯಾಯಾಲಯಗಳು ಅಕ್ರಮವೆಂದು ಸಾರತ್ತ ಬರುವುದು ದುರದೃಷ್ಟವಾಗಿಯೇ ಬಂದಂತಿದೆ ಆಜ್ಞೆಗಳ ರಚಕರು ಅದಷ್ಟು ಮುಂಜಾಗ್ರತೆಯನ್ನು ವಹಿಸಿಕೊಂಡರೂ ಅವು ಸಂವಿಧಾನವಿರೋಧಿಯೆಂಬ ತೀರ್ಪು ಪ್ರತಿ ಸಲವೂ ಹೊರ ಬೀಳುತ್ತ ಒರಬೇಕಾದರೆ, ರಾಜ್ಯ ಸರಕಾರದ ಕಾರ್ಯನೀತಿಯಲ್ಲಿ ಏನೋ ಹುಳುಕಿದೆಯೆಂದು ಖಂಡಿತಕ್ಕೂ ಹೇಳಬಹುದು, ಅನ್ನಬೇಕಾಗುತ್ತದೆ.

ರಾಜ್ಯ ಸರಕಾರದ ಉದ್ದೇಶ

ಸರಕಾರವು ಹೊರಡಿಸಿದ ಆಜ್ಞೆಯು ಮುಖ್ಯವಾಗಿ ಲನ್ವಯಿಸುವುದು ಮತ್ತು ಅಹ್ವಾನಿಸಲ್ಪಡುವುದು ತಾಂತ್ರಿಕ ಶಿಕ್ಷಣಸಂಸ್ಥೆಗಳ ಸ್ಥಾನಗಳನ್ನು ಕಾದಿರಿಸುವ ಸಂದರ್ಭದಲ್ಲಿ ಈ ಬಗೆಯಲ್ಲಿ ಮುಂದೆ ಆಶ್ರಮವೆಂದು ಸಾರಲಾಗುವ ಆಜ್ಞೆಯಂತೆ ವಿದ್ಯಾರ್ಥಿಗಳ ಭರ್ತಿಯಾದ ಕೆಲವು ಮಾಸಾಂತರವೇ ಆ ಆಜ್ಞೆಗಳ ರದ್ದಾಗುವುದರಿಂದ ಸರಕಾರವು ಇಟ್ಟುಕೊಂಡಿದ್ದ ಯೋಜನೆಯೇನೋ ಮೂರ್ತಿಗೊಳ್ಳುತ್ತದೆ, ಆದರೆ ಮುಂದಿನ ವರ್ಷಕ್ಕೆದು ಮತ್ತೊಂದು ಆಜ್ಞೆಯನ್ನೇ ಹೊರಡಿಸಬೇಕಾಗುತ್ತದೆ. ಇಂದು ನಡೆದುಬಂದ ನೀತಿಯಂತೆ, ಸರಕಾರವಾದರೂ ಅವಸರ-ಅವಶ್ಯವಾಗಿಯೇ ಈ ವಿವಾದ ಆಜ್ಞೆಗಳನ್ನು ಹೊರಡಿಸುತ್ತ ಬಂದಿರುವುದರಿಂದ ಮತ್ತೀಗ ಅಂತಹ ಆಜ್ಞೆ ಪದನೆಯ ಬಾರಿಗೂ ಆಕ್ರಮವೆಂದು ನಿರ್ಣಯ ಹೊರಬಂದುದರಿಂದ ಸರಕಾರದ ಮೇಲೆ ಜನತೆಗಿದ್ದ ಭರವಸೆ ಕಡಮೆಯಾಗುತ್ತ ಬಂದರೆ, ಆಶ್ಚರ್ಯವಿಲ್ಲ. ತನ್ನ ಬೇಳೆಯನ್ನು ಬೇಯಿಸಿಕೊಳ್ಳಲು, ರಾಜ್ಯ ಸರಕಾರ ಇಂತಹ ಆಜ್ಞೆಗಳನ್ನು ನೀಡುತ್ತಿದೆಯೆಂದು ಕೂಡ ಜೇಳಿಬಹುದು

ಸರಕಾರಕ್ಕೆ ತಲೆಸಿಡಿತ

೧೯೫೮ರಿಂದಲೂ ಕರ್ನಾಟಕದ ಸರಕಾರವು ರಾಜ್ಯದಲ್ಲಿನ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಉನ್ನತಿಗಾಗಿ ಸಂವಿಧಾನದ ಕಲಮಿನಸ್ವಯ ಒಂದು ವಿಶೇಷ ವಿಧಾನವನ್ನು ಮಾಡಲು ಬಯಸುತ್ತ ಬಂದಿದ್ದರೂ ೧೯೫೮ರ ಜುಲೈ ೩೭ರಂದು ಸರಕಾರವು ಬ್ರಾಹ್ಮಣರನ್ನಳಿದು ಉಳಿದವರೆಲ್ಲರೂ ಹಿಂದುಳಿದವರ ಸಾಲಿನಲ್ಲಿರುತ್ತಾರೆ ಎಂದು ನೋಷಿಸಿ, ನೇಕಡಾ ೩೨ರಷ್ಟು ಸ್ಥಾನಗಳನ್ನು ವೈದ್ಯಕೀಯ ಸಂಸ್ಥೆಗಳಲ್ಲಿ ಕಾದಿರಿಸಿತ. ಇದರಲ್ಲಿ ಖಂಡಿಸ್ವರ್ಗ ಜನಾಂಗಗಳಿಗೆ ಒಟ್ಟು ನೂರಕ್ಕೆ ೧೮ ಸ್ಥಾನಗಳನ್ನು ಪ್ರತ್ಯೇಕಿಸಿತು ಆದರೆ, ಮೈಸೂರು ಉಚ್ಚ ನ್ಯಾಯಾಲಯ ದಲ್ಲಿ ಈ ಆಜ್ಞೆಯು ಆಹ್ವಾನಿಸಲ್ಪಟ್ಟಾಗ, ಅದು ಅಕ್ರಮವೆಂದು ಸಿದ್ಧವಾಯಿತು ಇದರಿಂದಾಗಿ ಹೊಸ ಆಜ್ಞೆ ಯುವುದು ಅಗತ್ಯವೆನಿಸಿತು ೧೯೫೯ರ ಮೇ ೧೫ ಮತ್ತು ಜುಲೈ ೩೨ ರಂದು ಸರಕಾರ ಎರಡು ಬೇರೆ ಬೇರೆ ಆಜ್ಞೆಗಳನ್ನು ಇತ್ತು, ಹಿಂದುಗಳಲ್ಲಿ ಬ್ರಾಹ್ಮಣರು, ಬನಿಯೂ, ಕಾಯಸ್ಥರನ್ನು ಹೊರತುಪಡಿಸಿ, ಇತರರನ್ನು ಮುಸಲ್ಮಾನರು, ಕ್ರೈಸ್ತರು ಮತ್ತು ಜೈನರನ್ನೂ ಹಿಂದುಳಿದವರೆಂದು ಸಾರಿತು. ಸೇ ೬೫ ರಷ್ಟು ಸ್ಥಾನಗಳನ್ನು ಇವರಿಗಾಗಿ ವಿನಿಲಿಟ್ಟಿತು ಆದರೆ, ನ್ಯಾಯಾಲಯವು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮಾತ್ರ ಸ್ಥಾನ ಕಾಯ್ದಿರಿಸುವುದನ್ನು ಎತ್ತಿ ಹಿಡಿದು ಉಳಿದುದನ್ನು ಕಿತ್ತು ಹಾಕಿತು. ಆಗ ಮುಂದೊಂದ ಆಜ್ಞೆ ಮಾಡುವುದು ಸರಕಾರಕ್ಕೆ ಅನಿವಾರ್ಯವೆನಿಸಿತು. ಆದು ೧೯೬೦ರಲ್ಲಿ ನಾಲ್ವನೆಯ್ಯ ಆಜ್ಞೆ ವಿಧಿಸಿ, ಸೇ ೫೨ ಸೀಟುಗಳನ್ನು ಹಿಂದುಳಿದವರಿಗೂ ಹಿಂದಿನಂತೆಯೇ ೧೮ನ್ನು ಪರಿಶಿಷ್ಟ ಜಾತಿಗಳವರಿಗಾಗಿ ಮತ್ತು ಇನ್ನು ಒಂತಹ ಜನಾಂಗದವರಿಗಾಗಿ ಕಾಯ್ದಿರಿಸಿತು. ಆಜ್ಞೆಯು ನೇರಿಗೆ ಹಿಂದುಳಿದವರಿಗೆ ಕಾಯ್ದಿರಿಸಿದ ಸೇ ೫೨ಕ್ಕಿಂತ ಹೆಚ್ಚು ಸ್ಥಾನಗಳನ್ನು ವಿಂಗಡಿಸಿರುವುದರಿಂದ, ಇವರನಾಗರಿಕರ ಮೂಲಭೂತ ಹಕ್ಕನ್ನು ನಿರ್ಲಕ್ಷಿಸಿದಂತಾಗುವುದೆಂಬುದರಿಂದ ಉಚ್ಚ ನ್ಯಾಯಾಲಯವು ಅದನ್ನು ಕಿತ್ತು ಹಾಕಿತು ಇದರಿಂದ ಸರಕಾರ ಮತ್ತೊಂದು ತಲೆ ಸಿಡಿಸಿಕೊಳ್ಳ ಬೇಕಾಯಿತು.

ಪ್ರಥಮ ಮುಖಭಂಗ

ನಾಗನ ಗೌಡ ಸಮಿತಿಯನ್ನು ಸರಕಾರವೇ ನಿಯಮಿಸಿ ಅದಕ್ಕೆ ಹಿಂದುಳಿದವರು ಯಾರೆಂಬುದನ್ನು ಗೊತ್ತುಮಾಡುವ ಕೆಲಸವನ್ನು ವಹಿಸಿತ್ತು. ಸಮಿತಿಯು ಈ ಕಾರ್ಯವು ಬಹಳ ಗಡುಜಂದುದೆಂದೂ ಆದರೆ, ಸದ್ಯ ಹಿಂದುಳಿಯುವಿಕೆಯನ್ನು ಆಳೆಯಲು ಜಾತಿಯೊಂದನ್ನು ಬಿಟ್ಟರೆ ಮತ್ತಾವ ಆಧಾರವೂ ಇಲ್ಲವೆಂದೂ ಗಮನಿಸಿ ಹಿಂದುಳಿದವರು, ಅತಿ ಹಿಂದುಳಿದವರು ಎಂಬ ಎರಡು ಗುಂಪನ್ನು ಮಾಡಿತ್ತು ಶಿಕ್ಷಣದ ಒರೆಗಲ್ಲಿನಲ್ಲಿ ಇವನ್ನು ಒರೆದು ನೋಡಲಾಗಿತ್ತು. ರಾಜ್ಯದ ಸದ್ಯರಿಯು ಸಾವಿರಕ್ಕೆ ೬೯೭ ಪ್ರಮಾಣದ್ದಿರುವುದರಿಂದ ಆದಕ್ಕಿಂತ ಕಡಿಮೆಯಿರುವ ಜಾತಿಯವರೆಲ್ಲ ಹಿಂದುಳಿದವರು ಎಂದು ಮೊದಲಾಗಿ ಅದು ವರದಿ ಮಾಡಿತ್ತು ಸರಕಾರವಾದರೂ ಇದರಲ್ಲಿ ತುಸು ಬದಲಾವಣೆ ಮಾಡಿ ಅದನ್ನು ಒಪ್ಪಿಕೊಂಡಿತ್ತು ಈ ವರ್ಷ ಮರಳಿ ಒಂದು ಆಜ್ಞೆ ವಿಧಿಸಿ ೫೨ ಸ್ಥಾನಗಳನ್ನು ಹಿಂದುಳಿದವರಿಗೆ, ೫೨ ರೀತಿ ಹಿಂದುಳಿತವರಿಗೆ, ೧೫ ಪರಿಶಿಷ್ಟ ಜಾತಿಗಳವರಿಗೆ ಮತ್ತು ೩ ಪರಿಶಿಷ್ಟ ಜನಾಂಗಗಳಿಗೆಂದು ವಿಂಗಡಿಸಿ ಸೇ ೩೨ನ್ನು ಮಾತ್ರ ಯೋಗ್ಯತೆಯ ಆಧಾರದಿಂದ ಹಂಚುವಂತೆ ಮಾಡಿತು. ಈ ಆಜ್ಞೆಯನ್ನು ಸುಪ್ರೀಂ ನ್ಯಾಯಾಲಯದಲ್ಲಿ ೨೪ ಅರ್ಜಿದಾರಿಗಳು

(ಇನ್ನೇ ಪುಟ ನೋಡಿರಿ)



ಭಾರತೀಯರನ್ನು ಕಾಡುವ ಮಹಾಮಾರಿಗಳಲ್ಲಿ ಕ್ಷಯವೂ ಒಂದು ಇದರ ನಿರೋಧಕ್ಕಾಗಿ ದೇಶದಲ್ಲಿ ವಿವಿಧ ರೀತಿಯ ಶ್ರಮಗಳನ್ನು ಕೈಗೊಳ್ಳಲಾಗುತ್ತಿದೆ ರೋಗಿಗಳಿಗೆ ಸಮರ್ಪಕ ರೀತಿಯ ಶುಶ್ರೂಷೆಯನ್ನೂ ಚಿಕಿತ್ಸೆಯನ್ನೂ ನೀಡುವುದು ಇವುಗಳಲ್ಲಿ ಒಂದು. ಫೋಟೊ ಚಿತ್ರದಲ್ಲಿ ಸನಿದೇಶಿಯ ಟಿ ಬಿ ಕೇಂದ್ರದಲ್ಲಿ ರೋಗಿಯೊಬ್ಬಳು ಎಕ್ಸ್‌ರೇ ಪರೀಕ್ಷಣಕ್ಕೆ ಗುರಿಯಾಗುತ್ತಿರುವುದನ್ನು ಕಾಣಬಹುದು.

ಖೀರಾ
ನೀವು ತಾಳಿಕೆ—ಬಾಳಿಕೆಯನ್ನು—ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಸೆಟ್ಟಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಶೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ—ಖಾಸ್ಗಿ & ಕೋ, ಹಂಪನಕಟ್ಟೆ ಮಂಗಳೂರು ।
KHIRA

ONTRIBUTE
OUR MITE
O OUR
ATIONAL
EFENCE
UND

ನವಯುಗ

Estd. 1941 ಸ್ಥಾಪನೆ
Regd. No. B.G. 176
Vol. 42 No. 13

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 6—12—1962 ಗುರುವಾರ

20ನ ಪೈಸೆ
ಸಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೧೩

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ಭಾರತೀಯರ ಸಹಾಯಕ್ಕೆ

ಅಮೆರಿಕ ಮತ್ತು ಬ್ರಿಟನ್ ದೇಶಗಳು

ಬ್ರಿಟಿಷ್ ಕಾಮನ್‌ವೆಲ್ತ್ ಕಾರ್ಯದರ್ಶಿ ಡಂಕನ್ ಸ್ಯಾಂಡಿಸ್ ಮತ್ತು ಅಮೇರಿಕದ ವಿದೇಶಾಂಗ ಖಾತೆಯ ಉಪಮಂತ್ರಿ ಶ್ರೀ ರೋಬರ್ಟ್ ಹೆರ್ರಿಮನ್ನರ ಭಾರತ ಸಂದರ್ಶನಗಳು ಜಗತ್ತಿನ ಗಮನವನ್ನು ಸೆಳೆದುಕೊಂಡಿವೆ. ಚೀನೀ ಆಸುರೀ ಆಕ್ರಮಣದ ಈ ಸಂಧಿಕಾಲದಲ್ಲಿ ವಿದೇಶೀ ನೆರವು ಭಾರತಕ್ಕೆ ಆಗತ್ಯವಾಗಿರುವಾಗ ಇವರ ಸಂದರ್ಶನವು ಬಹು ಪ್ರಭಾವಕಾರಿಯಾಗುವುದೆಂದು ಎಲ್ಲರೂ ಊಹಿಸಿದ್ದರು. ಇದು ಭಾರತ-ಚೀನ-ಪಾಕಿಸ್ತಾನಗಳ ಮೇಲೆ ಬಹು ಪ್ರಭಾವ ಬೀರಬಹುದೆಂಬುದನ್ನು ಮೊದಲೇ ನಿರ್ಧರಿಸಿದ್ದರು.

ಬ್ರಿಟನ್— ಅಮೇರಿಕಗಳು ಅಪತ್ಕಾಲದಲ್ಲಿ ಭಾರತಕ್ಕೆ, ನೆರವು ನೀಡಿದ ಎರಡು ಪ್ರಮುಖ ರಾಷ್ಟ್ರಗಳು ಈ ಉಪಕಾರವನ್ನು ಭಾರತವೆಂದಿಗೂ ಮರೆಯದು. ಈ ಎರಡು ನಿಯೋಗಗಳು ಏನು ಸಾಧಿಸಿದುವು? ಎಂಬುದನ್ನು ಸ್ಥೂಲವಾಗಿ ವಿಮರ್ಶಿಸುವ.

ರಾಜಕೀಯ ಮಹತ್ವ

ನಾಯಕದ್ವಯರ ಸಂದರ್ಶನಕ್ಕೆ ಮುಖ್ಯತಃ ರಾಜಕೀಯ ಮಹತ್ವವಿತ್ತು. ಅಮೇರಿಕಾಧ್ಯಕ್ಷ ಕೆನಡಿಯವರೇ ಹ್ಯಾರ್ರಿಮನ್ನರ ನಾಯಕತ್ವದಲ್ಲಿ ಐದು ಮಂದಿಯ ಒಂದು ನಿಯೋಗ ಕಳುಹಿಸಿ ಭಾರತವ ಸೈನ್ಯದ ಭೀಕರ ಪರಿಸ್ಥಿತಿಯ ಪೂರ್ಣವೃತ್ತಾಂತ—ವಿವರಗಳನ್ನು ತಿಳಿದುಕೊಳ್ಳಲು ಬಯಸಿದ್ದಾರೆ.

ಇದೇ ಸಂದರ್ಭದಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನ ಕಾರ್ಯದರ್ಶಿ ಡಂಕನ್ ಸ್ಯಾಂಡಿಸ್‌ರೂ ಭಾರತಕ್ಕೆ ಬಂದರು. ಇದು ಜಗತ್ತಿನ ಜನರ ಕುತೂಹಲವನ್ನು ಕೆರಳಿಸಿತು. ಚೀನದ ಕಣ್ಣನ್ನು ಕುಕ್ಕಿತು ರಹಸ್ಯದ ಮೌನವನ್ನು ಮುರಿಯಿತು. ಭಾರತದ ಧೈರ್ಯಸ್ಥೈರ್ಯ—ಶಕ್ತಿ-ಸಾಮರ್ಥ್ಯಗಳನ್ನು ವೃದ್ಧಿಸಿತು. ಭಾರತದ ಬಗ್ಗೆ ಅನುಕಂಪ ಸಹಾನುಭೂತಿ ಇದ್ದ ರಾಷ್ಟ್ರಗಳಿಗೆ ಇದರಿಂದ ಸಮೂಹಾನವಾದರೂ ಪಾಕಿಸ್ತಾನ-ಚೀನಾ-ರಶ್ಯಾ ಮೊದಲಾದ ಬೆರಳೆಣಿಕೆಯ ರಾಷ್ಟ್ರಗಳಿಗೆ ಕೆನ್ನೆಗೆ ಹೊಡೆದಂತಾಯಿತು. ಭಾರತವು ಅಮೇರಿಕ ಬ್ರಿಟನ್‌ಗಳ ಕೈಗೊಂಬೆಯಾಗಿ ಬಿಟ್ಟಿದೆಯೆಂಬ ತಪ್ಪುಅಭಿಪ್ರಾಯ ಅವುಗಳಲ್ಲಿವೆ. ನಮ್ಮ ಅಭಿಪ್ರಾಯ ಕಾರ್ಯಗಳ ಬಗ್ಗೆ ಹೆದರ ಪ್ರತಿಕ್ರಿಯೆ-ಅಭಿಪ್ರಾಯಗಳನ್ನು ಸದಾ ಸ್ವೀಕರಿಸುತ್ತಿರಬೇಕು. ಯುದ್ಧದಂತಹ ಭೀಕರ ಸಂದರ್ಭದಲ್ಲಿ ನಮ್ಮ ಅನುಭವ- ಕಾರ್ಯಕುಶಲತೆಗಳಲ್ಲಿ ಕುಂದಿರುವುದು ಸ್ವಾಭಾವಿಕ. ಇದನ್ನು ಸರಿಪಡಿಸಿ ತನ್ಮೂಲಕ ನಮ್ಮ ಸಮರ ಸನ್ನಾಹವನ್ನು ಭದ್ರಪಡಿಸುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಈ ರಾಷ್ಟ್ರಗಳ ಕೊಡುಗೆಗೆ ಈ ಸಂದರ್ಶನ ಅತ್ಯಂತ ಉಪಕಾರಿಯೂಗಿದೆ.

ಸಂಚಾರದ ಉದ್ದೇಶ

ಕಳೆದ ತಿಂಗಳ ತಾರೀಕು ೩೩ರಂದು ನಿಯೋಗದೊಂದಿಗೆ ರೊಬರ್ಟ್ ಹ್ಯಾರಿಮನ್ನರು ಮಹೋದ್ದೇಶವನ್ನಿಟ್ಟು ಅಮೇರಿಕಯು ಭಾರತಕ್ಕೆ ನೀಡಬಹುದಾದ ಯುದ್ಧೋಪಕರಣಾದಿಗಳ ವಿವರವನ್ನು ತಿಳಿಯಲು ಬಂದರು.

ಭಾರತದ ಯುದ್ಧದ ಸಂದರ್ಭದ ಸ್ಪಷ್ಟ ಚಿತ್ರಣವನ್ನು ಪ್ರತ್ಯಕ್ಷವಾಗಿ ಅಭ್ಯಸಿಸಿದರು. ಭಾರತದ ವಿದೇಶ ಧೋರಣೆಯ ಸ್ಪಷ್ಟತೆಯನ್ನು ತಿಳಿದುಕೊಂಡರು. ಭಾರತಕ್ಕೆ ತಾವು ಕೊಡುವ ಸಹಾಯವೆಷ್ಟು? ಶರ್ತಗಳೇನು? ಭಾರತದ ಆವಶ್ಯಕತೆಗಳೇನು? ಎಂಬುದನ್ನು ಈ ನಿಯೋಗವು ನಮ್ಮ ದೇಶದ ಧುರೀಣರೊಂದಿಗೆ ಚರ್ಚಿಸಿ ನಿರ್ದಿಷ್ಟ ಅಭಿಪ್ರಾಯಕ್ಕೆ ಬಂತು ಭಾರತದ ರಕ್ಷಣಾ ವ್ಯವಸ್ಥೆ ಹೇಗೆ ನಡೆದಿದೆ ಎಂಬುದನ್ನು ಪರೀಕ್ಷಿಸಿತು. ಹ್ಯಾರ್ರಿಮನ್ನರು ನಮ್ಮ ಸೇನಾ ವ್ಯವಸ್ಥೆಯನ್ನು ಕೂಲಂಕಷವಾಗಿ ಅಭ್ಯಸಿಸಿ ತಮ್ಮ ಮೇಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ, ಎರಡು ದಿನಗಳ ನಂತರ ಸ್ಯಾಡಿಸ್ಟರು ತಮ್ಮ ಬಂಧುರಾಷ್ಟ್ರ ಭಾರತದ ಮೇಲೆ ಆದ ಮಹಾ ಆಕ್ರಮಣವನ್ನು ಎದುರಿಸಲು, ಭಾರತಕ್ಕೆ ಬೇಕಾದ ಸಹಾಯ ಮಾಡಲು ಬಂದರು. ಬ್ರಿಟನ್ನಿನ ಮುಖ್ಯ ಮಂತ್ರಿ ಮತ್ತು ರಾಣಿಯವರ ಸಲಹೆಯಂತೆ ಬಂದ ಇವರು ಕಮ್ಯುನಿಸ್ಟ್ ಆಕ್ರಮಣವನ್ನು ಎದುರಿಸಲು ಭಾರತ ಏನು ಮಾಡಬೇಕು? ಮತ್ತು ಅದರ ಆವಶ್ಯಕತೆಗಳೇನು? ಎಂಬುದನ್ನು ಚರ್ಚಿಸಿ— ವಿಮರ್ಶಿಸಿದರು. ಭಾರತದ ಸೇನಾ ವ್ಯವಸ್ಥೆಯನ್ನು ಕಂಡು ಸಲಹೆ—ಸೂಚನೆ ಮಾಡುವದೂ ಅವರ ಉದ್ದೇಶಗಳಲ್ಲೊಂದು. ನೆಹರೂರವರೇ ಮೊದಲಾದ ಧುರೀಣರುಗಳನ್ನು ಕಂಡು ಭಾರತದ ಧೋರಣೆ ಮತ್ತು ವ್ಯವಸ್ಥೆಗಳ ಯಥಾರ್ಥ ಹಾಗೂ ಸ್ಪಷ್ಟ ಚಿತ್ರಣವನ್ನು ಕಂಡರು.

ರಣರಂಗದ ಪ್ರತ್ಯಕ್ಷ ದರ್ಶನ

ಈ ಎರಡೂ ನಿಯೋಗಗಳು ನಮ್ಮ ಗಡಿಯ ವಿವಾದಕ್ಕೊಳಗಾದ ಪ್ರದೇಶಗಳನ್ನು ಸಂದರ್ಶಿಸಿದುವು. ನೇಫಾದ-ಲಡಖಿನ ಮತ್ತು ಅಸ್ಸಾಮಿನ ಗಡಿ ಪ್ರದೇಶಕ್ಕೆ ಹೋಗಿ ಚೀನೀಯರ ಆಸುರೀ ಆಕ್ರಮಣದ ಪರಿಯನ್ನು ವೀಕ್ಷಿಸಿದುವು ಗುಡ್ಡಗಾಡು ಹಾಗೂ ಛಳಿ ಪ್ರದೇಶವನ್ನು ಕಬಳಿಸಬೇಕೆಂಬ ಚೀನಿಯರ ಕುತ್ಸಿತ ಮನೋವೃತ್ತಿಯನ್ನು ಖಂಡತೊಂಡವಾಗಿ ಟೀಕಿಸಿ ಈ ಆಕ್ರಮಣಕಾರಿಗಳನ್ನು ಹಿಂದಟ್ಟಲು ಭಾರತಕ್ಕೆ ಸಹಾಯಮಾಡುವುದಾಗಿ ಘೋಷಿಸಿಟ್ಟರು. ರಣರಂಗದಲ್ಲಿನ ಭಾರತೀಯ ಸೇನೆಯ ವ್ಯವಸ್ಥೆಯ ಬಗ್ಗೆ ಸಾಕಷ್ಟು ಮೆಚ್ಚುಗೆ ವ್ಯಕ್ತಪಡಿಸಿದ್ದರೂ ಭಾರತವು ಈ ತನಕ ತಯಾರಿಮಾಡಿದ್ದುದರಿಂದ ಈ ಬೃಹತ್ತರವಾದ ಈ ಚೀನೀ ಆಕ್ರಮಣವನ್ನು ಒಮ್ಮೆಲೆ ಹಿಮ್ಮೆಟ್ಟಿಸುವುದು ಅಸಾಧ್ಯವಾಯಿತು. ಆದರಿಂದ ಭಾರತವು ನವೀನ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಸೇನೆಯನ್ನು ಸಂಘೋಗಿಸಬೇಕೆಂದು ಸ್ಪಷ್ಟವಾಗಿ ಇವರು ಹೇಳಿದರು. ಇಂಥ ದೀರ್ಘ ಯುದ್ಧದಿಂದ ಭಾರತದ ಜನಜೀವನದಲ್ಲಿ ಮಹತ್ತರ ಪರಿಣಾಮವಾಗದಿರಲಾರದೆಂದು ಅಂದರು. ಅಸ್ಸಾಮಿನ ಖಳಿಯಲ್ಲಿನ ಎಣ್ಣೆ ಗಣಿಗಳು ಎಷ್ಟು ಮಾತ್ರಕ್ಕೂ ಶತ್ರು ವಶವಾಗದಂತೆ ವೈಚ್ಛರಿಕೆಯಿಂದಿರಬೇಕೆಂಬುದನ್ನೂ ಒತ್ತಿ ಹೇಳಿದರು.

ಶಸ್ತ್ರಾಸ್ತ್ರ ಪೂರೈಕೆ

ಈ ನಿಯೋಗಗಳ ಭೇಟಿಯಿಂದಾಗಿ ಭಾರತಕ್ಕೆ ಕಳೆದು ಹೋದ ಜೀವ ಬಂಗಾರವಾಗಿದೆ. ಬ್ರಿಟನ್, ಅಮೇರಿಕಗಳು ಭಾರತಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಾಡಿರುತ್ತಿದ್ದರೆ ನಮ್ಮ ಪರಿಸ್ಥಿತಿ ಇನ್ನು ಚಿಂತಾಜನಕವಾಗುತ್ತಿತ್ತು. ತಟಸ್ಥ ರಾಷ್ಟ್ರಗಳು ಭಾರತಕ್ಕೆ ಎಷ್ಟು ಸಹಾಯಮಾಡಬಲ್ಲವು? ಏನು ಮಾಡಬಲ್ಲವು? ಎಂಬುದು ಅವುಗಳ ಈಜಿಗಿನ ಆರಿವನಸ್ಸಿನ ವರ್ತನೆಯಿಂದ ಸ್ಪಷ್ಟವಾಗಿ ತಿಳಿಯಬಹುದು. ಅವೆಲ್ಲ ಗಾಳಿ ಬಂದ ಕಡೆ ಕೊಡೆ ಹಿಡಿಯುವ ಸಾಲಿಗೆ ಸೇರಿದಂತಿವೆ. ಆಪತ್ಕಾಲದಲ್ಲಿ ಸಹಾಯಕ್ಕೆ ಬರುವವನೇ ನಿಜವಾದ ಮಿತ್ರ. ಈಗ ಭಾರತಕ್ಕೆ ತನ್ನ ಮಿತ್ರರಾರು— ಶತ್ರುಗಳಾರು ಎಂದು ನಿರ್ಧರಿಸಲು ಸುಸಮಯ. ಈ ತನಕವೇ ರಾಷ್ಟ್ರಗಳಿಂದ ನಾಕಷ್ಟು ಸ್ವಯಂ ಜಾಲಿತ ಆಸ್ತ್ರಗಳು, ಯುದ್ಧ ವಿಮಾನಗಳು, ಮಿಸ್ಯೆಲ್‌ಗಳೇ ಮೊದಲಾದುವುಗಳು ಭಾರತದ ಕೇಳಿಕೆಯಂತೆ ಬಂದಿವೆ. ಮಳೆತ್ತದ ಸಂಗತಿಯಿಂದರೆ ಈ ಎರಡು ದೇಶಗಳು ಯಾವುದೇ ರಾಜಕೀಯ ಶರ್ತಗಳಿಲ್ಲದೆ ಶಸ್ತ್ರಾಸ್ತ್ರ ಪೂರೈಕೆ ಮಾಡಿಸುವು ರಕ್ಷಣಾತಜ್ಞರೆ ಹೊಡ್ಡಿ ರಾಷ್ಟ್ರ ಮಿಗ್ ವಿಮಾನಗಳನ್ನು ಕೊಡುವುದಾಗಿ ಮಾತ್ರಕೊಟ್ಟು ಸಮಯಕ್ಕಾಗುವಾಗ ಕೊಡುವುದಿಲ್ಲವೆನ್ನುವುದು ಅದರ ಹಿನ್ನೆಲೆಗೆ ಫಲತೆಗೆ ಭೂಷಣವಲ್ಲ ಭಾರತೀಯರು ಶತ್ರುವಿಗೆ ಮಣಿಯರು, ಸ್ವಾತಂತ್ರ್ಯಕ್ಕೆ ಧಕ್ಕೆ ತಂದವನನ್ನು ಕೊಡಿ ದೋಡಿಸದೆ ಬಿಳಿಯರು ಎಂದು ಅವರು ತಿಳಿದಿರಬೇಕು.

ಪಾಕಿಸ್ತಾನದ ಮನಃಪರಿವರ್ತನೆ

ಈ ಎರಡು ನಿಯೋಗಗಳ ಮಹತ್ವ ಪೂರ್ಣ ಸಾಧನೆಯೆಂದರೆ ಭಾರತ—ಪಾಕಿಸ್ತಾನಗಳೊಳಗಿನ ಭಿನ್ನತೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದುದು. ಪಾಕಿಸ್ತಾನಕ್ಕೆ ಹೋಗಿ ಅಲ್ಲಿ ಅಯೂಬರೊಡನೆ ಮಾತಾಡಿ ಅವರಿಗೆ ಚೀಮೊಡನೆ ಅನಾಕ್ರಮಣಒಪ್ಪಂದಕ್ಕೆ ಕಲೆಬುದವಿಲ್ಲದ ಒಪ್ಪಂದಗಳಿಗೆ ಪೂರುಜೋಗದೆ ಕಮ್ಯುನಿಜಂನ್ನಿನ ವಿರುದ್ಧದ ಭಾರತವ ಹೋರಾಟದಲ್ಲಿ ಸಹಕರಿಸ ಬೇಕೆಂಬುದಕ್ಕೆ ಅವರ ಆಹ್ವಾಂಕಾರ ಪಡಿಸಿ ಕೊಂಡುದು. ಭಾರತ ಮತ್ತು ಪಾಕಿಸ್ತಾನದವಂಶ್ಯರೊಳಗೆ ಸದ್ಯದಲ್ಲೇ ಉಚ್ಚ ಮಟ್ಟದ ಮಾತುಕತೆಗಳಾಗುವುವು ಇದರಿಂದ ಸಮಸ್ಯೆಗಳು ಪರಿಹಾರವಾಗಲು ಉತ್ತಮ ವಿರ್ವಾಡಾದಂತಾಯಿತು.

ಕಮ್ಯೂನಿಸ್ಟರನ್ನು ಸದೆ ಬಡಿಯಬೇಕು

"ಎಷ್ಟೇ ಕಷ್ಟ ನಷ್ಟಗಳುಂಟಾದರೂ ಕಮ್ಯುನಿಸ್ಟರ ಆ ಕೆಂಪು ಚೀನೀಯರ ಈ ದಿಟ್ಟತನದ ದುರಾಕ್ರಮಣವನ್ನು ಸಹಿಸಬಹುದು ಭಾರತವು ಸುಮ್ಮನಿರ

(೩ನೇ ಪುಟ ನೋಡಿ)

ಭದ್ರತೆ
ಬಾಳಿಕೆಗಾಗಿ
ಖೀರಾ

ಇದೀಗ ರಾಷ್ಟ್ರ ರಕ್ಷಣೆ, ಭದ್ರತೆಗಾಗಿ ಹೋರಾಡುವ ಕಾಲವಲ್ಲವೆ?
ನಿಮ್ಮ ಮನೆಯ ಸುರಕ್ಷಿತತೆ, ಭದ್ರತೆಗಳಿಗಾಗಿ ಖೀರಾ—
ಫರ್ನಿಚರುಗಳನ್ನು ಆರಿಸುವುದು ಉಚಿತವಲ್ಲವೆ?
ಮನೆ, ಮಠ, ಆಫೀಸು, ಆಸ್ಪತ್ರೆ, ಶಾಲೆ ಕಾಲೇಜುಗಳಿಗೆ ಆತ್ಯಾವಶ್ಯಕವಾದ
ಯಾವತ್ತೂ ಉಕ್ಕಿನ ಫರ್ನಿಚರುಗಳಿಗೆ ವಿಚಾರಿಸಿರಿ ಯಾ ಸಂದರ್ಶಿಸಿರಿ!

ಶಾಸ್ತ್ರಿ & ಕೊ
ಹುಪನಕಟ್ಟೆ,
ಮಂಗಳೂರು— 1.